ಗುರುಸಂಕೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

2

...ರಾಜವಿಜಯಂ.— ಕೆ. ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ

ಚೆನ್ನಬಸವೇಶವಿಜಯಂ.— ೧-೪-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ವಿದ್ಯುಗನ್ನಡರೂಪದಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ದರ್ಶನವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ದಿಗಂಬರ ಪುರಾಣಂ.— ೧-೩-೦. ದಿಗಂಬರ ಸಂಪ್ರದಾಯದ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಪುಸ್ತಕವಿದಾಗಿದೆ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.— ಜ್ಞಾನಮಾರ್ಗದ ಅತ್ಯುತ್ತಮ, ಮೋಕ್ಷದ ಲಕ್ಷಣವೆಂಬ ವಿಷಯಗಳು ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ

ಪ್ರಶ್ನೋತ್ತರ ಮುಕ್ತಾವಳಿ.— ಬಸವೇಶ್ವರ ಪಂಡಿತಪ್ರಣೀತ ಗದ್ಯ ವಿಗಳಿವೆ ೬ ಆಣೆ.

... ೨ ಆಣೆ ... ೩ ಆಣೆ

... — ...

... ಮಾಡಿ

... ಪವರ್

ಎಸ್. ಆರ್. ...

ಶ್ರೀ ಗಂಧರ್ವ ಪರಿಣಯ.

[ಕಳೆದ ವಾರದ ಶೇಷ]

ಸ್ತೋತ್ರಮಾಡುತ್ತಿರಲಾಗ ಆ ಅರ್ಥ್ಯವು, ಒಬ್ಬೊಬ್ಬ ರಾಕ್ಷಸನಿಗೆ ಒಬ್ಬೊಬ್ಬ ಸುಗಂಧರಾಜೇಂದ್ರನು ಇದಿರಿಗೆ ನಿಂತು ಯುದ್ಧವಂ ಮಾಡುತ್ತಂತೆ ಆ ರಾಕ್ಷಸರಿಗೆ ತಾಕಿಸಿ ಅವರಂ ಅಂಧಕಾರದೊಳ್ ಕಣ್ಣು ಕಾಣದಂತೆ ಬಿಟ್ಟವಾಡಿರಲು, ಗಂಧರ್ವರಾಜೇಂದ್ರನು ಅವರಂ ನೋಡಿ ನಗುತ, ಅಸ್ತ್ರವ ಪ್ರಯೋಗಕ್ಕೆ ಆಶ್ಚರ್ಯಪಡುತ, ದಾರಿಗೆ ಅಡ್ಡವಾಗಿರುವ ಕೆಲವು ರಾಕ್ಷಸರ ಸಂಹಾರವಂ ಮಾಡಿ, ಮಿಕ್ಕಾದವರು ಭಯದಿಂದ ಓಡಿಹೋಗಲು ಆ ಗಂಧರ್ವೇಂದ್ರನು ಬಾಣಸಂಚಾರವಂ ಮಾಡುತ ಅಲ್ಲಿ ನಿಲ್ಲಿಸಿ, ಅಲ್ಲಿಂದ ಮುಂದಕ್ಕೆ ನಡೆದುಬಂದು ಆ ರಾಕ್ಷಸಾಧಿಪನ ಮನೆಯ ಬಾಗಿಲಿನ ಬಳಿ ನಿಂತು [illegible] ಎತ್ತಲೂ ಬಾಗಿಲಿನಲ್ಲಿ ನೋಡಿ ಮಂತ್ರಿಯಂ ಕುರಿತು ಎಲೈ ಸುಮತಿಯೇ! ಇದೇನು ಹೇಳುವೆ, ಈ ಭವನಕ್ಕೆ ಬಾಗಿಲೇ ಕಾಣಿಸುವುದಿಲ್ಲವೆಂದು ನುಡಿಯಲಾ ಮಾತಿಗೆ, ಸುಮತಿಯು ಎಲೈ ಪ್ರಭುವೆ [illegible] ಇದು ರಾಕ್ಷಸನ ಕೌಟಿಲ್ಯತ್ವದಿಂದ ಕಾಣದಂತಿದೆ. ಅದರ ಹೇಗೆಂದರೆ ಈ ಗೋಡೆಯು [illegible] ವಜ್ರ ವೈಡೂರ್ಯ ಮರಕತ ಮೊದಲಾದ ಪಚ್ಚೆ ಕಾಣದಂತೆ [illegible]. ಆದುದರಿಂದ ಆ ರಾಕ್ಷಸನು ಒಳಗಿದ್ದ ಮಹಾ ಬಲಶಾಲಿ ಬಂದು ಸ್ತ್ರೀ [illegible] ಅಪಹರಿಸಿರುವನು. ಆ ವಿಚಿತ್ರವಾದ ಗೋಡೆಯನ್ನು ಮಾಡಿರುವನು. ಇದು ವಜ್ರ ಮೊದಲಾದ ನಿರ್ಮಲ ಮಣಿಗಳಿಂದ ನಿರ್ಮಿತವಾಗಿರುವುದರಿಂದ ನಿನ್ನ ಬಾಣಪ್ರಯೋಗದಿಂದ ಭಿನ್ನವಾಗುವುದಿಲ್ಲವೆಂದು ನಿನ್ನ ವಿಶಾಲವಾದ ಮನದಲ್ಲಿ, ರಾಜೇಂದ್ರನು ಶರಧಾರಣವಾದ ಬಂಡುಬಾಣವಂ ತೆಗೆದು ಪ್ರಯೋಗಿಸಲು, ಆ ಬಾಣವು ಆ ವಿಚಿತ್ರವಾದ ಗೋಡೆಗೆ ತಗಲಿ ಠಣಾರೆಂದು ಶಬ್ದವಂ ಮಾಡಲು, ಅದಂತೋಳ್ ಇದೇನು ಬಾಣಂಗಳಿಗೆ ಅಶಕ್ಯವಾಗಿರುವಂತೆ ಕಾಣುತಲಿದೆ ಎಂದು ನುಡಿದ ರಾಜೇಂದ್ರನಂ ಕುರಿತು ಮಂತ್ರಿಯು ಎಲೈ ಸ್ವಾಮಿಯೇ! [illegible] ನಿನಗೆ ಅಶಕ್ಯವಾಗಿರುವುದು? ಈಗ ಈ ಮಾತಂತೋಳ್ ನಿನಗೆ [illegible] ಎಂದು ವಿಜ್ಞಾಪನೆಯಂ ಗೈಯ್ಯಲು ಆಗ ರಾಜೇಂದ್ರನು ಮಂತ್ರಿಯು ಹೇಳಿದ [illegible] [illegible]

[illegible]

ಗಿಳಂತೆ ಘೋರವಾದ ಶಬ್ದವುಂಟಾಗಿ ಅದರಿಂ ಭೂಮಿಯು ಹೊಲ್ಲನೆ ಅಲ್ಲಾಡಿ, ಪರ್ವತಂಗಳೆಲ್ಲವೂ ಗಡಗಡನೆ ನಡುಗಿ ಗುಹೆಗಳೊಳ್ ಪ್ರತಿಧ್ವನಿಗಳುಂಟಾಗಲು, ಆಗ ಸುಮತಿಯು ಈ ಧ್ವನಿಯಂ ಕೇಳಿ ಭೂಮಿಯಾಗ ಕ್ಷಿಪ್ರವಾಗಿ ಪಟ್ಟದ ಗೋಡೆಯನ್ನು ನೋಡಿ ಭಯವಾಗಿ ಇದೇನು ಆಶ್ಚರ್ಯವೋ ಎಂದು [illegible] ಮಹಾರಾಜನಂದ ಸು ಗಂಧರಾಜೇಂದ್ರನು ನನಗೆ ತಿಳಿಯದಂತೆ [illegible] ಎಂಬ ವಿಸ್ಮಯಂ ಮಾಡಿದನೋ, ಅಥವಾ ನನಗೆ ಅದೃಶ್ಯವಾಗಿ ಈ ಪುರದೊಳಗಿರುವ ರಾಕ್ಷಸರೊಡನೆ ಹೋರಾಡುತ್ತಿರುವನೋ? [illegible] ನನ್ನ [illegible] ತಿಳಿಯದು [illegible] ಗುಣ್ಯವಂ ಕರೆದು ಕೇಳುವಾ ಎಂದರೆ, ಅವನು ರಾಜಾಜ್ಞಾನುಸಾರವಾಗಿ [illegible] ಬರುವ ಮಾರ್ಗದೊಳ್ [illegible] ಎಲ್ಲವೆ ರಾಜನ ಯೋಗಕ್ಷೇಮಂಗಳಂ ತಿಳಿದ [illegible] ಬರುತ್ತಿರುವುದು. ಮಂತ್ರಿಗೆ ಅಕ್ಷೀಣವು ಈಗ [illegible] ಹೇಳುವುದು? [illegible] ಪುರುಷನಾದವನಿಗೆ ನನ್ನ ಸಹಾಯವೇಕೆಂದು ಧೈರ್ಯದ ಭಯ [illegible] ಧ್ಯಾನಿಸುತ್ತಿರಲು, ಆಗ ರಾಜೇಂದ್ರನು ನೋಡಲಿಕ್ಕಂತೆ ಮನುಷ್ಯನಾಗಿ, ಮೇಘಮಂಡಲದಿಂ ಬರುವ [illegible] ಚಂದ್ರನಂತೆ ಪ್ರಕಾಶವಾಗಿ ಬರಲು, ಸುಮತಿಯು ಆ ರಾಜನ [illegible] ಅತಿ ಸಂತೋಷ ಗೊಂಡು ಸಾಷ್ಟಾಂಗವೆರಗಿ ಸ್ವಾಮಿಯೇ ನೀನು ದೇವಾಂಶ ಪುರುಷನೆಂದರಿತಿರುವೆನು. ಈಗ ನಿನ್ನ ಮಹಿಮೆಯಂ ಕಂಡು, ತ್ರಿಮೂರ್ತಿಗಳೊಳ್ ಒಂದು ಮೂರ್ತಿಯೋ! ಅಲ್ಲದೆ ತ್ರಿಲೋಕಾಧಿಪತಿಯಾದ ದೇವೇಂದ್ರನೇ ಅವತಾರವಂ ಮಾಡಿ ನಿನ್ನ ರೂಪದಿಂದಿರುವನೆಂದು ತಿಳಿದಿರುವೆನೆಂದು ನುಡಿಯಲು, ರಾಜೇಂದ್ರನು ಮಂತ್ರಿಯಾದ ಸುಮತಿಯಂ ಕರೆದುಕೊಂಡು ಬಂದು ಬಿದ್ದಿರುವ ಆವರಣವಂ ತೋರಿ, ಜಯಶಾಲಿಯಾಗುತ ಮುಂದಿರದ ಪುರೋಭಾಗದೊಳ್ ನೂರುಬಣ್ಣದ ಸುವರ್ಣದ ಭೂಮಿಯಾಗಿ, ಅಲ್ಲಿರುವ ಮೊಲ್ಲೆ, ಮಲ್ಲಿಗೆ, ಸುರಗಿ, ಸುರಹೊನ್ನೆ, ಸಂಪಿಗೆ, ದವನ ಮೊದಲಾದ ಚಿನ್ನದ ಲತೆಗಳಂ ಕಂಡು ಬಳಿಕ ಮಾದ ವಜ್ರದ ದಿಂಡುಗಳಿಂ, ಪಚ್ಚೆಯ ಪಾಸುಗಲ್ಲುಗಳಿಂ, ಕುರುವಿಂದದ ಜಗತಿಗಳಿಂದ ಕಟ್ಟಿದ ಚಿನ್ನದ ಗಾರೆಯಿಂದ ಮಾಗಿ, ವಿಶ್ವಕರ್ಮನಿಂದ ನಿರ್ಮಿತವಾಗಿ, ನಿಸರ್ಗಲೋಕದಿಂದ ಭರಿತವಾಗಿ, ಸುವರ್ಣ ಪಕ್ಷಿಗಳುಳ್ಳ ರಾಜಹಂಸೆಗಳಿಂ, ಸುವರ್ಣ ಕಮಲಗಳಲ್ಲಿರುವ ಮಕರಂದವಂ ಸವಿದು ಸಂಗೀತವಾದ ಗಾನವಂ ಮಾಡುತ್ತಿರುವ ತುಂಬಿಗಳಿಂ ಕೂಡಿ, ಭೂಮಿಯೆಂಬ ಕಾಂತೆಯ ಹೃದಯದಲ್ಲಿರುವ ರತ್ನದ ಪದಕದೋಪಾದಿಯಂತೆ ಗಗನಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡುವುದಕ್ಕೆ ಕನ್ನಡಿಯೋ ಎಂಬ ತೆರನಾಗಿ ತಳತಳಿಸುವ ಅದ್ಭುತ ಸರಸ್ಸಂ ಕಂಡು. (ಸಶೇಷ)

«ಪರಸ್ಪರಾಪೇಕ್ಷತೆಯ ಫಲ»

ಎಂದರೆ ಪರಸ್ಪರತ್ವ ನಮ್ಮಲ್ಲಿ ಬೆಳೆಸುವಾವುದು

ಎಂಬ ಶೀರ್ಷಿಕೆಯು ನಮ್ಮ ಆರ್ಯರಿಂದ ಪ್ರೋತ್ಸಾಹಕ? ಇದರಂತೆ ಮನಃಪೂರ್ವಕವಾಗಿ ನಡೆಯುವಕ್ಕೆ ಪರಂತೋ [illegible] ವರೇ ಮಹನೀಯರು, ಅವರೇ ಪೂಜ್ಯರು, ಅವರೇ ಲೋಕದ ದ್ಯಾರು. ಈ ಅಭಿಪ್ರಾಯವಿಲ್ಲದವರೇ ರಾಕ್ಷಸರೆನ್ನಿಸಿಕೊಳ್ಳುವರು. ಆದುದರಿಂದಲೇ ಭರ್ತೃಹರಿ ಮಹಾಕವಿಯು «ಸ್ವಾರ್ಥಕ್ಕಾಗಿ ಪರಾರ್ಥವ ವಿಘಾತಿಸುವರ್ ನರರಾಕ್ಷಸ [illegible]» ಎಂದು ಹೇಳಿರುವನು. ಆಧುನಿಕ ಕಾಲದ ಜನಪ್ರಾಕೃತಿಕ ಜೀವನಪದ್ಧತಿಗಳೊಳಗೆ ತಿಳಿಯಲಿಚ್ಛೆಯುಳ್ಳ ಲೇಖಕರು [illegible] ನಾವೆಷ್ಟು ಪರಸ್ಪರ ಸಹಾಯ ಮಾಡುವುದು ದುರ್ಲಭವೇ ಅಲ್ಲವೆ? ಇವರು ಲೇಖಕನ ಮೇಲೆ ಕೋಪಿಸಿಕೊಳ್ಳುವರೋ? ತಾಳಿಕೊಳ್ಳಬೇಕಾದದ್ದು. ಏಂದುಕಾರಣ ಜನರಲ್ಲಿ ಹತ್ತು ಮಂದಿ ಯಾದರೂ ಒಂದಾಗಿ ದುಡಿಯದೆ ಇರುವರು. [illegible] ಕಾರಣದಿಂದಲೇ ದುರ್ಲಭವೆ ದುಃಖ. ಇದರಿಂದ ನೈಜವಾದ ಸರ್ವಸ್ವಸಂಪತ್ತಿಗೆ ತಡೆಯುಂಟಾಗಿ ನಮ್ಮ ಕ್ಷೇಮ ಕೆಡುವುದು. ಅವರು ಸ್ವಾರ್ಥಪರರಾಗಿರುವುದರಿಂದ ನಮ್ಮ ಜೀವನವು ಉತ್ತಮವಾಗದು. ಅವರು ಸ್ವಾರ್ಥಪರತೆಯಿಂ ನಮ್ಮ ಹಿತವನ್ನು ಬಾಧಿಸುವುದು ನಿಂದನೀಯವಲ್ಲವೆ? ಇದರಿಂದಲೇ.

ಈಗಿನ ಕಾಲಕ್ಕಿಂತಲೂ ನಮ್ಮ ಆರ್ಯರ ಪುರಾತನ ಕಾಲದಲ್ಲಿದ್ದವರು ಎಷ್ಟೋ ಮಟ್ಟಿಗೆ «ನಿಸ್ಪೃಹತೆ» ಯುಕ್ತರಾಗಿದ್ದರೆಂಬುದನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದು ಇಚ್ಛೈಸಿದೆವು. ಅದಕ್ಕೆ ಒಂದು ಇತಿಹಾಸವನ್ನು ತಿಳಿಸಲಪೇಕ್ಷಿಸಿದೆವು.

ಹಿಂದಿನ ಕಾಲದಲ್ಲಿ «ಶಿಬಿ» ಎಂಬುವನು ಚಕ್ರವರ್ತಿಯು [illegible] ದನ್ನು ಆಳುತ್ತಿದ್ದನು [illegible]

[illegible]

ಧಿಪನಿಸುತ್ತಿದ್ದನು. ಇವನು ಅನೇಕ ದಿನಗಳು ರಾಜ್ಯಭಾರವನ್ನು ಮಾಡಿದನು; ಅನೇಕ ದೇಶಗಳನ್ನು ಗೆದ್ದನು. ಒಂದಾನೊಂದುವೇಳೆ ತನ್ನ ವಿಜಯಯಾತ್ರೆಗೆ ಸ್ಮಾರಕವಾದ ವಿನಾಯಕನನ್ನು ತನ್ನ ರಾಜಧಾನಿಯಾದ ಲಂಕೆಯಲ್ಲಿ ತಂದಿಡಬೇಕೆಂದು ನಿಶ್ಚಯಿಸಿದನು. ಅವನಿಗೆ ಋಷಿಗಳ ತಪವನ್ನು ಕೆಡಿಸುವುದರಲ್ಲಿಯೂ, ಯಜ್ಞಾದಿಗಳನ್ನು ನಾಶಮಾಡುವುದರಲ್ಲಿಯೂ ಬಹು ಆಪೇಕ್ಷೆ. ಒಂದಾನೊಂದು ಕಾಲದಲ್ಲಿ ದಂಡಕಾರಣ್ಯಕ್ಕೆ ಬಂದ, ಅಲ್ಲಿನ ಋಷಿಗಳೆಲ್ಲರನ್ನೂ ಒಂದುಗೂಡಿಸಿ ಅವರ ದೇಹಗಳಲ್ಲಿ ಸ್ವಲ್ಪಸ್ವಲ್ಪ ರಕ್ತವನ್ನು ಕೊಡುವಂತೆ ಕೇಳಿದನು. ಅವರು ಒಪ್ಪಿಕೊಳ್ಳದಿರಲು, ಮುಳ್ಳುಗಳಿಂದ ಅವರನ್ನು ಚುಚ್ಚಿ ಸ್ವಲ್ಪಸ್ವಲ್ಪ ರಕ್ತವನ್ನು ಸುರಿಸಿಕೊಂಡು ಬರುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದನು. ಅವರ ಅನಂತರ ಮಾಡಿ ಒಂದು ಕುಂಭದ ತುಂಬ ರಕ್ತವನ್ನು ತಂದು ಮುಂದಿರಿಸಿದರು. ಆ ಋಷಿಗಳೆಲ್ಲರೂ «ಇದರ ದೆಸೆಯಿಂದಲೇ ನಿನ್ನ ವಂಶವು ಕೂಡನೆ ನಿರ್ಮೂಲ ನಾಶವಾಗುವುದು» ಎಂದು ಶಾಪವನ್ನಿತ್ತರು. ಆ ಕುಂಭವನ್ನು ತನ್ನ «ಜಯಸ್ಮಾರಕ ವಸ್ತು» ಎಂದು ಅದನ್ನು ತನ್ನ ಮಂದಿರಕ್ಕೆ ತಂದು ತನ್ನ ಹೆಂಡತಿಯಾದ ಮಂಡೋದರಿಯ ಕೈಗೆ ಕೊಟ್ಟು, ವಿಷವಾಗಿಟ್ಟು ಇರುವುದೆಂದು ಹೇಳಿದನು. ಆಕೆಯು ಅದನ್ನು ರಂಜಿಸಿಯೇ ಇರಿಸಿದ್ದಳು.

ಈ ಲೋಕಕಂಟಕನಾದ ರಾವಣನು ಯುದ್ಧಯಾತ್ರೆಗಾಗಿ ಪ್ರಯಾಣಮಾಡಿದನು. ಅಲ್ಲಿ ಸೀತೆಯ ಪತಿವ್ರತೆಯು ವ್ರತಗಳನ್ನು ಹಾಳುಮಾಡುತ್ತಾ ಮನೆಗೆ ಎಲ್ಲಾ ಕಡೆಯ ಹಾವಳಿಯನ್ನು ಮಾಡುತ್ತ ಬಹುಕಾಲದವರೆಗೆ ಪಟ್ಟಣಕ್ಕೆ ಬರಲಿಲ್ಲವು. ಅನೇಕ ದಿನಗಳ ಮೇಲೆ ಪತ್ನಿಯಾದ ಮಂಡೋದರಿಯು ತನ್ನ ಪತಿಯ ದುರಾಚಾರಗಳನ್ನು ಕೇಳುವುದರಿಂದಲೂ ಆತನ ಸಂದರ್ಶನವಿಲ್ಲದುದರಿಂದಲೂ ಬಹುವ್ಯಸನಪೀಡಿತಳಾಗಿ ಇನ್ನು ಬದುಕಿರಬಾರದೆಂದು ನಿಶ್ಚಯಿಸಿ, ಮೊದಲು ತನ್ನ ಪತಿಯು ತನ್ನ ಕೈಗೆ ತಂದುಕೊಟ್ಟಿದ್ದ ಕುಂಭದ ಮುಚ್ಚಳವನ್ನು ಎತ್ತಿ ತೆಗೆಯಲು, ಅದರ ತುಂಬಾ ಇದ್ದ ರಕ್ತವನ್ನು ಕಂಡು «ಈ ನಂಜಿನ ದೆಸೆಯಿಂದಲೇ ನನ್ನನ್ನು ನೀತಾನು ಅಗ್ನಿಗೆ ಗುರಿಯಾಗಿರಬೇಕೆಂದು ಈ ನಂಜನ್ನು ನನ್ನ ಕೈಗೆ ಪತಿಯು ತಂದುಕೊಟ್ಟಿರುವನು. ಇನ್ನು ಜೀವಿಸಿರುವುದು ಸರಿಯಲ್ಲವು» ಎಂದು ಅದನ್ನು ಕುಡಿದುಬಿಟ್ಟಳು. ಅದರಿಂದ ಆಕೆಯು ಸಾಯಲಿಲ್ಲ. ಅದೇ ಬೀಜವಾಯಿತು. ಕೂಡಲೆ ಗರ್ಭ ನೂಚನೆಯಾಯಿತು. ಈ ವ್ಯಸನದಲ್ಲಿಯೇ ಒಂಬತ್ತು ತಿಂಗಳುಗಳಾದುವು. ಇನ್ನು ಪ್ರಸವಕಾಲವೂ ಸನ್ನಿಹಿತವಾಯಿತು. ಪತಿಯು ಪಟ್ಟಣಕ್ಕೆ ಬಾರದೆ ಎಷ್ಟೋ ದಿವಸಗಳ ಮೇಲೆ ಹುಟ್ಟಿದ ಗರ್ಭವನ್ನು ತಾಳಿದ್ದುದು ಲೋಕಾಪವಾದವಲ್ಲವೆ? ಇದನ್ನು [illegible] [illegible] ಇನ್ನು [illegible] ಕೂಡಲೆ [illegible] ಒಂದು [illegible] [illegible]

ಆಹಾ! ನೋಡಿದರು ಎಂತಹ ಗತಿಯಿತ್ತೆ? ಇಂತಹ ಕೃತ್ಯಗಳನ್ನು ಮಾಡುತ್ತಿದ್ದರಿ ಹೇಗೆ, ಇವರು ರಾಕ್ಷಸಿಯರೆನಿಸಿಕೊಳ್ಳುತ್ತಿದ್ದರು. ಈಗಲೂ ಕೆಲವು ನೀಚರು ಇಂತಹ ಕೃತ್ಯಗಳನ್ನು ಮಾಡುತ್ತಿರುವುದನ್ನು ಕೇಳುತ್ತೇವೆ. ಇವರೂ ರಾಕ್ಷಸರು ಅಲ್ಲದೆ ಮತ್ತೇನು ಅಲ್ಲವೆಂಬುದು ಇಂತಹ ದೃಷ್ಟಾಂತಗಳಿಂದ ಊಹಿಸಬಹುದು. ಇದನ್ನಿಷ್ಟಕ್ಕೇ ನಿಲ್ಲಿಸುವೆ.

ಆ ಪೆಟ್ಟಿಗೆಯು ಸಿಕ್ಕಿಸಲ್ಪಟ್ಟಿದ್ದ ಪ್ರದೇಶವು ಜನಕನ ಬಡೊಳಿಯಿಂದ ಒಬ್ಬ ಬ್ರಾಹ್ಮಣನಿಗೆ ದಾನವಾಗಿ ಕೊಡಲ್ಪಟ್ಟಿತ್ತು. ಆ ಬ್ರಾಹ್ಮಣನು ಅದನ್ನು ಒಬ್ಬ ಒಕ್ಕಲಿಗನಿಗೆ ವಹಿವಾಟಿಗಾಗಿ ಕೊಟ್ಟಿದ್ದನು. ವರ್ಷಕಾಲ. ವ

ವಿವೇಕಮಂಜರಿ

೬ ನೇಯ ಭಾಗ

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಲೇಖನಗಳಿರುವುವು. ವಿದ್ಯಾವಿವೇಚನೆ, ವಾಕ್ಚಾತುರ್ಯದ ಫಲ, ಮನೋನಿಗ್ರಹ, ಭಾಷಾಶೈಲಿ, ಮುಂತಾದ ವಿಷಯಗಳಲ್ಲಿ ಅನೇಕ ವಿಚಿತ್ರ ಮಹತ್ತರ ಸಂಗತಿಗಳಿರುವುವು. ಈ ಪುಸ್ತಕವು ಶೀಘ್ರದಲ್ಲಿ ಮಾರಾಟವಾಗುವುದು. ಮೊದಲಭಾಗದಂತೆಯೇ ಗ್ರಂಥವು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ತರಗತಿ ಸಂಗ್ರಹಿಸಿ [illegible] ಗೆ ಬಹುಕೆಲಸ

೧ ನೇಯ [illegible] ಬಗೆಯ.

[illegible] ಬಗೆಯ.

...ಬಂದು ಭೂಮಿಯನ್ನು ಉಳುವುದಕ್ಕೆ ಮನಃಪೂರ್ವಕವಾಗಿದ್ದ ಆ ಒಕ್ಕಲಿಗನು ನೇಗಲಿನಿಂದ ಭೂಮಿಯನ್ನು ಉಳುತ್ತಿರಲು ಆ ಪೆಟ್ಟಿಗೆಯು ಸಿಕ್ಕಿತು. ಆ ಒಕ್ಕಲಿಗನು ಅದನ್ನು ಮೇಲೆ ತೆಗೆದನು. ಅದು [illegible] ಎತ್ತಿನಷ್ಟು ಮಾತ್ರ ಭಾರವಿದ್ದಿತು. ಅದನ್ನು ತನ್ನ ಧಣಿಯಾದ ಬ್ರಾಹ್ಮಣನ ಬಳಿಗೆ ತಂದು « ಸ್ವಾಮಿ! ನಿಮ್ಮ ನೆಲದಲ್ಲಿ ಈ ಪೆಟ್ಟಿಗೆಯು ಸಿಕ್ಕಿ[ತು]; ತೆಗೆದುಕೊಳ್ಳಿರಿ." ಎಂದು ಅರ್ಪಿಸಿದನು. ಎಲೆ ಆಧುನವನಾಗರಿಕ ಮಹಿಮಂಡಲದ ಒಕ್ಕಲಿಗ ಬಂಧುಗಳೇ! ಈ ವೃತ್ತಾಂತದಲ್ಲಿ ಈ ಅಭಿಪ್ರಾಯವು ಲೇಶಮಾತ್ರವಾದರೂ [illegible]ವುದೇ? ಹಾಗೆ ನಿಮ್ಮಲ್ಲಿ [illegible]ರುವುದೇ? ಅವರಿಗೆ ಸಕಲವೂ [illegible] ಪ್ರಾಪ್ತವಾಗಲಿ.

ಆ ಬಳಿಕ ಬ್ರಾಹ್ಮಣನು ಒಕ್ಕಲಿಗನನ್ನು ನೋಡಿ– « ಅಯ್ಯಾ! ಇದು ನನಗೆ ಬೇಡ: ನಿನಗೆ ಸಿಕ್ಕಿದ ವಸ್ತುವು ನಿನ್ನದು, ನನಗೆ ಹೇಗೆ ಬಂದೀತು? ಪರರ ಸೊತ್ತನ್ನು ಆಶಿಸುವುದು ಧರ್ಮವಲ್ಲವು" ಎನ್ನಲು, ಆ ಒಕ್ಕಲಿಗನು– « ಸ್ವಾಮಿ! [ನಿ]ಮ್ಮ ನೆಲದಲ್ಲಿದ್ದುದು ನಿಮ್ಮದು; ನಾನು ಕಷ್ಟಪಟ್ಟು ಬ[ೆಳೆ]ದುದರಲ್ಲಿ ದಾಸನಾದವನ್ನು ಕಳೆದಮೇಲೆ ಉಳಿದುದೇ ನನ್ನದು, ಕಷ್ಟವಿಲ್ಲದೆ ಸಿಕ್ಕಿದುದು ನನ್ನದಲ್ಲವು." ಎಂದುದನ್ನು ಬ್ರಾಹ್ಮಣನು ಕೇಳಿ, ಅಯ್ಯಾ! ಇದು ನಿನಗೆ ಸಿಕ್ಕಿದೆ; ಇದರ [illegible]ವಿನಾದರೂ [illegible] ಅದು ನಿನ್ನದೇ ಸರಿ. ರಾಜನು ನನಗೆ [ಭೂಮಿಯ]ನ್ನು ಫಲಾನುಭವಕ್ಕೆ ಕೊಟ್ಟಿರುವನಲ್ಲದೆ, ಇದರಲ್ಲಿ ಸಿ[ಕ್ಕಿ]ದುದನ್ನು ತೆಗೆದುಕೊಳ್ಳುವಂತೆ ನನಗೆ ಹೇಳಿಲ್ಲವು. ನಿನಗೆ ಸಿ[ಕ್ಕಿ]ದುದನ್ನು ನೀನೇ ತೆಗೆದುಕೊ; ನನಗೆ ನಿಜವಾಗಿಯೂ ಬೇ[ಡ] ಎಂದನು. ಅಯ್ಯಾ ಆಧುನಿಕ ಕಾಲದ ಬ್ರಾಹ್ಮಣ ಮಹನೀಯರೆ! ಇದೆಂತಹ ಬುದ್ಧಿಯು? ಆತನನ್ನು ಮೂರ್ಖನೆಂ[ದು] ದೂರುವಿರೋ? ಅಥವಾ ನಿಸ್ಪೃಹನೆನ್ನುವಿರೋ? ಈ ನಿ[ಸ್ಪೃ]ಹಮತಿಯು ನಿಮ್ಮಲ್ಲಿ ಶಾಶ್ವತವಾಗಿರಬೇಕು.

ಆ ಬ್ರಾಹ್ಮಣನು ತೆಗೆದುಕೊಳ್ಳದೆಯೂ, ಒಕ್ಕಲಿಗನು [ಬಿ]ಡದೆಯೂ ಸ್ವಲ್ಪಹೊತ್ತು ಸಂಭಾಷಣೆಗಳು ನಡೆದು ಕೊ[ನೆಗೆ] ರಾಜನಲ್ಲಿ ತೆಗೆದುಕೊಂಡು ಹೋಗಿ ಒಪ್ಪಿಸಬೇಕೆಂದು [ನಿ]ಶ್ಚಯಿಸಲ್ಪಟ್ಟಿತು. ಇಬ್ಬರೂ ಪೆಟ್ಟಿಗೆಯನ್ನು ರಾಜನ [ಮು]ಂದಿರಿಸಿ, ತಂತಮ್ಮ ವಿವಾದವನ್ನು ಹೇಳಿಕೊಂಡರು. ಮ[ೊದಲು] ಬ್ರಾಹ್ಮಣನು– ಅಯ್ಯಾ ದೊರೆಯೆ! ನೆಲವು ನಿಮ್ಮದಾದುದರಿಂದ, ಇದನ್ನು ನೀನೇ ತೆಗೆದುಕೊಳ್ಳಬೇಕೆಂದು ಹೇಳಿದ[ನು]. ರಾಜನು– ಅಯ್ಯಾ ಬ್ರಾಹ್ಮಣೋತ್ತಮ! ಭೂಮಿಯ[ನ್ನು] ನಿನಗೇ ಕೊಟ್ಟಿರುವೆನು; ಅದರಲ್ಲಿನ ಎಲ್ಲಾ ಪ್ರಯೋಜನಗಳೂ ನಿನಗೇ ಸೇರತಕ್ಕವು; ನನಗೆ ಆವಶ್ಯಕವಿಲ್ಲವು; ನೀ[ನೇ] ತೆಗೆದುಕೊಂಡು ಹೋಗು ಎನ್ನಲು, « ರಾಜನೆ! ಏನು [ಹೇ]ಗಿನ್ನುವೆ? ಭೂಮಿಯು ಬೆಳೆಯನ್ನು ಮಾತ್ರ ನಾನು ಅನುಭವಿಸಬೇಕಲ್ಲದೆ, ಭೂಗರ್ಭದಲ್ಲಿ ದೊರೆಯುವ ವಸ್ತುಗಳು [ದೊ]ರೆಗೆ ಸೇರತಕ್ಕವುಗಳು." ಎಂಬ ಶಾಸ್ತ್ರವಿದೆ. ಆದುದ[ರಿಂ]ದ ಇದು ನಿನಗೇ ಸೇರತಕ್ಕದು ಎಂದ ಬ್ರಾಹ್ಮಣನ ಮಾ[ತ]ನ್ನು ಸಮೀಪದಲ್ಲಿದ್ದ ಮಂತ್ರಿಯು ಕೇಳಿ ಆಲೋಚಿಸಿ ಮ[ಹಾ]ರಾಜನನ್ನು ನೋಡಿ– « ಸ್ವಾಮಿ! ಈ ಬ್ರಾಹ್ಮಣನ ವಚ[ನ]ವು ನಿಶ್ಚಯವಾದುದು. ಇದರಲ್ಲಿ ಇರುವುದೇನೆಂಬುದನ್ನು [ನ]ೋಡಿ ತಮಗೆ ಬೇಡವಾದರೂ, ಈತನಿಗೇ ಈ ವಸ್ತುವನ್ನು [ಕೊ]ಡಬೇಕೆಂಬ ಇಷ್ಟವಿದ್ದರೂ ಈತನಿಗೆ ಕೊಡಬಹು[ದು]." ಎಂದು ಹೇಳಿ ಇಬ್ಬರನ್ನೂ ಸಮ್ಮತಿಪಡಿಸಿ ಪೆಟ್ಟಿಗೆ[ಯ] ಮುಚ್ಚಳವನ್ನು ತೆಗೆಯಲು ಅದರಲ್ಲಿ ಲೋಕೈಕ ಸುಂದ[ರಿ]ಯಾದ ಸ್ತ್ರೀಶಿಶುವಿದ್ದುದನ್ನು ನೋಡಿ ಎಲ್ಲರೂ ಆಶ್ಚರ್ಯ[ಪ]ಟ್ಟರು. ಆ ರಾಜನಿಗೆ ಅದುವರೆಗೆ ಮಕ್ಕಳಿಲ್ಲದುದರಿಂದ [ಅ]ಲ್ಲಿನ [illegible]ರ ಅಪ್ಪಣೆಯಂತೆ ಪುತ್ರಿಯನ್ನಾಗಿ ಸ್ವೀಕರಿಸಿ [ಅ]ಕ್ಕರೆಯಿಂದ ಪೋಷಿಸಿದನು. « ಸೀತಾ " ಎಂದರೆ ನೇಗಲಿ[ನ] ಕೊನೆಯು. ಅದರ ಮೊನೆಯಿಂದ ಸಿಕ್ಕಿದುದಾದುದರಿಂದ [ಆ] ಶಿಶುವಿಗೆ « ಸೀತಾ " ಎಂದೇ ನಾಮಕರಣ ಮಾಡಿದರು. [ಆ] ಬ್ರಾಹ್ಮಣನೂ, ಆ ಒಕ್ಕಲಿಗನೂ ಮಹಾರಾಜನ ಅಧಿಕವಾದ ಗೌರವಕ್ಕೆ ಪಾತ್ರರಾಗಿ ದರಿದ್ರಬಾಧೆಯಿಂದ ವಿಮು[ಕ್ತ]ರಾಗಿ ಸ್ವಸ್ಥಾನಕ್ಕೆ ತೆರಳಿ ಅತ್ಯಧಿಕ ಸುಖದಿಂದಿದ್ದರು. « ನಿಸ್ಪೃಹತೆ " ಯು ಎಂತಹ ಆನಂದ ಸತ್ಕೀರ್ತಿಗಳನ್ನೀಯು[ವು]ದೆಂಬುದನ್ನು ವಾಚಕ ಮಹಾಶಯರೇ! ನೀವೇ ಈಗ ಊಹಿಸಿರಿ.

"ಕೊಂಡಿತೆ ತನ್ನಿಂದಾಜೀಗವಾದುದೆ!
ತನ್ನಿಂದುಪಭೋಗ ಸೋಗದೆಂಬುದನರಿತುಂ!
ತನ್ನದೆನುತ್ತ ಸ್ವೀಕರದಂ!
ಗನ್ನತನಂ ತೊರೆದು [illegible]!"

[illegible]
ಅಲಸೆಪುರಿ ಧಾರ್ಮಿಕ ಪಾಠಕರಿಗಳು (?),
ಹಲಸೂರು, [illegible] ತಾ॥

ವುದೆಂದು ಬರೆದಿರುತ್ತಾರೆ. ಈ ಸಂವತ್ಸರದಲ್ಲಿ ಅಂಗಾರಕನು ವೃಷಭ ರಾಶಿಯಲ್ಲಿ ಪ್ರವೇಶಿಸಿರುವುದರಿಂದ, ಜನವರಿ ಮೊದಲ್ಗೊಂಡು ಐರ್ಲೆಂಡಿನಲ್ಲಿ ಕ್ಷೋಭೆಯುಂಟಾಗುವುದು; ಬಂಗಾಳದಲ್ಲೂ ಬೊಂಬಾಯಿಯಲ್ಲೂ ದೌರ್ಭಿಕ್ಷ್ಯ ನಡೆಯುವುದು; ಅಮೇರಿಕಾದ ಯುನೈಟೆಡ್ ಸ್ಟೇಟಿಗೆ ಸೇರಿದ ಸಾನ್ ಫ್ರಾನ್ಸಿಸ್ಕೋದಲ್ಲೂ ಅದರ ನೆರೆಹೊರೆಯ ಪ್ರದೇಶದಲ್ಲೂ ದೌರ್ಭಿಕ್ಷ್ಯವೂ, ಭೂಕಂಪನವೂ ಸಂಭವಿಸುವುವು. ಜನವರಿ ತಾ॥ ೪ ರಿಂದ ಬೇಸಾಯಗಾರರಿಗೂ, ಮನೆಯನ್ನು ಕಟ್ಟುವವರಿಗೂ, ಕಲ್ಲಿದ್ದಲು, ಸೀಸ, ಸಿಮೆಂಟ್, ಮತ್ತು ಇಟ್ಟಿಗೆ ಈ ಪದಾರ್ಥಗಳ ವ್ಯಾಪಾರವನ್ನು ಮಾಡುವವರಿಗೂ ಅನುಕೂಲವಾಗಿರುತ್ತದೆ. ಫೆಬ್ರುವರಿ ತಿಂಗಳಲ್ಲಿ ರಷ್ಯಾ ಮತ್ತೂ ಪ್ರಷ್ಯಾ ದೇಶಗಳಲ್ಲಿ ಅಶಾಂತಿಗೆ ಪ್ರಾರಂಭವಾಗುವುದು. ಈ ಎರಡು ದೇಶಗಳ ಜಾತಕಗಳ ಅಂತ್ಯಾಕ್ಷರಗಳು ಒಂದೇ ಆಗಿರುವುದರಿಂದ, ಅವುಗಳ ಭವಿಷ್ಯವು ಒಂದೇಯಾಗಿರುವುದೆಂದು ಹೇಳತಕ್ಕದಾಗಿಲ್ಲವು. ಆದರೆ ಶನಿಯು ಮೇಷ ರಾಶಿಯಿಂದ ವೃಷಭರಾಶಿಗೆ ಬಂದಿರುವುದೇ ಈ ಎರಡು ದೇಶಗಳ ಫಲವೂ ಒಂದೇ ಆಗಿರಲು ಕಾರಣವಾಗಿರುತ್ತದೆ. ಐರ್ಲೆಂಡ್ ದೇಶವು ಇನ್ನೂ ಅಶಾಂತಿಯ ತೊಂದರೆಯಲ್ಲಿ ಸಿಕ್ಕಿಕೊಂಡಿರುವುದು. ಫೆಬ್ರುವರಿ ತಿಂಗಳ ಕಡೆಯಲ್ಲಿ ಇಟಲಿದೇಶದ ದೊರೆಯು ರಾಜ್ಯಕಂಟಕರ ಉಪದ್ರವಕ್ಕೆ ಗುರಿಯಾಗಿ ನಿರ್ವಾಣವಾಗುವಷ್ಟು ಅಪಾಯ ಸ್ಥಿತಿಯಲ್ಲಿರುವನು. ಲಂಡನ್ ನಗರದಲ್ಲಿ ಅಗ್ನಿಯಾಪತ್ತು ಸಂಭವಿಸುವುದಲ್ಲದೆ, ಉತ್ತರ ಅಮೇರಿಕಾದ ಪೂರ್ವ ದೇಶಗಳಲ್ಲಿ ಅನೇಕ ದುಷ್ಕೃತ್ಯಗಳು ಜರುಗುವುವು. ಸಂವತ್ಸರದ ಕಡೆಯವರೆಗೂ ವಿಪತ್ತುಗಳು ಒಂದೇ ಸಮನಾಗಿ ಸಂಭವಿಸುತ್ತಿರುವುವು. ಮಾರ್ಚಿ ತಿಂಗಳಲ್ಲಿ ಸೂರ್ಯನು ಶನಿಯ ಕೂಡ ತನ್ನ ಸ್ಥಾನಕ್ಕೆ ಹಿಂದಿರುಗಿ ಅಂಗಾರಕ, ಬೃಹಸ್ಪತಿಗಳ ಕೂಡ ಜರುಗುವುದರಿಂದ ಐರೋಪ್ಯದೇಶದ ನ್ಯಾಯಾಧಿಪ ನಾಧಿಪತಿಗಳಲ್ಲಿ ಉಲ್ಲೋಲಕಲ್ಲೋಲ ಉಂಟಾಗಿ ಯುದ್ಧವಿಚಾರದಲ್ಲೋ ಅಥವಾ ಸಂಧಿಯ ವಿಚಾರದಲ್ಲೋ ಗ್ರೇಟ್ ಬ್ರಿಟನ್ನು, ಫ್ರಾನ್ಸು, ಆಸ್ಟ್ರಿಯಾ, ಜರ್ಮನಿ, ರಷ್ಯಾ– ಈ ದೇಶಗಳಿಗೆ ಅಪಾಯವು ಸಂಭವಿಸುವುದು. ಆಸ್ಟ್ರಿಯಾ ಜರ್ಮನಿ ಮತ್ತೂ ರಷ್ಯಾ ಈ ಮೂರು ದೇಶಗಳಲ್ಲೊಂದರಲ್ಲಿಯ ಒಬ್ಬ ಮಹಾಪುರುಷನಿಗೆ ಮರಣವು ಸಂಭವಿಸುವುದು. ನಮ್ಮ ದೇಶವು ಮಾತ್ರ ಗೌರವದಿಂದ ಸುಖವಾಗಿರುವುದು. ಲಂಡನ್ ಪಟ್ಟಣದಲ್ಲಿ ಅಗ್ನಿಯ ಅನಾಹುತವೂ, ಇನ್ನೂ ಅನೇಕ ಘೋರಕೃತ್ಯಗಳೂ ನಡೆಯುವುವು. ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತೂ ಐರ್ಲೆಂಡ್ ಈ ಸಂಯುಕ್ತ ದೇಶಗಳಲ್ಲಿ ತೊಂದರೆಯೂ ಮತ್ತೂ [illegible] ಪ್ರಾಪ್ತವಾಗುವುವು. ಏಪ್ರಿಲ್ ತಿಂಗಳಲ್ಲಿ ಗ್ರೇಟ್ ಬ್ರಿಟನ್ನಿಗೂ, ಪರದೇಶಗಳಿಗೂ ಮನಸ್ತಾಪವೂ, ಕೆಲಸಗಾರರ ಹೋರಾಟವೂ, ಗೊಂದಲವೂ ಉಂಟಾಗುವುವು. ಜರ್ಮನಿಯಲ್ಲೂ ಕೂಡಾ ದೊಡ್ಡ ದೊಡ್ಡವರಲ್ಲಿ ಮನಸ್ತಾಪ, ಹೋರಾಟ, ಜಗಳಗಳು ಆಗುವುವು. ಅಮೇರಿಕಾ ದೇಶದ ದೊರೆಯು ದುಃಖಿತನಾಗಿ [illegible]ನು. ಮೇ ತಿಂಗಳಲ್ಲಿ ಯುನೈಟೆಡ್ ರಾಜ್ಯದಲ್ಲೂ, ಯುನೈಟೆಡ್ ಸ್ಟೇಟುಗಳಲ್ಲೂ ಕಷ್ಟವು [illegible] ಪ್ರಾಪ್ತವಾಗುವುದು. ಅಂಗಾರಕನು ಕರ್ಕಾಟಕದಲ್ಲಿರುವುದರಿಂದ ನೌಕಾಯುದ್ಧವೂ, ನೌಕಾನಾಶವೂ ಆಗುವುವು. ಐರ್ಲೆಂಡ್ ದೇಶವು ಇನ್ನೂ ಗಲಭೆ ದುಃಸ್ಥಿತಿಗೆ ಗುರಿಯಾಗುವುದು. ಆಗ ಬಂಗಾಳಾ ದೇಶದಲ್ಲಿ ಅತಿವೃಷ್ಟಿ [illegible] ಯುಂಟಾಗುವುದು. ಈ ಮೇ ತಿಂಗಳ ತಾ॥ ೨೩ ರಿಂದ ೨೯ ರವರೆಗೂ ಯುರೋಪು ದೇಶದಲ್ಲಿ ಸ್ತ್ರೀ ವಿಷಯಕವಾಗಿ ಉತ್ಪತ್ತಿಯಾಗುವ ತೊಂದರೆಗಳು ಪ್ರಬಲಿಸುವುವು. ಯೂರೋಪಿನ ದಕ್ಷಿಣ ಭಾಗದಲ್ಲಿ ಅಗ್ನಿಯಾಪತ್ತು ಸಂಭವಿಸಲಿದೆ. ಇರುವುದು ಆ ದೇಶದ ಭಾಗ್ಯಸಂಪತ್ತು ಹಾಳಾಗುವುದು. ಆದರೆ ಇಂತಹ ವಿಪತ್ತು ಸಂಭವಿಸಿದರೂ [illegible] ದೇಶದಲ್ಲೆಲ್ಲಾ ಸಂತೋಷವು ವ್ಯಾಪಿಸಿರುವುದು. ಜೂನ್ ತಾ॥ ೧೬ ರಲ್ಲಿ ಅಂಗಾರಕನು ಬೃಹಸ್ಪತಿಯ ಕೂಡ ಸೇರುವುದರಿಂದ, ಯುದ್ಧವು ಜರುಗಿ ರಕ್ತಪಾತವಾಗುವುದು. ಜುಲೈ ತಿಂಗಳಲ್ಲಿ [illegible] ಸಭೆಯಲ್ಲಿ ಅನೇಕ ತೊಂದರೆಗಳು ಪ್ರಾಪ್ತವಾಗುವುವು. [illegible]ದಲ್ಲಿ ಉತ್ಪತ್ತಿಯು ಕಡಿಮೆಯಾಗುವುದು. ಮತ್ತೂ [illegible]ದಿಂದ ವಿಶೇಷ ಮರಣವಾಗುವುದು. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ [illegible] ಸಂಭವಿಸುವುದು. ನವೆಂಬರ್ ತಿಂಗಳಲ್ಲಿ ಸ್ತ್ರೀಯರು ಕೆಲಸಗಾರರಲ್ಲಿ ಗೊಂದಲವೆದ್ದು ಅಪಾಯವುಂಟಾಗುವುದಲ್ಲದೆ, ಪ್ರಜಾಧಿಕಾರಿಗೆ ನಾನಾವಿಧಕಷ್ಟವು ಸಂಭವಿಸುವುದು. ಆಸ್ಟ್ರೇಲಿಯಾದಲ್ಲಿ [illegible] ಇಂಗ್ಲೆಂಡಿನಲ್ಲಿ [illegible] ವಾಗಿ [illegible] ಪ್ರಾಪ್ತ[illegible]ಮನು, [illegible]

ಕ್ಯಾಲೆಂಡರ್ [illegible]

ವ್ಯವಸಾಯ ವಿಷಯಗಳು.

ಕೆಲವು ಹಣ್ಣು ಮತ್ತು ಹೂವುಗಳ ಸಸಿಗಳನ್ನು ನೆಟ್ಟ ಪ್ರಾರಂಭದಲ್ಲಿ ಅವುಗಳ ಮೇಲೆ ಬಿಸಿಲು ಮತ್ತು ಧೂಳಿಗೆ ಮರೆಯಾಗಿ ಇತರ ಸೊಪ್ಪುಗಳನ್ನು ಮುಚ್ಚುತ್ತಾರಷ್ಟೆ. ಹಾಗೆ ಮುಚ್ಚಲ್ಪಟ್ಟ ಸೊಪ್ಪುಗಳು ಭೂಮಿಯಲ್ಲಿ [illegible] ಬೆಚ್ಚಗಾಗಿ ನಿಲ್ಲುವಂತೆಯೂ ಮತ್ತೂ ಕಳೆಗಳು ವಿಶೇಷವಾಗಿ ಬೆಳೆಯುವಂತೆಯೂ ಮಾಡುವುವು. ಕಾಲಕ್ರಮೇಣ ಈ ಸೊಪ್ಪುಗಳು ಕೊಳೆತು ಪೈರಿಗೆ ಒಳ್ಳೇ ಗೊಬ್ಬರವಾಗಿ ಪರಿಣಮಿಸುವುವು. ಆದ್ದರಿಂದ ರೈತರು [illegible] ಪಕ್ಕ, ಬೆಟ್ಟ, ಗುಡ್ಡ ಮತ್ತು ಬಯಲುಗಳ ಅಕ್ಕಪಕ್ಕದಲ್ಲಿ ಬೆಳೆದಿರುವ ಹುಲ್ಲು, ಸೊಪ್ಪು ಮತ್ತು ಪೊದೆಗಳನ್ನು [illegible] ಅವುಗಳನ್ನು ಕತ್ತರಿಸಿ ಜಮೀನುಗಳಿಗೆ ಹಾಕಿ ಕೊಳೆಸಿದರೆ ಅವು [illegible] ಬೆಲೆ ಬಾಳುವ ಗೊಬ್ಬರವಾಗಿ ಅವರಿಗೆ ಬಹಳ ಉಪಯೋಗವಾಗುವುದು.

[illegible]ಪುರದ [illegible] ಪಟ್ಟಣದ [illegible] ಮತ್ತು ರಾಗಿಗಳು [illegible] ಹತ್ತಿ ಬೀಜದ ಹಿಂಡಿಯನ್ನು ಆಹಾರವಾಗಿ ಕೊಡುತ್ತಾರೆ. ಮೊದಲು [illegible] ೧೦ ರಾಸುಗಳಿಗೆ ಅವಕ್ಕೆ ದಿನಗಟ್ಟಲೆ ಕೊಡುತ್ತಿದ್ದ [illegible] ಒಂದು ಸೇರು ಹುರುಳಿಗೆ ಬದಲಾಗಿ ಒಂದು ಸೇರು ಹತ್ತಿಯ ಹಿಂಡಿಯು ಕೊಡಲ್ಪಟ್ಟಿತ್ತು. ಎರಡು ವಾರಗಳು ಇದೇ ರೀತಿಯಾಗಿ ಹತ್ತಿಯ ಹಿಂಡಿಯನ್ನು ತಿಂದ ರಾಸುಗಳನ್ನು ತೂಕಮಾಡಲಾಗಿ ಅವು [illegible] ಮಾತ್ರವನ್ನೇ ತಿನ್ನುತ್ತಿದ್ದ [illegible] ರಾಸುಗಳಿಗಿಂತ ಜಾಸ್ತಿ ತೂಗುವುದಾಗಿ ಕಂಡುಬಂದಿತು. ಹೀಗೆ ಮಾಡಿದ್ದರಿಂದ ರಾಸುಗಳು ಬಹಳ ಆರೋಗ್ಯವಾಗಿರುವುದಲ್ಲದೆ ಅವುಗಳಿಗೆ ಹತ್ತಿಯ ಹಿಂಡಿಯನ್ನು ಕೊಡುವುದಕ್ಕೆ ಮೊದಲು ದಿನಕ್ಕೆ ರಾಸು ಒಂದಕ್ಕೆ ೧೦ ಸೇರು [illegible] ತಿನ್ನುತ್ತಿದ್ದದ್ದು ತಪ್ಪಿ ಈಗ ದಿನಕ್ಕೆ ೪ ಸೇರೇ ಸಾಕಾಗುವುದಾಗಿ ಗೊತ್ತಾಗಿದೆ.

ಕೆ. ಗೆ.

ತುರ್ಕಿ ಇಟಲಿಗಳ ಯುದ್ಧವು.

ಜನವರಿ ತಾ॥ ೨೯— ಇಟಲಿಯವರು [illegible] ತೀರವನ್ನು ತಮ್ಮ ಸೇನೆಯಿಂದ ಆವರಿಸಿಕೊಂಡಿರುತ್ತಾರೆ. [illegible] ಎಂಬಲ್ಲಿರುವ ಬ್ರಿಟಿಷರ ರಾಯಭಾರಿಯು ತನ್ನನ್ನು ಕರೆಯ[ಲು] ಒಂದು ಯುದ್ಧನೌಕೆಯು ಸಿದ್ಧವಾಗಿರಬೇಕೆಂದು ಹೇಳಿಕೊಂಡಿರುತ್ತಾನೆ. ಇಟಲಿಯವರು ಆ ಪಟ್ಟಣವನ್ನು [illegible] ನಾಶಪಡಿಸುತ್ತೇವೆಂದು ಹೆದರಿಸುತ್ತಿರುವರು. [illegible] ಅರಬ್ಬಿಯವರು [illegible] ಹೋರಾಡುತ್ತಿದ್ದು ತಾ॥ [illegible] ರ [illegible] ಕದನದಲ್ಲಿ ಇಟಲಿಯವರ [illegible] ಸತ್ತರು, ಮತ್ತೂ ೪ ಜನರು ಗಾಯವಾದರು.

ತಾ॥ ೨೯ — [illegible] ಪ್ರಯಾಣಮಾಡುತ್ತಿದ್ದ [illegible] ತುರ್ಕಿ [illegible] ವಶಕ್ಕೆ ಕೊಡಲ್ಪಟ್ಟರು. [illegible] ಕಾರಣವನ್ನು ತಿಳಿಯಲು ಫ್ರಾನ್ಸಿಗೆ ಬರಮಾಡಲ್ಪಟ್ಟಿರುವನು.

ತಾ॥ ೩೧— [illegible] ಪ್ರಯಾಣಮಾಡುತ್ತಿದ್ದ ತುರ್ಕಿಯ ಪ್ರಯಾಣಿಕರೆಲ್ಲರೂ ತಾ॥ ೨೯ ರ ಬೆಳಗ್ಗೆ ಮಾರ್ಸೆಲ್ಸಿಗೆ ಪ್ರಯಾಣಮಾಡಿದರು. ಇಟಲಿಯ [illegible] ಎಂಬ [illegible] ಹೋಗುತ್ತಿದ್ದ [illegible] ಕಂಪೆನಿಯವರಿಗೆ ಸೇರಿದ [illegible] ಹಿಡಿದುಕೊಂಡಿತು. [illegible] ಹಡಗುಗಳನ್ನು ಪುನಃ ಹಿಡಿಯುವುದನ್ನು [illegible] ಫ್ರಾನ್ಸು ಮತ್ತೂ ಇಟಲಿ ರಾಜ್ಯಗಳ [illegible] ಯು [illegible]ದೆ.

ಫೆಬ್ರುವರಿ ತಾ॥ ೧— ಇಟಲಿಯವರ [illegible] ಎಂಬ [illegible] ಹಿಡಿದಿದ್ದ [illegible] ಕಂಪೆನಿಯವರ [illegible]. [illegible] ಬಂದಿರುತ್ತದೆ. [illegible] ಕಂಪೆನಿಯವರ [illegible] ಬ್ರಿಟಿಷ್ [illegible] ಧ್ವಜವನ್ನು, [illegible] ಉಪಯೋಗಿಸಿಕೊಂಡು [illegible] ಕಾರಣವಾಗಿ [illegible] ಇಟಲಿಯವರು [illegible] ೧೦ ಜನರನ್ನು [illegible]

[illegible]

ಫೆಬ್ರುವರಿ ೫ನೇ ೬ — ಜನವರಿ ೩೧ರ ಮತಗಳಲ್ಲಿ ಪ್ರಯಾಣ ಮಾಡುತ್ತಿದ್ದ ಇಟಲಿಯನರಿಂದ ಸೆರೆಹಿಡಿಯಲ್ಪಟ್ಟಿರುವ ತುರ್ಕಿಯವರಲ್ಲಿ ಎಫ್. ಜನರು ರೆಡ್ ಕ್ರೆಸೆಂಟಿಗೆ ಸೇರಿದ ಅಧ್ಯಕ್ಷ ಮೋಕಂಬಿದವರಿಂದಾ ಅವರೆಲ್ಲರೂ ಸಿಯಾಸಿಗೆ ಕಳುಹಲ್ಪಡುವರೆಂದೂ ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿದೆ. ೨೯ನೇ ನೇವನು ಭಾರ್ಯಾಪಾಯು ಸ್ಥಿತಿಯಲ್ಲಿರುವರು. ಮತ್ತು ಅರ್ಯವರ ಗುರ್ತನನ್ನು ಕಂಡು ಹಿಡಿಯಲಾಗದ್ದರಿಂದ ಅವನು ಟರ್ಕಿಯವರಿಗೆ ಕೊಡಲ್ಪಡುತ್ತಿಲ್ಲ. ತುರ್ಕಿಯವರ ಕೋಟೆಗಳಿಂದ ವಿಮಾನ ಕಡೆಗೆ ಬಂದುಸಲುವಾಗಿ ಕಿರಣಗಳ ಜೋಡೆಯುಳ್ಳದ್ದುತ್ತಿದ್ದವು. ಇಟಲಿಯ ವೈಮಾನಿಕನಾದ ಸಿಗ್ನಾರಾಸ್ಸಿಯು ಕ್ಯಾಪ್ಟನ್ ಮಾಂಟು ಎಂಬ ಪ್ರಯಾಣಿಕನೊಡನೆ ತಾ|| ೧ ರಲ್ಲಿ ಟ್ರಿಪೋಲಿ ಬಳಿಯಿರುವ ತುರ್ಕಿಯವರ ಪಾಳೆಯಗಳ ಮೇಲೆ ಸಂಚರಿಸುತ್ತ ಸಿಡಿಮದ್ದುಗಳನ್ನು ಹಾಕಿದನು. ತುರ್ಕಿಯವರು ಹಿಂತಿರುಗಿ ವಿಮಾನಕ್ಕೆ ಗುರಿಯಿಟ್ಟು ಗುಂಡುಗಳನ್ನು ಹೊಡೆದುದರಲ್ಲಿ ೮ ಗುಂಡುಗಳು ವಿಮಾನಕ್ಕೆ ತಗಲಿದುವಲ್ಲದೆ ಮಾಂಟುಗೆ ಕೊಂಚಗಾಯವನ್ನು ಮಾಡಿದುವು.

ತಾ|| ೭ — ಜನವರಿ ತಾ|| ೩೧ ರಲ್ಲಿ ಬೆಂಗಾಜಿಯಲ್ಲಾದ ಕದನದಲ್ಲಿ ಇಟಲಿಯನರು ೮ ಜನರನ್ನು ಕಳೆದುಕೊಂಡು ಹಿಂದಕ್ಕೋಡಿಸಲ್ಪಟ್ಟರು. ಈ ಯುದ್ಧದಿಂದ ಈವರೆಗೆ ೫೪ ಲಕ್ಷ ರೂ ಗಳು ವ್ಯಯವಾಗಿರುವುದಲ್ಲದೆ ಯಾವಾಗ ತೀರುವದೆಂದು ಸಂಭವವಿರುವುದಿಲ್ಲವು. ಇಟಲಿಯವರು ಜನವರಿ ತಾ|| ೩೦ ರಲ್ಲಿ ಜಾಬನ್ನ ಕೋಟೆಗೆ ಹಿಂಗಗಳನ್ನು ಜೋಡಿಸಿ ೭ ಡೇರಾಗಳಿಗೆ ಬೆಂಕಿಯನ್ನು ಹೊತ್ತಿಸಿದರು. ಮತ್ತು ೧ ಆಳನ್ನ ಕೊಂದರು.

ಮೈಸೂರ್ ಸ್ಟಾರ್

೧೯೧೨ನೇ ಫೆಬ್ರುವರಿ ತಾ|| ೫ ನೇ ಸೋಮವಾರ.

ಪೋರ್ಚುಗಲ್ ದೇಶದಲ್ಲಿಯ ಗೊಂದಲವು.

ಈ ದೇಶವು ಸ್ಪೇನ್ ರಾಜ್ಯದ ಪಶ್ಚಿಮ ದಿಗ್ಭಾಗದಲ್ಲಿ ಅದಕ್ಕೆ ಸೇರಿಕೊಂಡೇ ಇರುವುದು. ಇದರ ವಿಸ್ತೀರ್ಣವು ೩೫೦೦೦ ಚದರಮೈಲಿಗಳಿರುವುದಲ್ಲದೆ, ಪ್ರಜಾಸಂಖ್ಯೆಯು ೫೪ ಲಕ್ಷಕ್ಕೆ ಮೇಲ್ಪಟ್ಟಿರುವುದು. ಈ ಪೋರ್ಚುಗಲ್ ದೇಶಸ್ಥರು ನಡೆನುಡಿಗಳಲ್ಲಿ ಸ್ಪೇನ್ ದೇಶಸ್ಥರನ್ನು ಹೋಲುವರಾದರೂ, ಉಭಯ ದೇಶಸ್ಥರುಗಳಲ್ಲಿ ಪರಸ್ಪರ ವೈಮನಸ್ಯವು ಅಧಿಕವಾಗಿರುವುದು. ಪೂರ್ವದಲ್ಲಿ ಪೋರ್ಚುಗಲ್ ದೇಶವು ಸ್ಪೇನ್ ರಾಜ್ಯದ ಒಂದು ಭಾಗವಾಗಿದ್ದು ೧೧೪೩ ರಲ್ಲಿ ಸ್ವತಂತ್ರರಾಜ್ಯವಾಗೇರ್ಪಟ್ಟಿತು. ೧೬ನೇ ಶತಮಾನದಲ್ಲಿ ಈ ಪೋರ್ಚುಗಲ್ ದೇಶವು ಯುದ್ಧನಾವೆಗಳ ಬಲದಿಂದಲೂ, ಪ್ರಖ್ಯಾತವಾಗಿದ್ದುದಲ್ಲದೆ, ಬಹು ಪ್ರಬಲವಾದ ವ್ಯಾಪಾರವನ್ನು ನಡೆಯಿಸುತ್ತ ಅನೇಕ ವಸಾಹತುಗಳನ್ನು ಸ್ಥಾಪಿಸಿದ್ದಿತು. ಈ ದೇಶವು ೧೫೮೦ ರಲ್ಲಿ ಸ್ಪೇನ್ ದೇಶದ ದೊರೆಯಾದ ಎರಡನೆಯ ಫಿಲಿಪನಿಂದ ಅಧೀನಗೊಳಿಸಲ್ಪಟ್ಟಿದ್ದರೂ, ೧೬೪೦ ರಲ್ಲಿ ಪುನಃ ತನ್ನ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿತು. ಅಂದಿನಿಂದ ಕಳೆದ ೧೯೧೦ನೇ ಅಕ್ಟೋಬರ್ ತಾ|| ೪ ರ ವರೆಗೆ ಬೆರ್ಗನ್ಜಾ ಎಂದು ಕರೆಯಲ್ಪಡುತ್ತಿದ್ದ ರಾಜವಂಶದ ಸಂತತಿಯವರಾದ ದೊರೆಗಳಿಂದ ಆಳಲ್ಪಡುತ್ತಿದ್ದಿತು. ಆದರೆ ಆ ದೇಶದ ವಿದ್ಯಾವಂತರೂ, ನಾಗರಿಕರೂ ಆದ ಕೆಲ ಜನರು ದೊರೆಯು ಮತ್ತು ಸರಕಾರದ ವರ್ಗದವರ ಅಜ್ಞಾನ ಮತ್ತು ಸ್ವಾರ್ಥಪರತೆಯಿಂದ ಪ್ರಜೆಗಳಿಗೆ ಅಹಿತವಾದ ಕಾರ್ಯಗಳನ್ನು ನಡೆಯುತ್ತಾ ಇವೆಯೆಂದು ನೆನೆಸುತ್ತಾ, ಅಮೇರಿಕಾ ಮತ್ತು ಫ್ರಾನ್ಸ್ ದೇಶಗಳಲ್ಲಿರುವಂತೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿ, ೧೯೧೦ನೇ ಅಕ್ಟೋಬರ್ ತಿಂಗಳಲ್ಲಿ ದಂಗೆಯನ್ನೆಬ್ಬಿಸಿದರು. ದೊರೆಯು ಅರಮನೆಯ ಸಮೀಪದಿಂದ ವಿಹಾರಕ್ಕೆ ಹೊರಟಿದ್ದಾಗ ಅಧಿಕಾರಿಗಳೂ, ಸೈನಿಕರೂ ಪ್ರಜಾಪಕ್ಷದವರಾದ ದಂಗೆಯವರ ಕಡೆಗೆ ಸೇರಿ, ಪ್ರಭುಪಕ್ಷದವರ ಕಡೆಗೆ ಇದಿರಾಗಿ ಅವರನ್ನು ಸೋಲಿಸಿ ಅರಮನೆಯನ್ನು, ಕೋಶವನ್ನೂ ಸ್ವಾಧೀನಪಡಿಸಿಕೊಂಡರು. ಆಗ ಪ್ರಭುಪಕ್ಷದವರೆಲ್ಲರೂ ಪರಾಜಿತರಾಗಿ ತಲೆತಪ್ಪಿಸಿಕೊಂಡಿರುವರಲ್ಲದೆ, ಮಾನ್ಯುಯೆಲ್ ದೊರೆಯು ತನ್ನ ಕುಟುಂಬದವರೊಡನೆ ಅರಮನೆಯಿಂದ ತಪ್ಪಿಸಿಕೊಂಡು ಬಂದು ನಾವೆಯನ್ನು ಹತ್ತಿ ಪ್ರಾಣರಕ್ಷಣೆಯನ್ನು ಮಾಡಿಕೊಂಡನು. ಪಟ್ಟವನ್ನು ಕಳೆದು ಕೊಂಡ ಮಾನ್ಯುಯೆಲ್ ದೊರೆಯು ತಂದೆಯೂ, ಅಣ್ಣನೂ ಪ್ರಜಾಪಕ್ಷದವರಿಂದ ೧೯೦೮ ರಲ್ಲಿ ಕೊಲ್ಲಲ್ಪಟ್ಟಿದ್ದರು. ತನ್ನ ತಂದೆಯು ೧೯೦೦೦೦ ರೂ ಗಳನ್ನು ಸಾಲ ಮಾಡಿ ... ತೆಗೆದುಕೊಳ್ಳುತ್ತಿದ್ದುದೂ, ತಾಯಿಯು ೧೯೦೦೦೦ ರೂ ಗಳಷ್ಟು ಸಾಲವನ್ನು ಮಾಡಿಕೊಂಡುದೂ, ಇವೇ ಮೊದಲಾದವುಗಳು ... ತಿಯನ್ನು ಹಿಡಿದು ನಡೆಯುತ್ತಿದ್ದರು.

ತ ರಾಜ್ಯಭಾರವನ್ನು ಮಾಡಬೇಕೆಂಬ ಪಕ್ಷಂಕಲ್ಪವನ್ನು ತೊಟ್ಟವನಾಗಿದ್ದನು. ಹೀಗಿದ್ದರೂ ಪ್ರಜಾಧಿಪತ್ಯಾಭಿಲಾಷಿಗಳು ತಮ್ಮ ದೊರೆಯು ಮಾತೃಪ್ರೇರಣೆಗೆ ಬಲವಾಗಿ ಅವನ ಕೈ ಸೂತ್ರದ ಬೊಂಬೆಯಂತೆ ಆಗಿರುವನೆಂದು ಪ್ರಭುತ್ವವನ್ನು ಅನವಶ್ಯವಾಗಿ ಬಲವಂತವಾಗಿ ಪಡೆದು, ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ತಮ್ಮ ಇಷ್ಟಾರ್ಥವನ್ನು ಮಾಡಿಕೊಂಡರು.

ಪೋರ್ಚುಗಲ್ ದೇಶದಲ್ಲಿ ಪ್ರಜಾಧಿಪತ್ಯವು ಸ್ಥಾಪಿತವಾದರೂ ನಿರಂಕುಶಾಧಿಕಾರವಾದ ರಾಜ್ಯ ನಾಶವಾದರೂ ಜನರಲ್ಲಿ ಸಮಾಧಾನವಾಗಲಿ ಶಾಂತಿಯಾಗಲಿ ಇಲ್ಲವು. ಏಕೆಂದರೆ ಪ್ರಜಾಪ್ರಭುತ್ವವು ಸ್ಥಾಪಿತವಾದ ಕೂಡಲೆ ಮೊದಲಿನ ಕಡೆಗಳಲ್ಲಿ ಪ್ರತಿಕೂಲ ರೀತಿಗಳಿಂದ ತಲೆದೋರುತ್ತಿರುವ ರಾಜಕಾರ್ಯನಿರ್ವಾಹಕರು ಅನ್ಯಾಯ ಮೊದಲಾದ ದುಷ್ಕೃತ್ಯಗಳನ್ನೆಸಗುತ್ತಿದ್ದರು. ಮತ್ತು ಮೊದಲಿದ್ದ ಮಂತ್ರಿಸಭೆಯು ತನಗೂ, ಪ್ರಜಾಧಿಪತ್ಯದವರಿಗೂ ಭಿನ್ನಾಭಿಪ್ರಾಯ ಹುಟ್ಟಿರುವುದರಿಂದ ಕೆಲಸಗಳು ಸುಗಮವಾಗಿ ನಡೆಯದಿರುವುದು ಮತ್ತು ಪ್ರಜಾಪ್ರಭುತ್ವವು ತನ್ನೊಳಗೇ ಬಲಹೀನವಾಗಿರುವುದಲ್ಲದೆ, ಹೊರಗಡೆ ಪ್ರಭುಪಕ್ಷದವರಿಂದ ಹೆದರಿಸಲ್ಪಡುತ್ತಿದೆ. ಪ್ರಭುಪಕ್ಷದವರಲ್ಲಿ ಕೆಲರು ಪದಭ್ರಷ್ಟನಾದ ಮಾನ್ಯುಯೆಲ್ ರವರನ್ನು ಪುನಃ ಪ್ರಭುತ್ವಕ್ಕೆ ತರಬೇಕೆಂದೂ, ಮತ್ತೆ ಕೆಲರು ಅವನ ದಾಯಾದಿಯಾದ ತಾಂಟಿಯಾಗಲ್ ಎಂಬುವವನನ್ನು ಸಿಂಹಾಸನಕ್ಕೆ ತರಬೇಕೆಂದೂ ಹೋರಾಡುತ್ತಿರುವರು. ಆದರೆ ಈ ಉಭಯಪಕ್ಷದವರೂ ಇಷ್ಟರಲ್ಲೇ ಒಂದಾಗಿ ಪ್ರಜಾಪ್ರಭುತ್ವಪಕ್ಷದವರನ್ನು ಪ್ರತಿಭಟಿಸತಕ್ಕವರಾಗಿರುವರು. ತಾ|| ೨೦ ಮ್ಯಾನ್ಯುಯಲ್ ದೊರೆಯನ್ನು ಪದಚ್ಯುತನನ್ನಾಗಿ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಹಾಯಕರಾಗಿದ್ದವರು ಕಾರ್ಬೊನೇರಿಯಾ ಎಂಬ ಪ್ರಬಲವಾದ ಸಂಘಕ್ಕೆ ಸೇರಿದವರು. ಇವರಿಗೂ, ಪ್ರಜಾಪ್ರಭುತ್ವಪಕ್ಷದವರಿಗೂ ಈಗ ಮನಸ್ತಾಪ ಹುಟ್ಟಿರುವುದು. ಇದಲ್ಲದೆ ಕಳೆದ ವರ್ಷದಿಂದಲೂ ಕೆಲಸಗಾರರ ಉಪದ್ರವಗಳು ಆಗಾಗ್ಗೆ ಆಗುತ್ತಲೇ ಇದ್ದು ಈಗ ವಿಪರೀತವಾಗಿ ಪರಿಣಮಿಸಿವೆ. ಕಳೆದ ಜನವರಿ ತಾ|| ೨೯ರಲ್ಲಿ ಪೋರ್ಚುಗಲ್ಲಿಗೆ ಸೇರಿದ ಇವಾರಾ ಡಿಸ್ಟ್ರಿಕ್ಟಿನಲ್ಲಿ ಬೇಸಾಯದ ಕೆಲಸಗಾರರೆಲ್ಲರೂ ಮೊದಲು ದಂಗೆಯೆದ್ದರು. ಅನಂತರ ಈ ದಂಗೆಯು ರಾಜಧಾನಿಯಾದ ಲಿಸ್ಬನ್ ಮೊದಲಾದ ಕಡೆಗಳಲ್ಲಿ ಹರಡಿಕೊಂಡಿತು. ಟ್ರಾಂಬಂಡಿಗಳ ಓಡಾಟವು ನಿಂತಿತು ಮತ್ತು ಅಂಗಡಿಗಳು ಮುಚ್ಚಲ್ಪಟ್ಟವು. ಅನಾಯಕರಾಜ್ಯಾಭಿಲಾಷಿಗಳೂ, ಪ್ರಭುಪಕ್ಷದವರೂ ಜನರನ್ನು ಸುಳಿಗಮಾಡಿ ಕೊಂಡುಹಾಕುವಂತೆ ದಂಗೆಕೋರರನ್ನು ಪ್ರೇರೇಪಿಸಿ ಹತ್ತಿದರು. ಅದರ ಮೇಲೆ ಅಧಿಕಾರಿಗಳು ತುಂಬರನ್ನು ಹಿಡಿದು ಗದ್ದಲವನ್ನು ನಿಲ್ಲಿಸುವಂತೆ ಸೇನೆಗೆ ಅಪ್ಪಣೆಯನ್ನು ಮಾಡಿದುದರ ಮೇಲೆ ಸೇನೆಯವರು ತಂಡತಂಡವಾಗಿ ಬಂದು ಬೀದಿಗಳಲ್ಲಿ ಕಾವಲಿದ್ದು ದಂಗೆಗಾರರು ಗುಂಪುಕೂಡದಂತೆ ಚದರಿಸುತ್ತಿದ್ದರು. ರೈಲ್ವೆಗೆ ಅಭಾವವು ಬರದಂತೆ ಅಧಿಕಾರಿಗಳು ತಕ್ಕ ಏರ್ಪಾಡನ್ನಿಟ್ಟಿದ್ದರು. ಲಿಸ್ಬನ್ನಿನಲ್ಲಿ ಸರ್ಕಾರಿಯು ಪಕ್ಷದ ಸೇನೆಗೆ ಒಂದು ಸಿಡಿಮದ್ದು ಹಾಕಲ್ಪಟ್ಟದರ ಮೇಲೆ ವಿಚಾರಣೆ ಮಾಡದೆ ತುಂಬರನ್ನು ಹಿಡಿದು ಶಿಕ್ಷಿಸುವುದೆಂದು ಸರ್ಕಾರದವರು ಮಾಡಿದ ಅಪ್ಪಣೆಯನ್ನನುಸರಿಸಿ ಸೈನಿಕರು ೧೦೦೦ ಜನರನ್ನು ಹಿಡಿದು ೧೦೦ ಯುದ್ಧನಾವೆಗೆ ಕಳುಹಿಸಿದರು. ಮಾಸ್ಕ್ವಿಟ ಮತ್ತು ಪೋರ್ಟೋಸ್ ಸಿಕ್ಕುವುದು ದಂಗೆಗಾರರು ಕೆಲವರನ್ನು ತುಂಡು ತುಂಡಾಗಿ ಕತ್ತರಿಸಿ ಹಾಕಿದರು. ರೈಲ್ವೆ ಕೆಲಸಗಾರರು ದಂಗೆ ಏಳಲು ಸಿದ್ಧರಿರುವುದರಿಂದ, ದಂಗೆಯ ಬಲವು ಹೆಚ್ಚಾಗಬಹುದೆಂದು ಯುದ್ಧ ನೌಕೆಯ ನಾಯಕರು ಸೈನ್ಯಗಳ ಸಹಾಯದಿಂದ ದಂಗೆಯು ಮೂಲಕ ತೀರಿಸಿದ್ದಾರೆ. ರಾಜಧಾನಿಯಲ್ಲಿ ಸೈನಿಕರು ಬಲವಾಗಿ ಕಾವಲಿದ್ದು ಸೂರೆಮಾಡುವ ದಂಗೆಗಾರರನ್ನು ಹಿಡಿದು ಯುದ್ಧನಾವೆಗಳಿಗೆ ಕಳುಹಿಸುತ್ತಿದ್ದಾರೆ. ಪರದೇಶಗಳ ಸಂಬಂಧವಾದ ಮಂತ್ರಿಯಾಗಿದ್ದು ನಿವೃತ್ತನಾಗಿರುವ ಸಿನ್ಯೊರ್ ಕ್ಯಾಸ್ಟಲೀಯ್ ಬ್ರಾಂಕೋ ಎಂಬುವನು ಪ್ರಜಾಪ್ರಭುತ್ವವನ್ನು ನಾಶಪಡಿಸಲುದ್ಯುಕ್ತನಾಗಿದ್ದನೆಂಬದರ ಮೇಲೆ ಸೆರೆಹಿಡಿಯಲ್ಪಟ್ಟು ಶಿಕ್ಷೆಗೆ ಗುರಿಯಾಗಿಲ್ಪಟ್ಟಿರುವನಲ್ಲದೆ, ಲಿಸ್ಬನ್‌ನ ೧೫೦ ಜನ ಹಿಡಿಯಲ್ಪಟ್ಟಿರುವರು. ಮತ್ತು ರಾಜಧಾನಿಯು ಶಾಂತಸ್ಥಿತಿಗೆ ಬಂದು ವೃತ್ತಪತ್ರಿಕೆಗಳು ಯಥಾಪ್ರಕಾರವಾಗಿ ಹೊರಡಲಾರಂಭವಾಗಿರುವವು. ಇದರಂತೆಯೇ ಇವಾರಾದಲ್ಲೂ ಶಾಂತವಾಗಿರುತ್ತದೆ. ಆದರೆ ಕೊಯಂಬ್ರಾದಲ್ಲಿ ಮಾತ್ರ ದಂಗೆಯೆದ್ದಿದ್ದು ಪೋಲೀಸರಿಂದ ಅಡಗಿಸಲ್ಪಟ್ಟಿತು. ವ್ಯಾಪಾರಸಂಘದವರು ಅನಾಯಕರಾಜ್ಯಾಭಿಲಾಷಿಗಳ ಹಿಡಿಯುವುದಕ್ಕೆಯೂ, ಪ್ರಭುಪಕ್ಷದವರ ಏಜೆಂಟರ ಸಹಾಯದಿಂದಲೂ ದಂಗೆಯು ಪ್ರಾರಂಭಕ್ಕೆ ಕಾರಣಭೂತರಾಗಿದ್ದರೆಂದು ಸೂಚಿಸುವ ಪತ್ರಿಕೆಗಳನ್ನು ಸರ್ಕಾರದವರು ಪೋಲೀಸರು ಮುದ್ರೆಗಳ ದ್ವಾರಾ ರಾಜ್ಯದ ಎಲ್ಲಾ ಸ್ಥಳಗಳಲ್ಲೂ ಹಂಚಿಸಿದರು. ಸೈನಿಕರೇನೋ ದಂಗೆಯ ಕಳಕಳಗಳನ್ನು ಅಡಗಿಸಿ ಹಿಡಿದರೇ ಇನ್ನು ಪಕ್ಷ ವಿಕಲದಿಂದ ಪ್ರಜಾಪಕ್ಷ ಜನರನ್ನು ನಡೆಸಿದರು.

ಪೋರ್ಚುಗಲ್ಲಿನ ಪ್ರಸ್ತುತಸ್ಥಿತಿಯು ಹೀಗಿರುತ್ತದೆ. ದು ಕಡೆ ಪ್ರಭುಪಕ್ಷದವರು, ಮತ್ತೊಂದು ಕಡೆ ಕಾರ್ಬನೇರಿಯಾ ಎಂಬ ಬಲವಾದ ಸಂಘದವರು ಪ್ರಜಾಪ್ರಭುತ್ವವನ್ನು ವಿರೋಧಿಸುತ್ತಿರುವುದರಿಂದಲೂ, ಕೆಲಸಗಾರರ ತೊಂದರೆಯು ಅಧಿಕವಾಗುತ್ತಿರುವುದರಿಂದಲೂ, ಸರ್ಕಾರಾಧಿಕಾರಿಗಳಲ್ಲಿ ಬಂಡೆ ಮತ್ತು ಸಂಚುಗಳು ನಡೆಯುತ್ತಿರುವುದರಿಂದಲೂ ಪ್ರಸಕ್ತ ರಾಜ್ಯಾಡಳಿತವು ಅಂತ್ಯಾವಸ್ಥೆಗೆ ಬಂದಿರುತ್ತದೆ. ಇದರಿಂದ ಪ್ರಜಾಪ್ರಭುತ್ವವು ಪುನಃ ರಚಿಸಲ್ಪಡುವುದೋ ಅಥವಾ ರಾಜಸತ್ತಾತ್ಮಕವು ಪುನರುಜ್ಜೀವಿಸಲ್ಪಡುವುದೋ ಮುಂದಲ್ಲಿ ಹೇಳಬೇಕಷ್ಟೆ.

ಖಚಿತದೇಶದ ವೃತ್ತಾಂತಗಳು.

ಮಿ|| ಸ್ಪಾರ್ಕ್ಸ್‌ರವರ ದೇಹಸ್ಥಿತಿಯು ನಿತ್ಯವಲ್ಲೂ ಅನುಕೂಲವಾಗುತ್ತಿದೆ.

ಮೈಸೂರಿನ ನಿಯಮನಿರ್ಮಾಣಸಭೆಯ ಸಭೆಯು ಈ ತಾ|| ೧೦ ರಲ್ಲಿ ಬೆಂಗಳೂರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸಭೆಗೂಡುವದು.

ಮೈಸೂರಿನ ಡಿ|| ಕಮೀಷನರರು ಮಿ|| ಎಂ. ಶಾಂತರಾಜ ಅರಸಿನವರು ೫ ದಿನಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಳ್ಳುತ್ತಾರೆಂದು ಕೇಳುತ್ತೇವೆ.

ಈಗ ರಜದ ಮೇಲಿರುವ ಪೋಲೀಸು ಇನ್ಸ್ಪೆಕ್ಟರ್ ಜನರಲ್‌ರವರು ಕಳೆದ ತಾ|| ೨ ರ ದಿನ ರಾಜಧಾನಿಗೆ ದಯಮಾಡಿಸಿದರು. ಇವರ ರಜಾ ನಾಳೆಯ ದಿನವೇ ಮುಗಿಯುತ್ತಾದುದರಿಂದ ಕೆಲಸದಮೇಲೆ ದಯಮಾಡಿ ಕುಳಿತಿರುವರೋ ಅಥವಾ ಪುನಃ ರಜವನ್ನು ಹೆಚ್ಚಿಸಿಕೊಳ್ಳುವರೋ ಇನ್ನೂ ಗೊತ್ತಾಗಲಿಲ್ಲವು.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ತಾ|| ೨ ರಲ್ಲಿ ರಾಜಧಾನಿಗೆ ದಯಮಾಡಿಸಿ ಶ್ರೀಮನ್ ಮಹಾರಾಜರವರ ದರ್ಶನವನ್ನು ತೆಗೆದುಕೊಂಡರು. ಮತ್ತು ತಾ|| ೩ ರಲ್ಲಿ ಇಲ್ಲಿಯ ನಾರ್ಮಲ್ ಸ್ಕೂಲಿಗೆ ದಯಮಾಡಿಸಿದ್ದು ಅಲ್ಲಿಯ ಶಾಲೆ ... ಬಂದು ನಿನ್ನೆಯ ದಿನ ಬೆಂಗಳೂರಿಗೆ ಹಿಂತಿರುಗಿ ದಯಮಾಡಿರುವವರಾಗಿದ್ದರು.

ಶ್ರೀಮನ್ ಮಹಾರಾಜರವರು ತಮ್ಮ ಸೆಕ್ರೆಟರಿಗಳೊಡನೆ ನಿನ್ನೆಯ ಮಧ್ಯಾಹ್ನ ೩|| ಗಂಟೆಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ನಮ್ಮ ಸಾರ್ವಭೌಮರು ಬೆಂಗಳೂರಲ್ಲಿ ಕೆಲವಾರಗಳವರೆಗಿದ್ದು ಮಧ್ಯದಲ್ಲಿ ಗೋಂಬಾಯಿಗೆ ದಯಮಾಡಿಸಿ ತಮ್ಮ ಕನಿಷ್ಠಸಹೋದರರಾದ ಶ್ರೀಮಂತ ಸೇಟರ ಮನೆಯ ವಿವಾಹವನ್ನು ತೀರಿಸಿಕೊಂಡು ಬೆಂಗಳೂರಿಗೆ ದಯಮಾಡಿಸುವುದಾಗಿ ಕೇಳುತ್ತೇವೆ.

ಮೈಸೂರು ಡಿ|| ಪೋಲೀಸು ಸೂಪರಿಂಟೆಂಡೆಂಟ್ ಮಿ|| ರಾಮಕೋವಿಂದರಾಯರು ಈಗ್ಗೆ ೨— ೦ ತಿಂಗಳ ಕೆಳಗೆ ಸಾಯಿಂದ ಕಷಿಯುಸ್ಪಟ್ಟಿದ್ದು, ಆ ರೋಗದ ಬಾಧೆಯಿಂದ ಗುಣಹೊಂದಲು ೧ ತಿಂಗಳ ರಜವನ್ನು ಪಡೆದು ಕೂನೂರಿಗೆ ಹೋಗುತ್ತಾರೆಂದೂ, ಅವರು ಬರುವವರೆಗೆ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ಮಿ|| ಕಲ್ಯಾಣಸುಂದರಂ ಪಿಳ್ಳೆಯವರು ಬದಲಿ ನೋಡುತ್ತಾರೆಂದೂ ಕೇಳುತ್ತೇವೆ.

ಕಳೆದ ತಾ|| ೩ ರಲ್ಲಿ ಬನ್ನಿಮಂಟಪದ ಪಂಜಿನ ಕವಾಯಿತನ್ನು ನೋಡುವುದಕ್ಕೆ ಬಂದಿದ್ದ ವ್ಯಾಪಾರಸ್ಥರಾಗಿ ಹೋಗಿರುವಾಗ ದಾವಣಗೆರೆಯ ಮತ್ತು ಎಲೆಬಣಜಿಗರ ಕೆಲ ಹುಡುಗರಿಗೆ ಕಲಹವಾಗಿದ್ದು ರಾತ್ರಿ ಮಹದೇಶ್ವರನ ದೇವಸ್ಥಾನದ ಬಳಿ ಹಾಕಿಕೊಂಡಿರುವ ಗುಡಿಸಲುಗಳಿಗೆ ಬಂದಮೇಲೆ ಅದೇ ವಿಷಯವಾಗಿ ದೊಡ್ಡವರುಗಳಲ್ಲಿ ಕಲಹವು ನಡೆದು ಕೆಲವರಿಗೆ ಅಪಾಯಕರವಾದ ಪೆಟ್ಟುಗಳು ಬಿದ್ದಿರುವುದಾಗಿಯೂ, ಇವರಲ್ಲೊಂದು ಪಕ್ಷದವರು ಆ ಕೂಡಲೆ ಊರಿಗೆ ಹೋಗಿ ಪೋಲೀಸರಿಗೆ ತಿಳಿಸಿದ್ದರೂ ಅವರು ಗಮನಕ್ಕೆ ತರಲಿಲ್ಲವೆಂದೂ ಕೇಳುತ್ತೇವೆ. ಪೋಲೀಸಿನವರು ಹೀಗೆ ಉದಾಸೀನರಾಗಿದ್ದುದು ನಿಜವಾಗಿದ್ದ ಪಕ್ಷದಲ್ಲಿ ಅದನ್ನು ಮೇಲಿನ ಅಧಿಕಾರಿಗಳು ವಿಚಾರಿಸತಕ್ಕದ್ದಾಗಿದೆ.

ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿ ಕೆ. ಸಿ. ಐ. ಇ. ಯವರ ತಮ್ಮಂದಿರ ಮಕ್ಕಳಾದ ಮಿ|| ಕಮಿಷನರರು ಮಿ|| ನರಸಿಂಗರಾವ್ ಪೂರ್ಣಯ್ಯನವರು ತಮ್ಮ ದೊಡ್ಡಪ್ಪನವರ ಸ್ಥಾನದಲ್ಲಿ ತಮ್ಮನ್ನು ಯಳಂದೂರ ಜಹಗೀರದಾರರನ್ನಾಗಿ ಪರಿಗಣಿಸಬೇಕೆಂದು ಮೈಸೂರ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದುದರಿಂದ, ಸರ್ಕಾರದವರು ಅವರ ಪ್ರಾರ್ಥನೆಯನ್ನು ಈ ತಾ|| ೩ ರಲ್ಲಿ ಪರಿಷ್ಕಾರಿಸಿದ್ದು ಇಷ್ಟು ಕೊಂಡು ಯಳಂದೂರು ಜಹಗೀರಿಯ ಉತ್ತರಾಧಿಕಾರದ ವಿಚಾರದಲ್ಲಿ ಪತಿವಾಚಕರ ತೀರ್ಮಾನವಾಗಲೆಂದಿದೆ ಸೂಚನೆಯು ಪಡೆದುಕೊಂಡ ಪಾಲುದಾರರೊಳಗೆ ಇ ಖಟ್ಲೆಗಳ ಸೆಕ್ರೆಟರಿಯವರಲ್ಲಿಗೆ

ಬೆಂಗಳೂರಿನ ನಿವಾಸಿಗಳು ೯ ನೇಯ ಕೌನ್ಸಿಲರ್ ಮಿ॥ ೧. ಪುಟ್ಟಣ್ಣಸೆಟ್ಟರಿಗೆ ಶ್ರೀಮನ್ಮಹಾರಾಜರವರಿಂದ ರಾಜಸಭಾಭೂಷಣ ಪ್ರಶಸ್ತಿಯೂ, ಸಾರ್ವಭೌಮರಿಂದ ಬಹದ್ದೂರ್ ಪ್ರಶಸ್ತಿಯೂ ಲಭ್ಯವಾಗಿರುವುದಕ್ಕಾಗಿ ಸಜ್ಜನರನ್ನು ವಿನೋದೋತ್ಸವದಿಂದ ತೃಪ್ತಿಗೊಳಿಸಿ ಅಭಿನಂದಿಸಲು ತಕ್ಕ ಏರ್ಪಾಟುಗಳನ್ನು ಮಾಡಿಕೊಂಡು, ಸಮಾರಂಭ ಕಾರ್ಯಕರ್ತೃಗಳಾದ ಅಡ್ವೊಕೇಟ್ ಮಿ॥ ಬಿ. ವೆಂಕಟರಮಣಯ್ಯನವರು, ಅಡ್ವೊಕೇಟ್ ಮಿ॥ ಎಚ್. ಕೆ. ವೀರಬಸವಯ್ಯನವರು, ಮಿ॥ ರಾಜಸರ್ಕಾರ್ ಬಸಪ್ಪನವರು, ಮಿ॥ ವೀರಭದ್ರಸೆಟ್ಟರು, ಮಿ॥ ಮಂಡಿ ಮರಿಯಣ್ಣನವರು, ಮಿ॥ ಬಿ. ಕೆ. ಮಾರಪ್ಪನವರು, ಮಿ॥ ಕೆ. ಎಚ್. ರಾಮಯ್ಯನವರು, ಮಹಮ್ಮದ್ ರಜಾಮಿಯಾವರು, ಮಿ॥ ಸಿ ವೆಂಕಟಮುನಿಸ್ವಾಮಿಸೆಟ್ಟರು ಮತ್ತು ಮಿ॥ ಬಿ. ಆದಪ್ಪನವರು ಇವರುಗಳು ಮೂಲಕ ಸೆಟ್ಟರ ಅನುಮತಿಯನ್ನು ಕೇಳಿರುವಲ್ಲಿ, ಅವರು "ಶ್ರೀಮನ್ಮಹಾರಾಜರವರೂ, ಚಕ್ರವರ್ತಿ ಸಾರ್ವಭೌಮರವರೂ ಕೃಪೆಯಿಂದ ದಯಪಾಲಿಸಿರುವ ಪ್ರಶಸ್ತಿಗಳಿಗಾಗಿ ನನ್ನ ಮಿತ್ರರೂ, ಸ್ವದೇಶಿಯರೂ ನನ್ನ ಕೂಡ ಸಂತೋಷಭಾಗಿಗಳಾಗಿರುವುದರಿಂದ, ನನ್ನ ಸಂತೋಷವು ಇನ್ನೂ ಅಧಿಕವಾಗಿರುತ್ತದೆ. ವಿನೋದೋತ್ಸವದಿಂದ ನನ್ನನ್ನು ಸಂತೋಷಗೊಳಿಸಬೇಕೆಂದು ನೀವು ಮಾಡಿಕೊಂಡಿರುವ ಪ್ರಯತ್ನದಿಂದ ನನಗೆ ವಿಶೇಷ ಮರ್ಯಾದೆಯುಂಟಾಗಿರುವುದಕ್ಕಾಗಿ ಅದಕ್ಕಾಗಿ ನಾನು ವಂದಿಸುತ್ತೇನೆ. ಆದರೆ ನಿವ್ಮಗಳ ಆ ಉತ್ಸಾಹವನ್ನು ಅಂಗೀಕರಿಸಲಾಗುವುದಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ." ಎಂದುತ್ತರವನ್ನು ಕೊಟ್ಟಿರುವರು. ಇದರಿಂದ ಮಿ॥ ಸೆಟ್ಟರು ಬಾಹ್ಯಾಡಂಬರಗಳಿಗೆ ಅವಕಾಶವ ಕೊಡತಕ್ಕವರಲ್ಲವೆಂಬುದು ವ್ಯಕ್ತವಾಗುತ್ತದೆ.

ವರ್ತಮಾನ ಸಂಗ್ರಹವು.

ಬರ್ಮಾದಲ್ಲಿ ಒಬ್ಬ ವಿರೋಧಿಗಳು ರೈಲು ಬಂಡಿಯು ಹೋಗುವಾಗ್ಗೆ ಹತ್ತಲು ಪ್ರಯತ್ನಪಟ್ಟು ಕೆಳಗೆ ಬಿದ್ದು ಸತ್ತುಹೋದನು.

ಹಿಂದೂ ಸರ್ವವಿದ್ಯಾಶಾಲೆಯ ಸ್ಥಾಪನೆಗಾಗಿ ಏರ್ಪಟ್ಟ ನಿವ ಫಂಡಿಗೆ ೫೦ ಲಕ್ಷ ರೂ. ಗಳಿಗಿಂತ ಹೆಚ್ಚಾಗಿ ಚಂದಾ ಸಂಗ್ರಹವಾದಿರುವುದಾಗಿ ತಿಳಿಸಿರುತ್ತದೆ.

ರಷ್ಯಾ ಚಕ್ರವರ್ತಿಯು ಗತಿಸಿದ ಕೌಂಟ್ ಟಾಲ್‌ಸ್ಟಾಯ್ ಯವರ ಹೆಂಡತಿಗೆ ೧೫೦೦ ರೂ. ಗಳ ವರ್ಷಾಶನವನ್ನು ಏರ್ಪಡಿಸಿ ಸಲ್ಲಿಸುವುದಾಗಿ ಹೇಳಿರುತ್ತಾನೆ.

ವಿಯನ್ನಾದಲ್ಲಿ ಕೆಲ ಬಲ್ಗೇರಿಯಾ ದೇಶಸ್ಥರು ತುರ್ಕಿಯವರ ಸೇನಾಧಿಪತಿಯ ಮಗನ ೩ ಸಿಡಿಮದ್ದುಗಳನ್ನು ಹಾರಿಸಿದುದರಲ್ಲಿ ೩ ಜನರು ಸತ್ತರು, ಮತ್ತು ೨ ಜನರು ಗಾಯವಾಗಿದ್ದರು.

ಸಿಲೋನಿನಲ್ಲಿ ಪ್ರಯಾಣಿಕರ ಒಂದು ರೈಲುಬಂಡಿಯು ಸಾಮಾನಿನ ಬಂಡಿಗೆ ತಾಕಲಾಗಿ ಬೆಂಕಿ ಹತ್ತಿ ಉರಿದು ಹೋಗಿರುವಲ್ಲದೆ ೨೦ ಜನ ಪ್ರಯಾಣಿಕರಿಗೆ ತುಂಬಾ ಅಪಾಯವಾಗಿರುತ್ತದೆ.

ಅಲಹಾಬಾದಿನಲ್ಲಿ ಪ್ರಕಟಿತವಾಗುವ ಎಡ್ವರ್ಟೈಸರ್ ಎಂಬ ದೇಶಭಾಷಾ ಪತ್ರಿಕೆಯ ಪ್ರಕಾಶಕರು ೩೦೦೦ ರೂ. ಗಳ ಹೊಣೆಯನ್ನು ಕೊಡಬೇಕೆಂದು ಚೀಫ್ ಕಮಿಷನರು ಅಪ್ಪಣೆ ಮಾಡಿರುತ್ತಾರೆ.

ಸಿಲಾನ ರೆಕಾರ್ಡಾದವರು ಆಕಾಶ ವಿಮಾನ ಯಾನವನ್ನು ಕಲಿತುಕೊಂಡು ತಮ್ಮ ಕೂಡ ೨ ವಿಮಾನಗಳನ್ನು ತೆಗೆದುಕೊಂಡು ಬರಲು ೨ ಜನ ಅಧಿಕಾರಿಗಳನ್ನು ಫ್ರಾನ್ಸಿಗೆ ಕಳುಹತಕ್ಕವರಾಗಿರುವರು.

ಸ್ಟಾರ್ಮೆಂಟ್ನಲ್ಲಿ ೫೦ ವರ್ಷ ವಯಸ್ಸಿನ ಒಬ್ಬ ವೃದ್ಧನಾದ ಕ್ರಿಶ್ಚಿಯನ್ನರು ತನ್ನ ಮಗನನ್ನು ಪೋಷಿಸದುದಕ್ಕಾಗಿ, ಮಗನು ಬರುವಾಗ ವಿವಾದವನ್ನು ಹೂಡಲು ತಂದೆಯಾದ ಕ್ರಿಶ್ಚಿಯನ್ನರು ಆತ್ಮಹತ್ಯೆಯನ್ನು ಮಾಡಿಕೊಂಡು ಸತ್ತನು.

ಬೊಂಬಾಯಿಯಿಂದ ೯ ಮೈಲಿ ದೂರದಲ್ಲಿರುವ ಬೋರಿಬಾಗ್ ಎಂಬ ಸ್ಟೇಷನಿನಲ್ಲಿ ಕಳೆದ ತಾ॥ ೨೯ ರಲ್ಲಿ ೧೯ ಜನ ಮುಸ್ಲಿಂ ಜನ ಪ್ರಯಾಣಿಕರ ಮೇಲೆಬಿದ್ದು ಒಬ್ಬ ಮನುಷ್ಯನಿಂದ ಯಾವ ದಾರಿಯೂ ಕೊಡದೆ ಬೇರೆ ಒಬ್ಬ ಮನುಷ್ಯನಿಂದ ಯಾರಿಗೂ ಇಬ್ಬರು ಯೋಧರುಗಳನ್ನೂ ಬೆನ್ನಟ್ಟಿ ಪ್ರಾಣರಿಸಿದರು.

ಬೆಜವಾಡ ಸಂಸ್ಥಾನದ ಮಹಾರಾಣಿಯವರು ಹಿಂದೂ ವಿಶ್ವವಿದ್ಯಾಲಯದ ಫಂಡಿಗೆ ೧ ಲಕ್ಷ ರೂ. ಗಳನ್ನು ಕೊಟ್ಟದಲ್ಲದೆ ಮಹಾರಾಜರವರು ಮಾಡಿರುವ ಪ್ರತಿಜ್ಞೆಯ ಪ್ರಕಾರ ಮೇಲೆ ಇನ್ನೂ ೨ ಲಕ್ಷ ರೂ. ಗಳನ್ನು ಕೊಡುವರೆಂದು ಹೇಳಿದರು. ಈ ಕಮಿಟಿಗೆ ದುಮ್ರಾವಿನ ಬಾಬು ಹರಿಹರ ಪ್ರಸಾದಸಿಂಗ್ ರವರು ೧೦೦೦೦ರೂ. ಬೆಲೆ ಬಾಳುವ ಆಸ್ತಿಯನ್ನು ಕೊಟ್ಟಿರುವರು.

ರಿವ ವೇಳೆ ಉರುಳಿಸಲು ಅಲ್ಲಿದ್ದವರೆಂದಲಿ ಸೃಷ್ಟಿಯಲ್ಲಿ ಚಿಕಿತ್ಸೆಯನ್ನು ಹೊಂದುತ್ತ ಬಹು ಅಪಾಯ ಸ್ಥಿತಿಯಲ್ಲಿರುವನು.

ಕಳೆದ ಕ್ರಿಸ್ಮಸ್ ಕಾಲದಲ್ಲಿ ಬ್ರಿಟಿಷ್ ಜನರಲ್ ಪೋಸ್ಟಾಫೀಸಿನಿಂದ ಪ್ರಪಂಚದ ಎಲ್ಲಾ ಭಾಗಕ್ಕೂ ಕಳುಹಲ್ಪಟ್ಟ ಪುಸ್ತಕ ಕಾಗದಗಳೂ, ಬಂಗಿಗಳೂ ಹಿಂದೆ ಯಾವ ಕಾಲದಲ್ಲೂ ಕಳುಹಲ್ಪಟ್ಟಿರಲಿಲ್ಲವು. ಹೇಗೆಂದರೆ — ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡಿಗೆ ೧೫೩,೦೦೦; ಭರತಖಂಡ, ಬ್ರೆಜಿಲ್ ಮತ್ತು ಸಿಲೋನುಗಳಿಗೆ ೧೯೭,೦,೦೦೦; ದಕ್ಷಿಣ ಆಫ್ರಿಕಾಕ್ಕೆ ೯೬೫೫೦೦; ಕಾನಡಾಕ್ಕೆ ೧೩೬೯೦೦ ಯುನೈಟೆಡ್ ಸ್ಟೇಟ್ಸಿಗೆ ೧೩೩೯೬೦೦೦.

ಕಳೆದ ತಾ॥ ೨೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೯೩೫೮ ಜನರಿಗೆ ಪ್ಲೇಗುರೋಗವು ತಗಲಿ ೧೯೦೫೨ ಜನರು ಸತ್ತರು. ಇವರಲ್ಲಿ ಬೊಂಬಾಯಿ ಸಂಸ್ಥಾನದಲ್ಲಿ ೧೯೩೫೪; ಮದ್ರಾಸಿನಲ್ಲಿ ೮೩೮, ಬಂಗಾಳದಲ್ಲಿ ೧೩೭೨೮; ಸಂಯುಕ್ತ ಪ್ರಾಂತಗಳಲ್ಲಿ ೪೦೩೩, ಪಂಜಾಬಿನಲ್ಲಿ ೨೦೦; ಬರ್ಮಾದಲ್ಲಿ ೯೧; ಮಧ್ಯಪ್ರಾಂತಗಳಲ್ಲಿ ೧೩೬೧, ಹೈದರಾಬಾದು ಸಂಸ್ಥಾನದಲ್ಲಿ ೫೪೭; ಮೈಸೂರಿನ ಸೀಮೆಯಲ್ಲಿ ೩೩೧; ಮತ್ತು ಮಧ್ಯಹಿಂದೂಸ್ಥಾನದಲ್ಲಿ ೬೩೦ ಈ ಪ್ರಕಾರ ಸತ್ತಿರುತ್ತಾರೆ.

ಸ್ಥಾಪಿತವಾಗಿರುವ ಕಲ್ಕತ್ತಾ ಮತ್ತು ಗುಜರಾತು ಮಿಲ್ಲುಗಳಿಗೆ ಆಹಾರ ಪದಾರ್ಥಗಳನ್ನೂ, ದನಗಳಿಗೆ ಮೇವನ್ನೂ ಸಾಗಿಸುವಲ್ಲಿ ಬೊಂಬಾಯಿ ಬರೋಡಾ ಮತ್ತು ಸೆಂಟ್ರಲ್ ಇಂಡಿಯಾ ರೈಲ್ವೆಗಳಲ್ಲಿರುವ ಸಾಮಾನಿನ ಬಂಡಿಗಳಲ್ಲವೂ ಉಪಯೋಗಿಸಲ್ಪಡುತ್ತಿರುವುದರಿಂದ ಇತರ ಕಡೆಗೆ ಪದಾರ್ಥಗಳನ್ನು ಸಾಗಿಸಲು ಬಂಡಿಗಳು ದೊರೆಯುವುದಿಲ್ಲವಾದ ಪ್ರಯುಕ್ತ ಅನೇಕವಾದ ತಕರಾರು ಸ್ವರವಾಗಿದೆ ಕ್ಷಾಮದ ದೆಸೆಯಿಂದ ಮೊದಲು ಬೇಕಾಗಿದ್ದ ಬಂಡಿಗಳಿಗಿಂತ ಹತ್ತರಷ್ಟು ಬಂಡಿಗಳು ಒದಗಿಸಲ್ಪಟ್ಟರೂ ಪ್ರಕೃತ ಸ್ಥಿತಿಯಲ್ಲಿ ಸಾಕಾಗುವುದಿಲ್ಲವು.

ಕಳೆದ ತಾ॥ ೨೩ ರಲ್ಲಿ ಕ್ವಿಲಾನಿನ ಪೊಲೀಸುಕಚೇರಿ ಬೀದಿಯಲ್ಲಿ ಒಬ್ಬ ಪೋಲೀಸಿನವನಿಗೂ ಒಬ್ಬ ಮನುಷ್ಯನಿಗೂ ವಾಗ್ವಾದವು ನಡೆದು ಕಡೆಯಲ್ಲಿ ಬಡಿದಾಟವಾಗಲು, ಪೋಲೀಸಿನವನು ಡರ್ಬಿ ಪ್ರೋ ಇನ್ಸ್ಪೆಕ್ಟರಿಗೆ ಸಹಾಯ ಸಂದರ್ಭವನ್ನು ತಿಳಿಸಿದನು. ಪ್ರೋ ಇನ್ಸ್ಪೆಕ್ಟರು ಆ ವರ್ತಕನನ್ನೂ, ಅವನ ಸಹಕಾರಿಗಳನ್ನೂ ಹಿಡಿದು ಸೆರೆಯಲ್ಲಿಡಿಸಿದನು. ಇವರನ್ನು ಪೋಲೀಸರು ಬಂಧಿಸಿದರೆಂಬ ಸುದ್ದಿಯು ಊರಲ್ಲೆಲ್ಲಾ ಹರಡಿಕೊಳ್ಳಲು ಅನೇಕ ಮನುಷ್ಯರುಗಳು ಗುಂಪು ಕೂಡಿಕೊಂಡು ಬಂದು ಠಾಣೆಯ ಸುತ್ತಲೂ ನಿಂತು ಅತ್ಯಾಚಾರವನ್ನು ನಡಿಸಲುದ್ಯುಕ್ತರಾದರು. ಆ ಸ್ಥಳದಲ್ಲಿ ತಾ॥ ಪ್ರೋ ಇನ್ಸ್ಪೆಕ್ಟರು ಮತ್ತು ಆ॥ ಸೂಪರಿಂಟೆಂಡೆಂಟರೂ ಪೋಲೀಸರನ್ನು ಕೂಡಾ ಕರೆದುಕೊಂಡು ಬಂದು ಗುಂಪನ್ನು ಚೆದರಿಸಲು ಪ್ರಯತ್ನಿಸಲ್ಪಟ್ಟರೂ ಸಾಧ್ಯವಾಗಲಿಲ್ಲವು. ಮತ್ತು ದೊಡ್ಡ ಕಲಹವಾಗುತ್ತದೆಂಬ ಶಂಕೆಯೂ ಹುಟ್ಟಿತು. ಇದರವೇಳೆ ಡಿವಿಷನ್ ಮ್ಯಾಜಿಸ್ಟ್ರೇಟರು, ಡಿ॥ ಮ್ಯಾಜಿಸ್ಟ್ರೇಟರು ಬಂದು ಗಲಾಟೆಯಲ್ಲಿ ಮುಂದಾಗಿದ್ದ ಜನರ ಮುಖ್ಯರೊಡನೆ ಮಾತನ್ನು ತೆಗೆದುಕೊಂಡು ಗುಂಪನ್ನು ಚೆದರಿಸಿದರು.

ಬಾಲಮುಕುಂದ ಎಂಬ ಒಬ್ಬ ಬ್ರಾಹ್ಮಣರ ಹುಡುಗನು ತನ್ನ ಹೆಂಡತಿಗೆ ಜಂಡೇಜಾ ಮಣಿಸರ್ದಾರರ ದ್ವಾರಬಂಧ ಮತ್ತು ರೂ. ಗಳನ್ನು ಮನಿಯಾರ್ಡರ್ ದ್ವಾರ ತನ್ನ ಹಸ್ತಾಕ್ಷರವನ್ನು ಬರೆದು ತೆಗೆದುಕೊಂಡಿದ್ದು, ಸ್ಟಾಂಪನ್ನು ಹಚ್ಚಿ ಹಣವನ್ನು ಕಳುಹಿಸುವನ್ನು ಬರೆದುಕೊಡಬೇಕೆಂದು ಹಣವನ್ನು ಕಳುಹುವವನು ಅಪೇಕ್ಷಿಸಲು ಬೇರೆ ಒಂದು ರಶೀತಿಯನ್ನು ಬರೆದುಕೊಡುವುದಿಲ್ಲವೆಂದು ತಿರಸ್ಕರಿಸಿದ್ದನು. ಇದರ ವೇಳೆ ಹಣವನ್ನು ಕಳುಹುವವನು ಪೋಸ್ಟ್ ಆಫೀಸ್ ಆಕ್ಟಿನ ಸೆಕ್ಷನ್ ಪ್ರಕಾರ ಬಾಲಮುಕುಂದನ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನು ಹೂಡಲು ಮ್ಯಾಜಿಸ್ಟ್ರೇಟರು ಬಾಲಮುಕುಂದನಿಗೆ ೪೦ ರೂ. ದಂಡವನ್ನು ವಿಧಿಸಿದರು. ಮತ್ತು ಅಪೀಲಿನಲ್ಲಿ ಸೆಷನ್ಸ್ ಜಡ್ಜರು ಶಿಕ್ಷೆಯನ್ನು ಸ್ಥಿರಗೊಳಿಸಿದರು. ಆದರೆ ಅದರಮೇಲೆ ಹೈಕೋರ್ಟಿನಲ್ಲಿ ಅಪೀಲನ್ನು ಹಾಕಿದುದರಲ್ಲಿ "ಬಾಲಮುಕುಂದನು ಹಣವನ್ನು ತೆಗೆದುಕೊಂಡು ಮನಿಯಾರ್ಡರು ರಶೀತಿಯಲ್ಲಿ ತನ್ನ ಹಸ್ತಾಕ್ಷರ (ರುಜು) ವನ್ನು ಬರೆದು ಅದನ್ನು ಪೋಸ್ಟಾಫೀಸ್ದ್ವಾರ ಹಣವನ್ನು ಕಳುಹಿಸುವವನಿಗೆ ತಲುಪಿಸಿರುವುದೇ ಸಾಕಾಗಿರುವುದರಿಂದ ಅವನು ಬೇರೆಯೊಂದು ರಶೀತಿಯನ್ನು ಕೊಡತಕ್ಕವನಾಗಿ ಆಗತಕ್ಕದ್ದಿಲ್ಲವು, ಮತ್ತು ಅವನು ಎರಡನೆಯ ರಶೀತಿಯನ್ನು ಕೊಡುವುದಿಲ್ಲವೆಂದು ತಿರಸ್ಕರಿಸಿದುದು ಪೋಸ್ಟ್ ಆಫೀಸ್ ಆಕ್ಟ್ ೫೬ ನೇಯ ಸೆಕ್ಷನ್ ಪ್ರಕಾರ ಅಪರಾಧವಾಗುವುದಿಲ್ಲವು" ಎಂದು ಚೀಫ್ ಜಡ್ಜಿ ಮತ್ತು ಇನ್ನೊಬ್ಬ ಜಡ್ಜಿಯೂ ನಿರ್ಧರಿಸಿ ಅರ್ಜಿದಾರನ ಶಿಕ್ಷೆಯನ್ನು ತಗ್ಗಿಸಿಬಿಟ್ಟು ವಿಚಾರಿಸಿದ್ದರು. ದಂಡವಾಗಿ ತೆಗೆದ ಹಣ [illegible] ದವರು ಹಣವನ್ನು ಹಿಂದಕ್ಕೆ ಕೊಡಬೇಕೆಂದು ಆಜ್ಞೆ ಮಾಡಿದರು.

ಸತ್ಯಪ್ರಚಾರ.

ಶ್ರೀ ಶಿವಯೋಗಮಂದಿರದಲ್ಲಿ ನೆರೆಯುವ ಮೂರನೆಯ ಶ್ರೀವೀರಶೈವ ಧರ್ಮೋತ್ತೇಜಕ ಸಭಾ.

ಸಮಸ್ತ ವೀರಶೈವ ಮತಾಭಿಮಾನಿಗಳಿಗೆ,—

ವೇದಾಗಮಾದಿಗಳಲ್ಲಿ ಸ್ತುತ್ಯವೆನಿಸಿದ ವೀರಶೈವ ಮತವು ಕಲಿಪ್ರಾಬಲ್ಯದಿಂದ ಗ್ಲಾನಿಹೊಂದಿ ಹೀನಾವಸ್ಥೆಗೆ ಬಂದುದನ್ನು ಕಂಡು ಸ್ವಧರ್ಮಾಭಿಮಾನಿಗಳು ಧರ್ಮೋತ್ತೇಜಕವೆಂಬ ದೆಸೆಯ ಒಂದು ಸಭೆಯನ್ನು ಸ್ಥಾಪಿಸಿ ತನ್ಮೂಲಕ ಧರ್ಮಗ್ಲಾನಿಯನ್ನು ಹೋಗಲಾಡಿಸಿ ಸ್ವಮತ ತತ್ವಗಳನ್ನು ಪ್ರಕಾಶಗೊಳಿಸಬೇಕೆಂಬ ಸದುದ್ದೇಶದಿಂದ ಮೊದಲನೆಯ ಧರ್ಮೋತ್ತೇಜಕ ಸಭೆಯನ್ನು ಬಾಗಲಕೋಟೆಯ ಮಹನೀಯರ ಸಹಾಯದಿಂದಲೂ ಎರಡನೆಯ ಧರ್ಮೋತ್ತೇಜಕ ಸಭೆಯನ್ನು ಹರ್ಡೇಕರ ಧನಿಕರ ಮತ್ತು ನೆರೆಹೊರೆಯ ಗ್ರಾಮಗಳ ಪ್ರಮುಖರ ಸಹಾಯದಿಂದಲೂ ಅತ್ಯಂತಭಕ್ತಿಯಿಂದ ನೆರವೇರಿಸಿರುವುದು ಸರ್ವಶ್ರುತವಾಗಿರುವುದಷ್ಟೇ. ಮೂರನೆಯ ಸಭೆಯು ಈ ವರುಷ ದುಷ್ಕಾಲವಾದುದರಿಂದ ಎರಡನೆಯ ಕಡೆಗೆ ಎಲ್ಲಿಯೂ ನೆರೆಯಲು ಅವಕಾಶವು ದೊರೆಯದ ಮೂಲಕ ಶಿವರಾತ್ರಿ ಕಾಲದಲ್ಲಿ ಅನೇಕ ಪೀಠಸ್ಥರು ಪರಶಿವ ಪ್ರಕಾರ ಶಿವಯೋಗಮಂದಿರದಲ್ಲಿ ವಿಶೇಷವಾಗುವ ಪ್ರಸಂಗವಿರುವುದರಿಂದ ಇದೇ ಮಾಘ ಕೃಷ್ಣ ಚತುರ್ದಶಿ ಶನಿವಾರ, ಅಮಾವಾಸ್ಯೆ ಆದಿವಾರ, ಫಾಲ್ಗುಣ ಶುದ್ಧ ಪ್ರತಿಪತ್ ಚಂದ್ರವಾರ ಎಂದರೆ (ತಾ॥ ೧೭, ೧೮, ೧೯ ಫೆಬ್ರುವರಿ ಸನ್ ೧೯೧೭) ಈ ಮೂರು ದಿವಸ ಸಭೆಯು ಕೆಲಸವು ನಡೆಯುವುದಾಗಿ ನಿಶ್ಚಯಿಸಲ್ಪಟ್ಟಿರುತ್ತದೆ. ಆದುದರಿಂದ ಸ್ವಮತಾಭಿಮಾನಿಗಳೆಲ್ಲರೂ ತಪ್ಪದೆ ಬಂದು ಈ ಮಹಾಕಾರ್ಯವನ್ನು ಸಾಂಗಗೊಳಿಸಿ, ಪುಣ್ಯಶ್ಲೋಕರನ್ನಾಗಬೇಕೆಂದು ವಿನಯದಿಂದ ಪ್ರಾರ್ಥನೆಯಿದೆ.

ಸಭೆಯಲ್ಲಿ ನಡೆಯುವ ವಿಷಯಗಳು.

(೧) ಮಾಹೇಶ್ವರರ ಸುಧಾರಣೆ ಮತ್ತು ಅವರವರ ಕರ್ತವ್ಯ ಜಾಗರೂಕತೆ. (೨) ವೀರಶೈವಮತ ಸಂಬಂಧವಾದ ಕ್ಷೇತ್ರ, ಜಾತ್ರೆಗಳ ಸುಧಾರಣೆ. (೩) ಸಭೆಯಲ್ಲಿ ಯೋಗ್ಯ ಸೂಚನೆಗಳು ಬಂದಲ್ಲಿ ಅವುಗಳನ್ನು ಚೆನ್ನಾಗಿ ಚರ್ಚಿಸಿ ಸರ್ವಾನುಮತದಿಂದ ನಿರ್ಧರಿಸುವುದು. ಸಂಕ್ಷಿಪ್ತವಾದ ಸೂಚನೆಗಳು ಬಂದಲ್ಲಿ ಮುಂದೆ ಚರ್ಚೆಯಾಗುವುದಕ್ಕಾಗಿ ಇಟ್ಟುಕೊಳ್ಳುವುದು. (೪) ಹಿಂದಿನ ಮಹಾಸಭೆಗಳಲ್ಲಿ ಮತ್ತು ಧರ್ಮೋತ್ತೇಜಕ ಸಭೆಗಳಲ್ಲಿ ಆದ ಧರ್ಮಸಂಬಂಧದ ಸುಲಭ ಸಾಧ್ಯ ಠರಾವು ಪ್ರಚಾರದಲ್ಲಿ ತರುವುದು. (೫) ಶಿವಯೋಗ ಮಂದಿರದ ಆಲೋಚನೆ (೬) ವೀರಶೈವ ಮತಸಂಬಂಧದ ವರ್ತಮಾನ ಪತ್ರಗಳ ಆಲೋಚನೆ. (೭) ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗೆ ದೇಶೆಯಿಂದ ಯೋಗ್ಯ ಉಪಯೋಗವಾಗುವಂತಹ ಶಾಸ್ತ್ರಗಳನ್ನು ತೆಗೆದಾಡಿಸುವ ಉಪಾಯ.

ಪ್ರತಿಯೊಂದು ಗ್ರಾಮದವರು ತಮ್ಮಲ್ಲಿಯ ಪ್ರತಿನಿಧಿಗಳನ್ನು ಆರಿಸಿ ಅವರ ಹೆಸರುಗಳನ್ನು ಮುಂಚಿತವಾಗಿ ಶಿವಯೋಗಮಂದಿರದ ಅಧ್ಯಕ್ಷರಾದ ಬೋಳಬಸವಸ್ವಾಮಿಗಳ ಕಡೆಗೆ ಕಳುಹಿಸಬೇಕು.

ಪೀಠಾಧಿಪತಿಗಳು, ಗುರುಗಳು, ಶಾಸ್ತ್ರಿಗಳು, ಕನ್ನಡ ಶಾಲಾ ಅಧ್ಯಾಪಕರು ಧರ್ಮಸಂಬಂಧವಾದ ಉಪನ್ಯಾಸಗಳನ್ನು ಮಾಡಬೇಕೆಂದು ಅಪೇಕ್ಷಿಸುತ್ತಿದ್ದೇವೆ. ಸಭೆಗೆ ಬರುವ ಧರ್ಮಾಭಿಮಾನಿಗಳನ್ನು ಪ್ರತ್ಯೇಕವಾಗಿ ಕರೆಯುವ ಮುಂದೆ ಚಾಕರಿಯ ಜಂಗಮ ಪ್ರತಿ ಶಿವಗಾಣರೂ, ಗುಂಡುಭಕ್ತರೂ (ಕೆಂಚರು) ಇವರ ಸುಧಾರಣೆ. ಬಗ್ಗೆ ಅನೇಕ ತೆರನಾದ ಸೂಚನೆಗಳು ಬಂದಿರುವವು. ಆದುದರಿಂದ ಈ ಸಂಗತಿಯವರು ಪ್ರತಿಯೊಬ್ಬರು ತಪ್ಪದೆ ಬಂದು ತಮ್ಮ ತಮ್ಮ ಸುಧಾರಣೆಯನ್ನು ಮಾಡಿಕೊಳ್ಳಬೇಕು. ಎಲ್ಲರೂ ಬಂದಿರುವ ಸ್ಥಳಕ್ಕೆ ಹೋಗಬೇಕಾದಲ್ಲಿ ಶಿವಯೋಗಮಂದಿರವು (೯) ಮೈಲು ಆಗುವುದು. ಅಲ್ಲಿ ಬರುವವರಿಗೆ ಮಹಾಕ್ಷೇತ್ರ ಪುಣ್ಯವು ಲಭಿಸುವುದಲ್ಲದೆ ಮಹನೀಯರ ಸಂದರ್ಶನ ಲಾಭವಾದರೂ ಆಗುವುದು. ಆದುದರಿಂದ ಉಳಿದ ಮೊದಲಾದ ಕ್ಷೇತ್ರಗಳಿಗೆ ಸಕಲ ಪಟ್ಟಾಣದಿಂದ ಹೋಗುವಂತೆ ಇಲ್ಲಿಗೆ ಬಂದು ಸ್ವಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂದು ವಿನಯವನ್ನು ಸಮಸ್ತರಿಗೂ ಪ್ರಸಿದ್ಧಪಡಿಸುವರೆಂದು ಸವಿನಯ ಪ್ರಾರ್ಥನೆಯುಂಟು. ಬೇಕಾದವನ್ನು ತೆಗೆದುಕೊಂಡು ಬೋಧಿಪವರು ಸರ್ವತ್ರಿಯುಳ್ಳವರು ಈ ಸಭೆಗೆ ಅವಶ್ಯವಾಗಿ ಬರಬೇಕು; ಬಾರದಿದ್ದರೆ ಬೋಧಕರ ಅವಶ್ಯವಿದೆ. ಅವರು ಆಗತಕ್ಕ ಸಭೆಗೆಯು ಹೇಳಬೇಕು ತಮಗೆ ತಿಳಿದುಕೊಂಡು ಬರುವವರೆ ದಯೆಯಿಂದ ತಿಳಿಸಬೇಕು.

ಶಿವಲಿಂಗಸ್ವಾಮಿ,
ಧರ್ಮೋತ್ತೇಜಕ ಸಭೆಯ ಕಾರ್ಯದರ್ಶಿ,
ಶಿವಯೋಗ ಮಂದಿರ

ಬೊಂಬಾಯಿಯಲ್ಲಿ ೫॥	ವಾ ಬೇಂ	ಕರುಹಿಸಿದವರಿಗೆ ಪ	ಕಾರಾ ರಶೀತಿ	ಆರಂ	ಸ್ಥಿತಿ ನಿಯತ
ಗೆ ಹೋಗಿದ್ದ ಕುದುರೆ	ಮಾ ಬಲ	ಯನ್ನು ಬರಿಕೊಡ	ಕೃತ ವಿನಿಯೋಗ	ಅಂ ಕೂ	ಪತ್ರಿಕೆಗಳಿಗನ್ನು
ಮಹಾರಾಜ ರಿವಿಯ X	ಮೊದಲಲ್ಲಿ				

೧೯೦೭ನೇಯ ವಿರೋಧಿಕೃನ್ನಾಮ ಸಂವತ್ಸರ ಕಾರ್ತೀಕ ಶುದ್ಧ ೧೫ ರಲ್ಲಿ ಧರ್ಮಾರ್ಥವಾಗಿ ಸ್ಥಾಪಿಸಿ ನಡೆಸಿಕೊಂಡು ಬರುತ್ತಿರುವ ಸಂಸ್ಕೃತಪಾಠಶಾಲೆಗೆ ಪ್ರತಿವರ್ಷ ಚಂದಾ ಕೊಡ ಲೊಪ್ಪಿರುವವರ ವಿವರ:—

ಉದುಕೋಟೆ ಗ್ರಾಮದ ಗವಿಮಠದ ಸಂಸ್ಥಾನದ ಶ್ರೀ ಚನ್ನಬಸವ ಸ್ವಾಮಿಗಳು ೧೦೦ ರೂ., ಮತ್ತು ರಾಜ ಗಳವಾದ ಬಳ್ಳಾರಿಯ ಗಡಿಗೆ ಪಾಲಭದ್ರಪ್ಪನವರು ೨೫ ರೂ., ಕೊಂಡ ಕೊಂಡ ಚಂದಪ್ಪನವರು ೨೫ ರೂ., ಮುಂಡರಗಿಯ ಚಿಕ್ಕಳ್ಳಿ ದೊಡ್ಡವೀರಭದ್ರಪ್ಪನವರು ೨೫ ರೂ., ಕೊಟ್ಟೂರಿನ ಗುರು ಶಾಂತಪ್ಪನವರು ೧೦ ರೂ., ಸಿಂದಗಿ ಗವಿಯಪ್ಪನವರು ೧೦ ರೂ., ದಾಂಡೇಲಿ ತಾ॥ ಕಲ್ಲುಹೊಳೆಯವರ ಕಲ್ಲುಹೊಳೆಯಪ್ಪನವರು ೧೦ ರೂ., ಬಳ್ಳಾರಿಯ ಅಲ್ಲಂಭದ್ರಪ್ಪನವರು ೧೦ ರೂ., ಮೋತರಡ್ಡಿ ಚಂಗಳಪ್ಪನವರು ೧೦ ರೂ., ಸಿಂದಗಿ ಮಠಸಿದ್ದಪ್ಪನವರ ಮುಕ್ಕಳಿ ಸಿದ್ದಪ್ಪನವರು ೯ ರೂ., ಉಂತಕಲ್ಲು ಅಪ್ಪಲ ನೀಲಕಂಠಪ್ಪನವರು ೫ ರೂ., ಬಳ್ಳಾರಿಯ ಮತ್ತಿ ವೀರಭದ್ರಪ್ಪನವರು ೫ ರೂ., ಬಳೆ ವೀರಭದ್ರಪ್ಪನವರು ೫ ರೂ., ಆಪ್ಪಲ ಸಾಂಬಪ್ಪನವರು ೫ ರೂ., ಅರಳೆಯ ಬಸಪ್ಪನವರು ೫ ರೂ., ತಗಡಿ ವೀರಸಂಗಪ್ಪನವರು ೫ ರೂ., ಸಿಂದಗಿ ಚೌಧರಣ್ಣನವರ ಸಿದ್ದಗಂಗಪ್ಪನವರು ೫ ರೂ., ಮೋಟಿ ಬಸಪ್ಪ ಕುಪ್ಪಲ್ಲ ಅಯ್ಯಪ್ಪನವರು ೫ ರೂ., ಕೊಟ್ಟೂರ ಮಹಾದೇವಪ್ಪನವರು ೫ ರೂ., ಶಿವಬಸ್ಸಬಸಪ್ಪ ಕಿರಿದಪ್ಪನವರು ೫ ರೂ., ಜಾಡೇಕುಂಟಿ ಶಿವರಾಯಪ್ಪನವರು ೫ ರೂ., ಬಳ್ಳಾರಿ ಜಿಲ್ಲಾ ಮೊಸ್ಸೆಟಿಯ ಶಿವಲಿಂಗಪ್ಪನವರು ೫ ರೂ., ಗುತ್ತಿ ಗಡ್ಡಪ್ಪನವರು ೫ ರೂ., ಬಿಡಚೋಟಿ ತಾ॥ ಚಿತ್ರವಾಡಗಿಯ ಗುಗ್ರಿ ದೊಡ್ಡ ಹುಚ್ಚಪ್ಪನವರು ೫ ರೂ., ಚಿನ್ನಯ್ಯ ಸಂಕರಪ್ಪನವರು ೫ ರೂ., ಮೊಮ್ಮಹಾಳು ಗ್ರಾಮದ ಕಲ್ಲುಹೊಳೆಯವರ ಕೆಂಚಪ್ಪನವರು ೪ ರೂ., ಚಿತ್ರವಾಡಗಿಯ ಪಲ್ಲೆಗಡ್ಡಿ ಕಲ್ಮಠಪ್ಪನವರು ೪ ರೂ., ಬಂಡಿ ಹನುಮಂತಪ್ಪನವರು ೪ ರೂ., ಬಳ್ಳಾರಿಯ ಮೆಸಿಗಿ ಶಾಂತಪ್ಪನವರು ೪ ರೂ., ಹೊಸಪೇಟೆಯ ಪಟ್ಟೂರು ನಾಗಲಿಂಗಪ್ಪ ಮರುಳಪ್ಪನವರು ೩ ರೂ., ಚಿತ್ರವಾಡಗಿ ವಿರಕ್ತಮಠದ ಕೋಟಯ್ಯನವರು ೩ ರೂ.

ಸಹೀ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಗುರುವೀರಭಿಕ್ಷಾವೃತ್ತಿ ರಾಜ ದೇಶಿಕೇಂದ್ರಮಹಾಸ್ವಾಮಿಗಳ ದೇಶಸಂಚಾರ:—

ವಿಜಾಪುರ ಜಿಲ್ಲೆ ಬಾಗೇವಾಡಿ ತಾಲೂಕು ಸಿಂಧನೂರು ತಾ॥ ರಾಗಲಪರವಿ ಗ್ರಾಮದ ಮಾಲಿ ಪಾಟೀಲ ಪಕೀರ ಬಸವಲಿಂಗಗೌಡರ ಪ್ರಾರ್ಥನೆಯಂತೆ ಕಳೆದ ತಿಂಗಳಲ್ಲಿ ಮಹಾಸ್ವಾಮಿಗಳು ಸಕಲ ಪರಿವಾರದೊಡನೆ ಚಿತ್ತೈಸಿ ಬಸವಲಿಂಗಗೌಡರು ಬಹು ಭಕ್ತಿಯಿಂದ ಮಾಡಿದ ಪಾದಪೂಜಾ ಭಿಕ್ಷೆಯನ್ನು ಕೈಕೊಂಡು ಪರಿವಾರವನ್ನೆಲ್ಲಾ ತೃಪ್ತಿಗೊಳಿಸಿ ಅಲ್ಲಿಯ ಭಕ್ತರು ಭಕ್ತಿಯಿಂದ ಮಾಡಿದ ಸೇವೆಯನ್ನು ಸ್ವೀಕರಿಸಿಕೊಂಡು ಪಟ್ಟಣ ತಾ॥ ಸ್ತ್ರೀಯ ಹೊಸೂರು ಗ್ರಾಮಕ್ಕೆ ದಯಮಾಡಿಸಿ ಅಲ್ಲಿ ಅನೇಕ ವೀರಶೈವರು ಮುಂತಾದವರು ಸೇವೆಯನ್ನು ಸ್ವೀಕರಿಸಿದನಂತರ ಅದೇ ಗ್ರಾಮದ ಗುಂಡಾಭಕ್ತರ ಪಟೇಲ ವಿರುಪಣ್ಣನವರು ಪಾದಪೂಜೆಯನ್ನು ಮಾಡಿ ಬೆಟ್ಟದ ದಾಸೋಹಾತ್ರಿಯನ್ನು ಅಂಗೀಕರಿಸಿ ಭೋಜನಾನಂತರ ಒಂದು ಸಭೆಯನ್ನು ಕೂಡಿಸಿ ಪಂಡಿತರುಗಳ ಮೂಲಕ ಧರ್ಮಸಂಬಂಧವಾಗಿ ಉಪನ್ಯಾಸವನ್ನು ಏರ್ಪಡಿಸಿದ ಬಳಿಕ ತಾವೂ ಅಪ್ಪಣೆಯನ್ನು ಕೊಡಿಸಿ ಭಕ್ತರನ್ನು ಧನ್ಯರನ್ನಾಗಿ ಮಾಡಿದರು. ಮತ್ತು ಸಕಲಭಕ್ತರಿಗೂ ಸಕಲೈಶ್ವರ್ಯವನ್ನು ಕೊಟ್ಟು ಏಸುಕಾಲ ರಕ್ಷಿಸಲಿ ಎಂದು ಆಶೀರ್ವದಿಸಿದರು. ಶ್ರೀಗಳವರು ಮಹಿಮೆಯ ದಿನ ಪ್ರಾತಃಕಾಲದ ಶಿವಾರ್ಚನೆಯನ್ನು ಮುಗಿಸಿಕೊಂಡು ಸಿದ್ಧಗೊಳ್ಳುತ್ತಿರಲು ಗ್ರಾಮದ ಭಕ್ತರು ಅಲ್ಲಿಯ ಹಿರಿಯರು ಒಪ್ಪಿಸಿದ ಪಾದರಕ್ಷೆಯನ್ನು ಸ್ವೀಕರಿಸಿ, ಅದೇ ಗ್ರಾಮದ ಗಂಗಾವತಿ ಗುಂಡಪ್ಪ ಗಡುತಲ್ಲ ಏನವರ ಮೊದಲಾದ ಭಕ್ತರು ಉತ್ಸವ ಪ್ರೀತಿಯಿಂದ ಮಹಾಸ್ವಾಮಿಗಳನ್ನು ತಮ್ಮ ಗೃಹಗಳಿಗೆ ಕರೆದು ಕೊಂಡು ಹೋಗಿ ಪಾದಪೂಜೆಯನ್ನು ಮಾಡಿ ಬಿಲ್ಲೆಯ ಕಾಣಿಕೆಗಳ ಕಾಣಿಕೆಯನ್ನು ಸಮರ್ಪಿಸಿದರು. ಮಾರನೆಯ ದಿನ ಮಹಾಸ್ವಾಮಿಗಳವರ ಸ್ವಾರಿಯು ಜಾವಕಲ್ಲು ಮೊಕ್ಕಾಂ ಚಿತ್ತೈಸುತ್ತಲೆ ಅಲ್ಲಿಯ ಗೌಡ ಪಾಟೀಲ ಚನ್ನಬಸಗೌಡರು ಶ್ರೀಗಳ ಸೇವೆಯನ್ನು ತಮ್ಮ ಮನೆಗೆ ದಯಮಾಡಿಸಿಕೊಂಡು ಬಹಳ ಪರಿ ಪರಿಯಾಗಿ ಪ್ರೀತಿಸಿಕೊಂಡು ಪಾದಪೂಜೆಯಿಂದ ತೃಪ್ತಿಪಡಿಸಿ ಭಿಕ್ಷಾ ದಾಸೋಹಾತ್ರಿಯನ್ನು ಕಾಣಿಕೆಯಾಗಿ ಒಪ್ಪಿಸಿದರು. ಶ್ರೀಗಳವರು ಅಲ್ಲಿಯ ಭಕ್ತರೆಲ್ಲರಿಗೂ ಪ್ರಸಾದವನ್ನಿತ್ತು ಉತ್ಸವದೊಡನೆ ಹೊರಟು ಗಾ

ವೈಲಿಯಲ್ಲಿ ... ಮಾಡಿ ಅಲ್ಲಿ ... ಸೇವೆಯನ್ನು ಕೈಕೊಂಡು ಮಾರನೆ ... ಸ್ಸಿ ಕೇರಿಸಿ ... ಗ್ರಾಮ

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಆಮಂತ್ರಣ ಪತ್ರಿಕೆಯು.

ಪ್ರಿಯ ಮಹಾಶಯರೇ,

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ೧೪ ನೇಯ ವಾರ್ಷಿಕೋತ್ಸವವು ಬರುವ ಫಾಲ್ಗುಣ ಮಾಸದಲ್ಲಿ ತಾ॥ ೧ ನೇಯ ಮಾರ್ಚ ಸನ್ ೧೯೧೦ ಇಸ್ವಿ ಶುಕ್ರವಾರದಿಂದ ಬೆಳಗಾವಿಯಲ್ಲಿ ಪ್ರಾರಂಭವಾಗುವುದು. ಈ ಸಮಾರಂಭದ ಮುಖ್ಯ ಅಂಗಗಳು ಯಾವುವೆಂದರೆ:—

(೧) ಜೈನ ಪರಿಷತ್ತು, (೨) ಜೈನಮಹಿಳಾಪರಿಷತ್ತು, (೩) ಶ್ರೀಯುತ ಚೌಗುಲೆ ವಕೀಲ ಇವರ ನೂತನ ಜಿನಮಂದಿರದ ಪ್ರತಿಷ್ಠಾ ಮಹೋತ್ಸವ, (೪) ರಥೋತ್ಸವ ಇವೇ ಮೊದಲಾದ ಉತ್ಸವಗಳಿದ್ದು, ಅದರ ಸಲುವಾಗಿ ಉತ್ತರ ಮತ್ತು ದಕ್ಷಿಣ ಹಿಂದುಸ್ಥಾನಗಳಿಂದ ದೊಡ್ಡ ದೊಡ್ಡ ವಿದ್ವಾಂಸರೂ ಶ್ರೀಮಂತರೂ ಆದ ಜೈನ ಬಂಧುಗಳೂ ಬರತಕ್ಕವರಿರುವರು. ಮತ್ತು ಎಷ್ಟೋ ಜೈನೇತರ ವಿದ್ವಾಂಸರಾದವರೂ ತಮ್ಮ ಆಗಮನದಿಂದ ಸಭೆಯನ್ನು ಜೈನ ಪರಿಷತ್ತನ್ನು ಅಲಂಕರಿಸುವವರಿರುವರು. ಈ ಸಂಗತಿಯನ್ನು ತಮಗೆ ತಿಳಿಸಲಿಕ್ಕೆ ನಮಗೆ ಪರಮಾನಂದವಾಗುತ್ತದೆ.

ಈ ಸಾರಿ ಈ ಸಭೆಯ ಅಧ್ಯಕ್ಷಸ್ಥಾನವನ್ನು ಗ್ವಾಲ್ಹೇರ ಸಂಸ್ಥಾನದೊಳಗಿನ ಸೋನೀನಗರ ಗ್ರಾಮದ ನಿವಾಸಿಗಳಾದ ಜೈನವಿದ್ವದ್ರತ್ನ ಸ್ಯಾದ್ವಾದವಾರಿಧಿ ಪಂಡಿತ ಗೋಪಾಲದಾಸಜಿ ಬರೈಯಾ ಎಂಬವರು ಸ್ವೀಕರಿಸಲಿಕ್ಕೆ ಒಪ್ಪಿಕೊಂಡಿರುವರು. ಈ ವಾರ್ತೆಯನ್ನು ತಮ್ಮೆಲ್ಲರಿಗೆ ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಆದ್ದರಿಂದ ಇದರ ಸಂಬಂಧವಾಗಿ ಪರಿಷತ್ತಿನ ಸ್ವಾಗತ ಕಮಿಟಿಯವರು ತಮ್ಮನ್ನು ಸಂತೋಷ ವಿನಯಪೂರ್ವಕ ಪ್ರಾರ್ಥಿಸುವುದೇನೆಂದರೆ:— ತಾವು ತಮ್ಮ ಆಪ್ತಮಿತ್ರರೆಲ್ಲರನ್ನು ಒಡಗೊಂಡು ಬೆಳಗಾವಿಯಲ್ಲಿ ಆಗುವ ಈ ಉತ್ಸವಕ್ಕೆ ಅಗತ್ಯವಾಗಿ ಬರಬೇಕು. ನಮ್ಮ ಈ ವಿನಂತಿಯನ್ನು ಮಾನ್ಯಮಾಡಿ ಸಭೆಯ ಶೋಭೆ ಉಪಕಾರವಾಡಬೇಕೆಂದು ಆಶಿಸುತ್ತೇವೆ.

ತಾವು ಮುಂಚಿತವಾಗಿ ಎಂದರೆ ತಾರೀಖು ೨೦ ನೇಯ ಫೆಬ್ರುವರಿಯೊಳಗಾಗಿ ನಮಗೆ ತಿಳಿಸಿದಲ್ಲಿ ಸ್ವಾಗತ ಕಮಿಟಿಯವರು ಕೈಲಾದಮಟ್ಟಿಗೆ ತಮ್ಮ ಇಳಕೊಳ್ಳುವ ಮೊದಲಾದ ವ್ಯವಸ್ಥೆಯನ್ನು ಮಾಡುವರು. ಈ ಸಂಬಂಧದ ಎಲ್ಲ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ಬರೆಯಬೇಕು. ತಿಳಿಯುವುದು. ಇಂತಿ ದಿನ್ನಹ:—

ತಮ್ಮ ಕೃಪೆಯನ್ನು ಅಪೇಕ್ಷಿಸುವ,
ಸಾಂತಪ್ಪ ಪವನಪ್ಪಾ ಪತಕ್ರಾಳ,
ಆನರರಿ ಜನರಲ್ ಸೆಕ್ರೆಟರಿ ಸ್ವಾಗತಕಮಿಟಿ,
ಜೈನ ಪರಿಷತ ಬೆಳಗಾವ.

Post Shahapur-Belgaum. S.M.C.

ಸಭೆಯ ಕಾರ್ಯಕ್ರಮವು

(೧) ತಾ॥ ೧ ಮಾರ್ಚ ೧೯೧೦ ಶುಕ್ರವಾರ—ಮಧ್ಯಾಹ್ನದಲ್ಲಿ ಸಭೆಯ ಆರಂಭ, ಸ್ವಾಗತ ಕಮಿಟಿಯ ಚೇರಮನ್ನರ ಭಾಷಣ, ಅಧ್ಯಕ್ಷರ ಭಾಷಣ, ರಿಪೋರ್ಟವಾಚನ ಮುಂತಾದದ್ದು. (೨) ತಾ॥ ೨ ಮಾರ್ಚ ೧೯೧೦ ಶನಿವಾರ ಮಧ್ಯಾಹ್ನದ ವೇಳೆ ಸಭೆಯ ದರಬಾರ, ರಾತ್ರಿಯಲ್ಲಿ ಧರ್ಮಸಂಬಂಧವಾಗಿ ವಿದ್ವಾಂಸರ ಭಾಷಣ. (೩) ತಾ॥ ೩ ಮಾರ್ಚ ೧೯೧೦ ರವಿವಾರ ಮಧ್ಯಾಹ್ನದಲ್ಲಿ ಸಭೆಯ ದರಬಾರ, ರಾತ್ರಿಯಲ್ಲಿ ಧರ್ಮೋಪದೇಶ. (೪) ತಾ॥ ೪ ಮಾರ್ಚ ೧೯೧೦ ಸೋಮವಾರ—ಮಧ್ಯಾಹ್ನದಲ್ಲಿ ಸಭೆಯ ದರಬಾರ, ರಾತ್ರಿಯಲ್ಲಿ ಜೈನ ಮಹಿಳಾಪರಿಷತ್ತು. (೫) ತಾ॥ ೫ ಮಾರ್ಚ ೧೯೧೦ ಮಂಗಳವಾರ—ಮಧ್ಯಾಹ್ನದಲ್ಲಿ ಸಭೆಯ ದರಬಾರ, ಕೊನೆಗೆ ಸಭೆಯ ಬರಖಾಸ್ತ.

ಈ ಕಾರ್ಯಕ್ರಮವು ಸದ್ಯಕ್ಕೆ ಗೊತ್ತಾಗಿದ್ದು, ಪ್ರಸಂಗನುಸಾರ ಇದರಲ್ಲಿ ಬದಲು ಆದರೂ ಆಗಬಹುದು.

* ಬೆಳಗಾವ ಇದು M. S. M. ರೇಲ್ವೆಯ ಮುಖ್ಯ ಸ್ಟೇಶನವಿದ್ದು ಇಲ್ಲಿಯ ಹವೆಯೂ ನೀರೂ ಚೆನ್ನಾಗಿ ಇರುತ್ತವೆ.

ಶ್ರೀ ಗುರುಬಸವರಾಜೋ ವಿಜಯತೇತರಾಂ.

(ಭಾಮಿನೀ ಷಟ್ಪದಿ)

ಬಸವದೇವನ ಬಾಲಕರುಗಳಿರ! ಪರಮ ಭಕ್ತಿಯ ನೋಡಿರಿ ಜಾಣಿರಾ! ಪರಗತಿಯ ಪಥಪೇಳ್ವೆನು ಕುಳಿತು ಕೇಳುವ ಸುಜನ ತತಿಗೆ! ಪರುಷಕೊಡದ ಸದ್ವಾಂಗದಿಂದಲಿ! ಸುಜನತೆ ದನಂತ ಬೋಧಿಕೊಂಡಿತು! ಪಸುಳುತಿದೆಯ ದಯಿತ್ರ ಪ್ಲವ ಕಾರ್ಯದ ಕರೆದು ಸವ?

ಶಿವಭಕ್ತಿ ಶಿರೋಮಣಿಗಳೇ!

ಅನಾದಿ ಸಂಸಿದ್ಧವಾದ ವೀರಶೈವ ಧರ್ಮವು ನಮ್ಮೆಲ್ಲರ ಧರ್ಮಶ್ರದ್ಧೆಯಿಂದ ದಿನದಿನಕ್ಕೆ ಮಹೋನ್ನತಿ ಹೊಂದುವದು. ಶ್ರೀಮದ್ಬಸವಾದಿ ಪ್ರಮಥರು ಆಚರಿಸಿದ ಮಾರ್ಗವು ಅತ್ಯುತ್ತಮವಾದದ್ದು. ಇತರ ಉಭಯಮತ ಪೋಷಕರಾದವರ ಆಧರವೇ ದೃಢವು ... ಧರ್ಮಾಭಿಮಾನದಿಂದ ... ಮಾನಕೊಡಬೇಕೆಂದು, ನಮ್ಮ ಈ ... ಆಗಬೇಕು ಅದರ ... ಮಾಡಲ ... ಸಲ

ದ ಕೆಲರು ನಮ್ಮ ಮತದ ಉದಾರ ತತ್ವಗಳಿಗೆ ಅಪಾರ್ಥವನ್ನು ಕಲ್ಪಿಸಿ ಇದೇ ಶ್ರೀಮದ್ಬಸವಾದಿ ಪ್ರಮಥರು ನಡೆದ ಆಚಾರ, ಇದೇ ಶ್ರೀಮನ್ನಿಜಗುಣಾದಿಗಳು ಬೋಧಿಸಿದ ತತ್ವ, ಇದೀಗ ಮುಕ್ತಿಯ ನಿಧಿ, ಭಕ್ತಿಯ ಖನಿ, ಸದಾಚಾರಕ್ಕೆ ಕೈಗನ್ನಡಿ, ಎಂದು ಬೋಧಿಸಿ ತಮ್ಮ ವಾಗಾಡಂಬರದಿಂದ ಜನರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದಾರೆ. ಮುಂದಿನವರಿದ ಪದ್ಧತಿಗಳನ್ನು ಕದ್ದು ತಮ್ಮವೆಂದು ಪ್ರಕಟಿಸುತ್ತಿರುವರು. ಶ್ರೀಮದ್ಬಸವ ಪುರಾಣಾದಿಗಳಲ್ಲಿ ನಮ್ಮ ಶ್ರೀ ಶಿವಶರಣರು ಮಾಡಿದ ಪವಾಡಗಳನ್ನು ಕೇಳಿ, ಅಂಥಹ ಕಟ್ಟುಕಥೆಗಳನ್ನು ತಾವು ಮಾಡಿದ್ದೇವೆಂದು ಜನರ ಮುಂದೆ ನಿಂತುಕೊಂಡು ಹೇಳುತ್ತಿರುವರು. ತಮ್ಮ ಶಾಸ್ತ್ರಗಳಿಗೆ ಈ ದುರುಳರು ಮೂಢರ ಅಪಾರ್ಥವನ್ನು ಮತ್ತು ತಮ್ಮ ಪ್ರಾಬಲ್ಯಕ ವಾಣಿಯಿಂದ ಆ ಶ್ರೀ ಪರಶಿವನನ್ನೂ ಶ್ರೀ ಪರಶಿವನ ಶರಣರನ್ನೂ ಹೊಗಳಿದ ಸುದಿಗಳನ್ನು ಬಾಮರರಿಗೆ ಕದ್ದು ಕಟ್ಟಿ ಮದರನ್ನು ನೋಡಿ ಸನ್ಮಾನ್ಯ ಶರಣರು ಇಂಥ ಜನರಿಗೆ ತಕ್ಕ ಶಿಕ್ಷೆಯನ್ನು ಮಾಡುವರೆಂಬಲ್ಲಿ ಸಂದೇಹವಿಲ್ಲ. ಆದರೆ ಮಹಾಪುಣ್ಯವಂತರಿಂದ ಶ್ರೀಮದ್ವೀರಶೈವ ಧರ್ಮದಲ್ಲಿ ಪ್ರಾಪ್ತವಾಗಿರುವ ಈ ನಮ್ಮ ಜನ್ಮವನ್ನು ಧರ್ಮದ ಅನುಕರಣವನ್ನು ನಿಲ್ಲಿಸಿ, ಸಾರ್ಥಕಗೊಳಿಸುವುದು ಅದ್ಯಕರ್ತವ್ಯವಾಗಿದೆ. ಆದುದರಿಂದ ಈ ಜನರ ಚುತ್ತುಮತಗಳು ಅಪ್ರಮಾಣವಾಗಿವೆ ಹೇಗೆಂದರೂ, ಇವರ ಆಚಾರವು ವೀರಶೈವ ಧರ್ಮಕ್ಕೆ ಎಷ್ಟೋ ಸಲ್ಲತಕ್ಕದ್ದಲ್ಲವೆಂಬಿಲೂ ನಮ್ಮ ಮತಾನುಯಾಯಿಗಳಿಗೆ ತೋರಿಸುವುದು ಅವಶ್ಯಕವಾಗಿದೆ. ಆ ಕಾರಣದಿಂದ ಶ್ರೀ ಶಿವಭಕ್ತರಿಗೆ ಸರ್ವಕಾಲವಾದ ಇದೇ ಬರುವ ಶ್ರೀ ಮಹಾಶಿವರಾತ್ರಿಯಲ್ಲಿ ಕೆಳಗೆ ಬರೆದ ಪ್ರಕಾರ ವ್ಯಾಖ್ಯಾನಗಳನ್ನು ಜೋಡಿಸಿಟ್ಟು ಬಸವಾದ್ಯರಿಗೆ ಒಳಿವುದರಲ್ಲಿ ಕೊಡಲು ನೇಮಿಸಿರುತ್ತದೆ. ಸರ್ವರೂ ದಯಮಾಡಿ ಬರಬೇಕೆಂಬುದೇ ಕೋರಿಕೆ.

ವ್ಯಾಖ್ಯಾನಗಳು.

ಇದೇ ಫೆಬ್ರುವರಿ ತಾ॥ ೧೭ ನೇಯ ಗುರುವಾರ—ಸಂಜೆ ೭ ಗಂಟೆಯಿಂದ ೯ ರ ವರೆಗೆ ಸತ್ಸಂಗತಿ, ಸಾಮಾನ್ಯ ನಿರೂಪಣೆ, ಅಪಮಾರ್ಗಕಲ್ಪಿತದ ನಿರಾಕರಣೆ ತಾ॥ ೧೮ನೇಯ ಶುಕ್ರವಾರ ಶ್ರೀಮಹಾಶಿವರಾತ್ರಿ ದಿವಸ ಸಂಜೆ ೬ ಗಂಟೆಯಿಂದ ೭ ರ ವರೆಗೆ ಶ್ರೀಮತ್ಪಾಣಲಿಂಗಸ್ವರೂಪ, ಮತ್ತು ರಾತ್ರಿ ೮ ಗಂಟೆಯಿಂದ ಪ್ರಾತಃಕಾಲ ವರೆಗೆ ಶ್ರೀಮದ್ಬಸವಪುರಾಣ ಕೀರ್ತನ. ತಾ॥ ೧೯ ನೇಯ ಶನಿವಾರ ಸಂಜೆ ೭ ಗಂಟೆಯಿಂದ ೯ ರ ವರೆಗೆ ಶ್ರೀಮದ್ಬಸವಪುರಾಣ ಕೀರ್ತನ. ತಾ॥ ೨೦ ನೇಯ ರವಿವಾರ ಸಂಜೆ ೭ ಗಂಟೆಯಿಂದ ೯ ರ ವರೆಗೆ ವಾಗದ್ವೈತ ನಿರಾಕರಣೆ, ಕೈವಲ್ಯಪದ್ಧತಿ, ಕೈವಲ್ಯಕಲ್ಪವಲ್ಲರಿ, ಪರಮಾನುಭವಬೋಧೆ ಇವುಗಳ ಲಿಂಗಾಂಗ ಸಾಮರಸ್ಯ ವಿಷಯಕ ಕೌತ್ಸವರ್ಣ.

ಶ್ರೀ ಶಿವರಾಜಪ್ಪ ಮಧುರ,
ಸಿದ್ದರಾಮಪ್ಪಾ ದುಂಡಪ್ಪಾ ಪಾವಟೆ, B. A. LL. B.
ಕಾರ್ಯಕಾರಿ ಶ್ರೀ ಶಿವಲೀಲಾಮೃತ ಸಭಾ ಹುಬ್ಬಳ್ಳಿ.

ವೀರಶೈವ ಧರ್ಮತರಂಗಿಣಿ

ಸಮಸ್ತ ವರ್ತಮಾನಪತ್ರಿಕೆ ಸಭಾಸದರಿಗಳಿಗೆ ತಿಳಿಸುವುದೇನೆಂದರೆ,— ನಮ್ಮ ವೀರಶೈವರಲ್ಲಿ ಧಾರ್ಮಿಕ, ವ್ಯಾವಹಾರಿಕ, ನೈತಿಕ ವಿಷಯಗಳನ್ನು ಬೋಧಿಸುವ ಮಾಸಪತ್ರಿಕೆಯ ಕೊರತೆಯು ಬಹು ದಿವಸದಿಂದ ಇದ್ದುದರಿಂದ ಅದು ಧರ್ಮೋತ್ತೇಜಕ ಸಭೆಯವರು ಶ್ರೀ ಶಿವಯೋಗ ಮಂದಿರದ ಪತಿಯಿಂದ ಈ "ಧರ್ಮತರಂಗಿಣೀ" ಎಂಬ ಹೆಸರಿನ ಮಾಸಪತ್ರಿಕೆಯನ್ನು ಹೊರಡಿಸಬೇಕೆಂದು ಗೊತ್ತು ಮಾಡಿದ ಪ್ರಕಾರ ಧಾರವಾಡದಲ್ಲಿ ಸನ್ ೧೯೧೦ ನೇ ಫೆಬ್ರುವರಿ ತಿಂಗಳಿನಿಂದ ಹೊರಡುವ ಕೆಲವು ಜನ ಚಂದಾದಾರರ ಕೈಯಲ್ಲಿ ಬಂದಿರುವುದು. ಮತ್ತೆ ತತ್ವಗಳನ್ನು ಅರಿದು ಆಚರಿಸಲಿಕ್ಕೆ ಎಲ್ಲರಿಗೂ ಅನುಕೂಲವಾಗಲೆಂದು ಇದರ ಬೆಲೆಯನ್ನು ಶೇರ ಕಡಿಮೆ ಅಂದರೆ ಅಂಚೆವೆಚ್ಚ ಸಹಿತ ೧-೩-೦ ರೂ. ಮಾತ್ರ ಇಟ್ಟಿದೆ. ಚಂದಾದಾರರ ಸಂಖ್ಯೆಯು ಹೆಚ್ಚಾಗುತ್ತ ಹೋದಲ್ಲಿ ಇದಕ್ಕೂ ಕಡಿಮೆ ಇಡಬೇಕೆಂಬ ಉದ್ದೇಶವುಂಟು. ಈ ಮಾಸಪತ್ರಿಕೆಯಿಂದ ಉಂಟಾಗುವ ಲಾಭವು ಈ ಮಾಸಪತ್ರಿಕೆಯ ಬೆಳವಣಿಗೆಯು ಗೂ ಏಳಿಗೆಗೂ ವಿನಿಯೋಗಿಸಲ್ಪಡುವುದು. ಕೇವಲ ಸಮಾಜ ಸುಧಾರಣೆಗಾಗಿಯೇ ಇವರ ಉತ್ಪತ್ತಿಯು. ಆದ್ದರಿಂದ ಇದನ್ನು ಪ್ರತಿಯೊಬ್ಬ ಧರ್ಮಾಭಿಮಾನಿಯೂ ಸಂಗ್ರಹಿಸುವುದು ಸರ್ವ ರೀತಿಯಿಂದ ಕಲ್ಯಾಣಕರವಾಗಿರುವುದು. ಚಂದಾದಾರರ ಸಂಖ್ಯೆಯನ್ನು ಬೆಳಸುವವರು ಈ ಮಾಸಪತ್ರಿಕೆಯ ಕೈಯಲ್ಲಿ ಇಟ್ಟುಕೊಂಡು ಮಾತ್ರ ... ಮುಂದೆ ಕಮಿಟಿಯವರು ಗೊತ್ತುಮಾಡಿದ ಪ್ರಕಾರ ಸಂಭಾವನೆಗೆ ಯೋಗ್ಯರಾಗುವರು. ಚಂದಾದಾರರಾಗಬಿಚ್ಛಿಸುವವರು ತಮ್ಮ ತಮ್ಮ ವಿಳಾಸಗಳನ್ನು ಕಳಿಸಿ ಮಹಿಮಾದಿವಸದ ಹಣದ ಹಳೆ ಬೆಲೆಗಳನ್ನೂ ಕಳಿಸುತ್ತಾ ಹೋ

:— ಎಸ್. ಎಸ್. ಶಿವಲಿಂಗಪ್ಪ

ವಿದ್ಯಾಭಿವೃದ್ಧಿಗೋಸ್ಕರ ಸಹಾಯ್ಯವು.

(ಕಳೆದವಾರದ ಶೇಷ)

೭. ವ್ಯಾಪಾರ ಮಾಡುವ ವೀರಶೈವರು ದೇವಸ್ಥಾನ, ಧರ್ಮಾದಾಯಗಳಿಗಾಗಿ ಜಕಾತಿ ಸವಟ್ಟೆ, ಧರ್ಮೋದ್ಧಾರ ಪಟ್ಟಿ ಹೆಸರಿನಿಂದ ಹಣವನ್ನು ಕೊಡುತ್ತಿರುವರು. ಆವ ವಿದ್ಯಾಭಿವೃದ್ಧಿಯ ಮಹತ್ವವನ್ನು ಮನಸ್ಸಿನಲ್ಲಿ ತಂದು ಧರ್ಮ ಕಾರ್ಯಕ್ಕಾಗಿ ತಮ್ಮ ನಂಟಿಗೆ ಕೆಲವು ಅಂಶವ ಲಿಂಗಾಯತ ವಿದ್ಯಾಭಿವೃದ್ಧಿಯ ಫಂಡಿನ ಸೆಕ್ರೆಟರಿಯವ ರಿಗೆ ಕಳಿಸಿದರೆ ಎಷ್ಟೋ ಸಹಾಯವಾಗುವದು.

೮. ಸರಕಾರಿ ಉದ್ಯೋಗದಲ್ಲಿರುವ ವೀರಶೈವರು ತಾವು ಯ ಮಹತ್ವವನ್ನು ಅರಿತವರಾದ್ದರಿಂದ, ಈ ಕೆಲಸಕ್ಕೆ ಹಾಯ್ಯಮಾಡುವರು ತಮ್ಮ ಆಗತ್ಯವಾದ ಕರ್ತವ್ಯವೆಂಬು ನ್ನು ಮನಸ್ಸಿನಲ್ಲಿ ತಂದು ವಿದ್ಯಾಭಿವೃದ್ಧಿಯ ಫಂಡಿಗೆ ಪ್ರತಿ ಗೆ ತಮ್ಮಿಂದಾದಷ್ಟು ಹಣವನ್ನು ಮುಟ್ಟಿಸುತ್ತ ಹೋ , ಘಂಡು ಬೆಳೆಯುವಿಕೆಗೆ ಅನುಕೂಲವಾಗುವುದು.

೯. ಊರ ಪ್ರಮುಖರೂ, ಮಠಪತಿಗಳೂ ಊರೊಳ ಪ್ರತಿಯೊಂದು ಶುಭಾಶುಭ ಕಾರ್ಯಗಳಲ್ಲಿ ಇದ್ದೇ ಇರು ರೆ ಆ ಕಾಲಕ್ಕೆ ಅವರು ಕಾರ್ಯದ ಮನೆಯವರಿಂದ ಕೆ ಪ್ರಕಾರದ ಬಾಬುಗಳನ್ನು ತೆಗೆಸುಕೊಳ್ಳುವರು. ಗ ವಿದ್ಯಾಭಿವೃದ್ಧಿಯ ಕೆಲಸವಾದರೂ ಒಂದು ಬಾಬು ಎಂ ಎಣಿಸಿ ಅದಕ್ಕಾಗಿ ಸಾಧ್ಯವಿದ್ದ ಪಟ್ಟಿಗೆ ಹಣ ತೆಗೆದು ರ ಲೆಕ್ಕ ಪತ್ರವನ್ನಿಟ್ಟು ವರ್ಷ ಕ್ಕೊಮ್ಮೆಯಾಗಲಿ, ವರ್ಷಕ್ಕೆ ಕೂಡಿದಷ್ಟು ಹಣವನ್ನು ವಿದ್ಯಾಭಿವೃದ್ಧಿಯ ಫಂಡಿಗೆ ಕ ದರೆ ಹೆಚ್ಚು ಉಪಯೋಗವಾಗುವದು.

೧೦. ಸಿಂಹಾಸನಾಧಿಪತಿಗಳಾಗಲಿ, ಕೊನ್ಯ ಸಿಂಹಾಸನದ ಗೆ ಆಗಲಿ, ಬಹುಜನ ಶಿಷ್ಯರುಳ್ಳ ದೊಡ್ಡ ದೊಡ್ಡ ಮಠ ವಾಗಲಿ ತಮ್ಮ ಉತ್ಪನ್ನದೊಳಗಿನ ಕೆಲವು ಅಂಶವನ್ನು ವಿದ್ಯಾಭಿವೃದ್ಧಿಯ ಫಂಡಿಗೆ ಕಳಿಸಿಕೊಟ್ಟರೆ, ಭಕ್ತರನ್ನು ಉ ದ್ಧಾರಮಾಡಿದ ಕೀರ್ತಿಯು ಅವರಿಗೆ ಬರುವದು.

೧೧. ಎಷ್ಟೋ ಜನರು ಏನಾದರೊಂದು ತಮ್ಮ ಮನೋ ರಥವು ಕೈಗೂಡಿದರೆ ಇಂತಿಷ್ಟು ಜನರ ಗಣಾರಾಧನೆ ಮಾಡುವೆನೆಂದು ದೇವರಿಗೆ ಬೇಡಿಕೊಂಡು ನೂರಾರು ರೂ ಪಾಯಿ ಖರ್ಚುಮಾಡಿ ಅನೇಕ ಜನರಿಗೆ ಭೋಜನಮಾಡಿಸುವ ರು. ಧಾರ್ಮಿಕರಾದ ಸದ್ಗೃಹಸ್ಥರು ಕೆಲವರು ಪ್ರತಿ ವರ್ಷ ಶ್ರಾವಣಮಾಸದಲ್ಲಿ ಈಶ್ವರ ಪ್ರೀತ್ಯರ್ಥವಾಗಿ ಸಾವಿ ರಾರು ಜನರ ಭೋಜನಮಾಡಿಸುವರು. ಇಂತಹವರು ಸ್ವ ಧರ್ಮ ಕಾರ್ಯವಾದ ವಿದ್ಯಾಭಿವೃದ್ಧಿಗೋಸ್ಕರ ಪ್ರತಿ ವರ್ಷವೂ ಕೆಲವು ಹಣ ಕಳಿಸಿದರೆ, ಜನರಿಗೆ ಜ್ಞಾನಾಮೃತ ವನ್ನು ಭೋಜನಮಾಡಿಸಿದ ಮಹತ್ವದ ಪುಣ್ಯವು ಪ್ರಾಪ್ತ ವಾಗುವುದು.

೧೨. ಕೆಲವು ಶ್ರೀಮಂತ ಜನರು ಲಗ್ನ ಮುಂತಾದ ಸಮಾ ರಂಭಗಳಲ್ಲಿ ಮದ್ದು, ನೃತ್ಯ, ಗೀತ ಮುಂತಾದವುಗಳಿಗಾಗಿ ವಿಶೇಷ ರೂಪಾಯಿ ಖರ್ಚುಮಾಡಿ ಜನರ ಮನರಂಜನ ಮಾತ್ರ ಪ್ರಯತ್ನಮಾಡುತ್ತಾರೆ. ಅವರು ಅಂತಹ ಖರ್ಚನ್ನು ಸ್ವ ಕಡಿಮೆಮಾಡಿ ವಿದ್ಯಾಭಿವೃದ್ಧಿಯ ಫಂಡಿಗೆ ಕೆಲವು ಹಣ ಕೊಟ್ಟರೆ ಅವರಿಗೆ ಒಳ್ಳೆಯ ಶ್ರೇಯಸ್ಸುಂಟಾಗುವುದು.

೧೩. ದೊಡ್ಡದೊಡ್ಡ ವ್ಯಾಪಾರಿಗಳಿಗೆ ದೇವರ ದಯದಿಂದ ಸಮಾಜದ ಕಲ್ಯಾಣಮಾಡುವ ಸಾಮರ್ಥ್ಯವಿರುತ್ತದೆ. ಅ ರು ದೊಡ್ಡ ಮನೆತನದಲ್ಲಿ ಜನ್ಮ ತಾಳಿದ್ದರಿಂದ, ಅವರಲ್ಲಿ ಉದಾ ರಬುದ್ಧಿಯಾದರೂ ಸ್ವಾಭಾವಿಕವಾಗಿ ಇದ್ದೇ ಇರುವುದು ಅಂತಹವರು ತಮ್ಮ ಉತ್ಪನ್ನದೊಳಗಿನ ಕೆಲವು ಅಂಶವನ್ನು ಈ ಮಹತ್ವದ ಧರ್ಮಕಾರ್ಯಕ್ಕೆ ವಿನಿಯೋಗಿಸಿದರೆ, ಅವರಿಗೆ ಹೆಚ್ಚು ಕೀರ್ತಿಗಳು ದೊರಕುವವು.

೧೪. ವೀರಶೈವರಾದ ನೇಕಾರ, ಬಣ್ಣಗಾರ, ಬಡಿಗ, ಸಿಂ ಪಿ ಮುಂತಾದವರು ಪ್ರತಿವರ್ಷದಲ್ಲೂ ತಮ್ಮ ಬಂದುದಿನದ ಉತ್ಪನ್ನವನ್ನಾದರೂ ವಿದ್ಯಾಭಿವೃದ್ಧಿಯ ಫಂಡಿಗೆ ಕೊಡಲು ನಿ ಶ್ಚಯಮಾಡಿದರೆ ಫಂಡು ಬೆಳೆಯುವಿಕೆಗೆ ಎಷ್ಟೋ ಸಹಾಯ ವಾಗುವುದು.

೧೫. ತಾತ್ಪರ್ಯವೇನೆಂದರೆ,—ಪ್ರತಿಯೊಬ್ಬ ವೀರಶೈವನು ಸಮಾಜೋದ್ಧಾರಕ್ಕೆಯ ಮುಖ್ಯ ಸಾಧನವಾದ ವಿದ್ಯಾಭಿ ವೃದ್ಧಿ ಯಕೆಲಸಕ್ಕೆ ಸಹಾಯಮಾಡುವುದು ತನ್ನ ಆದ್ಯ ಕರ್ತ ವ್ಯವೆಂಬುದನ್ನು ಮರೆಯದೆ ಈ ಪುಣ್ಯಕಾರ್ಯಕ್ಕೆ ಸ್ವಶಕ್ತ್ಯ ನುಸಾರವಾಗಿ ಲೈಯಾಡಿಸುವಟ್ಟಿಗೆ ಸಹಾಯಮಾಡಿದರೆ ಈ ಕೆಲಸವಾಧ ಉನ್ನತಿಯಾಗುವುದೆಂಬುದಕ್ಕೆ ಸಂದೇಹವಿಲ್ಲ. ನಮ್ಮ ಸಂಘ್ಯಾವಾಚಕರು ಈ ವಿಚಾರಗಳನ್ನು ತಮ್ಮ ಸಿಯರಾದ ವೀರಶೈವ ಬಾಂಧವರ ಮನಸ್ಸಿನಲ್ಲಿ ತಂದು ದ್ಯ ಅವರು ವಿದ್ಯಾಭಿವೃದ್ಧಿಯ ಕೆಲಸಕ್ಕೆ ತಮ್ಮಿಂದಾದ ಹಾಯ್ಯ ಮಾಡುವಿಕೆಗೆ ಪ್ರವೃತ್ತ!

ಯತ್ನಕ್ಕೆ ಸಹಾಯಮಾಡು

ಕೇಂದ್ರದಿಂದ ಬೇಡ

ಮೈಸೂರು ಸ್ಟಾರ್ ಚಂದಾನಿರ್ಣಯ

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚ ವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.

೨ ರಿಂದ ೪ ರವರಿಗೆ ೧—೧೦—೨

ಇದರಂತೆ ಮುಂದೆ ಪ್ರತಿ ನಾಲ್ಕು ಪತ್ರಿಕೆಗೂ ೧—೧೨ ೧ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೩ ಆಣೆ, ಎರಡನೇ ಆವೃತ್ತಿಯಿಂದ ಪಟ್ಟಿ ೧ ಕ್ಕೆ ೧॥ ಆಣೆ ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸ ಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು

ನೋಟೀಸ್.

2 ಜಾತಕ ಸುಧಾಕರ

ಅಧ್ಯಾತ್ಮ ಲೋಕಸಂಬಂಧಗಳಿಂದ ವಿವರಿಸುವುದಕ್ಕೆ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಶ್ಶಾಸ್ತ್ರಾಭ್ಯಾಸವನ್ನು ಮಾಡಿ ಮನುಷ್ಯನನ್ನು ತಿಳಿಸಲಾರದೆ ಬಂದಿರುವರು ಪ್ರತ್ಯಕ್ಷಫಲ ಸೂಚನೆಗೆ ಬರುವಂತ ಗ್ರಂಥವನ್ನು ರಚಿಸಲಿಲ್ಲ ಅದು ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗಳನ್ನು ಪರಿಶೋಧಿಸಿ ಅಲ್ಪವಿದ್ಯರ ವರಿಗೂ ಸಹ ಮುಂದೆ ಬರಬಹುದಾಗುವ ಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ ಕೃಪೆಯುಳ್ಳ ಬಹಳ ಕೆಮ್ಮಿಯಾಗಿರುತ್ತದೆ. ಜಾತಕಸುಧಾಕರಗ್ರಂಥ ೧ ಕ್ಕೆ ರೂ ೦—೧೦—೦.

ಸಂಪೂರ್ಣ ಜಾತಕವು.

ನಮ್ಮಿಂದ ತಮ್ಮ ಮಕ್ಕಳಿಗೆ ಸಂಪೂರ್ಣ ಜಾತಕವನ್ನು ತಯಾರು ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರೆದು ಕಳಿಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಪಷ್ಟವಾಸವೆಂಬಲಿ ದಶಾದಿ ಫಲಭಾವಕುಂಡಲಿ ಅಷ್ಟಕವರ್ಗ ಪಿಂಡಶೋಧನೆ ತ್ರಯೋದಶ ವರ್ಗ ಷಡ್ಬಲಾಂಶಗಳು ಗ್ರಹಗಳ ಮಯ ಅಷ್ಟ ಚಕ್ರವೂ ಆಯುರ್ದಾಯವನ್ನು ಅನೇಕವಿಧವಾದ ಗಣನೆಗಳ ಜಾತಕಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ದಶಾಂತರ್ದಶೆಗಳು ರಾಜಯೋಗಾದಿಗಳ ತಮ್ಮ ವಿದ್ಯಾದಿಶೆ ಭಾವಫಲ ಆಯುಷ್ಯ ಅಂತರ್ದಶಾ ಫಲ ಮಾರಕಾದಿ ಗಂಡಕಾಲಗಳು ಅಷ್ಟಗಳಿಗೆ ತಕ್ಕ ಶಾಂತಿಕ್ಕೆ ಮೊದಲಾದ ಸಮಸ್ತ ಫಲಗಳನ್ನು ಆ ಸಂಗ ಕ್ರಮ ಪುಸ್ತಕದಲ್ಲಿ ಬರೆದು ಕಳಿಸುತ್ತೇವೆ. ಸಂಪೂರ್ಣ ಜಾತಕ ೧ ಕ್ಕೆ ಕ್ರಯ ರೂ ೧೦—೦—೦

ವರ್ಷ ಜಾತಕವು

ಕೆಲವು ಜನರು ತಮ್ಮ ಜನನಕಾಲವು ತಿಳಿಯದೆ ಇರುವುದರಿಂದ ಜಾತಕವನ್ನು ಬರೆಸಿಕೊಳ್ಳದೆ ಬಿಟ್ಟುಬಿಡುತ್ತಿರುವರು. ಕಾರಣ ಪ್ರತಿಯೊಬ್ಬರು ಆ ವರ್ಷದ ತಮ್ಮ ವಯಸ್ಸನ್ನು ಬರೆದು ಕಳಿಸಿದರೆ ಆ ವರ್ಷದ ಜಾತಕವನ್ನು ಬರೆದು ಕಳಿಸಿದರೆ, ನಾವು ವರ್ಷವೇಳೆ ಸಾಧಿಸಿ ಸಂಪೂರ್ಣ ಜಾತಕದಂತೆ ಫಲಗಳನ್ನು ಆಯುರ್ಪ್ರಯತ್ನ ಬರೆದು ಕಳಿಸುತ್ತೇವೆ ವರ್ಷಜಾತಕ ಕ್ರಯ ರೂ ೫—೦—೦

ಮೂರು ತಿಂಗಳ ವಿವರ

ಮಹನೀಯರೇ—ತಮ್ಮ ಹೆಸರನ್ನು ಬರೆದ ಕಳಿಸಿದರೆ ವರ್ತಮಾನದಿಂದ ಮುಂದಿನ ಭವಿಷ್ಯತ್ಫಲ ಅಂದರೆ ೩ ತಿಂಗಳಲ್ಲಿ ಜರಗುವ ಲಾಭ ನಷ್ಟ ಮೊದಲಾದ ಸಮಸ್ತ ವಿಷಯಗಳನ್ನು ಬರೆದು ಕಳಿಸುತ್ತೇವೆ. ಪರಿಷತ್ತಿಗೆ ಆಪ್ತವು ...

ಜಾತಕಸುಧಾಕರ ...

... ೦—೩—೦; ...

... ಜಾತಕವನ್ನು ...

ಮಂತಬೋಧಿನಿ ಮೂಲವಾದದರು ತರ್ಜುಮೆಯಿಂದ ಸಹಿತ ಸಮಗ್ರವಾದ ಉಚಿತಕೊಡುತ್ತೇವೆ ಬೆಲೆ ವಿ. ಪಿ. ಸಹಿತ ...

ಯಸ್. ಯಂ ಶಾಸ್ತ್ರಿಗಳು ಗೋಕಾಕದವರು

ಬಳ್ಳಾರಿ

25 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ — ಬೆಲೆ ವಿ.ಪಿ. ೦ ಆಣೆ ಇದು ಸ್ತೋತ್ರವು. ಉತ್ತಮವಾದ ಕನ್ನಡಟೀಕೆಯಿಂದ ಕೂಡಿದೆ

ಶಿವಮಾತೃಪ್ರಕಾಶಿಕೆ—ಬೆಲೆ ವಿ ಪಿ ೬ ಆಣೆ ಸ್ಪಷ್ಟ ದ ಪ್ರಕಾಶಿಕಾ ಸಹಿತವಾಗಿ ಸೊಗಸಿನ ರೀತಿಯಾಗಿ ವಿರಚಿತವಾದದ್ದು ವೇದಾಂತಿಗಳಿಗೂ, ವೀರಶೈವರಿಗೂ ಪತ್ಯವಶ್ಯಕವಾದದ್ದು.

ಶಿವಪಂಚಕ — ಬೆಲೆ ವಿ ಪಿ ... ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟೀಕೆಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಮತ ... — ಬೆಲೆ ವಿ ಪಿ ೪ ಆಣೆ ಇದರಲ್ಲಿ ಅಷ್ಟಾವರಣಗಳು, ... ಆಚಾರವಿಚಾರ ಧರ್ಮಾಚಾರ ವಿಚಾರಗಳು ... ಸಲ್ಪಟ್ಟಿರುತ್ತವೆ.

ವೇದಸಂಜೀವಿನಿ — ಬೆಲೆ ವಿ ಪಿ ... ಆಣೆ ಇದರಲ್ಲಿ ವೀರಶೈವ ಸಿದ್ಧಾಂತವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷಸೂಕ್ತ — ಬೆಲೆ ವಿ. ಪಿ. ೬ ಆಣೆ ... ಜಂಗಮಪರವಾದ ... ಸಹಿತವಾಗಿದೆ

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೭ ನೇ ಇಸವಿಯ ಪಾಕೆಟಿಪ್ಯರಿ.

27

(೧) ಕಾಗದ—ದಪ್ಪ, ಬಿಳಿದು, ನುಣುಪಾದದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ...ಗಳಲ್ಲಿ ಮಾಡಿದ್ದು (೩) ಅಕ್ಷರ—ಸ್ಪಷ್ಟವಾದದ್ದು ... ಗಳಲ್ಲಿ ಮುದ್ರಣವಾದದ್ದು (೪) ರೂಲು—ಪ್ರತಿಪುಟಕ್ಕೂ ವಾರದ ಕೆಲಸಗಳಿಗೆ ಒಂದು ಜೋಡಿ ಕಾಲಮ್ಮುಗಳು ... ದರ ಕೆಳಗೆ ಪ್ರಥಮ ಕೊನೆ ... ಗಳೂ ಕಾಣಿಸಿದೆ (೫) ... ಪಂಚಾಂಗ, ಕಾಲ, ... ಇವೇ ಮುಂ ...

... ಕೈಗಳು.

... ಬೆಲೆ ವಿ. ಪಿ. ... ಆಣೆ. ದೊಡ್ಡದು ... ಆಣೆ ... ಬೆಲೆ ... ಆಣೆ.

ವಿಳಾಸ — ವಿರಸಿ ... ಕಂಪನಿ.

ಬೆಂಗಳೂರು ಸಿಟಿ.

ಸ್ವದೇಶಿ 1 (ಸತ್ಯವೇ ಜಯಿಸುವುದು) ಸ್ವದೇಶಿ

32 ಗುಣವಾಗದಿದ್ದರೆ ಹಣವಾಪಸ್ಸು.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ವೀರ್ಯ ಸ್ತಂಭನ ಇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಸ್ಖಲನ ಇವು ಗಳಿಗೆ ಗುಣವಾಗಿ ಧಾತುಪುಷ್ಟಿ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಗರ್ಮಿ ಜಾತಿ ಸುಖಪ್ರದವೆನಿಸಿ ... ಅನ್ನೆ ... ಬೇನೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಕೊಳೆ, ವಾತರೋಗ, ಮುಂತಾದವು ಅತಿ ಶೀಘ್ರಗುಣವಾಗುವಾಗ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ದೇಹಿಯಲ್ಲಿ ಸಂಪೂರ್ಣಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೪೦ ಗುಳಿಗೆಗಳವರೆಗೆ ಬೇಕಾಗುವವು ಕ್ರಮವಾಗಿ ೧೦ ಗುಳಿಗೆಗಳಿಗೆ ೧ ರೂ. ಒಮ್ಮೆ ಲೆ ೪೦ ಗುಳಿಗೆಗಳನ್ನು ... ಗೆ ಕೊಡಲಾಗುವುದು ... ಶಾಸ್ತ್ರ ... ಗೆ ... ಯಿದ್ದು ... ತಿಸಿರುವ ... ದಲ್ಲಿ ... ಕರೆ ... ಬಹುದು

ವೈದ್ಯ, ಜೆ ಎಸ್. ೭

ಲಗ್ನಪತ್ರಿಕೆಗಳ ವಿಷಯದಲ್ಲಿ ಕ್ರಮವು

ಮೈಸೂರು ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ವೀರಭದ್ರೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶೇಷ, ಚಕ್ರ, ಹನುಮಂತ, ಗರುಡ, ರಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹುಳ ಶೋಭನವಾದ ಛಾಯೆಯಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ಸೌಂದರ್ಯವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೬-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೬-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦-೪-೦ ಆಣೆಯಂತೆ ಕಳುಹಬೇಕು. ಶೀಘ್ರಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೆಒಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಹೊಡೆಯಬೇಕಾದರೆ ೧-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

21 ಸೌಂದರ್ಯ ಸಾಧನ ·

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು)

ಅಂಜೀರಾರ್ಕಮಧು — ಇದರ ಸೇವನೆಯಿಂದ ವೀರ್ಯೋತ್ಪಾದಿಸುವ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ ಮತ್ತು ಕಾಮೋತ್ತೇಜಕ ಸಂತತಿ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. ಶರೀರವ್ಯಾಧಿಯಿಂದ ಅಥವಾ ಯೌವನದಲ್ಲಿ ಒಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಪಾತ್ರರಾಗಿ ನಿವೃತ್ತವಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ, ೧ ಬಾಟ್ಲಿಗೆ, ೧-೧೦-೦ ರೂ. ೩ ಬಾ, ೩-೧೧-೦ ರೂ. ೩ ಬಾ, ೩-೧೪-೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ಕರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ ಖ ಬೇರೆ.

ಪಂಚಾಂಗಪಿ ಚೂರ್ಣವು.— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಗಟ್ಟಿಯಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧। ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ ಖ ಬೇರೆ.

ಮಲಮಯ — ಇದರಿಂದ ಹಳೇ ಗವರ್ಕಣ್, ಜ್ವರ, ಒಬ್ಬೆ, ದದ್ದು ಪಾತ್ರರಾದ ನಿವೃತ್ತವಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು")

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮ ತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣ ನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶಾ ಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಶಾಸ್ತ್ರ ಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿ ರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣ ವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತ ಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿ ದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಾಕಾರ [illegible] ದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ [illegible]

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರ ಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ [illegible] ೪೦ ಪುಟಗಳು ಬರುವವು. ವರ್ಷದ ಚಂದಾ [illegible]

ಎಸ್. ಆರ್. ಕರಿಬಸವಶಾಸ್ತ್ರಿ [illegible]

ಸೌಗಂಧಿಕಾಪರಿಣಯಂ.

[ಕಳೆದ ವಾರದ ಶೇಷ.]

ರಕ್ಷಿತನು ಆ ಮಾತಂಗನ ಮುಖವಾಗಿ ಬಾಗಿಲುಗಳಿಂ ನನ್ನ ಮುಂಭಾಗದಲ್ಲಿ ಬೇಕಾದ ಪಕ್ಷಿಗಳಂ ತಂದು ಮಡಗಿರುತಿಹನು, ನೀನು ಪ್ರತಿದಿನಂ ಯಥಾಶಕ್ತಿಯಾಗಿ ನೋಡೆಂದು ನುಡಿದು ಪ್ರಕರದೀಪದಮಾಗಿರುವ ನನ್ನ ಮನದೊಳ್ ಆದು ಕಾಲಂಗಳು ಎಂದಿಗಾಗುವುವೋ ಎಂದು ಚಿಂತಿಸುತ್ತಿರಲು, ಎನ್ನ ಮನೋಗತಂ ತಿಳಿದು ಅತಿ ಮಂತ್ರಿಯಾದ ಸಪ್ತ ರಕ್ಷಕನು ತನ್ನ ಬಳಿಗೆ ಬಂದನೆ ಎಲೈ ರಾಕ್ಷಸರಾಯನೇ! ಕೇಳು, ನಿನ್ನ ಕಡೆಗೆ ತಳ್ಳಿರುವ ಈ ಬಾಲೆಯು ಎಲ್ಲಿ ಹೋಗುವಳು? ಲೋಕದೊಳ್ ಕನ್ಯೆಯು, ವನಿತೆಯು ತಾನಾಗಿ ವಶವರ ಸರಸವಾಗಿರುವುದು, ಆದುದರಿಂದ ಈ ಕನ್ನೆಯು ಸಂತೋಷದಿಂದವಾಗ ಆರುತಿಂಗಳು ವ್ರತ ಸಂಪೂರ್ಣವಾಗ ನಡೆಸುವುದು ಉಚಿತವೆಂದು ಹೇಳಲಾ ಮಾತಂಗೇಶ, ಆ ರಾಕ್ಷಸನು ನನ್ನಂ ನಿರ್ಬಂಧದಡಿಸುತೆ, ಬಳಿಕದೊಳ್ ಸಟ ಚರ ಮುಖದಿಂದ ನನ್ನಂ ವಿಚಾರಿಸುತ, ಪ್ರತಿದಿನಂಗಳನ್ನೆ ಕಳೆಯುತಲಿರುವನು. ನಾನು ತ್ರಿಕಾಲದಲ್ಲೂ ಗೌರೀದೇವಿಯ ಆರಾಧನೆಯಂ ಮಾಡುತ ಕಾಲವಂ ಕಳೆಯುತ, ವ್ರತವು ಸಾಂಗವಾದ ನಂತರ ದೇವಿಯು ಪ್ರಸಾದವಂ ದಯೆಮಾಡದಿದ್ದರೆ ದೇಹವಂ ತ್ಯಜಿಸುವೆನೆಂದು ಇದ್ದೆನು. ಈಗಲಾ ದೇವಿಯ ಪ್ರಸಾದದಿಂದಲೂ, ನನ್ನ ಪೂರ್ವಪುಣ್ಯಾತಿಶಯದಿಂದಲೂ, ನನ್ನ ತಾಯಿತಂದೆಗಳ ಪ್ರಭಾವದಿಂದಲೂ, ದೈವಗತಿಯಿಂದಲೂ [illegible] ನಿನ್ನ [illegible] ನೋಡಿ ಯನ್ನ ಕ್ಲೇಶವಂ ಪರಿಹರಿಸುವುದಕ್ಕೆ ಸಮರ್ಥನೆಂದರಿತು ನಿನ್ನನ್ನೇ ಪತಿಯಾಗಿ ವರಿಸಿರುವೆನು ಎಂದು ನುಡಿದು, ಮುತ್ತಿನ ಸರಂಗಳಂತೆ ಕಂಬನಿಗಳಂ ಬಿಡುತ ಗದ್ಗದ ಸ್ವರದಿಂದ ನಿನ್ನ ಮರೆಯಂ ಹೊಕ್ಕಿರುವ ನನ್ನಂ ಎಂತು ಮಾಡಿದರೂ ಆ ಕೀರ್ತಿ ನಿನ್ನದೇ ಎಂದು ನಿಟ್ಟುಸಿರಂ ಬಿಡಲು ಆಗ ಸುಗಂಧರಾಜೇಂದ್ರನು ಆ ಬಾಲೆಯನ್ನು ನೋಡಿ ಶಿವಶಿವಾ! ನಿನ್ನೊಳಗೆ ಈ ಸಂಕಟವಂ ಗೊಂಡು ನನ್ನ ಸುಖಕಾಂತಿಯು ಕುಂದಿತ್ತು, ಇಂತು ಸುಕುಮಾರಿಯಾದ ನಿನ್ನಂ ಆ ದುಷ್ಟ ರಾಕ್ಷಸನು ಎತ್ತಿಕೊಂಡು ಹೋಗುವಂತೆ ಮಾಡಬಹುದೇ? ದೈವವೆಂದು ನನ್ನ ಮನದೊಳ್ ಚಿಂತಿಸಿದೆನು. ನಿನ್ನ ಮುಖದ ವಸ್ತ್ರವಂ, ಒಳಗಿರುವ ಶರೀರವಂ, ಕಟ್ಟಿರುವ ಕೇಶಭಾರವಂ ನೋಡಿ ನೋಡಿಯು ನನಗೆ ನೀನು ಹೇಳಿದ ಸಂಶಯವು ಪುಷ್ಟವಾಗಿರುವುದೆಂದು ನುಡಿದು ಅವಳ ಕೈಹಿಡಿದು ತನ್ನಂಕದೊಳ್ ಕುಳ್ಳಿರಿಸಿ, ಕುರುಳುಗಳನ್ನೋವರಿಸುತ, ಎಲೈ ಪ್ರಾಣಪ್ರಿಯೆ! ಕೇಳು, ನಿನಗೆ ಅಪರಾಧವಂ ಮಾಡಿದ ಆ ರಾಕ್ಷಸನಂ ಭೂತಂಗಳಿಗೆ ಆಹುತಿಯಂ ಕೊಡುವೆನೆಂದು ಅಭಯವನ್ನೀಯಲು, ಕುಸುಮ ಲತೆಯು ಇಂದಿನವರೆಗೆ ನನ್ನ ಮನದಲ್ಲಿದ್ದ ಚಿಂತೆ ತೀರಿತೆಂದು ಅತಿ ಸಂತೋಷವಂ ಪಡೆದು, ಎಲೈ ನಾಥನೇ! ಇನ್ನೊಂದು ವಿಜ್ಞಾಪನೆಯಂ ಮಾಡುವೆನು, ಚಿತ್ತದೊಳ್ ಚಾಪಲರಂಗೊಳ್ಳಬಾರದು. ಈ ಕ್ರೂರನಾದ ದಾನವನಿಂದ ನನ್ನ [illegible] ಕುರಿತು ನೀವು ದಯಮಾಡುವುದಕ್ಕೆ ನಿಮಿತ್ತವೇನೆಂದು ನುಡಿದು, ಮತ್ತೂ ಯಾವಯಾವ ಕ್ಲೇಶಂಗಳು ನಿಮ್ಮಿಂದ ಪರಿಹಾರಂಗಳಾಗಿರುವವು ಇದಂ ಹೇಳಬೇಕೆಂದು ಬೇಡಲು, ಆ ಮಾತಂಗೇಶ ರಾಜೇಂದ್ರನು ಹೇಳಲು ತೊಡಗಿದನು. ಎಲೌ ಕುಸುಮಲತೆಯೆ ಸವಿಸ್ತರವಾಗಿ ಹೇಳುವೆನು ಕೇಳು, ಎಲೈ ಅರಸಿ ಕೇಳು, ಈ ಸುಗಂಧರಾಜೇಂದ್ರನು ಈ ಸುಗರಿಯಂ ಕುರಿತು ಬಂದಿರುವ ವಿಷಯಂ ವಿಸ್ತಾರವಾಗಿ ಹೇಳುವೆನು. ಭರತಖಂಡದೊಳ್ ಕುಂತಳ ವರ್ಗದ ಸಹ್ಯಗಿರಿಗೆ ಶಿರೋಭೂಷಣವಾದ ಕರ್ನಾಟಕ ದೇಶವನ್ನಾಳುವ ಪಶುಪತಿ ಮಹಾರಾಯನಂ ನೀನು ಕೇಳಿರುವೆಯಷ್ಟೆ. ಆ ರಾಜನ ಧರ್ಮಪತ್ನಿಯಾದ ಗುಣವತೀದೇವಿಯು ಗರ್ಭದಲ್ಲಿ ಶ್ರೀದೇವಿಯು ವರಪ್ರಸಾದದಿಂದ ಅವತರಿಸಿದ ಈ ಮಹಾರಾಜನು ಸಕಲ ವಿದ್ಯೆಗಳಂ ಕಲಿತು ಪಟ್ಟಕ್ಕೆ ಬಂದು ಸಾಕ್ಷಾತ್ ಇಂದ್ರನಂತೆ ಸೇನಾ ಸಮೇತನಾಗಿ ಬಂದು ಮಹಾಭಿಷಿಕ್ತನಾಗಿ ದೇಶಂಗಳಂ ಜಯಿಸಿಕೊಂಡು ಬರುವಾಗ ಕಳಿಂಗ ದೇಶದೊಳ್ ನಮ್ಮ ವಿಜಯವರ್ಮರಾಜನ ಕುಮಾರಿಯಾದ ಸೌಗಂಧಿಕಾದೇವಿಯು ವಿವಾಹಾರ್ಥವಾಗಿ ಸ್ವಯಂವರವಂ ಸಾರಿದಂತೆ ಆಗ ಅಲ್ಲಿ ಸಕಲ ದೇಶದ ಅರಸುಗಳು ಕೂಡಿರುವಾಗ ಸೌಗಂಧಿಕಾದೇವಿಯು ಎಂಟು ಪಣಂಗಳಂ ಸೂಚಿಸಿ, ಆ ಪಣಂಗಳಂ ತಿಳಿದು ರಾಜಕುಮಾರನು ಪರಿಶೋಧಿಸಿ ಪ್ರತಿಜ್ಞೆಯಂ ಮಾಡಿರುವನು. [illegible] ಸಕಲ ಭೂಪಾಲರೂ ಆಶ್ಚರ್ಯವೆಂದು ಹೇಳುತ್ತಿರಲು ಈ ಸತ್ಯವರರ್ಸ್ಯನು ತಾನು ಎಂಟು ಪಣಂಗಳಂ [illegible]ವೆನೆಂದು ಆ ರಾಜಸಭೆಯೊಳ್ [illegible], [illegible] ಅಸಾಧ್ಯವಾದ ಒಂದು ಆಯುಧ ಮಂಡಲವಂ [illegible] ಒಂದು ಸಣ್ಣವಾಗಿ ಎತ್ತಿ ತನ್ನ ಭುಜಬಲವಂ ತೋರಿ [illegible] ಬಳಿ [illegible] ಇಂದಿತ್ತು, [illegible] ಕೈಗಳಲ್ಲಿ ತುಂಬಿಕೊಂಡಿರುವೆನೆಂದು ಈ ನಗರ ಕುರಿತು ಬಂದಿದೆ.

(ಇನ್ನೂ ಇದೆ)

ಲೋಕೈಕವೀರಂಗೆ ಯಾವವರಾವು ಆಶ್ಚರ್ಯಮಾಗುವುವು? ನಮ್ಮ ಸೌಗಂಧಿಕಾದೇವಿಗೆ ಈತನೇ ಪತಿಯಾಗುವನು, ಸಂದೇಹವಿಲ್ಲ. ಅಭಿಚಾರಣೆ ನಮಗೆ ಬಹು ಸಮೀಪ ಬಂಧುವಾಗಿರುವಾಗ ವಿಚಾರವಂ ಗೈವುದೇಕೆ? ಈ ವೃತ್ತಾಂತವೆಲ್ಲವಂ ಈ ಮಹಾರಾಜನ ಮಂತ್ರಿಯಾದ ಸುಮತಿಯಿಂ ತಿಳಿದು ಬಂದಿರುವೆನು. ನಿನ್ನ ಪುಣ್ಯವು ಈಗ ಕರಗಿನೊಳ್ ಕಟ್ಟಿದ ಭಂಗವದಂತೆ ಫಲಿಸಿತು ಎಂದು ನುಡಿಯಲು, ಸುಗಂಧರಾಜ ಭೂಪಾಲನು ಮಹಾ ಪ್ರೀತಿಯಾದ ಆ ಕೆಳದಿಯ ಮಾತಂ ಕೇಳಿ ಎಲೈ ಸಖಿಯೆ! ಕಳಿಂಗರಾಜ ಪುತ್ರಿಗೂ ಈ ಕುಸುಮಲತೆಗೂ ಎಂತು ನಂಟತನವೆಂದು ಕೇಳಲು, ಆ ಸಖಿಯು ಎಲೈ ಸ್ವಾಮಿಯೇ ಈ ಕಳಿಂಗ ಅರಸಿಯಾಗ ಕಾಯಿಗಳ [illegible] ಲೋಚನಾದೇವಿಯು. ಅವಂಗಳೇರೆಯೂ ಅಕ್ಕತಂಗಿಯರೂ ಈ ನಂಟತನವು ನಿಮಗೋಸುಗವೇ ಮಾಡಿದಂತೆ ಘಟನೆಯಾಗಿರುವುದು. ಇನ್ನ ಮಾತುಗಳಂ ಸಾಕುಮಾಡಿ ವೇಗದಿಂ ಮಂಗಳಸ್ನಾನಕ್ಕೆ ಚಿತ್ತೈಸಬೇಕೆಂದು ವಿಜ್ಞಾಪನೆಯಂಗೈಯಲು, ಅಲ್ಲಿರುವ ಸಖಿಯರೆಲ್ಲರೂ ಕೂಡಿ, ಕುಸುಮಲತಾದೇವಿ, ಸುಗಂಧರಾಜೇಂದ್ರವೀರರಿಗೂ ಅಕ್ಷತೆಯನ್ನಿಟ್ಟು ಎಣ್ಣೆಯನ್ನೊತ್ತಿ ಪನ್ನೀರಿನಿಂ ಜಳಕವಂ ಮಾಡಿಸಿ, ವಸ್ತ್ರಾಭರಣಗಳಿಂದ ರೂಪವಂ ಅಲಂಕರಿಸಿ, ಆ ಬಳಿಕ ಶಾಸ್ತ್ರೋಕ್ತವಾಗಿ ಗಂಧರ್ವ ವಿವಾಹವಂ ಗೈದು ಸತಿಪತಿಗಳೀರ್ವರಿಗೂ ಮಧುರಾನ್ನಂಗಳಂ ಬಂಗಾರದ ತಟ್ಟೆಯೊಳ್ ಭೋಜನವಂ ಗೈಸಿ, ಶಯ್ಯಾಗೃಹವಂ ಅಲಂಕರಿಸಿ, ಭೋಗಯೋಗ್ಯಂಗಳಾದ ಗಂಧಪುಷ್ಪ ತಾಂಬೂಲಗಳನ್ನಿರಿಸಿ, ರಾಜೇಂದ್ರನೊಡನೆ ಎಲೈ ಸ್ವಾಮಿಯೇ! ಇದು ಶುಭ ಸಮಯವೆಂದು ಭಿನ್ನವಿಸಲಾಗ, ಸುಗಂಧರಾಜೇಂದ್ರನು ಭೋಗದೊಳಾಸಕ್ತನಾಗಿ ಸುಮತಿಯಂ ಕರೆದು ಎಲೈ ಸುಮತಿಯೆ! ಯಕ್ಷನು ಯಾವಾಗ ಬಂದು [illegible] ಹೇಳುವನೋ ಅದಂ ತಿಳಿಯಲೋಸುಗ ಜಾಗರೂಕನಾಗಿರೆಂದು ಹೇಳಿಕಳುಹಿ, ತಾನು ಶಯ್ಯಾಗೃಹವಂ ಸೇರಿ ಮಣಿಮಂಚದೊಳ್ ಕುಳಿತು, ಕುಸುಮಲತೆಯು ಒಪ್ಪಿಸುವ ಕಪ್ಪುರವೀಳ್ಯವಂ ಸವಿಯುತ, ಅವಳಂ ಮಾತುಮಾತಿಗೆ ಆನಂದಪಡಿಸುತ, ಮದನಸಾಮ್ರಾಜ್ಯಕ್ಕೆ ಪಟ್ಟವಂ ಕಟ್ಟಿದ ಮೊದಲು ವಿಚಾರಣೆಯಂತೆ ದಿನಕ್ರಮವಾಗಿ ವಿಲಾಸಂಗಳು ಅಧಿಕವಾಗಿ ಸುಖದಿಂದಿರುತಿರ್ದರು. (ಸಶೇಷ)

ಮೈಸೂರು ದೇಶದಲ್ಲಿ ಹಸುರು ಗೊಬ್ಬರವನ್ನು ಹಾಕುವಿಕೆ.

ಮೈಸೂರು ಸರ್ಕಾರದ ಕೃಷಿಶಾಸ್ತ್ರಜ್ಞರಾದ ಡಾಕ್ಟರ್ ಲೆಸ್ಲಿ ಸಿ. ಕೋಲ್ಮೆನ್‌ರವರು (Dr Leslie C. Coleman, M. A. Ph. D) ಮೈಸೂರು ಸಂಸ್ಥಾನದಲ್ಲಿ ರೈತರುಗಳಿಗೆ ಹಸಿರು ಗೊಬ್ಬರವನ್ನು ಹಾಕುವ ವಿಚಾರದಲ್ಲಿ ಬಹಳ ಸ್ವಾರಸ್ಯವಾದ ಒಂದು ಸಣ್ಣ ಪುಸ್ತಕವನ್ನು ಇಂಗ್ಲೀಷು ಭಾಷೆಯಲ್ಲಿ ಪ್ರಚುರಪಡಿಸಿರುತ್ತಾರೆ. ಕಳೆದ ಎರಡು ವರುಷಗಳಿಂದ ಡಾ॥ ಕೋಲ್ಮೆನ್‌ರವರು ಮೈಸೂರು ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ಸಂಚಾರಮಾಡಿ ಆಯಾ ಪ್ರದೇಶಗಳಲ್ಲಿ ಅನುಸರಿಸಲ್ಪಡುತ್ತಿರುವ ಕ್ರಮಗಳನ್ನೆಲ್ಲಾ ಚೆನ್ನಾಗಿ ಅವಲೋಕಿಸಿ ಪರೀಕ್ಷೆ ಮತ್ತು ವಿಚಾರಮಾಡಿ ತಿಳಿದುಕೊಂಡ. ಆ ಸಂಗತಿಗಳನ್ನೆಲ್ಲಾ ಮೇಲ್ಕಂಡ ಪುಸ್ತಕದಲ್ಲಿ ಅಡಕ ಮಾಡಿದ್ದಾರೆ. ಇದರಲ್ಲಿರತಕ್ಕ ವಿಷಯಗಳು ರೈತಾಪಿ ಜನರಿಗೆ ಬಹಳ ಪ್ರಯೋಜನಕರವಾದದ್ದೆಂದು ಹೇಳಬೇಕಾದ್ದೇ ಇಲ್ಲ. ಆದುದರಿಂದ ಮೇಲ್ಕಂಡ ಇಂಗ್ಲೀಷು ಪುಸ್ತಕದಲ್ಲಿ ಅಡಕವಾಗಿರುವ ಅತ್ಯಂತ ಉಪಯೋಗಕರವಾದ ಕೆಲವು ಅಂಶಗಳ ಕನ್ನಡ ಭಾಷಾಂತರವು ರೈತರುಗಳ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಲ್ಪಟ್ಟಿದೆ.

ಮೈಸೂರು ಸಂಸ್ಥಾನದಲ್ಲಿ ಭತ್ತದ ವ್ಯವಸಾಯವು ಹೆಚ್ಚಾಗಿರುವ ಪ್ರದೇಶದಲ್ಲೆಲ್ಲಾ ರೈತರು ಜಮೀನಿಗೆ ಹಾಕತಕ್ಕ ತೊಟ್ಟಿಗೆ ಗೊಬ್ಬರದ ಜತೆಗೆ ಹಸುರು ಗೊಬ್ಬರವನ್ನು ಸೇರಿಸುತ್ತಾರೆ. ಇದರಲ್ಲಿ ಎರಡು ಕ್ರಮಗಳುಂಟು. ಮೊದಲನೇದು, ಜಮೀನಿನ ಸುತ್ತ ಮುತ್ತಲಿರುವ ಮರಗಳ ಮತ್ತು ಸಮೀಪದಲ್ಲಿರುವ ಕಾಡುಗಳ ಮರಗಳ ಎಲೆಯನ್ನು ಕೊಯಿದು ತಂದು ಅದನ್ನು ಗೊಬ್ಬರವಾಗಿ ಹಾಕುವುದು; ಎರಡನೇದು, ಜಮೀನಿನಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆದು ಅವುಗಳ ಪೈರನ್ನು ಉತ್ತು ಬಿಡುವುದು. ಈ ಪೈಕಿ ಮೊದಲನೇ ಕ್ರಮವು ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಪ್ರಚಾರದಲ್ಲಿದೆ. ಎರಡನೆಯದಾದರೋ ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ರೂಢಿಯಲ್ಲಿರುವಂತೆ ತೋರುತ್ತದೆ.

ಹೊಂಗೆಮರದ ಸೊಪ್ಪು ಮತ್ತು ಕಡ್ಡಿಗಳನ್ನೇ ಕೂಡಿ ಹಾಕುವುದು ಸಾಧಾರಣವಾಗಿ ವಾಡಿಕೆಯಾಗಿದೆ. ಹೊಂಗೆ ಮರವು ಇಲ್ಲದಿದ್ದರೆ ಕಕ್ಕೆ ಕಗ್ಗಿ ಮುತ್ತುಗ ಬೇವಿನಸೊಪ್ಪು ಮತ್ತು ಕಡ್ಡಿಗಳನ್ನು ಕೂಡಿಯವರು. ತಂಗಡಿ ಮತ್ತು ಎಕ್ಕದ ಗಿಡಗಳು ಮತ್ತು ಉಗನಿ ಹುಲ್ಲನ್ನೂ ಉಪಯೋಗಿಸುವುದುಂಟು

ಗೊಬ್ಬರಕ್ಕಾಗಿ [illegible] ಸ್ಥಳಗಳಲ್ಲಿ [illegible] ಎಷ್ಟೋ ಹಾಗಿ [illegible] [illegible]

ಅವುಗಳನ್ನು ಕೊಯಿದುಹಾಕಲು ರೈತನು ಸ್ವಲ್ಪ ಶ್ರಮ [illegible] ಕೊಂಡರೆ ಸಾಕೆಂದು ಕೆಲವರು ಹೇಳಬಹುದು. ಅದು ಹಾಗಿಲ್ಲ. ಮರಗಳು ಇತರರ ಜಮೀನು [illegible] ಸರ್ಕಾರಿ ಕಾಡುಗಳಲ್ಲಿ ಇದ್ದದ್ದೇ ಆದರೆ ಎಲೆಯನ್ನು [illegible] ಕೊಯ್ಯಬೇಕಾದರೆ ರೈತನು ಗಾಡಿ ಒಂದಕ್ಕೆ ಎಂಟಾಣೆ [illegible] ಲೆಕ್ಕದಿಂದ ಒಂದು ರೂಪಾಯಿನ ವರೆವಿಗೂ ಬೆಲೆ ಕೊಡಬೇಕಾಗುವುದು. ಆದರೆ ಈ ಗೊಬ್ಬರವು ಬಹಳ ಅವಶ್ಯವಾದದ್ದೆಂದು ರೈತನು ತಿಳಿದುಕೊಂಡಿರುವುದರಿಂದ [illegible] ಕೇಳ್ಪಂದಂತೆ ಬೆಲೆಯನ್ನು ಕೊಡುವುದಲ್ಲದೆ ತನ್ನ [illegible] ನಿಂದ ಸುಮಾರು ಹತ್ತು ಹದಿನೈದು ಮೈಲಿ ದೂರದೇಶದ ಶ್ರಮವನ್ನೂ ಸೊಪ್ಪನ್ನು ಗಾಡಿಗಳಲ್ಲಿ ತುಂಬಿಕೊಂಡು ಹೋಗುತ್ತಾನೆ. ಇತರ ಆರಂಭ ಕಾರ್ಯಗಳ್ಯಾವವೂ [illegible] ದ ಕಾಲದಲ್ಲಿ ಈ ರೀತಿ ಗೊಬ್ಬರವು ಸಾಗಿಸಲ್ಪಡುವುದು. ಗೊಬ್ಬರವನ್ನು ಸಾಗಿಸಲು ತಗಲುವ ಗಾಡಿಬಾಡಿಗೆಯನ್ನು ರೈತನು ಲೆಕ್ಕಕ್ಕೆ ತರುವುದಿಲ್ಲ. ಆದರೆ ಸ್ವಂತ [illegible] ವಸಾಯಗಾರರಲ್ಲದ ಜಮೀನುದಾರರು ಸೊಪ್ಪಿನ ಗೊಬ್ಬರ [illegible] ಕೊಂಡು ಅದನ್ನು ಜಮೀನುಗಳ ಬಳಿಗೆ ಸಾಗಿಸುವುದಕ್ಕೂ [illegible] ಗವನ್ನು ಮುಟ್ಟಿಸಬೇಕಾಗುವುದು.

ಗೊಬ್ಬರಕ್ಕಾಗಿ ಎಲೆಗಳನ್ನು ಕೊಯಿಯುವಾಗ್ಗೆ ಯಾ[illegible]ವನ್ನು ಗೊಬ್ಬರಕ್ಕೆ ಉಪಯೋಗಿಸಬಹುದು, ಯಾವುದನ್ನು [illegible] ಯೋಗಿಸಕೂಡದು ಎಂಬುದನ್ನು ರೈತನು ಚೆನ್ನಾಗಿ [illegible] ವಿಸುವಂತೆ ಕಂಡುಬರುವುದಿಲ್ಲ. ಗೊಬ್ಬರಕ್ಕಾಗಿ ಉಪ[illegible]ಗಿಸಲ್ಪಡುವ ಅನೇಕ ಎಲೆಗಳು ಒಂದು ಬೆಳೆಯನ್ನು ತೆ[illegible] ಬಹುದಾದಷ್ಟು ಅಂದರೆ ಆರು ತಿಂಗಳ ಕಾಲದಲ್ಲಿ ಕೊಳೆ[illegible]ವುದಿಲ್ಲ. ಆದುದರಿಂದಲೇ ಎರಡನೆಯ ಬೆಳೆಗೆ ರೈತನು ಜಮೀ[illegible]ನ್ನು ಹದಮಾಡುವಾಗ್ಗೆ ಮೊದಲನೆಯ ಬೆಳೆಗೋಸ್ಕರ [illegible] ಹಾಕಿದ್ದ ಎಲೆ ಗೊಬ್ಬರದ ಪೈಕಿ ಕೊಳೆಯದೇ ಇದ್ದ [illegible] ಕಡ್ಡಿಗಳು ಸಿಕ್ಕುವುವು. ಇವುಗಳನ್ನೆಲ್ಲಾ ಅದು [illegible] ಹಾಕಿ ಉರಿಸಿ ಬಿಡುವರು.

ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಬೇರೆ [illegible] ಸೊಪ್ಪು ಮತ್ತು ಅವುಗಳ ಕಡ್ಡಿಗಳನ್ನು ಪರೀಕ್ಷಿಸಿ ನೋ[illegible]ದ್ದರಲ್ಲಿ, ಸೊಪ್ಪಿನಲ್ಲಿ ಕಡ್ಡಿಗಳಲ್ಲಿರುವುದಕ್ಕಿಂತ ಎರಡರ[illegible] ನೈಟ್ರೋಜನ್ (Nitrogen) ವಾಯುವೂ ಹೆಚ್ಚು [illegible] ಫಾರಿಕ್ ದ್ರಾವಕವೂ (Phosphoric Acid) ಮತ್ತು [illegible] ಮಭಾಗ ಸುಣ್ಣವೂ (Lime) ಇರುವುದಾಗಿ ತಿಳಿಯುಬ[illegible] ಬೇರೆ ಬೇರೆ ಸೊಪ್ಪು ಮತ್ತು ಕಡ್ಡಿಗಳಲ್ಲಿ ಪೈರುಗಳ [illegible]ರ ಪದಾರ್ಥಗಳು ಶೇಕಡ ಎಷ್ಟೆಷ್ಟಿವೆ ಎಂಬುದನ್ನು ಕೆ[illegible]ಳಗಿನ ಪಟ್ಟಿಯಿಂದ ಗೊತ್ತುಮಾಡಿಕೊಳ್ಳಬಹುದು:—

ಗೊಬ್ಬರದ ಹೆಸರು		ಸಾರಜನಕ	ಫಾಸ್ಫಾರಿಕ್ ಆಸಿಡ್	ಪೊಟ್ಯಾಷ್	ಸುಣ್ಣ
ಹೊಂಗೆ:—	ಸೊಪ್ಪು	1.54	0.14	0.49	1.16
	ಕಡ್ಡಿ	1.39	0.11	0.62	0.71
ತಂಗಡಿ:—	ಸೊಪ್ಪು	1.06	0.12	0.67	0.98
	ಕಡ್ಡಿ	0.11	0.06	0.36	0.35
ಎಕ್ಕ:—	ಸೊಪ್ಪು	0.20	0.12	0.37	0.42
	ಕಡ್ಡಿ	...	0.19	...	0.22

ರೈತರು ಗೊಬ್ಬರಕ್ಕಾಗಿ ಉಪಯೋಗಿಸತಕ್ಕ ಕಡ್ಡಿ[illegible] ಬಹಳ ಬಲಿತು ಹೋಗಿರುವುವು. ಅವು ಆರು ತಿಂಗಳು [illegible] ಜಮೀನಿನಲ್ಲಿದ್ದಾಗ್ಯೂ ಕೊಳೆಯುವುದಿಲ್ಲ. ಸುಲಭವಾಗಿ [illegible] ಳೆಯತಕ್ಕ ಸಜೀವ ಪದಾರ್ಥಗಳನ್ನು ಜಮೀನಿಗೆ ಒ[illegible] ಕೊಡುವುದೇ ಹಸರು ಗೊಬ್ಬರವನ್ನು ಹಾಕುವುದಕ್ಕೆ [illegible] ಮುಖ್ಯಾಂಶವಾಗಿದೆ. ಬಲಿತ ಕಡ್ಡಿಗಳು ಹೀಗೆ ಕೊಳೆ[illegible]ವುದಿಲ್ಲವಾದ್ದರಿಂದ ಅವುಗಳನ್ನು ಜಮೀನಿಗೆ ಹಾಕುವುದ[illegible] ಪ್ರಯೋಜನವೇನೂ ಇಲ್ಲ ಮತ್ತು ಕಡ್ಡಿಗಳನ್ನು ಕೂಡಿ[illegible] ಮಾಡಿದ ಕೆಲಸವು ನಿರರ್ಥಕವಾಗುತ್ತದೆ. ಎಳೆದಾದ [illegible]ಗಳು ಜಾಗ್ರತೆಯಾಗಿ ಕೊಳೆಯುವುದಲ್ಲದೆ ಬಲಿತ ಕಡ್ಡಿ[illegible]ಗಿಂತ ಹೆಚ್ಚು ರಸಾಯನಗಳನ್ನು ಒದಗಿಸಿಕೊಡುತ್ತವೆ.

ಹೆಚ್ಚು ಖರ್ಚಿಲ್ಲದೆ ಸುಲಭವಾಗಿ ಜಮೀನಿಗೆ ನೈಟ್ರೋಜನ್ (Nitrogen) ವಾಯುವ ದೊರಕುವಂತೆ [illegible] ವರೂ ಹಸರು [illegible] ಕೊಡುವ [illegible] [illegible]

ಷ್ಟು ನೈಟ್ರೋಜನ್ ವಾಯುವು ಇರುವುದೆಂದು ಹಿಂದಿನ ನಮೂದುಮಾಡಿದೆ. ಎಂದರೆ ಒಂದು ಗಾಡಿ ಸೊಪ್ಪಿನಿಂದ ಎರಡು ಗಾಡಿ ಕಟ್ಟಿಗೆ ಗೊಬ್ಬರದಿಂದ ಹೊಂದುವ ಪ್ರಯೋಜನವನ್ನು ಹೊಂದಬಹುದು. ಆದ್ದರಿಂದ ಗೊಬ್ಬರವನ್ನು ಉಪಯೋಗಿಸುವುದಕ್ಕೆ ಪ್ರತಿ ಬೆಟ್ಟ ಸೊಪ್ಪನ್ನೂ ಕಡಿದು ಕಟ್ಟಿಯನ್ನೂ ಕೂಡಿ...

ಯಾವ ಯಾವ ಸೊಪ್ಪಿನಲ್ಲಿ ಗೊಬ್ಬರಕ್ಕಾಗಿ ಉಪಯೋಗಿಸುವ ಪದಾರ್ಥಗಳು ಶೇಕಡ ಎಷ್ಟೆಷ್ಟಿವೆಯೆಂಬುವುದು ಈ ಕೆಳಗಣ ಪಟ್ಟಿಯಿಂದ ತಿಳಿದುಕೊಳ್ಳಬಹುದು.—

[illegible]	[illegible]	[illegible]	[illegible]	[illegible]
ಕುದುರೆ ...	1.51	0.14	0.49	1.15
[illegible] ...	1.06	0.12	0.57	0.88
[illegible] ...	0.20	0.12	0.57	0.42
[illegible] ...	0.61	0.15	0.60	0.58
[illegible] ...	5.29	0.15	...	0.62
[illegible] ...	5.11	0.15	...	0.58
[illegible] ...	3.01	0.15	...	0.81
[illegible] ...	5.57	0.16	...	0.91
[illegible] ...	1.77	0.22	...	1.59
[illegible] ...	2.77	0.11	...	1.46
[illegible] ...	0.80	0.14	0.47	0.63

...ಸಂಟಾನ ಮತ್ತು ಉಗನಿ ಹಂಬುಗಳು ಒಳ್ಳೆಯ ಹಸುರು ಗೊಬ್ಬರಗಳೆಂದು ಮೇಲಿನ ಪಟ್ಟಿಯಿಂದ ಗೊತ್ತಾಗುತ್ತದೆ. ...ಟಾನ ಸೊಪ್ಪಿನಲ್ಲಿರುವಷ್ಟು ಮರದ ಉಪ್ಪು ಮತ್ತಾವ ಸೊಪ್ಪಿನಲ್ಲೂ ಇರುವುದಿಲ್ಲ. ಇತರ ಸಸ್ಯಾಹಾರಗಳೂ ಅಲ್ಪ ಪ್ರಮಾಣವಾಗಿ ಇದ್ದೇ ಇರುತ್ತವೆ ಆದ್ದರಿಂದ ರೈತರು ಈ ಸೊಪ್ಪು ಗೊಬ್ಬರಕ್ಕಾಗಿ ಉಪಯೋಗಿಸಬಹುದು. ಸೊಪ್ಪನ್ನು ...ಪ್ಪನೇ ಕೊಡಿಯಲು ಸಾಧ್ಯವಲ್ಲದಿದ್ದರೆ ಒಬ್ಬ ಗಿಡವನ್ನೇ ...ಷ್ಟು ಬೂದಿಯನ್ನು ಇತರ ಸೊಪ್ಪುಗಳೊಡನೆ ಬೆರಸಿ ...ಯೋಗಿಸಬೇಕು. ಹೀಗೆ ಗಿಡವನ್ನೇ ಸುಡುವುದರಿಂದ ...ನೈಟ್ರೋಜನ್ ವಾಯುವು ಸ್ವಲ್ಪ ವ್ಯರ್ಥವಾದಾಗ್ಯೂ ಬೂದಿ... ಶೇಕಡ ೧೫ ಭಾಗ ಮರದ ಉಪ್ಪು (Potash), ... ಭಾಗ ಫಾಸ್ಫಾರಿಕ್ ದ್ರಾವಕವೂ (Phosphoric-...l) ಇರುವುದರಿಂದ, ಉತ್ತಮವಾದ ಗೊಬ್ಬರವೇ ಸಿಕ್ಕುತ್ತಿತು.

ಉಗನಿ ಹಂಬು ಅನೇಕ ಕಡೆಗಳಲ್ಲಿ ಯಥೇಚ್ಛವಾಗಿ ...ಯುವುದು. ಸಂಟ್ಹನದ ಕೆಲವು ಪ್ರದೇಶಗಳಲ್ಲಿ ಬತ್ತ ... ಬೆಳೆಯುವುದಕ್ಕೆ ಜಮೀನುಗಳಿಗೆ ಈ ಹಂಬನ್ನು ಗೊಬ್ಬರ...ಗಿ ಹಾಕುವರು ಮತ್ತೆ ಕೆಲವು ಕಡೆಗಳಲ್ಲಿ ಇವರ ಹಂಬ... ಕಂತೆ ಮೂಟೆ ಮೊದಲಾದುವುಗಳನ್ನು ಕಟ್ಟಲು ಹಗ್ಗ...ಗಿ ಉಪಯೋಗಿಸುವರು. ಇಂತಹ ಕಡೆಗಳಲ್ಲಿ, ಇದು ...ತ್ತಮವಾದ ಹಸುರು ಗೊಬ್ಬರವಾಗುವುದೆಂಬುದು ರೈತ... ತಿಳಿಯದೇ ಇರಬಹುದೆಂದು ತೋರುತ್ತದೆ. ಇನ್ನು ...ಮುಂದೆ ರೈತರೆಲ್ಲರೂ ಈ ಹಂಬನ್ನು ಹೊರೆಗಳನ್ನು ಕಟ್ಟ...ವುದಕ್ಕೆ ಉಪಯೋಗಿಸಿ ವ್ಯರ್ಥ ಮಾಡದೆ ಗೊಬ್ಬರಕ್ಕಾಗಿ ಉಪ...ಯೋಗಿಸುವುದು ಒಳ್ಳೆಯದು.

ಹೊಂಗೆಸೊಪ್ಪು ಅತ್ಯುತ್ತಮವಾದ ಹಸುರು ಗೊಬ್ಬರ...ದು ಜನರು ರೂಢಿಯಾಗಿ ಹೇಳುವರು. ರಸಾಯನ ಶಾಸ್ತ್ರಜ್ಞರ ಶೋಧನೆಯಲ್ಲೂ ಇದು ನಿಜವೆಂದು ತಿಳಿಯು...ವದೆ.—ವ್ಯ. ಗೆ.

ಸರ್ಕಾರದಿಂದ ಅಪ್ಪಣೆ.

ದೇವಸ್ಥಾನಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ...ರ್ಯವಾದ ಕಾರ್ಯಕ್ಕಾಗಿ ಬಡ್ಡಿಯ ಮೊಬಲಗನ್ನು ...ಪಯೋಗಿಸಬೇಕೆಂಬ ಉದ್ದೇಶದಿಂದ ಬಿಡಲಾಗಿದ್ದ ...ವ ಮೊಬಲಗುಗಳು ಮಾತ್ರ ಪುದುವಟ್ಟು ಫಂಡುಗಳಾಗಿ ...ವಿಸಲ್ಪಡುವುದಕ್ಕೆ ಬಾಗಿರುತ್ತವೆ.

ಒಂದು ದೇವಸ್ಥಾನದ ರಿಪೇರಿ ಕೆಲಸಕ್ಕಾಗಲಿ ಅಥವಾ ...ವಸ್ಥಾನದ ಉಪಯೋಗಕ್ಕಾಗಿ ಒಂದು ರಥವನ್ನು ಒದಗಿ... ...ಸುವುದಕ್ಕಾಗಲಿ ಉಪಯೋಗಿಸಲ್ಪಡುವ ಮೊಬಲಗುಗಳು ... ...ರವೇ ಖರ್ಚುಗಳಿಗೆ ಬರುವುದರಿಂದ ಪುದುವಟ್ಟು ಫಂ...ಗಿ ಭಾವಿಸಲ್ಪಡಲಾಗದು. ಆದರೆ, ಭಕ್ತರು ಮೊಬಲ...ನ್ನು ನಾಮಕರ್ತರ ... ಖಾತೆಯಲ್ಲಿ, ಅದನ್ನು ಸೇವಿಂಗ್ಸ್ ...ಬ್ಯಾಂಕಿನಲ್ಲಿ ... ಇಟ್ಟು, ಅದರ ಮೊಬಲ...ನ್ನು ... ಕಾಯಂ

ಮೈಸೂರ್ ಗೆಜೆಟಿ ಸಂಗ್ರಹವು.

ಕಕ್ಕಾಗಿ ವಾಪಸು ತೆಗೆದುಕೊಳ್ಳಬೇಕೆಂಬ ಷರತನ್ನು ನಮೂದಿಸಿದರೆ, ಅಂತಹ ಷರತ್ತುಗಳ ಮೇಲೆ ಸದರಿ ಮೊಬಲಗನ್ನು ತೆಗೆದುಕೊಳ್ಳತಕ್ಕ ವಿಷಯದಲ್ಲಿ ಯಾವ ಅಭ್ಯಂತರವೂ ಇಲ್ಲ.

ರಜದ ಮೇಲಿದ್ದ ಡಿ| ಕಮಿಷನರ್ ಮಿ|| ವೆಂಕಟೇಶರಾಯರು ಉದ್ಯೋಗದ ಮೇಲೆ ಬರಮಾಡಲ್ಪಟ್ಟು, ಮಿ|| ಬಿ ಚೊಕ್ಕಣ್ಣನವರು ಬೇರೆ ಕೆಲಸದ ಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಅ|| ಸರ್ಜನ್ ಮಿ|| ಎನ್. ರಂಗಾಚಾರ್ಯರಿಗೆ ೧೯೧೦ ನೇ ಜನವರಿ ತಾ|| ೨೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಸೀನಿಯರ್ ಅ|| ಕಮಿಷನರ್ ಮತ್ತು ಅಂಡರ್ ಸೆಕ್ರೆಟರಿ ಮಿ|| ಕೆ. ಮೊಘಲ್, ಬಿ. ಎ. ಯವರು ೧ ನೇ ತರಗತಿಯ ಮ್ಯಾಜಿಸ್ಟ್ರೇಟರಾಗಿ ಮಾಡಲ್ಪಟ್ಟು ಕೋಲಾರದ ಗೋಲ್ಡ್‌ಫೀಲ್ಡ್ಸಿನ ಅ|| ಕಮಿಷನರ್ ಮತ್ತು ೧ ನೇ ತ|| ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ.

ದಿವಾನರ ಪ್ರೈವೆಟ್ ಸೆಕ್ರೆಟರಿಯಾಗಿರಾದ ಮಿ|| ಬಿ ಗೋವಿಂದರಾಯರು ೨ ನೇ ಗ್ರೇಡ್ ... ನೇ ತ|| ಅ|| ಕಮಿಷನರಾಗಿ ಶ್ರೀಮನ್ಮಹಾರಾಜರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಅ|| ಕಮಿಷನರ್ ಮಿ|| ಪಿ ಎಸ್ ... ರವರು ಕೋಲಾರದ ಡಿಸ್ಟ್ರಿಕ್ಟ್ ಮತ್ತು ಟ್ರೆಜರಿ ಛಾರ್ಜನ್ನು ಡಿ| ಕಮಿಷನರ್ ಮ|| ಸಿ ಶ್ರೀಕಂಠೇಶ್ವರಯ್ಯರ್ ಬಿ. ಎ., ಬಿ. ಎಲ್., ರವರಿಂದ ೧೯೧೦ ನೇ ಫೆಬ್ರವರಿ ತಾ|| ೧೨ ರ ಅಪರಾಹ್ಣದಲ್ಲಿ ವಹಿಸಿಕೊಂಡರು

ಡಿ| ಕಮಿಷನರ್ ಮಿ|| ಕೆ. ಎಲ್. ದೊರೆಸ್ವಾಮಿ ಅಯ್ಯರ್‌ರವರು ರೆವಿನ್ಯೂ ಕಮಿಷನರ್ ಛಾರ್ಜನ್ನು ರಾಜಸಭಾಭೂಷಣ ದಿವಾನ್ ಬಹದ್ದೂರ್ ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರಿಂದ ೧೯೧೦ ನೇ ಫೆಬ್ರವರಿ ತಾ|| ೧೧ ರ ಪೂರ್ವಾಹ್ಣದಲ್ಲಿ ವಹಿಸಿಕೊಂಡರು.

ಡೆ| ಕಮಿಷನರ್ ಮಿ|| ಎಂ. ಶಾಂತರಾಜಅರಸಿನವರು ಮೈಸೂರ ಡಿಸ್ಟ್ರಿಕ್ಟ್ ಮತ್ತು ಟ್ರೆಜರಿ ಛಾರ್ಜನ್ನು ಸೀನಿಯರ್ ಅ|| ಕಮಿಷನರ್ ಮಿ|| ಕೆ. ಕೃಷ್ಣಯ್ಯರ್‌ರವರಿಗೆ ೧೯೧೦ ನೇ ಫೆಬ್ರವರಿ ತಾ|| ೬ ರ ಅಪರಾಹ್ಣದಲ್ಲಿ ವಹಿಸಿಕೊಟ್ಟರು.

ಮೈಸೂರ ಅಫೀಷಿಯೇಟಿಂಗ್ ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಸಿ. ಶ್ರೀಕಂಠೇಶ್ವರಯ್ಯರ್ ಬಿ ಎ, ಬಿ. ಎಲ್., ರವರು ಎಕ್ಸೈಜು ಕಮಿಷನರ ರೆವಿನ್ಯೂ ... ಜನರಲ್‌ರವರ ಜಾಯಿಂಟ್ ... ... ಆಫೀಸಿಯೇಟಿಂಗ್ ರಿಜಿಸ್ಟ್ರಾರ ಮತ್ತು ... ಕಮಿಷನರ ಅಧಿಕಾರಗಳನ್ನು ೧೯೧೦ ನೇ ಫೆಬ್ರವರಿ ತಾ|| ೧೯ ರ ಪೂರ್ವಾಹ್ಣದಲ್ಲಿ ವಹಿಸಿಕೊಂಡರು

ಕೋಲಾರದ ಗೋಲ್ಡ್‌ಫೀಲ್ಡ್ಸಿನ ಸೀನಿಯರ್ ಅ|| ಕಮಿಷನರ್ ಮಿ|| ಕೆ ಮೊಘಲ್, ಬಿ ಎ, ಯವರು ಸಾಕ್ಷಿಗಳ ಹೇಳಿಕೆಯನ್ನು ಕನ್ನಡ ಭಾಷೆಯಲ್ಲಿ ಸ್ವಹಸ್ತಾಕ್ಷರದಲ್ಲಿ ತೆಗೆದುಕೊಳ್ಳತಕ್ಕದ್ದು.

ತುರ್ಕಿ ಇಟಲಿಗಳ ಯುದ್ಧವು.

ಫೆಬ್ರವರಿ ತಾ|| ೨೦ — ... ... ಕೂಡಿದ್ದ ... ಜನ ಮೆಂಬರುಗಳಲ್ಲಿ ... ಜನರ ... ಉಳಿದವರೆಲ್ಲರೂ ಏಕವಾಕ್ಯತೆಯಿಂದಲೂ, ಕೋಲಾಹಲದಲೂ ಟ್ರಿಪೋಲಿಯಲ್ಲಿ ಇಟಲಿಯವರ ಸ್ವಾತಂತ್ರ್ಯವನ್ನು ಸ್ಥಾಪಿಸತಕ್ಕದೆಂದು ನಿರ್ಧರಿಸಿದರು ಆ ದಿವಸ ಇಟಲಿ... ... ಸಿಗಳೆಲ್ಲರೂ ಹಬ್ಬದಿವಸವಾಗಿ ಪರಿಗಣಿಸಿ ... ... ಗಳನ್ನು ಹಿಡಿದು ಪಾರ್ಲಿಮೆಂಟ್ ಸಭೆಯ ... ... ಕೋಲಾಹಲವನ್ನು ಮಾಡಿದಲ್ಲದೆ ... ... ಉತ್ಸವದಿಂದ ಮೆರೆಯಿಸಿದರು

ತಾ|| ೨೧.— ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಂಡು ತಮ್ಮ ಅಧಿಕಾರವನ್ನು ಸ್ಥಾಪಿಸಿದುದರ ಸಂಬಂಧವಾದ ಬಿಲ್ಲನ್ನು ಸೆನೆಟಿನವರು ಬಹುಕೋಲಾಹಲದ ... ... ದಿನ ಆ ಮೇಲೆ ... ... ಮತ್ತು ... ... ಗಳನ್ನು ಬಹೋತ್ಸವದಿಂದ ಬಹುಮಾನಿಸಿದರು ... ...

ಯಿಂದ ತಪ್ಪಿಸಿಕೊಂಡಿರುವರು. ದರ್ನಾದಲ್ಲಿರುವ ತುರ್ಕಿಯವರ ಫಿರಂಗಿಯ ನಾವೆಗಳು ಕೂಡಲೆ ತಪ್ಪಿಸಿ ಶರಣಾಗತರಾಗಬೇಕೆಂದು ಇಟಲಿಯವರ ಪಲ್ಟನೋರ್ ಮತ್ತು ಗರಿಬಾಲ್ಡಿ ಹಡಗುಗಳು ಅಪೇಕ್ಷಿಸಿದುವು. ಗವರ್ನರು ನಿರಾಕರಿಸಿದುದನ್ನು ಮಾತುಕತೆಯಲ್ಲಿ ಇಟಲಿಯವರು ದಡದಲ್ಲಿದ್ದ ಫಿರಂಗಿಗಳ ಸ್ಥಾನಗಳನ್ನು ಮುಳುಗಿಸಿಬಿಟ್ಟರು. ಅನೇಕ ಕಟ್ಟಡಗಳು ನಾಶಪಡಿಸಲ್ಪಟ್ಟು ೩೦ ಜನರು ಕೊಲ್ಲಲ್ಪಟ್ಟರು. ಜನರು ಬಹು ಭಯಗ್ರಸ್ತರಾಗಿ ಓಡಿಹೋದರು. ಸ್ವರಾಷ್ಟ್ರಾಧಿಕಾರಿಗಳೂ ಅಲ್ಲಿಯ ಸ್ಥಿತಿಯನ್ನು ಸರಿಪಡಿಸಲಾರದ್ದಕ್ಕಾಗಿ ಹೊರಟರು. ಬೇರೂಟು ಕೋಟೆಗಳಲ್ಲೂ, ಅಲ್ಲದೆ ಮತ್ತು ಟಾರ್ಪೆಡೋ ದೋಣಿಗಳಲ್ಲೂ ಇದ್ದ ಜನರು ಇಟಲಿಯವರು ಹೊಡೆದ ಫಿರಂಗಿಗಳಿಗೆ ಪ್ರತಿಯಾಗಿ ಗುಂಡುಗಳನ್ನು ಹೊಡೆದರು. ಇಟಲಿಯ ಯುದ್ಧನಾವೆಗಳು ಅಲ್ಲಿಲ್ಲ ಯುದ್ಧನಾವೆಯನ್ನು ... ... ದೋಣಿಯನ್ನು ನೀರಿನಲ್ಲಿ ಮುಳುಗಿಸಿ ... ಗೊತ್ತಿಲ್ಲದ ಸ್ಥಳಕ್ಕೆ ಹೊರಟವು. ಇ... ... ಜನರು ಸತ್ತರು ಮತ್ತು ೧೦೦ ಜನರು ಗಾಯಪಟ್ಟರು ... ಫಿರಂಗಿಯೇಟುಗಳಿಂದ ಭೀತರಾದ ಜನರು ಸರ್ಕಾರಿಯ ಆಯುಧಶಾಲೆಗೆ ನುಗ್ಗಿ ಆಯುಧಗಳನ್ನೆಲ್ಲ ತೆಗೆದುಕೊಂಡು ಕದನಕ್ಕೆ ನುಗ್ಗಿದರು. ಈ ಗೊಂದಲದಲ್ಲಿ ಇಬ್ಬರು ಕ್ರಿಸ್ತರ ಸಮೇತ ೩೦ ಜನರು ಕೊಲ್ಲಲ್ಪಟ್ಟರು ಮತ್ತು ೬೦ ಜನರು ಗಾಯಪಟ್ಟರು. ಬೇರೂಟಿನ ಸ್ಥಿತಿಯು ಸಮಾಧಾನಕರವಾಗಿರುತ್ತದೆ, ಮತ್ತು ಜನರು ಶಾಂತಚಿತ್ತರಾಗಿರುತ್ತಾರೆ. ... ... ಗುರಿಮಾಡಲ್ಪಡದ ಮನೆಯ ... (... ...) ವು ಅನುಷ್ಠಾನಕ್ಕೆ ತರಲ್ಪಟ್ಟಿರುವುದೆಂದು ಪ್ರಕಟಿಸಲ್ಪಟ್ಟಿತು. ಬೇರೂಟಿನಲ್ಲಿ ೩೦ ಜನರು ಕೊಲ್ಲಲ್ಪಟ್ಟು ೯೦ ಜನರು ಗಾಯಪಟ್ಟರೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಈ ಅನಾಹುತವೆಲ್ಲವೂ ತುರ್ಕಿಯ ... ಕೆಲಸಗಾರರಲ್ಲೂ ಸ್ತ್ರೀ ಪುರುಷರಲ್ಲೂ ನಡೆದಿರುತ್ತದೆ. ಇಟಲಿಯವರ ದಾಂಧಲೆಯು ಇಂಟರ್‌ನ್ಯಾಷನಲ್ ಲಾ ಅಂದರೆ ಎಲ್ಲಾ ರಾಜ್ಯದವರೂ ಸೇರಿ ಮಾಡಿಕೊಂಡಿರುವ ಒಡಂಬಡಿಕೆಗೆ ವಿರುದ್ಧವಾಗಿರುತ್ತದೆ ಎಂದು ತುರ್ಕಿಯವರು ಪರರಾಜ್ಯದವರಿಗೆ ತಿಳಿಸಿರುತ್ತಾರೆ. ನಾಗರೀಕರ ಪದಾರ್ಥಗಳನ್ನು ಅಪಹರಿಸುವುದಕ್ಕಾಗಿಯೂ, ತುರ್ಕಿಯವರ ಯುದ್ಧನಾವೆಗಳನ್ನು ನಾಶಪಡಿಸುವುದಕ್ಕಾಗಿಯೂ ಬೇರೂಟಿಗೆ ಯುದ್ಧನಾವೆಗಳು ಕಳುಹಲ್ಪಟ್ಟವೆಂದು ರೋಮಿನಲ್ಲಿ ಸರ್ಕಾರದವರು ಪ್ರಸಿದ್ಧಪಡಿಸಿರುತ್ತಾರೆ. ಇಟಲಿಯವರು ಪಡಿಯಾ ಸಮುದ್ರದಲ್ಲೂ ತಮ್ಮ ಕೃತ್ಯಗಳನ್ನು ನಡೆಸುವ ಪಕ್ಷದಲ್ಲಿ ದಾರ್ದನೆಲ್ಸ್ ಮಾರ್ಗವನ್ನು ತಡೆದು ತುರ್ಕಿಯಲ್ಲಿರುವ ಇಟಲಿಯವರನ್ನೆಲ್ಲಾ ಹೊರಗೆ ಕಳುಹಲು ನಿರ್ಧರಿಸುವುದಾಗಿ ತುರ್ಕಿಯವರು ಪರರಾಜ್ಯದವರಿಗೆಲ್ಲಾ ತಿಳುಹಿಸಿರುತ್ತಾರೆ.

ಫೆಬ್ರವರಿ ತಾ|| ... — ... ... ಮತ್ತು ... ... ನಿರ್ಧರಿಸಿರುತ್ತಾರೆ.

ತಾ|| ... — ಇಟಲಿಯವರ ... ... ತಾ|| ... ... ಸತ್ತು ಮತ್ತು ಗಾಯ... ... ... ಮತ್ತು ... ... ಅಲ್ಲಿಲ್ಲ ಯುದ್ಧನಾವೆಯನ್ನು ... ... ದೋಣಿಯನ್ನು ಬೇರೂಟಿನ ... ... ಅಲ್ಲಿಲ್ಲ ಯುದ್ಧನಾವೆಯೂ ... ... ಅಡ್ಮಿರಲ್ ... ... ತಿಳಿಸಿರುತ್ತಾನೆ. ... ...

ತುರ್ಕಿ—ಇಟಲಿಗಳ ಯುದ್ಧವನ್ನು ಕೊನೆಗಾಣಿಸುವ ವಿಚಾರದಲ್ಲಿ ಪರರಾಜ್ಯದವರು ಪ್ರಯತ್ನಿಸುವಾದರೆ ಅವರ ಜೊತೆ ತಾನೂ ಸೇರಲು ಸಿದ್ಧವಾಗಿರುತ್ತೇನೆಂದು ಫ್ರೆಂಚ್ ರಾಜ್ಯವು ತಿಳಿಸಿರುತ್ತದೆ

ತಾ|| ೨೪ —ಇಟಲಿಯವರ ಗುಂಡಿನೇಟುಗಳಿಂದ ಯುದ್ಧನಾವೆಯಲ್ಲಿದ್ದವರಲ್ಲಿ ೮೧ ಜನರು ಕೊಲ್ಲಲ್ಪಟ್ಟರು ಮತ್ತು ೨೦ ಜನರು ಗಾಯವಡೆದರು, ಅಲ್ಲದೆ ಪಟ್ಟಣದ ನಿವಾಸಿಗಳಲ್ಲಿ ೫೩ ಜನರು ಮಡಿದು ೭೪ ಜನರು ಗಾಯವಡೆದರು ಎಂದು ಬೇರೂಟಿನಿಂದ ವರ್ತಮಾನ ಬಂದಿರುತ್ತದೆ. ತಾ|| ೨೩ ರಲ್ಲಿ ಲ್ಹಾ ಪಾವ್ಸ್ ಎಂಬಲ್ಲಿ ಕದನವು ನಡೆಯಿತು ಇಟಲಿಯವರು ಮೆರ್ಗೆಬ್ ಎಂಬಲ್ಲಿಗೆ ಸಂಧ್ಯಾ ಸಾಯಂಕಾಲದವರೆಗೂ ಬಡಿದಾಡಿ ಅದನ್ನು ತಮ್ಮ ಸ್ವಾಧೀನಮಾಡಿಕೊಂಡರು ತುರ್ಕಿಯವರೂ ಅರಬ್ಬಿಯವರೂ ಅದುವರೆಗೂ ಯುದ್ಧಮಾಡಿ ಬಹು ನಷ್ಟವನ್ನು ಅನುಭವಿಸಿ ಸತ್ತವರನ್ನೂ, ಗಾಯವಡೆದವರನ್ನೂ ಯುದ್ಧರಂಗದಲ್ಲೇ ಬಿಟ್ಟು ಹಿಂತಿರುಗಿದರು ಈ ಕದನದಲ್ಲಿ ಇಟಲಿಯವರ ಕಡೆ ೧೧ ಜನರು ಸತ್ತರು ಮತ್ತು ೪೨ ಜನರು ಗಾಯವಡೆದರು.

ತುರ್ಕಿ—ಇಟಲಿ ಮತ್ತು ತುರ್ಕಿರಾಜ್ಯಗಳಿಗೆ ಸಮಾಧಾನವನ್ನುಂಟುಮಾಡಲು ರಷ್ಯಾರಾಜ್ಯವು ಹೊಸ ರಚನೆಗಳನ್ನು ಕೊಟ್ಟಿರುವುದಲ್ಲದೆ, ಇಟಲಿಯವರು ತಮ್ಮ ಪ್ರಭುತ್ವವನ್ನು ಟ್ರಿಪೋಲಿಯಲ್ಲಿ ಸ್ಥಿರಪಡಿಸಿಕೊಂಡು ಮತ್ತಾವ ಕಡೆಯಿಂದ ಕದಲಿಸಿಕೊಳ್ಳುವರೆಂಬುದನ್ನು ತಿಳಿದು ಇತರ ೪ ರಾಜ್ಯಗಳು ಕೂಡ ಆಲೋಚಿಸುವುದಾಗಿ ತಿಳಿಸಿರುತ್ತದೆ ರಷ್ಯಾರಾಜ್ಯವು ಕನಿಕರ ವಿಚಾರದಲ್ಲಿ ಮುಂದುವರಿಯುವುದರಿಂದ ಅಷ್ಟು ಸಾಧ್ಯವಾಗುತ್ತದೆಂಬ ಭಾಗದಲ್ಲಿ ಕಾನಸ್ಟಾಂಟಿನೋಪಲ್ಲಿನ ಜನರಿಗೆ ನಂಬುಗೆಯು ಸಾಲದು ಟ್ರಿಪೋಲಿಯನ್ನು ಸ್ವಾಧೀನಮಾಡಿಕೊಂಡ ಬಗೆಗೆ ಇಟಲಿಯ ಪಾರ್ಲಿಮೆಂಟಿನವರು ಒಂದು ಬಿಲ್ಲನ್ನು ಮಾಡಿರುವುದು ಒತ್ತಾಯಕ್ಕೆ ದೊಡ್ಡ ಅಡಚಣೆಯಾಗಿರುತ್ತದೆ ಪ್ಯಾಲಸ್ಟೈನಿನಿಂದ ಇಟಲಿಯವರನ್ನು ಓಡಿಸಬೇಕೆಂದು ನಿರ್ಧರವಾಗಿರುವುದರಿಂದ ೩೦೦೦–೩೦೦೦ ಜನರು ಊರನ್ನು ಬಿಟ್ಟು ಹೋಗಬೇಕಾಗಿ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ|| ೪ ನೆಯ ಸೋಮವಾರ

ಭರತಖಂಡದ ರಾಜ್ಯಾಡಳಿತದ ವಿಚಾರವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯು

ದಿಲ್ಲಿಯ ದರ್ಬಾರಿನ ದಿವಸ ಚಕ್ರವರ್ತಿಯವರ ಅಪ್ಪಣೆಯ ಮೇರೆಗೆ ಭರತಖಂಡದ ರಾಜ್ಯಪರಿಪಾಲನೆಯ ವಿಚಾರವಾಗಿ ಪ್ರೆಸ್ ರಾಯಿಟರ್ ಪ್ರಕಟನಪತ್ರಿಕೆಯಲ್ಲಿ ಕಂಡ ಕೆಲ ಅಂಶಗಳನ್ನು ಕುರಿತು ಕಳೆದ ಫೆಬ್ರುವರಿ ತಾ|| ೨೧–೨೨ ರಲ್ಲಿ ಇಂಗ್ಲೆಂಡಿನಲ್ಲಿ ಸೇರಿದ್ದ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಚರ್ಚೆಯು ನಡೆಯಿತು. ಆಗ ಲಾರ್ಡ್ ಕರ್ಜನ್ನರವರು ಕಲಕತ್ತಾಪಟ್ಟಣವನ್ನು ತಪ್ಪಿಸಿ ದಿಲ್ಲಿಯನ್ನು ರಾಜಧಾನಿಯನ್ನಾಗಿ ಮಾಡಿದ ಮತ್ತು ಬಂಗಾಳಾ ವಿಭಜನವನ್ನು ತಪ್ಪಿಸಿದ ನಿರ್ಬಂಧವನ್ನು ಬಹುವಾಗಿ ಖಂಡಿಸಿ, ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಮತ್ತು ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರೂಯವರು ಭರತಖಂಡದ ವಿಚಾರದಲ್ಲಿ ಸ್ವಾನುಭವವಿಲ್ಲದೆ ಮತ್ತು ಹಿಂದೆ ಭರತಖಂಡದ ವೈಸ್ರಾಯರಾಗಿದ್ದು ವಿಶೇಷ ಅನುಭವಸ್ಥರಾಗಿರುವ ಲಾರ್ಡ್ ಲ್ಯಾನ್ಸ್‌ಡೌನರ ಕೂಡವಾಗಲಿ, ತಮ್ಮ ಕೂಡವಾಗಲಿ ಅಥವಾ ಮತ್ತಾರ ಕೂಡವಾಗಲಿ ಆಲೋಚಿಸದೆ ಏರ್ಪಾಡುಗಳನ್ನು ಮಾಡಿಕೊಂಡು ಚಕ್ರವರ್ತಿಯವರ ಮುಖೇನ ಪ್ರಕಟಿಸಿರುವುದರಿಂದ ಆ ಪ್ರಕಟನೆಗೆ ಪ್ರಾಶಸ್ತ್ಯ ಉಂಟಾಯಿತೆಂದೂ, ಅದರಲ್ಲಿ ಕಂಡ ಪ್ರತಿಯೊಂದಂಶವೂ ಖಂಡಿಸಲ್ಪಡತಕ್ಕದ್ದಾಗಿರುವುದೆಂದೂ, ನವಾಬ್ ಸಲೀಮುಲ್ಲಾಯವರು ಚಕ್ರವರ್ತಿಯವರಿಂದ ಪ್ರಶಸ್ತಿಯ ಮರ್ಯಾದೆಯನ್ನು ಪಡೆದುಕೊಳ್ಳುವ ಕಾಲದಲ್ಲಿ, ವಂಗಭಂಗವನ್ನು ಚಕ್ರವರ್ತಿಯವರು ತಪ್ಪಿಸಿಬಿಟ್ಟ ವಿಷಯವು ತಮ್ಮ ಹೃದಯವನ್ನು ಈಟಿಯಿಂದ ಚುಚ್ಚಿದಂತೆ ತೋರಿತೆಂದು ಹೇಳಿದುದರಿಂದ ಚಕ್ರವರ್ತಿಯವರು ಮಾಡಿದ ಏರ್ಪಾಟು ಅಕ್ರಮವೆಂಬುದು ವ್ಯಕ್ತವಾಗುತ್ತದೆಂದೂ ಪ್ರಸ್ತಾಪಿಸಿದರು. ಕಲಕತ್ತಾಪಟ್ಟಣವನ್ನು ಬಿಟ್ಟು ದಿಲ್ಲಿಯ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡುವ ವಿಚಾರವು ಅನೇಕ ಕಾಲದಿಂದ ಚರ್ಚಿಸಲ್ಪಟ್ಟಿದ್ದರೂ, ಆದರೆ ಈ ಬದಲಾವಣೆಯಿಂದ ಕಲಕತ್ತಾಕ್ಕೆ ಆಗತಕ್ಕ ನಷ್ಟವನ್ನು ತಿರಸ್ಕರಿಸತಕ್ಕದ್ದಾಗಿಲ್ಲವು ರಾಜಧಾನಿಯನ್ನು ಕಲಕತ್ತಾದಿಂದ ತೆಗೆದುಬಿಟ್ಟದ್ದರಿಂದ ಬಂಗಾಳಿಗಳವರ ಮನಸ್ಸಮಾಧಾನಪಡಿಸುವುದಕ್ಕಾಗಿ ಬಂಗಾಳಾವಿಭಜನವನ್ನು ತಪ್ಪಿಸಿದ್ದಾಗಿದೆ ಎಂದು ಲಾರ್ಡ್ ಮಿಂಟೋರವರು ಹೇಳಿದರು. ಈ ರಾಜಪ್ರಕಟನೆಯು ರಾಜನೀತಿಗೆ ವಿರುದ್ಧವಾಗಿ ಮಾಡಲ್ಪಟ್ಟಿರುವುದಲ್ಲದೆ, ಭಾರತೀಯರಿಗೆ ಬಹು ಸಂತೋಷಕರವಾಗಿದೆ. ಈ ಮಾರ್ಪಾಡಿನಿಂದ ಬಹು ಕ್ಷೇಮವಾಗುತ್ತದೆ ಎಂದು ಲಾರ್ಡ್ ರೀಯವರೂ, "ಈ ಪ್ರಕಟನಪತ್ರಿಕೆಯು ಬಹಿರಂಗಪಡಿಸಲ್ಪಟ್ಟಾಗಲೂ ಅನಂತರ ಕೆಲಕಾಲದವರೆಗೂ ನಾನು ಭರತಖಂಡದಲ್ಲಿದ್ದೆನು ಆದರೆ ಇದರಿಂದ ಪ್ರತಿಕೂಲಸನ್ನಾಹವೂ ಆಗುವುದೆಂದು ಭೀತಿಪಟ್ಟುಕೊಂಡಿದ್ದ ಒಬ್ಬ ಭಾರತೀಯನನ್ನಾದರೂ ನಾನು ನೋಡಲಿಲ್ಲವು" ಎಂದು ಲಾರ್ಡ್ ಹ್ಯಾರಿಸ್‌ರವರೂ, ಸೆಕ್ರೆಟರಿ ಲಾರ್ಡ್ ಕ್ರೂಯವರು ಅನುಸರಿಸಿರುವ ಪದ್ಧತಿಯು ಸಮಂಜಸವಾಗಿರುವುದಲ್ಲದೆ, ಇದರಿಂದ ಭಾರತೀಯರ ಅಸಮಾಧಾನವು ಹೋಗಿ ರಾಜಭಕ್ತಿಯು ಅಭಿವೃದ್ಧಿಯಾಗಿ ರಾಜಪ್ರಕಟನೆಯು ಭರತಖಂಡದ ಚರಿತ್ರೆಯಲ್ಲಿ ಅಗ್ರಸ್ಥಾನವನ್ನು ಹೊಂದುವುದು ಎಂದು ಲಾರ್ಡ್ ಮೆಕ್‌ಡೊನಾಲ್ಡ್‌ರವರೂ, ಈ ಹೊಸ ಏರ್ಪಾಡು ಬಹು ಸಮರ್ಪಕವಾಗಿರುತ್ತದಲ್ಲದೆ, ಇದನ್ನು ಸಿದ್ಧಗೊಳಿಸಿದವರ ಧೈರ್ಯವನ್ನು ಕೊಂಡಾಡತಕ್ಕದ್ದಾಗಿರುತ್ತದೆ, ಮತ್ತು ಇದರಿಂದ ಭಾರತೀಯರಿಗೆ ಸುಖವಾಗುತ್ತಾದ್ದರಿಂದ ಯುಕ್ತ ತಾವು ಅನುಮೋದಿಸುತ್ತೇವೆ ಎಂದು ಲಾರ್ಡ್ ಆಂಪ್ಟಿಲ್‌ರವರೂ ಪ್ರಶಂಸಿಸಿದರು. ಲಾರ್ಡ್‌ಗಳಾದ ಕರ್ಜನ್‌ರವರು, ಲ್ಯಾನ್ಸ್‌ಡೌನರವರು ಮಾಡಿದ ಆಕ್ಷೇಪಣೆಗಳನ್ನು ಹಿಂದೆ ಸ್ಟೇಟ್ ಸೆಕ್ರೆಟರಿಯವರಾಗಿದ್ದ ಲಾರ್ಡ್ ಮಾರ್ಲೆಯವರು ಖಂಡಿಸಿ ನವಾಬ್ ಸಲೀಮುಲ್ಲಾಯವರು ಪ್ರಶಸ್ತಿಯನ್ನು ಪಡೆಯುವ ಕಾಲದಲ್ಲಿ ಬಂಗಾಳಾ ವಿಭಜನವನ್ನು ತಪ್ಪಿಸಿದುದಕ್ಕಾಗಿ ತಮ್ಮ ಅಸಮಾಧಾನವನ್ನೂ, ಅಸಹಾಯತೆಯನ್ನೂ ತೋರಿಸಿದರೆಂದು ಲಾರ್ಡ್ ಕರ್ಜನ್‌ರವರು ಹೇಳಿದಂತೆ ನಿಜಭಾವವಾದುದೆಂದೂ, ರಾಜಪ್ರಕಟನೆಯನ್ನು ತಾವು ಅನುಮೋದಿಸುತ್ತೇವೆಂದೂ ಹೇಳಿದರು

ಹಿಂದಿನ ದಿಲ್ಲಿಯ ದರ್ಬಾರಿನ ಕಾಲದಲ್ಲಿ ಚಕ್ರವರ್ತಿಯವರ ಸಹೋದರರು ಪ್ರತ್ಯಕ್ಷವಾಗಿ ಬಂದಿದ್ದರೂ, ಅವರನ್ನು ಹಿಂದಿಟ್ಟು ತಾನೇ ಮುಂದುವರಿದು ಎಲ್ಲಾ ರಾಜಪದಸ್ಥಾನವನ್ನು ಹೊಂದಿದಂತೆಯೂ ಮತ್ತು ತಾವು ಮಾಡಿದ ಏರ್ಪಾಡುಗಳಿಗೆಂದೂ ಚ್ಯುತಿಯಿಲ್ಲವೆಂದು ನಿರ್ಧರಿಸಿಕೊಂಡಿದ್ದಂತಹ ಲಾರ್ಡ್ ಕರ್ಜನ್ನರವರು ಧೀರತನದಿಂದಲೋ ಅಥವಾ ಬಂಗಾಳಿ ಜನರ ಮೇಲಣ ಅಸೂಯೆಯಿಂದಲೋ, ಮತ್ತಾವ ಕಾರಣದಿಂದಲೋ ಮಾಡಿದ್ದ ಬಂಗಾಳಾ ವಿಭಜನವು ತಮ್ಮ ಕಣ್ಣೆದುರಿಗೆ ತಪ್ಪಿಸಲ್ಪಟ್ಟುದರಿಂದ ತಮ್ಮ ಮೂಗು ಕುಯ್ದಂತಾಗಿರುವುದನ್ನು ನೋಡಿ ಸಹಿಸಿಕೊಂಡಿರಲಾಗದೆ ರಾಜಪ್ರಕಟನೆಯ ವಿಚಾರವಾಗಿ ಆಕ್ಷೇಪಗಳನ್ನು ಮಾಡಿರುವುದರಲ್ಲಿ ಆಶ್ಚರ್ಯವೇನೂ ತೋರುವುದಿಲ್ಲವು. ಲಾರ್ಡ್ ಕರ್ಜನ್‌ರವರು ಬಂಗಾಳಾ ವಿಭಜನವನ್ನು ಮಾಡದಿದ್ದರೆ ಭಾರತೀಯರು ಸ್ವಯೋನ್ನತಿಯ ಪ್ರಯತ್ನವನ್ನು ಎಂದಿಗೂ ಮಾಡುತ್ತಿದ್ದರು, ಮತ್ತು ರಾಜ್ಯಪರಿಪಾಲನ ಕ್ರಮದಲ್ಲಿ ಈಗಿನ ಸುಧಾರಣೆಗಳೂ, ಸೌಲಭ್ಯಗಳೂ ತಪ್ಪಿಸಲ್ಪಡುತ್ತಿದ್ದುವು. ಅದುಕಾರಣ ಅವರ ವಂಗಭಂಗಕ್ರಮದಿಂದ ಭರತಖಂಡಕ್ಕೆ ಒಂದು ವಿಧದಲ್ಲಿ ಕ್ಷೇಮವಾಯಿತೆಂದೇ ಹೇಳಬೇಕಾಗಿದೆ.

ಶ್ರೀಮದ್ಯುವರಾಜರಿಗೆ ಬೆಂಗಳೂರಲ್ಲಾದ ಸನ್ಮಾನವು.

ಬೆಂಗಳೂರ ನಿವಾಸಿಗಳು ಕಳೆದ ಬುಧವಾರ ಸಾಯಂಕಾಲದಲ್ಲಿ ಲಾಲಬಾಗನ್ನು ಧ್ವಜಪತಾಕೆಗಳಿಂದಲೂ, ತಳಿರು ತೋರಣಗಳಿಂದಲೂ ಬಹು ರಮ್ಯವಾಗಿ ಶೃಂಗರಿಸಿ, ಶ್ರೀಮದ್ಯುವರಾಜರನ್ನು ಬರಮಾಡಿಕೊಂಡು ಅವರ ಭಾವಚಿತ್ರವನ್ನು ತೆಗೆಯಿಸಿದ ಮೇಲೆ ನಾಗಸ್ವರ, ವೀಣೆಯ ನುಡಿತ, ಡೊಂಬರಾಟ ಮೊದಲಾದ ವಿನೋದಗಳಿಂದ ಆನಂದಗೊಳಿಸಿ ಚಕ್ರವರ್ತಿ ಸಾರ್ವಭೌಮರಿಂದ ಮಹಾಸ್ವಾಮಿಯವರಿಗೆ ಲಭ್ಯವಾಗಿರುವ ಪ್ರಶಸ್ತಿಯಿಂದ ತಮ್ಮಗಳಿಗುಂಟಾಗಿರುವ ಅಪಾರವಾದ ಸಂತೋಷಸೂಚಕ ವಿಜ್ಞಾಪನ ಪತ್ರಿಕೆಯನ್ನು ಓದಿ ಒಂದು ಸುಂದರವಾದ ಬೆಳ್ಳಿಯ ಪೆಟ್ಟಿಗೆಯೊಳಗಿಟ್ಟು ಒಪ್ಪಿಸಿದರು ಈ ಉತ್ಸವಕ್ಕೆ ದಿವಾನರು, ಕೌನ್ಸಿಲರುಗಳು, ಮ|| ವಿ. ಪಿ. ಮಾಧವರಾವ್ ಸಿ ಐ ಇ, ದಿವಾನರು, ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು, ಚೀಫ್ ಜಡ್ಜ್ ಸರ್ ಇಜ್ಜತ್ ಮತ್ತು ಅವರ ಪತ್ನಿಯವರು, ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ ಟೇಟ್‌ರು ಮತ್ತು ಅವರ ಪತ್ನಿಯವರು, ಚೀಫ್ ಕೋರ್ಟಿನ ೨ ಮತ್ತು ೩ ನೆಯ ಜಡ್ಜಿಯವರುಗಳು, ಮ|| ಕೆ ಮ|| ಕುಮಾರಸ್ವಾಮಿನಾಯುಡುರವರು, ಚೀಫ್ ಇಂಜಿನಿಯರ್ ಮ|| ವಿಶ್ವೇಶ್ವರಯ್ಯ, ಸಿ. ಐ. ಇ., ದಿವಾನರು, ಮ|| ಮತ್ತು ಚೀಫ್ ಸೆಕ್ರೆಟರಿ ಮ|| ಬಾಲಸುಂದರಂ ಅಯ್ಯರ್‌ರವರು, ರಾ|| ರಾಮಸ್ವಾಮಿಅಯ್ಯಂಗಾರರು, ರಾಜಕಾರ್ಯಪ್ರವೀಣ ಮ|| ಎ ರಂಗಸ್ವಾಮಿಅಯ್ಯಂಗಾರರು, ಮ|| ಸಿ. ಶ್ರೀನಿವಾಸಅಯ್ಯಂಗಾರರು ಮೊದಲಾದ ಅಧಿಕಾರಿಗಳೂ, ಲಾಯರುಗಳೂ ವರ್ತಕರುಗಳೂ ದಯಮಾಡಿಸಿದ್ದರು ಶ್ರೀಮದ್ಯುವರಾಜರು ಗಂಧಪುಷ್ಪ ತಾಂಬೂಲಗಳನ್ನು ಸ್ವೀಕರಿಸಿ ದಯಮಾಡಿಸಿದಮೇಲೆ ಅತಿಥಿಗಳು ಉಲ್ಲಾಸದಿಂದ ಸತ್ಕರಿಸಲ್ಪಟ್ಟರು.

ವಿಜ್ಞಾಪನಪತ್ರಿಕೆಯ ಸಾರಾಂಶವು —

ಸಾರ್ವಭೌಮರವರು ಮಹಾಸ್ವಾಮಿಯವರಿಗೆ ನೈಟ್ ...ಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್ ಎಂಬ ಪ್ರಾಶಸ್ತ್ಯವನ್ನು ಪಾಲಿಸಿರುವುದು ಪುರಾತನವೂ, ಚರಿತ್ರಪ್ರಸಿದ್ಧವೂ ಆದ ಈ ಸಂಸ್ಥಾನದ ಮಹಾರಾಜರವರ ಮನೆತನದವರಲ್ಲಿ ಚಕ್ರವರ್ತಿಯವರಿಗೆ ಯಾವಾಗಲೂ ಪೂರ್ಣವಾದ ಅಭಿಮಾನವಿರುತ್ತದೆಂಬುದಕ್ಕೆ ಪ್ರಬಲತಮವಾದ ಸೂಚನೆಯಾಗಿರುವುದೆಂದು ನಮಗೆ ತೋರುತ್ತದೆ, ಅಲ್ಲದೆ ಸಾರ್ವಭೌಮ ಚಕ್ರವರ್ತಿಗಳು ಭರತಖಂಡದ ರಾಜಧಾನಿಯಾದ ದಿಲ್ಲಿಯ ಪಟ್ಟಣಕ್ಕೆ ದಯಮಾಡಿಸಿದ್ದ ಮಹಾಸಂದರ್ಭವನ್ನು ಯಾವಾಗಲೂ ಸ್ಮರಿಸುವುದಕ್ಕೆ ತಕ್ಕದ್ದಾಗಿದೆ. ಮಹಾಸ್ವಾಮಿಯವರು ಪ್ರಜೆಗಳಾದ ನಮಗೂ, ತಮ್ಮ ಪ್ರಖ್ಯಾತ ಭ್ರಾತೃಗಳಾದ ಸಚ್ಚರಿತ ಪರಮಪ್ರಿಯ ಪ್ರಭುಗಳಿಗೂ ಮಧ್ಯವರ್ತಿಗಳಾಗಿರುವುದು ನಮಗೆ ಹೆಮ್ಮೆಯನ್ನುಂಟುಮಾಡುತ್ತದೆ ಮಹಾಸ್ವಾಮಿ ಸಹೋದರರುಗಳಲ್ಲಿರತಕ್ಕ ಪ್ರಬಲವಾದ ವಿಶ್ವಾಸವೂ, ಪ್ರಜೆಗಳ ಪ್ರಾರ್ಥನೆಯನ್ನು ಕೂಡಲೇ ನೆರವೇರಿಸುವುದರಲ್ಲಿ ಮಹಾಸ್ವಾಮಿಯವರಿಗಿರತಕ್ಕ ಸಹಾನುಭೂತಿಯೂ ಸಂಸ್ಥಾನದ ಎಲ್ಲಾ ಜಾತಿ ಮತಗಳ ಪ್ರಜೆಗಳಿಗೂ ತಮ್ಮನ್ನು ಪರಮ ಪ್ರಿಯರನ್ನಾಗಿ ಮಾಡಿರುತ್ತವೆ ಮಹಾಸ್ವಾಮಿಯವರ ಭ್ರಾತೃಗಳಾದ ನಮ್ಮ ಪರಮ ಪ್ರಿಯ ಪ್ರಭುಗಳು ರಾಜ್ಯಸೂತ್ರವನ್ನು ಸ್ವತಃ ವಹಿಸಿಕೊಂಡಾರಭ್ಯ ಮೈಸೂರ ಸೀಮೆಯ ಪ್ರಜೆಗಳ ಸಂಪದಭಿವೃದ್ಧಿ ವಿಚಾರದಲ್ಲಿ ಚಿಂತಾಸಕ್ತರಾಗಿರುವುದೂ ಆಗಾಗ್ಗೆ ಉಪಯುಕ್ತವಾದ ಏರ್ಪಾಡುಗಳನ್ನು ಮಾಡುತ್ತಿರುವುದೂ ಪ್ರಜೆಗಳೆಲ್ಲರಿಗೂ ಶ್ರೀಮನ್ಮಹಾರಾಜರ ವಿಚಾರದಲ್ಲಿ ವಿಶೇಷ ಪೂಜ್ಯಬುದ್ಧಿಯನ್ನೂ, ಕೃತಜ್ಞತೆಯನ್ನೂ ಉಂಟುಮಾಡಿರುತ್ತವೆ. ಮಹಾಸ್ವಾಮಿಯವರು ಬೆಂಗಳೂರ ನಿವಾಸಿಗಳ ಪ್ರಾರ್ಥನೆಯನ್ನು ಅಂಗೀಕರಿಸಿ ಇಲ್ಲಿ ಎಲ್ಲರಿಗೂ ದರ್ಶನವನ್ನಿತ್ತುದಕ್ಕಾಗಿ ತಮ್ಮನ್ನು ವಂದಿಸುತ್ತೇವೆ ಮತ್ತು ತಮಗೂ, ತಮ್ಮ ಭ್ರಾತೃಗಳಾದ ಶ್ರೀಮನ್ಮಹಾರಾಜರವರಿಗೂ, ಉಳಿದ ರಾಜಕುಟುಂಬದವರಿಗೂ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಡಲೆಂದು ಜಗದ್ರಕ್ಷಕನನ್ನು ಆಸಕ್ತಭಾವದಿಂದ ಬೇಡುತ್ತೇವೆ ಇದಕ್ಕೆ ಶ್ರೀಮದ್ಯುವರಾಜರು ಅಪ್ಪಣೆಕೊಡಿಸಿದ ಉತ್ತರದ ಸಾರವು —

ನಾನು ಚಕ್ರವರ್ತಿಯವರಿಂದ ನೈಟ್ ಹುಡ್ ಪ್ರಶಸ್ತಿಯನ್ನು ದಯಪಾಲಿಸಲ್ಪಟ್ಟವನಾಗಿ ದಿಲ್ಲಿಯಿಂದ ಇಲ್ಲಿಗೆ ಬಂದಮೇಲೆ ನಿಮ್ಮಗಳನ್ನೆಲ್ಲಾ ಈ ದಿವಸ ಇಲ್ಲಿ ಸಂದರ್ಶಿಸಿ ನೀವುಗಳು ವಿಶ್ವಾಸಪೂರ್ವಕವಾಗಿ ಒಪ್ಪಿಸಿದ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಲು ನೀವು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ನಿಮ್ಮಗಳನ್ನೆಲ್ಲಾ ನಾನು ಕೃತಜ್ಞತಾಭಾವದಿಂದ ವಂದಿಸುತ್ತೇನೆ. ನೀವು ಯಥಾರ್ಥವಾಗಿ ಹೇಳಿರುವಂತೆ ನನಗೆ ಲಭ್ಯವಾಗಿರುವ ಪ್ರಶಸ್ತಿಯ ಮರ್ಯಾದೆಯು, ಚಕ್ರವರ್ತಿಯವರು ನಮ್ಮ ಮನೆತನದ ಕ್ಷೇಮಾಭಿಲಾಷಿಗಳಾಗಿರುವರೆಂಬುದಕ್ಕೆ ಒಳ್ಳೆಯ ನಿದರ್ಶನವಾಗಿರುತ್ತದೆ ಮತ್ತು ಚಕ್ರವರ್ತಿಯವರು ಈ ದೇಶದಲ್ಲಿ ಅಪ್ಪಣೆಕೊಡಿಸಿರುವ ಶುಭವಚನಗಳಿಂದಲೂ, ಮಾಡಿರುವ ಉದಾರಕಾರ್ಯಗಳಿಂದಲೂ ನಿಸ್ಸಂದೇಹವಾಗಿ ವ್ಯಕ್ತವಾಗುತ್ತದೆ ಈ ಭರತಖಂಡದ ಮಹಾಸಾಮ್ರಾಜ್ಯದರಾಜರುಗಳ ಮತ್ತು ಪ್ರಜೆಗಳ ಕ್ಷೇಮಾಭಿವೃದ್ಧಿಯಲ್ಲಿ ಚಕ್ರವರ್ತಿಯವರಿಗೆ ಅಪಾರವಾದ ಸಹಾನುಭೂತಿಯೂ ಆಸಕ್ತಿಯೂ ಇರುವುವು ಮಹಾಸಾಮ್ರಾಜ್ಯದಲ್ಲಿ ಒಂದು ಅಂಶವರಾದ ನಾವು ಇತರರಂತೆಯೇ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವ ಸಂತೋಷಭಾಗಿಗಳಾಗಿದ್ದೆವು ಚಕ್ರವರ್ತಿಯವರಲ್ಲೂ, ಅವರ ಸಿಂಹಾಸನದಲ್ಲೂ ರಾಜಭಕ್ತಿ ವಿಶ್ವಾಸಗಳಿಂದಿರುವುದರಲ್ಲಿ ನಾವು ಇತರರಿಗೆ ಎರಡನೆಯವರಾಗಿಲ್ಲವೆನ್ನುವುದರಲ್ಲಿ ನಮ್ಮಗಳಲ್ಲಾರಲ್ಲೂ ಅಭಿಪ್ರಾಯಭೇದವಿಲ್ಲವೆಂದು ನಾನು ದೃಢವಾಗಿ ತಿಳಿದಿರುತ್ತೇನೆ ನಾನು ನಿಮಗೂ ನಮ್ಮ ಅಣ್ಣಂದಿರಾದ ನಿಮ್ಮ ಶ್ರೀಮನ್ಮಹಾರಾಜರವರಿಗೂ ಮಧ್ಯವರ್ತಿಯಾಗಿರುವೆನೆಂದು ನೀವು ಹೇಳಿದ್ದೀರಿ ಈ ವಿಚಾರದಲ್ಲಿ ನನಗೆ ನ್ಯಾಯ್ಯವಾಗುವ ಮಹತ್ಕಾರ್ಯವನ್ನು ನಿಮ್ಮ ನಿರೀಕ್ಷಣೆಯಂತೆ ನೆರವೇರಿಸಲು ನಾನು ಸತತವೂ ಪ್ರಯತ್ನಪಡುವೆನು. ನಮ್ಮ ಪ್ರಿಯ ಅಣ್ಣಂದಿರು ಸರ್ವದಾ ತಮ್ಮ ಪ್ರಜೆಗಳ ಕ್ಷೇಮ ಚಿಂತನೆಯಲ್ಲಿರುವರೆಂದೂ ನಿಮಗೆ ಪೂರ್ಣವಾದ ರಾಜಭಕ್ತಿ ವಿಶ್ವಾಸವಿರುವುದೆಂದೂ ನಿಮ್ಮ ವಿಜ್ಞಾಪನ ಪತ್ರಿಕೆಯಲ್ಲಿ ಹೇಳಿರುತ್ತೀರಿ. ಇದಕ್ಕಾಗಿ ನಮ್ಮ ಅಣ್ಣಂದಿರ ಮತ್ತು ನಮ್ಮ ಕುಟುಂಬದವರ ಪರವಾಗಿ ವಂದಿಸುತ್ತೇನಲ್ಲದೆ, ನೀವು ಯಾವಾಗಲೂ ನಮ್ಮಗಳ ವಿಶೇಷ ಮರ್ಯಾದೆಯನ್ನೂ ಪ್ರೀತಿಯನ್ನೂ ತೋರಿಸುತ್ತಿರುವುದಕ್ಕಾಗಿ ನಿಮಗೆ ನಾವುಗಳು ಬಹುಕೃತಜ್ಞರಾಗಿರುತ್ತೇವೆ

ಹಳೆಬೇಡದ ವೃತ್ತಾಂತಗಳು.

ಅಂಡರ್ ಸೆಕ್ರೆಟರಿ ಮಿ ಡಿಕಾಸ್ತಾಯವರು ಸಕಲೇಶಪುರದ ಸಬ್‌ಡಿವಿಜನ್ ಛಾರ್ಜಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ಚೀಫ್ ಕೋರ್ಟಿನ ೨ ನೆಯ ಜಡ್ಜಿಯವರಾದ ರಾ|| ಕೆ. ...ರಾಯರು ರಜಾಮೇಲೆ

ದ ಶುಕ್ರವಾರ ರಾತ್ರಿ ಬೆಂಗಳೂರಿನಲ್ಲಿ ೬ ಅಂಗುಲ ೩ ಮಳೆಯೂ, ರಾಜಧಾನಿಯಲ್ಲಿ ಬ್ರಾಯಕ್ಕೆ ೧ ಅಂಗುಲ ಮಳೆಯೂ ಆಯಿತು.

ಕಳೆದ ಶನಿವಾರ ಅ॥ ಪ್ರೊಫೆ॥ ಈ॥ ಜನರಲ್ ಮ॥ ರಾಮೇಶ್ವರಯ್ಯರ್‌ರವರು ತಮ್ಮ ಅಸಿಸ್ಟೆಂಟರೊಡನೆ ರಾಜಧಾನಿಗೆ ಬಂದರು.

ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯೊಡನೆ ಉದಕಮಂಡಲದಿಂದ ರಾಜಧಾನಿಗೆ ಹಿಂತಿರುಗಿ ದಯಮಾಡಿಸಿದರು. ಕೆಲವು ಸರ್ಕಾರಿ ಅಧಿಕಾರಿಗಳೂ ಬೆಂಗಳೂರಿಂದ ರಾಜಧಾನಿಗೆ ಈ ವಿವರ ದಯಮಾಡಿರುವವರಾಗಿದ್ದರು.

ಕೋಲಾರದ ತಾಲ್ಲೋಕು ಆಕ್ಟಿಂಗ್ ಅಮಲ್ದಾರರಾಗಿ ಪ್ರೊಬೇಷನರ್ ಮ॥ ಬಿ. ಶಾಂತವೀರಪ್ಪ, ಬಿ. ಎ. ರವರೂ, ಕೌನ್ಸಿಲರ್ ಮ॥ ದೇವರಾಜ ಅರಸಿನ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆಂದು ಕೇಳುತ್ತೇವೆ.

ಕಳೆದ ತಾ॥ ೬ ರಲ್ಲಿ ರಾಜಧಾನಿಯಲ್ಲಿ ಒಂದು ಮೋಟಾರ್ ಬೈಸಿಕಲ್ಲು ಇದಿರಾಗಿ ಬರುತ್ತಿದ್ದ ಕುದುರೆ ಬಂಡಿಗೆ ತಗುಲಿದು ಬೈಸಿಕಲ್ಲಿನ ಮುಂದಣ ಚಕ್ರವು ಜಜ್ಜಿಹೋಗಿರಲಿಕ್ಕೆ ಕೊಂಚ ಪೆಟ್ಟುಬಿದ್ದಿತಲ್ಲದೆ ಕುದುರೆಗೆ ಘೋರಾಪಾಯವಾಯಿತು, ಮೇತುಕಿಟ್ಟ ಬಂಡಿಯನ್ನು ಹೊಡೆಯುತ್ತಿದ್ದ ಕೆಳಗೆ ಬಿದ್ದು ತುಂಬಾ ಪೆಟ್ಟನ್ನು ತಿಂದನು. ಸಾರಥಿ ಕುದುರೆಯೂ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ ಸ್ವಸ್ಥವಾಗಿರುವರೆಂದು ತಿಳಿಯುತ್ತೇವೆ.

ಚನ್ನಪಟ್ಟಣದಲ್ಲಿ ಈ ಮೊದಲು ಪ್ಲೇಗ್ ರೋಗವು ಬಹು ಪ್ರಬಲವಾಗಿದ್ದು ಅನೇಕ ಜನರನ್ನು ಆಹುತಿಗೊಂಡು ಕಳೆದ ೬ ವಾರದಿಂದ ಕಮ್ಮಿಯಾಗಿರುವುದರಿಂದ ಪ್ರಯುಕ್ತ, ಜನರೂ ಊರಿಗೆ ಹಿಂದಿರುಗಿ ಬರುತ್ತಿರುವರು. ಡಾಕ್ಟರ್ ತ್ರಿಸ್ವಾಮಿಯವರು ಕೆಲ ದಿವಸಗಳ ಕೆಳಗೆ ಇಲ್ಲಿಗೆ ಬಂದಿದ್ದು ಆರೋಗ್ಯವಿಚಾರದಲ್ಲೂ ಪ್ಲೇಗ್ ರೋಗನಿವಾರಣೆಯ ವಿಚಾರದಲ್ಲೂ ಕೆಲ ಉಪನ್ಯಾಸಗಳನ್ನು ಕೊಟ್ಟು ಹೋದರು. ಶೆರಿಫ್ ವಿಚಾರದಲ್ಲಿ ಕೆಲವು ದಿನಗಳ ಕೆಳಗೆ ಕಲಹವನ್ನು ಹಿ ಹೊಡೆದಾಡಿದ ಕೆಲ ದಾಸಬಣಜಿಗರೂ ಎಲೆಬಣಜಿಗರು ಒಬ್ಬರನೊಬ್ಬರು ಮತ್ತೊಬ್ಬರು ಕ್ರಿಮಿನಲ್ ಕೇಸುಗಳು ಸಬ್ ಡಿವಿಷನ್ ಮ್ಯಾಜಿಸ್ಟ್ರೇಟರಲ್ಲಿ ವಿವಾದಗಳನ್ನು ಹೂಡಿರುವರೆ. ಈ ವಿವಾದಗಳಲ್ಲಿ ಉಭಯಪಕ್ಷದ ಪ್ರಮುಖ ಜನರು ಆರೋಪಿಗಳಾಗಿ ಸೇರಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಸಿಟಿಯಿಂದಲ್ಲಿ ಒಬ್ಬ ದೊಡ್ಡ ವರ್ತಕನ ಮನೆಯಲ್ಲಿ ಆತನ ಕೈಯಿಂದ ಕಳೆದ ತಾ॥ ೬ ರಲ್ಲಿ ಬೆಂಕಿಯು ಹೊತ್ತಿ ಸುಮಾರು ೧॥ ಸಾವಿರ ರೂ. ಬೆಲೆಯ ಧಾನ್ಯದ ಕಟ್ಟಗಳು ಸುಟ್ಟುಹೋದವು. ಅಮಲ್ದಾರರೂ ಕೂಡಲೆ ಬಂದು ನೆರೆಹೊರೆಯವರ ಸಹಾಯದಿಂದ ನೀರನ್ನು ಹೊಯಿಸಿ ಬೆಂಕಿಯು ಆರಿಸಿದುದಲ್ಲದೆ ನೆರೆಯ ಸಾಹುಕಾರರ ಮನೆಯಲ್ಲಿದ್ದ ೧೦೦೦ರೂ. ಬೆಲೆಯ ಬಟ್ಟೆಯನ್ನು ಹೊರಗೆ ಸಾಗಿಸಿ ಸ್ವಾಧೀನ ಪಡಿಸಿದರು. ಇಲ್ಲವಿದ್ದಲ್ಲಿ ಬಹು ಅನರ್ಥವಾಗುತ್ತಿದ್ದಿತು. ಮನೆಯ ಯಜಮಾನನು ಆ ಸಮಯದಲ್ಲಿ ಹೊರಗೆ ಹೋಗಿದ್ದವನು ಮನೆಗೆ ಬಂದು ತನ್ನ ಪದಾರ್ಥಗಳು ಹೊರಗೆ ಸಾಗಿಸಲ್ಪಟ್ಟಿರುವುದನ್ನು ಕಂಡು ಆನಂದವರವಶನಾಗಿ ಅವರನ್ನು ಅತ್ಯಂತವಾಗಿ ಶ್ಲಾಘಿಸಿದನು.

ಮಹಾಮಹೋಪಾಧ್ಯಾಯ ಶ್ರೀ ಪಾಣಿವಿಲಾಸ ಸನ್ನಿಧಾನ ಸಿ. ವಿ. ವರ ಮತ್ತೂ ಸರದಾರ್ ಎಂ. ಕಾಂತರಾಜ ಅರಸಿನವ ಮಾತೃಶ್ರೀಯವರಾದ ಕೆಂಪನಂಜಮ್ಮಣ್ಣಿಯವರು ಕಳೆದ ೬ ನೆಯ ಶನಿವಾರ ಸಾಯಂಕಾಲ ೬-॥ ಗಂಟೆಯ ಸಮಯದಲ್ಲಿ ವಿಧಿವಶರಾದರೆಂದು ತಿಳಿಯಲು ವಿಷಾದವಾಗುತ್ತದೆ. ಶವವು ತಕ್ಕ ರಾಜಮರ್ಯಾದೆಯೊಡನೆ ಅದೇ ರಾತ್ರಿ ೮-॥ ಗಂಟೆಯಲ್ಲಿ ಉತ್ತನಹಳ್ಳಿ ಮಾರ್ಗವಾಗಿ ವನಕ್ಕೆ ಸಾಗಿಸಲ್ಪಟ್ಟು ದಹನಮಾಡಲ್ಪಟ್ಟಿತು. ದಹನ ಕಾರ್ಯವೆಲ್ಲವೂ ಮುಗಿಯುವ ಹೊತ್ತಿಗೆ ರಾತ್ರಿ ೧ ಗಂಟೆಯಾಗಿದ್ದಿತು. ಚೀಫ್ ಮ॥ ಕೃಷ್ಣಸ್ವಾಮಯ್ಯರ್‌ರವರು, ಪ್ರೊ॥ ಜನರಲ್ ಮ॥ ರಾಮೇಶ್ವರಯ್ಯರ್‌ರವರು, ಚೀಫ್ ಇಂಜಿನೀರ್ ಮ॥ ವಿಶ್ವೇಶ್ವರಯ್ಯನವರು ಮೊದಲಾದ ಸರ್ಕಾರಿ ಉದ್ಯೋಗಸ್ಥರೂ, ರಾಜಬಂಧುಗಳೂ ಶವದೊಡನೆ ರುದ್ರಭೂಮಿಗೆ ಬಿಜಯಮಾಡಿಸಿದ್ದರು. ಗತಿಸಿದ ಕೆಂಪನಂಜಮ್ಮಣ್ಣಿಯವರಿಗೆ ಸುಮಾರು ೬೫ ವರ್ಷ ವಯಸ್ಸಾಗಿದ್ದಿತೆಂದು ತೋರುತ್ತದೆ. ಇವರಿಗೆ ಮಹಾಮಹೋಪಾಧ್ಯಾಯ ಶ್ರೀ ಪಾಣಿವಿಲಾಸದವರು ಮತ್ತೂ ಸರದಾರ್ ಕಾಂತರಾಜ ಅರಸಿನವರುಗಳಲ್ಲದೆ ಗತಿಸಿದ ಅರಸಿನವರ ಮಕ್ಕಳು ಸಂಬಂಧಿಕರ ಅನೇಕ ಮಂದಿಯವರೂ ಕನಿಷ್ಠ ಪುತ್ರರುಗಳಾಗಿದ್ದರು. ಗತಿಸಿದ ಸ್ತ್ರೀ ರತ್ನವು ಬಹು ಸುಸ್ವಭಾವಶಾಲಿ, ಆದ ಮಕ್ಕಳನ್ನು ಸಕಲ ರಾಜವೈಭವವನ್ನು ಅನುಭವಿಸಿ ಮೊಮ್ಮಕ್ಕಳು ಮರಿಮಕ್ಕಳುಗಳಿಂದ ಕೂಡಿ ಬಹು ಸನ್ಮಾನಿತರಾಗಿದ್ದರಲ್ಲದೆ ಉತ್ತಮ ದೈವಭಕ್ತೆಯೂ, ಬಡವರಿಗೆ ಆಧಾರಳೂ ಆಗಿದ್ದರು. ಮಹಾಮಹೋಪಾಧ್ಯಾಯ ಶ್ರೀ ಪಾಣಿವಿಲಾಸದವರಿಗೂ ಸರದಾರ್ ಕಾಂತರಾಜ ಅರಸಿನವರಿಗೂ ನಮ್ಮ ಸಂತಾಪವನ್ನು ಸೂಚಿಸುತ್ತಾ ಪರಮಾತ್ಮನು ಅವರಿಗೆ ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ರುಗಳಿಗೆ ದುಃಖಸಮುದ್ರದಲ್ಲಿ ಮುಳುಗಿರುವ ಇವರ ವ್ಯಸನಗಳ ಅತ್ಯಧಿಕ ಶಾಂತಿಯನ್ನು ಉಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

ವರ್ತಮಾನ ಸಂಗ್ರಹವು.

ಸ್ವಿಟ್ಜರ್ಲೆಂಡಿನಲ್ಲಿ ೧೫೦ ಜನ ಕ್ರೈಸ್ತರು ಮಂಜಿನ ಗಡ್ಡೆಗಳ ಕೆಳಗೆ ಸಿಕ್ಕಿ ಸತ್ತುಹೋದರು.

ಸಿಲೋನಿನ ಪರ್ವತಗಳ ಮೇಲೆ ಧರ್ಮಪುರದಲ್ಲಿ ಎಸ್ಟೇಟ್ ಪ್ರಭುಗಳ ಹೆಸರಿನಿಂದ ಕಟ್ಟಲ್ಪಡುವ ಕ್ಷಯರೋಗಿಗಳ ಆರೋಗ್ಯಾಲಯಕ್ಕಾಗಿ ಬರೋಡಾ ಮಹಾರಾಜರವರು ಎಗದಸಿಯವರಿಗೆ ೧೦೦೦೦ ರೂ. ಗಳನ್ನು ಕೊಟ್ಟಿರುತ್ತಾರೆ.

ಬೊಂಬಾಯಿನಲ್ಲಿ ಒಬ್ಬ ಫಕೀರನು ೧ ಗಂಟೆಯವರೆಗೆ ನೀರಿನೊಳಗಿರುತ್ತೇನೆಂದು ಹೇಳಿಕೊಳ್ಳುತ್ತ ಒಂದು ಬಾವಿಯೊಳಗೆ ಮುಳುಗಿದವನು, ೧॥ ಗಂಟೆಯ ಕಾಲವಾದರೂ ಹೊರಗೆ ಬಾರದೆ ಹೋಗಲು ಹೊರಗೆ ತೆಗೆಯಲ್ಪಟ್ಟು ನೋಡಲು ಸತ್ತುಹೋಗಿದ್ದನು.

ಆಹಾರ ಪದಾರ್ಥಗಳ ಬೆಲೆಯೇರಲು ಕಾರಣವನ್ನು ವಿಚಾರಿಸಲು ಇಂಡಿಯಾ ಸರ್ಕಾರದವರಿಂದ ನಿಯಮಿತರಾಗಿರುವ ಮ॥ ಕೆ. ಎಲ್. ದತ್ತರವರು ಲಾಹೋರ್ ಪಟ್ಟಣಕ್ಕೆ ಬಂದು ಅಲ್ಲಿಯ ವರ್ತಕರಿಂದಲ್ಲ ಜನರ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಳ್ಳುತ್ತಿರುವರು.

ಭಾರತ ಮಹಿಳೆಯರು ಇಂಗ್ಲೆಂಡಿಗೆ ಹೋಗಿ ಉಚ್ಚಾಭ್ಯಾಸವನ್ನು ಮಾಡಲು ಬರಲು ವೇತನವನ್ನು ಕೊಡುವುದಕ್ಕಾಗಿ ಒಂದು ಧನರಾಶಿಯನ್ನು ಕೂಡಿಸಬೇಕೆಂದು ಭಾರತಮಹಿಳೆಯರ ವಿದ್ಯಾಸಂಘದ ಪರವಾಗಿ ೧ ಜನ ಭಾರತಮಹಿಳೆಯರು ಲಂಡನ್ ಟೈಂಸ್ ಪತ್ರಿಕೆಯಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

ಬೆಲ್ಜಿಯಂ ಎಂಬಲ್ಲಿ ನೂತನ ವಧೂವರರು ಉತ್ಸವದಿಂದ ಹೊರಟು ದೇವಸ್ಥಾನವನ್ನು ಪ್ರವೇಶಿಸುವಷ್ಟರಲ್ಲಿ ಒಬ್ಬ ಕೈಸ್ತನು ಗುಂಪಿನಲ್ಲಿ ನುಗ್ಗಿ ತನ್ನನ್ನು ಪಂಜೆಸಿದ್ದ ಆ ವಧುವನಮೇಲೆ ಬಿದ್ದು ಕುಡುಗೋಲಿನಿಂದ ಅವಳ ಕತ್ತನ್ನು ಕತ್ತರಿಸಿ ಅನಂತರ ತಾನೂ ಇತರರಮೇಲೆ ಬಿದ್ದು ಅನೇಕರಿಗೆ ಕುಡುಗೋಲಿನಿಂದ ಹೊಡೆದು ಗಾಯವನ್ನು ಮಾಡಿದನು.

ಪೋರ್ಚುಗೀಸು ಸರ್ಕಾರದ ಸೈನ್ಯಶಾಖೆಯು ಪೋರ್ಚುಗೀಸು ಸರ್ಕಾರದ ಅಪ್ಪಣೆಯಿಲ್ಲದೆ ಮಧ್ಯದ ಆಯುಧಗಳನ್ನಿಟ್ಟುಕೊಂಡಿರುವವರು ೪೮ ಗಂಟೆಯೊಳಗೆ ಸರ್ಕಾರದ ವಶಮಾಡಬೇಕೆಂದೂ ಕ್ರೂರತರವಾದ ಶಿಕ್ಷೆಗೆ ಗುರಿಮಾಡಲ್ಪಡುವರೆಂದು ಪ್ರಸಿದ್ಧಪಡಿಸಿರುವರು. ಪೋರ್ಚುಗೀಸು ಸರ್ಕಾರದವರು ತಮ್ಮ ರಾಜ್ಯದಲ್ಲಿರುವ ರಹಸ್ಯ ಕೂಟಗಳನ್ನು ತಪ್ಪಿಸಲು ಸಾಧ್ಯವಾಗದಿದ್ದುದರ ಮೇಲೆ, ಅವರನ್ನು ನಿರ್ಮೂಲರನ್ನಾಗಿ ಮಾಡಿದರೆ ಅವರು ನಿರುಪಾಯರಾಗುವರೆ ಬ ವಿಶೇಷದಿಂದ ಈ ರೀತಿ ಮಾಡಿರಬಹುದಾಗಿ ತೋರುತ್ತದೆ.

ಕಳೆದ ಫೆಬ್ರವರಿ ತಾ॥ ೩ರ ಕ್ಕೆ ಕೊನೆಯಾದ ಒಂದು ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೭,೦೦೦ ಜನರಿಗೆ ಪ್ಲೇಗು ರೋಗವು ತಗಲಿ ೧೫,೦೦೦ ಜನರು ಸತ್ತರು. ಸಂಯುಕ್ತ ಪ್ರಾಂತಗಳೊಂದರಲ್ಲಿ ಹೆಚ್ಚಾಗಿ ಎಂದರೆ ೬,೦೦೦ ಜನರಿಗೆ ತಗಲಿ ೫,೦೦೦ ಜನರು ಸತ್ತಿರುವರು. ಬಂಗಾಳದಲ್ಲಿ ೩,೦೦೦ ಮರಣಗಳಲ್ಲಿ ಪಾಟ್ನಾ ಜಿಲ್ಲೆಯಲ್ಲಿ ೬೦೦, ಮತ್ತೂ ಡಿಸ್ಟ್ರಿಕ್ಟಿನಲ್ಲಿ ೬೦೦ ಮರಣವಾಗಿರುತ್ತದೆ. ಬೊಂಬಾಯಿ ನಗರದಲ್ಲಿ ೧೦೭೩; ಮದ್ರಾಸಾಧಿಪತ್ಯದಲ್ಲಿ ೩೬೭, ಪಂಜಾಬಿನಲ್ಲಿ ೭೭೩, ಬರ್ಮಾದಲ್ಲಿ ೧೦೦ ಮತ್ತೂ ಮಧ್ಯಪ್ರಾಂತಗಳಲ್ಲಿ ೧೭೦ ಈ ಪ್ರಕಾರ ಮರಣವಾಗಿರುತ್ತದೆ.

ಈಗ ಇಂಗ್ಲೆಂಡಿನಲ್ಲಿರುವ ಒಟ್ಟು ೧೫೦೦ ಭಾರತ ವಿದ್ಯಾರ್ಥಿಗಳಲ್ಲಿ ೧೦೦೦ ಜನರು ಲಂಡನ್ ನಗರ ಒಂದರಲ್ಲಿರುತ್ತಾರೆ. ಯಾವ ಮಿಷನರಿಗಳೂ ತಮ್ಮ ಪ್ರಚಾರಕ್ಕಾಗಿ ಕಳುಹಿಸಿದ್ದ ೧೦೦೦೦ ರೂ. ಗಳನ್ನು ಖರ್ಚು ಮಾಡಲು ಕೇಳಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಬಹು ಜನಗಳವರು ಬುದ್ಧಿವಂತರಾಗಿಯೂ ಸಜ್ಜನರಾಗಿಯೂ ಇರುತ್ತಾರೆ. ಆದರೆ ಅನೇಕರು ಕಳ್ಳರಾಗಿದ್ದರೆ ಚೆನ್ನಾಗಿದ್ದಿತೆಂದು ತೋರುತ್ತದೆ. ಎಂದು ಕೆಲರು ಬರುತ್ತಿರುವ ಭಾರತ ವಿದ್ಯಾರ್ಥಿಗಳ ಶಿಕ್ಷಣ ಸಹಾಯಾರ್ಥವಾಗಿ ಇಂಗ್ಲೆಂಡಿನಲ್ಲಿ ನೇಮಿಸಲ್ಪಟ್ಟಿರುವ ಸಂಘದವರು ತಮ್ಮ ವಾರ್ಷಿಕ ವರದಿಯಲ್ಲಿ ತಿಳಿಸಿರುತ್ತಾರೆ.

ಪೋಲೀಸ್ ಸರ್ಟಿಫಿಕೇಟನ್ನು ಪಡೆಯಲು ಮದ್ರಾಸಿನ ಹೈಕೋರ್ಟಿಗೆ ಅರ್ಜಿಯನ್ನು ಬರೆದು ಮದ್ರಾಸಿನ ಎಕ್ಸ್ಪ್ರೆಸ್ ಪತ್ರಿಕೆಯ ಮಾಲೀಕರಾಗಿದ್ದ ಎಂ. ವೆಂಕಟರಾಮಯ್ಯನವರು ಕಳೆದ ತಾ॥ ೧೧ರಲ್ಲಿ ಕಾಲವು ಮಾಡಿದರಾಗಿದ್ದು ಆ ಪತ್ರಿಕೆಯ ನಡೆಸುವವರ ಮೇಲೆ ಬಿದ್ದು ಅಪ್ಪೀಲನ್ನು ವಜಾಮಾಡಿರುವರು. ಈ ನ್ಯಾಯಮೂರ್ತಿಗಳು ತಮ್ಮ ಮೇಲೆ ಕೇಳಿದ ಆ ಪತ್ರಿಕೆಯು ತನ್ನ ಅಭಿಪ್ರಾಯಗಳನ್ನು ಪ್ರಕಟಿಸಲು ಬಹು ... ಕಳೆದುಕೊಳ್ಳಬೇಕಾಗಿದೆ.

ಹಿಂದೆ ತಮ್ಮ ಕೂಡ ಹೋಗಿದ್ದರೆಂದು ವಿಚಾರಮಾಡುವವರ ವಿಷಯ ಒಳ್ಳೆ ಪೊಲೀಸಿಗೆ ತಿಳಿಸಿದರು.

ಬ್ಯಾರಿಸ್ಟರ್ ಪಟ್ಟಣದಲ್ಲಿ ಬ್ಯಾಬಿಲೋನಿಯಾ ಮೊದಲಾದ ಪುರಾತನ ಶಾಸ್ತ್ರಸಂಶೋಧಕರಾದ ಒಬ್ಬರು ಬ್ಯಾಬಿಲೋನಿನ ಪದಾರ್ಥಗಳನ್ನು ಮಾರುವ ಒಂದು ಅಂಗಡಿಯಲ್ಲಿ ಒಂದು ಅರಬ್ಬಿ ದೇಶದ ಪುರಾತನ ತಲೆಬುರುಡೆಯನ್ನು ಕ್ರಯಕ್ಕೆ ತೆಗೆದುಕೊಂಡು ಹೋಗಿ ಅದನ್ನು ಪರೀಕ್ಷೆಗಾಗಿ ಒಂದು ಮೇಜಿನಮೇಲೆ ಮಡಗಿ ಕೋಣೆಯ ಬಾಗಿಲಿಗೆ ಬೀಗ ಹಾಕಿದ್ದು ಹಳೆಯ ಬಿರಟೆಯನ್ನು ತೆಗೆಯಲು ತುಕ್ಕು ಹಿಡಿದಿದ್ದ ಕೋಣೆಯಿಂದ ಎಪ್ಪತ್ತು ಅಂಗುಲ ಉದ್ದದ ನೀಲಿಯ ಮೊಸಳೆಗಳು ಹೊರಬಂದುವು. ಕೋಣೆಯನ್ನು ಕೊಂಡುಕೊಂಡವನು ಆ ಮೊಸಳೆಗಳನ್ನು ಹಿಡಿಯಲು ಪ್ರಯತ್ನಿಸಿದಾಗ, ಅದನ್ನು ಎಕ್ಕಟಿಯಿಸಿದ ಅಂಗಡಿಯವನು ಅವು ತನಗೆ ಸಲ್ಲಬೇಕೆಂದು ಅಷ್ಟು ಬರಲು ಅವರಿಬ್ಬರೂ ತಮ್ಮ ವ್ಯಾಜ್ಯವನ್ನು ಇತ್ಯರ್ಥಮಾಡಲು ಒಬ್ಬ ಮ್ಯಾಜಿಸ್ಟ್ರೇಟನನ್ನು ಪ್ರಾರ್ಥಿಸಿಕೊಂಡಿರುವರು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತೆ ಆ ಕೊಂಡವನ ಪಾಡಾಗಿದೆ.

ಮೂವರು ಗ್ರಾಮಸ್ಥರು ಒಂದುಮೂಟೆ ಅಕ್ಕಿಗೆ ೩ ರೂ. ನಂತೆ ಕ್ರಯ ಗೊತ್ತುಮಾಡಿ ಒಂದುಮೂಟೆ ಅಕ್ಕಿಯನ್ನು ತೆಗೆದುಕೊಂಡು ಹಣವನ್ನು ಕೊಡಲು ಗತಿಯಿಲ್ಲದೆ, ೧೦೦ ರೂ. ಗೆ ೫॥ ರೂ. ಬಡ್ಡಿಯ ಪ್ರಕಾರ ಪ್ರತಿ ೬ ತಿಂಗಳಿಗೊಂದಾವರ್ತಿ ಬಡ್ಡಿಗೆ ಬಡ್ಡಿಯನ್ನು ಸೇರಿಸಿಕೊಡಲೊಪ್ಪಿ ೩ ರೂ. ಗೆ ಪತ್ರವನ್ನು ಬರೆದುಕೊಟ್ಟರು. ಪತ್ರವನ್ನು ಬರೆಯಿಸಿಕೊಂಡಿದ್ದ ಪರ್ತಕನು ೩ ವರ್ಷಗಳೊಳಗೆ ಅವರುಗಳ ಮೇಲೆ ವಿವಾದವನ್ನು ಹೂಡಿರುವಲ್ಲಿ ಮುನಸೀಫರು ೬೦೦ ರೂ. ಗೆ ಪ್ರತಿವಾದಿಗಳಮೇಲೆ ಡಿಕ್ರಿಯನ್ನು ಕೊಟ್ಟರು. ಮತ್ತೊಂದು ವಿವಾದದಲ್ಲಿ ಮೂವರು ಗ್ರಾಮಸ್ಥರು ಸೇರಿ ಒಂದು ಬಟ್ಟೆಯನ್ನು ತೆಗೆದುಕೊಂಡು ೩ ತಿಂಗಳಿಗೊಂದಾವರ್ತಿ ೧೦೦ ಕ್ಕೆ ೧೮ ರೂ. ಬಡ್ಡಿಯ ಪ್ರಕಾರ ಕೊಡಲೊಪ್ಪಿ ೯ ರೂ. ಗಳಿಗೆ ಬರೆದುಕೊಟ್ಟಿದ್ದುದರ ಮೇಲೆ ಅದೇ ಮುನಸೀಫರು ೧೦೦ ಕ್ಕೆ ೩॥ ರೂ. ಪ್ರಕಾರ ಬಡ್ಡಿಯನ್ನು ಕೊಡಿಸಿದರಲ್ಲದೆ, ಇನ್ನೊಂದು ವಿವಾದದಲ್ಲಿ ಇಬ್ಬರು ೧೦೦ ಕ್ಕೆ ... ಪ್ರಕಾರ ಬಡ್ಡಿಯನ್ನು ಕೊಡುತ್ತೇವೆಂದು ಬರೆದುಕೊಟ್ಟಿದ್ದುದಕ್ಕೆ ೩ ವರುಷದ ಕಡೆಯವರೆಗೆ ೯೯ ರೂ. ಗೆ ಡಿಕ್ರಿಯನ್ನು ಕೊಟ್ಟರು.

ಸಂಗೀತ ಸಾಹಿತ್ಯ ನಾಟ್ಯಾಭಿನಯಗಳಲ್ಲಿ ಸುಪ್ರಸಿದ್ಧಳಾದ ಕಲಕತ್ತಾದ ಗೋಹರ್‌ಜಾನಳು ಕಳೆದ ತಾ॥ ೬ರ ರಲ್ಲಿ ಮದರಾಸಿಗೆ ಬಂದಿದ್ದು ಅಲ್ಲಿಯ ವಿಕ್ಟೋರಿಯಾ ಪಬ್ಲಿಕ್ ಹಾಲಿನಲ್ಲಿ ತನ್ನ ಅದ್ಭುತ ಪಾಂಡಿತ್ಯವನ್ನು ಪ್ರದರ್ಶಿಸಿದಳು. ತಾ॥ ೬ರ ಸಾಯಂಕಾಲ ಪಬ್ಲಿಕ್ ಹಾಲಿನಲ್ಲಿ ಎಲ್ಲಾ ಹಾಲಿನ ಕೆಳಗೆ ೩ ಸಲವಾದರೂ ಸ್ಥಳವಿಲ್ಲದಷ್ಟು ಪ್ರೇಕ್ಷಕರು ನೆರೆದಿದ್ದರು. ಅಲ್ಲದೆ ಇನ್ನೂ ನೂರಾರು ಜನರು ದುಡ್ಡನ್ನು ಕೊಟ್ಟು ಟಿಕೆಟ್ಟುಗಳನ್ನು ಪಡೆದಿದ್ದರೂ ಒಳಗೆ ಸ್ಥಳವಿಲ್ಲದುದರಿಂದ ಹೊರಗಡೆ ನಿಂತುಕೊಂಡಿದ್ದರು. ಗೋಹರ್‌ಜಾನಳು ಹಾಡಲು ಕೊಂಡಾಗಲು ಪ್ರೇಕ್ಷಕರಿಗೆ ಅನಂದವನ್ನುಂಟುಮಾಡಿ ಅನಂತರ ತನ್ನ ಸಂಗೀತ ಸಾಹಿತ್ಯದಿಂದ ... ರಂಜಿಸಿದಳು. ... ನಾಡಿದ ಹಿಂದೂಸ್ಥಾನಿ, ಹಾರಿಕ ಮತ್ತೂ ಭೈರವಿ ರಾಗಗಳು ಅತ್ಯಂತ ಶ್ರಾವ್ಯವಾಗಿದ್ದುವಲ್ಲದೆ ... ಹಿಂದೂಸ್ಥಾನಿ ಮತ್ತೂ ಉರ್ದು ಭಾಷೆಗಳಲ್ಲಿದ್ದಾಗ್ಯೂ ಇತರರ ಪಾಲಾಗಿದ್ದವು. ... ಇಂಗ್ಲೀಷು ರಾಗಗಳನ್ನೂ ಹಾಡುವಾಗ ಜನರು ಆನಂದದ ... ಸಮಯಗಳಾಗಿ ಕರತಾಳಧ್ವನಿಯನ್ನು ಮಾಡುತ್ತಿದ್ದರು.

ಸರ್ಕಾರದಿಯ ಗೆಜೆಟ್ ಸಂಗ್ರಹ

ಮ॥ ಸುಬ್ಬರಾಯರ್ ... ಕೆಲವುವರಿಗೆ ರಜಾವು ಕೊಡಲ್ಪಟ್ಟಿರುವುದರಿಂದ, ಮ॥ ಜಯರಾಂ ಅವರನ್ನು ಸಂಜಾನಾ ಇವರು ಆಕ್ಟಿಂಗ್ ... ಇನ್‌ಸ್ಪೆಕ್ಟರಾಗಿ, ನಿಯಮಿಸಲ್ಪಟ್ಟಿರುತ್ತಾರೆ.

ಡಾಕ್ಟರ್ ... ಮುನಸೀಫರಾದ ಮ॥ ಬಾಪಿ ರಾವ್ ಇವರು ... ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಹಳ್ಳಿಯ ... ಕಲೆಕ್ಟರಾದ ಮ॥ ಬೊಮ್ಮಯ್ಯನವರಿಗೆ ೩ ತಿಂಗಳು ... ರಜಾ ಕೊಡಲ್ಪಟ್ಟಿರುವ ಪ್ರಯುಕ್ತ ಇವರ ಬದಲು ... ಇವರು ... ನೇಮಕ ಮಾಡಲ್ಪಟ್ಟಿರುತ್ತಾರೆ.

ಆ ಕೆಲವು ... ಜಯರಾಂ ... ... ಲ್ಲಿ ... ಸಂತೋಷವಾಗುತ್ತದೆ

... ರಾ. ರಾವ್ ...

... ಕೃಷ್ಣ ಶಾಸ್ತ್ರಿ,

೩. ವೆ॥ ಎಂ. ಎಂ. ಹರಿಜನ ಸೆಂಟ್ರಲ್ ಇನ್ಸ್ಪೆಕ್ಟರ್ ಅಥಣಿ, ೪. ಪ್ರೆ॥ ಹನುಮಂತ ಶ್ರೀನಿವಾಸ ಶಾಸನೂರಾಪೂರ ಕ್ಲರ್ಕ ಕಮೀಶನರ ಕಚೇರಿ ಬೆಳಗಾಂವ, ೫ ಮೆ॥ ಅಬ್ದುಲ್ ರಹಿಮಾನ ಪೀರ್ ಅಬ್ದುಲ್ಲಾ ಕರೀಂ ಕ್ಲರ್ಕ ಡೆವಲಪ್‌ಮೆಂಟ್ ಆಫೀಸ್ ಶಾಹಪೂರ.

ವರ್ಗಾವರ್ಗಗಳು

ಬೆಳಗಾವಿಯ ಚಿಕ್ಕೋಡಿಯ ವೆ॥ ಬಸಂಗೌಡ ವಿಠಲ ಮಾದಭಾವಿ ಇವರು ಸಂಗಮೇಶ್ವರದ ಮಾಮಲೇದಾರರಾಗಿಯೂ ಸಿದ್ದಾಪುರದ ಮಾಮಲೇದಾರರಾದ ವೆ॥ ಶ್ರೀನಿವಾಸ ಗೋಪಾಲ ಕೊಯಮತ್ತೂರ ಇವರು ಬೆಳಗಾವಿಯ ಚಿಕ್ಕೋಡಿಗೆ ಯೂ, ರಾಜಾಪುರದ ಮಾಮಲೇದಾರರಾದ ವೆ॥ ಸೊಪ್ಪೆ ರಾಮಚಂದ್ರ ಹರಪನಹಳ್ಳಿ ಇವರು ಸಿದ್ದಾಪುರದ ಮಾಮಲೇದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವೆ॥ ರುದ್ರಯ್ಯ ಹಿರೇಮಠ ಖುಷ್ಟಿನಕೇರಿ ಇವರು ಕಲಘಟಗಿಯ ತಾಲೂಕ್ ಲೋಕಲ್ ಬೋರ್ಡ್ ಮೆಂಬರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಧಾರವಾಡದಲ್ಲಿ ಪ್ಲೇಗಿನ ರೋಗವು ಉಲ್ಬಣವಾಗಿದ್ದು ಈ ವರೆಗೆ ೨೦೦ ಮರಣಗಳಾಗಿವೆ. ಇಲ್ಲಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಆರಿಸುವಿಕೆಯ ಕಾರ್ಯವು ಕಳೆದ ತಾ॥ ೨೧ ರಲ್ಲಿ ನಡೆದು ರಾ॥ ರಾ॥ ಗಳಾದ (೧) ಗೋವಿಂದರಾವ್ ದೇಶಪಾಂಡೆ (೨) ಬಿಂದುರಾವ್ ಮುತಾಲೀಕದೇಸಾಯಿ (೩) ಶ್ರೀ ಗುರುಪಾದಯ್ಯ ಗೋಂದೀಮಠ (೪) ರಾಮರಾವ್ ಜಕಾತಿ (೫) ಹನುಮಂತರಾವ್ ದೇಸಾಯಿ, (೬) ಶ್ರೀ ಗದಗಯ್ಯ ಹೊಸಮನಿಮಠ (೭) ಬಿಂದೇರಾವ್ ಜೋಗ, (೮) ಪುರೋಹಿತ ಶಾಳ, (೯) ವಿಶ್ವನಾಥರಾವ್ ಹೊಸೂರಕರ, (೧೦) ಮಿ॥ ಸ್ಯಾಂಗ್ ವೀರಕರಮ್ಮಿರ್, (೧೧) ನಾರಾಯಣರಾವ್ ಕಲಿಗುಡಿ, (೧೨) ಅಣ್ಣಾಚಾರ್ಯ ಕಟ್ಟಿ, (೧೩) ಚೆನ್ನಪ್ಪ ಅಣ್ಣಾ ಲಕಮನಹಳ್ಳಿ, (೧೪) ಗುರುಸಿದ್ದಪ್ಪ ಕೋಟೂರ, (೧೫) ಚೆನ್ನಮಲ್ಲಯ್ಯ ಗಬಾಡಿ, (೧೬) ಶ್ರೀ ಚನ್ನಬಸಯ್ಯ ಚರಂತಿ ಇಂತಿಷ್ಟು ದೊಡ್ಡಮನುಷ್ಯರುಗಳು ಮೆಂಬರುಗಳಾಗಿ ಆರಿಸಲ್ಪಟ್ಟರು.

ಧಾರವಾಡದ ಹುಜೂರು ಡಿಪ್ಯುಟಿ ಕಲೆಕ್ಟರ್ ರಾ॥ ರಾ॥ ವೆಂಕಟರಾವ್ ದತ್ತಾತ್ರೇಯ ಕುಷ್ಟಿಕರ ಇವರು ೨ ತಿಂಗಳ ರಜವನ್ನು ಪಡೆಸುಕೊಂಡಿರುವುದರಿಂದ, ಇವರ ಸ್ಥಾನದಲ್ಲಿ ವೆ॥ ಶ್ರೀಧರ ನಾರಾಯಣರು ನಿಯಮಿಸಲ್ಪಟ್ಟಿರುತ್ತಾರೆ.

ವಿಶ್ರ್ಯವ ಹಾರವು.

ಬೀಳೂರು ತಾ॥ ಅರೇಹಳ್ಳಿ ಬೆಳ್ಳಾವುರದಲ್ಲಿ ದೊಡ್ಡ ಕಾಫಿ ತೋಟಗಾರರಾಗಿಯೂ, ಲಕ್ಷಾಂತರ ರೂ. ಗಳ ಆದಾಯಗಳನ್ನು ಪಡೆಯುತ್ತಲೂ ಇದ್ದ ಪಟೇಲ್ ಪುಟ್ಟೇಗೌಡರು ಕಳೆದ ನವೆಂಬರ್ ತಿಂಗಳಲ್ಲಿ ತಮ್ಮ ಕೂಡ ೨೦ ಮನೆಯವರನ್ನು ಕರೆದುಕೊಂಡು ಪುಷ್ಪಗಿರಿಗೆ ತಮ್ಮ ಮನೆದೇವರ ಸೇವೆಗಾಗಿ ಹೋಗಿದ್ದು ಕಳೆದ ಫೆಬ್ರುವರಿ ತಾ॥ ೨೦ ರಲ್ಲಿ ಹಿಂತಿರುಗಿ ಸ್ವಗ್ರಾಮಕ್ಕೆ ಬಂದು ಅಸ್ವಸ್ಥರಾಗಿ ತಾ॥ ೨೩ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಇವರು ಅನೇಕ ಬಡಕೃಷಿಕ ಕುಟುಂಬಿಗಳಿಗೆ ಆಧಾರವಾಗಿದ್ದರಲ್ಲದೆ ಯಾರಾದರೂ ಕಲಹವನ್ನು ಮಾಡಿಕೊಂಡು ತಮ್ಮಲ್ಲಿಗೆ ಬಂದಲ್ಲಿ ಅವರ ಕಲಹವನ್ನು ಬಗೆಹರಿಸಿ ಸಮಾಧಾನಮಾಡಿ ಉಭಯರಿಗೂ ಬುದ್ಧಿವಾದವನ್ನು ಹೇಳಿ ಕಳುಹಿಸುತ್ತಿದ್ದರು. ಇಂತಹ ಪರೋಪಕಾರಿಗಳನ್ನು ಇಷ್ಟು ಶೀಘ್ರವಾಗಿ ಕಳೆದುಕೊಂಡುದಕ್ಕಾಗಿ ಈ ಪ್ರಾಂತ್ಯದ ಜನರೆಲ್ಲಾ ಬಹಳ ವ್ಯಸನಪಡುತ್ತಾರೆ.

ಬೆಂಗಳೂರಿನ ವೀರಶೈವ ಪ್ರಮುಖರಲ್ಲೊಬ್ಬರಾದ ಕಂಟ್ರಾಕ್ಟರ್ ಮಿ॥ ಎಂ ನಾಗಪ್ಪನವರ ಪತ್ನಿಯವರು ಕಳೆದ ಫೆಬ್ರುವರಿ ತಾ॥ ೧೭ರಲ್ಲಿ ಅಸ್ವಸ್ಥರಾಗಿ ಮಹಾಶಿವರಾತ್ರಿ ದಿವಸ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಮಿ॥ ನಾಗಪ್ಪನವರು ಮೈಸೂರ ಡಿ॥ ಚಿಗ್ಗದರ್ಗ ಪನಕೋಟೆ ತಾ॥ ಶಾಸಕರಕೋಟೆಯ ಕಾಡುಗಳಲ್ಲಿ ಸ್ಲಿಪರ್ ಕಂಟ್ರಾಕ್ಟನ್ನು ಮಾಡಲು ಈ ಪ್ರಾಂತ್ಯಕ್ಕೆ ಬಂದು ೭-೮ ವರ್ಷಗಳಾದವು. ಆ ಅಲ್ಪಕಾಲದಲ್ಲಿಯೇ ಇವರು ಇಲ್ಲಿ ಬಡಜನರಿಗೆ ಬಹು ಉಪಕಾರಿಗಳಾಗಿದ್ದು ಸಮಸ್ತ ಜನರ ಪ್ರೀತಿಗೆ ಪಾತ್ರರಾಗಿರುವರು, ಇಂತಹ ಪರೋಪಕಾರಿಗಳಿಗೆ ಪತ್ನೀವಿಯೋಗವು ಪ್ರಾಪ್ತವಾದುದಕ್ಕಾಗಿ ಈ ಪ್ರಾಂತ್ಯದ ಜನರೆಲ್ಲ ಬಹಳ ಹೆಚ್ಚಾಗಿ ದುಃಖಪಡುತ್ತಾರಲ್ಲದೆ, ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಪತಿಯವರಿಗೆ ದುಃಖಸಮಾಧಾನವನ್ನೂ ಉಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತಾರೆ.

ಅಂತರಸಂತೆ ನಿವಾಸಿ.

ಪಾವಗಡ.

“ಶ್ರೀ ವೀರಶೈವ ಹಿತೋಪದೇಶಕ” ಸಂಘದ ಪರವಾಗಿ ಇಲ್ಲಿನ ಶ್ರೀ ಪಟ್ಟದ್ದೇವರಲ್ಲಿ ಕಳೆದ ಫೆಬ್ರವರಿ ೨೨ ನೇ ತಾ. ನಡೆಯಿತು. ಆ ಕಾಲಕ್ಕೆ ಸಭಾ

ಷರಾದ ಇಲ್ಲಿನ ಶ್ರೀ ವಿರಕ್ತಮಠದ ಪಾಲಾಸ್ವಾಮಿಗಳವರು ಅಗ್ರಾಸನವನ್ನು ವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀಮಂತ ಶ್ರೀ॥ ಷಡಕ್ಷರಯ್ಯನವರು, ಸಂಘದ ಕಾರ್ಯದರ್ಶಿಗಳಾದ ಮಿ॥ ರಾ॥ ಮಾಗಡಿಹಳ್ಳಿ ಸಂಗಪ್ಪನವರು, ಗ್ರಾಮದ ಪ್ರಮುಖ ವೀರಶೈವರನ್ನು ಬರಮಾಡಿಕೊಂಡನಂತರ ನಾಲ್ಕು ಘಂಟೆಗೆ ಸಭೆಯು ಕಾರ್ಯವು ಪ್ರಾರಂಭವಾಯಿತು. ಆರಂಭದಲ್ಲಿ ಮಿ॥ ರಾ॥ ಪಟೇಲರ್ ಮಂಜಪ್ಪನವರು ಈ ಸಭೆಯು ಯಾವ ಸಮಾಜೋದ್ಧಾರಕರ ನಿಮಿತ್ತವಾಗಿ ಸೇರಿಸಲ್ಪಟ್ಟಿದೆಯೋ ಅಂತಹ ಇಂದಿನ ಉಪನ್ಯಾಸಕರಾದ ಶ್ರೀ॥ ಶ್ರೀಯುತ ಶಿವಮೂರ್ತಿಸ್ವಾಮಿ ಕಣಬುರಗಿಮಠ ಇವರನ್ನು ತಮಗೆ ಪರಿಚಯಮಾಡಿಕೊಡುವ ಅಗತ್ಯವೇ ಇಲ್ಲ. ಶ್ರೀಯುತ ಕಣಬುರಗಿಯವರು ನಿಂತಿದ್ದ ಅರಸೀಕೆರೆ ಶ್ರೀವೀರಶೈವ ಮಹಾಸಭೆಯನ್ನು ಇನ್ನೂ ಅನೇಕ ಉತ್ಸವಾದಿಗಳನ್ನು ನ್ಯಾಯವಾಗಿ ನೆರವೇರಿಸಿ ಸುಶಿಕ್ಷಿತರಾದ ಪ್ರತಿಯೊಬ್ಬ ವೀರಶೈವರಿಗೆ ಎಂದಿಗೂ ಮರೆಯದ ರೀತಿಯಲ್ಲಿ ಪರಿಚಯವುಳ್ಳವರಾಗಿರುತ್ತಾರೆ. ಇಂತಹ ಸಮಾಜೋದ್ಧಾರಕರು ಈ ದಿವಸ ಇಲ್ಲಿ “ವೀರಶೈವರಭಿವೃದ್ಧಿ” ಎಂಬ ವಿಷಯಕ್ಕೆ ಉಪನ್ಯಾಸಮಾಡುತ್ತಾರೆ; ತಾವುಗಳೆಲ್ಲ ಶಾಂತಚಿತ್ತದಿಂದ ಕೇಳಬೇಕೆಂದು ಅರಿಕೆಮಾಡಿಕೊಂಡನಂತರ, ಉಪನ್ಯಾಸಕರಾದ ಶ್ರೀಯುತ ಶಿವಮೂರ್ತಿಸ್ವಾಮಿಗಳವರು ಭಾಷಣಮಾಡಲಾರಂಭಿಸಿದರು. ಇವರು ಮಾಡಿದ ಘನವಾದ ಉಪನ್ಯಾಸದ ಸಾರಾಂಶವೇನೆಂದರೆ, “ಆಚಾರವೇ ಧರ್ಮಕ್ಕೆ ಮೂಲವಾಗಿದೆ. ಪ್ರಕೃತ ನಮ್ಮ ಧರ್ಮದವರಲ್ಲಿ ಆಚಾರಾದಿಗಳು ಕಡಿಮೆಯಾಗಿಯೂ, ತಪ್ಪಾಗಿಯೂ ಆಚರಿಸಲ್ಪಡುತ್ತವೆ. ಮನಸ್ಸು ಬಹು ಚಂಚಲವಾದುದು, ಇದನ್ನು ಸದಾಚಾರದಲ್ಲಿ ನಿಲ್ಲಿಸಬೇಕಾದರೆ ಇಂತಹ ಸದ್ಗುರುಗಳ ದರ್ಶನವೂ, ಸತ್ಸಹವಾಸವೂ ಅತ್ಯಾವಶ್ಯಕವು. ಇವೆಲ್ಲಕ್ಕೂ ಮನೋಜಯವಾಗಬೇಕಾದರೆ ಇಷ್ಟಲಿಂಗದಲ್ಲಿ ನೈಷ್ಠೆಯಿಂದ ವಿಧಿನಿಷ್ಠನಾಗಿ ಅರ್ಚನಾದಿಗಳಿಂದ ಮನಸ್ಸನ್ನಿಡಬೇಕಾದುದತ್ಯಾವಶ್ಯಕವು. ಈ ವಿಷಯದಲ್ಲಿ ಪದಾರ್ಥವಿಜ್ಞಾನಶಾಸ್ತ್ರಕ್ಕೂ, ಪಾರಮಾರ್ಥಶಾಸ್ತ್ರಕ್ಕೂ ಇರತಕ್ಕ ಸಂಬಂಧವನ್ನು ಚೆನ್ನಾಗಿ ವಿವರಿಸಿದರು. ಇದೆಲ್ಲ ತಿಳಿಯದೆ ಜನಗಳು ಅನಾಚಾರಿಗಳಾಗುವುದಕ್ಕೆ ವಿದ್ಯಾವಿಹೀನತೆಯೇ ಕಾರಣವಾಗಿದೆ. ಇದರಿಂದ ಜನಗಳಲ್ಲಿ ಜಗಳಗಳೂ, ಅನೈಕ್ಯಮತ್ಯವೂ ನೆಲೆಗೊಂಡು ಸಕಲ ವಿಧದಲ್ಲಿಯೂ ಶೋಚನೀಯಸ್ಥಿತಿಗೆ ಹೋಗುತ್ತಿರುವೆವು. ವರ್ತಕರಲ್ಲಿ ಅಪ್ರಮಾಣಿಕತೆ, ದ್ವೇಷಾಸೂಯೆಗಳು ಹುಟ್ಟುತ್ತಿವೆ, ಆದುದರಿಂದ ಪಾಶ್ಚಾತ್ಯರಂತೆ ಸಂಘಗಳ ಮೂಲಕವಾಗಿ ವ್ಯಾಪಾರಮಾಡುವ ಪದ್ಧತಿಯು ನಮ್ಮಲ್ಲಿ ಬರಲೊಲ್ಲದು. ಈ ಪ್ರಕಾರ ಪ್ರತಿಯೊಂದು ವಿಷಯದಲ್ಲಿಯೂ ನಮ್ಮ ಜನಗಳಿಗೆ ತಿಳುವಳಿಕೆ ಬರುವುದಕ್ಕಾಗಿ ಈ ವಿಧವಾದ ಸಂಘಗಳು ಅಲ್ಲಲ್ಲಿ ಸ್ಥಾಪಿತವಾಗುವುದು ಅತ್ಯಾವಶ್ಯಕವು. ಇಲ್ಲಿ “ವೀರಶೈವ ಹಿತೋಪದೇಶಕ” ಎಂಬ ಸಂಘವು ಸ್ಥಾಪಿಸಲ್ಪಟ್ಟಿರುವುದನ್ನೂ, ಇದರ ಕಾರ್ಯಕ್ರಮವನ್ನೂ ನೋಡಿ ನನಗೆ ಅತ್ಯಾನಂದವಾಯಿತು. ನಾನು ಇದಕ್ಕೆ ಸಂತೋಷದಿಂದ ಮೆಂಬರನಾಗುತ್ತೇನೆ ಇವೆಲ್ಲಾ ಮಹಾಸಭೆಯ ಫಲಗಳೆಂದು ಹೇಳಿ ತಮ್ಮ ಉಪನ್ಯಾಸವನ್ನು ಪೂರೈಸಿದರು. ಅನಂತರ ಮಿ॥ ರಾ॥ ಪಟೇಲರ್ ಮಂಜಪ್ಪನವರು ಉಪನ್ಯಾಸದ ಸಾರಾಂಶವನ್ನು ಹೇಳಿ ತಮ್ಮ ಅಮೂಲ್ಯವಾದ ಕಾಲವನ್ನು ಇಲ್ಲಿ ಈ ರೀತಿ ಕಳೆದುದಕ್ಕೆ ಸಂಘದ ಪರವಾಗಿ ಕೃತಜ್ಞತೆಯನ್ನು ಉಪನ್ಯಾಸಕರಿಗೊಪ್ಪಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಇದೇ ಸಂಘದ ಪರವಾಗಿ ತಾ॥ ೨೩ ನೆಯ ದಿವಸ ಶ್ರೀ ವಿರಕ್ತಮಠದಲ್ಲಿ ಮಿ॥ ರಾ॥ ಕರಡಿ ಗುರುನಾಥಪ್ಪನವರಿಂದ ಶಿವಕಥೆಯು ಜರುಗಿಸಲ್ಪಟ್ಟಿತು. ಗ್ರಾಮದ ಪ್ರಮುಖ ವೀರಶೈವರೆಲ್ಲ ದಯಮಾಡಿಸಿದ್ದರು. ಮಿ॥ ರಾ॥ ಗುರುನಾಥಪ್ಪನವರ ಅತ್ಯಂತ ಸ್ವಾರಸ್ಯವಾದ ಬೋಧಾಕ್ರಮದಿಂದ ಅಲ್ಲಲ್ಲಿ ಶಿವಕಥೆಗಳು ಜರುಗುತ್ತಿರುವವು.

ಪ್ರತ್ಯಕ್ಷದರ್ಶಿ.

ಅನಂತಪುರ ಡಿ॥ ಗುತ್ತಿ ತಾ॥ ಅವಿದ್ಯಾಲ್ ಗ್ರಾಮದಲ್ಲಿ ನಡೆದಿದ್ದ ವೀರಶೈವ ಪ್ರಾಂತಿಕ ಸಭೆಯು.

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಗುರುಪಟ್ಟಾಧ್ಯಕ್ಷ ಶ್ರೀಮತ್ ಚನ್ನವೀರರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಅವಿದ್ಯಾಲ್ ಗ್ರಾಮಕ್ಕೆ ಚಿತ್ತೈಸಿರುವಾಗ್ಗೆ ಅವರ ಪ್ರೋತ್ಸಾಹದಿಂದ ಮೇಲೆ ಹೇಳಿದ ಪ್ರಾಂತಿಕ ಸಭೆಯು ಈ ಗ್ರಾಮದ ವೀರಶೈವ ವಿದ್ಯಾ ಮತ್ತು ಮತಾಭಿಮಾನಿಗಳಾದ ಶ್ರೀಮಂತ ಮಲ್ಲಿಕಾರ್ಜುನಗೌಡರ ಅಧ್ಯಕ್ಷತೆಯಲ್ಲಿ ಕಳೆದ ಫೆಬ್ರವರಿ ತಾ॥ ೧೨ ಮತ್ತು ೧೩ರಲ್ಲಿ ಊರ ಮುಂದಣ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಬಹು ರಮ್ಯವಾಗಿ ರಚಿಸಲ್ಪಟ್ಟಿದ್ದ ಮಂಟಪದಲ್ಲಿ ಸೇರಿತ್ತು. ಈ ಸಭೆಗೆ ಅನೇಕ ಗ್ರಾಮಗಳ ಭಕ್ತಮಾಹೇಶ್ವರರೂ ನಿಂಬಗಲ್ಲು ಮತ್ತು ಉರವಕೊಂಡ ಮಠಾಧ್ಯಕ್ಷರುಗಳೂ ಆಗಮಿಸಿದ್ದರು. ನಿಂ... ...ಅಧ್ಯಕ್ಷರು ಸಭೆಯು ಮಾ...

ಶಾಲೆ ಸಂಸ್ಥಾನದ ಸುಬೇದಾ

ಚಂದ್ರಶೇಖರ ಶಾಸ್ತ್ರಿಗಳು ಅಧ್ಯಕ್ಷರು ಮುಂತಾದವರ ಸ್ವಾಗತವನ್ನು ಮಾಡಿದರು. ಅನಂತರ ಅಧ್ಯಕ್ಷರು ಉಜ್ಜಯಿನಿ ಸಂಸ್ಥಾನಾಧೀಶ್ವರರು ಈ ಸಭೆಯನ್ನೆರೆಯಿಸಲು ಕೊಟ್ಟ ಪ್ರೋತ್ಸಾಹ ವಿಷಯವನ್ನು ತಿಳಿಸಿ ಸಭಾಪರವಾದ ವಂದನೆಯನ್ನು ಮಹಾಸ್ವಾಮಿಯವರಿಗರ್ಪಿಸಿ ತಮ್ಮ ಭಾಷಣವನ್ನು ಮಾಡಿ ಶ್ರೀ ಪೂಜ್ಯಪಾದರು ಈ ಗ್ರಾಮಕ್ಕೆ ಆಗಮಿಸಿದುದರ ಜ್ಞಾಪನಾರ್ಥವಾಗಿ ಒಂದು ಫಂಡನ್ನು ಕೂಡಿಸಬೇಕೆಂದು ಹೇಳಿ ಕುಳಿತುಕೊಂಡರು. ಸನ್ನಿಧಿಯ ವಿದ್ಯಾರ್ಥಿಯಾದ ಎಂ. ಚನ್ನಬಸವಯ್ಯನವರು ಲಗ್ನ ಮುಂತಾದ ಕಾರ್ಯಗಳಲ್ಲಿ ದುಂದುವೆಚ್ಚದಿಂದಾಗುವ ಹಾನಿ ಮತ್ತು ಅದರ ಪರಿಹಾರೋಪಾಯಗಳನ್ನು ಕುರಿತು ಭಾಷಣ ಮಾಡಿದ ಮೇಲೆ ಆಸ್ಥಾನದ ಸುಬೇದಾರ್ ವೀರಭದ್ರಯ್ಯನವರು ಸಭಾ ನಡೆವಳಿಕೆಯನ್ನೂ ಈ ಮುಂದೆ ಪಾಸಾದ ಠರಾವುಗಳನ್ನೂ ವಾಚಿಸಿ ವಿಶದವಾಗಿ ಶ್ರುತಪಡಿಸಿದರು. ಅಲ್ಲಿಗೆ ಸಾಯಂಕಾಲವಾಗಲು ಪೂಜ್ಯಪಾದರುಗಳಿಗೂ ಸಭಿಕರಿಗೂ ಪಾನ ತಾಂಬೂಲಗಳು ಹಂಚಲ್ಪಟ್ಟು ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿನ ಮಧ್ಯಾಹ್ನ ಪುನಃ ಸಭೆಯು ಕೂಡಿ ಆಸ್ಥಾನದ ಕರಣೀಕರು ಎಸ್. ಎಂ. ರವರು ಸ್ತ್ರೀ ಶಿಕ್ಷಣದ ಮೇಲೂ, ಸಂಸ್ಥಾನದ ಮ್ಯಾನೇಜರ್ ಬಿ. ಎಂ. ಉದ್ಯಾನಪ್ಪನವರು ಜಗದಾಚಾರ್ಯರು ತಮ್ಮ ದೇಶಸಂಚಾರದಲ್ಲಿ ಧರ್ಮಬೋಧಕರನ್ನು ಅಲ್ಲಲ್ಲಿ ನೇಮಿಸುವುದರಿಂದಾಗುವ ಮಹದುಪಕಾರದ ಮೇಲೂ ಸಂಸ್ಥಾನದ ಎಲ್. ಎಂ. ರವರು ವೀರಶೈವಮತದ ಉತ್ಕರ್ಷ ಮತ್ತು ಅಷ್ಟಕರ್ಮಗಳ ಮೇಲೂ, ನಿಂಬಗಲ್ ಧರ್ಮಶಾಲಾಧ್ಯಕ್ಷರು ಮೈಸೂರ್ ಸ್ಟಾರ್ ಮತ್ತು ಧರ್ಮತರಂಗಿಣಿ ಪತ್ರಿಕೆಗಳ ಚಂದಾದಾರರ ಅಭಿವೃದ್ಧಿಯ ಮೇಲೂ ಭಾಷಣಗಳನ್ನು ಯುಕ್ತಿಯುಕ್ತವಾಗಿಯೂ ಸರಸವಾಗಿಯೂ ಮಾಡಿದರು. ಸಾಯಂಕಾಲದಲ್ಲಿ ಪೂಜ್ಯಪಾದರುಗಳು ಅಧ್ಯಕ್ಷರು ಮೊದಲಾದ ಪ್ರಮುಖರ ಛಾಯಾಚಿತ್ರಗಳು ತೆಗೆಸಲ್ಪಟ್ಟು ಸಭಿಕರಿಗೆ ಗಂಧಪುಷ್ಪ ತಾಂಬೂಲ ವಿನಿಯೋಗದಿಂದ ಸಭೆಯು ಜಯರವದೊಡನೆ ವಿಸರ್ಜಿಸಲ್ಪಟ್ಟಿತು.

ಸಭಾನಿರ್ಣಯಗಳು.

೧ ಅವಿದ್ಯಾಲ್ ಗ್ರಾಮಕ್ಕೆ ಆಚಾರ್ಯರು ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಒಂದು ಫಂಡು ಸ್ಥಾಪಿಸಲ್ಪಡಬೇಕು.

೨ ವಿದ್ಯಾಶಕ್ತಿಯುಕ್ತ ಉಜ್ಜಯಿನಿ ಸಂಸ್ಥಾನದ ಸ್ಥಿರಪಟ್ಟಾಧ್ಯಕ್ಷ ಶ್ರೀ ಚನ್ನವೀರಸ್ವಾಮಿಗಳು ಶಿವಯೋಗಮಂದಿರದಲ್ಲಿ ವಿದ್ಯಾಭ್ಯಾಸಂಗಮಾಡುವಂತೆ ಪ್ರೋತ್ಸಾಹಿಸಬೇಕಾಗಿ ಧರ್ಮೋತ್ತೇಜಕ ಸಭೆಯವರನ್ನು ಪ್ರಾರ್ಥಿಸಿಕೊಳ್ಳಬೇಕು.

೩ ವೀರಶೈವ ಬಾಲಕ ಬಾಲಿಕೆಯರುಗಳನ್ನು ಅಗತ್ಯವಾಗಿ ವಿದ್ಯಾವಂತರನ್ನಾಗಿ ಮಾಡಬೇಕು.

೪ ವೀರಶೈವರು ಲಗ್ನ ಮುಂತಾದ ಕಾರ್ಯಗಳನ್ನು ಮಿತವ್ಯಯದಿಂದಲೇ ಮಾಡಿಸಿಕೊಳ್ಳತಕ್ಕದು.

೫ ನಮ್ಮ ಪ್ರಾಂತ್ಯದಲ್ಲಿರುವ ನಿಂಬಗಲ್ ಧರ್ಮಪಾಠಶಾಲೆಯಲ್ಲಿ ವೈದಿಕ ವಿದ್ಯೆಯನ್ನು ಹೇಳಿಕೊಡಬೇಕಲ್ಲದೆ, ಈ ಪ್ರಾಂತ್ಯದ ಪ್ರತಿಯೊಬ್ಬ ಮಠಸ್ಥರೂ ವೈದಿಕವಿದ್ಯಾ ಸಂಪನ್ನರಾಗಬೇಕು.

೬ ಮೈಸೂರು ಸ್ಟಾರ್ ಪತ್ರಿಕೆಗೂ ಧಾರವಾಡದ ಧರ್ಮತರಂಗಿಣಿಯ ಪತ್ರಿಕೆಗೂ ಈ ಪ್ರಾಂತ್ಯ ಕನಿಷ್ಠ ಪಕ್ಷ ಗ್ರಾಮಕೊಬ್ಬರಾದರೂ ಚಂದಾದಾರರಾಗಬೇಕು. (ಚಂದಾದಾರರಾಗಲು ಸಭಿಕರನೇಕರೊಪ್ಪಿದರು.)

೭ ಈ ಸಭೆಯ ನಡೆವಳಿಕೆಗಳನ್ನು ಧರ್ಮೋತ್ತೇಜಕ ಸಭೆಗೂ, ಮೈಸೂರು ಸ್ಟಾರ್ ಮತ್ತು ಆಂಧ್ರಪತ್ರಿಕೆಗಳಿಗೂ ಕಳುಹಿಸಬೇಕು. ಎಂದು ನಿರ್ಧಾರಗಳಾದುವು.

A Mallikarjuna Gowda
ಪ್ರಾಂತಿಕಸಭಾ ಪ್ರೆಸಿಡೆಂಟ್

ವೀರಶೈವ ಮತಸ್ಥರಿಗೆ ಅತ್ಯಾವಶ್ಯಕಗಳಾದ ಪುಸ್ತಕಗಳು.

ವೀರಶೈವಾಮೃತ ಪುರಾಣ ತಾತ್ಪರ್ಯ ಸಹಿತ ಕಾಂಡ ಭಾಗ ೨ ಕ್ಕೆ ರೂ.	೯-೧-೦
ಸಟೀಕಾ ಗಣಭಾಷ್ಯ ರತ್ನಮಾಲಾ	೧-೪-೦
ಸಿದ್ಧೇಶ್ವರಪುರಾಣ ವಿಜಯ ವಚನಲಾಪ್ಯ	೧-೦-೦
ವೀರಶೈವಾಚಾರಬೋಧೆ	೦-೬-೦
ಶಿವಯೋಗರಹಸ್ಯ	೦-೨-೦
ಶಿವಮಹಿಮಾಶತಕ	೦-೨-೮

ಈ ಪುಸ್ತಕಗಳು ವೀರಶೈವ ಮತವನ್ನೂ, ಲಿಂಗಾಂಗಸಾಮರಸ್ಯ ಷಟ್ಸ್ಥಲ ವಿಷಯಗಳನ್ನೂ ಕರತಲಾಮಲಕವಾಗಿ ಬೋಧಿಸುವುವು. ಒಳ್ಳೆಯ ಮುದ್ರಣ, ಒಳ್ಳೆಯ ಕಾಗದ, ಒಳ್ಳೆಯ ಬೈಂಡ್ ಮಾಡಿರುವುವು.

ಪುಸ್ತಕ ದೊರೆಯುವ ಸ್ಥಳ
ನಲಿಂಗಸ್ವಾಮಿ, ಹೊಸಪೇಟೆ

ಸರಸವಾದ ಸಂಗ್ರಹಪುಸ್ತಕಗಳು.

ವಿರಕ್ತಶೀಲದ ಶೌಚಾಚಾರ—ನವರಸಭರಿತವಾದ ಕವಿ ದಂಬರಿ ೦—೭—೬, ಚಾಜಾರಿ—ಚಮತ್ಕೃತವಾದ ೦—೨—೬; ವಿಶ್ವೇಶ್ವರ—ಸ್ತೋತ್ರಾರ್ಥಗರ್ಭಿತವಾದ ತತ್ವಕಾದಂಬರಿ ೦—೧—೦ ಶಿವಭುಜಂಗಸ್ತೋತ್ರ ಸ ವ್ಯಾಖ್ಯಾನ ೦—೧—೬ ಶ್ರೀಹರಿಚರಿತ್ರದರ್ಶನ ೦—೧—೦.

ಗ್ರಾಹಕರಿಗೆ ಬಂಚಲಿಂಗದರ್ಶನವೆಂಬ ಪುಸ್ತಕವು ಬಹು ಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯು ವೆಚ್ಚ ನಮ್ಮ ವಿಳಾಸ—

ಸಿ. ವಿ ಶಾಸ್ತ್ರಿ, ಚಾಮರಾಜನಗರ

ವಿವೇಕಮಂಜರಿ

೨ ನೆಯ ಭಾಗ

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು ವಿಷಯವಿವೇಚನೆ, ವಾಕ್ಯಾತುರ್ಯದಬಾಧಿ ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯದಲ್ಲಿ ಅನೇಕ ಪಂಡಿತರ ಮೆಚ್ಚಿಗೆಗೊಳಗಾಗಿರುವುದರಿಂದ ಹೀಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಹೆಚ್ಚಿನ ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು ಬೆಲೆ ಬಹಳ ಕಡಿಮೆ

೧ ನೆಯ ಭಾಗ ೨ ಆಣೆ ೧೧೦ ಪುಟಗಳು

೨ ನೆಯ ಭಾಗ ೩ ಆಣೆ ೧೫೦ ಪುಟಗಳು.

ಅಂಚೆಯವೆಚ್ಚ ಬೇರೆ

ವಿಳಾಸ.—"ಮೈಸೂರ್ ಸ್ಟಾರ್ ಆಫೀಸ್" ಮೈಸೂರ್.

ನೀತಿಮಂಜರಿ.

3

(ಎರಡನೆಯಾವೃತ್ತಿ ಸುಧಾರಿಸಿದುದು)

ಇದರಲ್ಲಿ ಅನೇಕ ನೀತಿಯ ವಿಷಯಗಳೂ, ಮನೋರಂಜಕ ವಿಷಯಗಳೂ ನಿಬಂಧರೂಪವಾಗಿ ಬರೆಯಲ್ಪಟ್ಟಿರುತ್ತವೆ ದರಲ್ಲಿ ಮುಖ್ಯವಾಗಿ ಸರ್ ಜಾನ್‌ಲಬಕ್, ಚೆಸ್ಟರ ಫೀಲ್ಡ್, ಗಂಬರ್ಗ, ಬೇಕನ್ನ ಮೊದಲಾದವರ ಗ್ರಂಥಗಳಿಂದಲೂ, ದುಸ್ಥಾನದ ಪ್ರಾಚೀನ ಮತ್ತೂ ಅರ್ವಾಚೀನ ಇತಿಹಾಸಗಳ ಮೇಲಿಂದಲೂ ನಿಬಂಧಗಳನ್ನು ಬರೆದಿರುತ್ತಿದ್ದು, ಈ ಸ್ತಕವು ಆಬಾಲವೃದ್ಧ ಸ್ತ್ರೀಪುರುಷರಿಗೆ ಓದಲಿಕ್ಕೆ ಬಹಳ ಯೋಗ್ಯವಾಗಿರುತ್ತದೆ ಮುಂಬಯಿ ಸರ್ಕಾರದ ವಿದ್ಯಾಖಾತೆಯವರು ಇದನ್ನು ಇನಾಮಿನ ಪುಸ್ತಕವೆಂದು ಮಂಜೂರ ಮಾಡಿರುವುದರಿಂದ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಅವಶ್ಯವಾಗಿ ಓದತಕ್ಕದು ೨ ನೆಯಾವೃತ್ತಿಯ ಪ್ರತಿಗಳು ಬಗಳೂರ ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿರುವುವು ಪುಟಸಂಖ್ಯೆ ೧೬೯, ಬೆಲೆ ೬ ಆಣೆ ಅಂಚೆಯ ವೆಚ್ಚ ೧ ಆಣೆ

ಗ ಹ. ಜೋಷ್ಯಾಪುರ

ಪ್ಲೀಡರ, ಧಾರವಾಡ

28 ಉತ್ತಮ ಗ್ರಂಥಗಳು.

ಶಿವಸ್ತವರತ್ನಮಾಲೆ— ಬೆಲೆ ವಿ ಪಿ ೨ ಆಣೆ ಇದು ಶ್ರೀಕಂಠ ಉತ್ತಮವಾದ ಕನ್ನಡಟೀಕೆಯಿಂದ ಕೂಡಿದೆ

ಶಿವಮಾಹಾತ್ಮ್ಯಪ್ರಕಾಶಿಕೆ— ಬೆಲೆ ವಿ ಪಿ ೩ ಆಣೆ ಸ್ವಕೃತ ಟೀಕಾ ಪ್ರಕಾಶಿಕಾಸಹಿತವಾಗಿದೆ. ಶೋಧಿಸಲಿ ಬೇಕಾದ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ ಪಿ. ೧೮ ೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಸಿದ್ಧಾಂತಸಿದ್ಧಾಂತ— ಬೆಲೆ ವಿ. ಪಿ. ೮ ಆಣೆ ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಪೂರ್ವಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತ— ಬೆಲೆ ವಿ. ಪಿ. ೮ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೩ ನೆ ಇಸವಿಯ ಪಾಕೆಟ್‌ಡೈರಿ.

8

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಸೈಜು—ಸುಲಭವಾದ ಕಿಸೆಯಲ್ಲಿಡಲು ಎಂಬ ಬಟ್ಟೆಯಿಂದ ಬಂಧ ಹೊಲಿಯಿದ್ದು. (೩) ಅಕ್ಷರ— ಗಳಲ್ಲಿ ಮುದ್ರಣವಾದದ್ದು. (೨) [illegible] ನಾಲ್ಕು ದಿನಗಳಿಗೆ ಒಂದು ಹಾಳೆ ಲೆಕ್ಕದಲ್ಲಿದ್ದರೂ, ೩ ದಿನ ಬರೆಯುವ ಸ್ಥಳದ ಕೊನೆಯಲ್ಲಿ ಲೆಕ್ಕದ ಸ್ಥಳಗಳೂ ಇರುತ್ತವೆ (೪) ವಿಷಯ—ದವಾಖಾನೆ, ರೈಲು, ಪೋಸ್ಟ್, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು

ಆರು ನಮೂನೆ ಡೈರಿಗಳು.

೧. ಚಿಕ್ಕದು ಹೊಸದಕಟ್ಟು ಇರತಕ್ಕದ್ದು ೬ ಆಣೆ ೨ ಚಿಕ್ಕದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೫ ಆಣೆ. ೩ ದೊಡ್ಡದು ಹೊಸದಕಟ್ಟು ಇರತಕ್ಕದ್ದು ೬ ಆಣೆ ೪ ದೊಡ್ಡದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೮ ಆಣೆ ಜೀವಿವಾ ೧. ಚಿಕ್ಕದು ಹೊಸದಕಟ್ಟು ಇರತಕ್ಕದ್ದು ೮ ಆಣೆ ಜೀವಿವಾ ೬. ಚಿಕ್ಕದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೩ ಆಣೆ

ವಿಳಾಸ:—ವಿಜಯ ಕೋರಿ ಕಂಪನಿ,

ಬೆಂಗಳೂರು ಸಿಟಿ

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

25 ಗುಣವಾಗದಿದ್ದರೆ ಹಣಮರಳ.

ಮದನೋದ್ದೀಪಕ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕರ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಗರ್ಮಿ ದಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೮ ರೂ. ಗಳಿಗೆ ಕೊಡುವೆವು. ವಿ. ಪಿ. ೪ ಆಣೆ ಬೇರೆ. ಅನುಮಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ,

ಜಿಲ್ಲಾ ಉತ್ತರಕನ್ನಡಾ

ನೋಟೀಸ್.

೨ ಜಾತಕ ಸಂಬಂಧ

[illegible]

ಸಂಪೂರ್ಣಜಾತಕವು

ಸ್ಮಿತ್ರರೇ—ತಮ್ಮ ಮಕ್ಕಳಿಗೆ ಸಂಪೂರ್ಣ ಜಾತಕವನ್ನು ತಯಾರಿಸಬೇಕೆ ಬ ಅಪೇಕ್ಷೆಯು ಸ್ಥಳದಲ್ಲಿ ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನಘಳಿಗೆ [illegible] ದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ [illegible] ವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟ [illegible] ಫಲಭಾವಕುಂಡಲಿ ಅಷ್ಟಕವರ್ಗ [illegible] ಶಿವರ್ಗ ಷಡ್ಬಲಗಳು ಗ್ರಹಗಳಿಗಿರುವ ಅಪಸ್ಥಾನ [illegible] ವಿಶ್ವವು ಆಯುರ್ದಾಯವನ್ನು ಅನೇಕವಿಧವಾದ ಯೋಗಗಳು ಜಾತಕಗಣಿತಗಳನ್ನು ಶಿಂಥ್ರುವು [illegible] ತಿಥಿವಾರನಕ್ಷತ್ರ ರಾಶಿ ಲಗ್ನ ಫಲ ರಾಜಯೋಗ [illegible] ವಿದ್ಯಾದಿಕ ಭಾವಫಲ ಆಯುಷ್ಯದ [illegible] ಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿ, ಮು ಮೊದಲಾದ ಯಾವತ್ತುಫಲಗಳನ್ನು [illegible] ಸುಂದರವಾದ ಪುಸ್ತಕದಲ್ಲಿ ಬರೆದು ಕಳಿಸುತ್ತೇವೆ [illegible] ಕೆ ೧ ಕ್ಕೆ ಕ್ರಯ ರೂ ೧೧ [illegible]

ವರ್ಷ ಜಾತಕವು

ಕೇಳುವವರು ತಮ್ಮ ಜನನಕಾಲವು [illegible] ರಿಂದ ಜಾತಕವನ್ನು ಬಲಿಸು

ಯತ್ರಿ [illegible] ಕಾರಣ ಪ್ರ[redacted]ದು ತಮ್ಮ ಮನಸ್ಸು ಹೊಸದನ್ನು ಯಾಗು ಕಾಣು ಮಾಡಿದ ಪ್ರಶ್ನೆಯ ಯ [illegible] ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಬರೆದು ಕಳಿಸಿದರೆ, ನಾವು ಪ್ರಶ್ನೆಯನ್ನು ಸ್ಥಿರಪಡಿಸಿಕೊಂಡು ವಿಸ್ತೃತ ಸಂಪೂರ್ಣ ಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿಗು ಬರೆದು ಕಳಿಸುತ್ತೇವೆ. ಸಕ್ಕ ಜಾತಕ ಕ್ರಯ ರೂ ೪—೧—೦.

೧೨ ತಿಂಗಳ ಭವಿಷ್ಯ

[illegible]—ತಮ್ಮ ಹೆಸರನ್ನು ಬರೆದು ಕಳಿಸಿದರೆ ಪ್ರತಿ [illegible] ತಿಂಗಳ ಭವಿಷ್ಯ ಅಂದರೆ ಪ್ರತಿ ತಿಂಗಳಲ್ಲಿ ಜರುಗುವ ಲಾಭ ನಷ್ಟ ದೋಷ [illegible] ಮುಂತಾದ ಯಾವತ್ತು [illegible] ಅನೇಕ ವಿಷಯಗಳನ್ನು ಬರೆದು ಕಳಿಸುತ್ತೇವೆ [illegible] ಪತ್ರಿಕೆಗೆ ಕ್ರಯ ರೂ ೧—೦—

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಫಲಸಾರ ರೂ ೦—೧೦—೦, ವೀರಶೈವಮತ [illegible] ೮—೦; ಸಂಕ್ಷಿಪ್ತಮಿಶ್ರಲಿಂಗಾರ್ಚನವಿಧಿ ರೂ ೦ ೩ [illegible], ನವಗ್ರಹಗಳದಂಡಕ ರೂ ೦—೨—೦,

ಸಂಪೂರ್ಣ ಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಕಟವಾಗಿ ಕೊಡುತ್ತೇವೆ. ವರ್ಷ ಜಾತಕವನ್ನು ಬರಿಸಿದವರಿಗೆ [illegible] ದೊರೆಯುತ್ತವೆ. ಜಾತಕಸುಧಾಸಾರ ವೀರಶೈವಮತ [illegible] ಯಾವದಾದರೂ ತಪ್ಪಿಕೊಂಡವರಿಗೆ ನವಗ್ರಹದಂಡಕ [illegible] ತ್ತೇವೆ [illegible] ವಿ. ಪಿ. ಸಹಿತ ವಿರಕ್ತ [illegible]

[illegible] ಶಾಸ್ತ್ರಿಗಳು [illegible]

ಬಳ್ಳಾರಿ

ಸಂತೋಷಕರವಾದ ಪ್ರಕಟಣೆ.

2 ಬರುವ ಮೂರು ತಿಂಗಳು ಅಲ್ಪ ದರ ಮಾರಾಟ

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಹಿತ 4 ರೂಪಾಯಿ ಮಾತ್ರ 5 ವರ್ಷಗಳ ಗ್ಯಾರೆಂಟಿ

ಹೊಸಮ ತರೇ.



ಈ ವಾಚ್ [illegible] ಕ್ರಮವಾದ ರೀಪೇರ್ ಕೇಸಿನಿಂದ ತಯಾರಾದದ್ದು ಅದರ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿ [illegible] ಕೆತ್ತಿರುವ ವಾಚ್ [illegible] ಬಹಳ ಬರುವುದು ಮತ್ತು [illegible] ಕಾಲವನ್ನು ತೋರಿಸುವದು, ಎಂಬದು [illegible] ತಿಳಿದುದು [illegible] ಖಾತ್ರಿಯಾದದ್ದು, ಅನೇಕ ವರ್ಷಗಳ [illegible] ಬರುವ [illegible] ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು

(1) ಸುಂದರವಾದ ಎಲೆಕ್ಟ್ರಿಕ್ [illegible] ದಾರದ ವಾಚ್ ಸರಪಣಿ (2) [illegible] (3) ನಾಜೂಕಾದ [illegible] (4) [illegible] ವಾಚ್ [illegible] (5) [illegible] (6) [illegible] (7) [illegible] (8) [illegible] (9) [illegible] (10) [illegible] (11) [illegible] (12) [illegible] ನೆಟ್ಟು.

[illegible]

ವಿಳಾಸ [illegible]

[illegible]

ಲಗ್ನಪತ್ರಿಕೆಗಳ ಸಂಬಂಧವಾದ ಪ್ರಕಟನೆ

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟರಾಜ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖು, ಚಕ್ರ, ಹನುಮಂತ, ಗಣಪತಿ, ಸರಸ್ವತಿ, ಶ್ರೀನಿವಾಸಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮುದ್ರಿಸಿಕೊಡುತ್ತೇವೆ.

ಬೆಸ್ಟ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೬-೮-೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯನ್ನು, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೪-೦ ಆಣೆಯಂತೆ ಕಳುಹಬೇಕು. ಸ್ವಲ್ಪ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆ ಮುನ್ನ ಪಡದ್ದಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಜಾಸ್ತಿಯಾಗಿ ಕೊಡಬೇಕು, ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಸ್ಟಾರ್ ಪ್ರೆಸ್, ಮೈಸೂರ್.

24 ಸೂ ಚ ನಾ ·

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನೆಯಿಂದ ವೈಯೋಶಿಗನ ಉದ್ದೀಪನೆಯೂ ರೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಶಾಖವಷ್ಟವೂ ಪಟ್ಟಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕರಪ್ಪೆಯುವರೂ ದ ಅಥವಾ ಯಾವದಾದರೊಂದು ಕಾರಣದಿಂದ ನರದೌರ್ಬಲ್ಯವುಂಟಾಗಿದ್ದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸ್ತ್ರೀ ಪುರುಷರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯೂ ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೬ ಬಾ, ೬-೧೨-೦ ರೂ. ೩ ಬಾ, ೩-೬-೦ ರೂ. ಒಮ್ಮೆಗೆ ೧೨ ಡಜನ್ನು ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ವ. ಖ. ಬೇರೆ

ಪಚನಾಂಗಸುಧಾರ್ಣವ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯೂ ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ವ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ವ. ಖ. ಬೇರೆ

« ಪಾ ಚ ಕ . »

(« ಪಚನಮಾಡುವ ಔಷಧವು. »)

ಇದರ ಸೇವನೆಯಿಂದ ಪಚನಶಕ್ತಿಯೂ ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ ಹೊಟ್ಟೆಯುಬ್ಬುವದಿಲ್ಲ ಹಸಿವೆಯೂ ಚೆನ್ನಾಗಿ ಆಗುತ್ತದೆ ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರು ತೇಗುಗಳು ಬರುವದಿಲ್ಲ ೧ ಬಾ, ೮ ಆಣೆ. ವ.ಖ. ಬೇರೆ.

ನಂ. ೫೫ « ಅಂಜೀರಾರ್ಕಮಧು ಕಂಪನಿ »

ಧಾರವಾಡ ಮತ್ತು ಮಿಂಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

5

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮುದ್ರಿಸಿಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸವಿಸ್ತರವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಪಂಡಿತರೆಲ್ಲರೂ ಈ ಗ್ರಂಥವನ್ನು ಒಂದುಸಾರಿ ಪ್ರೀತಿಯಿಂದ ಪಾರಾಯಣಮಾಡಬೇಕು ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾವಭೋಧೆಯಾಗುವುದು. ಸಂಶಯವಿಲ್ಲ, ಸಂಕೋಚವಿಲ್ಲ ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೮೯ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ ೪ ಆಣೆ

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಜಂಗಮ ಕಾವಲ, ಓಲೆಕಣಿಬೀದಿ ಮೈಸೂರು

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

45

ಲೋಕಾಮೃತವೆಂಬ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರಸ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಲಿನೊಡನೆ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹಸಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಣ್ಣಜ್ವರ, ಕೈಕಾಲ್ಸೆಳೆತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ. ೧೦೦ ಮಾತ್ರೆಗಳುಳ್ಳ ಕಪ್ಪಿಗೆ ೮ ಆಣೆ; ೫ ಕಪ್ಪಿಗೆ ೧ ಕಪ್ಪು ಹೆಚ್ಚು. ೧ ರಿಂದ ೧೦ ಕಪ್ಪಿನವರೆಗೆ ಪೋಸ್ಟೇಜು ೪ ಆಣೆ.

೩. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೋ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂದೆಹವಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಹೇಳಾತದೇದಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಜೋಗಳಕೆ ಯಿಷ್ಟು ತರಿಸಿ ನೋಡಿ, ಅನುಭವಿಸಿದತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕಪ್ಪಿ ೧ ಕ್ಕೆ ರೂ ೧ ಸೆಟ್ಟಿ ಮೊದಲಾದವಳಿ ಸವರುವ ಡಬ್ಬಿ ೧ ಕ್ಕೆ ೫ ೪. ಪಿರದರಿಂದ ಟಪಾಲ್ ಖರ್ಚ್ ೫ ಆಣೆ ಮಾತ್ರ.

ಯೋಗ್ಯಪಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸ್ಚ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ಕೃಷ್ಟವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸಹಿ) ಲಕ್ಷ್ಮಣರಾಯುಡು, ಮಾರ್ಕೆಟ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಮಭವನ, ದೊಡ್ಡಬಾಳ್ಳು, ಮೈಸೂರು.

ಸಂ ಸ್ತಾ ಪ ಎ ಸ್. ಗು ರ ಳ ಪ್ಪ ರ ವ ರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ

70 ಮೈಸೂರು

ಗೋರೋಚನ ಮಾತ್ರೆ— ೧೦ ಮಾತ್ರೆಗಳನ್ನು ನುಂಗಿದರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೬೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯಾಗುವುದು. ೧೦ ಮಾತ್ರೆ ಸೀಸೆ ೦-೩-೦, ೬೦ ಮಾ ಸೀಸೆ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅದ್ವಿತೀಯ ಸಮಾನರಹಿತ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೫೦ ಸಲಕ್ಕೆ ಆಗುವ ಔಷಧಿ ೦-೩-೦. ತೊಲೆ ೧ ಕ್ಕೆ ೧-೪-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ಮಾತ್ರೆ ಸೀಸೆ ೦-೮-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೦-೪-೦.

ಕ್ಷೀರಮಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನ ಔಷಧಿ ೦-೦-೦.

ಸುಖಭೇದಿ ಮಾತ್ರೆ— ೧೦ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೬೦ ಮಾತ್ರೆ ಸೀಸೆ ೦-೩-

ಮಲಶೋಧನವಟಿಕಾ— ರಾತ್ರಿ ಮಲಗುವಾಗ ದುಃಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೪.

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ— ೩೦ ಮಾತ್ರೆ ಸೀಸೆ ೨-೦-

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೪-

ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೨-

ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-೩-

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಹದಾ ಕೊಡತಕ್ಕದ್ದು. ಪ್ರಾರ್ಥನೆಯ ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೦ನೇ ಇಸವಿ ಮಾರ್ಚಿ ತಾ॥ ೪ ರಿಂದ ೧೯೧೦ ಮಾರ್ಚಿ ತಾ॥ ೧೧ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೧ನೆಯ ವಿರೋಧಿಕೃತು ಸಂವತ್ಸರದ ಫಾಲ್ಗುಣ ಬ॥ ಪ ವ್ಯಯದ ಫಾಲ್ಗುಣ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ತೇದಿ
4	[1] ಸೋ	ಪಾ	20-26	ಉತ್ತ	51-12	22
5	ಮಂಗ	ಬಿ	17-24	ಹಸ್ತ	50 2	23
6	ಬುಧ	ತ	15-10	ಚಿತ್ತ	50-1	24
7	[2] ಗುರು	ಚ	14-2	ಸ್ವಾತಿ	50-30	25
8	[3] ಶುಕ್ರ	ಪ	14-20	ವಿಶಾಖ	54-18	26
9	[4] ಶನಿ	ಷ	15-50	ಅನೂ	58-40	27
10	ಭಾನು	ಸ	18-38	ಜೇಷ್ಠ	60 0	28

(1) ಪರಂಜ್ಯೋತಿ ತಿರುನಕ್ಷತ್ರಂ, ಕಲಬುರ್ಗಿಯ ಶ್ರೀನಿವಾಸಸ್ವಾಮಿಗಳ. (2) ವಾದಿರಾಜಸ್ವಾಮಿಗಳ ಪುಣ್ಯದಿನ. (3) ವ್ಯಾಸರಾಯಸ್ವಾಮಿಗಳ ಪುಣ್ಯದಿನ. (4) ಬೆಟ್ಟದಲ್ಲಿ ಮಹಾಬಲೇಶ್ವರ ರಥ, ಸತ್ಯಪ್ರತೀರ್ಥರ ಪುಣ್ಯದಿನ.

ಮೈಸೂರ್ : ಟಿ. ವಿರೂಪಾಕ್ಷಯ್ಯನವರಿಂದ — ಮುದ್ರಿತವಾಯಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯದಾ ಘನಪಥಕ್ಯತಾವತಾರಾ ಪಕ್ಯಜ್ಞನ ಪೃತ್ತಪೋಷರಾಜ್ಯೇಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ವೋಮಾಭೀಕ್ಷ್ಯದಶೀಲ ಸಾಕಲಿತಸೌಖ್ಯ ನ್ಯಾಲವಾಲಂಪಲಂ
ನೀಮಾತೀತಯಶೋಮೃತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿ ರೀಗಾಂ ಸದಾಪ್ರೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨ನೆ] ಮೈಸೂರ್ ಸ್ಟಾರ್ ಸೆ ೧೮೯೨ ನೆಯ ಇಸವಿ ಮಾರ್ಚಿ ತಾರೀಖು ೧೧ ನೆಯ ಸೋಮವಾರ [ಸಂಚಿಕೆ ೧೧

ಬಹಳ ದೊಡ್ಡ ಸೈಜಿನ ದಪ್ಪ ಪೋಸ್ಟ್ ಕಾರ್ಡ್ ! ಸರ್ವರಿಗೂ ಉಪಯೋಗ !! ಬೆಲೆ ಸುಲಭ !!!
ಸರ್ವರ ಉಪಯೋಗಕ್ಕಾಗಿ ಈ ಮಾದ್ರಿ ಪೋಸ್ಟ್ ಕಾರ್ಡುಗಳನ್ನು ಪ್ರಿಂಟ್ ಮಾಡಿಸಿದ್ದೇವೆ ಸಾಹುಕಾರರುಗಳು
ವರ್ತಕರು ಮೊದಲಾದವರಿಗೆ ಇದು ಮುಖ್ಯವಾಗಿ ಬೇಕಾದುದರಿಂದ ಒಂದು ಸಾರಿ ತರಿಸಿ ಪರೀಕ್ಷಿಸಿರಿ.

ಗೆ......
ಮಹಾರಾಜಶ್ರೀ........................ ......ರವರಿಗೆ
.... ಮಾಗವ
....ಅದಾಗಿ ಈವರಿಗೆ ಉಭಯಕುಶಲೋಪರಿ ಸಾಂಗ

ಕಾರ್ಡಿನಲ್ಲಿ ಮೇಲ್ಭಾಗದಲ್ಲಿ ಮೇಲೆ ಕಂಡಂತೆ ಪ್ರಿಂಟುಮಾಡಿಸಿರುತ್ತೇವೆ. ಮತ್ತು ಸ್ಥಳಸಂಕೋಚದಿಂದ ಇಲ್ಲಿ ಕಾರ್ಡಿನ ಚಿಕ್ಕ ಆಕೃತಿ ಕಾಣಿಸಿದೆ. ನಾವು ತಯಾರುಮಾಡಿಸಿರತಕ್ಕ ಕಾರ್ಡುಗಳು ಈಗಿನ ಪೋಸ್ಟ್ ರೂಲಿಗೆ ಸರಿಯಾಗಿ ದೊಡ್ಡ ಆಕೃತಿಯುಳ್ಳದಾಗಿರುತ್ತವೆ.

ಈ ಮಾದ್ರಿ ಪ್ರಿಂಟಾದ ಪೋಸ್ಟ್ ಕಾರ್ಡ್ ೧೦೦ ಕ್ಕೆ ೧-೪-೦. ೧೦೦೦ ಕಾರ್ಡುಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಒಂದು ಟೈಂಪೀಸ್ ಟೇಬಲ್ ಗಡಿಯಾರವನ್ನು ಬಹುಮಾನಕೊಡುತ್ತೇವೆ. ಪೋಸ್ಟೇಜು ಅಲಾಯಿದ. ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ

ಸುಂದರವಾದ ಕ್ಯಾರೇಜ್ ಕ್ಲಾಕ್.



೧ ಇದು ಗಂಟೆ ಅರ್ಧಗಂಟೆ ಸಹ ಹೊಡೆಯುತ್ತೆ. ಕ್ರಯ ೩-೮-೦ ೨. ಡಿಟೋ ಗಂಟೆ ಅರ್ಧಗಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೧ ಕ್ಕೆ ೪-೮-೦ ೩. ಇದೇ ರಕಂನಲ್ಲಿ ಪ್ರತಿಗಂಟೆಗೂ ತನ್ನಷ್ಟಕ್ಕೆ ತಾನೇ ಕರ್ಣಾನಂದವಾಗುವಂತೆ ಗಾನಮಾಡುವ ಕ್ಲಾಕ್ ೧ ಕ್ಕೆ ೪-೮-೦. ೪ ನಾವು ಇಷ್ಟಪಟ್ಟ ಟೈಮಿಗೆ ಸರಿಯಾಗಿ ಕರ್ಣಾನಂದವಾಗುವಂತೆ ಗಾನಮಾಡುವ ಕ್ಲಾಕ್ ೧ ಕ್ಕೆ ೪-೮-೦.

ಈ ನಕ್ಷೆಯಲ್ಲಿರುವ ವಾಚ್ ಮುಫತ್ ಕೊಡಲಾಗುತ್ತೆ ನಿಮಗೆ ಬೇಕೋ ?
ಇಂಥ ಸಮಯ ಮುಂದೆ ಸಿಕ್ಕಲಾರದು. ಅಂದರೆ ಮುಂದೆ ಯಾವಾಗಲೂ ಹೀಗೆ ಮುಫತ್ತು ಕೂಪನ್
ರವಾನಿಸುವುದಿಲ್ಲವಾದುದರಿಂದ ಈ ಕೂಪನ್ನನ್ನು ಹಾಳುಮಾಡದೆ ಉಪಯೋಗಿಸಿರಿ
ಜನರ ಕೋರಿಕೆಯಂತೆ ಈ ಸಾರಿ ಮಾತ್ರ ಹೊಸವರ್ಷದ ಉಗಾದಿಗಾಗಿ ಬಹುಮಾನವಾಗಿ ಕೂಪನ್ ಮುಫತ್ತು
ಕೊಟ್ಟಿರುತ್ತೇವೆ. ಸ್ವಲ್ಪ ಶ್ರಮಪಟ್ಟು ನಮ್ಮಿಂದ ವಾಚ್ ಬಹುಮಾನ ಪಡೆಯಿರಿ
ಅತ್ತಕಡೆ ಪಕ್ಕದಲ್ಲಿರುವ ಫ್ರೀ ಕೂಪನ್ನಿನಲ್ಲಿ ಈ ತಾರೀಖು ಲಾಗಾಯತು ೨ ತಿಂಗಳೊಳಗಾಗಿ ನಿಮ್ಮ ಸರಿಯಾದ
ವಿಳಾಸವನ್ನು ಸ್ಪಷ್ಟವಾಗಿ ಬರೆದು ಮೇಲಿನ ಗೆರೆಗೆ ಸರಿಯಾಗಿ ಕತ್ತರಿಸಿ ಒಂದು ಕವರಿನಲ್ಲಿಟ್ಟು ನಮಗೆ ರವಾನಿಸಿರಿ
ಮತ್ತು ಒಂದು ರೂಪಾಯಿಯನ್ನು ನಮ್ಮ ವಿಳಾಸಕ್ಕೆ ಮಣಿಯಾರ್ಡರ್ ಮಾಡಿರಿ. ನಿಮ್ಮ ರೂಪಾಯಿ ಬಂದಮೇಲೆ ನಿಮಗೆ ನಾಲ್ಕು ಕೂಪನ್‌ಗಳನ್ನು ರವಾನಿಸುತ್ತೇವೆ. ಆ ಕೂಪನ್‌ಗಳನ್ನು ನೀವು ನಿಮ್ಮ ಮಿತ್ರರಿಗೆ ಕೂಪನ್ ೧ ಕ್ಕೆ ೪ ಆ
ಣೆ ದರದ ಮೇರೆಗೆ ಮಾರಿ ಜುಮಲಾ ಆದ ೧ ರೂಪಾಯಿಯನ್ನು ನೀವು ಇಟ್ಟುಕೊಂಡು ಬಿಡಿರಿ. ಆಗ್ಯೆ ನೀವು ನಮಗೆ ರವಾನಿಸಿದ್ದ ೧ ರೂಪಾಯಿ ನಿಮಗೆ ಸಂದಿದಹಾಗಾಯಿತು. ನಿಮ್ಮಿಂದ ಕೂಪನ್ ಪಡೆದವರು ನಮ್ಮಿಂದ ನಾಲ್ಕು ನಾಲ್ಕು ಕೂಪನ್ ತರಿಸಿಕೊಂಡಕೂಡಲೆ ನಿಮಗೆ ಈ ಚಿತ್ರದಲ್ಲಿ ಕಂಡಂತಹ ಸರಿಯಾದ ಕಾಲವನ್ನು ತೋರಿಸುವ ವಾಚನ್ನು ಗೋಲ್ಡ್ ಗಿಲ್ಟು ಸರಪಣಿಯು ಸಹಿತ ಪೋಸ್ಟೇಜು ಪ್ಯಾಕಿಂಗ್ ವಗೈರೆ ಕರ್ಚಿಲ್ಲದಂತೆ ಮುಫತ್ತು ರವಾನಿಸುತ್ತೇವೆ. ನಿಮ್ಮಿಂದ ಕೂಪನ್ ಪಡೆದವರೂ ಸಹ ನೀವು ಏನುಮಾಡಿದಂತೆಯೇ ಮಾಡಿ ನಮ್ಮಿಂದ ವಾಚ್ ಬಹುಮಾನಪಡೆಯಬಹುದು



ಮುಫತ್ತು ಕೊಡುವ ಕೂಪನ್.

ಹೆಸರು .. . ..
ಕಸಬು .
ಗ್ರಾಮ. .. ಪೋಸ್ಟ್
ತಾಲ್ಲೂಕು .
ಡಿಸ್ಟ್ರಿಕ್ಟ್ . .
ತಾರೀಖು—೩-೧೮೯೨ ಎಂ. ಎಸ್. ಎಸ್. ಅಂಡ್ ಬ್ರದರ್ಸ್
ಮೈಸೂರ್

ಸೂಚನೆ.— ಈ ಕೂಪನನ್ನು ಈ ತಾರೀಖು ಲಾಗಾಯತು ೨ ತಿಂಗಳೊಳಗಾಗಿ ಒಂದು ರೂಪಾಯಿ ಸಹಿತ ನಮಗೆ ರವಾನಿಸಿದಲ್ಲಿ ತೆಗೆದುಕೊಳ್ಳುತ್ತೇವೆ. ನಿಧಾನಮಾಡಿದಲ್ಲಿ ಅಂದರೆ ಮೇಲ್ಕಂಡ ವಾಯಿದೆ ಮೀರಿದಮೇಲೆ ಕಳುಹಿಸಿಕೊಳ್ಳತಕ್ಕವರು ನಮಗೆ ನಾಲ್ಕಾಣೆ ರವಾನಿಸಿ ೧ ಕೂಪನ್ ಪಡೆದು ಅದರ ಜತೆಯಲ್ಲಿ ಒಂದು ರೂಪಾಯಿ ಕಳುಹಿಸಿ ನಾಲ್ಕು ಕೂಪನ್ ತರಿಸಿಕೊಳ್ಳಬೇಕಾಗುತ್ತೆ. ಆದ್ದರಿಂದ ಜಾಗ್ರತೆ ರೂಪಾಯಿ ರವಾನಿಸಿ ಕೂಪನ್ ತರಿಸಿಕೊಳ್ಳಿರಿ. ವಾಚ್ ತೆಗೆದುಕೊಳ್ಳುವುದುಂಟೆ ದಯಮಾಡಿ ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ಮ್ಮ ವಿಳಾಸ—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ

2 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧-೦-೦ ೪-೦-೦; ೩-೦-೧; ೨-೮-೧; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಪುನುಗು ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಸ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಬಾಲಲೀಲೆ ಚರಿತ್ರೆ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೬-೦
ಸಟೀಕಸಂಧ್ಯಾವ್ರತ	೦-೩-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೬
ವಿವೇಕಮಂಜರಿ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರಲೋಕ್ಯರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

29

ಬಸವರಾಜವಿಜಯಂ— ಬೆಲೆ ವಿ. ಪಿ ಯಿಂದ ೧-೬-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡದಸುಭಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ, ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ

ವೀರಶೈವ ಧರ್ಮಶಿರೋಮಣಿ.— ೧-೩-೦. ವಿರಶೈವ ಮತಸ್ವರೂಪವೂ—ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ)

ಸೌಂದರ ಪುರಾಣಂ.— ೧-೩-೦ ಸೌಂದರ ಸಂಬಂಧ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ

ಸಟೀಕ ತತ್ವಪ್ರಕಾಶಿಕಾ.— ೬ ಆಣೆ, ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನಿಷ್ಠೆಗಳ ಲಕ್ಷಣವೂ, ಮೋಕ್ಷವು ದೀಕ್ಷೆಗಳಿಂದಲ್ಲವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ

ಸ್ತುತಿ ಮುಕ್ತಾವಳಿ— ಬಸವೇಶ ಸಂಬಂಧವಾದ ಗದ್ಯಾದಿಗಳಿವೆ. ೬ ಆಣೆ.

ರತ್ನಶತಕಂ. —೨ ಆಣೆ, ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೊ ೪೦ ಪುಟಗಳು ಬರುತ್ತವೆ. ವರ್ಷದ ಚಂದಾ ೨-೧-೦.
ಎಸ್. ಆರ್. ಕಾಶಿನಾಥಶಾಸ್ತ್ರಿ

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ]

ಸಿಂಹಾಸನದಿಂದಿಳಿದು ಬಿಸಿ ಮಂದಿರಮಂ ನೋಡಬೇಕೆಂದು ಆನಂದದಿಂದ ಸತಿಪತಿಗಳಿರ್ವರೂ ತೆರಳಿ ಕೆಲವು ಶಹಾರಂಗಳಂ ಕೆಲವು ಬಂಧ್ರಾಳಿಗಳನ್ನು, ಕೆಲವು ಮಂಟಪಂಗಳಂ ಕೂಡ ನೋಡುತ್ತ, ಹಾಗೆಯೇ ಮೆಲ್ಲನೆ ಬರುವ ಹಾಗೆಮುಂದೆ, ಬಂ ಮಾಡಿರುವ ನಾಲ್ಕು ಮನೆಗಳಂ ಕಂಡು ಇದೇನೆಂದು ಕೇಳಿದ ರಾಜೇಂದ್ರನಂ ಕುರಿತು ನಾರೀ ಶಿರೋಮಣಿಯಾದ ಕುಸುಮಲತೆಯು, ಎಲೈ ಪ್ರಾಣನಾಥನೇ ಕೇಳು, ಈ ಗೃಹಂಗಳೊಳ್ ನಾನಾ ದ್ವೀಪಾಂತರಂಗಳ ಪದಾರ್ಥಂಗಳನ್ನು ತವರಿಷ್ಟ ರಾಶಿಗಳು ಶೇಖರಿಸಲ್ಪಡುವಂ ಧಾರಾ ಮಾಡಿರುವನು ಅದಂತಿರಲಿ, ಈಗ ನಿನಗೆ ತೋರುವ ಅಶ್ವಗಣ್ನವು ಅದೋ ಆ ಮನೆಯೊಳ್ ಕಟ್ಟಿರುವುದು ಎಂದು ನುಡಿದು, ಆ ಮನೆಯ ಮುಂಭಾಗದೊಳ್ ರಾಜೇಂದ್ರನಾದ ಸುಗಂಧರಾಜನೊಡನೆ ವಿಲಾಸದಿಂ ಬಂದು ನಿಂತು ವಿಚ್ಛಿಸಿದಂ ಬಿತ್ತಾಗ ಎಲೈ ಸ್ವಾಮಿಯೇ ಈ ದುಷ್ಟ ರಾಕ್ಷಸನು ಬಂದೊಂದು ಮಾಡಿದನೆ? ನಮ್ಮಂ ತಂದಂತೆ ನಮ್ಮ ದೇಶದಿಂದ ಈ ಅಶ್ವಮಂ ಕೂಡ ಅಪಹರಿಸಿ ತಂದನೆಂದು ನುಡಿಯಲು, ಸುಗಂಧರಾಜೇಂದ್ರನು ಆ ಮಾತಂ ಕೇಳಿ ಇನ್ನಿದು ಅಶ್ವವು ನಿಮ್ಮ ದೇಶಕ್ಕೆ ಯಾವ ಪರಿಯಿಂದ ಬಂದಿತೆಂದು ಹೇಳಲು ಚಂದ್ರವದನೆಯು ಎಲೈ ಸ್ವಾಮಿಯೇ! ಚಿತ್ತವಿಟ್ಟು ಲಾಲಿಸಬೇಕು ನಮ್ಮ ತಂದೆಯಾದ ಕುಸುಮಧ್ವಜರಾಯನು ಒಂದು ದಿನ ವಿನೋದಾರ್ಥವಾಗಿ ಬೇಂಟೆಯಾಡ್ಲು ಹೋಗುವುದಕ್ಕೆ ಪೋಗಿ, ಅಲ್ಲಿದ್ದ ಸಿಂಹಶಾರ್ದೂಲಗಳಂ ಸಂಹರಿಸಿ, ಬಹುದೂರ ಸಂಚಾರವಂ ಮಾಡಿ ಸಾಯಂಕಾಲವಾಗಲು, ಬಟ್ಟನೊಬ್ಬ ಜಾಬಾಲಿ ಮುಷಿಯಿರುವ ಆಶ್ರಮವಂ ಕಂಡು ಅಲ್ಲಿಗೆ ಪೋಗಲು, ಆ ಮುಷಿಯು ಅರಸಾದ ನಮ್ಮ ತಂದೆಗೆ ಮಧುಪರ್ಕಾದಿಗಳಂ ಕೊಟ್ಟು ಸಂತೈಸಿ, ಆ ಶಬದಂ ಕಳೆಯುತ್ತಿರುವ ಕಾಲದೊಳ್, ಆ ಆಶ್ರಮದಲ್ಲಿ ಸರ್ವಲಕ್ಷಣ ಸಂಪನ್ನವಾದ ಅನೇಕಾಭರಣಂಗಳಿಂದ ಅಲಂಕೃತವಾದ ನಿಜಾತೀಯವಾಗಿ ರೆಕ್ಕೆಗಳಂ ಕೂಡಿರುವ ಒಂದು ಕುದುರೆಯು ಸಂಚರಿಸುತ್ತಿರಲು, ನಮ್ಮ ತಂದೆಯು ಅದಂ ಕಂಡು ಆ ಮುಷಿಯೊಡನೆ ಎಲೈ ಮಹಾತ್ಮನೇ! ಈ ಲೋಕಾತಿಶಯವಾದ ಅಶ್ವರತ್ನವು ಎಲ್ಲಿಯದು, ಏನು ಕಾರಣದಿಂದ ಇಲ್ಲಿಗೆ ಬಂದಿರುವುದು, ಇದರಿಂದ ತಮಗೆ ಆಗುವ ಕಾರ್ಯವೇನು? ಎಂದು ಪ್ರಶ್ನಿಸಲು, ಆ ಜಾಬಾಲಿಮುನಿಯು ಆ ಮಾತಂ ಕೇಳಿ ರಾಜನು ಮಹಾಧರ್ಮಪರನೆಂದರಿತು ದಯೆಯಿಂದ ಎಲೈ ಅರಸೇ! ಕೇಳು, ಈ ಅಶ್ವವು ಅಮರಲೋಕವಾಸಿಯದು; ಈಗ ಈ ಭೂಲೋಕದೊಳ್ ಬಂದು ವಿಹಾರವಂ ಮಾಡುತಲಿದೆ, ಇದರ ವೃತ್ತಾಂತವು ದೇವರಹಸ್ಯವಾದುದರಿಂದ ವಿಶ್ವಾಸವಾಗಿ ನಿರೂಪಿಸಲ್ಪಡದು. ಈ ಕುದುರೆಯೊಳ್ ನಿನಗೆ ಆಸಕ್ತಿಯಿದ್ದರೆ ಇದು ನಿನ್ನ ಮನೆಯೊಳ್ ಇರುವ ಭಾಜದಿಂದಿದ್ದಲ್ಲಿ ಕೆಲವು ಕಾಲ ಕಳೆದ ಬಳಿಕ ಇದರ ಬಳಿಯಿದ ನಿನಗೆ ಹಿತವುಂಟಾಗುವುದೆಂದು ಆ ಶ್ವೇತಾರ್ಧದಿಂ ನಾಟಿ ಅಶ್ವರತ್ನವಂ ದಯಪಾಲಿಸಲು, ರಾಯನು ಆ ಮುಷಿಗೆ ದಂಡಪ್ರಣಾಮವಂ ಮಾಡಿ ಈ ಅಶ್ವ ಮೇಧ್ಯವೆನಿಸಿದುದು ತನ್ನ ಭಾಗ್ಯವೆನಿಸಿ ಒಂದು ನಿತ್ಯವಿಲ್ಲದೆ ಪೂಜಿಸುತ ಇದಕ್ಕೆ ನಿಜಮಾರ್ಗವೆಂದು ಬೆರಗನಿಕ್ಕಿ ಅತಿ ಸಂತೋಷದಿಂದಿರಲು, ಈ ಕಪಟ ರಾಕ್ಷಸನು ಈ ಅಶ್ವದ ವೃತ್ತಾಂತವಂ ಎಲ್ಲಿಯೋ ಕೇಳಿ ಅದಂ ಅಪಹರಿಸಬೇಕೆಂದು ನಿಶ್ಚಯಿಸಿ ಹಿಬ್ಬರಿಗೂ ತಿಳಿಯದಂತೆ ಮಾಯಾವಿದ್ಯೆಯಿಂದ ಅಲ್ಲಿ ತಿರುಗುತ್ತಿದ್ದು, ಒಂದು ದಿನ ರಾತ್ರಿಯ ಸಮಯವನ್ನು ನೋಡಿ ಈ ಅಶ್ವವಂ ಅಪಹರಿಸಿಕೊಂಡು ಹೋಗುವ ಸಮಯದೊಳ್ ಆಕಸ್ಮಿಕವಾಗಿ ನಿದ್ರಿತರಾದ ಉತ್ತಮ ಪದಾರ್ಥವಂ ನಿತ್ಯಕ್ಷೇಮದಿಂದೆಂದು ಮಲಗಿರುವ ಮನೆಯೊಳ್ ಮಲಗಿದ್ದ ನನ್ನ ಕುಳಗಳನ್ನೆಲ್ಲ ಕಲಕಿಸಿಕೊಂಡು ನಿಂತಿರ್ದ ನನ್ನಂ ಇಲ್ಲಿಗೆ ಅಪಹರಿಸಿಕೊಂಡು ಬಂದನು. ಅವನು ಬಂದು ಬಹುಕಾಲವೇ ಮಾಡಿದನು ನನಗೆ ಪರವಶವಾದ ಕೆಲವು ದಿನ ಸಂಗಡ ಅವನ ಸಿಕೊಂಡು ಬಂದ ದಿನದ ಆದಿವರೆಗೂ ಜೀವಿಸಿಕೊಂಡು ಇರುವೆನು, ಈಗ ಮಹಾನುಭಾವನಾದ ಆ ಜಾಬಾಲಿ ಮಹಾಮುನಿಯ ವಾಕ್ಯವು ಸಫಲವಾಯಿತೆಂದು ಹೇಳಿ ಈ ಅಶ್ವರತ್ನವು ನಿಮಗೆ ಪಟ್ಟದ ಕುದುರೆಯಾಗುವುದಕ್ಕೆ ಯೋಗ್ಯವಾಗಿದೆಯೆಂದು ನುಡಿಯಲು, ಸುಗಂಧಭೂಪಾಲರಾಜೇಂದ್ರನು ಆ ಕುಸುಮಲತೆಯ ಮಾತುಗಳಿಗೆ ಹರ್ಷಿತನಾಗಿ ರತಿಯಂತಿರುವ ಸತಿಯ ಬಿಗಿದಪ್ಪಿ ಅಧರಕ್ಕೆ ಮುದ್ದಿಸುತ, ಕೆಲವು ಹೊತ್ತು ಶೃಂಗಾರವನಂಗಳೊಳ್, ಕೆಲವು ಹೊತ್ತು ಸರೋವರಂಗಳೊಳ್, ಕೆಲವು ಹೊತ್ತು ಚಂದ್ರಶಾಲಾದಿ ಉತ್ತಮ ಮಂದಿರಂಗಳೊಳ್ ಬಾಹ್ಯರತಿ ಸುರತಗಳಿಂದಲೂ, ಬಹಿರ್ಬಂಧ ವಿಶೇಷಂಗಳಿಂದಲೂ ಬೆರೆದು ಮದನನ ಸ್ವೇಚ್ಛೆಯಿಂದ ಬೆಳೆಸಿತು ಒಂದೊಂದು ದಿವಸಂ ಒಂದೊಂದು ಕ್ಷಣದಂತೆ ಕಳೆಯುತ ಸುಖದಿಂದಿರ್ದನೆಂಬಲ್ಲಿಗೆ, ಕಿಂಡಿಕೋಗಲು ಯುಂಡನರಮನೆ ಮುಂದಕ್ಕೆ ಪವಾಡಗಳನ್ನು ನಿರಂ [illegible] ರಾತ್ರಿಯಿಂದಬಲ ಬಂದವನಿಂದ ಬಿಡಿಸಿ ನಿಪುಣ ಕೋದಂಡ ದಕರಿಂದ ಮಂಗಳಾಗ್ರದ ಭುಜದಂಡ ಪರಿಮಂಡಿತ ಚಾಮುಂಡಿಕಾ ಕಟಾಕ್ಷವೀಕ್ಷಣ ಪ್ರವರ್ಧಮಾನ ಭೂಮಂಡಲಾಧಿಪತ್ಯ ಸತ್ಯವ್ರತಾಚರ ಕಲಿ ಚಾಮರಾಜ ಸರ್ವಾಂಗ ಚತುರ್ವಿಧ ಪದಕ ಕವಿತಾ ನಿಸ್ಸೀಮ ನಿರ್ಮಾಣಧುರಂಧರಯ ಕವಿತಾಧಿಕ ದರಿದ ಪ್ರಬಂಧ ನಿಬಂಧನ ಧುರೀಣರ ತ್ರಿಭುವನ ಪವಿತ್ರೀಕರಣ ಗೋತ್ರಾನ್ವಲಯರ ಶ್ರೀ ಚಾಮರಾಜ ಮಹಾಪುತ್ರ ಶ್ರೀಕೃಷ್ಣರಾಜ ಒಡೆಯರವರಿಂದ ರಸಿಕ ಜನಾನಂದಕರವಾಗಿ ವಿರಚಿತವಾದ ಸೌಗಂಧಿಕಾಪರಿಣಯವೆಂಬ ಈ ನವೀನ ಕೃತಿಯೊಳ್ ಸುಗಂಧರಾಜೇಂದ್ರನು ಅಶ್ವರತ್ನವಂ ಪಡೆಯುವನೆಂದು ತೆರಳಿ ಇಳಿಶಾಸ್ತ್ರ ಮಂದಿರದೊಳ್ ಪತ್ನಿಸಹಿತ ಕುಸುಮಲತೆಯಿಂದ ಅಶ್ವದ ವೃತ್ತಾಂತವಂ ತಿಳಿದು ಅವಳೊಡಗೂಡಿ ಅಲ್ಲಿಯೇ ಸುಖದಿಂದಿರ್ದನೆಂಬ ಹದಿನೇಳನೆಯ ಆಶ್ವಾಸ ನಿರೂಪಣಕ್ಕೆ ಮಂಗಳಮಹಾ ॥

ಹದಿನೆಂಟನೆಯ ಆಶ್ವಾಸ ಪ್ರಾರಂಭ.

ಅನಂತರದಲ್ಲಿ ಕೆಲವು ದಿನಗಳು ಕಳೆದಬಳಿಕ ಬಂದು ಮೋಹನಮೆಂಬ ರಾಕ್ಷಸನು ಘೋರಾರಣ್ಯದೊಳ್ ಅನೇಕಂಗಳಾದ ಸಿಂಹ, ಶಾರ್ದೂಲ, ಶರಭ, ಗಜ, ವರಾಹ, ಸಲ್ಲಕಿ ಶಶ ಮೊದಲಾದ ಮೃಗಂಗಳಂ, ಜಲಜಂತುಗಳಾದ ಮಕರ ಮತ್ಸ್ಯ ತಿಮಿಂಗಿಲಂಗಳ, ಅನೇಕ ಮಾಯಾರೂಪಂಗಳಂ ಕೂಡ ಸಂಗ್ರಹಿಸಿಕೊಂಡು ತನ್ನ ಬಲಯುಕ್ತದಿಂದ ಪಟ್ಟಣವಂ ಕುರಿತು ವೇಗದಿಂ ಬರುತ್ತಿರಲು, ಭಯಭ್ರಾಂತನು ಅವನಂ ಕಂಡು ಹೇಗಬಂದು ಸುಮತಿಯು ಮುಖದಿಂದ ಸರ್ವ ಜನಕ್ಕೆ ತಿಳಿಸಿ ರಾಜೇಂದ್ರನಿಗೆ ಬಿನ್ನವಿಸುವಂತೆ ಮಾಡಲು, ಸುಗಂಧರಾಜೇಂದ್ರನು ಅದಂ ಕೇಳಿ ರಾಕ್ಷಸನು ಬರುವ ಪರಿಯಂ ನೋಡುವೆ ಎಂದು ಮಂದಿರದ ಉಪರಿ ಭಾಗವನ್ನೇರಿ ಕುಸುಮಲತೆಯೊಡಗೂಡಿ ನೋಡುತ ಭಯಂಕರವಾಗಿ ದೂರದೊಳ್ ಬರುತ್ತಿರುವ ರಾಕ್ಷಸಸೇನೆಯಂ ಕಂಡು ಬಿರುಗಾಳಿ ತಗಲಿ ಅಲ್ಲಾಡುವ ಲತೆಯಂತೆ ನಡುಗುತಲಿರುವ ಕುಸುಮಲತೆಯಂ ನೋಡಿ ಎಲೈ ಬಾಲೆಯೆ! ಈಗ ಕಕ್ಕಸವಾಗಿ ಬರುವ ಈ ರಕ್ಕಸನಂ ಬಲದಿಂದ ಬೊಕ್ಕಸಿ ದಕ್ಕಿಸಿಕೊಳ್ಳುವೆನು, ನೀನು ತತ್ತರಂಗೊಳ್ಳಬೇಡವೆಂದು ಚಿತ್ತರದ ಪ್ರತಿಮೆಯಂತಿರುವ ಚಿತ್ತಿನಿಯಂ ಅಕ್ಕರೆಯಿಂದ ಸಕ್ಕರೆಯಂತೆ ಸವಿಯಾದ ನುಡಿಗಳಿಂ ಮೇಳೈಸಿ ಧೈರ್ಯಗೊಳಿಸುತ ನೋಡುತಲಿರುವ ಸಮಯದೊಳ್, (ಸಶೇಷ)

ಮೈಸೂರು ದೇಶದಲ್ಲಿ ಹಸುರು ಗೊಬ್ಬರವನ್ನು ಹಾಕುವಿಕೆ

ಜಮೀನಿನ ಸುತ್ತಮುತ್ತಲಿರುವ ಮರಗಳ ಮತ್ತು ಸಮೀಪದಲ್ಲಿರುವ ಕಾಡುಗಳಲ್ಲಿರುವ ಮರಗಳ ಸೊಪ್ಪನ್ನು ಕಡಿದುಕೊಂಡು ಅವನ್ನು ಹಸರು ಗೊಬ್ಬರವಾಗಿ ಉಪಯೋಗಿಸುವುದು ಮತ್ತು ಜಮೀನಿನಲ್ಲಿ ವ್ಯವಸಾಯಗಾರರು ಗಿಡಗಳ ಅವುಗಳ ಪೈರನ್ನು ಬೆಳೆಯುವುದು ಈ ರೀತಿಯಾಗಿ ಎರಡು ವಿಧದಲ್ಲಿ ಹಸರು ಗೊಬ್ಬರವನ್ನು ಉಪಯೋಗಿಸುವರು. ಮೊದಲನೆಯ ಕ್ರಮವು ಕಳೆದ ಸಂಚಿಕೆಯಲ್ಲಿ ವಿವರಿಸಲ್ಪಟ್ಟಿದೆ. ಎರಡನೆಯ ಕ್ರಮವು ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರ ಹರಡಿ ರೂಢಿಯಲ್ಲಿರುವಂತೆ ಕಾಣುತ್ತದೆ. ಸಾಧಾರಣವಾಗಿ ಹುರುಳಿ, ಸಣಬು, ಉದ್ದು, ಹೆಸರು, ಮತ್ತು ಹುಚ್ಚೆಳ್ಳು ಇವುಗಳನ್ನು ಬೆಳೆಯುವುದು ವಾಡಿಕೆಯಲ್ಲಿದೆ. ಕೆಲವರು ಪ್ರತಿವರುಷವೂ ದ್ವಿದಳ ಧಾನ್ಯವನ್ನೇ ಬೆಳೆದು ಪೈರನ್ನು ಉತ್ತುಬಿಡುವರು, ಕೆಲವರು ಒಂದು ವರುಷ ದ್ವಿದಳ ಧಾನ್ಯದ ಪೈರನ್ನು ಇಟ್ಟು ಮುಂದಣ ವರುಷ ತರಗಿನ ಗೊಬ್ಬರವನ್ನು ಹಾಕುವರು, ಮತ್ತೆ ಕೆಲವರು, ಮುಖ್ಯವಾಗಿ ಚನ್ನಪಟ್ಟಣದ ತಾಲ್ಲೂಕಿನ ಕೆಲವು ಗ್ರಾಮಗಳ ರೈತರು ಮೂರು, ನಾಲ್ಕು ಅಥವಾ ಹತ್ತು ವರುಷಗಳಿಗೊಂದಾವೃತ್ತಿ ದ್ವಿದಳ ಧಾನ್ಯಗಳನ್ನು ಬೆಳೆದು ಉಳಿದ ವರುಷಗಳಲ್ಲಿ ದನದ ಮತ್ತು ತಿಪ್ಪೆಯ ಗೊಬ್ಬರವನ್ನು ಉಪಯೋಗಿಸುತ್ತಾರೆ.

ಈ ದ್ವಿದಳ ಧಾನ್ಯಗಳ ಸೈತ ಯಾವುದನ್ನು ಒಂದೇ ಒಂದನ್ನೇ ಮಾತ್ರ ಬೆಳೆಯುವುದಿಲ್ಲ. ಹಸರು ಗೊಬ್ಬರಕ್ಕಾಗಿ ಉಪಯೋಗಿಸಬೇಕೆಂಬ ಉದ್ದೇಶದಿಂದ ಬೆಳೆಯತಕ್ಕವರು ಹುರುಳಿಯನ್ನಾಗಲಿ ಅಥವಾ ಹುರುಳಿ ಮತ್ತು ಸಣಬನ್ನು ಜತೆಯಲ್ಲಾಗಲಿ ಬೆಳೆಯುತ್ತಾರೆ. ದ್ವಿದಳ ಧಾನ್ಯದ ಫಸಲನ್ನು ಅಪೇಕ್ಷಿಸುವವರು ಹೆಸರು, ಉದ್ದು ಮತ್ತು ಅಲಸಂದೆಯನ್ನು ಬೆಳೆಯುವರು. ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಾತ್ರ ಸಣಬು ಒಂದನ್ನೇ ಬೇರೆಯಾಗಿ ಬೆಳೆದು ಗೊಬ್ಬರವಾಗಿ ಉತ್ತುಬಿಡುವರು. ಉಳಿದ ಪ್ರದೇಶಗಳಲ್ಲಿ ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರು ಹೋಗಿ ಜೋಳವನ್ನು ಬೆಳೆಯುತ್ತಾರೆ ಇದು ಆರಂಭದವರ್ಷಕ್ಕೆ ಸಹಾಯಕಾರಿಗಳಾಗುವ ದನ ಕರುಗಳಿಗೆ ಬಹಳ ರಸವತ್ತಾದ ಮೇವಾಗುವುದೆಂದು ಕೆಲವರು ಹಸರು ಗೊಬ್ಬರದ ಪೈರುಗಳೊಡನೆ ಬೆಳೆಯುತ್ತಾರೆ, ಆದರೆ ಇದನ್ನು ಗೊಬ್ಬರಕ್ಕಾಗಿ ಉಪಯೋಗಿಸುವುದು ಬಹಳ ಅಪರೂಪ.

ದ್ವಿದಳ ಧಾನ್ಯಗಳು ಸಾಧಾರಣವಾಗಿ ಮಳೆಯ ನೀರಿನ ಆಸರೆಯಿಂದ ಬೆಳೆಯಲ್ಪಡುತ್ತವೆ. ಮುಂಗಾರು ಮಳೆಯ ಪ್ರಾರಂಭವಾದ ಕೂಡಲೆ ಇವುಗಳು ಬಿತ್ತನೆಮಾಡಲ್ಪಡುವವು. ಬಿತ್ತನೆಯಾದ ಮೂರು ತಿಂಗಳ ತರುವಾಯ ಉದ್ದು, ಹೆಸರು ಅಥವಾ ಅಲಸಂದೆಯನ್ನು ಬಿತ್ತಿದ್ದವರೆಲ್ಲರ ಸಿಕ್ಕುವಷ್ಟು ಕಾಯನ್ನೆಲ್ಲಾ ಕಿತ್ತು, ಎರಡು ವಾರಗಳವರೆ ಉಳಿವ ಎಲೆಗಳು ಮತ್ತು ಬಾಡದ ಕೋಗಳನ್ನು ಬಿಟ್ಟ ಮೇಯಿಸಿ ನಂತರ ಉಳಿದಿರತಕ್ಕ ಪೈರನ್ನು ಉತ್ತುಬಿಡುವರು. ಈ ರೀತಿ ಉಳಿಸಲ್ಪಟ್ಟ ಪೈರು ಕೆಸರು ಗದ್ದೆಯಲ್ಲಿ ಸುಮಾರು ಎರಡು ವಾರಗಳವರೆಗೆ ಕೊಳೆತ ತರುವಾಯ ಭತ್ತದ ಪೈರನ್ನು ನಾಟಿಹಾಕುತ್ತಾರೆ.

ಹುರುಳಿ ಮತ್ತು ಸಣಬನ್ನು ಮಾತ್ರವೇ ಬೆಳೆಯತಕ್ಕವರು ಅರ್ಧ ಅಥವಾ ಕಾಲುಭಾಗದ ಪೈರನ್ನು ಗೊಬ್ಬರಕ್ಕಾಗಿ ಉಪಯೋಗಿಸುವರು. ಸಣಬು ಒಂದನ್ನೇ ಬೆಳೆಯುವವರು ಮುಂಗಾರು ಬೆಳೆಯನ್ನು ಉಪಯೋಗಿಸುತ್ತಾರೆ. ದನಗಳನ್ನು ಮೇಯಿಸುವುದಕ್ಕೆ ಬಿಟ್ಟಾಗ ಅವು ಹಸರು ಹುಲ್ಲು ಮತ್ತು ಸಣಬಿನ ಗಿಡಗಳ ತುದಿಗಳನ್ನು ಮಾತ್ರ ತಿನ್ನುವುವು. ಹುರುಳಿಯೊಪ್ಪು ಅಷ್ಟು ರುಚಿಯಾಗಿರುವಂತೆ ತೋರುವುದಿಲ್ಲ. ಹುರುಳಿ, ಉದ್ದು ಮತ್ತು ಅಲಸಂದೆಯನ್ನು ಬೆಳೆಯತಕ್ಕವರು ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಎರಡು ವಾರಗಳವರೆಗೆ ದನಗಳನ್ನು ಬಿಟ್ಟು ಮೇಯಿಸಿ ಅನಂತರ ಉಳಿದುದನ್ನು ಮಾತ್ರ ಗೊಬ್ಬರಕ್ಕೆ ಬಿಡುವರು. ಹೀಗೆ ಮಾಡುವುದರಿಂದ ಪೈರಿನ ಕೊಳೆಗಳು ಮಾತ್ರ ಗೊಬ್ಬರಕ್ಕೆ ಸಿಕ್ಕುವವೇ ಹೊರತು ಪೈರಿನ ಹಸರು ಭಾಗವು ಬೇರೆ ಸಿಕ್ಕುವಂತಿಲ್ಲ. ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮನುಷ್ಯರ ಆಹಾರಕ್ಕೆ ಒದಗತಕ್ಕ ಹೆಸರು, ಕಡಲೆ, ಉದ್ದು ಮೊದಲಾದ ದ್ವಿದಳ ಧಾನ್ಯಗಳ ಪೈರನ್ನೇ ಇಟ್ಟು ತಪ್ಪದೆ ಕ್ರಮವಾಗಿ ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಅನಂತರ ದನಗಳನ್ನು ಬಿಟ್ಟು ಮೇಯಿಸಿ ಉಳಿದಿರುವ ಕೊಳೆಯನ್ನು ಉತ್ತು ಭತ್ತವನ್ನು ನಾಟಿ ಹಾಕುವರು. ಅಂತೂ ಈ ಪ್ರಾಂತ್ಯ ಪೈರಿನ ಹಸರು ಪದಾರ್ಥವು ಜಮೀನಿಗೆ ಸ್ವಲ್ಪವಾದರೂ ಸೇರುವುದಿಲ್ಲ. ಮನುಷ್ಯರ ಆಹಾರಕ್ಕೆ ಒದಗದೆ ಇರುವಂತಹ ಹಸರು ಗೊಬ್ಬರದ ಪೈರು ಸಣಬು. ಈ ಪ್ರಾಂತ್ಯದಲ್ಲಿ ಇದನ್ನು ಬೆಳೆಯುವುದು ಬಹಳ ಅಪರೂಪ. ಹಾಗೆ ಬೆಳೆಯುವ ಒಬ್ಬಿಬ್ಬರು ಸಣಬಿನ ಪೈರನ್ನು ಕತ್ತರಿಸಿ ಕರೆಯುವ ಹಸುಗಳಿಗೆ ಜೋಳದ ಕಡ್ಡಿಯನ್ನು ತಿನ್ನಿಸುವಂತೆ ತಿನ್ನಿಸಿ ಬಿಡುವರು. ಮೇಲೆ ಕಂಡ ವಿಷಯಗಳನ್ನೆಲ್ಲಾ ಪರಿಶೀಲಿಸಿ ನೋಡಿದರೆ ಶ್ರೀರಂಗಪಟ್ಟಣದ ಪ್ರಾಂತ್ಯ ಹಸರು ಗೊಬ್ಬರಕ್ಕಾಗಿ ಯಾವ ಪೈರನ್ನೂ ಬೆಳೆಯುವುದಿಲ್ಲವೆಂದು ಹೇಳಬಹುದು.

ಪೈರಿಗೆ ಮುಖ್ಯವಾಗಿ ಬೇಕಾದ ನೈಟ್ರೋಜನ್ (Nitrogen) ವಾಯುವು ಮತ್ತು ಸುಲಭವಾಗಿ ಕೊಳೆಯತಕ್ಕ ಸಜೀವ ಪದಾರ್ಥವನ್ನು ಹಸರು ಗೊಬ್ಬರವು ಭೂಮಿಗೆ ಸೇರಿಸುತ್ತದೆ.

ಹಸರು ಗೊಬ್ಬರದ ಪೈರುಗಳಲ್ಲಿ ಹೂ ಬಿಟ್ಟಿರುವಾಗ್ಯೆ ಅವುಗಳನ್ನು ಜಮೀನಿನಲ್ಲಿ ಉಳುವುದಕ್ಕೆ ಸಕಾಲವಾಗಿದೆ. ಆ ಸಮಯದಲ್ಲಿ ಅವುಗಳನ್ನು ಉತ್ತರೆ, ಹಸರು ಗೊಬ್ಬರದ ಪೈರುಗಳು ಅದುವರೆವಿಗೆ ಕೂಡಿ ಹಾಕಿರುವ ಪದಾರ್ಥಗಳೆಲ್ಲಾ ಜಮೀನಿಗೆ ಸೇರುವುವು.

ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರುಗಳಲ್ಲಿ ಸಣಬು ಮತ್ತು ಹಲಸಂದೆಯ ಪೈರುಗಳು ಇತರ ಪೈರುಗಳಿಗಿಂತ ಹೆಚ್ಚಾಗಿ ಎಂದರೆ ಎಕರೆಗೆ ೩೦ ಮತ್ತು ೩೦ ಪೌಂಡುಗಳು ತಕ್ಕ ನೈಟ್ರೋಜನ್ ವಾಯುವನ್ನು ಸೇರಿಸುತ್ತವೆ. ತಿರುಮಕೂಡ್ಲು ನರಸೀಪುರದ ಪ್ರಾಂತ್ಯ ಸಣಬನ್ನೇ ಬೆಳೆದು ಪೈರಿನಲ್ಲಿ ಹೂ ಬಿಟ್ಟಿರುವ ಸಮಯದಲ್ಲಿ ಉತ್ತುಬಿಡುವರು. ಈ ರೀತಿಯಾಗಿ ಸಣಬನ್ನು ಮಾತ್ರ ಬೆಳೆದ ಭೂಮಿಗೆ ಗೊಬ್ಬರವನ್ನಾಗಿ ಹಾಕತಕ್ಕ ಪ್ರದೇಶಗಳಲ್ಲೆಲ್ಲಾ ಹಸರು ಗೊಬ್ಬರವನ್ನು ಹಾಕುವುದರಿಂದ ಹೊಂದಬಹುದಾದ ಪೂರ್ಣ ಪ್ರಯೋಜನವನ್ನು ಹೊಂದಬಹುದೆಂದು ಹೇಳಬೇಕು. ಸಣಬನ್ನು ಮಾತ್ರವಲ್ಲದೆ, ಮತ್ಯಾವ ದ್ವಿದಳ ಧಾನ್ಯವನ್ನಾಗಲಿ ಅಥವಾ ಸಣಬಿನೊಡನೆ ಇತರ ಯಾವುದಾದರೊಂದು ದ್ವಿದಳ ಧಾನ್ಯವನ್ನಾಗಲಿ ಬೆಳೆಯುವವರು ಸಾಧ್ಯವಾಗಿ ಸಿಕ್ಕಿದಷ್ಟು ಫಸಲನ್ನು ತೆಗೆದುಕೊಂಡು ಕೂಳೆಯನ್ನು ಮಾತ್ರ ಗೊಬ್ಬರಕ್ಕೆ ಬಿಡುತ್ತಾರೆ. ಪೈರಿನಲ್ಲಿ ಕಾಳು ಗಟ್ಟುವವರೆವಿಗೂ ಬಿಟ್ಟಿದ್ದರೆ ಪೈರಿನಲ್ಲಿ ಕೂಡಿಸಲ್ಪಟ್ಟಿದ್ದ ನೈಟ್ರೋಜನ್ (Nitrogen) ವಾಯುವಿನ ಹೆಚ್ಚು ಭಾಗವು ಕಾಳಿನಲ್ಲಿ ಸೇರಿಹೋಗುವುದು. ಯಾವಯಾವ ಕಾಲದಲ್ಲಿ ನೈಟ್ರೋಜನ್ (Nitrogen) ವಾಯುವು ಸೇರಿದ ಎಷ್ಟೆಷ್ಟು ಭಾಗವಿರುವುದೆಂಬುದನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ.

ಧಾನ್ಯದ ಹೆಸರು	ನೈಟ್ರೋಜನ್
ಉದ್ದು	
ಹೆಸರು	

ಹಲಸಂಡೆ	೩.೨೦
ಅವರೆ	೩.೬೯
ಭತ್ತ	೧.೦೯

ಎಂದರೆ ಕಾಳನ್ನು ಬಿಡಿಸಿಕೊಂಡು ಕಡ್ಡಿಯನ್ನು ಮಾತ್ರ ಗೊಬ್ಬರಕ್ಕಾಗಿ ಉಪಯೋಗಿಸಿದರೆ, ಜಮೀನಿಗೆ ಸೇರಬೇಕಾದ್ದ ಹೆಚ್ಚು ಭಾಗ ನೈಟ್ರೋಜನ್ ವಾಯುವು ಜಮೀನಿಗೆ ಸೇರದಂತೆ ಮಾಡಿದಹಾಗಾಯಿತು. ಹೀಗೆ ಮಾಡುವುದರಿಂದ ಮುಂದಣ ಭತ್ತದ ಬೆಳೆಗೆ ಹಸುರು ಗೊಬ್ಬರದಿಂದ ಉಂಟಾಗುತ್ತಿದ್ದ ಪೂರ್ಣ ಪ್ರಯೋಜನವು ದೊರೆಯುವುದಿಲ್ಲ. ಅಲ್ಲದೆ ಕಾಳಿನೊಡನೆ ನೈಟ್ರೋಜನ್ ಮಾತ್ರವಲ್ಲದೆ ಫಾಸ್ಫಾರಿಕ್ ಆಸಿಡ್ (Phosphoric Acid) ಮರದ ಉಪ್ಪು (Potash) ಮತ್ತು ಸುಣ್ಣ (Lime) ವೂ ಸೇರಿಹೋಗುವುವು. ಹೀಗೆ ಕಾಳನ್ನು ಬಿಡಿಸಿಕೊಳ್ಳುವುದರಿಂದ ಯಾವ ಪದಾರ್ಥಗಳನ್ನು ಜಮೀನಿಗೆ ಒದಗಿಸಿಕೊಡಬೇಕೆಂಬ ಉದ್ದೇಶದಿಂದ ತಾವು ಹಸುರು ಗೊಬ್ಬರಕ್ಕಾಗುವ ಪೈರನ್ನು ಬೆಳೆದರೋ ಆ ಪದಾರ್ಥಗಳು ಸಿಕ್ಕದಂತಾಗುವುವೆಂಬುವುದನ್ನು ಅನೇಕರು ತಿಳಿದುಕೊಂಡಿರುವುದಿಲ್ಲ. ಜಮೀನಿಗೆ ಬೇಕಾಗಿರುವುದು ಹಸುರಾಗಿರುವ ಸೊಪ್ಪು ಮಾತ್ರವೇ ಎಂದೂ, ಕಾಳಿನಿಂದ ಜಮೀನಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲವೆಂದೂ ಜನರು ತಿಳಿದಿರುವರು. ಆದರೆ ಸೊಪ್ಪಿನಲ್ಲಿ ಸೇರಿದ್ದ ಪದಾರ್ಥಗಳ ಹೆಚ್ಚು ಭಾಗವು ಕಾಳುಗಳಲ್ಲಿ ಸೇರಿಹೋಗುವುವೆಂಬುವುದನ್ನು ಅವರು ಅರಿಯರು. ಕಾಳನ್ನು ಬಿಡಿಸಿಕೊಂಡರೆ ಮುಂದಣ ಭತ್ತದ ಪೈರು ಸರಿಯಾಗಿ ಆಗುವುದಿಲ್ಲವೆಂದು ಕೆಲವರು ಒಪ್ಪಿಕೊಳ್ಳುತ್ತಾರೆ: ಆದರೆ ತಾವು ಬಡವರಾದುದರಿಂದ ನಾಟಿ ಪೈರು ಪಕ್ವರೆಗಳಿಗೆ ತಗಲತಕ್ಕ ಖರ್ಚನ್ನು ಕೊಡಲು ತಮಗೆ ಶಕ್ತಿಯಿಲ್ಲದುದರಿಂದ ಈ ಕಾಳುಗಳ ಫಸಲನ್ನು ಕಟಾವುಮಾಡಿ ಅದನ್ನು ಮಾರಿದರೆ, ಅದರಿಂದ ಬರುವ ದುಡ್ಡು ಮೇಲೆಕಂಡ ಕೆಲಸಗಳಿಗೆ ಒದಗುತ್ತದೆಂದು ಹೇಳುತ್ತಾರೆ. ಕೆಲವರು ಪುಷ್ಕಳರಾದ ಕೃಷಿಕರು ಸಹಾ ಈರೀತಿ ಫಸಲನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಹದವಾಗಿ ಬೆಳೆದಿರುವ ಫಸಲನ್ನು ಬಿಡಲಾರದ ಮರುಳುತನವೇ ಕಾರಣವಾಗಿದೆ. ಆದುದರಿಂದ ಪೈರಿನಲ್ಲಿ ಹೂ ಕಟ್ಟಿದ ತರುಣದಲ್ಲಿಯೇ ಉತ್ತುಬಿಟ್ಟರೆ ಇಂಥಾ ಮರುಳುತನಕ್ಕೆ ಗುರಿಯಾಗಬೇಕಾದುದಿಲ್ಲ. ಹಾಗಿಲ್ಲದಿದ್ದರೆ ಬರೀ ಸಣಬು ಹೊರತು ಮತ್ತಾವುದನ್ನೂ ಬೆಳೆಯದಿರುವುದು ಸರ್ವೋತ್ತಮವಾಗಿದೆ.

ಸಾಧಾರಣ ಕಾಲದಲ್ಲಿ ಸಣಬು ಚೆನ್ನಾಗಿ ಬೆಳೆಯುತ್ತದೆ. ಮಳೆಯು ಹದವಾಗಿ ಬಿದ್ದರೆ ಬಿತ್ತನೆಯಾದ ೨ ಅಥವಾ ೩ ತಿಂಗಳೊಳಗೆ ಸಣಬು ಆರೇಳು ಅಡಿಗಳ ಎತ್ತರವಾಗಿ ಬೆಳೆದು ಎಕರೆಗೆ ೪೦೦೦೦ ಪೌಂಡು ಹಸುರು ಗೊಬ್ಬರವನ್ನು ಕೊಡುತ್ತದೆ. ಸಕಾಲದಲ್ಲಿ ಉಳಿದ ಗಿಡಗಳು ಬಲಿತು ಬೀಜಗಳಾದಾಗ್ಯೂ ಅವನ್ನು ದನರು ತಿನ್ನುವುದಿಲ್ಲವಾದುದರಿಂದ ಅದರ ಫಸಲನ್ನು ತೆಗೆದುಕೊಳ್ಳುವ ಸಂಭವವೇ ಇಲ್ಲ. ಹಾಗೆ ದನಕರುಗಳನ್ನು ಮೇಯಲು ಬಿಟ್ಟಾಗ್ಯೂ ಅವು ಎಳೆದಾದ ಕುಡಿಗಳನ್ನು ಮಾತ್ರ ತಿನ್ನುವುವೇ ಹೊರತು ಇತರ ಭಾಗಗಳ ತಂಟೆಗೆ ಹೋಗುವುದಿಲ್ಲ. ಮೇಲೆಕಂಡ ವಿಷಯಗಳನ್ನೆಲ್ಲಾ ವಿಚಾರಮಾಡಿ ನೋಡಿದರೆ ಭತ್ತದ ಜಮೀನುಗಳಿಗೆ ಹಸುರು ಗೊಬ್ಬರಕ್ಕೆ ಸಣಬಿನಷ್ಟು ಉತ್ತಮವಾದ ಪೈರು ಮತ್ತಾವುದೂ ಇಲ್ಲವೆಂದು ಹೇಳಬಹುದು. ಆದುದರಿಂದ ಸಾಧ್ಯವಾದ ಮಟ್ಟಿಗೂ ಸಣಬಿನ ವ್ಯವಸಾಯವನ್ನು ಅಭಿವೃದ್ಧಿಪಡಿಸಬೇಕು. ಕಾಳುಗಳ ಫಸಲನ್ನು ಕಟಾಯಿಸಿಕೊಳ್ಳುವವರೂ ಸಹಾ ಎರಡು ಮೂರು ವರುಷಗಳಿಗೊಂದಾವರ್ತಿ ಗೊಬ್ಬರಕ್ಕಾಗಿ ಬರಿಯ ಸಣಬನ್ನು ಮಾತ್ರವೇ ಬೆಳೆಯುವುದು ಒಳ್ಳೆಯದು. (ಸಶೇಷ)

ಕಲಿಭೀಮ ರಾಮಮೂರ್ತಿಯವರ ಭಾಷಣವು

ಕಳೆದ ೧೪-೨೦ ದಿನಗಳಿಂದಲೂ ಬೆಂಗಳೂರ ಪಟ್ಟಣದ ಪ್ಲಾ. ದಂಡಿನಲ್ಲೂ ಅದ್ಭುತ ಕಾರ್ಯಶಕ್ತಿಯನ್ನು ಪ್ರದರ್ಶಿಸಿ ಜನರನ್ನು ವಿಸ್ಮಯಗೊಳಿಸುತ್ತಿರುವ ಕಲಿಭೀಮನೆಂದು ಹೆಸರ್ವಡೆದ ಮಿ॥ ರಾಮಮೂರ್ತಿಯವರು ವಿಜಯನಗರದಲ್ಲಿ ಅನೇಕ ಸಾಹಸಕಾರ್ಯಗಳನ್ನು ಮಾಡಿ ಪ್ರಸಿದ್ಧರಾದ ರಾವ್ ಬಹದ್ದೂರ್ ನಾರಾಯಣಸ್ವಾಮಿಯವರ ಮಕ್ಕಳು. ಕಾಯಬಲದಲ್ಲಿ ಪ್ರಪಂಚದಲ್ಲೆಲ್ಲಾ ಅದ್ವಿತೀಯರೆಂದು ಪ್ರಸಿದ್ಧರಾಗಿರುವ ಪಾಶ್ಚಾತ್ಯ ದೇಶೀಯರಾದ ಸ್ಯಾಂಡೋಯವರನ್ನು ದೇಹಬಲದಲ್ಲೂ, ಅಂಗಸಾಧನೆಯ ಪ್ರದರ್ಶನದಲ್ಲೂ ಮೀರಿಸಿ ಅಮೆರಿಕಾ ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ರಾಜ್ಯಗಳಲ್ಲೂ, ಭರತಖಂಡದಲ್ಲೂ ವಿಶೇಷ ಖ್ಯಾತಿಯನ್ನು ಪಡೆದಿರುವ ಈ ರಾಮಮೂರ್ತಿಯವರನ್ನು ಬೆಂಗಳೂರಿನ ಆಂಧ್ರಪ್ರಿಯ ಸಂಘದವರು ಕಳೆದ ತಾ॥ ೫ ರಲ್ಲಿ ದಂಡಿನಲ್ಲಿರುವ ರಾ॥ ಬ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರವರ ಪುರಭವನದ ಮುಂದಿರುವ ಚಪ್ಪರಕ್ಕೆ ಬರಮಾಡಿಕೊಂಡು ಸ... [illegible] ಅವರ ಗುಣಕಥನವನ್ನು ಮಾಡಿ... ಮಿ॥ ಪಿ. ವಿ. ರಾಮ... ಸ್ಯಾಂಡೋಯವರು ಈಗ ಇಂಗ್ಲೆಂಡಿನಲ್ಲಿ ಸರ್ಕಾರದವರಿಂದ ಗೌರವಕ್ಕೆ ಸೇರಿಕೊಂಡಿರುವ ಸ್ಯಾಂಡೋಯವರು ಭರತಖಂಡಕ್ಕೆ ಬಂದು ತಮ್ಮ ಅದ್ಭುತ ಕಾರ್ಯಶಕ್ತಿಯನ್ನು ಪ್ರದರ್ಶಿಸಿದಾಗ್ಗೆ ಅವರನ್ನು ಅತ್ಯಂತ ಪರಾಕ್ರಮಶಾಲಿಗಳೆಂದು ತಿಳಿದುಕೊಂಡಿದ್ದೆವು. ಆದರೆ ಈಗ ರಾಮಮೂರ್ತಿಯವರ ಅದ್ಭುತಶಕ್ತಿಯನ್ನು ನೋಡಿದಮೇಲೆ ಪ್ರಪಂಚದಲ್ಲೆಲ್ಲಾ ಇವರು ಅದ್ವಿತೀಯ ಪರಾಕ್ರಮಶಾಲಿಗಳೆಂದು ಗೊತ್ತಾಗುತ್ತದೆ. ಇವರ ಪರಾಕ್ರಮವು ಅತಿಶಯವಾದುದು. ಇದು ಎಲ್ಲರಿಗೂ ಅಭ್ಯಾಸವಾಗತಕ್ಕದ್ದಲ್ಲ, ಮತ್ತೂ ಇದಕ್ಕೆ ಸ್ವಬುದ್ಧಿಯೂ, ಶಾಂತಿಯೂ, ಸ್ಥಿರಬುದ್ಧಿಯೂ ಅತ್ಯಾವಶ್ಯಕವು. ಇವರ ಉದಾರ ಮನಸ್ಸೂ ಎಲ್ಲರಿಗೂ ಗೊತ್ತೇ ಇದೆ. ಇವರು ಮತ್ತಾವ ವಿಧವಾದ ವೃತ್ತಿಯನ್ನವಲಂಬಿಸಿದ್ದರೂ ಅದರಲ್ಲಿಯೂ ಖ್ಯಾತಿವಂತರಾಗುತ್ತಿದ್ದರು. ಇವರ ಅನೇಕ ಧರ್ಮಕಾರ್ಯಗಳಿಗೋಸ್ಕರ ಬಹು ಉದಾರ... [illegible] ದ್ರವ್ಯವನ್ನು ಕೊಟ್ಟಿರುವುದರಿಂದ ಇವರ ಹೃದಯ ವೈಶಾಲ್ಯವೂ ಮತ್ತೂ ಸಮರ್ಥರಲ್ಲೂ ಇರತಕ್ಕ ಸಹಾನುಭೂತಿಯೂ ವ್ಯಕ್ತವಾಗುವುವು. ಎಂದು ಪ್ರಶಂಸಿಸಿದ ನಂತರ ಬೆಂಗಳೂರು ಒಕ್ಕಲಿಗರ ಸಂಘದ ಸೆಕ್ರೆಟರಿಯವರಾದ ಮಿ॥ ಕೆ. ಎಚ್. ರಾಮಯ್ಯನವರು “ಭರತಖಂಡದ ಪೂರ್ವದಲ್ಲಿ ಮುನಿಗಳ ಅಪಾರಶಕ್ತಿ ಪ್ರಸಿದ್ಧವಾಗಿದ್ದಿತೆಂದೂ, ಜನಕ ಮಾಂಧಾತೃ ಶ್ರೀರಾಮರುಗಳಂತಹ ರಾಜರ್ಷಿಗಳೂ, ವಸಿಷ್ಠ ಮತ್ತೂ ವಿಶ್ವಾಮಿತ್ರರುಗಳಂತಹ ಮಹರ್ಷಿಗಳೂ, ಭೀಮಾರ್ಜುನರುಗಳಂತಹ ಮಹಾ ಪರಾಕ್ರಮಶಾಲಿಗಳೂ ಇದ್ದರೆಂದೂ ಪುರಾಣಗಳಿಂದ ತಿಳಿಯುತ್ತೇವೆ. ಆದರೆ ಅವರುಗಳಿದ್ದುದು ಅಸಂಭಾವ್ಯವೆಂದೂ, ಪುರಾಣಗಳೆಲ್ಲವೂ ಕಟ್ಟುಕಥೆಗಳೆಂದೂ ಈಚೆಗೆ ಜನರು ಭಾವಿಸತೊಡಗಿದರು. ಈ ಭಾವನೆಯಿಂದ ಭಾರತೀಯರು ಕ್ಷೀಣಗತಿಗೆ ಬರಲು ಕಾರಣವಾಯಿತು. ಭೀಮಸೇನನು ಆನೆಗಳನ್ನು ತನ್ನ ಕೈಗಳಿಂದೆತ್ತಿ ದಿವಿಗೆಸೆಯುತ್ತಿದ್ದನೆಂದೂ ಅಕ್ಷೌಹಿಣೀ ಸೇನೆಯನ್ನು ತಾನೊಬ್ಬನೇ ಸಂಹರಿಸಿದನೆಂಬುದರಲ್ಲಿಯೂ, ಆಂಜನೇಯನು ಪರ್ವತಗಳನ್ನು ಬುಡಸಮೇತ ಕಿತ್ತು ಬಿಸುಟನೆಂಬುದರಲ್ಲಿಯೂ ಜನರಿಗೆ ನಂಬುಗೆ ಇಲ್ಲವಾಯಿತು. ಆದರೆ ರಕ್ತಮಾಂಸಗಳಿಂದ ಕೂಡಿದವರಾದ ರಾಮಮೂರ್ತಿಯವರು ತಮ್ಮ ಎದೆಯಮೇಲೆ ಆನೆಯನ್ನು ನಿಲ್ಲಿಸಿಕೊಳ್ಳುವುದನ್ನೂ, ತಮ್ಮ ಎರಡು ಕೈಗಳಿಂದಲೂ ಓಡುವ ಮೋಟಾರು ಬಂಡಿಗಳನ್ನು ತಡೆದು ನಿಲ್ಲಿಸುವುದನ್ನೂ ಕಣ್ಣಾರೆ ನೋಡಿದುದರ ಮೇಲೆ ಪುರಾಣದಲ್ಲಿ ವರ್ಣಿಸಲ್ಪಟ್ಟಿರುವ ಭೀಮಾರ್ಜುನ ಮತ್ತೂ ಆಂಜನೇಯರುಗಳ ಅದ್ಭುತ ಕಾರ್ಯಗಳೆಲ್ಲವೂ ಸತ್ಯವಾದುವೆಂಬುದು ಎಲ್ಲರಿಗೂ ನಿದರ್ಶನಕ್ಕೆ ಬಂದಿತು. ಭಾರತೀಯರಿಗೆ ಆಧ್ಯಾತ್ಮಿಕ ವಿಚಾರದಲ್ಲಿರತಕ್ಕ ಮಹಾ ಸಾಮರ್ಥ್ಯವನ್ನು ಸ್ವಾಮಿ ವಿವೇಕಾನಂದರವರು ಪ್ರಪಂಚಕ್ಕೆಲ್ಲಾ ತೋರ್ಪಡಿಸಿದರು. ಆದರೆ ಪ್ರೊಫೆಸರ್ ರಾಮಮೂರ್ತಿಯವರು ಈಗ ಶಾರೀರಶಕ್ತಿಯ ಅತಿಶಯವನ್ನು ತೋರ್ಪಡಿಸುತ್ತಿರುವರು. ಬ್ರಿಟಿಷ್ ಪ್ರಭುಗಳು ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಶಾಂತತೆಯನ್ನು ಉಂಟುಮಾಡಿರುವರು. ನಮ್ಮ ಮೈಸೂರು ಸೀಮೆಯು ... [illegible] ಅಸಾಧಾರಣವಾಗಿರುವುದು. ನಮ್ಮ ಶ್ರೀಮನ್ಮಹಾರಾಜರವರೂ, ಅವರ ಸಹೋದರರಾದ ಶ್ರೀ ಯುವರಾಜರವರೂ ಈ ಜನಾಂಗದವರ ಅಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿರುವ ಸಂಘಗಳಿಗೆ ವಿಶೇಷವಾಗಿ ಸಹಾಯಮಾಡುತ್ತಿರುವರು. ಹುಡುಗರು ವಿದ್ಯಾವಂತರಾಗಲು ತಕ್ಕ ... [illegible] ದುದರಿಂದ, ಸಾಂಘಿಕ ಪ್ರಯತ್ನವು ಅತ್ಯಾವಶ್ಯಕವು. ಈ ಆಂಧ್ರಪ್ರಿಯರಿಗೆ ಅಂತಹ ಪ್ರಯತ್ನಕ್ಕೆ ಒಬ್ಬ ಮುಂದಾಳು ದೊರಕಿರುವುದು” ಎಂದು ಹೇಳಿದರು. ತರುವಾಯ ಪ್ರೊ॥ ರಾಮಮೂರ್ತಿಯವರೆದ್ದು ನಿಂತುಕೊಂಡು ತಮ್ಮ ಮಾತೃಭಾಷೆಯಾದ ತೆಲುಗನ್ನಲ್ಲದೆ ಬೇರೆ ಭಾಷೆಯು ಚೆನ್ನಾಗಿ ಬರುವುದಿಲ್ಲವೆಂದೂ, ಇಂಗ್ಲೀಷು ಬಂದರೂ ತಮ್ಮ ... [illegible] ತೆಲುಗಿನಲ್ಲಿ ಭಾಷಣ ಮಾಡುತ್ತೇನೆಂದು ಹೇಳಿ ... [illegible] ಕಾಲದವರೆಗೆ ಸ್ವಚ್ಛವಾದ ತೆಲುಗು ಭಾಷೆಯಲ್ಲಿ ಬಹು ರಸವತ್ತಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ -

ಈ ವರ್ತಮಾನ ಕಾಲದಲ್ಲಿ ಪ್ರತಿಯೊಂದು ಜನಾಂಗದವರಲ್ಲೂ ಏಕಮತ್ಯವು ಅತ್ಯಾವಶ್ಯಕವಾಗಿದೆ. ನಾನು ಬಹು ದೂರದೇಶಗಳಲ್ಲೆಲ್ಲಾ ಸಂಚರಿಸಿ ಅನೇಕ ಸ್ಥಳಗಳನ್ನೂ, ಪದಾರ್ಥಗಳನ್ನೂ ನೋಡಿ ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದಿದ್ದೇನೆ. ನಾನು ಎಲ್ಲಿಗೆ ಹೋದಾಗ್ಯೂ ನನ್ನ ಗಮನವೆಲ್ಲವೂ ಭರತಖಂಡದ ಕಡೆಗೇ ಇರುತ್ತಿದ್ದಿತು. ಏಕೆಂದರೆ ಪ್ರಪಂಚದ ಮೇಲೆಲ್ಲಾ ಭರತಖಂಡವೇ ಶ್ರೇಷ್ಠಭೂಮಿಯಾಗಿರುವುದು. ಇದು ನಮ್ಮ ... [illegible] ಸ್ವರ್ಗವಾಗಿದೆ. ಎಷ್ಟೋ ಜನಾಂಗದವರು ಇಲ್ಲಿಗೆ ಬಂದು ನೆಲೆಸಿದರು ... [illegible] ಭಾರತೀಯರು ... [illegible]

... [illegible] ಕೆಡಿಸಿದುದರಿಂದ ಭರತಖಂಡಕ್ಕೆ ಹೀನಸ್ಥಿತಿಯು ಪ್ರಾಪ್ತವಾಗಿರುತ್ತದೆ. ಭಾರತೀಯರು ಇಲ್ಲಿಗೆ ಬಂದ ಅನ್ಯದೇಶೀಯರನ್ನು ಔದಾರ್ಯದಿಂದಲೂ, ಅವರೆಲ್ಲರನ್ನೂ ಪ್ರೀತಿಯಿಂದಲೂ ಕಂಡರು, ಮತ್ತೂ ತಮ್ಮ ಸ್ವಭಾಷೆಯನ್ನು ಮರೆತುಬಿಟ್ಟರು. ಅಲ್ಲದೆ ತಂತಮ್ಮೊಳಗೆ ಒಬ್ಬರನ್ನೊಬ್ಬರು ಪುರಸ್ಕರಿಸುವುದಕ್ಕೆ ಬದಲು ತಿರಸ್ಕರಿಸಹತ್ತಿದರು. ಬ್ರಿಟಿಷ್ ಪ್ರಭುಗಳ ಆಳಿಕೆಯಲ್ಲಿ ಭರತಖಂಡವು ತನ್ನ ಹಳೆಯ ಸ್ಥಿತಿಯನ್ನು ಹೊಂದಲು ಅವಕಾಶವಿರುತ್ತದೆಂದು ನಾನು ಪೂರ್ಣವಾಗಿ ನಂಬಿರುತ್ತೇನೆ. ಭಾರತೀಯರು ... [illegible] ಬಹು ಬುದ್ಧಿವಂತರಾಗಿದ್ದಾರೆ. ಸೈನ್ಯ ಶಾಖೆಯಲ್ಲಿ ಒಬ್ಬನೇ ಯಾದರೂ ಉನ್ನತ ಉದ್ಯೋಗದಲ್ಲಿರುವುದನ್ನು ಕಾಣೆನು. ಅಲ್ಲದೆ ಇವರು ಸಶಕ್ತರಲ್ಲವಾದುದರಿಂದ ಬ್ರಿಟಿಷರು ಇವರನ್ನು ಸೈನ್ಯಕ್ಕೆ ಸೇರಿಸುವುದಿಲ್ಲವು. ಈಸ್ಟ್ ಇಂಡಿಯಾ ಕಂಪೆನಿಯವರು ಈ ದೇಶವನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಆ ... [illegible] ಜನರು ಬಹಳ ಸಹಾಯವಾಗಿದ್ದರು. ಆ ... [illegible] ಮದ್ರಾಸಿನವರು ತಮ್ಮ ಕಾಯಶಕ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳತಕ್ಕದ್ದು ಮಹತ್ವದ ವಿಷಯವಾಗಿದೆ. ಭಾರತೀಯರಲ್ಲಿ ಸಾಧಾರಣ ಜನರು ವಿದ್ಯಾವಂತರಾಗಬೇಕಾದುದು ಅತ್ಯಾವಶ್ಯಕವು. ಬಹು ಜನರು ತಮ್ಮ ಕರ್ತವ್ಯವೇನೆಂಬುದನ್ನು ಅರಿತವರಾಗಿಲ್ಲವು. ಮತ್ತೂ ಅನೇಕರು ದಾರಿದ್ರ್ಯ ಪೀಡಿತರಾಗಿದ್ದಾರೆ. ಆದುದರಿಂದ ಈ ವಿದ್ಯಾಭಿವೃದ್ಧಿಯ ಕಾರ್ಯಕ್ಕಾಗಿ ಧನವನ್ನು ಸಹಾಯಮಾಡಬೇಕೆಂದು ಸಂಕಲ್ಪಿಸಿ, ಹೋದಕಡೆಯಲ್ಲೆಲ್ಲಾ ಕೆಲ ಆಟಗಳನ್ನಾಡಿ ... [illegible] ಗಳನ್ನು ... [illegible] ಒಂದು ವಸ್ತು ಪ್ರದರ್ಶನಾಲಯದಲ್ಲಿ ಆಡುತ್ತಿರುವಾಗ್ಗೆ ಒಬ್ಬ ಮನುಷ್ಯನು ಹೊಟ್ಟೆಕಿಚ್ಚಿನಿಂದ ನನ್ನ ವ್ಯವಸಾಯವನ್ನು ಮುರಿಯುವಂತೆ ಮಾಡಿದನು. ಅದರಿಂದ ನನಗೆ ... [illegible] ರೂ ಗಳ ನಷ್ಟವಾಯಿತು. ಮಲೆಯಾ ಸ್ಟೇಟಿನಲ್ಲಿ ನನ್ನ ಚಮತ್ಕೃತಿಯನ್ನು ಪ್ರದರ್ಶಿಸುತ್ತಿರುವಾಗ್ಗೆ ಬಹು ಒಳ್ಳೆಯ ಮಿತ್ರನಾಗಿ ನಟಿಸಿದವನೊಬ್ಬನು ನನಗೆ ವಿಷಪ್ರಯೋಗವನ್ನು ಮಾಡಿದ್ದನು. ಆದರೆ ಆ ವಿಷದಿಂದ ನನಗೇನೂ ಕೇಡಾಗದಿದ್ದರೂ, ನನ್ನ ಆಸ್ಟ್ರೇಲಿಯಾ ಹೋಗುವ ಬಹು ಬೆಲೆಯ ಒಂದು ಕಂಟ್ರಾಕ್ಟು ರದ್ದಾಯಿತು. ಆ ಮಿತ್ರನು ಅಷ್ಟಕ್ಕೆ ತೃಪ್ತನಾಗದೆ ನನ್ನನ್ನು ಕೊಲ್ಲಬೇಕೆಂದು ನಿರ್ಧರಿಸಿ ಎರಡನೆಯ ಬಾರಿ ನನ್ನ ಅಡಿಗೆಯವನ ಮೂಲಕ ವಿಷಪ್ರಯೋಗ ಮಾಡಿಸಿದನು. ವಿಷವು ಈ ಬಾರಿ ನನ್ನ ದೇಹದಲ್ಲಿ ವ್ಯಾಪಿಸಿ ಪ್ರಾಣಾಪಾಯವನ್ನುಂಟುಮಾಡದಿದ್ದರೂ ೩ ತಿಂಗಳ ವರೆಗೆ ಯಾವುದೊಂದು ಕಾರ್ಯವನ್ನು ಮಾಡಲಿಕ್ಕಿಲ್ಲದಂತೆ ನಿಶ್ಶಕ್ತನನ್ನಾಗಿ ಮಾಡಿಬಿಟ್ಟಿತು. ಇದರಿಂದ ನಾನು ಪ್ರಪಂಚದಲ್ಲೆಲ್ಲಾ ಸಂಚರಿಸಿಕೊಂಡು ಬಾಲ್ಯದಿಂದಲೂ ... [illegible] ಈಗ ನಾನು ನೆಲೆಸಿದ್ದೇನೆ. ನಾನು ಬ್ರಹ್ಮಚಾರಿಯಾಗಿರುವುದರಿಂದ ಭಾರತ ... [illegible] ಮಾಡಬೇಕೆಂಬ ಅಭಿಲಾಷೆಯು ಇರುವುದು. ಈಗ ಭರತಖಂಡದಲ್ಲಿ ಬಡವರ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಪ್ರಪಂಚದಲ್ಲಿ ವಿದ್ಯಾದಾನಕ್ಕಿಂತಲೂ ಅತಿಶಯವಾದ ದಾನವು ಬೇರೊಂದಿಲ್ಲವು. ಅದು ಕಾರಣ ಬಾಲವಿದ್ಯಾ ಪ್ರಸರಣ ಕಾರ್ಯಕ್ಕಾಗಿ ... [illegible] ರೂ.ಗಳನ್ನು ಸಾಹಾಯ್ಯಮಾಡಬೇಕೆಂದು ನಾನು ಸಂಕಲ್ಪಿಸಿರುತ್ತೇನೆ. ಇವರ ... [illegible] ಪ್ರಸ್ತುತಕಾಲದಲ್ಲಿ ದೊರೆಯುವ ಶ್ರೀಣಗತಿಯಲ್ಲಿದೆ. ಭಾರತೀಯರು ಒಂದು ಜನಾಂಗವಾಗಿಲ್ಲವಾದುದರಿಂದ ಇವರ ಅಭಿಪ್ರಾಯವು ಗಣನೆಗೆ ತರಲ್ಪಟ್ಟಿಲ್ಲವು. ಭರತಖಂಡಕ್ಕೆ ಸಾಹಾಯ್ಯವಿಲ್ಲದಿರುವುದರಿಂದ ಇದು ಅಭಿವೃದ್ಧಿಗೆ ಬರುವುದು ಅನುಮಾನವಾಗಿದೆ ಮತ್ತೂ ಇದಕ್ಕೆ ರೂಪು ಇಲ್ಲದಿರುವುದರಿಂದ ನಾಚಿಕೆಯಾಗಿದೆ. ಯುವಕರು ಯಾವುದಾದರೂ ಒಂದು ಸ್ತೋತ್ರದ ವಿಚಾರದಲ್ಲಿ ಸ್ಥಿರಮನಸ್ಸಿರುವುದನ್ನು ಅಭ್ಯಾಸಮಾಡಿ, ಅಂಗಸಾಧನೆಯನ್ನು ಮಾಡಲು, ತಾವು ಮಾಡತಕ್ಕ ಕಾರ್ಯಗಳನ್ನು ತಿಳಿಯಲು ಮತ್ತೂ ಪಾಠಶಾಲೆಯ ವಿಚಾರಸರಣಿಗಳು ಸುಗಮವಾಗಲು ಅಭಿಪ್ರಾಯವಾಗಿದೆ. ಎಂದು ಉಪನ್ಯಾಸವನ್ನು ಮಾಡಿ ಆಂಧ್ರಪ್ರಿಯ ಸಂಘಕ್ಕೆ ೫೦೦ ರೂ. ಗಳನ್ನು ಕೊಡುವುದಾಗಿ ಹೇಳಿದುದಲ್ಲದೆ ತಾವು ಹೋದ ಕಡೆಯಲ್ಲೆಲ್ಲಾ ನಾಯುಡು ಜನರ ವಿದ್ಯಾಭಿವೃದ್ಧಿಯ ಪ್ರೋತ್ಸಾಹಕ್ಕಾಗಿ ಕೆಲ ಪ್ರದರ್ಶನಗಳಿಂದ ಬರುವ ಉತ್ಪತ್ತಿಯನ್ನು ಕೊಡುತ್ತೇನೆಂದು ವಾಗ್ದಾನಮಾಡಿದರು.

ತುರ್ಕಿ-ಇಟಲಿಗಳ ಯುದ್ಧವು

ಮಾಲ್ಟಾ ನವೆಂ ೧ — ತ್ರಿಪೋಲಿ ತಾ॥ ೨೮ ರಲ್ಲಿ ... [illegible] ಕಡೆಯಲ್ಲಿ ನಿರತರಾಗಿದ್ದ ... [illegible] ... [illegible] ಜನರು ... [illegible]

... [illegible]

... [illegible]

ತಾ|| ೩ — ಬಂದರು ರೈಲ್ವೇ ಸ್ಟೇಷನಿನ ಬಳಿಯ ಬೆಂಕಿ ಹತ್ತಿ ಒಬ್ಬರು ಸತ್ತಿರುತ್ತಾರೆ ಮತ್ತು ಐದು ಜನರು ಅಪಾಯಕ್ಕೊಳಗಾಗಿರುತ್ತಾರೆ

ತಾ|| ೮ — ಟೋಬ್ರೂಕ್ ಎಂಬಲ್ಲಿ ತಮ್ಮ ಸ್ಥಳಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದ ಇಟಲಿಯವರ ಮೇಲೆ ತುರ್ಕಿಯವರು ಎಂಟು ಸ್ಥಳಗಳಿಂದ ಬಿದ್ದು ಬಹಳ ಕಠಿನ ಯುದ್ಧವನ್ನು ನಡೆಸಿದರು. ಇಟಲಿಯ ಸೇನೆಯು ಹಿಮ್ಮೆಟ್ಟಿ ಓಡಿ ಬಂದು ಯುದ್ಧನೌಕೆಗಳ ಸಹಾಯದಿಂದ ತುರ್ಕಿಯವರು ಹಿಮ್ಮೆಟ್ಟಿದರು. ಈ ಯುದ್ಧದಲ್ಲಿ ತುರ್ಕಿಯವರಿಗಾದ ನಷ್ಟವು ಗೊತ್ತಿಲ್ಲ. ಆದರೆ ಇಟಲಿಯವರ ಕಡೆ ೧೫೦ ಜನರು ಮಡಿದರು ಮತ್ತು ಸಾವಿರಾರು ಜನ ಗಾಯಗೊಂಡರು

ತಾ|| ೩— ೮ ನೆಯ ತಾ|| ನಲ್ಲಿ ಬೆನ್‌ಗಾಸಿಯಲ್ಲಾದ ಕದನದಲ್ಲಿ ಇಟಲಿಯವರ ಕಡೆ ೬೦ ಜನರು ಸತ್ತರು, ಮತ್ತು ೧೧೨ ಜನರು ಗಾಯಪಟ್ಟರು

ತಾ|| ೪ ೩೦೦೦ ತುರ್ಕಿಯವರು ಡರ್ನಾ ಎಂಬಲ್ಲಿ ಪ್ರಬಲರಾಗಿರುವ ಇಟಲಿಯವರ ಮೇಲೆ ಬಿದ್ದು ಘೋರ ಯುದ್ಧ ನಡೆಸಿದರು. ಇಟಲಿಯವರು ಬಹು ಶೌರ್ಯದಿಂದ ತ ಕಡೆಯವರನ್ನು ಹಾರಿಸಿ ೮೦೦ ಜನ ತುರ್ಕಿಯವರನ್ನು ಕೊಂದು ಉಳಿದವರನ್ನು ಓಡಿಸಿದರು. ಇಟಲಿಯವರ ಕಡೆ ೭೦ ಜನ ಸತ್ತರು ಮತ್ತು ೯೯ ಜನರು ಗಾಯಗೊಂಡರು. ತುರ್ಕಿಯವರ ಸ್ವಾಧೀನದಲ್ಲಿರುವ ಪಾರ್ಸಿಯನ್ ದ್ವೀಪಗಳಲ್ಲೊಂದಾದ ಸಮೋಸ್ ಎಂಬ ದ್ವೀಪವನ್ನು ಇಟಲಿಯವರು ಸ್ವಾಧೀನಪಡಿಸಿಕೊಂಡು ಅಲ್ಲಿ ತಮ್ಮ ಸೇನೆಯನ್ನು ತಂದಿರಿಸಿದರೆಂದು ಕೊಳ್ಳೆಗಾಲದಿಂದ ಬಂದ ಕಾಗದದಿಂದ ತಿಳಿಯಬರುತ್ತದೆ

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ|| ೧೧ ನೆಯ ಸೋಮವಾರ

ಪರರಾಜ್ಯಗಳ ಪ್ರಕೃತಸ್ಥಿತಿಯು.

ಗ್ರೇಟ್ ಬ್ರಿಟನ್ನಿನ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರು ಹೆಚ್ಚು ಬೆಲೆಯನ್ನು ಕೊಟ್ಟು ಆಹಾರ ಪದಾರ್ಥಗಳನ್ನು ಕೊಂಡು ಜೀವಿಸಲು ತಮಗೆ ಬರತಕ್ಕ ಕೂಲಿಯು ಸಾಲುವುದಿಲ್ಲವಾದ ಪ್ರಯುಕ್ತ ತಮ್ಮ ಕೂಲಿಯನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರೂ ಗಣಿಗಳ ಯಜಮಾನರುಗಳು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಡದೆ ಹೋದುದರಿಂದ, ೧೦ ಲಕ್ಷ ಜನರು ಹರತಾಳ ಮಾಡಿ ಕೆಲಸಕ್ಕೆ ಹೋಗದೆ ನಿಂತುಬಿಟ್ಟದ್ದರಿಂದ ಗ್ರೇಟ್ ಬ್ರಿಟನ್ನಿನಲ್ಲಿ ಕಾರ್ಖಾನೆಗಳ ಯಂತ್ರಗಳೂ, ಹೊಗೆಯ ಹಡಗುಗಳೂ ರೈಲ್ವೆಯ ಇಂಜಿನ್ನುಗಳೂ ಬರಿದು ಕಲ್ಲಿದ್ದಲಿನ ಅಭಾವದಿಂದ ನಿಲ್ಲುವ ಹಾಗಿವೆ. ಮತ್ತು ಅಲ್ಲಿಯ ಜನರು ಅಡಿಗೆಯನ್ನು ಮಾಡಲೂ, ಚಳಿಯಿಂದ ಮೈಯನ್ನು ಕಾಯಿಸಿಕೊಳ್ಳಲೂ ಕಲ್ಲಿದ್ದಲಿಲ್ಲದೆ ಪರಿತಪಿಸುತ್ತಿರುವರು. ಈಗ ಗಣಿಗಳಲ್ಲಿ ಕೆಲಸಮಾಡುವವರೆಲ್ಲರೂ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವುದರಿಂದ, ಕಲ್ಲಿದ್ದಲು ದೊರೆಯದೆ ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ; ಅನೇಕ ರೈಲ್ವೆಗಳೂ, ಹಡಗುಗಳೂ ಸಂಚರಿಸದೆ ನಿಂತುಹೋಗಿವೆ ಮತ್ತು ಜನರ ಆಹಾರ ಪದಾರ್ಥಗಳ ಬೆಲೆ ಏರುತ್ತಿರುವುದರಿಂದ ಅವರು ಪಡುವ ಕಷ್ಟವು ಹೇಳತೀರದು. ಆದುದರಿಂದ ಕೆಲಸವಿಲ್ಲದೆ ಅನೇಕ ಜನರು ತಮ್ಮ ಜೀವನಕ್ಕೆ ಏನು ಮಾಡಬೇಕೆಂದು ತೋರದೆ ಪರಿತಪಿಸುತ್ತಿರುವರು. ಈ ಕಾರಣದಿಂದಲೇ ಪಾರ್ಲಿಮೆಂಟಿನವರು ಮಧ್ಯಸ್ಥರಾಗಿ ಸಂಧಾನ ಮಾಡುತ್ತಿರುವರು. ಈ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರಿಗೂ, ಅವರ ಯಜಮಾನರುಗಳಿಗೂ ಉಂಟಾಗಿರುವ ಅಸಮಾಧಾನಗಳೂ, ಹೋರಾಟಗಳೂ ಕೂಡಲೆ ಪರಿಹರಿಸಲ್ಪಟ್ಟು ಕೂಲಿಕಾರರೆಲ್ಲರೂ ಬೇಗನೆ ಕೆಲಸಕ್ಕೆ ಹೋಗುವಂತೆ ಮಾಡದಿದ್ದಲ್ಲಿ ಇತರ ಕಾರ್ಖಾನೆಗಳಲ್ಲೂ, ಹಡಗು ರೈಲು, ರೈಲ್ವೆಗಳಲ್ಲೂ ಕೆಲಸಮಾಡುವವರೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಜೊತೆ ಸೇರಿಕೊಂಡು ಗಲಭೆಯನ್ನು ಮಾಡುವರು ಮತ್ತು ಇದರಿಂದ ಜನರ ಸಂಚಾರಕ್ಕೂ ಸಾಮಾನು ಸಾಗಣೆಗೂ ಅಡಚಣೆಯಾಗಿ ಬಹಳ ತೊಂದರೆಯಾಗುವ ಸಂಭವವಿರುತ್ತದೆ. ಈ ಕಾರಣದಿಂದಲೇ ಇಂಗ್ಲೆಂಡಿನ ಪ್ರಧಾನಮಂತ್ರಿಯಾದ ಮಿ|| ಆಸ್ಕ್ವಿತ್‌ರವರು ಕೆಲಸಗಾರರ ಮತ್ತು ಯಜಮಾನರ ಸಂಘಗಳ ಪ್ರತಿನಿಧಿಗಳನ್ನು ಕರೆದು ಅವರ ಮಧ್ಯಸ್ಥಿಕೆಯಿಂದ ಗಣಿಗಳ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ಉಂಟಾಗಿರುವ ವಿವಾದಗಳನ್ನು, ಮನಸ್ತಾಪಗಳನ್ನು ಹೋಗಲಾಡಿಸಿ ಪರಸ್ಪರ ಸಮಾಧಾನವನ್ನುಂಟುಮಾಡಬೇಕೆಂದು ಯತ್ನಿಸುತ್ತಿರುವರು. ಈ

ಗೋಪ್ಯಪೂರ್ವಕ ಸೈನ್ಯಕ್ಕೊಡ ಕೊ

ಲೆ ರೋಡಿಂಗನಾಗಿ ಇದ್ದವು ಕೆಲಸಗಳೆಲ್ಲವೂ ಯಥಾಪ್ರಕಾರ ನಡೆಯುವಂತೆ ಆಗುವುದೆಂದು ನಿರೀಕ್ಷಿಸುತ್ತೇವೆ. ಜರ್ಮನಿ ಗಯಾನಾದೇಶದಲ್ಲಿರುವ ಗಣಿಗಳ ಯಜಮಾನರುಗಳು ವೇತನವನ್ನು ಏರಿಸಲು ಒಪ್ಪದೆ ಹೆಚ್ಚು ವೇತನವನ್ನು ಕೊಡಲು ಕೆಲಸಗಾರರಿಗೆ ಅವರ ಉದರಪೋಷಣೆಗೆ ಸಾಕಾಗುವಷ್ಟು ಕೂಲಿಯನ್ನು ಕೊಡಲೊಪ್ಪದಿದ್ದಲ್ಲಿ ಬಹು ಅನರ್ಥವಾಗುವುದರಲ್ಲಿ ಸಂದೇಹವಿಲ್ಲವು

ಚೈನಾ ದೇಶೀಯರು ಮಂಚೂ ವಂಶೀಯರ ರಾಜ್ಯಾಡಳಿತದ ಕೆಳಗಿನಿಂದ ಪಾರಾಗಬೇಕೆಂಬ ಯತ್ನವನ್ನು ಕೈಗೊಂಡಿದ್ದು, ದೇಶಾಭಿಮಾನಿಗಳಾಗಿ ಸುಗುಣನಾದ ಡಾಕ್ಟರ್ ಸನ್‌ಯಾಟ್‌ಸೆನ್ನರ ಪ್ರೇರಣೆಯಿಂದ ಪ್ರಜಾಪಕ್ಷದವರ ಕೂಡ ಯುದ್ಧಮಾಡಿ ಅವರನ್ನು ಸೋಲಿಸಿ ಚಕ್ರವರ್ತಿಯನ್ನು ತಾನಾಗಿ ಪದಚ್ಯುತನಾಗುವಂತೆ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪನೆಗೊಳಿಸಿ ಅದಕ್ಕೆ ಡಾ|| ಸನ್‌ಯಾಟ್‌ಸೆನ್ನರನ್ನು ಅಧ್ಯಕ್ಷನನ್ನಾಗಿ ಆರಿಸಿದಾಗ ಈ ಸನ್‌ಯಾಟ್‌ಸೆನ್ನರು ಪ್ರಜಾಪ್ರಭುತ್ವವನ್ನು ದೃಢಪಡಿಸಬೇಕಾಗಿ ಮಾಡಬೇಕೆಂದು ತನ್ನ ದೂರದರ್ಶಿತ್ವ ಬುದ್ಧಿಯಿಂದ, ಚಕ್ರಾಧಿಪತ್ಯದ ಮುಖ್ಯ ಅಮಾತ್ಯನಾಗಿದ್ದು ಪ್ರಭುಪಕ್ಷವನ್ನು ಹಿಡಿದು ಪ್ರಜಾಪ್ರಭುತ್ವಪಕ್ಷದವರ ಕೂಡ ಕಾದಾಡಿದ ರಾಜತಂತ್ರ ನಿಪುಣನಾದ ಯುವಾನ್‌ಷಿಕಾಯಿಯವರನ್ನು ಪ್ರಜಾಪ್ರಭುತ್ವದ ಕಡೆಗೆ ತಿರುಗಿಸಿಕೊಂಡು, ಅಧ್ಯಕ್ಷ ಪದವಿಯಿಂದ ತಾನು ನಿವೃತ್ತನಾಗಿ, ಪ್ರಜೆಗಳೆಲ್ಲರೂ ಅತನನ್ನು ಅಧ್ಯಕ್ಷನನ್ನಾಗಿ ಆರಿಸುವಂತೆ ಪ್ರಯತ್ನವನ್ನು ಮಾಡಿದರು. ಈ ಪ್ರಜಾಪಕ್ಷದವರಿಗೆ ಪ್ರಭುಪಕ್ಷದವರಲ್ಲಿನ ಅನೇಕರು ರಾಜ್ಯಭ್ರಷ್ಟ ಪಕ್ಷದವರೂ ವಿರೋಧಿಗಳಾಗಿರುವರು. ಈ ಉಭಯಪಕ್ಷದವರೂ ಏನನ್ನೂ ಅರಿಯದ ಜನರನ್ನೂ, ಸೈನಿಕರನ್ನೂ ಪ್ರಜಾಪ್ರಭುತ್ವದವರ ಮೇಲೆ ಎತ್ತಿಕಟ್ಟಿ ಅವರ ಪಕ್ಷದ ಸೈನಿಕರ ಕೂಡ ಕಾದಾಡಿ ಊರುಗಳನ್ನು ಸೂರೆಮಾಡುತ ಬಲು ದಾಂಧಲೆಯನ್ನು ಮಾಡುತ್ತಿರುವರು. ಈ ಗಲಿಬಿಲಿಯು ಒಂದುಕಡೆಯಿಂದ ಮತ್ತೊಂದು ಕಡೆಗೆ ಹಬ್ಬುತ್ತಿರುವುದರಿಂದ ದಂಗೆಗಾರರ ಕೋಪವು ಉದ್ರೇಕವಾಗುತ್ತಿದೆ. ಈ ದೇಶದಲ್ಲಿ ಜಪಾನಿನವರಿಗೆ ಸೇರಿರುವ ಸ್ಥಳಗಳ ಮತ್ತು ಅಲ್ಲಿರುವ ಜಪಾನೀಯರ ರಕ್ಷಣಾರ್ಥವಾಗಿ ೨೦,೦೦೦ ಜಪಾನ್ ಸೈನಿಕರು ಕಳುಹಲ್ಪಟ್ಟಿರುತ್ತಾರೆ. ಇದರಂತೆ ಇತರ ರಾಜ್ಯದವರೂ ತಂತಮ್ಮ ಸೇನೆಯನ್ನು ಕಳುಹುವವರಾಗಿರುತ್ತಾರೆ. ಪ್ರಜಾಪ್ರಭುತ್ವಕ್ಕೆ ಅಧ್ಯಕ್ಷನಾಗಿ ಆರಿಸಲ್ಪಡಲಿಕ್ಕಿರುವ ಯುವಾನ್‌ಷಿಕಾಯಿಗೆ ಬ್ರಿಟಿಷ್, ಫ್ರಾನ್ಸ್, ಅಮೇರಿಕಾ, ಜರ್ಮನಿ, ರಷ್ಯಾ ಮತ್ತು ಜಪಾನ್ ರಾಜ್ಯಗಳ ಬ್ಯಾಂಕಿನವರು ಸಾಲವನ್ನು ಕೊಟ್ಟು ಆತನ ಅಧಿಕಾರವನ್ನು ಬಲಪಡಿಸಬೇಕೆಂದು ಯೋಚಿಸುತ್ತಾರೆ.

ತುರ್ಕಿ—ಇಟಲಿ ರಾಜ್ಯಗಳ ಪ್ರಕೃತ ವಿದ್ಯಮಾನವನ್ನು ನೋಡುವುದರಲ್ಲಿ ಉಭಯ ರಾಜ್ಯಗಳಿಗೂ ನಡೆಯುತ್ತಿರುವ ಯುದ್ಧವು ಇನ್ನೂ ಪ್ರಬಲವಾಗಿ ಅನೇಕ ಅರ್ಥಹಾನಿ ಮತ್ತು ಪ್ರಾಣಹಾನಿಗಳಾಗುವಂತೆ ತೋರುವುದಲ್ಲದೆ ಶಮನವಾಗುವಂತೆ ತೋರುವುದಿಲ್ಲವು. ಪರರಾಜ್ಯಗಳು ತುರ್ಕಿ-ಇಟಲಿಗಳಿಗುಂಟಾಗಿರುವ ಕಲಹದ ವಿಚಾರದಲ್ಲಿ ತಮ್ಮಗಳಿಗೆ ಅದರ ಗೊಡವೆಯಿಲ್ಲವೆಂದಿದ್ದರೂ, ಉಭಯ ರಾಜ್ಯಗಳಿಗೂ ಮಧ್ಯಸ್ಥಿಕೆಯನ್ನು ವಹಿಸಬೇಕೆಂದೂ ಪಾಶ್ಚಾತ್ಯರಲ್ಲಿ ಕೆಲವರು ಸೂಚಿಸುವರು. ಆದರೆ ಇದರಿಂದ ಉಭಯ ರಾಜ್ಯಗಳು ತಮ್ಮ ಸಮಾಧಾನ ಮಾಡಿಕೊಳ್ಳುವವರಾಗಲಿ ಅಥವಾ ಇಟಲಿಯು ಟ್ರಿಪಾಲಿಯನ್ನು ತುರ್ಕಿಯವರಿಗೆ ಬಿಟ್ಟುಕೊಡುವುದರಿಂದಾಗಲಿ ಈಗ ನಡೆಯುತ್ತಿರುವ ಯುದ್ಧವು ಕೊನೆಯಾಗಬೇಕಲ್ಲದೆ ಅನ್ಯಥಾ ಉಪಾಯವಿಲ್ಲವೆಂಬುದು ವ್ಯಕ್ತವಾಗುತ್ತದೆ

ಶ್ರೀಮಂತರ ಕುಟುಂಬದಲ್ಲಾದ ವಿವಾಹಮಹೋತ್ಸವವು

ರಾಜಧಾನಿಯಲ್ಲಿ ಜನೋಪಕಾರಿಗಳೆಂದು ಹೆಸರುಗೊಂಡಿರುವ ಶ್ರೀಮಂತ ನೀಲಗಿರಿ ಮುದ್ದಣ್ಣನವರು ತಮ್ಮ ಕುವರಿ ನಾಗಮ್ಮನವರನ್ನು ಅನೇಕ ಧರ್ಮಕಾರ್ಯಗಳನ್ನು ಮಾಡಿ ಶ್ರೀಮನ್ಮಹಾರಾಜರವರಿಂದ "ಧರ್ಮಪ್ರವರ್ತಕ" ಎಂಬ ಪ್ರಶಸ್ತಿಯನ್ನು ಪಡೆದಿದ್ದ ಗೊಂಡಾನರಸಿಂಹಯ್ಯನವರ ಮಕ್ಕಳು ಮಿ|| ಜವರಪ್ಪನವರ ಮಗ ಚಿ|| ನರಸಿಂಹಯ್ಯನಿಗೆ ಕೊಟ್ಟು ಕಳೆದ ತಾ|| ೯ ರಲ್ಲಿ ಬಹು ಸಂಭ್ರಮದಿಂದಲೂ ನಡೆದು ಬಂದಿರುವ ತಮ್ಮ ಮನೆತನದ ಗೌರವಕ್ಕೆ ತಕ್ಕಹಾಗೆ ಅಗ್ಗಂ ವಿವ್ಯಾಭರಣಗಳಿಂದ ಅಲಂಕೃತ ಕನ್ಯಾದಾನವನ್ನು ಮಾಡಿ ಒಬ್ಬರಿಗೊಬ್ಬರು ಭಾವನೆ ಬಂದು ಪಾದಪೂಜೆ ನಿತ್ಯದಲ್ಲೂ ತಮ್ಮ ೩೦ ಭುವನಗಳವರಿಗೆಲ್ಲಾ ಭಕ್ಷ್ಯಭೋಜ್ಯಾದಿಗಳಿಂದ ಔತಣವನ್ನು ಮಾಡಿಸಿದುದಲ್ಲದೆ ಬಾಹ್ಮಣರು ಬಡಜನರಿಗೆ ಮನಸ್ಸು ತಣಿಯುವವರೆಗೂ ಅನ್ನವನ್ನು ಹಾಕಿದರೆಂದು ತಿಳಿಸಲು ಹರ್ಷವಾಗುತ್ತದೆ. ಈ ಮಹೋತ್ಸವಕ್ಕಾಗಿ ಮನೆಯ ಮುಂಗಡೆ ಅತಿವಿಶಾಲವಾದ ಮತ್ತು ಸುಂದರವಾದ ಮಂಟಪವನ್ನು ಬಣ್ಣದ ದೀಪಗಳಿಂದಲೂ, ಚಿತ್ರಪಟಗಳ

ಹಾಕಿ ನಾಗೇಂದ್ರನಾದ ವಾದ್ಯವಿಶೇಷಗಳಿಂದಲೂ, ವೇಶ್ಯಾನೃತ್ಯಗಾನಗಳಿಂದಲೂ, ಅತಿಥಿಗಳನ್ನೂ, ಪ್ರೇಕ್ಷಕ ಜನರನ್ನು ಪ್ರತಿನಿತ್ಯದಲ್ಲೂ ಆನಂದಗೊಳಿಸುತ್ತಿದ್ದರು. ಧಾರೆಯ ಹೊತ್ತಿನ ದಿವಸ ಬಂದಿದ್ದ ಸರ್ಕಾರಿ ಅಧಿಕಾರಿಗಳಿಗೂ ವೈದಿಕರುಗಳಿಗೂ ಅವರವರ ಯೋಗ್ಯತಾನುಸಾರ ಉದಾರವಾಗಿ ದಕ್ಷಿಣೆಯನ್ನು ಕೊಟ್ಟರು. ಅರಮನೆಯ ಕಿಲ್ಲತ್ತು ಭಲ್ಲಿಯಂಥ ಮೊದಲಾದ ಮರ್ಯಾದೆಗಳು ಕಳುಹಲ್ಪಟ್ಟದ್ದವು. ನಿನ್ನೆಯ ರಾತ್ರಿ ನೂತನ ದಂಪತಿಗಳ ಮೆರವಣಿಗೆಯು ಎಲ್ಲಾ ಬೀದಿಗಳಲ್ಲೂ ಬಹು ಆಡಂಬರದಿಂದ ನಡೆಯಿತು. ಈ ಉತ್ಸವ ಕಾಲದಲ್ಲಿ ಮನ್ನಿನ ವಿನೋದಕ್ಕಾಗಿಯೂ ಜನರಿಗಾಗಿ ಬಹು ಗ್ರಾಂಡಾಗಿ ಗಳ ಮೇಳದಿಂದ ಪೆಚ್ಚಿಸಲ್ಪಟ್ಟಿತೆಂದು ತೋರುತ್ತದೆ. ಇವರ ಚಿಕ್ಕ ತಂದೆಯವರಾದ ಚಿಕ್ಕಮಾದಣ್ಣನವರು ತಮ್ಮ ಕುವರಿಯ ಮತ್ತು ಕುವರನ ವಿವಾಹಗಳನ್ನು ವೈಭವದಿಂದ ಮಾಡಿದುದಕ್ಕಿಂತ ಈ ಮೇಳೆ ಮದ್ದಣ್ಣನವರು ೧೫—೨೦ ಸಾವಿರ ರೂಪಾಯಿಗಳ ವೆಚ್ಚದ ಅತಿಶಯವಾಗಿ ಮಾಡಿದರೆಂದು ಹೇಳಿದಲ್ಲಿ ಅತಿಶಯೋಕ್ತಿಯಾಗಲಾರದು. ನೂತನ ದಂಪತಿಗಳಿಗೆ ದೀರ್ಘಾಯುರಾರೋಗ್ಯ ಸುಖಸಂಪತ್ತುಂಟಾಗಲೆಂದು ಹಾರೈಸುತ್ತೇವೆ

ಸ್ಥಳದೇಶದ ವೃತ್ತಾಂತಗಳು

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ತಾ|| ...ರಲ್ಲಿ ರಾಜಧಾನಿಗೆ ದಯಮಾಡಿಸುತ್ತಾರೆಂದು ಇಲ್ಲಿ ಉಂಟಾದ ಪ್ರಚಾರಕ್ಕೆ ಆಸ್ಪದ ಮಾಡಲ್ಪಟ್ಟಿದ್ದಿತು. ಆದರೆ ರಪ್ಪದಲ್ಲಿ ಬರುವುದಿಲ್ಲವೆಂದು ಗೊತ್ತಾಗುತ್ತದೆ.

ರಾಜಧಾನಿಯ ಅಡ್ವೊಕೇಟರುಗಳಲ್ಲಿ ಬಹು ಹಿರಿಯರಾಗಿದ್ದ ಮಿ|| ಕಂಠೀರವಾಚಾರ್ಯರು ಪ್ಲೇಗುರೋಗಗ್ರಸ್ತರಾಗಿದ್ದು ಕಳೆದ ತಾ|| ೪ ರಲ್ಲಿ ವಿಧಿವಶರಾದರು. ಇವರಿಗೆ ಮರಣಕಾಲದಲ್ಲಿ ೬೦ ವರ್ಷ ವಯಸ್ಸಾಗಿದ್ದಿತು.

ಶ್ರೀವಾಣೀವಿಲಾಸ ಸನ್ನಿಧಾನದ ಮಾತೃಶ್ರೀಯವರ ಮರಣದಿಂದ ರಾಜಕುಟುಂಬಕ್ಕುಂಟಾದ ದುಃಖಸೂಚನಾರ್ಥವಾಗಿ ಪ್ರತಿದಿನ ರಾತ್ರಿಯಲ್ಲಿಯೂ ಬೆಳಗಿನ ಜಾವದಲ್ಲೂ ಹಾರಿಸಲ್ಪಡುವ ಗುಂಡುಗಳೂ ಮಂಗಳವಾದ್ಯಗಳೂ ೩ ದಿನಗಳವರೆಗೂ ನಿಲ್ಲಿಸಲ್ಪಟ್ಟದ್ದವು

ರಾಜಧಾನಿಯ ಕೈಗಾರಿಕೆಯ ಪಾಠಶಾಲೆಯಿಂದ ಮದ್ರಾಸ್ ಸರ್ಕಾರದವರು ನಡೆಯಿಸುವ ಕೈಗಾರಿಕೆಯ ಪರೀಕ್ಷೆಗೆ ಹೋಗಿದ್ದ ೬೯ ವಿದ್ಯಾರ್ಥಿಗಳಲ್ಲಿ ೧೩ ವಿದ್ಯಾರ್ಥಿಗಳು ಉತ್ತೀರ್ಣರಾದರು. ಇವರಲ್ಲಿ ೧೨ ಜನರು ೧ ನೆಯ ತರಗತಿಯಲ್ಲಿ ತೇರ್ಗಡೆಯಾಗಿರುವರು

ತಮ್ಮ ಮಗೊಂದ್ಲಿನ ಬ್ರಹ್ಮ ಶ್ರೀ ಅಗ್ನಿಹೋತ್ರ ನರಸಿಂಹಶಾಸ್ತ್ರಿಗಳು ಬರುವ ಯುಗಾದಿಯ ಹಬ್ಬದ ದಿವಸದಿಂದ ಸೋಮಯಾಗವನ್ನು ಮಾಡಲುದ್ಯುಕ್ತರಾಗಿರುವರು. ಈ ಯಜ್ಞಕ್ಕಾಗಿ ಶ್ರೀಮನ್ಮಹಾರಾಜರವರು ೧೦೦ ರೂ. ಗಳನ್ನು ದಾನ್ಯಮಾಡಿರುವುದಾಗಿ ತಿಳಿಯುತ್ತೇವೆ.

ಬೆಂಗಳೂರಿಂದ ಇಂಗ್ಲೆಂಡು, ಸ್ವೀಡನ್ ಅಥವಾ ಈಜಿಪ್ಟ್, ಏಡನ್, ದಕ್ಷಿಣ ಆಫ್ರಿಕಾ ಮತ್ತು ಸಿಂಗಪೂರ್ ಸ್ಥಳಗಳಿಗೆ ತಂತಿಯಿಲ್ಲದೆ ವಾಯುಮೂಲಕ ವರ್ತಮಾನವನ್ನು ಕಳುಹಿಸಲು ಠಾಣಗಳನ್ನು ಕಟ್ಟುವುದಕ್ಕಾಗಿ ಮಾರ್ಕೊನಿ ಕಂಪನಿಯವರಿಗೆ ಇಂಡಿಯಾ ಸರ್ಕಾರದವರು ಅನುಜ್ಞೆ ಕೊಟ್ಟಿರುತ್ತಾರೆ.

ಕೆಲವರ್ಷಗಳ ಹಿಂದೆ ರಾಜಧಾನಿ, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಪೊಲೀಸು ಇನ್ಸ್‌ಪೆಕ್ಟರರಾಗಿಯೂ, ಕೆಲಕಾಲ ಡೊಂಕೂರ ಸೆಂಟ್ರಲ್ ಜೈಲರಾಗಿಯೂ ಇದ್ದು ಈಗ ಬೆಂಗಳೂರ ದಂಡಿನಲ್ಲಿ ಪೊಲೀಸು ಇನ್ಸ್‌ಪೆಕ್ಟರರಾಗಿರುವ ಮಿ|| ನಾಗಮಂಗಲರವರು ಮರಳಿ ಮೈಸೂರ ಸರ್ಕಾರದ ಉದ್ಯೋಗಕ್ಕೆ ಬರಲು ಯತ್ನಿಸುತ್ತಿರುವರಾಗಿ ಕೇಳುತ್ತೇವೆ.

ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರು ಅಂಗಸಾಧನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಳೆದ ತಾ|| ೮ ರಲ್ಲಿ ಬಹುಮಾನವನ್ನು ದಯಪಾಲಿಸಿದರು. ಆ ಕಾಲದಲ್ಲಿ ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರವರೂ ಮಿ|| ಕ್ಯಾಂಬಲ್‌ರವರ ಪತ್ನಿಯವರೊಡನೆ ಅನಿರೀಕ್ಷಿತವಾಗಿ ಅಲ್ಲಿಗೆ ದಯಮಾಡಿಸಿದ್ದರೆಂದು ಕೇಳುತ್ತೇವೆ

ಮೊದಲು ಶಾಸಕದ ಟಿ ಎಸ್ಸ್‌ಪರ್ ಆಫೀಸರಾಗಿದ್ದ ಶ್ರೀಮನ್ಮಹಾರಾಜರ ವಿವಾಹಕಾಲದಿಂದಲೂ ಅರಮನೆಯ ಸೇವೆಯಲ್ಲಿದ್ದ ಉದ್ಯೋಗದಲ್ಲಿ ನಿಯಮಿಸಲ್ಪಟ್ಟಿದ್ದ ಮಿ|| ಎಂ. ರಂಗರಾಯರು ೬ ತಿಂಗಳ ರಜವನ್ನು ಪಡೆದುಕೊಂಡಿರುವ ಮಿ|| ಪಿಹರಸ್ವಾಮಿ ಮೊದಲಿಯರ ಬದಲು ಕೋಲಾರ ಟಿ ಎಸ್ಸ್‌ಪರ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕನ್ನಂಬಾಡಿಯಲ್ಲಿ ೨೦ ಜನ ಕೆಲಸದಲ್ಲಿ ಬಿಟ್ಟ ದಮೋದರನೆ.

ರರ ಅಭ್ಯಾಸಕ್ಕಾಗಿರುವುದರಿಂದ ಅಲ್ಲಿ ಒಂದು ಪ್ರೌಢ ಸ್ಕೂಲನ್ನು ಸ್ಥಾಪಿಸಬೇಕೆಂದು [illegible] ಸಾಗರ ಪುರಸ್ಥರು ಕಳೆದ ತಿಂಗಳಲ್ಲಿ [illegible] ರವರೂ ಮೈಸೂರಿನ ಶ್ರೀ [illegible] ಕಮಿಷನರರೂ [illegible] ಬಳಿಗೆ ಹೋಗಿದ್ದರು.

ಸರದಾರ್ ಶಾಂತರಾಜ ಅರಸಿನವರಿಗೆ ಪ್ರಾಪ್ತವಾದ ಮಹತ್ವದ ವಿಯೋಗ ದುಃಖವನ್ನು ವಿಚಾರಿಸಲು [illegible] ಮಹಾರಾಜರವರು ರಾಜಧಾನಿಗೆ ದಯಮಾಡಿಸಿದ್ದು ಕಳೆದ ಬುಧವಾರ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣ ಮಾಡಿದರು, ಮತ್ತು ಈ ತಿಂಗಳಲ್ಲಿ ಇಲ್ಲಿಗೆ ದಯಮಾಡಿಸುವುದಾಗಿ ತಿಳಿಯುತ್ತೇವೆ. ದುಃಖವನ್ನು ವಿಚಾರಿಸಲು ದಯಮಾಡಿಸಿರುವ ಕರ್ನಲ್ ದೇಸರಾಜ ಅರಸಿನವರು ಇಲ್ಲಿಯೇ ಇರುವರು.

ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಮಿ॥ ಎಂ. ಕೃಷ್ಣರಾಯರು ಹಿಂದೆ ಸಂಸ್ಥಾನದ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ರವರಾಗಿದ್ದ [illegible] ರವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳ ಪ್ರದರ್ಶನಾರ್ಥವಾಗಿ, ಪ್ರತಿ ವರ್ಷದಲ್ಲೂ ಈ ಕಾಲೇಜಿನ ಇಂಗ್ಲೀಷ್ [illegible] ಪರೀಕ್ಷೆಯು [illegible] ಬಹುಮಾನವನ್ನು ಕೊಡುವ ಏರ್ಪಾಡು ಮಾಡಿರುತ್ತಾರೆ.

ರಾಜಧಾನಿ ಮಹನೀಯರು ಈ ತಿಂಗಳಲ್ಲಿ [illegible] ಜನರನ್ನು ವಿನೋದಗೊಳಿಸುವುದರ ಜೊತೆಗೆ [illegible] ಅತಿಶಯವಾದ ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾಗಿರುವ ಆನಂದಾತಿಶಯವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿದ್ದರಷ್ಟೆ. ಆದರೆ ಈ ಪಟ್ಟಣದ ಸರದಾರ್ [illegible] ಅರಸಿನವರ ಪತ್ನಿಯ ಮರಣದಿಂದ ರಾಜಕುಟುಂಬದವರಿಗೆ ವ್ಯಸನವು ಪ್ರಾಪ್ತವಾದುದರ ದೆಸೆಯಿಂದ ಮೊದಲು ಕೆಲವು ದಿನಗಳು ಸ್ಥಗಿತವಾಗಿದ್ದು [illegible] ನಡೆಸಲ್ಪಡುವ ಸಂಭವವಿಲ್ಲವೆಂದು ತೋರುತ್ತದೆ.

ಸರದಾರ್ ಶಾಂತರಾಜ ಅರಸಿನವರು ದೀರ್ಘ ಕಾಲ [illegible] ಪಡೆದುಕೊಳ್ಳುವುದಾಗಿಯೂ, ಅವರ ಸ್ಥಾನದಲ್ಲಿ ಬೆಂಗಳೂರಿನ ಡಿಪ್ಯುಟಿ ಕಮಿಷನರಾದ ಮಿ॥ ಬಿ. ಪುರುಷೋತ್ತಮರಾಯರು ಎಕ್ಸೈಜ್ ಕಮಿಷನರಾಗಿ ನಿಯಮಿಸಲ್ಪಡುತ್ತಾರೆಂದೂ ಸರ್ [illegible] ಜುಲೈ ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವುದರಿಂದ [illegible] ಕಾಲದಲ್ಲಿ ಮೈಸೂರ್ ಡಿಪ್ಯುಟಿ [illegible] ರಾಯರವರು [illegible] ಪತ್ರಿಕೆಯು ತಿಳಿಸುತ್ತದೆ. [illegible]

[illegible] ಅಲ್ಲಿನ ಸಂಗೀತ ವಿದ್ವತ್ಪರಿಷತ್ತಿಗೆ [illegible] ಅನೇಕ ಸಂಸ್ಥಾನಗಳಲ್ಲಿ [illegible] ಅಲ್ಲಿ ಬೆಂಗಳೂರಿನ ಪದಕವನ್ನು [illegible] ಬರಲು [illegible] ರವರ ಕನಿಷ್ಠ ಪುತ್ರರಾದ [illegible] ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯ [illegible] ಒಂದು ದೊಡ್ಡ ಸಭೆಯನ್ನು ಕೂಡಿಸಿ [illegible] ದ ಪದಕವನ್ನು ಬಹುಮಾನವಾಗಿ ಕೊಟ್ಟರು ಎಂದು ನಮ್ಮ ಪತ್ರಿಕಾ ಬಾಚಕರೊಬ್ಬರು ತಿಳಿಸುತ್ತಾರೆ.

ಮಿ॥ ಎಚ್. ಎಚ್. [illegible] ರವರು ಎಷ್ಟು ವರ್ಷಗಳಿಂದಲೂ ಮೈಸೂರಿನ ಸಂಸ್ಥಾನದಲ್ಲಿ [illegible] ಟ್, ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್ [illegible] ಎಕ್ಸೈಜ್ ಕಮಿಷನರ್ ಈ ಉದ್ಯೋಗಗಳನ್ನು ಬಹು ಸಮರ್ಥತೆಯಿಂದ ನಿರ್ವಹಿಸಿರುವ ಪ್ರಯುಕ್ತ ಅವರು [illegible] ಕಾಲದಲ್ಲಿ [illegible] ಡಿಸೆಂಬರ್ [illegible] ಫೆಬ್ರುವರಿ ತಾರೀಖು [illegible] ಉದ್ಯೋಗದ ಮೇಲೆ [illegible] ಯಾವ ಸಂಬಳವನ್ನು ಕೊಡುವುದಾಗಿ [illegible] ರಾಜರವರ [illegible] ಇದರಿಂದ ಯೋಗ್ಯರೆಂದು [illegible] ಪ್ರಯಾಣವಾಗುವುದಕ್ಕೆ [illegible]

ಕಳೆದ ತಾರೀಖು [illegible] ಗಳೆಯ ಇರುವ [illegible] ಒಂದು [illegible]

ಅಲ್ಲಿ ಕಳುವಿಕೆ [illegible] ಬಿಟ್ಟುಕೊಂಡಿದ್ದ [illegible] ಅವರ ಕೊಂಡು ಹೋಗುತ್ತಿದ್ದ [illegible] ಯೆಲ್ಲಾ [illegible] ಕೂಡಲೆ [illegible] ಆದರೆ ಅವರು ಗುಣವನ್ನು [illegible] ಈ ಕಾರಣದಿಂದ [illegible] ಅತ್ತಿತ್ತ ಕೊಂಡು ಒಂದು ತನ್ನನ್ನು ಕಡದು [illegible] ಆದರ ಯಾಜಮಾನರು [illegible] ದಾಗುವುದು ಕೇಳುತ್ತೇವೆ.

[illegible] ಎಂಬುವರ [illegible] ಡಿಸೆಂಬರ್ ತಿಂಗಳಲ್ಲಿ [illegible] ವರ್ಷ ಕಾಲ [illegible] ಸ್ಪೆಷಲ್ ಕೋರ್ಟಿನ [illegible] ತೆಂಗಳಲ್ಲಿ [illegible] ಅವರ ಹೆಂಡತಿಯೂ [illegible] ಬಾರಿಯು, ಅವಳ ಹಿರಿಯ ಮಗನೂ ಕೃಷ್ಣ [illegible] ಅವಳ ತಾಯಿ [illegible] ಬೆಂಗಳೂರಿನ [illegible] ವಿವಾದವು ಕೇಸನ್ನು [illegible] ತಿಂಗಳ [illegible] ಅವಳ ಮಗಳು [illegible] ತಿಂಗಳ ಸಾಧಾರಣ ಕಾರಾಗೃಹವಾಸವೂ [illegible] ೫೦೦ ರೂ. ಗಳು [illegible] ಟ್ಟಿತು.

ವರ್ತಮಾನ ಸಂಗ್ರಹವು.

ಹೈದರಾಬಾದಿನ ನೈಜಾಮರವರಿಗೆ ಪುತ್ರೋತ್ಸವವಾಯಿತು ಕ್ಕಾಗಿ [illegible] ಕಳೆದ ತಾರೀಖು [illegible] ರಲ್ಲಿ [illegible] ಸರ್ಕಾರದವರು ಕಳುಹಿಸಿದರು.

ಲೈಬ್ರರಿಯಲ್ಲಿ [illegible] ಶ್ರೀಮಾನ್ [illegible] ರವರು [illegible] ಮದ್ರಾಸ್ [illegible] ರೂ. ದಂಡವನ್ನು [illegible]

ಕಳೆದ ತಾರೀಖಿನಲ್ಲಿ [illegible] ರಿಗೂ ಸ್ತ್ರೀಯರು [illegible] ಮತ್ತು ಸ್ತ್ರೀಯರೂ [illegible] ಅಲ್ಲಿ [illegible] ಪತ್ರಿಕೆಗಳನ್ನು ಓದುತ್ತಿದ್ದರು.

ಕಳೆದ ರಾತ್ರಿ [illegible] ಕೊಡುವ [illegible] ಬೇಕೆಂದೂ, [illegible] ನಿರ್ಧಾರವನ್ನು ಮಾಡಿದರು.

ಕಳೆದ ತಾರೀಖು [illegible]

ಕಳೆದ ತಾರೀಖು [illegible]

[illegible] ಅವರು [illegible]

ವಾರಣಾಸಿಯಲ್ಲಿರುವ [illegible] ಶಾಲೆಗಳಲ್ಲಿ [illegible] ಬಾಲಿಕೆಯರ ಶಾಲೆಗಳಿಗಾಗಿ [illegible] ವಿದ್ಯಾರ್ಥಿನಿಲಯಗಳಿಗಾಗಿ [illegible] ರೂ. [illegible]

ಕವಿರತ್ನ ಜ್ಞಾನಸ [illegible] ಥೋರ್ (ಕೀರ್) [illegible]

[illegible]

[illegible]

[illegible]

ಪತ್ರವ್ಯವಹಾರಕರ್ತರಿಗೆ ಸೂಚನೆ.

ಈ ಮೈಸೂರ್ ಸ್ಟಾರ್ ಪತ್ರಿಕೆಗೆ ಲೇಖನಗಳನ್ನು ಕಳುಹತಕ್ಕ ಪತ್ರವ್ಯವಹಾರಕರು ಬಹು ಜನಕ್ಕುಪಯುಕ್ತವಾದ ಮತ್ತೂ ಮನೋರಂಜಕವಾದ ವಿಷಯಗಳನ್ನು ಆದಷ್ಟು ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ, ಪತ್ರದ ಒಂದು ಪಕ್ಕದಲ್ಲಿ ಮಾತ್ರ ಸ್ಫುಟವಾಗಿಯೂ ಬರೆದು ಕಳುಹಬೇಕೆಂದು ನಾವು ಅನೇಕ ಸಲ ಸೂಚಿಸಿದಾಗ್ಯೂ ಬಹು ಜನರು ಅದನ್ನು ಗಮನಿಸದೆ ಕೆಲಸಕ್ಕೆ ಬಾರದ ವಿಷಯಗಳನ್ನು ಪುಟಗಟ್ಟಲೆ ಎರಡು ಪಕ್ಕದಲ್ಲಿಯೂ ಅವಿರಳವಾಗಿ ಬರೆದು ಕಳುಹಿಸಿ ನಮಗೆ ಬಹು ತೊಂದರೆಯನ್ನುಂಟುಮಾಡುತ್ತಿರುವರಲ್ಲದೆ, ಅನುಪಯುಕ್ತವಾದ ಲೇಖನಗಳಿಗೆ ಸ್ಥಳವು ದೊರೆಯದೆ ಹೋದಲ್ಲಿ ಆಗ್ರಹಯುಕ್ತರಾಗುವರು. ಎಷ್ಟೋ ಜನರು ತಮಗೆ ಬೇಕಾದವರನ್ನು ಹೊಗಳಿಯೂ, ಬೇಡದವರನ್ನು ನಿಂದ್ಯಾಳಿಸಿಯೂ ಬರೆಯುತ್ತಿರುವರು. ಅಂತಹ ಲೇಖನಗಳಿಗೆ ಈ ಪತ್ರಿಕೆಯಲ್ಲಿ ಅವಕಾಶವನ್ನು ಕೊಡುವುದಾದರೆ, ಅನೇಕ ವಾಚಕರ ಮನನೋವಿಕ್ಕೆ ಕಾರಣವಾಗುವುದಲ್ಲದೆ ಪತ್ರಿಕೆಯ ಯೋಗ್ಯತೆಗೆ ಕುಂದುಂಟಾಗುತ್ತದೆಂಬ ವಿಷಯವನ್ನು ಇಲ್ಲಿ ಹೇಳಬೇಕಾದುದಿಲ್ಲವು. ಅದುಕಾರಣ ಲೇಖನಗಳನ್ನು ಕಳುಹಿಸತಕ್ಕವರು ಜನರ ಹೊಗಳಿಕೆಯ ಭಾಗವನ್ನು ಬಿಟ್ಟು ನಿಜಾಂಶವನ್ನು ಯುಕ್ತಿಯುಕ್ತವಾಗಿ ಪತ್ರದ ಒಂದು ಪಕ್ಕದಲ್ಲಿ ಮಾತ್ರ ಸ್ಫುಟಾಕ್ಷರಗಳಿಂದ ಬಹು ಸಂಕ್ಷೇಪವಾಗಿ ಬರೆದು ಪ್ರತಿ ಬುಧವಾರದೊಳಗೆ ಕಳುಹತಕ್ಕದು. ಮತ್ತೂ ಪ್ರತಿಯೊಬ್ಬರೂ ತಮ್ಮ ಪೂರ್ಣವಾದ ವಿಳಾಸವನ್ನು, ಚಂದಾ ರಿಜಿಸ್ಟರ್ ನಂಬರನ್ನೂ ನಮ್ಮ ತಿಳಿವಿಗಾಗಿ ಬರೆಯಬೇಕು. ಈ ಸೂಚನೆಯನ್ನು ಮೀರಿ ಬರತಕ್ಕ ಲೇಖನಗಳಿಗೆ ಖಂಡಿತವಾಗಿಯೂ ಈ ಪತ್ರಿಕೆಯಲ್ಲಿ ಸ್ಥಳವು ದೊರೆಯುವುದಿಲ್ಲವು. ಮತ್ತೂ ತಿರಸ್ಕರಿಸಲ್ಪಟ್ಟ ಲೇಖನಗಳನು ಹಿಂದಕ್ಕೆ ಕಳುಹಿಸಲ್ಪಡುವುದಿಲ್ಲವು. ಎಂಬ ಭಾಗವನ್ನು ಪ್ರತಿಯೊಬ್ಬರೂ ಅಗತ್ಯವಾಗಿ ಗಮನಿಸಬೇಕು.—ಪ. ಪ್ರ.

ಪತ್ರವ್ಯವಹಾರವು.

ಕೊಡಗು ನಂಜರಾಯಪಟ್ಟಣ ತಾ|| ಬಿಳಗಾರ ಹೋಬಳಿ ಬೆಸೂರಹಳ್ಳಿಯಲ್ಲಿರುವ ಶಿರಕೋಡಲಿಮಠದ ಪಟೇಲ್ ಮ|| ಬಸವಣ್ಣಯ್ಯನವರು ಕಳೆದ ಫೆಬ್ರುವರಿ ತಾ|| ೧೧ ರಲ್ಲಿ ಕಳಸಾರಾಧನೆಯಿಂದ ೩೧-೨೦ ವಟುಗಳಿಗೆ ದೀಕ್ಷೆಯನ್ನು ತಾ|| ೨೦ ರಲ್ಲಿ ತಮ್ಮ ಮಕ್ಕಳಿಗೆ ವಿವಾಹವನ್ನೂ ವಿಜೃಂಭಣೆಯಿಂದ ನೆರವೇರಿಸಿ ಬಂದಂತಹ ಪತ್ತಮಹಾಸ್ವರರನ್ನು ದಕ್ಷಿಣೆ ತಾಂಬೂಲಗಳಿಂದಲೂ ವಿಸ್ತಾರವಾದ ಭೋಜನದಿಂದಲೂ ತೃಪ್ತಿಗೊಳಿಸಿದರು. ವಿವಾಹಕಾಲದಲ್ಲಿ ವಧೂವರರಿಗೆ ಮುಯ್ಯಿಗಾಗಿ ಬಂದುದರಲ್ಲಿ ೩ ರೂ. ಗಳನ್ನು ಬೆಂಗಳೂರಲ್ಲಿರುವ ವೀರಶೈವ ವಿದ್ಯಾವರ್ಧಕ ಫಂಡಿಗೆ ಕೊಡಲು ಮೈಸೂರ ಸ್ಟಾರ್ ಪತ್ರಿಕಾಕರ್ತರಲ್ಲಿಗೆ ಮನಿಯಾರ್ಡರು ಮಾಡಲ್ಪಟ್ಟಿತು. ಕಾರ್ಯಕರ್ತರಾದ ಪಟೇಲ್ ಬಸವಣ್ಣಯ್ಯನವರು ಮಾಡಿದ ಅತಿಥಿ ಸತ್ಕಾರಕ್ಕಾಗಿ ಬಂದಿದ್ದ ಜನರೆಲ್ಲರೂ ಅವರನ್ನು ಶ್ಲಾಘಿಸಿದರು.

ಪ್ರತ್ಯಕ್ಷದರ್ಶಿ.

[ನಮ್ಮಲ್ಲಿಗೆ ಕಳುಹಲ್ಪಟ್ಟಿದ್ದ ಈ ಹಣವು ಕಾರ್ಯದರ್ಶಿಯವರಲ್ಲಿಗೆ ಕಳುಹಲ್ಪಡುವ ಪಕ್ಕಾಗಿ ಹಿಂತಿರುಗಿಸಲ್ಪಟ್ಟಿತು. ಪ. ಪ್ರ.]

ಬಸವೇಶ್ವರ ನಾಟಕವೂ, ನಮ್ಮ ಬೊಂಬಾಯಿ ಗೌರ್ನಮೆಂಟು

ಕೊಣ್ಣೂರಕರ್ ಎಂಬ ಕನ್ನಡ ಸಂಗೀತ ನಾಟಕ ಮಂಡಳಿಯವರು ಕೆಲವು ವರ್ಷಗಳಿಂದ "ಬಸವೇಶ್ವರ ನಾಟಕ" ಎಂಬ ಕನ್ನಡ ಸಂಗೀತನಾಟಕವನ್ನು ಬೊಂಬಾಯಿ ಪ್ರಾಂತ್ಯದ ಬಾಗಲಕೋಟೆ, ಬಿಜಾಪುರ, ಗದಗು, ಧಾರವಾಡ, ಹುಬ್ಬಳ್ಳಿ ಮೊದಲಾದ ಕನ್ನಡ ನಾಡಿನ ದೊಡ್ಡ ದೊಡ್ಡ ಸ್ಥಳಗಳಲ್ಲಿ ಅಭಿನಯಿಸಿ ತೋರಿಸುತ್ತಾ ಬಂದಿದ್ದರು. ಈ ನಾಟಕದಲ್ಲಿ ಶ್ರೀ ಬಸವಪುರಾಣದ ಸಾರಾಂಶವೇ ಇದ್ದುದರಿಂದ, ಜನಗಳಿಗೆ ಭಕ್ತಿಜ್ಞಾನ ವೈರಾಗ್ಯಾದಿಗಳ ವಿಷಯದಲ್ಲಿ ತಿಳುವಳಿಕೆ ಉಂಟಾಗಿ ಈ ನಾಟಕವು ಬಹು ಜನ ಪ್ರೀತಿಗೆ ಪಾತ್ರವಾಗಿದ್ದಿತು. ಆದರೆ ಕಳೆದ ಡಿಸೆಂಬರು ತಿಂಗಳಲ್ಲಿ ಈ ನಾಟಕ ಮಂಡಳಿಯವರು ಬೆಳಗಾಮಿಗೆ ಬರಲು ಅಲ್ಲಿನ ಕೆಲವು ಜೈನಮತೀಯರು ಈ "ಬಸವೇಶ್ವರ ನಾಟಕ"ವನ್ನು ಆಡಬಾರದೆಂತಲೂ, ಆಡುವುದರಿಂದ ತಮ್ಮ ಧರ್ಮಗುರುಗಳಿಗೂ, ರಾಜರಿಗೂ, ಅಗೌರವವುಂಟಾಗುವುದಲ್ಲದೆ ಮತ್ತೆ ದ್ವೇಷವುಂಟಾಗುತ್ತದೆಂತಲೂ, ಸರಕಾರದವರಲ್ಲಿ ಅರಿಕೆ ಮಾಡಿಕೊಂಡರು. ಆಗ ನಾಟಕದವರ ಪರವಾಗಿ ಜೈನ ಮತೀಯರಾದ ಶ್ರೀ ... ಬಿ. ಎ., ಎಲ್. ಎಲ್. ಬಿ., ಯವರ ಪ್ರತಿನಿಧಿ ಈ ನಾಟಕದಿಂದ ಜೈನಮತಕ್ಕೆ ಕಳಂಕವುಂಟಾಗುವುದಿಲ್ಲವೆಂದು ... ಅರಿಕೆ ಮಾಡಿಕೊಂಡರೂ ಕೇಳದೆ ...

ಪ್ರಮಾಣ ಜೈನಮುಂಗಾಣಿಯವರು ಈ ನಾಟಕದಿಂದ ತಮ್ಮ ಜೈನಮತಕ್ಕೆ ಯಾವ ವಿಧವಾದ ತೊಂದರೆಯಿಲ್ಲವೆಂತಲೂ, ಸರಕಾರಕ್ಕೆ ಅರಿಕೆಮಾಡಿಕೊಂಡರು. ಇದೂ ನಿಷ್ಫಲವಾಯಿತು. ನಾಟಕವನ್ನು ಆಡಿಸಬಾರದೆಂದು ಅರಿಕೆಮಾಡಿಕೊಂಡ ಜನಗಳಾದರೋ ಮೇಲಾಕ್ಷೇಪಿಸಿದಂತಹ ಜೈನಮತೀಯರು ಅನೇಕ ಸ್ಥಳಗಳಲ್ಲಿ ಅನೇಕಬಾರಿ ಬಸವೇಶ್ವರ ನಾಟಕವ ನ್ನಾಡಿದುದರಿಂದ ಯಾವ ವಿಧವಾದ ಅನಾಹುತವಾಯಿತೆಂಬುದನ್ನು ಆಧಾರವಾಗಿ ತೋರಿಸಿರುವುದಿಲ್ಲ. ಇದರ ಮೇಲಿಂದ ಅವರುಗಳ ಅಭಿಪ್ರಾಯದಲ್ಲಿ ಎಷ್ಟು ಯುಕ್ತ್ಯಾಂಶವಿದೆಯೆಂಬುದು ಕಾಣಿಸಿ ಸ್ಪಷ್ಟವಾಗುತ್ತದೆ. ಒಂದುವೇಳೆ ಕೆಲ ಜನಗಳಿಗೆ ಆ ವಿಧವಾಗಿ ಆಗುವುದನ್ನು ನೋಡುವ ಇಷ್ಟವಿಲ್ಲದಿದ್ದರೆ ನಾಟಕಕ್ಕೆ ಹೋಗದೆ ಇರಬಹುದಾಗಿದ್ದಿತು. ಇದೇ ನಾಟಕವನ್ನು ಬಿಜಾಪುರದ ಕೆಲವು ಬ್ರಾಹ್ಮಣರು ಆಡಲಾಗದೆಂದು ಸರಕಾರದವರಿಗೆ ಅರಿಕೆಮಾಡಿಕೊಂಡಿದ್ದುದಕ್ಕೆ ಕಲೆಕ್ಟರ್ ಸಾಹೇಬರವರು ಇಷ್ಟವಿಲ್ಲದವರು ನೋಡಲಿಕ್ಕೆ ಹೋಗಬೇಡಿರೆಂದು ಅಪ್ಪಣೆಮಾಡಿದರಂತೆ. ಆ ಪ್ರಕಾರ ಆ ನಮ್ಮ ಜೈನ ಧರ್ಮಾಭಿಮಾನಿಗಳು ನೋಡಲಿಕ್ಕೆ ಹೋಗದಿದ್ದರೆ ಅವರನ್ನೇನೂ ನಾಟಕದವರು ಬಲಾತ್ಕಾರಮಾಡುತ್ತಿರಲಿಲ್ಲ, ಅಥವಾ ಅವರ ಮುಂಗೆ ಬಂದು ಆತಂತ್ರವೂ ಇರಲಿಲ್ಲ. ಇದು ಹೋಗಲಿ ಇರಲಿ ೩೨ ಪುಟಗಳುಳ್ಳ ಆ ನಾಟಕ ಪುಸ್ತಕದಲ್ಲಿ ಬಸವೇಶ್ವರ ಪುರಾಣದಲ್ಲಿರುವ ೧೦ ಪುಟಗಳ ವಿಷಯವು ಮಾತ್ರ ಆಕ್ಷೇಪಣೀಯವಾದುದೆಂದು ಆ ಜೈನಮತಾಭಿಮಾನಿಗಳು ಹೇಳಿರುವುದು ಒಂದುವೇಳೆ ಯುಕ್ತವಾದುದೆಂದು ಯೋಚಿಸಿದಾಗ್ಯೂ, ಸರಕಾರದವರು ಆ ಸಮಗ್ರಪುಸ್ತಕವನ್ನೇ ಪ್ರಿಸ್ಕ್ರೈಬ್ ಮಾಡಿದಂತೆ ರದ್ದುಮಾಡಿ ಆ ಬಸವೇಶ್ವರ ನಾಟಕವನ್ನೇ ಆಡಲಾಗದೆಂದು ಅಪ್ಪಣೆಮಾಡಿರುವುದು ಎಷ್ಟು ಉಗ್ರವಾದುದೆಂಬುದನ್ನು ವಾಚಕರೇ ಯೋಚಿಸಬೇಕು. ಯಾವ ೩೨ ಪುಟಗಳೊಳಗಿನ ವಿಷಯಗಳು ಜೈನಮತೀಯರಿಗೇನೇ ಆಕ್ಷೇಪಕರವಾಗಿ ತೋರಬರುವಾಗ ಅವು ಆಂಗ್ಲೇಯರಾದ ನಮ್ಮ ಬೊಂಬಾಯಿ ಗವರ್ನಮೆಂಟಿನವರಿಗೆ ಆಕ್ಷೇಪಕರವಾಗಿ ತೋರಿದುದು ಸತ್ಯಾಭಿಮಾನಿಗಳಾದ ಪ್ರತಿಯೊಬ್ಬರಿಗೂ ಖಂಡಿತವಾಗಿ ಸಖೇದಾಶ್ಚರ್ಯಕರವಾಗದಿರಲಾರದು. ಜೈನಮತೀಯರಿಗೆ ದುಃಖವಾಗಬಾರದೆಂದು ಸರಕಾರದವರಿಗೆ ಹೇಗೆ ಉದ್ದೇಶವಿದ್ದಿತೋ ಹಾಗೆಯೇ ವೀರಶೈವರಿಗೂ ಅಸಂತೋಷವಾಗಬಾರದೆಂದು ಉದ್ದೇಶವಿರಬೇಕಾಗಿದ್ದಿತು. ಆದರೆ ಸರಕಾರದವರ ಆ ಸದುದ್ದೇಶವು ಪ್ರಕೃತದ ಶಾಸನದಿಂದ ವ್ಯಕ್ತವಾಗದೆ ಹೋಗಿದೆ. ಯಾವ ಹತ್ತು ಪುಟಗಳು ಆಕ್ಷೇಪಕರವಾದವುಗಳೆಂದು ಆ ಜೈನಮತೀಯರು ಅರಿಕೆ ಮಾಡಿಕೊಂಡಿದ್ದರೋ, ಆ ಹತ್ತು ಪುಟಗಳಲ್ಲಿರತಕ್ಕ ವಿಷಯವನ್ನು ತಿದ್ದುಪಡಿಯಾಗಲಿ, ಅಥವಾ ಸಂಪೂರ್ಣವಾಗಿ ತೆಗೆದುಹಾಕುವಂತೆಯಾಗಲಿ ಅಪ್ಪಣೆಯಾಗಿದ್ದರೆ ಈ ದುಃಖಕರವಾದ ಲೇಖನವನ್ನು ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ಜೈನಮತಾಭಿಮಾನಿಗಳಿಗೆ ಹತ್ತು ಪುಟಗಳ ವಿಷಯವು ಆಕ್ಷೇಪಣೀಯವಾಗಿ ತೋರಿದುದರಿಂದ ಅಷ್ಟೇ ವಿಷಯವನ್ನು ತೆಗೆಸಬೇಕೆಂದು ಸರಕಾರದವರ ಕರ್ತವ್ಯವಾಗಿದ್ದಿತು. ಹಾಗೆ ಮಾಡದೆ ಅವುಗಳ ಸಂಗಡ ಇತರ ೩೨ ಪುಟಗಳ ವಿಷಯಗಳನ್ನೂ ಸರಕಾರದವರು ನಿಷೇಧಿಸಿದುದರಿಂದ "ಶ್ರೀ ಬಸವ ಪುರಾಣವು" ಆಕ್ಷೇಪಣೀಯವಾದುದೆಂದು ಪರ್ಯಾಯದಿಂದ ಹೇಳಿದಂತಾಗುವುದರಲ್ಲಿ ಸಂದೇಹವಿಲ್ಲವು. ಏಕೆಂದರೆ ಬಸವ ಪುರಾಣದ ಸಾರಾಂಶವೇ ಆ ೩೨ ಪುಟಗಳಲ್ಲಿರೆ. ಈ ದೃಷ್ಟಿಯಿಂದ ನೋಡಿದರೆ ಮತದ್ವೇಷದಿಂದ ತುಂಬಿ ತುಳುಕುವ ಈ ಹಿಂದೂಸ್ಥಾನದಲ್ಲಿ ಸರಕಾರದವರ ಪ್ರಕೃತ ಶಾಸನವೆಂಬ ಅಗ್ನಿಗೆ ಎಷ್ಟು ಪುರಾಣಗಳು ಆಹುತಿಯಾಗಿ ಇರವು! ಆದುದರಿಂದ ಬಸವ ಪುರಾಣದಲ್ಲಿರುವ ವಿಷಯವನ್ನು ನಾಟಕದವರು ತಮ್ಮ ಅಭಿನಯದ ಅನುಕೂಲ್ಯಕ್ಕಾಗಿ ಸೇರಿಸಿದುದು ಆಕ್ಷೇಪಣೀಯವೆಂದು ಸರಕಾರದವರಿಗೆ ತೋರಿದ್ದರೆ ಅದನ್ನು ತೆಗೆಯುವುದು ಶಾಂತಪ್ರಿಯರಾದ ಸರಕಾರದವರಿಗೆ ಕರ್ತವ್ಯವಾಗಿಯೂ, ಹಿತಕರವಾಗಿಯೂ ಇದ್ದಿತು. ಹಾಗೆ ಮಾಡಿದ್ದರೆ ಅದು ವೀರಶೈವಮತೀಯರಿಗೆ ಖೇದಕರವಾಗುತ್ತಿರಲಿಲ್ಲ. ಮತ್ತು ಹಾಗೆ ಮಾಡಲು ನಾಟಕದವರೂ ಸಿದ್ಧರಾಗಿದ್ದರು. ಜೈನಮತದ ಮುಖಂಡರೂ ಆ ಹತ್ತು ಪುಟಗಳನ್ನು ತೆಗೆದರೆ ಸಾಕೆಂದು ಅಭಿಪ್ರಾಯಪಟ್ಟಿದ್ದರು. ಹೀಗಿರುತ್ತ, ಸಂಪೂರ್ಣ ಪುಸ್ತಕವನ್ನೇ ರದ್ದುಮಾಡಿದುದು ಅನ್ಯಾಯವೆಂದು ಹೇಳಬೇಕೋ? ಅಥವಾ ವೀರಶೈವರ ಕಾಲದ ಕರ್ಮವೆಂದು ಹೇಳಬೇಕೋ? ಇಲ್ಲವೆ ಅಷ್ಟೇ ಪುಟಗಳನ್ನು ತೆಗೆಯುವುದಕ್ಕೆ ಸರಕಾರದವರಿಗೆ ಬರುತ್ತಿರಲಿಲ್ಲವೇ? ಶ್ರೀ ಚೆನ್ನಕೋಟೆಕರರ "ನಿಬಂಧಮಾಲಾ" ಎಂಬ ಗ್ರಂಥದಲ್ಲಿ "ನಮ್ಮ ದೇಶಸ್ಥಿತಿ" ಎಂಬ ವಿಷಯವು ಸರಕಾರದವರಿಗೆ ಆಕ್ಷೇಪಣೀಯವೆಂದು ತೋರಿದುದರಿಂದ ಇದೇ ಸ್ಕೂಲ್ ಆಫೀಸಿನಂತೆ ಆ ವಿಷಯವೊಂದನ್ನೇ ರದ್ದುಮಾಡಿದ ...

ಸ್ವಾಮಿಪ್ರಿಯವಾದ ಬೊಂಬಾಯಿ ...ರು ಈಗ ಮಾತ್ರ ಈ ವಿಷ...

ಅಪ್ಪಣೆಮಾಡಿರುವುದಂತೂ ವಿಶೇಷ ಸಖೇದಾಶ್ಚರ್ಯವನ್ನುಂಟುಮಾಡುತ್ತಿದೆ. ಇದು ಕೇವಲ ನಾಟಕದವರ ವಿಷಯವಾಗಿ ಪರಿಣಮಿಸಲಿಲ್ಲ. ಬಸವ ಪುರಾಣವೇ ನಿಷೇಧಿಸಲ್ಪಡಬಹುದೋ ಏನೋ ಎಂಬ ಶಂಕೆಯುಂಟಾಗುತ್ತದೆ. ಅಲ್ಲದೆ ಪ್ರಾಚೀನ ನಿರುಪದ್ರವಿ ಬಸವೇಶ್ವರ ಚರಿತ್ರೆಗೆ ಈ ಶಾಸನದಿಂದ ಒಂದು ವಿಧವಾದ ಕಳಂಕವುಂಟಾಯಿತೆಂದು ವಿಚಾರವಂತ್ಯದಲ್ಲಿ ಪ್ರತಿಯೊಬ್ಬರಿಗೂ ವೇದ್ಯವಾಗಬಹುದು. ವೀರಶೈವ ಮತದ ಧಾರಕರ ಪರಮಪೂಜ್ಯ ಜೀವ ಚರಿತ್ರೆಯನ್ನು ನಾಟಕರೂಪದಲ್ಲಿ ತೋರಿಸುವುದು ಅಯೋಗ್ಯವೆಂದು ನಿರ್ಣಯವಾಗುವುದು ತುಂಬಾ ಖೇದಕರವಾದುದೆಂಬುದಕ್ಕೆ ಸಂದೇಹವಿಲ್ಲವು. ಈ ವಿಷಯದಲ್ಲಿ ಆಲೋಚಿಸಿದಂತೆಲ್ಲಾ ದುಃಖವು ಹೆಗ್ಗಳವಾಗುತ್ತದೆ. ಆದುದರಿಂದ ಇದಕ್ಕಿಂತಲೂ ವಿಶೇಷ ಬರೆಯಲಿಕ್ಕೆ ಲೇಖನಿ ಮುಂದರಿಯುವುದಿಲ್ಲ. ನ್ಯಾಯ ಪ್ರಿಯರಾದ ಸರ್ ಜಾರ್ಜ್ ಕ್ಲಾರ್ಕ್ ಸಾಹೇಬರವರು ವೀರಶೈವರಿಗೆ ಇಷ್ಟು ದುಃಖವಾಗಿದೆ ಎಂದು ತಿಳಿದರೆ ಖಂಡಿತವಾಗಿ ಈ ಪ್ರಕಾರವಾದ ಶಾಸನವನ್ನು ರದ್ದುಮಾಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಬಸವೇಶ್ವರ ಚರಿತ್ರೆಯ ವಿಷಯಾಭಿಮಾನಿಗಳು ಶಾಂತಚಿತ್ತರಾಗಿಯೂ, ನ್ಯಾಯಬದ್ಧರಾಗಿಯೂ ದೀರ್ಘಪ್ರಯತ್ನ ಮಾಡಬೇಕಾದುದು ಅತ್ಯವಶ್ಯಕವು. ಕಾರ್ಯಕರ್ತರಿಯ ಪ್ರತಿಯೊಂದು ಸಮಾಜದ ಅಥವಾ ಧರ್ಮದ ಅಗೌರವಕ್ಕೂ, ಅಧೋಗತಿಗೂ ಕಾರಣವಾಗಿದೆ ಎಂದು ತಿಳಿಯದ ವಿನಾ ನಿಜವಾದ ಪ್ರಯತ್ನವುಂಟಾಗುವದಿಲ್ಲವು. ಹೇಗೆ ಸರಕಾರದವರಿಗೆ ನ್ಯಾಯವಾದ ತೀರ್ಮಾನವನ್ನು ಕೊಡುವುದು ಕರ್ತವ್ಯವಾಗಿದೆಯೋ ಅದರಂತೆಯೇ ಅನ್ಯಾಯವಾಗಿದೆಎಂದು ಹೇಳುವವರು ಅವರ ಗಮನಕ್ಕೆ ಬರುವಂತೆ ಪ್ರಯತ್ನಿಸುವುದೂ ಕರ್ತವ್ಯವಾಗಿದೆ ಎಂಬುದನ್ನು ಮರೆಯಲಾಗದು. ಸಭೆಗಳ ಮೂಲಕವಾಗಿಯೂ, ವೀರಶೈವ ಪ್ರಮುಖರ ಡೆಪ್ಯುಟೇಶನ್ ಮೂಲಕವಾಗಿಯೂ ಗವರ್ನರ್ ಸಾಹೇಬರ ಗಮನಕ್ಕೆ ತಮ್ಮ ಮತದ ಪೂಜ್ಯಪುರುಷರ ಚರಿತ್ರೆಗುಂಟಾದ ಕಳಂಕವನ್ನೂ, ತಮಗಾದ ದುಃಖವನ್ನೂ ಅರಿಕೆಮಾಡಿಕೊಳ್ಳಬೇಕೆಂದು ಸೂಚಿಸುವುದಲ್ಲದೆ ಗವರ್ನಮೆಂಟಿನವರೂ ಹಿಂದುಳಿದ ಈ ಸಮಾಜದ ಘನತೆಯ ಕಡೆಗೆ ಕೃಪಾದೃಷ್ಟಿಯಿಂದ ನೋಡಬೇಕೆಂತಲೂ ಪ್ರಾರ್ಥಿಸಿ ಈ ಲೇಖನವನ್ನು ಪೂರೈಸುತ್ತೇವೆ.

"ವಿಷ್ಣುಪಾತ"

ವೀರಶೈವ ಮತಸ್ಥರಿಗೆ ಅತ್ಯಾವಶ್ಯಕಗಳಾದ

೩ ಪುಸ್ತಕಗಳು.

ವೀರಶೈವಾಮೃತ ಪುರಾಣ ತಾತ್ಪರ್ಯ ಸಹಿತ ಕಾಂಡ ೪ ಭಾಗ ೨ಕ್ಕೆ ರೂ	೯—೦—೦
ಸಟೀಕಾ ಗಣಭಾಷ್ಯ ರತ್ನಮಾಲಾ	೧—೪—೦
ಸಿದ್ಧೇಶ್ವರವಚನ ವಿಜಯ ವಚನಶಾಸ್ತ್ರ	೧—೦—೦
ವೀರಶೈವಾಚಾರಬೋಧೆ	೦—೪—೦
ಶಿವಯೋಗರಹಸ್ಯ	೦—೨—೦
ಶಿವಮಹಿಮಾಶತಕ	೦—೨—೦

ಈ ಪುಸ್ತಕಗಳು ವೀರಶೈವ ಮತವನ್ನೂ, ಲಿಂಗಾಂಗ ಸಾಮರಸ್ಯ ಷಟ್ಸ್ಥಲ ವಿಷಯಗಳನ್ನೂ ಕರತಲಾಮಲಕವಾಗಿ ಬೋಧಿಸುವುವು. ಒಳ್ಳೆಯ ಮುದ್ರಣ, ಒಳ್ಳೆಯ ಕಾಗದ, ಒಳ್ಳೆಯ ಬೈಂಡ್ ಮಾಡಿರುವುವು.

ಪುಸ್ತಕ ದೊರೆಯುವ ಸ್ಥಳ,—

ಬಸವಲಿಂಗಸ್ವಾಮಿ, ಹೊಸಮಠ, ಮೈಸೂರು

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿಯಂತೆ ಚಂದಾ ಹೇಳುವುದಲ್ಲದೆ ಅಂಚೆಯ ವೆಚ್ಚವನ್ನು ಸೇರಿ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.

೨ ರಿಂದ ೪ ರವರೆಗೆ ೧—೧೦—೦.

ಇದರಂತೆ ಮುಂದಿನ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ, ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೧ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೬ ಮಾಸಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ...

ನ. ಭಾಷಾಂತರಿಸಿ

ನರಹ ನಾಳೆಯುದು.

ಸಚಿತ್ರವಾದ ನೂತನಪುಸ್ತಕಗಳು.

[illegible]

ನೀತಿಮಂಜರಿ.

4

(ಎರಡನೆಯಾವೃತ್ತಿ ಸುಧಾರಿಸಿದುದು)

ಇದರಲ್ಲಿ ಅನೇಕ ನೀತಿಯ ವಿಷಯಗಳೂ, ಮನೋರಂಜಕ ವಿಷಯಗಳೂ ನಿಬಂಧರೂಪವಾಗಿ ಬರೆಯಲ್ಪಟ್ಟಿರುತ್ತವೆ. [illegible]

ಉತ್ತಮ ಗ್ರಂಥಗಳು

[illegible]

ಸತ್ಯವೇದವಚನ

26

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ [illegible], ನಿರ್ಬಲತೆ, ನಪುಂಸಕತ್ವ, ಸ್ತ್ರೀಣತೆ, ಸ್ವಪ್ನಾವಸ್ಥೆ, [illegible] ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ [illegible] ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, [illegible]

ವಿಳಾಸ

ವೈದ್ಯ, ಜಿ. ಎಸ್. ಜೋಶಿ ಮತ್ತು ಕಂಪನಿ,

ಪೋಷ್ಟ ಬನವಾಸಿ,

ಜಿಲ್ಲಾ ಉತ್ತರಕನ್ನಡ

ನೋಟೀಸ್.

6

[illegible]

ಸುಲೋಚನ

[illegible]

ಸುಲಭಕರವಾದ ಪ್ರಕಟನೆ.

ಕ್ರೈಸ್ಟ್ ರೆಗ್ಯುಲೆಟರ್ ವಾಚು.

ಈಗಿನ [illegible] 12 [illegible] 4 [illegible]

ಘನವ ತರೇ



[illegible]

ಇದರ 12 [illegible]

(1) [illegible] (2) [illegible] (3) [illegible] (4) [illegible] (5) [illegible] (6) [illegible] (7) [illegible] (8) [illegible] (9) [illegible] (10) [illegible] (11) [illegible] (12) [illegible]

ಲಗ್ನಪತ್ರಿಕೆಗಳ ಮುದ್ರಣ ಕ್ರಮ

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಓಂಕಾರ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶೇಷ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾ ಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಶ್ರೇಷ್ಠ ಕಾಗದದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮುದ್ರಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೬-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರದ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಕೆಂಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಹಾಕಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೪-೦ ಆಣೆಯಂತೆ ಕಳುಹಬೇಕು. ಶೀಘ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವಲ್ಲದೆ, ಕಾಗದದ ಬೆಲೆಯನ್ನು ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನು ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

"ಮ್ಯಾನೇಜರ್,"
ಸ್ಟಾರ್ ಪ್ರೆಸ್, ಮೈಸೂರ್

25

ಸೂಚನೆ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತರವಾದ ಅಕ್ಷರಗಳಿಂದ ಬರೆಯಬೇಕು)

ಅಂಜೀರಾರಿಷ್ಟವೂ — ಇದರ ಸೇವನದಿಂದ ವೈದ್ಯರೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಶರೀರಪುಷ್ಟಿಯು ಹೆಚ್ಚಾಗಿ ರಂಜಿತ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. ಕರುಳಿನ್ಯೂನದಿಂದ ಅಥವಾ ಯಾವುದಾದರೊಂದು ಕಾರಣದಿಂದ ಕರುಳೇ ಶಕ್ತಿಹೀನವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವುದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ, ೧ ಬಾಟ್ಲಿಗೆ, ೧-೧೧ ರೂ ೬ ಬಾ, ೬-೧೦ ರೂ ೩ ಬಾ, ೩ ೧೨ ೧ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ ಮೇಲೆ ೩ ಬಾಟ್ಲಿ ಇನಾಮು ಟಪಾಲ ಬೇರೆ

ದಶಾಂಗಪಚೂರ್ಣ — ಇದರಿಂದ ಸ್ವಚ್ಛವಸ್ಥಿರ ಹಸಿವಾಗಿ ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮೇಲೆ ಅಥವಾ ಉರಿಯಾಗುವ ತೋರುವ ಧಾತು ಬದಲಾಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೨ ರೂ ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟಪಾಲ ಬೇರೆ.

ಮಲಮು — ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ ೩ ಡಬ್ಬಿಗೆ ೧ ಡಬ್ಬಿ ಇನಾಮು ಟಪಾಲ ಬೇರೆ

"ಪಾಚಕ"

("ಪಚನವಾಗುವ ಔಷಧವು")

ಇದರ ಸೇವನೆಯಿಂದ ಪಚನಶಕ್ತಿಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಿಮರ ರೋಗಗಳು ಬರುವದಿಲ್ಲ. ೧ ಬಾ, ೪ ಆಣೆ ಟಪಾಲ ಬೇರೆ.

ನಂ. ೫೫ "ಅಂಜೀರಾರಿಷ್ಟದ ಕಂಪನಿ"
ಧಾರವಾಡ ಮತ್ತು ಮಿರಜ (ಇಂಡಿಯಾ)

ಪಂಡಿತ ಎಸ್. ಗರಳಪುರಿ ಶಾಸ್ತ್ರಿ
ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
ಮೈಸೂರು

೫೮

ಗೋರೋಚನ ಮಾತ್ರೆ — ೧-೨ ಮಾತ್ರೆಗಳನ್ನು ತಿನ್ನುವುದರಿಂದ ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೧೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೩-೦

ಜ್ವರದಮಾತ್ರೆ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಶೀಘ್ರವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯಾಗುವುದು ೧೦ ಮಾತ್ರೆ ಸೀಸೆ ೦-೩-೦, ಅಂಚೆ ಸೀಸೆ ೦-೯-೦

ಪಿ. ಪ್ಲೇಗನಾಶಕ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸುವ ಈ ಸಿದ್ಧೌಷಧವನ್ನು ನೋಡಿ. ಸಂಶಯವಿಲ್ಲದಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಸಾಬರಿಯಿಂದ ಪೇಟಾದರೆ ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಟ್ಟು ಯೋಗಕಾಲಕ್ಕೆ ಒದಗಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಸ್ಟ್ಯಾಂಪ್ ಮೊದಲಾದವಕ್ಕೆ ಸಂಚಿನ ಡಬ್ಬಿ ೧ ಕ್ಕೆ ೮ ವಿರಗರಿಂದ ಪಾರ್ಸಲ್ ಖರ್ಚು ೪ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈನ್) ರಾಜಮನ್ನಾ ರಂಗನಾಯಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್

ವಿಳಾಸ— ... ... ರೋಗಕ್ಕೆ ಸರ್ವೋತ್ಕೃಷ್ಟ ... ... ಎಲ್ಲರಿಗೂ ಗುಣವಾಗುತ್ತದೆ

(ಸೈನ್) ...
... ಸ್ವಾಮಿ ...

... ಮೈಸೂರ್
... ವೈದ್ಯಶಾಲಾ,

ಪಂಡಿತ ಎಸ್. ಗುರುಸ್ವಾಮಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
೪। ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರಹರಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರದಾಯಕ— ಈ ಔಷಧವನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು ಇದು ಅಮೃತಕ್ಕೆ ಸಮಾನ ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೆ. ಸುಮಾರು ೫೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦ ತೊಲೆ ೧ ಕ್ಕೆ ೧—೮—೦

ಶಂಖಕರ್ಪೂರಮಾತ್ರೆ— ಇದರಿಂದ ಗರ್ಭಪಿಟ್ಟೆಯೂ ಕಾರಳವೂ ಕರಿಮೆಯಾಗಿ ದೇಹಕ್ಕೆ ತಂಪಾಗುತ್ತದೆ ೧೨ ಮಾತ್ರೆ ಸೀಸೆ ೦—೪—೦

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ ಸೇರಿತ ಡಬ್ಬಿ ೧—೮—೦.

ಸ್ತ್ರೀಬಂಧಲೇಹ್ಯ— ಮೇಹಬಾಧ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦ ೧೨ ದಿನಗಳ ಔಷಧಿ ೨—೦—೦

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦

ಮಲಶೋಧನ ವಟಿಕಾ— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು ೩೦೦ ಮಾತ್ರೆ ಸೀಸೆ ೧—೪—೦.

ಪುರುಷ ಸಂಜೀವಿನಿ— ೩೦ ಮಾತ್ರೆ ಸೀಸೆ ೨—೦—೦

ಕಾಕಿರಾ ಮಾತ್ರೆ— ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦—೮—೦

ಅಜೀರ್ಣದಮಾತ್ರೆ— ೩೦ ಮಾತ್ರೆ ಸೀಸೆ ೦—೨—೦

ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦—೩—೦

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಲಭಿಸುತ್ತವೆ ದೊರಕುವುವು. ಅಂಚೆಯ ಖರ್ಚನ್ನು ಅಲ್ಲದೆ ಕೊಡತಕ್ಕದ್ದು ... ವಿಳಾಸ ...

ಸೌಮ್ಯ ನಾಮ ಸಂವತ್ಸರದ ಫಾಲ್ಗುಣ ... ರಿಂದ ... ಮಾರ್ಚಿ ತಾ ... ರವರೆಗೆ ಸಲ್ಲುವ ಕಾಲವಿಧಾನದ ... ವಿರೋಧಿಕೃತು ಸಂ॥ದ ಫಾಲ್ಗುಣ ಬಹುಳ ... ದ ಪರಿಧಾವಿ ಸಂ॥ದ ಚೈತ್ರ ಶು॥ ... ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
14	ಸೋಮ	೮	51 59	ಪೂರ್ವಾಷಾ	43 23
19	ಮಂಗಳ	೯	53 32	ಉತ್ತರಾ	44-47
20	ಬುಧ	೧೦	53 1	ಶ್ರ	46 5
21	ಗುರು	೧೧	5 . 13	ಧನಿ	46-52
22	ಶುಕ್ರ	೧೨	48-16	ಶತ	45-3
23	ಶನಿ	೧೩	44-26	ಕೃತ್ತಿ	41-1
24	ಭಾನು	೧೪	39-38	ರೋ	39-59

(1) ಸರ್ವತ್ರ ಅಮಾವಾಸ್ಯೆ, ಅಮಾಸೋಮವಾರ... ತಂ. (2) ಚಾಂದ್ರ ಸಂವತ್ಸರಾರಂಭ, ಆರೋಗ್ಯ... ಕ್. (3) ರಥೋತ್ಸವ ... (4) ಸೌಭಾಗ್ಯ... ವ್ರತಂ, ಲಕ್ಷ್ಮೀವಿಲಾಸದವರ ವರ್ಧಂತಿ. (5) ... ತಂ. (6) ಶೋಭನ ಕಲ್ಯಾಣ. (7) ... ವ್ರತಂ, ಶ್ರೀರಂಗದಲ್ಲಿ ಬ್ರಹ್ಮೋತ್ಸವಾರಂಭ, ... ರಥೋತ್ಸವ

ಪೈ. ವಿಶ್ವನಾಥಶಾಸ್ತ್ರಿಗಳವರು

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಾದಿಗತರಾಜಮಂಡಲಕೀರ್ತ್ಯಾ ಶಾಸಪಥಕೃತಾವತಾರಾ ಪಶ್ಚಿಮ ಕೃತ್ತಿ ಮಹಾರಾಜೋಯಾತ್ !
ಶ್ರೀಮತ್ಕೃಷ್ಣನೃಪಾಲಮುಖ್ಯನಕಲಾಲೋಲಂ ಸುಧೀಪುಂಗವ ! ಸ್ತೋಮಾಭೀಷ್ಟಂ ಶೀಲ ನಾಕಲಿತ ಸಾಧ್ಯ ಸ್ವಾಲವಾಲಂದಲಂ,
ಸೀತಾಶೀತ ಯಶೋಪ್ರತಾಪ ವಿಪುಲಂ ಸದ್ವೃತ್ತ ವೈಮಾಲಾಕರಂ ! ಶ್ರೀಮಂಬತ್ತಿ ಕೆರೆಂ ಸದಾ ಪ್ರೊರೆಗೆ ಗೌರೀಶಾನುಕಂಪೋಜ್ವಲಂ !

ಸಂಪುಟ ೨೫] ಮೈಸೂರ್ ಸ್ಟಾರ್. ಸರ್ ೧೯೦೩ ನೆಯ ಇಸವಿ ಮಾರ್ಚಿ ತಾರೀಖು ೨೫ ನೆಯ ಸೋಮವಾರ. [ಸಂಚಿಕೆ ೧೨

3 ಸ್ವದೇಶಬಾಂಧವರೆ ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ

[illegible] ಪೋಸ್ಟ್ ಕಾರ್ಡುಗಳನ್ನು { ಶ್ರೀ ಮಹಾರಾಜಶ್ರೀ ... ರವರಿಗೆ ... ಮಹಾಶಯ ... ಅದಾಗಿ ಈವರಿಗೆ ಅಭಿವಂದನೆಗಳೊಪ್ಪಿಸಿದ್ದೇನೆ } ಎಂಬದಾಗಿ ವಿಶೇಷ [illegible]ಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦–೩–೦ ವಿ ಪಿ ಮೂಲಕ ೦–೩–೧ ೧೧೦೦ಕ್ಕೆ ೨–೧–೦ ೧೦೦೦ ಗಟ [illegible]ರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಿದರೆ ರೈಲ್ವೆ ಪಾರ್ಸೆಲ್ ಮೂಲಕ ಕಳಿಸಲಾಗುತ್ತೆ. [illegible] ನಿವಾಸ್ ಭಾಜಾರ್ ಕಡಿಮೆಯೊಳುಳ್ಳದ ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೊಡ [illegible] ಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೊಡ [illegible] ನಾವು ಕೊಡಲಾಗುತ್ತೆ.

ರಬಂವಾರ್ ವಾಚುಗಳ ಕ್ರಯದ ಪಟ್ಟಿ



(1) ಜಿಬಲ್ ವ್ಹಿ ದ್ರೆಸ್ ವಾಚ್



(2) ಕ್ಯಾಲೆಂಡರ್ ವಾಚ್



(3) ಗನ್ಮೆಟಲ್ ರೈಲ್ವೆ ರೆಗ್ಯುಲೇಟರ್ ವಾಚ್



(4) ಡ್ಯೂಪ್ಲೆಕ್ಸ್ ಕೇಸ್ ಕೀ ವಾಚ್,



(5) ಕ್ರೋನೋಗ್ರಾಫ್ ವಾಚ್



(6) ರಾಸ್ಕೋಪ್ ಪೇಟೆಂಟ್ ವಾಚ್

ಮೇಲ್ಕಂಡ ವಾಚುಗಳ ವಿವರ—(1) ಜಿಬಲ್ ವ್ಹಿ ದ್ರೆಸ್ ವಾಚು ಬಹಳ ಬೆಲೆಯಾದ [illegible] ವಾಚ್ ಟಯಿಮ್ ರೈಲ್ವೆ ಟೈಮಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ [illegible] ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೫–೮–೦ ಬಿಜಿಕ್ರ ಭಿಲ್ಲುಡು ವಾಚ್ ೧ ಕ್ಕೆ [illegible] (2) ಕ್ಯಾಲೆಂಡರ್ ವಾಚ್ ಇದು [illegible] ತಾರೀಖು ತೋರಿಸುತ್ತದೆ. [illegible] ಮತ್ತು ವಾರ, ತಿಂಗಳು, [illegible] ಅವಶ್ಯವಾದ್ದೆ ಮೊದಲಾ[illegible]ವನ್ನೆಲ್ಲಾ ಸ್ಪಷ್ಟವಾಗಿ ಕಾಣಿಸುವಂತೆ ತೋರಿಸುತ್ತದೆ ಇದೊಂದು ವಾಚ್ [illegible] [illegible] ತೋರಿಸುವ [illegible] ಆಗುತ್ತದೆ, ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ [illegible] [illegible]ಕ್ಕೆ ೧೩–೮–೦, (3) ಗನ್ಮೆಟಲ್ ರೈಲ್ವೆ ರೆಗ್ಯುಲೇಟರ್ ವಾಚ್ ಇದು [illegible] ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ [illegible] (4) ಡ್ಯೂಪ್ಲೆಕ್ಸ್ ಕೇಸ್ ಕೀ ವಾಚ್ [illegible] [illegible] ಈ ವಾಚು ನೋಡುವುದಕ್ಕೆ ಅಂದವಾಗಿದ್ದು [illegible] ದಿವಸಗಳವರೆಗೂ [illegible] [illegible] ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ [illegible] ವಾಚ್ [illegible] ನೋಡಿದಾಗಲೆಲ್ಲಾ ದೇವರ [illegible] ವಾಚಿನ [illegible] ದೇವರ ಫೋಟೋಗಳು [illegible] ದೇವರ ಅಥವಾ [illegible]

[illegible] ಪೇಟೆಂಟ್ ಸ್ಟಾರ್ [illegible]
ವಾಚ್ ೧ ಕ್ಕೆ ೨–೮ [illegible]
[illegible]

4 ಉಪಬತ್ತಿಗಳು.

ವಿಧವಿಧವಾದ ಉಪಬತ್ತಿಗಳು ಸೇರಿಗೆ ೧–೦–೦ [illegible] ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧–೦–೦; ಪನ್ನೀರು ಗಂಧ ತೊಲಾ ೧ ಕ್ಕೆ [illegible] ಆಣೆ, ದಶಾಂಗ ಧೂಪ ೧ ಕ್ಕೆ [illegible] ಆಣೆ, ಧೂಪದಗಟ್ಟಿ ೧ಕ್ಕೆ [illegible] ಆಣೆ ಬಾಲಗ್ರಹಧೂಪ ಡಬ್ಬಿ ೧ ಕ್ಕೆ ೪ ಆಣೆ, ಅಪೇಕ್ಷೆ ಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಸ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ,

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦–೧೦–೦
ಪಂಚಾಕ್ಷರೀ ನಾಮಾವಳಿ	೦–೪–೦
ಬಾರು ಹೇಳಿ ಚರಿತ್ರೆ	೦–೫–೦
ಷಟ್ಸ್ಥಲ [illegible]	೦–೬–೦
ಸಟೀಕ ನಂದೀವ್ರತ	೦–೬–೦
ಸಟೀಕ ವಿವಾಹವಿಧಿ	೦–೩–೦
ವ್ರತಸಂಚಿಕೆ	೦–೨–೦
ವಿವೇಕ [illegible]	೦–೩–೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦–೪–೦
ಗುರುಶಂಕರದೇವ [illegible]	೦–೧–೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

31

ಬಸವರಾಜವಿಜಯ— [illegible] ವಿ ಪಿ [illegible] ೧–೦ ಬಾಲಕರು ಕೊಡ [illegible] ಬಸವಪುರಾಣದ ಕಥೆಗಳೆಲ್ಲಾ ಇವೆ

ಚೆನ್ನಬಸವೇಶವಿಜಯ— ೧–೪– ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡವಾಗಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತೆ— ಇದು ವೀರಶೈವಮತದ ಪಂಚಾಚಾರ್ಯರ ಚರಿತ್ರೆ ೧ ನೇಯ ಪ್ರಕರಣಕ್ಕೆ [illegible] ನೇಯ ಪ್ರಕರಣಕ್ಕೆ ೧ ರೂ

ವೀರಶೈವ ಧರ್ಮಶಿರೋಮಣಿ ೧–೩–೦ ವೀರಶೈವ ಮತಸ್ವರೂಪವೂ ತತ್ವಗ್ರಂಥವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ (ಸವ್ಯಾಖ್ಯಾನ)

ಸೌಂದರ ಪುರಾಣ— ೧–೩–೦ ಸೌಂದರ ಸಂಬಂಧವಾದ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಕಾವ್ಯ [illegible]

ಸಟೀಕ ತತ್ವಪ್ರಕಾಶಿಕಾ— ೬ ಆಣೆ [illegible] ಕಾರವಾಗಿ [illegible] ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿವೆ

ಸಟೀಕ ಶತಕತ್ರಯ— [illegible] ವೈರಾಗ್ಯ [illegible] ಸಂಗತಿಯೂ [illegible] ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ ಬೆಲೆ ೧–೦ ಆಣೆ

[illegible] ಮುದ್ರಣ [illegible] ಗಳು [illegible]

[illegible]

ಶ್ರೀ ಗಂಧರ್ವ ಪರಿಣಯ ಪ್ರ.

[ಕಳೆದ ವಾರದ ಶೇಷ.]

ಆ ಕಾಲದೊಳ್ ಮಂತ್ರಿಯಾದ ವಜ್ರದಂಷ್ಟ್ರನು ಮನದೊಳ್ ಯೋಚಿಸಿದನು— ಈ ರಾಕ್ಷಸಾಧಿಪತಿಯು ಅನೇಕರನ್ನು ಗಳಂ ಲೆಕ್ಕಿಸದೆ ಮತ್ತೂ ಹಿತವಾದ ನನ್ನ ಮಾತುಗಳಂ ಕೇಳದೆ, ದೇವತೆಗಳಂ ಪರಿಪರಿಯಾಗಿ ಬಾಯಿಗೆ ಬಂದಂತೆ ಬೈಗಳುತ್ತ ಅಹಂಕಾರದಿಂದಿರುವನು. ಆದುದರಿಂದ ಇವನಿಗೆ ಮೃತ್ಯುಕಾಲವು ಸಮೀಪಿಸಿರುವುದಾಗಿ ತೋರುತ್ತಲಿದೆ ಇಂತಹ ದುರ್ಮಾರ್ಗನಿಗೆ ಎಂತಹ ವಿಪತ್ತು ಸಂಭವಿಸುವುದೆಂದು ಯೋಚಿಸಿದರೆ, ಈತನು ಬಲಾತ್ಕಾರದಿಂ ತಂದಿರುವ ಕನ್ಯಾಮಣಿಯು ಮೂಲಕವಾಗಿಯೇ ವಿಪತ್ತು ಉಂಟಾಗುವುದು. ಆದುದರಿಂ ಈಗ ನಮ್ಮ ಕುಲದೇವತೆಯಾದ ನಿಕುಂಭಿಲಾ ದೇವಿಯು ಕಟಾಕ್ಷದಿಂದಲೇ ಕ್ಷೇಮವಾಗಬೇಕಲ್ಲದೆ ಮತ್ತೊಂದು ಸಾಧನವಿಲ್ಲವೆಂದು ಚಿಂತಿಸುತ ಸಂಗಡಬರುತ್ತಿರಲು, ಜಯಮಾರುತನು ತನ್ನ ಬಲಸಮೇತನಾಗಿ ಸಾಗರವು ತಲೆಗೇರಿ ಮಸೆಬಂದಂತೆ ಕೂಗುತ ಬಂದು ಜಲಾಕರದ ಸಮೀಪದೊಳ್ ನಿಂತು ಅಲ್ಲಿ ಸತ್ತು ಬಿದ್ದಿರುವ ರಾಕ್ಷಸರ ಸಮೂಹವಂ, ಆ ಅಪ್ಸರರೊಳ್ ಬಂದುದಮಾತ್ರ ಬಲವಿಲ್ಲದೆ ಇರುವುದಂ ಕಂಡು ನೋಡಿ, ವಜ್ರದಂಷ್ಟ್ರನಂ ಕುರಿತು, ಎಲೈ ಬುದ್ಧಿಶಾಲಿಯಾದ ಮಂತ್ರಿಯೆ! ನೀನು ಹೇಳಿದಂತೆ ಅನರ್ಥವಾಗಿಯೇ ಇರುವುದು. ಆದುದರಿಂ ಪೂರ್ವ ಬಾರರಂ ಕಳುಹಿ ಪಟ್ಟಣದೊಳ್ ಏನಾಗಿರುವುದೋ ಆ ಸಮಾಚಾರವಂ ತರಿಸುವುದೆಂದು ನುಡಿಯಲು, ಆಗ ಮಂತ್ರಿಯು ಜಲೂಕ ಶಂಕರನೆಂಬ ಚಾರ ಚಾರರಂ ಕರೆದು ಪಟ್ಟಣವಂ ಪೊಕ್ಕು ಅಲ್ಲಿಯ ಸಮಾಚಾರವಂ ತಿಳಿದು ತಡವಿಲ್ಲದೆ ಬೇಗಬರುವುದೆಂದು ಕಟ್ಟಪ್ಪಣೆ ಮಾಡಿ ಕಳುಹಲು, ಆ ಜಲೂಕ ಶಂಕರರು ಅಪ್ಪಣೆಯೆಂದು ಹೊರಟು ಪಕ್ಷಿ ರೂಪಗಳಂ ತಾಳಿ ಪಟ್ಟಣವಂ ಪ್ರವೇಶಿಸಿ ಅಲ್ಲಲ್ಲಿ ನೋಡುತ್ತಿರಲು, ಛಾಯಾಗುಪ್ತನು ಅದಂ ತಿಳಿದು ಸುಗಂಧರಾಜೇಂದ್ರನಿಗೆ ಬಿನ್ನವಿಸಲು, ಅಸಂ ಕೇಳಿ ರಾಜೇಂದ್ರನು ಅವರಂ ನೀನೇ ಹಿಡಿದು ತರುವುದೆಂದಾಜ್ಞಾಪಿಸಲು, ಛಾಯಾಗುಪ್ತನು ಅವರ ನೆಳಲ್ಲಿಯೇ ಪೋಗಿ ಇವರ್ಗಳಂ ಎರಡು ಕೈಗಳಿಂದ ಹಿಡಿದುಕೊಂಡು ಬರಲು, ಪಕ್ಷಿರೂಪದಿಂದಿರುವ ಆ ದೂತರು ಯಕ್ಷನ ಹಿಡಿತವಂ ಸೈರಿಸಲಾರದೆ ಎಂದಿನಂತೆ ರಾಕ್ಷಸರಾಗಲು, ಯಕ್ಷನು ಆ ಇರ್ವ ರಾಕ್ಷಸ ಚಾರರಂ ರಾಜೇಂದ್ರನ ಬಳಿಗೆ ಕರೆತರಲು, ರಾಜೇಂದ್ರನು ಅವರುಗಳನ್ನು ನೋಡಿ,ಎಲೈ ದುಷ್ಟರಾದ ದಾನವರುಗಳಿರಾ! ಕೇಳಿ— ನಿಮಗೆ ಅರಸಾದ ಜಯಮಾರುತನೊಡನೆ ಕರ್ನಾಟಕ ದೇಶಾಧಿಪತಿಯಾದ ಸುಗಂಧರಾಜೇಂದ್ರನೆಂಬ ಅರಸು ಯುದ್ಧಾರ್ಥಿಯಾಗಿ ಬಂದಿರುವನು; ನಿಮ್ಮಂ ಸಂಹರಿಸುವನೆಂದು ಹೇಳುವುದು. ಅಲ್ಲದೆ ದೂತಕಾರ್ಯಕ್ಕೆ ಬಂದವರಂ ಸಂಹರಿಸಲು ಯುಕ್ತವಲ್ಲವೆಂದು ಶಾಸ್ತ್ರವಿರುವುದರಿಂದ ನಿಮ್ಮನ್ನು ಸಂಹರಿಸುವುದಿಲ್ಲವೆಂದು ನುಡಿದು, ಎಲೈ ಛಾಯಾಗುಪ್ತನೆ! ಇವರುಗಳ ಮೂಗುಗಳಂ ಕೊಯಿದು ಕಳುಹುವವನಾಗೆಂದು ಅಜ್ಞಾಪಿಸಲು ಛಾಯಾಗುಪ್ತನು ಅದೇ ವೇಳೆಗೆ ಅವರ ಮೂಗುಗಳಂ ಕೊಯಿದು ಬಾಣಳೆ ಕಳುಹಿಸಲು, ಅಸರಿರ್ವರೂ ಪ್ರಾಣಮಾತ್ರ ಉಳಿಯಿತೇ ಎಂದು ಗಡಗಡನೆ ನಡುಗುತ ಓಡಿಬರುವುದಕ್ಕೆ ಕಾಲುಬಾರದೆ, ಹಿಂತಿರುಗಿ ಭಯದಿಂ ನೋಡುತ್ತ, ತಮ್ಮ ಸೇನೆಯಿರುವ ಬಳಿಗೆ ಬಂದು ಎಲ್ಲರನ್ನು ನೋಡಿ ಅಳುತ, ಅರಸರಾದ ಜಯಮಾರುತನ ಬಳಿಯನ್ನೈದಿ ಸಾಷ್ಟಾಂಗ ನಮಸ್ಕಾರವಂ ಮಾಡಿ ಎದ್ದುನಿಂತು ಗದ್ಗದ ಸ್ವರದಿಂದ ಸುಗಂಧರಾಜೇಂದ್ರನು ಹೇಳಿದ ಮಾತುಗಳಂ ಹೇಳಿದೊಡೆ ಇವನೇನು ಮಾಡುವನೋ ಎಂದು ಭಯದಿಂ ಕೊಂಚಕೊಂಚಮಾಗಿ ಹೇಳಲು, ಆಗ ಜಯಮಾರುತನು ಈ ದೂತರುಗಳ ಮೂಗು ಕೊಯ್ದಿರುವುದಂ ನೋಡಿ ಅವರು ಹೇಳಿದ ಮಾತುಗಳಂ ಕೇಳಿ ಕೋಪೋದ್ರಿಕ್ತನಾಗಿ ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ, ಕೈಚಕಚನೆ ಹಲ್ಲುಗಳಂ ಕಡಿಯುತ್ತ, ಕೆಮ್ಮೀಸೆಗಳಂ ಕುಣಿಸುತ್ತ, ಕಾಲಾಗ್ನಿಯಂತೆ ಉರಿಯುತ್ತ, ಕ್ರೋಧವೇ ಮೂರ್ತಿಗೊಂಡು ಬಂದಂತೆ ತೋರುತ್ತ, ಎಲೈ ಜಲೂಕ ಶಂಕರಗಳಿರಾ! ಆ ನರಾಧಮನು ನಿಮಗೆ ಈ ಪರಿಯಾಗಿ ಮೂಗುಗಳಂ ಕೊಯಿದು ಅವಮಾನವಂ ಮಾಡಿದನೆ? ಅವನ ತಲೆಯನ್ನೇ ಕೊಯಿದು ನಿಮಗೆ ಆಹಾರವನ್ನಾಗಿ ಕೊಡುವನೆಂದು ಹೇಳಿ ಆಹಾರಗಳಿಂದಲೂ, ಕೆಲವು ಪ್ರತಾಪದ ಮಾತುಗಳಿಂದಲೂ ಅವರಂ ಸಂತೋಷಗೊಳಿಸಿ, ಮಂತ್ರಿಯನ್ನು ನೋಡಿ, ದಿವಿಮೃತ್ಯರಲ್ಲಿ ಇಂತಹ ಸಾಹಸವಂತರುಂಟೆ? ಎಂದು ನುಡಿಯುತ್ತ, ಈ ಅವಳಂಗಳಿಂ ಯಾವ ಬಲದಿಂದ ಹೀಗೆ ಧೂಡಿಸಿದನೋ ಎಂದು ನುಡಿಯಲು, ಆ ಮಾತಿಗೆ ವಜ್ರದಂಷ್ಟ್ರನು ಎಲೈ ರಾಕ್ಷಸೇಶ್ವರನೇ! ಕೇಳು— ಪಾತಾಳವನ್ನು ಸ್ತಂಭನ ಜಲಾವರಣವಂ ಹೊಕ್ಕಿರಲು ಸೈನ್ಯ ಅಗ್ನಿ ಸ್ತಂಭನ ವಾಯು ಸ್ತಂಭನ ಮುಂತಾದ ವಿದ್ಯೆಗಳನ್ನು ಸ್ತಂಭನಾಸ್ತ್ರದಿಂದ ಸ್ವಾಧೀನವನ್ನಾಗಿ ಮಾಡಿರುವಂತೆ ಕಾಣುತ್ತಿದೆ. ಆ ಸ್ತಂಭನಾಸ್ತ್ರಕ್ಕೆ ಪ್ರತೀಕಾರವಾದ ಅಸ್ತ್ರವಿದ್ದರೆ ಪ್ರಯೋಗಿಸಿ ರಾಕ್ಷಸರಂ ಎಬ್ಬಿಸಬಹುದೆಂದು ವಿಜ್ಞಾಪಿಸಲು, ಆಗ ಜಯಮಾರುತನು ತನ್ನ ಜಗಜಟ್ಟಿಯಂ ಕೈಯಲು, ಆಗ ಜಯಮಾರುತನು ತನ್ನ ಧನುಸ್ಸಂ ತೆಗೆದು ಬಾಣಸಂಧಾನವಂ ಗೈದು ಪ್ರಳಯಾಗ್ನಿ ಸ್ತ್ರವಂ ಅಭಿಮಂತ್ರಿಸಿ ಬಿಡಲು, ಆ ರಾಕ್ಷಸರೆಲ್ಲರೂ ಜ್ಞಾನ ಸ್ತ್ರವಂ ಅಭಿಮಂತ್ರಿಸಿ ಬಿಡಲು, ಆ ರಾಕ್ಷಸರೆಲ್ಲರೂ ನಿದ್ರೆಯಿಂ ತಿಳಿದು ಎದ್ದತ್ತು ಸುತ್ತಲೂ ಬಿದ್ದಿರುವ ತಂತಮ್ಮ ಆಯುಧಗಳಂ ಎತ್ತಿಕೊಂಡು ಎಲಾ ಮನುಷ್ಯಮಾತ್ರದವರು ಕಾಪಟ್ಯಕೃತ್ಯದಿಂದ ಬಂದು ನಮ್ಮೆಲ್ಲರಂ ಈ ಪರಿಯಾಗಿ ಹೋಗಿಸದಿಂದ ಜಯಿಸಿ ನಮಗೆ ಅರಸಾದ ರಾಕ್ಷಸೇಶ್ವರನಿಲ್ಲದೇ ಇರುವ ಸಮಯದೊಳ್ ಅರಮನೆಯಂ ಪೊಕ್ಕು ಏನೇನು ಮಾಡಿರುವನೋ ತಿಳಿಯುವಿಲ್ಲ. ನಾವು ಕಾವಲಾಗಿದ್ದುದು ವ್ಯರ್ಥವಾಯಿತೆಂದು ಎಲ್ಲರೂ ಗುಂಪಾಗಿ ಬ್ರಹ್ಮಾಂಡವು ಒಡೆಯುವಂತೆ ಅರ್ಭಟಿಸುತ ಬರುತ್ತಿರಲು, ಆ ಶಬ್ದವಂ ಕೇಳಿ ಸುಗಂಧರಾಜೇಂದ್ರನು ಇದೇನು? ಸಮುದ್ರವೇ ಮೇರೆದಪ್ಪಿ ಭೋರಿಡುತ್ತ ಬರುತ್ತಿರುವುದೋ ಎಂಬಂತೆ ಪರಿಬರುವ ರಾಕ್ಷಸ ಸೇನೆಯಂ ನೋಡಿ ಯಕ್ಷನ ಮೊಲಿ ಕೆಳತು ನಾನಾವಿಧ ಬಾಣಂಗಳಿಂದ ಆ ರಾಕ್ಷಸಬಲಂಗಳಂ ಸಂಹರಿಸಲು, ಬೆಂಕಿಯಂ ಸೋಂಕಿದ ಮಿಡ್ಡಿಸರಾಸಿಯಂತೆ ನಿಮಿಷದೊಳ್ ಮಡಿದ ರಾಕ್ಷಸರಂ ಕಂಡು, ಜಯಮಾರುತನು ತನ್ನ ಸಮೀಪದೊಳಿರುವ ಮಹಾಬಲಶಾಲಿಗಳಾದ ವ್ಯಾಘ್ರಾವರು ರಾಕ್ಷಸರಂ ಕಳುಹಿಸಲು, ಅವರು ಎಂಭತ್ತು ನಾಲ್ಕುಲಕ್ಷ ಜೀವರಾಶಿಗಳರೂಪವಂ ಬೇರೆಬೇರೆ ಧರಿಸಿ, ಏಕವಾಗಿ ಸುತ್ತಿ ಪರಿದು ಕವಿದುಕೊಂಡಿರುವ ಅಂಧಕಾರಂಗಳು ಸೂರ್ಯನ ಕವಿದಂತೆ ಸುಗಂಧರಾಜೇಂದ್ರನಂ ಕವಿದು ಜಯಿಸುವೆವೆಂದು ಬರುತ್ತಿರಲು, ಸುಗಂಧರಾಜೇಂದ್ರನು ಈ ವಿಚಿತ್ರವಾದ ರೂಪಂಗಳಂ ಕಂಡು ಇವರೆಲ್ಲರೂ ರಾಕ್ಷಸರೆಂದು ತಿಳಿದು, ಒಂದೊಂದು ಜಾತಿಗೆ ಒಂದೊಂದು ಪರಿಪಾದ ಬಾಣಗಳಂ ಪ್ರಯೋಗಿಸಲು, ಆ ರಾಕ್ಷಸರು ಇದಿರಾಗಿ ಬರುವ ಈ ಬಾಣಗಳಂ ಹಿಡಿದು ಮುರಿಯುವವರು ಕೆಲಂಬರು; ತಪ್ಪಿಸಿಕೊಳ್ಳುವವರು ಕೆಲಂಬರು; ಅವುಗಳಿಂದಲೇ ಪ್ರತಿಯಾಗಿ ಯಕ್ಷನನ್ನೇ ಹೊಯಿಯುವವರು ಕೆಲಂಬರು; ಆ ಬಾಣಂಗಳಂ ನುಂಗುವವರು ಕೆಲಂಬರು, ಇಂತು ಇದಿರುಬೀಳಲು ಸುಗಂಧರಾಜೇಂದ್ರನು ಮಹಾಕೋಪಗೊಂಡು ಈ ಬಾಣಗಳಿಂದ ಇವರು ತಗ್ಗುವರಲ್ಲವೆಂದು ತಿಳಿದು, (ಸಶೇಷ)

ದನಕರುಗಳ ಕೆಮ್ಮು.

ಈ ರೋಗವು ಯಾವ ಕಾಲದಲ್ಲಾದರೂ ದನಕರುಗಳಿಗೆ ತಗಲುವುದುಂಟು; ಆದರೆ ಇತರ ಪ್ರಾಣಿಗಳಿಗೆ ಇದರ ಕೊಂಡರಿಯಿಲ್ಲ, ದೊಡ್ಡ ದೊಡ್ಡ ಮಂದೆಗಳಲ್ಲಿ ಈ ರೋಗವು ಇಲ್ಲಿಹೋದರೆ ಸ್ವಲ್ಪಕಾಲದಲ್ಲಿ ಅನೇಕ ದನಗಳಿಗೆ ತಗಲುವಕಾರಣ ಇದಕ್ಕೆ ಮಾರಿರೋಗವೆಂದು ಹೆಸರಿಟ್ಟಿರುವರು ಮಾರಿ ಅಂದರೆ ಮರಣವೆಂದು ಹೇಳಬಹುದು. ಕೆಲವು ವೇಳೆ ರೋಗವು ಸುಲಭವಾಗಿ ವಾಸಿಯಾಗುತ್ತದೆ, ಮತ್ತೆ ಕೆಲವು ಸಂದರ್ಭಗಳಲ್ಲಿ ರೋಗ ತಗಲಿದ ದನವು ನಾಲ್ಕು ತಿಂಗಳ ವರೆಗೂ ನರಳುವುದುಂಟು.

ಇದೂ ಒಂದು ಅಂಟು ಜಾಡ್ಯವು. ರೋಗವು ತಲೆದೋರಿದ ಸಮಯದಲ್ಲಿ ಮಂದೆಯನ್ನು ಚದರಿಸಿ ದನಗಳನ್ನು ಒಂಟೊಂಟಿಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ಕಟ್ಟಿಹಾಕಿದರೆ ಅವಕ್ಕೆ ರೋಗವು ತಗಲುವುದಿಲ್ಲ.

ಲಕ್ಷಣ:—ಯಾವುದಾದರೊಂದು ದನಕ್ಕೆ ರೋಗವು ತಗಲುವುದಕ್ಕೆ ಕೆಲವು ದಿನಗಳಿಗೆ ಮುಂಚೆ ಅದು ಬಹಳ ದುಃಖದಿಂದ ತನ್ನ ಒಡೆಯನು ಸಿಗನಂತೆ ಕಂಡುಬರುವುದು ರೋಗವು ತಗಲಿದೊಡನೆಯೇ ದನವು ನಡುಗುವುದು, ಬಾಯಿ ಬಿಸಿಯಾಗುವುದು, ಮೂಗಿನ ಹೊಳ್ಳೆಗಳಲ್ಲಿ ದ್ರವವಿಳಿಯುತ್ತಾಗುವುದು, ಅನಂತರ ಕೆಮ್ಮು ಪ್ರಾರಂಭವಾಗಿ ಹಸಿವು ನಿಂತುಹೋಗುವುದು ಕರೆಯುವ ಹಸುವಾದರೆ ಹಾಲು ಬಹಳ ಕಡಿಮೆಯಾಗಿ ಒಂದೆರಡು ದಿನಗಳ ಅನಂತರ ಜ್ವರವು ಬರುವುದು ದನವು ಉಸಿರಾಡುವಾಗ ಮೂಗಿನ ಹೊಳ್ಳೆಗಳು ಅರಳುವುವು ಮತ್ತು ದನವು ನರಳುವುದು ಅಲ್ಲದೆ ಪಕ್ಕೆಯಲ್ಲಿ ನೋವಿರುವಂತೆ ಕಂಡುಬರುವುದು; ಹೊಟ್ಟೆಯು ಉಬ್ಬಿಕೊಳ್ಳುವುದು ಜ್ವರವು ಕಡಿಮೆಯಾಗುತ್ತಾ ಬಂದರೂ ಉಸಿರಾಡುವುದು ಬಹಳ ಕಷ್ಟವಾಗಿ ಕೊನೆಗೆ ಪಕ್ಕೆಯು ಉಸಿರು ಕಟ್ಟಿ ಸತ್ತುಹೋಗುವುದು. ರೋಗವು ಬಹಳ ಪ್ರಬಲವಾಗಿದ್ದರೆ ದನವು ರೋಗ ತಗಲಿದ ಎಂಟು ಹತ್ತು ದಿನಗಳಲ್ಲಿ ಸಾಯುವುದು; ಇಲ್ಲದಿದ್ದರೆ ಮೂರು ತಿಂಗಳಕಾಲ ಬದುಕಿರಬಹುದು

ಚಿಕಿತ್ಸೆ:—ಈ ರೋಗವು ಔಷಧದಿಂದ ಗುಣವಾಗುವುದು ಕಡಿಮೆ. ಇದು ಅಂಟುಜಾಡ್ಯವೆಂಬುದನ್ನು ಮಾತ್ರ ಮನದಲ್ಲಿ ಇರಿಸಿಕೊಂಡು ರೋಗವು ಇಲ್ಲದಿರುವ ದನಗಳಿಗೆ ತಗಲದಂತೆ ನೋಡಿಕೊಳ್ಳಬೇಕು. [illegible] ರೋಗ ತಗಲಿದ ದನ ಪಕ್ಕದಲ್ಲಿ ಹೋಗದಂತೆ ಕಟ್ಟುಮಾಡಬೇಕು. ರೋಗದ ದನಗಳಿಗೆ ಬಹಳ ಎಚ್ಚರಿಕೆಯಿಂದ ಉಪಚಾರಮಾಡಬೇಕು ಕೊಟ್ಟಿಗೆಯು ಬಹಳ ಶುಚಿಯಾಗಿಯೂ ಮತ್ತು ಗಾಳಿಯು ಸಂಚಾರಕ್ಕೆ ಅನುಕೂಲವಾಗಿಯೂ ಇರಬೇಕು ಮೃದುವಾದ ಹಸುರು ಹುಲ್ಲನ್ನು ತಿನ್ನಿಸಿ ದನವು ಕುಡಿಯುವಷ್ಟು ನಿರ್ಮಲವಾದ ನೀರನ್ನು ಕುಡಿಸಬೇಕು. ಒಣ ಹುಲ್ಲನ್ನಾಗಲಿ ಅಥವಾ ಬತ್ತದ ಹುಲ್ಲನ್ನಾಗಲಿ ಹಿಂಡಿಯನ್ನಾಗಲಿ ತಿನ್ನಿಸಕೂಡದು. ಜ್ವರಬಂದ ಕಾಲದಲ್ಲಿ ಕೆಳಗೆ ಹೇಳುವ ಔಷಧಿಯನ್ನು ಕುಡಿಸಬೇಕು. ಎರಡು ತೊಲೆ ಕರ್ಪೂರ, ಎರಡು ತೊಲೆ ಕಡ್ಡುಪ್ಪು, ಒಂದು ತೊಲೆ ದತ್ತೂರಿ ಬೀಜದ ಪುಡಿ ಇವು ಮೂರನ್ನು ಅರ್ಧ ಬಟ್ಟಲು ಹೆಂಡದಲ್ಲಿ ಕದಡಿ ಕುಡಿಸಬೇಕು. ಮಲವು ಬದ್ಧವಿದ್ದರೆ ೪ ಪಾವು ಉಪ್ಪು ೧೫ ಬಟ್ಟಲು ಗಂಧಕದ ಪುಡಿ, ೧೫ ತೊಲೆ ಶುಂಠಿಪುಡಿ ಇವುಗಳನ್ನು ೧೫ ಬಟ್ಟಲು ಶಾಕಂಬಿಯಲ್ಲಿ ಬೆರಸಿ ಕುಡಿಸಬೇಕು.

ಜ್ವರವು ನಿಂತವೇಳೆ ೧೫ ತೊಲೆ ಸಿಪ್ಪೆಯುತ್ತಿನ ಮತ್ತು ಗೋತಂಬಿ ಬೆರೆಯಿತದ ಪುಡಿಯನ್ನು ಅಕ್ಕಿಯ ಗಂಜಿಯೊಡನೆ ಬೆರಸಿ ಕುಡಿಸಬೇಕು. ಕೆಮ್ಮು ಬಹಳ ಹೆಚ್ಚಾಗಿ ಉಸಿರಾಡುವುದಕ್ಕೆ ತೊಂದರೆಯಾದರೆ, ಒಂದು ಹಳೆಯ ಕಂಬಳಿ ಚೂರನ್ನು ಬಿಸಿನೀರಲ್ಲಿ ಅದ್ದಿ ಎದೆಗೆ ಶಾಖವನ್ನು ಕೊಟ್ಟು ಆ ನಂತರ ಒಣಗಿದ ಬಟ್ಟೆಯಿಂದ ಚೆನ್ನಾಗಿ ಒರಿಸಬೇಕು.

ಎಮ್ಮೆ.

ಎಮ್ಮೆಗಳಿಂದ ಆರಂಭಗಾರರಿಗೆ ಬಹಳ ಪ್ರಯೋಜನವುಂಟೆಂಬುದನ್ನು ಎಷ್ಟು ಹೇಳಿದರೂ ಕೊಂಚವೇ ಆಗುತ್ತದೆ ಹೀಗಿದ್ದರೂ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿ ಪಡಿಸಲು ನಾವು ಸ್ವಲ್ಪವೂ ಪ್ರಯತ್ನಪಡದಿರುವುದು ಬಹಳ ಅನ್ಯಾಯವೇಸರಿ ಹಾಲು ಕೊಡತಕ್ಕ ವಿಷಯದಲ್ಲಿ ಎಮ್ಮೆಯು ಯೂರೋಪುದೇಶದ ಹಸುಗಳಿಗೆ ಹೆಚ್ಚು ಕಡಿಮೆ ಸಮಾನವಾಗಿದೆ, ಮತ್ತು ಇಂಡಿಯಾ ದೇಶದ ದನಕರುಗಳೆಲ್ಲ ಎಮ್ಮೆಯನ್ನು ಸಾಕುವುದು ಅತಿಸುಲಭವು. ಇಂಡಿಯಾ ದೇಶದ ಬಹಳ ಕಷ್ಟಸ್ಥವಾದ ತಳಿಯ ಹಸುವು ಸಹಾ ಒಂದು ಸಾಧಾರಣವಾದ ಎಮ್ಮೆಯಷ್ಟು ಹಾಲು ಕೊಡುವುದಿಲ್ಲ. ಅಲ್ಲದೆ ಎಮ್ಮೆಯು ಯಾವ ಮೇವನ್ನು ಹಾಕಿದರೂ ತಿನ್ನುವುದಲ್ಲದೆ ಹಗಲು ಮತ್ತು ರಾತ್ರಿ ಎರಡು ವೇಳೆಗಳಲ್ಲೂ ಮೇಯುವುದು ಹಸುವಿಗೆ ಕಸಕಡ್ಡಿಯಿಂದ ಕೂಡಿದ ಕಸ್ಮಲವಾದ ಮೇವನ್ನು ತಿನ್ನಿಸಕೂಡದು; ಎಮ್ಮೆಗಾದರೋ ಯಾವ ಮೇವನ್ನು ಬೇಕಾದರೂ ಹಾಕಬಹುದು. ಎಮ್ಮೆಯ ಹಾಲಿನಲ್ಲಿ ಹಸುವಿನ ಹಾಲಿಗಿಂತ ಹೆಚ್ಚು ಬೆಣ್ಣೆಯು ಸಿಕ್ಕುವುದು. ಅಂತೂ ವರುಷಕ್ಕೆ ಒಂದು ಎಮ್ಮೆಯಿಂದ ೮೦ ರೂಪಾಯಿ ವರಮಾನವು ದೊರೆಯುವುದೆಂದು ಹೇಳಬಹುದು. ಹೀಗಿದ್ದರೂ ಪಾಪಕ್ಕೆ ಅತ್ಯಂತ ಸಮಾದ ತಳಿಗಳ ರೋಗಗಳನ್ನು ಆರಿಸಿಟ್ಟುಕೊಂಡು ಅವುಗಳಿಂದ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಲು ಯಾರೂ ಸ್ವಲ್ಪವೂ ಪ್ರಯತ್ನಪಟ್ಟಿಲ್ಲ ಗಾಡಿಗೆ ಕಟ್ಟಿದರೂ ಅಲ್ಪಜೀವವಾಗಿರುವ ಕೋಣಗಳನ್ನೆಲ್ಲಾ ಬೀಜಕ್ಕೆ ಉಪಯೋಗಿಸುತ್ತ ಬಂದ ಮಾಡುವುದರಿಂದ ಎಮ್ಮೆಗಳು ದಿನೇ ದಿನೇ ಕ್ಷೀಣಗತಿಯನ್ನು ಹೊಂದುವುವು

ದಿನ ಒಂದಕ್ಕೆ ನಾಲ್ಕು ಸೇರು ಮೊದಲ್ಗೊಂಡು ಸಲಸೇರು ಹತ್ತು ಸೇರಿನ ವರೆಗೂ ಹಾಲು ಕೊಡತಕ್ಕ ಅನೇಕ ತರದ ಎಮ್ಮೆಗಳು ತಳಿಗಳಿವೆ. ಯಾವುದಾದರೊಂದು ಗ್ರಾಮದಲ್ಲಿ ನಾಲ್ಕು ಸೇರು ಹಾಲನ್ನು ಕರೆಯುವ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಿ, ೧೫ ಸೇರು ಹಾಲು ಕರೆಯುವ ತಳಿಗಳನ್ನಾಗಿ ಮಾಡಿದರೆ ಅಲ್ಲಿನ ವರಮಾನವೂ ಸಹಾ ಹಿಂದಕ್ಕೆ ನಾಲ್ಕರಷ್ಟಾಗುತ್ತದೆಂಬುದರಲ್ಲಿ ಅನುಮಾನವೇ ಇಲ್ಲ, ಆದುದರಿಂದ ಪ್ರತಿ ಗ್ರಾಮಸ್ಥರೂ ಒಳ್ಳೆಯ ಕ್ಷೇಮವಾದ ತಳಿಗಳಿಗೆ ಸೇರಿದ ಉತ್ತಮವಾದ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳನ್ನು ಬೀಜಕ್ಕೆ ಉಪಯೋಗಿಸಿದರೆ ಅವರುಗಳ ವರಮಾನವು ಹೆಚ್ಚಿ ಅವರು ಐಶ್ವರ್ಯವಂತರಾಗುವುದಲ್ಲದೆ ಹಾಲು, ಮೊಸರು ಮತ್ತು ಬೆಣ್ಣೆಯೂ ಸಮೃದ್ಧಿಯಾಗಿ ದೊರೆತು ಬಡಬಗ್ಗರೆಲ್ಲಾ ಸುಲಭಬೆಲೆಗೆ ಹಾಲು, ಮೊಸರು ಬೆಣ್ಣೆಯನ್ನು ಕೊಳ್ಳಲು ಅನುಕೂಲವಾಗುತ್ತದೆ.

ಇಂಗ್ಲೆಂಡು ದೇಶದ ಹಸುಗಳು ವಿಶೇಷವಾಗಿ ಹಾಲು ಕರೆಯುವುದಕ್ಕೆ ಶಾಸ್ತ್ರದ ಅನುಸಾರವಾಗಿ ಅವುಗಳ ತಳಿಯನ್ನು ಅಭಿವೃದ್ಧಿಗೊಳಿಸಿ ಅವುಗಳನ್ನು ಪೋಷಿಸುವುದೇ ಕಾರಣವಾಗಿದೆ. ಇವು ಹಾಲು ಕೊಡುವ ಯಂತ್ರಗಳಾಗಿ ಪರಿಣಮಿಸಿವೆ. ಕರುಗಳಿಲ್ಲದೇ ಇವು ಹಾಲು ಕೊಡುವುದೇ ಇದಕ್ಕೆ ದೊಡ್ಡ ನಿದರ್ಶನವಾಗಿದೆ. ಆ ದೇಶದಲ್ಲಿ ಹಸುಗಳನ್ನು ಹಾಲಿಗಾಗಿ ಕರುಗಳನ್ನು ಮಾರಿಬಿಡುವರು. ಇಂಡಿಯಾ ದೇಶದಲ್ಲಾದರೋ, ಕರುಗಳು ಸತ್ತುಹೋದರೆ ಹಸುಗಳು ಕರೆಯುವುದಿಲ್ಲ; ಆದರೆ ಎಮ್ಮೆಗಳು ಮಾತ್ರ ಕರುಗಳು ಇಲ್ಲದಿದ್ದರೂ ಕರೆಯುವು

ಎಮ್ಮೆಗಳ ಪ್ರ	ಆರಿಸಬೇಕಾದ
ಕಾಯುಕೋಣಗಳ	ಅಳಿಸಬೇಕು
ಕೆಲವರು ಹೇಳುವ	

ಬಲವುಳ್ಳವುಗಳಾಗುವುವೇ ಹೊರತು ಅವುಗಳು ವೃಗಳಾದಂಗ ಬಾಲುಕೊಡುವುವು ಅತುವ ಬನಾಸ್ಪಗಿದೆ

ಮುಖ್ಯವಾಗಿ ಇಂಡಿಯಾ ದೇಶದ ಜನರಿಗೆ ಬೇಕಾದ ವ ಹೆಚ್ಚು ಭಾಗವು ಎಮ್ಮೆಗಳಿಂದ ಒದಗಿಸಲ್ಪಡುತ್ತದೆ ದರಿಂದ ಇವುಗಳ ತಳಿಯನ್ನು ಅಭಿವೃದ್ಧಿಪಡಿಸುವುದು ಮುಖ್ಯತರ ಕರ್ತವ್ಯವಾಗಿದೆ. ಈ ಕೆಲಸಕ್ಕಾಗಿ ಪ್ರತಿ ಯೂ ಬೀಜಕ್ಕಾಗಿ ಕೋಣನೆಯು ದಪ್ಪ, ಒಳ್ಳೆಯ ತಳಿಯ ಕೋಣವನ್ನಾದರೂ ಇಟ್ಟುಕೊಂಡಿರುವುದು ಉತ್ತಮ ವರ್ತನೆಯಾಗಿದೆ ಕೆ ಗೆ

ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಗಳವರ ಪರಂಧಾಮವು.

ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕರಿಂದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಗುರು ಪೀಠದಲ್ಲಿ ಪರಂಪರಾಗತ ಗುರುಸ್ಥಾನವನ್ನಲಂಕರಿಸಿದ್ದ ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಯವರು ಕಳೆದ ಪರಿಧಾವಿ ಸಂವತ್ಸರ ಚೈತ್ರ ಶುದ್ಧ ದ್ವಿತೀಯಾ ಬುಧವಾರದ ದಿವಸ ಎಂದರೆ ೨೦ ನೆಯ ಮಾರ್ಚ್ ತಾ॥ ೨೦ ರಲ್ಲಿ ಪರಂಧಾಮವನ್ನೈದಿದರೆಂಬ ವರ್ತಮಾನವು ಎಲ್ಲರಲ್ಲಿಯೂ ಅತ್ಯಂತ ವಿಷಾದವನ್ನುಂಟುಮಾಡತಕ್ಕುದಾಗಿದೆ. ಇವರ ಇಹಲೋಕದ ವ್ಯಾಪಾರ ವೈಮುಖ್ಯದಿಂದ, ಅದ್ವೈತ ಜಗತ್ತಿನ ಮುಖ್ಯವಾದ ಒಂದು ಪಂಡಿತರತ್ನವೇ ಅದೃಶ್ಯವಾದಂತಾಗಿ, ಅದ್ವೈತ ಸಿದ್ಧಾಂತದ ಅಸ್ತಿಕ ಧರ್ಮೋತ್ತೇಜನಕ್ಕೆ ಎಷ್ಟೋ ನ್ಯೂನತೆ ಒದಗುವ ಕಾಲವು ಸನ್ನಿಹಿತವಾಯಿತೆಂದೇ ಊಹಿಸಬಹುದಾಗಿದೆ. ಏಕೆಂದರೆ, ಶ್ರೀ ಶಂಕರಾಚಾರ್ಯರು ವೈದಿಕ ಧರ್ಮ ಸ್ಥಾಪನಾರ್ಥವಾಗಿ ಭರತಖಂಡಕ್ಕೆಲ್ಲಾ ನಾಲ್ಕು ಮಠಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ ಒಂದು ಭರತಖಂಡದ ಪಶ್ಚಿಮಭಾಗವಾದ ದ್ವಾರಕೆಯಲ್ಲಿಯೂ, ಮತ್ತೊಂದು ಪೂರ್ವಭಾಗವಾದ ಜಗನ್ನಾಥ ಕ್ಷೇತ್ರದಲ್ಲಿಯೂ, ಇನ್ನೊಂದು ಉತ್ತರ ಬದರಿಕಾಶ್ರಮದಲ್ಲಿಯೂ ಸ್ಥಾಪಿತವಾಗಿ ದಕ್ಷಿಣದ ಸ್ಥಾನಕ್ಕೆಲ್ಲಾ ಶೃಂಗಗಿರಿಯೊಂದರಲ್ಲಿಯೇ ಪ್ರಧಾನ ಮಠವೊಂದು ಸ್ಥಾಪಿಸಲ್ಪಟ್ಟಿತು. ತ್ರಿಮತೀಯರ ಶಿಷ್ಯಕೋಟಿಯಂತಲೂ ಅದ್ವೈತಮತಾನುಯಾಯಿಯಾದ ಶಿಷ್ಯಕೋಟಿಯು ಶೃಂಗಗಿರಿಯ ಗುರುಸ್ಥಾನಕ್ಕೆ ಸೇರಿರುವಷ್ಟು ಬೇರೆ ಯಾವ ಇತರ ಮಠಗಳಿಗೆ ಸೇರಿಲ್ಲ. ಹೀಗಿರುವುದರಿಂದ ದಕ್ಷಿಣ ಭಾರತ ದೇಶದ ಅದ್ವೈತ ಶಿಷ್ಯಕೋಟಿಗೆಲ್ಲಾ ವೈದಿಕ ಧರ್ಮೋಪದೇಶದಲ್ಲಿ ಪಟ್ಟಾಧಿಕಾರಿಗಳಾಗಿದ್ದವರ ಮರಣದಿಂದುಂಟಾದ ನಷ್ಟವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ.

ಶೃಂಗಗಿರಿಯ ಪ್ರಾಶಸ್ತ್ಯವು ಉತ್ತರದೇಶದ ಇತರ ಮೂರು ಮಠಗಳಿಗಿಂತಲೂ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೆ ಮತ್ತೊಂದು ಕಾರಣವುಂಟು. ಭಗವತ್ಪಾದರು ಶೃಂಗಗಿರಿಯಲ್ಲಿಯೇ ಬಹುಕಾಲ ವಾಸಿಸಿ, ತಮ್ಮ ಶಿಷ್ಯರಲ್ಲಿ ಅತ್ಯುತ್ತಮವಿದ್ವಾಂಸರಾದ ಸುರೇಶ್ವರಾಚಾರ್ಯರನ್ನು ಆ ಮಠದಲ್ಲಿ ಸ್ಥಾಪಿಸಿದುದರಿಂದ, ಶೃಂಗಗಿರಿಯು ಹಿಂದಿನ ಕಾಲದಿಂದ ಇತೋಪ್ಯತಿಶಯವಾದ ಗೌರವವುಳ್ಳ ಶೃಂಗಗಿರಿಯಲ್ಲಿ ಗುರುವು ಸ್ಥಾಪನೆಯಾಗಿ ಪ್ರಾಯಶಃ ೧೨೦೦ ವರುಷಗಳು ಕಳೆದಿರಬಹುದು. ಇದಕ್ಕಿಂತಲೂ ಪ್ರಾಚೀನ ಮಠಸ್ಥಾಪನೆಯು ಮತ್ತಾವುದೂ ಇರಲಾರದು. ಅಲ್ಲಿಂದೀಚೆಗೆ ಪರಂಪರಾಗತರಾಗಿ ಬಂದವರಲ್ಲಿ ಈ ಸ್ವಾಮಿಗಳು ೩೩ ನೆಯವರೆಂದು ಕೆಲವರೂ, ೩೧ ನೆಯವರೆಂದು ಕೆಲವರೂ ಅಭಿಪ್ರಾಯಪಡುವರು. ಇವರ ಹಿಂದಣವರಾಗಿದ್ದ ಶ್ರೀ ನೃಸಿಂಹಭಾರತೀಸ್ವಾಮಿಗಳವರು ತಮ್ಮ ಅನಂತರದಲ್ಲಿ ಇಂತಹ ಶ್ರೇಷ್ಠವಾದ ಪೀಠಕ್ಕೆ ಅರ್ಹರಾದವರನ್ನು ಸಿದ್ಧಪಡಿಸಲು ಬಹು ದೂರಾಲೋಚನೆಯನ್ನು ಮಾಡಿದರು. ಏಕೆಂದರೆ, ದಕ್ಷಿಣದೇಶದ ಬಹು ಸಂಖ್ಯಾತವಾದ ಅದ್ವೈತ ಜಗತ್ತಿನ ಗುರುಸ್ಥಾನವನ್ನಲಂಕರಿಸುವುದು ಸಾಮಾನ್ಯವಾದ ಮಾತಲ್ಲ. ಅದಕ್ಕೆ ತಕ್ಕವರನ್ನೇ ಸಿದ್ಧಪಡಿಸಬೇಕಾದುದು ಆವಶ್ಯಕವಾಗಿದ್ದಿತು. ಅದಕ್ಕಾಗಿ ತಪಸ್ವಿಗಳೂ, ಪಂಡಿತವರ್ಯರೂ ಆಗಿದ್ದ ಶ್ರೀ ನೃಸಿಂಹಭಾರತೀಸ್ವಾಮಿಗಳವರು ಆ ಕಾಲದಲ್ಲಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಲ್ಲಿ ಆಲೋಚಿಸಿ ನಿಶ್ಚಯಮಾಡಿಕೊಂಡಿದ್ದರು. ಆಗ ಕುಣಿಗಲ ರಾಮಶಾಸ್ತ್ರಿಗಳವರಿಗೆ ತೇಜಸ್ವಿಯಾದ ಒಬ್ಬ ಪುತ್ರನಿರುವನೆಂಬುದನ್ನು ತಿಳಿದು, ಆ ಬಾಲಕನೇ ಈ ಪೀಠಕ್ಕೆ ಅರ್ಹನೆಂದು ನಿಶ್ಚಯಿಸಿಕೊಳಿಸಿದರು. ಏಕೆಂದರೆ, ಸದರಿ ರಾಮಶಾಸ್ತ್ರಿಗಳ ಶಾಸ್ತ್ರಜ್ಞಾನವೂ, ವೈದಿಕಕರ್ಮಾನುಷ್ಠಾನವೂ, ಧರ್ಮಶ್ರದ್ಧೆಯೂ ಮಹಿಮಾತಿಶಯವನ್ನುಂಟು ಮಾಡತಕ್ಕುದಾಗಿದ್ದಿತು. ಅಲ್ಲದೆ ಅವರಲ್ಲಿ ಜನಿಸಿದ್ದ ಪುತ್ರರಲ್ಲಿ ಕೊನೆಯ ಮಗನು ತೇಜಸ್ವಿಯೂ ಇಂತಹ ಗುರುಸ್ಥಾನಾಧಿಪತ್ಯಕ್ಕೆ ತಕ್ಕವನೆಂದು

ರೂಢಿಸುವ [illegible] ಶ್ವರದ ಫಾಲ್ಗುಣ ಬ [illegible]

ದಳವು ಗಂ [illegible] ೧೮೫೮ ರಲ್ಲಿ ಜನಿಸಿ

ರಾಮಶಾ [illegible]

ಸಚ್ಚಿದಾನಂದಭಾರತೀ ಸ್ವಾಮಿಯವರಾಗಿದ್ದರು. ಇವರು ೧೮೬೬ ರಲ್ಲಿ ಶ್ರೀ ನೃಸಿಂಹಭಾರತಿ ಸ್ವಾಮಿಗಳಿಂದ ಶ್ರೀ ಶೃಂಗಗಿರಿ ಅದ್ವೈತ ಜಗದ್ಗುರು ಪೀಠದಲ್ಲಿ ಅಧಿಷ್ಠಿತರಾದರು. ಇವರು ಈ ಸ್ಥಾನವನ್ನಲಂಕರಿಸುವಾಗ ೮ ವರ್ಷ ವಯಸ್ಸಿನವರಾಗಿದ್ದರು. ಇವರಿಗೆ ಯೋಗ್ಯವಾದ ಶಾಸ್ತ್ರಾಭ್ಯಾಸವನ್ನು ಮಾಡಿಸಲು ಇವರ ಪೂರ್ವಾಶ್ರಮದ ಜ್ಯೇಷ್ಠಭ್ರಾತೃಗಳಾಗಿದ್ದ ಲಕ್ಷ್ಮೀನೃಸಿಂಹಶಾಸ್ತ್ರಿಗಳೇ ಬದ್ಧಕಂಕಣರಾದರು. ಲಕ್ಷ್ಮೀನೃಸಿಂಹಶಾಸ್ತ್ರಿಗಳಂತಹ ತರ್ಕವೇದಾಂತ ಪಾರಂಗತರೂ, ವೈದಿಕಕರ್ಮ ಶ್ರದ್ಧಾಳುಗಳೂ ಆ ಕಾಲದಲ್ಲಿ ವಿರಳರಾಗಿದ್ದರು. ಅತುಳ ಮೇಧಾವಿಗಳಾದ ಸ್ವಾಮಿಗಳವರ ಗುರುಪೀಠಾಧಿಷ್ಠಿತರ ತಕ್ಕಂತೆ ಅನೇಕ ಶಾಸ್ತ್ರಗಳಲ್ಲಿ ಅದ್ಭುತಪಾಂಡಿತ್ಯವನ್ನು ಪಡೆದು ಅದ್ವೈತ ತತ್ವಗಳನ್ನೂ, ಯೋಗರಹಸ್ಯಗಳನ್ನೂ, ಮಠದ ಸಂಪ್ರದಾಯಗಳನ್ನೂ ಚೆನ್ನಾಗಿ ಅರಿತವರಾಗಿ ಸರ್ವರಿಗೂ ಹಿತಕಾರಿಗಳಾಗಿ ಪರಿಣಮಿಸಿದ್ದರು. ಶ್ರೀ ನೃಸಿಂಹಭಾರತೀಸ್ವಾಮಿಗಳು ತಮ್ಮ ಕರಕಮಲಸಂಜಾತರಾದ ಶ್ರೀಯವರೊಡನೆ ಪ್ರಜಾಪತಿ ಸಂವತ್ಸರದಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದು ಪ್ರಮಾಥಿ ಸಂವತ್ಸರದಲ್ಲಿ ಬ್ರಹ್ಮೈಕ್ಯರಾದರು. ಎಂದರೆ, ಶ್ರೀಯವರಿಗೆ ೧೧ ನೆಯ ವಯಸ್ಸಿನಲ್ಲಿ ಮಠದ ಸರ್ವಾಧಿಕಾರವೂ ತಮ್ಮ ಭುಜಭಂಗಕ್ಕೇ ನಿಂತ ತಾಯಿತು. ಅನಂತರ ಶ್ರೀಯವರು ಮನ್ಮಥ ಸಂವತ್ಸರದಲ್ಲಿಯೂ, ಸರ್ವಜಿತ್ ಸಂವತ್ಸರದಲ್ಲಿಯೂ ಬೆಂಗಳೂರಿಗೆ ದಯಮಾಡಿಸಿದ್ದರು. ಆಗ ಶ್ರೀವ ಮಹಾರಾಜರವರಿಂದಲೂ, ಮಂತ್ರಿವರ್ಯರಾದ ಮ॥ ಶೇಷಾದ್ರಿ ಅಯ್ಯರವರೇ ಮೊದಲಾದವರಿಂದಲೂ, ಸನ್ಮಾನಿತರಾಗಿ, ಅನ್ಯಮತೀಯರಿಂದಲೂ, ಇತರ ಮತೀಯರಿಂದಲೂ ಗೌರವಿಸಲ್ಪಡುತ್ತಿದ್ದರು.

ಶ್ರೀಯವರು ಕಾಲಡೀ ಅಗ್ರಹಾರದಲ್ಲಿ ಶ್ರೀ ಶಂಕರಾಚಾರ್ಯರ ಜನ್ಮಸ್ಥಳವನ್ನು ಕಂಡುಹಿಡಿಸಿದುದು ಅವರ ಕರ್ತವ್ಯಗಳಲ್ಲಿ ಮುಖ್ಯವಾದುದೆನಿಸಿದೆ. ಇದಕ್ಕೆ ಅನಂತಶಯನದಲ್ಲಿಯೂ, ನಮ್ಮ ದೇಶದಲ್ಲಿಯೂ ದಿವಾನರಾಗಿದ್ದ ಮ॥ ಮಾಧವರಾಯರೂ, ನ್ಯಾಯಾಧಿಪತಿಗಳಾಗಿದ್ದ ರಾಮಸ್ವಾಮಿ ಅಯ್ಯರೂ ಸಹಾಯಕರಾಗಿ ಶ್ರೀಯವರ ಅನುಗ್ರಹಕ್ಕೆ ಪಾತ್ರರಾದರು. ಸದರಿ ಕಾಲಡಿಯಲ್ಲಿ ಒಂದು ಮಂದಿರವು ಸ್ಥಾಪಿತವಾಗಿ ಅಲ್ಲಿ ಆದಿಶಂಕರಾಚಾರ್ಯರ ಪ್ರತಿಮಾಪ್ರತಿಷ್ಠೆಯು ಕಳೆದ ಸೌಮ್ಯಸಂವತ್ಸರದ ಮಾಘಮಾಸದಲ್ಲಿ ವಿಜೃಂಭಣೆಯಿಂದ ಬಳೆಯಿತು. ಶ್ರೀಯವರು ತಾವು ನೆರವೇರಿಸಬೇಕಾಗಿದ್ದ ಕೃತ್ಯಗಳಲ್ಲಿ ಬೆಂಗಳೂರಿನ ವಿದ್ಯಾಶಾಲಾಸ್ಥಾಪನೆಯು ಎರಡನೆಯದೆನಿಸಿದೆ. ಮಠದ ಗೌರವಕ್ಕೂ ಬೆಂಗಳೂರು ನಗರದ ಪ್ರಜಾಶ್ರೇಷ್ಠಿಗೂ ತಕ್ಕಂತೆ ಅಂದವಾದ ಒಂದು ಮಂದಿರವನ್ನು ನಿರ್ಮಿಸಿ ವೇದವೇದಾಂತಾದಿ ಪ್ರೌಢವಿದ್ಯೆಯ ಬೋಧನೆಗೆ ಅವಕಾಶವನ್ನು ಕಲ್ಪಿಸಿದರು. ಅದರ ಅಭಿವೃದ್ಧಿಯನ್ನು ನೋಡಿ ಇತೋಪ್ಯತಿಶಯವಾದ ಪ್ರೋತ್ಸಾಹವನ್ನು ಕೊಡಬೇಕಾಗಿದ್ದ ಶ್ರೀಯವರು ಇಷ್ಟು ಅಲ್ಪಕಾಲದಲ್ಲಿ [illegible] ಪರಮಪದವನ್ನೈದಿದುದು [illegible] ಆಗಬೇಕಾಗಿದ್ದ ಸುಕೃತಿಗಳು [illegible] ಮಾನವಲೋಕದ ದುರದೃಷ್ಟಕರವಾಗಿದೆ.

ಶ್ರೀಯವರು ವೈದಿಕಧರ್ಮ ರಕ್ಷಣೆಗಾಗಿ [illegible] ವನ್ನಲಂಕರಿಸಿದವರಾದರೂ ಲೌಕಿಕ [illegible] ಅವರು ಅಗ್ರಗಣ್ಯರಾಗಿದ್ದರು. [illegible] ಉಚ್ಚ [illegible] ಪ್ರವಾಹ ನೀತಿ ತತ್ವ [illegible] ಇವರ ಹಲವು ಸಂಬಂಧವಾದ ಪರರಿಗೆ ಇತರ ದೇಶಗಳ ಮೂಲಕ ವೈದಿಕಧರ್ಮವನ್ನು ಅಸ್ತಿಕರಿಗೆ ಬೋಧಿಸುತ್ತಾ, [illegible] ಧುರಂಧರರೆಂದು ಪ್ರಸಿದ್ಧಿಗೊಂಡಿದ್ದರು. [illegible] ದಿಂದ [illegible] ವ್ಯಸನವು ನಿವಾರಣೆಯಾಗಬೇಕಾದರೆ, ಈ ಗುರುಪೀಠಕ್ಕೆ ಇಂತಹ ಮಹನೀಯರಾದವರೇ [illegible] ತರಾಗಬೇಕಾಗಿದೆ.

ಶ್ರೀ ಶೃಂಗಗಿರಿಯ ಮ[illegible] ಮಹನೀಯರು [illegible] ಳಾದ ಬ್ರಾಹ್ಮಣರೂ, [illegible] ಶಿಷ್ಯರೆನಿಸಿರುವವರು [illegible] ನಿಗಳು ಅನೇಕ ರಾಜರೂ, ಪಾಳೆಯಗಾರರೂ, [illegible] ಪ್ರಾಪ್ತಿ ಮಾಡಿದವರು [illegible] ಅನೇಕ [illegible] ಗಿರಿಗಳನ್ನೂ, ಬಿರುದುಗಳನ್ನೂ, ಧನವನ್ನೂ [illegible] ದಿಂದ ತಿಳಿಯಬಹುದು. [illegible] ಮಹಾರಾಜರವರಿಗೆ [illegible] ಶೃಂಗಗಿರಿಮಠಕ್ಕೆ [illegible] ಇರುವ ವೃತ್ತಿ [illegible] [illegible]

ಶ್ರೀ ರಾ

ಯು

ವಾ

ರಾಜ್ಯಾಡಳಿತವು

« ಬಹು ಬಾರ್ತಸ್ವದವಾದ ರಾಜ್ಯಾಡಳಿತದಲ್ಲಿಯು ಬದಲಾವಣೆಗಳು ಈ ಕೆಳಗೆ ಹೇಳುವ ಪ್ರಕಾರ ನಡೆಯುವುವೂ ಗ ನಂಬುಗೆಯಾದ ಸ್ಥಳದಿಂದ ಅರಿತಿರುತ್ತೇವೆ »

ದಿವಾನರು — ಮ॥ ಕೆ ಎಸ್ ಚೊರಸಾಮಯ್ಯಾರ್‌ರವರು

ಕೌನ್ಸಿಲರುಗಳು — ಮ॥ ಗಳಾದ ಟಿ ಬೇಮರಾಜ ಅರಸಿನವರು ಮತ್ತೂ ಸಿ ಶ್ರೀಕ ರೇಶ್ವರಯ್ಯರ್‌ರವರು

ಚಿ ಫ್ ಕೋರ್ಟಿನ ಜಡ್ಜಿಗಳು — ಮ॥ ಗಳಾದ ಎಚ್. ವಿ ನಂಜುಂಡಯ್ಯನವರು ಚೀಫ್ ಜಡ್ಜರು, ಕೆ ಎಸ್ ಚಂದ್ರಶೇಖರಯ್ಯರ್‌ರವರು ೨ ನೆಯ ಜಡ್ಜರು, ಮ॥ ಆರ್. ಬಿ. [illegible] ರವರು ೩ ನೆಯ ಜಡ್ಜರು.

ಇಲಾಖಾಧಿಕಾರಿಗಳು — ಮ॥ ಗಳಾದ ಎಂ ಕಾಂತರಾಜ ಅರಸಿನವರು ರೆವಿನ್ಯೂ ಕಮಿಷನರು, ಟಿ ಪರಮಶಿವಯ್ಯರ್‌ರವರು ಎಕ್ಸೈಜ್ ಕಮಿಷನರು, ಕೆ ಆರ್ ಶ್ರೀನಿವಾಸಯ್ಯಂಗಾರ್, ಎಂ ಎ, ಯವರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರು, ಜಿ ಚಕ್ರವರ್ತಿಯವರು ಕಂಟ್ರೋಲರು; ಕೆ. ಶ್ರೀನಿವಾಸರಾಯರು ಸರ್ವೆ ಸೂಪರಿಂಟೆಂಡರು; ಡಾಕ್ಟರ್ ಪಿ ಎಸ್ ಅಚ್ಯುತರಾಯರು ಸೀನಿಯರ್ ಸರ್ಜನರು; ಮೇಜರ್ ಫ್ರೀಕ್ಸ್ ಐ ಎಂ ಎಸ್, ರವರು ದರ್ಬಾರ್ ಸರ್ಜನರು, ಸಿ ಎಸ್ ಬಾಲಸುಂದರಂ ಅಯ್ಯರ್‌ರವರು ಚೀಫ್ ಸೆಕ್ರೆಟರಿ ಮತ್ತೂ ಬಿ ರಾಮಸ್ವಾಮಯ್ಯನವರು ಮುಜರಾಯಿ ಸೂಪರಿಂಟೆಂಡರು.

ಡಿಸ್ಟ್ರಿಕ್ಟ್ ಜಡ್ಜಿಯವರುಗಳು — ಮ॥ ಕಂಡಾಸ್ವಾಮಿ [illegible] ವರು, ಬೆಂಗಳೂರು, ವಿ ಎ ರಾಜರತ್ನ ಮೊದಲಿಯಾರರು ಶಿವಮೊಗ್ಗ ಮತ್ತೂ ಸಿ ಎಸ್ ಚೊರಸಾಮಯ್ಯರ್‌ರವರು ಮೈಸೂರು

ಡೆಪ್ಯುಟಿ ಕಮಿಷನರುಗಳು — ಮ॥ ಗಳಾದ ಬಿ ಜಿ ಕೆಂಪರಾಜಸ್ವಾಮಿ ನಾಯಕರು, ಶಿವಮೊಗ್ಗ, ಮ॥ ಕೆ ಚಾಂಡಿಯವರು, ಬೆಂಗಳೂರು, ವಿ ಆರ್ ತ್ಯಾಗರಾಜ ಅಯ್ಯರ್ ರವರು, ಹಾಸನ, ಎಂ ಶಾಮರಾಯರು, ತುಮಕೂರು, ಎ ಸುಬ್ರಹ್ಮಣ್ಯಯ್ಯರ್‌ರವರು, ಕಡೂರು, ಮ॥ ಪಿ ಎಫ್. ಬೌರಿಂಗ್‌ರವರು, ಕೋಲಾರ ಕೆ ಎಸ್ ಕೃಷ್ಣಯ್ಯರ್ ರವರು, ಮೈಸೂರು ಮತ್ತೂ ಮ॥ ಕೆ ಮಂಥಾರವರು ಚಿತ್ರಕಲ್‌ದುರ್ಗ

ಸಬ್ ಜಡ್ಜಿಗಳು — ಮ॥ ಗಳಾದ ಬಿ ನಾಗಪ್ಪನವರು ಮೈಸೂರು ಎಲ್ ಪುಟ್ಟಣ್ಣಯ್ಯನವರು, ಬೆಂಗಳೂರು ಮತ್ತೂ ಕೆ ವೈ ಶಿವರಾಯರು ಶಿವಮೊಗ್ಗ

ಪೈಲ್ ಪ್ರೆಸಿಡೆಂಟರುಗಳು — ಮ॥ ಗಳಾದ ಎ ಮಾಧವರಾಯರು, ಮೈಸೂರು ಮತ್ತೂ [illegible] ಆನಂದರಾಯರು ಬೆಂಗಳೂರು

ಅರಮನೆ ಮ್ಯಾನೇಜರ್ — ಮ॥ ವಿ ವೆಂಕಟರಾಯರು

ಸಿಟಿ ಮ್ಯಾಜಿಸ್ಟ್ರೇಟುಗಳು — ಮ॥ ಗಳಾದ ಟಿ ಚೊ[illegible] ಮತ್ತೂ [illegible] ಬೆಂಗಳೂರು

ದಿವಾನರ [illegible] ಸೆಕ್ರೆಟರಿ — ಮ॥ ಕೆ ಎಸ್ ರಾಮಸ್ವಾಮಿ ಅಯ್ಯರ್, ಬಿ ಎ, ಬಿ ಎಲ್ ರವರು

ಅ[illegible] ಮ॥ ಜಿ ಅರ್ಜುನಯ್ಯ ಅಯ್ಯಂಗಾರರು ಮತ್ತೂ ಮ॥ ಪಿ ತಿರುಮಲಾಚಾರ್ಯರವರು,

ಅಸಿಸ್ಟೆಂಟ್ [illegible] ಗಳು — ಮ॥ ಗಳಾದ ಎಚ್. ಪಿ ರಾಜಗೋಪಾಲಾಚಾರ್ಯರು, ಎ ವಿ ರಾಮನಾಥ ಮತ್ತೂ ಎ ಅರ [illegible] ಗಳು

[illegible] ಮ॥ [illegible] ರವರು

[illegible] ಜಿಸ್ಟ್ರಾರರು — [illegible] ಡೆಪ್ಯುಟಿ ಕಮಿಷನರ ತರಗತಿ)

[illegible] ರಾಯರು ಮೈಸೂರು [illegible] ಕೃಷ್ಣಸ್ವಾಮಿ ರಾಯರು [illegible] ಮತ್ತೂ ಅಸಿಸ್ಟೆಂಟ್ ಕಮಿಷನರು [illegible] (ಹಿಂದೂ[illegible])

ಮೈಸೂರ್ ಗೆಜೆಟ್ ಸಂಗ್ರಹ

[illegible]

ಕಮಿಷನರರಾಗಿ ವಹಾತ್ಪ್ರಷ್ಟ ಮ|| ಒಂಬತ್ತೂರ ವರು ಬರುವವರೆಗೆ ಅಥವಾ ಮತ್ತೊಂದು ಅಜ್ಞೆ ಆಗುವ ವರೆಗೆ ಕೆಲಸ ... ಮ|| ಸೂರಿ ... ಉದ್ಯೋಗದ ಮೇಲೆ ನಿಯಮಿಸಲ್ಪಟ್ಟಿರುತ್ತಾರೆ

ಬಿಸಿನಲ್ ಮತ್ತೂ ಕೆಎಷ ... ಗಳ ಅ|| ಸೆಕ್ರಟರಿ ಮ|| ಎಸ್, ಶಿರಿಯಣ್ಣಯ್ಯ ಎಂ. ಎ., ಬಿ ಎಲ್, ರವರಿಗೆ ೧೯೩೦ ನೆಯ ಮಾರ್ಚ್ ತಾ|| ೧೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ೧೭ ದಿವಸಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ

೨ ನೆಯ ತಾ|| ವಾರೆಂಟ್ ಅಸಿಸ್ಟೆಂಟ್ ಸರ್ವೇಯರ್ ಮ|| ಜಿ. ಕೃಷ್ಣಮೂರ್ತಿ ನಾಯಡುರವರು ... ನೆಯ ತಾ|| ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ

ಪ್ರಬೇಷನರಿ ಸಬ್‌ಡಿವಿಜನಲ್ ಆಫೀಸರ್ ಎ ಕೆ ವೆಂಕಟರಮಣ ಶೆಟ್ಟರು ೧೯೩೦ ನೆಯ ಮಾರ್ಚ್ ತಾ|| ೧ ರಿಂದ ೮ ನೆಯ ತಾ|| ಸಬ್‌ರಿಜಿಸ್ಟ್ರಾರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೩೦ ನೆಯ ಮಾರ್ಚ್ ತಾ|| ೨೪ ನೆಯ ಸೋಮವಾರ

ಸೀಮೆಯ ಕೈಗಾರಿಕೆಗಳ ಕೆಲಸಗಾರರ ಗೊಂದಲವು

ಗಣಿಗಳಲ್ಲಿ ಕೆಲಸಮಾಡುವವರು ದೊಡ್ಡವರಿಗೆ ರೂ. ೩-೧೧ ... ದಿನಕ್ಕೆ ... ಗಳು, ಹುಡುಗರಿಗೆ ರೂ ೧೪೦ ವರೆಗೂ ಕನಿಷ್ಠ ಸಂಬಳವು ಕೊಡಲ್ಪಟ್ಟ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದಿರುವ ... ಮತ್ತೂ ತವರುಗಳ ಕೆಲಸಗಾರರು ... ಬಟ್ಟೆಯನ್ನು ನೇಯುವ ಕೆಲಸಗಾರರು ... ; ... ಕೆಲಸಗಾರರು ..., ಹಡಗುಗಳನ್ನು ಕಟ್ಟುವ ಸ್ಥಳದಲ್ಲಿ ಕೆಲಸಮಾಡುವವರು ..., ... ಮನೆ ಮೊದಲಾದುವನ್ನು ಕಟ್ಟುವವರು ..., ಅಂಬಿಗರು ...; ಜೋಡಿನ ಕೆಲಸಗಾರರು ..., ಕೆಲವು ಚಿತ್ರದ ಕೆಲಸಗಾರರು ...; ಬೆಸ್ತರು ..., ಇಂಜಿನಿಯರುಗಳು ..., ಟಪ್ಪಾಲು ಮಾಡುವವರು ..., ಕಲ್ಲಿದ್ದಲನ್ನು ಸಾಗಿಸುವವರು ...; ಮಿಠಾಯಿಯನ್ನು ಮಾಡುವವರು ..., ಕಲ್ಲನ್ನು ಕೆತ್ತುವವರು ..., ಸರಪಣಿಯನ್ನು ಮಾಡುವವರು ...; ರಬ್ಬರಿನ ಕೆಲಸಗಾರರು ...; ಕಾಗದವನ್ನು ಮಾಡುವವರು ...; ಬೆಂಕಿಪೆಟ್ಟಿಗೆಗಳನ್ನು ಮಾಡುವವರು ...; ಗಾಜಿನ ಕೆಲಸಗಾರರು ...; ಚರ್ಮವನ್ನು ಹದಮಾಡುವವರು ...; ಜಿಡ್ಡಿನ ಮಿಲ್ಲಿನಲ್ಲಿ ಕೆಲಸಮಾಡುವವರು ... ಬಂಡಿಗಳ ಕೆಲಸಗಾರರು ... ಮತ್ತೂ ಇತರ ಕೆಲಸಗಾರರು ... ಇಂತಿಷ್ಟು ಜನರು ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದೆ ಬಹು ಕಷ್ಟಪಡಬೇಕಾಗಿ ಬಂದಿದೆ. ... ಎಂಬಲ್ಲಿ ಕ್ಷಾಮಪೀಡಿತರಾದ ಜನರು ದೇವಿಯಲ್ಲಿ ಅಲೆಯುವುದನ್ನು ಪ್ರೊಫೆಸರ್ ... ಕಣ್ಣಾರ ನೋಡಿ ಕನಿಕರಪಟ್ಟು ಅವರುಗಳೆಲ್ಲರಿಗೂ ಆಹಾರವನ್ನೂ, ಬಟ್ಟೆಯನ್ನೂ ಹಂಚಿದರು. ಕೆಲಸಗಳಿಗೆ ಹೋಗದೆ ಮುಷ್ಕರವನ್ನು ಹಿಡಿದು ಗೊಂದಲವನ್ನೆಬ್ಬಿಸಿರುವವರಿಗೂ, ನಿರುದ್ಯೋಗಿಗಳಾಗಿರುವವರಿಗೂ ಈ ವರೆಗೆ ... ರೂ. ಗಳು ಕೂಲಿಕಾರರ ಸಂಘದವರಿಂದ ಹಂಚಲ್ಪಟ್ಟಿರುತ್ತವೆ. ಮಂತ್ರಿಗಳಾದ ಮಿ|| ಅಸ್ಕಿತ್ ರವರು ಕೂಲಿಕಾರರಲ್ಲಿ ದೊಡ್ಡವರಿಗೆ ರೂ. ... ಗಿಂತಲೂ, ಹುಡುಗರಿಗೆ ರೂ ... ಗಿಂತಲೂ ಕಡಿಮೆ ಕೂಲಿಯು ದೊರೆಯಕೂಡದೆಂದು ಒಂದು ಬಿಲ್ಲನ್ನು ಮಾಡಿ ಸಭೆಯಲ್ಲಿ ಮೊದಲನೆಯ ಸಲ ಓದಿದಾಗ ಅನೇಕ ಮೆಂಬರುಗಳು ಅದನ್ನು ಸಮ್ಮತಿಸದೆ ಹೋದುದಲ್ಲದೆ, ಈ ಮಸೂದೆ ಸಭೆಯ ಮಂಜೂರಾಗುವುದು ಎಂಬುವಷ್ಟರಮಟ್ಟಿಗೆ ಸಂಶಯಾಸ್ಪದವಾಗಿದ್ದಿತು. ಆದರೆ ಎರಡನೆಯ ಸಲ ಆ ಬಿಲ್ಲು ಪುನಃ ಓದಲ್ಪಟ್ಟು ... ಮೆಂಬರುಗಳಿಂದ ಅಂಗೀಕರಿಸಲ್ಪಟ್ಟಿತು. ಮಂತ್ರಿಯವರು ಗಣಿಗಳ ಯಜಮಾನರುಗಳ ಮತ್ತೂ ಕೂಲಿಕಾರರ ಸಂಘಗಳ ಪ್ರತಿನಿಧಿಗಳ ಸಭೆಯೊಂದನ್ನು ಈ ದಿವಸ ಕೂಡಿಸಿ ಪಾರ್ಲಿಮೆಂಟ್ ಸಭೆಯಲ್ಲಿ ಅಂಗೀಕೃತವಾಗಿರುವ ವಿಷಯಕ್ಕೆ ಉಭಯಪಕ್ಷದ ಪ್ರತಿನಿಧಿಗಳ ಒಪ್ಪಿಗೆಯನ್ನು ಕೇಳುವರು. ಹಾಗೆ ಅವರು ಆ ಬಿಲ್ಲಿನ್ನೊಪ್ಪದೆಹೋಗುವುದನ್ನೂ ಗೊಂದಲಕ್ಕಾಸ್ಪದವನ್ನುಂಟುಮಾಡುವ ಪಕ್ಷದಲ್ಲಿ ಮಸೂದೆಯನ್ನೆ ಜಾರಿಗೆ ತರಲು ... ಸರ್ಕಾರದವರು ತಕ್ಕ ಏರ್ಪಾಟನ್ನು ಮಾಡಲು ಸಿದ್ಧರಾಗಿರುವರು. ಇದು ವರೆಗೆ ಕೂಲಿಕಾರರು ಹಠಹಿಡಿದು ಗಣಿಗಳಲ್ಲಿ ಕೆಲಸಮಾಡದೆ ನಿಂತುಬಿಟ್ಟಿರುವುದರಿಂದ ಕಾರ್ಖಾನೆಗಳು, ನಾವೆಗಳು, ರೈಲ್ವೆಗಳು ಮೊದಲಾದವುಗಳ ಕೆಲಸಗಳಿಗೆ ಕಲ್ಲಿದ್ದಲು ದೊರೆಯದೆ ನಿಂತುಹೋಗಿರುವುದರಿಂದ, ಅವುಗಳ ... ಬಹು ತೊಂದರೆಯು ... ಗಳಿಗೇ ಕಷ್ಟಗಳು

... ಮಾಲೀಕರಿಗೂ, ಕೆಲಸಗಾರರಿಗೂ ಎಷ್ಟೋ ನಷ್ಟವಾಗಿರುವುದು. ಇವರುಗಳ ಹೋರಾಟದಿಂದ ಇತರ ಕಾರ್ಖಾನೆಯ ಯಜಮಾನರಿಗೂ, ಅವರ ಕೆಲಸಗಾರರಿಗೂ ನಷ್ಟವು ಸಂಭವಿಸುವುದು ಪ್ರತ್ಯಕ್ಷವಾದ ಅನುಭವವಾಗಿರುತ್ತಿದೆ. ಇನ್ನೂ ಕೆಲ ಕಾಲ ನಡೆಯುವುದಾದರೆ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ವಿಶೇಷ ನಷ್ಟವಾಗುವುದಲ್ಲದೆ, ಬಡಕೂಲಿಯ ಜನರು ಹೊಟ್ಟೆಗಿಲ್ಲದೆ ಬಾಧೆಯನ್ನು ಪಡಿಸುವ ಸಂಭವವಿರುವುದರಿಂದ ಗಣಿಯ ಯಜಮಾನರುಗಳೂ, ಅವರ ಕೆಲಸಗಾರರೂ ಗವರ್ನಮೆಂಟಿನವರು ಸಿದ್ಧಗೊಳಿಸಿರುವ ಬಿಲ್ಲನ್ನು ಅಂಗೀಕರಿಸಿ ಪರಸ್ಪರ ಸ್ನೇಹದಿಂದಿರುವ ಹೋರಾಟವನ್ನು ಬಿಟ್ಟು ತಂತಮ್ಮ ಕೆಲಸಗಳನ್ನು ಯಥಾಪ್ರಕಾರ ನಡೆಸುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲವ ತದಿಂದ ಮಾಡಿಸುವುದು

ಆನರಬಲ್ ಗೋಖಲೆಯವರು ಭಾರತೀಯರಿಗೆ ಬಲವಂತದಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿಸುವ ಬಗೆ ವಿಷಯವನ್ನು ಮಾಡುವುದಕ್ಕಾಗಿ ಒಂದು ಬಿಲ್ಲನ್ನು ಸಿದ್ಧಗೊಳಿಸಿ ವೈಸ್‌ರಾಯರ ನಿಯಮನಿರ್ಮಾಣಸಭೆಯ ಸಮ್ಮತಿಗೆ ... ಈ ಸಂಬಂಧವಾದ ವಿಷಯವು ... ನಿರ್ಮಾಣಮಾಡುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಎಲ್ಲಾ ಪ್ರಾಂತಗಳ ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿರುವಲ್ಲಿ ಅವರುಗಳಲ್ಲಿ ಬಹುಭಾಗದವರು ಇದರಲ್ಲಿಯೂ ಲಾರ್ಡ್ ಕರ್ಜನ್ ರವರು ಈ ವಿಷಯವನ್ನು ಅಗತ್ಯವಾಗಿ ... ತರಲೇಕೆಂದೂ, ... ದೊರಕಿಸುವ ... ಅದಕ್ಕಾಗಿ ... ಬೇಕಾದ ... ಸಿದ್ಧಮಾಡಿಕೊಳ್ಳಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಅಲ್ಲದೆ ಪ್ರಾಥಮಿಕ ವಿದ್ಯಾಪ್ರೋತ್ಸಾಹಕ್ಕಾಗಿ ... ಲಕ್ಷ ರೂ ಗಳನ್ನು ಪ್ರತಿವರ್ಷದಲ್ಲೂ ಆಗುವ ಸ್ವಯಂತ್ಯಾಗ ದೇಹಕ್ಕಾಗಿ ... ಸಾರ್ವಭೌಮರವರು ತಮ್ಮ ಕಿರೀಟಧಾರಣ ಮಹೋತ್ಸವಕಾಲದಲ್ಲಿ ಪರಪ್ರದಾನಮಾಡಿದರು. ಈ ಕಾರಣಗಳಿಂದ ಮ|| ಗೋಖಲೆಯವರ ಬಿಲ್ಲು ನಿಯಮನಿರ್ಮಾಣಸಭೆಯಲ್ಲಿ ಅನುಮೋದಿಸಲ್ಪಟ್ಟು ವಿಧಿಯು ನಿರ್ಮಾಣವಾಗುವುದೆಂದು ಅವರಿಗೆ ಭಾವನೆ ದ್ದಿತು. ಆದರೆ ಈಚೆಗೆ ನಡೆದ ನಿಯಮನಿರ್ಮಾಣಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದು ಬಹುಜನ ಮೆಂಬರುಗಳ ಅಭಿಮತವು ವಿರುದ್ಧವಾಗಿದ್ದುದರಿಂದ, ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದ ಮಾಡಿಸುವುದರ ಸಂಬಂಧವಾದ ಬಿಲ್ಲು ಅನಂಗೀಕೃತವಾಗಿ ವಿಧಿಯು ನಿರ್ಮಾಣಕ್ಕೆ ಅವಕಾಶವಿಲ್ಲವಾಯಿತೆಂದು ತಿಳಿಸಲು ಬಹು ಖೇದವಾಗುತ್ತದೆ. ... ಗಳು, ಜಪಾನು ಮೊದಲಾದ ರಾಷ್ಟ್ರಗಳು ಈಗ ಉತ್ಕೃಷ್ಟಸ್ಥಿತಿಗೆ ಬರಲು ಅಲ್ಲಿಯ ಜನರಿಗೆ ಪ್ರಾಥಮಿಕ ವಿದ್ಯೆಯನ್ನು ಬಲವಂತವಾಗಿಯೂ, ಉಚಿತವಾಗಿಯೂ ಮಾಡಿಸುತ್ತಿರುವುದೇ ಮುಖ್ಯ ಕಾರಣವಾಗಿರುವುದರಿಂದ ಬಲು ಹಿಂದುಳಿದಿರುವ ಭಾರತೀಯರಿಗೆ ವಿದ್ಯಾದಾನ ... ವನ್ನು ... ವಿದ್ಯೆಯನ್ನು ಬಲವಂತದಿಂದ ಮಾಡಿಸುವುದು ಅತ್ಯಾವಶ್ಯಕವು. ಅದ ವಿನಾ ಭಾರತೀಯರ ಸಂಪತ್ತು ಪರ ... ಮಂತೆ ಅಭಿವೃದ್ಧಿಯಾಗುವುದಿಲ್ಲವೆಂದು ಅನೇಕ ಮುತ್ಸದ್ದಿಗಳೂ ಮತ್ತೂ ... ರಾಜನೀತಿಜ್ಞರೂ, ಸಮಾಜ ಸುಧಾರಕರೂ ಅಭಿಪ್ರಾಯಪಟ್ಟಿರುತ್ತಾರೆ. ಇಂತಹುದರಲ್ಲಿ ಭಾರತೀಯರ ಶ್ರೇಯೋಭಿವೃದ್ಧಿಗಾಗಿ ಹಗಲಿರುಳೂ ಹಾರೈಸುತ್ತಿರುವ ಆ|| ಗೋಖಲೆಯವರು ಬಹು ದೂರಾಲೋಚನೆಯಿಂದಲೂ, ಬುದ್ಧಿವಂತಿಕೆಯಿಂದಲೂ, ಅನುಭವದಿಂದಲೂ ಸಿದ್ಧಗೊಳಿಸಿದ್ದ ಬಿಲ್ಲಿನ ರಚನೆಯನ್ನು ಭಾರತೀಯರ ಪ್ರತಿನಿಧಿಗಳಾಗಿರುವ ಮೆಂಬರರುಗಳೇ ಅನುಮೋದಿಸದೆ ಹೋದುದರು ಈ ದೇಶೀಯರ ದುರದೃಷ್ಟವೆಂತಲೇ ಹೇಳಬೇಕಾಗಿದೆ.

ಅಧಿಕಾರಿಗಳ ಬದಲಾವಣೆಯು.

ಮೈಸೂರ ಸಂಸ್ಥಾನದ ದಿವಾನರಾದ ಮ|| ಟಿ. ಆನಂದರಾಯರು, ಚೀಫ್ ಜಡ್ಜಿಯವರಾದ ಸರ್ ಇಜ್ಜಿಯವರು ಮತ್ತೆ ಕೆಲ ದೊಡ್ಡ ಅಧಿಕಾರಿಗಳು ವಯೋವೃದ್ಧರಾಗಿರುವುದರಿಂದಲೂ, ಅವರ ಉದ್ಯೋಗದ ಅವಧಿಯು ಪೂರೈಸಿರುವುದರಿಂದಲೂ, ಅವರುಗಳು ಕೂಡಲೆ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ಹೊಸಬರು ನಿಯಮಿಸಲ್ಪಡುವರೆಂದೂ ತತ್ಸಂಬಂಧದಲ್ಲಿ ಅನೇಕ ಅಧಿಕಾರಿಗಳ ಬದಲಾವಣೆಗಳಾಗುವುವೆಂದೂ ಈ ದೇಶದ ಮತ್ತೂ ಹೊರಗಣ ವೃತ್ತಪತ್ರಿಕೆಗಳಲ್ಲಿ ಚರ್ಚೆಗಳು ತೆರವಿಲ್ಲದೆ ನಡೆಯುತ್ತಿವೆ. ಇದೇ ವಿಚಾರದಲ್ಲಿ ತಾ|| ... ರ ಡೇಲಿ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನವನ್ನು ಕೆಳಕಂಡ ಉದ್ಧರಿಸಿರುತ್ತೇವೆ. ನಾವು ವಿಚಾರಿಸಿದುದರಲ್ಲಿ ಬರುವ ಜೂನ್ ತಿಂಗಳ ಕಡೆಯವರೆಗೂ ಬದಲಾವಣೆಗಳಾಗುವ ಸಂಭವವಿಲ್ಲವೆಂದೂ ... ನಿವೃತ್ತರಾಗುವ ಪಕ್ಷದಲ್ಲಿ ... ಎ. ಸಂಜುಂಡಯ್ಯನವರ

ಯಮಿಸಲ್ಪಡುವ ಸಂಭವವಿರುವುದೆಂದೂ ಕೇಳುತ್ತೇವೆ. ದಾದರೂ ನಿರ್ಧರವೆಂಬುದನ್ನು ಮಾತ್ರ ಈಗಾಗಲೇ ಹೇಳಕ್ಕಾಗುವುದಿಲ್ಲ ಇಂತಹುದರಲ್ಲಿ ನಿಶ್ಚಿತಾರ್ಥನೇ ಅಫಿಷಿಯೇಟಿಂಗ್ ದಿವಾನರಾಗಿ ನಿಯಮಿಸಲ್ಪಟ್ಟಿರುವ ... ತ್ತೂ ಕೌನ್ಸಿಲರುಗಳಾದ ಮ|| ನಂಜುಂಡಯ್ಯನವರಿಗಿಂತಲೂ ಮ|| ದೇವರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮ|| ದೊರೆಸ್ವಾಮಯ್ಯಾರ್ ರವರು ದಿವಾನರಾಗಿಯೂ, ಮ|| ಎಂ ಕಾಂತರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮತ್ತೂ ಈಗ ಅಫಿಷಿಯೇಟಿಂಗ್ ಫ್ರೊಫೀಸು ಇ|| ಜನರಲ್ ರವರಾಗಿರುವ ಮ|| ಶ್ರೀಕಂಠೇಶ್ವರಯ್ಯರ್ ರವರು ಎರಡನೆಯ ಕೌನ್ಸಿಲರಾಗಿಯೂ ನಿಯಮಿಸ್ಪಡುವರೆಂದು ಡೇಲಿಪೋಸ್ಟ್ ಪತ್ರಿಕೆಯು ಹೇಳಿರುವುದನ್ನು ಎಷ್ಟರಮಟ್ಟಿಗೆ ನಿಜವೆಂದು ನಂಬಬಹುದಾಗಿದೆ?

ಶ್ರೀ ಶೃಂಗಗಿರಿಸ್ವಾಮಿಗಳು ವಿಧಿವಶರಾದುದು.

ಶ್ರೀ ಶೃಂಗಗಿರಿ ಜಗದ್ಗುರು ಸಚ್ಚಿದಾನಂದ ಭಾರತಿಸ್ವಾಮಿಗಳು ಸ್ವಲ್ಪ ವ್ಯಸನದಿಂದ ಸ್ವಲ್ಪಕಾಲ ಅಸ್ವಸ್ಥರಾಗಿದ್ದು ಕಳೆದ ತಾ|| ೨೦ ನೆಯ ಬುಧವಾರದಿವಸ ಪರಂಧಾಮವನ್ನು ಹೊಂದಿದರು. ಇವರ ಅಸ್ವಸ್ಥತೆಯ ವಿಚಾರವನ್ನು ಸರ್ಕಾರದವರು ಕೇಳಿ ಡಾಕ್ಟರ್ ಕೃಷ್ಣಸ್ವಾಮಿಯ್ಯರ್ ರವರನ್ನು ಶೃಂಗಗಿರಿಗೆ ಕಳುಹಿಸಿಕೊಟ್ಟರು. ಆದರೆ ಇವರು ಅಲ್ಲಿಗೆ ಹೋಗಿ ತಲುಪುವುದರೊಳಗಾಗಿ ಸ್ವಾಮಿಯವರು ಪರಲೋಕ ಯಾತ್ರರಾಗಿದ್ದರೆಂದು ತೋರುತ್ತದೆ ಡಾಕ್ಟರವರು ಸಾಯಲಿ ತಲುಪುವುದಕ್ಕಾಗಿ ತಾನೆರೆಯ ರೈಲ್ವೆ ಸ್ಟೇಷನ್ನಿನಲ್ಲಿ ಮೋಟಾರುಬಂಡಿಯು ಸಿದ್ಧಗೊಳಿಸಲ್ಪಟ್ಟಿದ್ದಿತು. ಸ್ವಾಮಿಯವರು ತರಕಶಾಸ್ತ್ರದಲ್ಲಿ ಪೂರ್ಣಪಂಡಿತರೂ, ಅದ್ವೈತವಿಚಾರದಲ್ಲಿ ಅದ್ವಿತೀಯರೂ ಮತ್ತೂ ಮಹಾತಪಸ್ವಿಗಳೂ ಆಗಿದ್ದರು. ಈ ಯತಿವರ್ಯರ ಸಂಕ್ಷಿಪ್ತ ಜೀವನ ಚರಿತ್ರೆಯು ಮತ್ತೊಂದು ಕಡೆ ಕೊಡಲ್ಪಟ್ಟಿದೆ.

ತುರ್ಕಿ ಇಟಲಿರಾಜ್ಯಗಳಿಗೆ ಸಮಾಧಾನವನ್ನುಂಟುಮಾಡಲು ಪರರಾಜ್ಯದವರು ಪ್ರವೇಶಿಸಿ ಇಟಲಿಯವರು ಯಾವ ಪ್ರಕಾರವಾಗೊಡಂಬಡುವರೆಂದು ಅವರ ಮಂತ್ರಿಯನ್ನು ಕೇಳಿದ್ದರೆಂದು ಹಿಂದೆ ಪ್ರಕಟವಾಗಿದ್ದುದರಮೇಲೆ ಉಭಯರಾಜ್ಯಗಳ ಕಲಹವು ಶಾಂತವಾಗಿ ಅದರಿಂದಾಗುತ್ತಿದ್ದ ಅರ್ಥಹಾನಿ ಪ್ರಾಣಹಾನಿಗಳು ನಿಲ್ಲುವುವೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಆದರೆ ಆ ರೀತಿ ತುರ್ಕಿ ಇಟಲಿರಾಜ್ಯಗಳಿಗೆ ಸಮಾಧಾನವನ್ನು ಮಾಡಲು ಪರರಾಜ್ಯದವರು ಪ್ರಯತ್ನಿಸಿರುವುದಿಲ್ಲವೆಂತಲೂ, ತಮ್ಮಗಳ ಮೌನಾಚರಣೆಯನ್ನು ಬಿಟ್ಟು ಒಡಂಬಡಿಕೆಯ ವಿಚಾರದಲ್ಲುದ್ಯುಕ್ತರಾಗುವುದು ತಮ್ಮಗಳ ನೀತಿಗೆ ವಿರುದ್ಧವಾದುದೆಂದೂ ಈಚೆಗೆ ಪ್ರಕಟವಾಗಿರುತ್ತದೆ. ಇದರಿಂದ ಆ ಉಭಯರಾಜ್ಯಗಳ ಕಲಹವು ಇನ್ನೂ ಪ್ರಬಲವಾಗಿ ಅರ್ಥಹಾನಿ ಪ್ರಾಣಹಾನಿಗಳು ಮೊದಲಿಗಿಂತಲೂ ಅಧಿಕವಾಗುವುವೆಂದು ತೋರುವುದು

ಪ್ರೆಂಚ್ ರಾಜ್ಯದಲ್ಲಿ ಗೊಂದಲವು ಕಡಿಮೆಯಾಗಿ ಶಾಂತಿಯು ಈಗೀಗ ನೆಲಸಲಾರಂಭವಾಗಿದೆ. ಪ್ರಜಾಧಿಪತ್ಯದ ಸರಕಾರದವರಿಗೆ ಪರರಾಜ್ಯದ ಬ್ಯಾಂಕಿನವರು ಹಣವನ್ನು ಸಾಲವಾಗಿ ಕೊಡುವ ವಿಚಾರದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ. ಇದು ಸಾಧ್ಯವಾದ ಕೂಡಲೆ ಪ್ರಜಾಧಿಪತ್ಯದ ಸರ್ಕಾರದವರು ಅಲ್ಲಿಯ ಸ್ಥಿತಿಯೆಲ್ಲವನ್ನೂ ಕ್ರಮಪಡಿಸಿ ದೇಶದೇಶಗಳ ಕಲಹದವರನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸೈನ್ಯವನ್ನಾಗಿ ಮಾಡಯತ್ನಿಸುವರು.

ಮೀರಸ್ಯದ ವಿದ್ಯಾರ್ಥಿಗಳು ಗಮನಿಸತಕ್ಕದು.

ಬೆಂಗಳೂರಿಗೆ ಪ್ರತಿವರ್ಷದಲ್ಲೂ ಲೋವರ್ ಸೆಕೆಂಡರಿ ಮೆಟ್ರಿಕ್ಯುಲೇಷನ್ ಮತ್ತೂ ಎಫ್. ಎ., ಪರೀಕ್ಷೆಗಳಿಗೆ ಪರಸ್ಥಳದಿಂದ ಬರತಕ್ಕ ಮೀರಸ್ಯದ ವಿದ್ಯಾರ್ಥಿಗಳ ಊಟ ಉಪಚಾರಾದಿಗಳಿಗೆ ಬೆಂಗಳೂರಿನ ಅರಮನೆ ತ್ರಿಪ್ರಾಸ್ ಮ|| ಕಳ್ಳಪ್ಪನವರು ಕೆಲವರ್ಷಗಳಿಂದಲೂ ಸ್ವಂತಖರ್ಚಿನಿಂದ ತಕ್ಕ ಏರ್ಪಾಡನ್ನು ಮಾಡುತ್ತಿದ್ದಂತೆ ಈ ವರ್ಷದಲ್ಲೂ ತಕ್ಕ ಏರ್ಪಾಟನ್ನು ಮಾಡಿರುವರಾದ್ದರಿಂದ ಲೋವರ್ ಸೆಕೆಂಡರಿ, ಮೆ. ಮತ್ತೂ ಎಫ್.ಎ. ಪರೀಕ್ಷೆಗಳಿಗಾಗಿ ಬೆಂಗಳೂರಿಗೆ ಬರತಕ್ಕ ಮೀರಸ್ಯದ ವಿದ್ಯಾರ್ಥಿಗಳು ತಾವು ಬರುವುದಕ್ಕೆ ೨ ದಿನದ ಮುಂಚಿತವಾಗಿ ಮ|| ಕಳ್ಳಪ್ಪನವರಿಗೆ ಬರೆದು ತಿಳಿಸತಕ್ಕದು.

ಸ್ವದೇಶದ ವೃತ್ತಾಂತಗಳು.

ದಿವಾನರು ತಮ್ಮ ಹಿರಿಯರಾ ... ದಿಲ್ಲಿ ರಾಜಧಾನಿಗೆ ಪಯಣ ... ಕಳೆದ ತಾ|| ... ರ ರಾತ್ರಿ ರ ...

ದವಸ್ಕೈಯಿದ ಬಲು ತೊಂದರೆಯು ... ರಿಂದ ಈಗಾಗಲೇ ಕಷ್ಟಗಳು ...

ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಸರ್ ಅಫ್‌ಜಾಲಿಯವರು ಕಳೆದ ತಾ॥ ೧೦ ರಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರಾದ ಮ॥ ರಾ॥ ಶ್ರೀನಿವಾಸರಾಯರ ಉದ್ಯೋಗದವಧಿಯು ೧೯೧೧ ನೆಯ ಜೂನ್ ಕಡೆಯವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಮೈಸೂರ ಡಿ॥ ಸಬ್ ಡಿವಿಜನ ಆಫೀಸರಾದ ಮ॥ ಮಾಧವರಾಯರು ೩ ತಿಂಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡು ಸ್ವಸ್ಥಳಕ್ಕೆ ಹೋಗಿಬರುವುದಾಗಿ ಕೇಳುತ್ತೇವೆ.

ಈ ತಾ॥ ೨೦ ರಲ್ಲಿ ನಂಜನಗೂಡಿನಲ್ಲಿ ನಡೆಯುವ ಶ್ರೀಕಂಠೇಶ್ವರಸ್ವಾಮಿಯ ಪಂಚಮಹಾರಥೋತ್ಸವವನ್ನು ನೋಡುವುದಕ್ಕೆ ಶ್ರೀಮನ್ಮಹಾರಾಜರವರ ಸವಾರಿ ಚಿತ್ತೈಸುವುದಾಗಿ ಕೇಳುತ್ತೇವೆ.

ಕನ್ನಂಬಾಡಿಯಲ್ಲಿ ಈಗ ೩೦೦೦ ಜನಗಳವರೆಗೆ ಕೆಲಸವ ಮಾಡುತ್ತಿದ್ದಾರೆ. ಸುರಂಗವನ್ನು ತೋಡುವಾಗ್ಗೆ ಮದ್ದು ಸಿಡಿದು ೩ ಜನ ಕೂಲಿಯವರು ಸತ್ತು ಹೋದರೆಂಬ ವರ್ತಮಾನವು ಸುಳ್ಳೆಂಬುದಾಗಿ ಗೊತ್ತಾಗಿದೆ.

ರಾಜಧಾನಿಯ ಆಯುರ್ವೇದ ಪಾಠಶಾಲೆಯ ಉಪಾಧ್ಯಾಯರಾದ ಮ॥ ವೆಂಕಟರಾಮಾ ಪಂಡಿತರು ಕ್ಷಯರೋಗಗ್ರಸ್ತರಾಗಿದ್ದು ಡಾಕ್ಟರ್ ಸ್ವಾಮಿಯವರ ಚಿಕಿತ್ಸೆಯಿಂದ ಗುಣಹೊಂದುತ್ತಿರುವರು.

ಅಗಮುನಿಯ ಇಲಾಖೆ ಆಫೀಸರಾದ ಮ॥ ಬಿ ರಾಮಕೃಷ್ಣರಾಯರ ಉದ್ಯೋಗದವಧಿಯು ಇನ್ನೊಂದು ವರ್ಷದವರೆಗೆ ಹೆಚ್ಚಿಸಲ್ಪಟ್ಟು, ಅವರು ಇನ್ನುಮುಂದೆ ಅಗಮುನಿಯ ಕಟ್ಟೋಲರಾಗಿ ಕೆಲಸವನ್ನು ನಡೆಸುವಂತೆ ಸರ್ಕಾರದವರಿಂದ ಅಪ್ಪಣೆಮಾಡಲ್ಪಟ್ಟಿರುತ್ತದೆ.

ಸರದಾರ್ ಕಾಂತರಾಜ ಅರಸಿನವರು ತಮ್ಮ ತೃತೀಯ ಪತ್ನಿಯವರ ಹೆಸರಿನ ಮೇಲೆ ರಾಜಧಾನಿಯ ಅನಾಥಾಲಯ, ಅಬಲಾಶ್ರಮಗಳಿಗೆ ಧರ್ಮಮಾಡಿಗಂತೆ ಆರ್ಯಬಾಲಿಕಾಸಮಾಜಕ್ಕೂ ೧೦೦ ರೂ. ಗಳನ್ನು ದಯಪಾಲಿಸಿದರು. ಸರದಾರವರು ಕಾಶಿ, ಪ್ರಯಾಗ, ಗಯಾ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಬರುವುದಾಗಿ ಕೇಳುತ್ತೇವೆ.

೧ ನೆಯ ಕೌನ್ಸಿಲರಾದ ಮ॥ ಡಿ. ದೇವರಾಜ ಅರಸಿನವರು ಯುಗಾದಿಯ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿ ಹಬ್ಬದ ದಿವಸ ಶ್ರೀಮನ್ಮಹಾರಾಜ ದಂಪತಿಗಳನ್ನು ತಮ್ಮ ಮನೆಗೆ ಬರಮಾಡಿಕೊಂಡು ದಿವ್ಯವಾದ ಬೆಲೆಯುಳ್ಳ ೩೦೦೦ ರೂ. ಬೆಲೆಯ ಕಲಾಪತ್ತಿನ ಧೋತ್ರ, ಶಾಲು ಮೊದಲಾದ ಉಡುಗೊರೆಯನ್ನು ಅರ್ಪಿಸಿದರು. ಬಹುಮಾನ ಸೀರೆ ಕುಪ್ಪಸಗಳನ್ನು ತಮ್ಮ ಕುಮಾರಿಯವರಿಗೂ ರಾಣಿಯವರಿಗೂ ಒಪ್ಪಿಸಿ, ಕಳೆದ ತಾ॥ ೩೧ ರಲ್ಲಿ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಬೆಂಗಳೂರ ಡಿ॥ ಆಫೀಸ್ ಕಟ್ಟಡದಲ್ಲಿರುವ ಕೋರ್ಟು ಕೊಠಡಿಗಳಿಗೆ ಬರತಕ್ಕ ಜನರು ಮಧ್ಯಾಹ್ನದ ಊಟಕ್ಕೆ ಬಿಟ್ಟಿರುವ ವೇಳೆಯಲ್ಲಿ ಊಟಕ್ಕೆ ಸ್ಥಳವಿಲ್ಲದೆ ಬಿಸಿಲಿನಲ್ಲಿ ನಿಂತುಕೊಂಡು ಕಾಲಹರಣಮಾಡಬೇಕಾಗಿರುವುದನ್ನು ಈ ಕೊಂಡೆಯ ಸರ್ಕಾರದವರ ಗಮನಕ್ಕೆ ತರಲು ಸಾಕ್ಷಿಗಳಾಗಿ ಬರತಕ್ಕ ಜನರು ಕುಳಿತುಕೊಳ್ಳುವುದಕ್ಕೆ ರೆಕಾರ್ಡು ಕೊಠಡಿಗಳ ಸಮೀಪದಲ್ಲಿ ಒಂದು ಕೊಠಡಿಯು ಕಟ್ಟಲ್ಪಡುತ್ತಿರುವುದು ಇದರಿಂದ ಆ ಜನರಿಗೆ ಸರ್ಕಾರದವರು ಮಹೋಪಕಾರವಮಾಡಿದಂತಾಗಿರುವುದರಲ್ಲಿ ಸಂಶಯವಿಲ್ಲವು.

ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿಯವರ ಮಗಳು ವಿದುವಿಯಿಂದ ನಿವೃತ್ತಿರಾದವೇಳೆ ತಿಂಗಳೊಂದಕ್ಕೆ ೧೦೦ ರೂಪಾಯಿಗಳ ಮೇಲೆ ಪೆನ್‌ಷನ್ನು ತೆಗೆದುಕೊಳ್ಳಲು ಸಮ್ಮತಿಸದೆ ಈವರೆಗೆ ಬಿಟ್ಟಿದ್ದು ಮ॥ ವಿ. ಪಿ. ಮಾಧವರಾಯರು ರಿಯೆಲ್ಲುತ್ತಿರುವ ಪೆನ್‌ಷನ್ನಿನಪ್ರಮಾಣ ಅಥವಾ ಅದು ಸಂಸ್ಥಾನದಲ್ಲಿ ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್ ರವರಿಗೆ ಕೊಡಲಾಗಿದ್ದಷ್ಟನ್ನು ಕೊಡಬೇಕಾದ್ದರಿಂದ ತಮ್ಮ ಪೆನ್‌ಷನ್ನನ್ನು ಹೆಚ್ಚಿಸಬೇಕೆಂದು ಕೇಳಿದರೂ ಮತ್ತು ಬಹಾಗೀರಿಯ ಸಮೀಪದಲ್ಲಿ ಒಂದು ಮಿಯ ರೂಪವಾಗಿ ಕೊಡಿಸಿಕೊಡಬೇಕೆಂದೂ, ಅವರ ಸ್ವಂತದಿಂದ ಬೆಂಗಳೂರಲ್ಲಿ ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಒಂದು ಅನಾಥಾಲಯವನ್ನು ಸ್ಥಾಪಿಸುವುದಲ್ಲದೆ, ಸಂಸ್ಕೃತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪನ್ನು ಕೊಡಿಸುತ್ತೇನೆಂದೂ ೧೯೦೯ ನೆ ನವೆಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಂಡಿದ್ದರು. ಆದರೆ ಶ್ರೀಮನ್ಮಹಾರಾಜರವರು ಅರ್ಜಿಯನ್ನು ನೆರವೇರಿಸಿಕೊಡಲು ಸರ್ಕಾರದವ ರಾಜ್ಯದ, ೫೦೦ ರೂ. ಗಳ ಪೆನ್‌ಷನ್ ಮಾತ್ರ ಸಲ್ಲತಕ್ಕದ್ದೆಂದು ಅಪ್ಪಣೆಮಾಡಿ [illegible] ಯವರ ಪತ್ನಿಗೆ [illegible] ಗೆ ಸ್ಕಾಲರ್‌ಷಿಪ್ಪು [illegible]

ರವೇಳೆ ಅದನ್ನು ಕೊಡಿಸಿಕೊಡಬೇಕೆಂದು ಈಗಿನ ದಿವಾನರೂ ಅಭಿಪ್ರಾಯಪಟ್ಟಿರುತ್ತಾರೆ.

ವರ್ತಮಾನ ಸಂಗ್ರಹವು.

ನ್ಯೂಯಾರ್ಕಿನಲ್ಲಿ ಒಂದು ಸ್ಫೋಟದಿಂದ ಒಂದು ಬೀದಿಯು ಹೋಗಿ ೩೦ ಜನರು ಸತ್ತುಹೋದರು.

ರಾಜಚಕ್ರವರ್ತಿಯವರ ಜನ್ಮದಿನೋತ್ಸವವು ಭರತಖಂಡದಲ್ಲಿ ಜೂನ ತಾ॥ ೩ ರಲ್ಲಿ ನೆರವೇರಿಸಲ್ಪಡುವುದಾಗಿ ಗೊತ್ತಾಗಿದೆ.

ಸೀಮೆಯಲ್ಲಿ ಒಂದು ಕಲ್ಲಿದ್ದಲು ಗಣಿಯು ಒಡೆದುಹೋಗಿ ಒಳಗಿದ್ದವರಲ್ಲಿ ೧೦೦ ಜನರು ಜೀವಸಹಿತ ಸಮಾಧಿಯಾದರು.

ಪಂಜಾಬಿನಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಎಡ್ವರ್ಡ ಸಾರ್ವಭೌಮರ ಸ್ಮಾರಕಕಾರ್ಯಕ್ಕಾಗಿ ಈವರೆಗೆ ೧೩ ಲಕ್ಷ ರೂ ಗಳ ಫಂಡು ಸೇರಿದೆ.

ಆಕಾಶನಾವೆಯಲ್ಲಿಟ್ಟುಕೊಂಡು ಬಹು ಎತ್ತರದಿಂದ ಗುಂಡನ್ನು ಹೊಡೆಯಲನುಕೂಲಿಸುವಂತೆ ಒಂದು ಬಂದೂಕು ಹೊಸದಾಗಿ ನಿರ್ಮಿಸಲ್ಪಟ್ಟಿರುತ್ತದೆ.

ಫೋರ್ಬರ್ಗಿನಲ್ಲಿ ಅರಾಜಕರಾಜದ್ರೋಹಿಗಳು ಒಂದು ಮನೆಯಲ್ಲಿ ರಹಸ್ಯವಾಗಿ ಸಿಡಿಮದ್ದನ್ನು ಮಾಡುತ್ತಿರುವಾಗ್ಗೆ, ಅದು ಆಕಸ್ಮಿಕವಾಗಿ ಹಾರಿ ೩ ಜನರು ಸತ್ತುಹೋದರು. ೫ ಜನರು ಗಾಯವಾದರು.

ಟಿಬೆಟ್ಟಿನಲ್ಲಿ ಚೀನಾ ದೇಶದವರಿಗೂ ಅಲ್ಲಿಯ ಜನರಿಗೂ ಮನಸ್ತಾಪವುಂಟಾಗಿ ಒಳಗೆ ಜಗಳವಾಯಿತು. ಆದರೆ ದಾರದೆಳೆ ಎಷ್ಟು ಜನರು ಮಡಿದರು ಮತ್ತು ಗಾಯವಾದರು ಎಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲವು.

ಬಂಗಾಳದ ಸರ್ಕಾರದವರು "ಸಂಜೀವನಿ" ಎಂದು ದೇಶಭಾಷೆಯಲ್ಲಿ ಹೊರಡುವ ಪತ್ರಿಕೆಯು ಪ್ರತಿ ವರ್ಷವೂ ಗ್ರಾಮಗಳಲ್ಲಿ ಉಚಿತವಾಗಿ ಹಂಚುತ್ತಿರುವುದನ್ನು ಜನರು ಅಪೇಕ್ಷೆಸಿಯವರವೇಳೆ ಈ ಪತ್ರಿಕೆಯನ್ನು ಕೊಳ್ಳುವುದನ್ನು ನಿಲ್ಲಿಸಿಬಿಡುವವರಾಗಿರುವರು.

ಬಾಂಬೋರಿನಲ್ಲಿ ಪ್ರತಿನಿತ್ಯದಲ್ಲೂ ಮತ್ತು ವಾರಕ್ಕೊಂದಾವೃತ್ತಿ ಹೊರಡುವ ಜವಾಬ್ದಾರಿ ಎಂಬ ಮಹತ್ತ್ವವುಳ್ಳ ಪತ್ರಿಕೆಗಳ ಲೇಖನಗಳು ಆಕ್ಷೇಪಕರವಾಗಿರುವುದರಿಂದ ೨ ಪತ್ರಿಕೆಗಳಿಗಾಗಿ ಒಂದೊಂದು ಸಾವಿರ ರೂ ಗಳನ್ನು ಹೋಣೆಯಾಗಿಡಬೇಕೆಂದು ಲಾಹೋರಿನ ಡಿ॥ ಮ್ಯಾಜಿಸ್ಟ್ರೇಟರವರು ಆಜ್ಞೆ ಮಾಡಿರುತ್ತಾರೆ.

ಭರತಖಂಡದ ವಾಯುವ್ಯಮೂಲೆಯಲ್ಲಿರುವ ಅಫಘಾನಿಸ್ಥಾನದ ಜನರು ಕಂದಾಯವನ್ನು ಕೊಡಲು ತಿರಸ್ಕರಿಸಿದುದರವೇಳೆ ಅವರಿಗೂ ಅಮೀರ ಸಾಹೇಬರ ಸವಾರರಿಗೂ ಸಂಘರ್ಷವುಂಟಾಗಿದೆ. ಈ ಸ್ಥಾನದ ಜನರು ಅಫಘಾನಿಸ್ಥಾನದ ಪ್ರವರ್ತಕರಿಂದ ಹಳೆಯ ಕೋವಿಗಳನ್ನು ಕೊಳ್ಳುತ್ತಿರುವರನ್ನು ಕೊಂಡುಕೊಂಡಿರುವರು.

ಕಲಕತ್ತೆಯ ಬರ್ಮಪಟ್ಟ ಸ್ಟ್ರೀಟ್ ಬೀದಿಯಲ್ಲಿ ಬಹು ಪುರಾತನವಾದ ಸಿತಾರು ಒಂದು ಗಾಜಿನ ಪೆಟ್ಟಿಗೆಯಲ್ಲಿಟ್ಟಿತ್ತು. ಯಾರೋ ಕಳ್ಳರು ಆ ಪೆಟ್ಟಿಗೆಯ ಗಾಜನ್ನು ಒಡೆದು ಹಾಕಿ ಸಿತಾರಿಗೆ ಕಟ್ಟಿದ್ದ ಬೆಳ್ಳಿಯ ತಂತಿಗಳನ್ನೂ, ಬರಡೆಗೆ ಬೆಳ್ಳಿಯ ಸಿತಾರಿನ ಮೇಲೆ ಗಟ್ಟಿಯ ಕಿರೀಟದಾಕೃತಿಯ ನಡುವೆ ಗಲ್ಲಿಟ್ಟಿದ್ದ ಬಂಗಾರದ ಆಭರಣವನ್ನೂ ಅಪಹರಿಸಿಕೊಂಡು ಹೋಗಿರುವರು.

ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ತೆಗೆದುಕೊಳ್ಳುತ್ತಿದ್ದ ಶ್ರೀಮಂತರುಗಳನ್ನು ಸೂರೆಮಾಡುತ್ತ ೩ ಕೊಲೆಗಳನ್ನು ಮಾಡಿರುವ ಕಳ್ಳರ ಯಜಮಾನನಾದ ನಾಥಿ ಎಂಬುವನು ಜೇಲಂ ಡಿಸ್ಟ್ರಿಕ್ಟಿನಲ್ಲಿ ಸಿಕ್ಕಿದಾಗ ಕಾರ್ಬಿಸಿ ನೀಡುವುದಕ್ಕೆ ಅವನನ್ನು ಹಿಡಿದವರಿಗೆ ೩೦೦ ರೂ ಬಹುಮಾನವು ಕೊಡಲ್ಪಡುವುದಾಗಿ ಸರ್ಕಾರದವರಿಂದ ಪ್ರಸಿದ್ಧಿಪಡಿಸಲ್ಪಟ್ಟಿತು.

ಲಾರ್ಡ್ ಕಾರ್ಮೈಕೇಲ್ ರವರು ಈ ತಾ॥ ೨೯ ರಲ್ಲಿ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ಸರ್ಕಾರಿಯಧಿಕಾರಿಗಳು, ಕಾರ್ಪೊರೇಷನ್ನಿನ ಮೆಂಬರುಗಳು, ದೊಡ್ಡ ಮನುಷ್ಯರುಗಳು ಮೊದಲಾದವರಿಂದ ಮರ್ಯಾದಾಪುರಸ್ಸರವಾಗಿ ಬೀಳ್ಕೊಟ್ಟು ಡಫರಿನ್ ಎಂಬ ಹಡಗನ್ನು ಹತ್ತಿ ಪ್ರಯಾಣವಮಾಡುವರು. ಮತ್ತು ಏಪ್ರಿಲ್ ತಾ॥ ೪ ರವರೆಗೆ ಕೊಲಂಬೊದಲ್ಲಿದ್ದು ತಾ॥ ೯ ರಲ್ಲಿ ಡಾರ್ಜಿಲಿಂಗಿಗೆ ಹೋಗುವರು.

ನಿಜಾಮಿನ ಸರ್ಕಾರದವರು ಕೆಲಸವನ್ನು ಮಾಡಿ ಹೊಸದಾದ ರೈಲು ಸಿಲೋನಿಗೆ ಹೋಗಿ ಅಲ್ಲಿ ಬಹು ಕಾಲದವರೆಗೂ ನಡೆಯುತ್ತಿರುವುದನ್ನು ಇಂಡಿಯ ಸರ್ಕಾರದವರು ಸಿಲೋನಿನ ಸರ್ಕಾರದವರಿಂದ ತಿಳಿದು ಇದೆಲ್ಲವ ಸಿಲೋನಿನಲ್ಲಿ ಕೆಲಸವು ದೊರೆಯುವುದು [illegible] ಅಥವಾ ಅಲ್ಲಿ ಹೋಗತಕ್ಕ ಜಾಕತ್ತು [illegible] ತೋಡುವುದು [illegible] ರವರು ಎಂಬುದನ್ನು [illegible]

ಸುಕರ್ ಯಿಂದ ಪುಣೆಯ ಪ್ರಯಾಣವಮಾಡುತ್ತಿದ್ದ ಒಬ್ಬ ಐರೋಪ್ಯಸ್ತ್ರೀ, ೧೨ ಭ್ರಾಂತಿಯಿಂದ ಬೀಳಿಕೆಗೆ ಹೊರಡುವ ಬಂಡಿಯಲ್ಲಿ ಕುಳಿತುಕೊಂಡು ಬಂಡಿಯು ಹೊರಡುವ ಸಮಯದಲ್ಲಿ ತನ್ನ ತಪ್ಪನ್ನು ತಿಳಿದು ಹೊರಗಿಳಿಯಲು ಯತ್ನಿಸುವಾಗ್ಗೆ ಕಾಲುಜಾರಿ ಕೆಳಗೆ ಬಿದ್ದು ಬಂಡಿಯ ಚಕ್ರಗಳಿಗೆ ಸಿಕ್ಕಿ ಕೂಡಲೆ ಸತ್ತುಹೋದಳು. ಅವಳ ಕೂಡ ಬಂಡಿಯಲ್ಲಿದ್ದ ಅವಳ ೩ ವರ್ಷ ವಯಸ್ಸಿನ ಮಗುವು ಮಾತ್ರ ದೈವಗತಿಯಿಂದ ಅಪಾಯವಿಲ್ಲದೆ ತಪ್ಪಿಸಿಕೊಂಡು ಹೊರಗೆ ಬಿತ್ತು.

ಕೇ ಬ್ರಿಡ್ಜ ಸರ್ವಕಲಾಶಾಲೆಯಲ್ಲಿ ವ್ಯಾಸಂಗಮಾಡುತ್ತಿರುವ ಭರತಖಂಡದ ವಿದ್ಯಾರ್ಥಿಗಳು ಕೆಲದಿನಗಳ ಕೆಳಗೆ ಸಂಸ್ಕೃತಪಂಡಿತರಾದ ಗಾರ್ಡನರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಭರತಖಂಡದಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಹಿಂದೂ ಮಹಮ್ಮದೀಯ ಸರ್ವಕಲಾಶಾಲೆಗಳ ಸಂಬಂಧವಾಗಿ ಪ್ರೋತ್ಸಾಹಕರವಾದ ಭಾಷಣಗಳನ್ನು ಮಾಡಿ ಕೇಂಬ್ರಿಡ್ಜಿನಲ್ಲಿರುವ ವಿದ್ಯಾರ್ಥಿಗಳೆಲ್ಲರಿಂದಲೂ ಚಂದಾಹಣವನ್ನೆತ್ತಿ ಹಿಂದೂ ಮಹಮ್ಮದೀಯರ ಸರ್ವಕಲಾಶಾಲೆಗಳ ಸಹಾಯಾರ್ಥವಾಗಿ ಕಳುಹಿಸಿಕೊಡಬೇಕೆಂದು ನಿರ್ಧರಿಸಿದರು.

ಕಳೆದ ತಾ॥ ೧೨ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೯೦೦೦ ಜನರಿಗೆ ಪ್ಲೇಗುರೋಗವು ತಗಲಿ ೧೬೦೦೦ ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ೨೦೦, ಮದ್ರಾಸಾಧಿಪತ್ಯದಲ್ಲಿ ೧೦೦, ಬಂಗಾಳೆಯಲ್ಲಿ ೩೯೩ ಸಂಯುಕ್ತ ಪ್ರಾಂತಗಳಲ್ಲಿ ೬೦೦೦ ಪಂಜಾಬಿನಲ್ಲಿ ೫೦ ಬರ್ಮದಲ್ಲಿ ೫೦ ಸಂಯುಕ್ತ ಪ್ರಾಂತಗಳಲ್ಲಿ ೧೦೦೦ ಮೈಸೂರ ಸೀಮೆ ಸುತ್ತ ೫ ಹೈದರಾಬಾದಿನಲ್ಲಿ ೧೩, ಮದ್ರಾಸು ಮೊದಲಾದ ೩೦ ಜನ ಮತ್ತೂ ರಾಜಪುತಾನದಲ್ಲಿ ೬೪ ಜನ ಸತ್ತರು. ಇದರ ವರ್ತಮಾನವಾಗಿರುತ್ತವೆ.

ಒಬ್ಬ ೬ ಗಾಳಿ ಯುವಕನು ಐರೋಪ್ಯಕ್ಕೆ ಹೋಗಿ ಒಂದು ವಿದ್ಯಾಮಂದಿರಗಳನ್ನು ಇಟ್ಟುಕೊಂಡಿರುತ್ತಾನೆ. ಬಂಗಾಳದಲ್ಲಿ ಬಳಕೆಯಾದ ಜಿಲೇಬಿ, ಜಾಮೂನು ಗಜರಿ, ವಿವಿಧ ಮೊದಲಾದ ಸಿಹಿ ಪದಾರ್ಥಗಳು ಐರೋಪ್ಯದೇಶದವರಿಗೆ ಅತ್ಯಂತ ರುಚಿಕರವಾಗಿ ಕಂಡಿರುವುದರಿಂದ ವಿಶೇಷವಾಗಿ ವ್ಯಾಪಾರವಾಗುತ್ತ ಆ ಯುವಕನು ಬಹು ದ್ರವ್ಯವನ್ನು ಸ್ವಲ್ಪಕಾಲದಲ್ಲಿ ಸಂಪಾದಿಸಿ ಶ್ರೀಮಂತನಾಗಿರುತ್ತಾನೆ. ಅದುಕಾರಣ ವಿದ್ಯಾವಂತರಾದ ಬಂಗಾಳಿಯ ಯುವಕರು ಪ್ರಪಂಚದವೇಲೆಲ್ಲಾ ಅಂಗಡಿಗಳನ್ನಿಟ್ಟು ದ್ರವ್ಯವನ್ನು ಸಂಪಾದಿಸಬಹುದೆಂದು ಒಂದು ಪತ್ರಿಕೆಯು ತಿಳಿಸುತ್ತದೆ.

ರಷ್ಯಾದಲ್ಲಿ ಪಾದರ್ ಡಮಾಜಿವುರೋಟ್ ಎಂಬ ಪಾದ್ರಿಯು ಪೋಲಿ ಅಪ್ಪನ ದೇವಾಲಯದಿಂದ ೧೫೦೦೦೦ ರೂ. ಬೆಲೆಬಾಳುವ ವಜ್ರದ ಕಿರೀಟವನ್ನು ಅಪಹರಿಸಿಕೊಂಡು ತನ್ನ ಚಿಕ್ಕಪ್ಪನಾದ ಪಲಾರಿಮಕೋಟ್ ಎಂಬ ಪಾದ್ರಿಯ ಮೂಲಕ ಅದನ್ನು ಮಾರಿಸಿದ್ದರಿಂದ ಚಿಕ್ಕಪ್ಪನು ತನ್ನ ರಹಸ್ಯವನ್ನು ಬಹಿರಂಗಪಡಿಸಬಹುದೆಂದು ಶಂಕಿಸಿ ಅವನನ್ನು ಕೊಂದು ಅವನ ಶವವನ್ನು ಒಂದು ಸೆಕೊಳೆಗಿಟ್ಟು ಪೋಲಿ ನಿಂದ ೧೯೧೦ ನೆಯ ಸೆಪ್ಟೆಂಬರ್ ತಾ॥ ೫ ರಲ್ಲಿ ಪ್ರೋದರ ವಿಚಾರಣೆಯಲ್ಲಿ ಒಪ್ಪಿಕೊಂಡದ ಮೇಲೆ ಅವನು ಬಹಿಷ್ಕೃತನಾಗಿ ಮಾರಲ್ಪಟ್ಟಿದ್ದನು. ಈಗ ಆ ಪಾದ್ರಿಯು ಮತ್ತೂ ಅವನ ಸಹಾಯಕರಿಂದಲೂ ಮೇಲೆ ೩ ಜನ ಪಾದ್ರಿಗಳ ಈ ವಿಷಯ ವಿಚಾರಣೆಯು ಸಂಬಂಧವಾಗಿ ೧೦೦ ಜನ ಸಾಕ್ಷಿಗಳ ವಿಚಾರಣೆಯು ನಡೆಯಬೇಕಾಗಿದೆ.

ಬೊಂಬಾಯಿ ಸರ್ಕಾರದ ಪ್ರಾಂತದ ಸರ್ಕಾರಿ ಗೆಜೆಟ್ ಸಂಗ್ರಹ

ಬೆಳಗಾವಿಯ ಕಲೆಕ್ಟರರಾದ ಮ॥ ಬ್ರ್ಯಾಂಡರನರು ೧ ವರ್ಷ ರಜವನ್ನು ಪಡೆದುಕೊಂಡಿರುವುದರಿಂದ, ಬಿಜಾಪುರದ ಕಲೆಕ್ಟರಾದ ಮ॥ ಬ್ರೌನರವರು ಬೆಳಗಾವಿಯ ಕಲೆಕ್ಟರಾಗಿಯೂ, ಕಲಾದಗಿಯ ಕಲೆಕ್ಟರಾದ ಮ॥ ಕಾರ್ಟ್ರೈಟ್ ಯವರು ಬಿಜಾಪುರದ ಕಲೆಕ್ಟರರಾಗಿಯೂ, ಧಾರವಾಡದ ಅಸಿಸ್ಟೆಂಟ್ ಕಲೆಕ್ಟರಾದ ಮ॥ ಕಾಮ್‌ಸೇನರವರು ಕುಲಬಾಧ ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಕಾರವಾರದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರರಾದ ಮ॥ ಮುಶೆಲ್‌ಕರವರಿಗೆ ೨ ತಿಂಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಮ॥ ಶ್ರೀನಿವಾಸಲ್ವಪುರಿರಾವ್ ದೇಶಪಾಂಡೆಯವರು ಕಾರವಾರದ ಡಿ॥ ಡೆ॥ ಕಲೆಕ್ಟರರಾಗಿಯೂ ಗದಗಿನ ಮಾಮಲೆದಾರರಾದ ಮ॥ ಗೋವಿಂದರಾವ್ ಮಂತ್ರಿ ಬಾಳೇಕುಂದ್ರಿಯವರು ಕಾರವಾರದ ಹುಬ್ಬಳ್ಳಿ ಡಿ॥ ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಬಾಗಲಕೋಟೆಯ ಮಾಮಲೆದಾರರಾದ ಮ॥ ಕೇಶವ ಸಿದ್ದಪ್ಪ ಶಿರವಾಳ್ಪತೆಯ ರಜವು. ಬೆಳಗಾವಿಯ ಹುಜೂರು ಡಿ॥

ತಾ॥ [illegible] ರಾದ ಮ॥ ರಾಮು

ಬಾಬಾಜಿಕ್ಕ [illegible] ಹೋಳಿಗಾಮಿಯ ಮೊ

ಇವರು ಗೋಕಾಕ ಸಿ. ಪಿ. ಶೆಲ್ವಿ ಮಿರ ಮಾಮಲೇದಾರರಾಗಿಯೂ, ಬೊಂಬಾಯಿ ಪ್ರಾಂತದ ಮಾಮಲೆದಾರರಾದ ವಿ॥ ಶಂಕರ ನಾರಾಯಣ ಕೃಷ್ಣ ಬಿಳಗಿಕರ ಇವರು ಬೆಳಗಾವಿಗೂ ವಿ॥ ರಾಮಚಂದ್ರ, ರಘುನಾಥ ಕುಲಕರ್ಣಿಯವರು ಬೆಳಗಾವಿಯ ರದಾಪೆ ನಿತ್ಯಾದಿಗೂ, ಯಲ್ಲಾಪುರದ ಮಾಮಲೆದಾರರಾದ ವಿ॥ ನರಸಿಂಗರಾವ ರಾಮ ಅವರು ಇವರು ಕಾರವಾರದ ಕಲೆಕ್ಟರ ಅಸಿಸ್ಟೆಂಟ್ ಚಿಟ್ನೀಸರಾಗಿಯೂ, ಧಾರವಾಡದ ಡೆಪ್ಯುಟಿ ಚಿಟ್ನೀಸರಿಂದ ವಿ॥ ಕೇಶವ ಶ್ರೀನಿವಾಸ ಕಳಸರವರು ಯಲ್ಲಾಪುರದ ಮಾಮಲೇದಾರರಾಗಿಯೂ, ಕುಮಟೆಯ ಮಾಮಲೆದಾರರಾದ ವಿ॥ ರಾಘವೇಂದ್ರ, ಗೋವಿಂದರಾಯರುಗಳು ಇವರು ಬರುವ ಎಪ್ರಿಲ್ ತಾ॥ ೧ರಿಂದ ಪೆನ್ಶನ್ನಿನಮೇಲೆ ನಿವೃತ್ತರಾಗಿರುವ ಕಾರಣ ಮುಂದೆ ಕೊಡುವ ಮಹಾಲಕರಿಯವರಾದ ವಿ॥ ರಘುನಾಥ ರಾವ ಸಿಂಧನೂರಿನವರು ಕೆ. ಸಿ. ಅಸಿಸ್ಟಂಟ ಮಾಮಲೆದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ

ಗಾಂವ್ಹಾ ಪ್ರೋಟೆಸ್ಟಂಟ ಹಾಯಸ್ಕೂಲ ಅಸಿಸ್ಟಂಟ ಶಿಕ್ಷಕರಾದ ವಿ॥ ವಿನಾಯಕರಾವ ... ರತ್ನಾಗಿರಿಯ ಪ್ರೊಫೆಸರ ಇಂಗ್ಲೀಷದಲ್ಲಿ ವಿ. ಲಕ್ಷ್ಮಣರಾವ ಗಣಪತಿರಾವ ಯವರಿಗೆ ... ಕೊಡಲ್ಪಟ್ಟಿದೆ

ವಿ॥ ... ... ಕೈಲಾಸವಾಸಿಗಳಾದರು ... ...

ಧಾರವಾಡದ ... ಪೇಟೆಯಲ್ಲಿ ವಾಸವಾಗಿದ್ದ ಬೋರಗಾಂವದ ನಗರಶೆಟ್ಟರನ್ನು ಕಳೆದ ತಾ॥ ೧೬ ರ ಮಧ್ಯರಾತ್ರಿಯಲ್ಲಿ ಯಾರೋ ಕೊಲೆಮಾಡಿದ್ದರು ಪೋಲೀಸರು ಘಾತುಕರನ್ನು ಹುಡಕ ಹಚ್ಚಿದ್ದಾರೆ

ಧಾರವಾಡದ ಶ್ರೀ ಚನ್ನಮಲ್ಲಪ್ಪ ತೆಂಗಿನಕಾಯಿಯವರ ಕುಮಾರರಾದ ವಿ॥ ಚನ್ನಬಸಪ್ಪ ತೆಂಗಿನಕಾಯಿಯವರು ಸವದತ್ತಿಯಲ್ಲಿ ಸ್ಥಾಪಿಸಿದ್ದ ಜನ್ನಿನ ಆರಂಭೋತ್ಸವವನ್ನು ಕಳೆದ ತಾ॥ ೧೯ ರಲ್ಲಿ ಅಲ್ಲಿಯ ಮಾಮಲೆದಾರರಿಂದ ನೆರವೇರಿಸಿದರು

ಹಾನಗಲ್ ತಾ॥ ಆಲದಕಟ್ಟಿಯ ದೇಶಪಾಂಡೆಯವರಾದ ವಿ॥ ಸ್ವಾಮಿರಾಯರು ಸವಣೂರಲ್ಲಿರುವ ಶ್ರೀ ಸತ್ಯಬೋಧಸ್ವಾಮಿಗಳ ಮಠಕ್ಕೆ ೧೧೦೦ ರೂಪಾಯಿಗಳನ್ನು ಕಾಣಿಕೆಯಾಗಿ ಒಪ್ಪಿಸಿದರು

ಧಾರವಾಡ ಡಿಸ್ಟ್ರಿಕ್ಟದಲ್ಲಿ ೧೯೧೧—೧೨ ನೇ ಸಂವತ್ಸರದಲ್ಲಿ ... ಗಸ್ತಿಯನ್ನು ಸರಕಾರಿಯು ಸಾಗಿಸುವದಾಗಿ ... ... ಕೈಕೊಳ್ಳಲು ... ... ಗೊತ್ತಾಗಿದೆ

ಪತ್ರವ್ಯವಹಾರವು.

ವಿಜಾಪುರ ಜಿ॥ ... ... ಬರುವಂತಹ ಅನೇಕ ಅನ್ಯಾಯಗಳನ್ನು ಸುಭಿಕ್ಷೋದಯವೆನ್ನು ಶ್ರಾವಣಮಾಸದಲ್ಲಿ ಬಾದಲಾಜ ಮತ್ತು ಪುರಾಣಶ್ರವಣ ಗಳನ್ನು ಮಾಡಿಸುತ್ತ ವೀರಶೈವ ಆ ಬಾಲವೃದ್ಧರಿಗೆಲ್ಲಾ ಭಕ್ತಿಜ್ಞಾನ ವೈರಾಗ್ಯ ಅಭ್ಯಾಸಗಳನ್ನು ಬೋಧಿಸುತ್ತ ತ್ರಿಕಾಲ ಲಿಂಗಪೂಜಾಧುರಂಧರರಾಗಿದ್ದ ಶ್ರೀ ಪಟ್ಟದದೇವರು ಅಕಸ್ಮಾತ್ತಾಗಿ ಕೈಲಾಸವಾಸಿಗಳಾದುದು ಶೋಚನೀಯವಾದದ್ದೆಂದು ತಿಳಿಸಲು ವಿಷಾದವಾಗುತ್ತದೆ ಈ ಮಹಾಸ್ವಾಮಿಗಳ ಅಕಾಲಮರಣದಿಂದ ಈ ಭಾಗದ ವೀರಶೈವರಿಗೆ ಬಹಳ ನ್ಯೂನತೆಯಾಗಿರುತ್ತದೆ ಶಿವೈಕ್ಯರಾದ ಪಟ್ಟದ ದೇವರ ಮರಿಗಳಿಗೆ ಈ ತಾಪವನ್ನು ಸಹಿಸಲೆಂದು ಪ್ರಾರ್ಥಿಸುವ

ತಮ್ಮ ... ದಾರ್.

ಶ್ರೀಬದರಗಿ.

ಇಲ್ಲಿಯ ಶ್ರೀಮದ್ವೀರಶೈವ ವಿದ್ಯಾಭಿವೃದ್ಧಿ ಸಮಿತಿಯ ವರ ಅಧ್ಯಕ್ಷತೆಯ ಕೆಳಗೆ ಸಭೆಯಲ್ಲಿ ಶ್ರೀಮನ್ಮಹಾರಾಜ ... ಪಟ್ಟಾಭಿಷೇಕ ... ... ಶ್ರೀ ಪ್ರಭುಗಳು ೧೯೧೧ ನೇ ಡಿಸೆಂಬರ ತಾ॥ ೧೨ ರ ವಿವರ ... ... ರಾಜಧಾನಿಯಲ್ಲಿ ರಾಜ್ಯಾಭಿಷೇಕ ಸಮಾರಂಭಗಳಲ್ಲಿ ವಿ॥ ರಾವ್ ಬಹದ್ದೂರ ರುದ್ರಗೌಡ ಅರಟಾಳ ... ... ಇವರಿಗೆ ಪ್ರಭುಗಳ ಕಡೆಯಿಂದ ಸಿ. ಐ. ಇ. ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾದಾನಂದವನ್ನು ... ... ವೀರಶೈವರು ... ... ತಿಳಿಯಪಡಿಸಬೇಕೆಂದು ನಿರ್ಧರಿಸಿರುತ್ತಾರೆ.

ಮೇಲೆ ಸಾಮಸಹನ್ನಾರ ರುದ್ರಗೌಡ ಅರಟಾಳ ಸಿ.ಐ. ... ... ಇವರ ಸನ್ನಿಧಿಗೆ ... ...

ರಾಜಕೀಯ ... ... ವಿಶ್ವಾಸದಿಂದಲೂ, ದಕ್ಷತೆಯಿಂದ ಲೂ, ... ಜೀವನದಲ್ಲಿ ಕೆಲಸ ಮಾಡಿ ... ... ಸಿ. ಐ. ... ...

... ...

ಶ್ರೀಮದ್ವೀರಶೈವ ಲೀಲಾ ಸೆಕ್ರೆಟರಿ, ಮಲ್ಲಪ್ಪ ಸೋಮಶೆಟ್ಟಿ ... ... ಲೋಣಿ

ವೀರಶೈವ ವಿದ್ಯಾಭಿವೃದ್ಧಿಯು.

ತಿರುಮಕೂಡ್ಲು ನರಸೀಪುರದ ತಾಲ್ಲೋಕು ಕುರುಬೂರು ಗ್ರಾಮದಲ್ಲಿ ವಾಸಿಸುತ್ತಿರುವ ಶ್ರೀ ಕಲ್ಬುರ್ಗಿ ಮುರುಗೇಂದ್ರಸ್ವಾಮಿಗಳೆಂಬುವವರು ನರಸೀಪುರ ಪ್ರಾಂತದ ಮತ್ತು ಚಾಮರಾಜನಗರ ಪ್ರಾಂತದ ವೀರಶೈವ ಮಹಾಜನಗಳ ವಿಶ್ವಾಸಕ್ಕೆ ಪಾತ್ರರಾಗಿ, ಆ ಜನಗಳ ಕೋರಿಕೆಯ ಪ್ರಕಾರ ಅವರುಗಳ ಸಹಾಯವನ್ನು ಹೊಂದಿ "ಪರೋಪಕಾರಾರ್ಥ ಮಿದಂಶರೀರಂ" ಎಂಬಂತೆ ತಮ್ಮ ದೇಹವನ್ನು ಶಿವಭಕ್ತಜನರ ಹಿತಕ್ಕೋಸ್ಕರ ದಂಡಿಸಿ ಅನೇಕ ದ್ರವ್ಯವನ್ನು ಪ್ರಯತ್ನದಿಂದ ಚಾಮರಾಜನಗರದ ತಾಲ್ಲೋಕು ... ಯಾ ... ಒಂದು ... "ಕುರುಬೂರು ... " ಒಂದು ... ತಕ್ಕ ... ಸಿ, ... , ಮಂದಿಗಳೂ, ... ಕಾಲ ... ... ವಿದ್ಯಾಭ್ಯಾಸಮಾಡುತ್ತಿದ್ದು, ಶ್ರೀ ಮಹಾ ... ಶ್ರೀ ಮಲ್ಲರಾಜದೇವರು ... ಈ ... ರಲ್ಲಿ ಒಂದೆನೆಯವರನ್ನು ... ... ಕುರುಬೂರು ... ... ಈ ... ... ಸಂಭ್ರಮದಿಂದ ನೂತನ ... ... ನೂತನ ಸ್ವಾಮಿಗಳ ಉತ್ಸವವನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸುತ್ತೂರು ಮಠಾಧಿಪತಿಗಳಾದ ಶ್ರೀ ಸ್ವಾಮಿಗಳವರೂ, ... ಶ್ರೀ ಸ್ವಾಮಿಗಳವರೂ, ಮುಡುಕುತೊರೆ ಕಲ್ಲುಮಠದ ಶ್ರೀ ಮಹಾಸ್ವಾಮಿಗಳವರೂ ಮೊದಲಾದ ಅನೇಕ ಮಠಾಧಿಕಾರಿಗಳೂ ಮಠಗಳಾದ ಮೂಗೂರು ಪುಟ್ಟಸುಬ್ಬಣ್ಣನವರು ಮೊದಲಾದ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಸುಮಾರು ಹತ್ತು ಸಾವಿರ ಜನಗಳು ಸೇರಿದ್ದರು. ಸರ್ವರಿಗೂ ವಿಶೇಷವಿಂದ ಭೋಜನಾದಿಗಳು ನೆರವೇರಿಸಲ್ಪಟ್ಟವು. ಸರ್ವರೂ ಕಲ್ಬುರ್ಗಿ ಸ್ವಾಮಿಗಳವರ ಬಿದಾರ್ಢ್ಯವನ್ನು ಕೊಂಡಾಡುತ್ತಿದ್ದರು. ಪಟ್ಟಾಭಿಷೇಕ ನಡೆದ ದಿವಸದಲ್ಲಿ ನಡೆದಂತೆ ಮರುದಿನ ಅಂದರೆ ೭ ನೇ ತಾ॥ ದಿವಸವೂ ಮಹಾಸಮಾರಾಧನೆಯು ನಡೆಯಿತು. ಅನಂತರ ಸುತ್ತೂರು ಶ್ರೀಗಳವರ ಅಪ್ಪಣೆಯ ಪ್ರಕಾರ ಕಲ್ಬುರ್ಗಿ ಸ್ವಾಮಿಗಳವರು ಒಂದು ಸಭೆಯನ್ನು ನೆರಿಸಿ ವಿದ್ಯಾವಿಷಯಕವಾಗಿಯೂ, ಆಚಾರಾದಿ ವಿಷಯಕವಾಗಿಯೂ ವಿಸ್ತಾರವಿಂದ ಉಪನ್ಯಾಸಗಳನ್ನು ಮಾಡಿಸಿದರು. ಈ ಸಭೆಗೆ ಶ್ರೀ ಸುತ್ತೂರು ಸ್ವಾಮಿಗಳವರು ಅಧ್ಯಕ್ಷರಾಗಿದ್ದರು. ಪ್ರಸ್ತುತದಲ್ಲಿ ಕುರುಬೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಸುತ್ತೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಕೊಳ್ಳೆಗಾಲ ... ಸಂಸ್ಕೃತ ಪಾಠಶಾಲೆಯೂ ... ಪಟ್ಟಣದಲ್ಲೂ ಮುಡುಕುತೊರೆ

ಪುರದಲ್ಲಿ ಸಭೆಯು ಸೇರಿ ಆಚಾರ, ವಿದ್ಯೆ ಮೊದಲಾದ ವಿಷಯದಲ್ಲಿ ತಕ್ಕ ವಿಚಾರಣೆಗಳು ನಡಿಸಲ್ಪಡತಕ್ಕದೆಂದೂ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನವು ಆಯಿತು. ಅನಂತರ ಶಿವಕಥಾ ಪಂಡಿತರಾದ ವೇ॥ ಶಿವಪ್ಪಶಾಸ್ತ್ರಿಗಳಿಂದ ಶಿವಕಥಾಶ್ರವಣವೂ ನಡೆಯಿತು. ಇವರು ಮಾಡಿದ ಕಥೆಯನ್ನು ಕೇಳಿ ಸಭಿಕರೆಲ್ಲರೂ ಆನಂದಪರವಶರಾದರು. ಕಲ್ಬುರ್ಗಿ ಸ್ವಾಮಿಗಳವರು, "ಅನ್ನದಾನಂ, ಮಹಾದಾನಂ, ವಿದ್ಯಾದಾನಂ ತತೋಧಿಕಂ" ಎಂಬುವ ವಿಷಯದಲ್ಲಿ ಪ್ರಯತ್ನವನ್ನು ಮಾಡುತ್ತಿರುವವರು ಆಚಾರ ಪ್ರಚಾರರ್ಧರ್ಮ ಎಂಬುದು ಮೊದಲಾದುದಕ್ಕೆ ಗಳನ್ನು ಪರ್ಯಾಲೋಚಿಸಿ ಸ್ವಮತ ಜನ ಮಧ್ಯದಲ್ಲಿ ಆಚಾರಾಭಿವೃದ್ಧಿಗೂ ತಕ್ಕ ಪ್ರಯತ್ನವಂ ಮಾಡು ವುದರಲ್ಲಿ ಉದ್ಯುಕ್ತರಾದುದೂ ಅತ್ಯಂತ ಶ್ಲಾಘನೀಯವಾಗಿರುತ್ತದೆ. ಸುತ್ತೂರು ಶ್ರೀಗಳವರು ಈ ಪ್ರಾಂತ್ಯದ ಮಠಾಧಿಕಾರಿಗಳಲ್ಲೆಲ್ಲ ಗಣ್ಯರೂ, ಉದಾರರೂ, ಅನೇಕ ಶಿಷ್ಯಸಂಪತ್ತು ಉಳ್ಳವರೂ ಆಗಿರುವರು. ಇವರು ಯಾರ ಸಹಾಯವನ್ನು ಅಪೇಕ್ಷಿಸದೆ ತಾವೊಬ್ಬರೇ ಒಂದು ಪಾಠಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅಶನವಸನಗಳನ್ನು ಕೊಡಬಹುದು. ಆದರೆ ಎಷ್ಟು ಉದಾರಶ್ರೀಮಂತರಾದಾಗ್ಯೂ ಒಬ್ಬೊಬ್ಬರೇ ಒಂದು ಮಹಾಕಾರ್ಯವನ್ನು ಮಾಡುವುದು ಸ್ವಲ್ಪ ಪ್ರಯಾಸವೇ ಸರಿ. ಅನೇಕರು ಏಕಮನಸ್ಸರಾಗಿ ಯತ್ನಿಸಿದರೆ ಎಂತಹ ಮಹಾಕಾರ್ಯವನ್ನಾದರೂ ಸಾಧಿಸಬಹುದು. ಈ ಸಭೆಗೆ ಇವರೇ ಅಧ್ಯಕ್ಷರಾಗಿ ನಿಂತು ಸ್ವಮತೀಯರ ವಿಷಯದಲ್ಲಿ ಸ್ವಗ್ರಾಮಕ್ಕೆ ಅನೇಕ ಶುಭಸೂಚಕವಾದ ವಿಚಾರಣೆಗಳನ್ನು ಪ್ರಾರಂಭಿಸಲು ಯತ್ನವಂ ಮಾಡಿದ್ದಕ್ಕಾಗಿ ವಿದ್ಯಾಭಿಮಾನಿಗಳೂ ಮತಾಭಿಮಾನಿಗಳೂ ಆದ ಮಹನಿಯರೆಲ್ಲರೂ ಆನಂದಪಡುತ್ತಾರೆ. ಗಣ್ಯರೂ, ಮತಾಭಿಮಾನ ವಿದ್ಯಾಭಿಮಾನಿಗಳೆಲ್ಲರೂ ಆದ ವಿ॥ ಪುಟ್ಟಸುಬ್ಬಣ್ಣನವರು ಮಲ್ಲಿಕಾರ್ಜುನಯ್ಯನವರೂ ಮೊದಲಾದ ಮಹನೀಯರುಗಳು ಈ ಕಾರ್ಯಗಳಲ್ಲಿ ಭಾಗಿಗಳಾಗಿ ಸೇರಿದುದು ಮಹದ ಭಾಗ್ಯೋದಯವೇ ಸರಿ. ಆದರೆ ಪಾಠಶಾಲೆಗಳನ್ನು ಸ್ಥಾಪಿಸಿ ಸರಿಯಾದ ಪಾಠಕರನ್ನು ನೇಮಿಸಿ ಪಾಠಕರಿಗೆ ವೇತನವನ್ನೂ ವಿದ್ಯಾರ್ಥಿಗಳಿಗೆ ಅಶನವನ್ನೂ ಕೊಡುತ್ತ ಕೊಂಡು ಸ್ಥಿರವಾಗಿ ಪಾಠಶಾಲೆಗಳನ್ನು ನಡಿಸಿಕೊಂಡು ಬರುವದು ಸಾಮಾನ್ಯವಾದುದಲ್ಲ. ಅನೇಕ ದ್ರವ್ಯವನ್ನು ಶೇಖರಿಸಿ ಇಡಬೇಕಾಗುತ್ತದೆ. ಇದಕ್ಕಾಗಿ ಅಧ್ಯಕ್ಷ ಮಹಾಶಯರು, ಕಲ್ಬುರ್ಗಿ ಸ್ವಾಮಿಗಳವರ ಮೊದಲಾದ ಮಠಾಧಿಕಾರಿಯೂ, ಪುಟ್ಟಸುಬ್ಬಣ್ಣನವರೂ, ಮಣೇಗಾರ್ ಮಲ್ಲಿಕಾರ್ಜುನಪ್ಪನವರೂ ಮೊದಲಾದವರು ಆತ್ಮಸುಖವನ್ನು ತ್ಯಜಿಸಿ ತಮ್ಮ ದೇಹವನ್ನು ಕೆಲವು ಕಾಲ ಮಹಸೇವೆಗೆ ವಿನಿಯೋಗಿಸಿದರೆ ದೊಡ್ಡ ಫಂಡು ಸೇರುತ್ತದೆ. ಆಗ್ಯೆ ಪಾಠಶಾಲೆಗಳು ನಿರ್ವಿಘ್ನವಾಗಿ ನಡೆಯುವಂತಾಗಿ ಈ ಮಹಾನುಭಾವರಿಗೆ ಪುಣ್ಯಕೀರ್ತಿಗಳು ಲಭಿಸಲು ಅಭ್ಯಂತರವಿಲ್ಲ. ನಾವು ಮಾತ್ರ ಕ್ಕೆ ಬೇಕಾದಷ್ಟು ಸಭೆಗಳನ್ನು ನಿರ್ವಹಿಸುವದು ಸುಲಭವು. ಸಭೆಯಲ್ಲಿ ನಿರ್ಣಯಿಸಿದಂತೆ ಎಲ್ಲರೂ ಏಕಮನಸ್ಸರಾಗಿ ತತ್ಪ್ರರಿಂದ ಸೂಚಕಗಳನ್ನು ಪರಿಪಾಲಿಸಿಕೊಂಡು ಸಂಘಾರ ಣವಾದಿಕೊಳ್ಳಬೇಕಾದುದು ಮುಖ್ಯ ಕರ್ತವ್ಯವು. ಈ ಸಂಗತಿಗಳನ್ನೆಲ್ಲಾ ಅಧ್ಯಕ್ಷರು ಮೊದಲಾದವರು ಚನ್ನಾಗಿ ಯೋಚಿಸಿ ಸ್ವಜನಪುರೋಭಿವೃದ್ಧಿ ವಿಷಯದಲ್ಲಿ ಬದ್ಧಾದರರಾಗಿ ತಕ್ಕ ವಿಚಾರಣೆಗಳನ್ನು ಮಾಡುವರೆಂದು ನಂಬಿರುತ್ತೇನೆ. ಸದ್ಯದ ತಿಳಿವಳಿಕೆಗೋಸ್ಕರ ಸಭೆಯಲ್ಲಿ ನಿರ್ಣಯಗಳಾದ ವಿಷಯಗಳನ್ನು ಅಚ್ಚು ಮಾಡಿಸಿ ಪ್ರಚಾರಮಾಡುವರೆಂತಲೂ ಸಂಬಿ ಸ್ವಜನ ವಿದ್ಯಾಭಿವೃದ್ಧಿಯ ವಿಷಯಗಳಲ್ಲಿ ಪ್ರವರ್ತಿಸಿರುವ ಈ ಮಹನೀಯರಿಗೆ ನನ್ನ ವಂದನೆಯನ್ನು ಸಮರ್ಪಿಸುತ್ತೇನೆ ಪ್ರತ್ಯಕ್ಷದರ್ಶಿ.

ಶಿವಯೋಗಮಂದಿರದಲ್ಲಿ ನಡೆದ ವೀರಶೈವ ಧಾರ್ಮಿಕ ಸಭೆಯು. (ಕಳೆದವಾರದ ಶೇಷ.)

ತಾ॥ ೧೯ ರ ಮುಂಜಾನೆ ೮ ಗಂಟೆಗೆ ಸಭೆಯು ಪ್ರಾರಂಭವಾಯಿತು. ಆಗ ಸಮಾಜಸುಧಾರಕರಲ್ಲಿ ೩ ವರ್ಗಗಳು ವಿಚಾರಿಸಲ್ಪಟ್ಟವು. ಸ್ವಾರ್ಥತ್ಯಾಗದಿಂದ ಸಮಾಜಸುಧಾರಣೆಗೆ ನಿರಂತರ ದುಡಿಯುವವರು ೧ ನೆಯ ವರ್ಗದೊಳಗೆ ಬರುತ್ತಾರೆ. ಇದಕ್ಕೆ ಶ್ರೀಮನ್ನಿರಂಜನ ಅನ್ನದಾನಿ ದೇವರು ಸಾಸಲೇಗಿ, ಪಟ್ಟದ್ದೇವರು ಸೂಡಿ, ಮಲ್ಲಿಕಾರ್ಜುನಶಾಸ್ತ್ರಿಗಳು ಹುಂಗುಂದ, ಶಿ ನವ್ವಯ್ಯನವರು ಬಳಗಾನೂರ ಇವರು ಒಪ್ಪಿದರು. (೨) ಸ್ವಾರ್ಥತ್ಯಾಗದಿಂದ ನಿಯಮಿತಕಾಲಗಳಲ್ಲಿ ಸಮಾಜ ಸೇವೆಯ ಕೈಕೊಂಡವರು ೨ ನೆಯ ವರ್ಗದವರು. ಇದಕ್ಕೆ ಉಜ್ಜಯಿನೀಸದ್ಧರ್ಮ ಸಿಂಹಾಸನದ ಶ್ರೀಯುತ ಮಹಾಸ್ವಾಮಿಗಳವರ ಶ್ರೀಮನ್ನಿರಂಜನ ಜೋಳದ ಸ್ವಾಮಿಗಳು, ಈ ಧರ್ಮೋತ್ತೇಜಕಸಭೆಗೆ ಅಧ್ಯಕ್ಷರಾಗಿರುವ ಕೆಳದಿ ಸಂಸ್ಥಾನ ಹಿರೇಮಠದ ಪಟ್ಟಾಧ್ಯಕ್ಷರು, ಶ್ರೀ ಬಿದರಿ ... ತಗ್ಗಿನ ಮಠ ಅಲಕರ ... ... ತೋಂಟದ ... ...

ತ್ರಸುಧಾರಣೆಯನ್ನು ಕೈಕೊಂಡು ಕೀರ್ತನಕಾರರು ಶಿಕರು ೩ ನೆಯ ವರ್ಗದಲ್ಲಿ ಸಮಾವೇಶವಾಗುತ್ತಾರೆ. ವೇ॥ ಶಿವಶಂಕರಶಾಸ್ತ್ರಿಗಳು ಹಾವೇರಿ, ವೇ॥ ಬಸವ ಶಾಸ್ತ್ರಿಗಳು ಧ್ಯಾವಾಪೂರ, ಶ್ರೀ॥ ಗುರುಸಿದ್ಧಯ್ಯನವರು ಣಾಕಿ, ವೀರಯ್ಯನವರು ಹಿರೇಕಾಳ ಮೆಂಬರಾಗಲೆಂ ರು. ರೋಣದ ಗುಳಿಗಂಚಿಮಠದ ಶ್ರೀಮನ್ನಿರಂಜನ ರಾದ ಮಹಾಸ್ವಾಮಿಗಳವರು ಅಧ್ಯಕ್ಷತೆಯಿಂದ ತ್ತಿ ತಾಲೂಕ ಕಮಿಟಿಯನ್ನು ಸ್ಥಾಪಿಸಿದ ರೋಣ ಶಿ ಪ್ರಮುಖರು ಈಗ ಎರಡು ವರುಷಗಳವರೆಗೂ ರ್ಣವದೇಶವನ್ನು ಇಟ್ಟು ಮತಸುಧಾರಣಾ ಕೆಲಸದಲ್ಲಿ ಗಿದ್ದ ಸಂಗತಿಯು ಬಹು ಶ್ಲಾಘ್ಯವಾದದ್ದೆಂದು ಸಭೆ ಆನಂದಪಟ್ಟರು. ಹಾವೇರಿ ಹುಕ್ಕೇರಿಮಠದ ಶ್ರೀಮ ಜಿತ ಶಿವಬಸವ ಮಹಾಸ್ವಾಮಿಗಳವರು ತಮ್ಮ ಸವ ಮಠದ ಉತ್ಪನ್ನದಿಂದ ಒಬ್ಬ ಉಪದೇಶಿಗಳನ್ನು ನಿಯ ಧರ್ಮಪ್ರಸರಣಗೊಳಿಸಲು ಒಪ್ಪಿದ್ದಕ್ಕಾಗಿ ಈ ಸುಕಾ ರ ಕಾರ್ಯವು ದಿಗ್ವಿಜಯವಾಗಲೆಂದು ಜಗದೀಶನನ್ನು ಯಿಂದ ಬೇಡಿಕೊಂಡರು. ಗದಗ ತಾಲೂಕ ಪೈಕಿ ನೂರ ಶ್ರೀ॥ ಚನ್ನಯ್ಯನವರು ಸಂಸ್ಕೃತ ಪಾಠಶಾಲೆ ನ್ನು ಸ್ಥಾಪಿಸಿರುವದಲ್ಲದೆ ಗದಗ ತಾ॥ ಪಟ್ಟಿಗೆ ಒಬ್ಬ ರ್ಮಬೋಧಕನನ್ನು ನಿಯಮಿಸುವದಾಗಿ ವಾಗ್ದಾನಮಾಡಿ ದ ಇವರನ್ನು ಕುರಿತು ಈ ಸಭೆಯವರು ಧನ್ಯವಾದ ದಿದರು. ರೋಣ ತಾ॥ ಅಬ್ಬಿಗೇರಿ ಧರ್ಮೋಪದೇಶಕ ಶ್ರೀ॥ ದ್ಯಾಂಪೂರ ಚನ್ನಯ್ಯನವರು ವೇದಾಗಮೋಕ್ತ ವ್ರಮಾಣಗಳಿಂದಲೂ ಕಲಭ ದೃಷ್ಟಾಂತಗಳಿಂದಲೂ ಕೋಕ್ತಿಯಿಂದಲೂ ರಸಭರಿತವಾಗಿ ಕೀರ್ತನಕಾರರಿ ಪಯುಕ್ತವಾಗುವಂತೆ ೧೦ ಕೀರ್ತನೆಗಳನ್ನು ರಚಿಸಿ ಜಕ್ಕೆ ಭಕ್ತಿಯಿಂದ ಅರ್ಪಿಸಿದ್ದಲ್ಲದೆ ತಾವು ಜೋಳ ದಲ್ಲಿ ಕೀರ್ತನಗಳನ್ನೂ ಕೊಡಮಾಡಿ ತೋರಿಸುತ್ತಿ ಕಾರಣ ಈ ಕಂಡ್ರೆ ಯಿಂದ ಒಂದು ಪಿನಾರವು ಬಹು ವಾಗಿ ಅವರಿಗೆ ಕೊಡಲ್ಪಟ್ಟಿತು. ಹುಬ್ಬಳ್ಳಿ ನಿವಾಸಿ ಶಾಂತವೀರಯ್ಯನವರು ತಮ್ಮ ಮೆಟ್ರಿಕ್ಯುಲೇಶ ಕ್ಷೆಯಾದ ಬಳಿಕ ೬-೭ ತಿಂಗಳ ನಂತರ ಧರ್ಮೋಪ ಕ್ಕೆ ನಿಲ್ಲುತ್ತೇನೆಂದು ತಿಳಿಸಿದ್ದಕ್ಕೆ ಸಭೆಯವರು ಆನಂದ ರು. ಬೆಳಗಾವಿಯಲ್ಲಿ ನೆರೆದ ೬ನೆಯ ಶ್ರೀಮದ್ವೀರ ಮಹಿಳಾಪರಿಷತ್ತಿನಲ್ಲಿ ಪಾಸಾದ ೬ನೆಯ ರೂಲಿಗನು ಈ ಸಭೆಯ ಅಧ್ಯಕ್ಷರಾದ ಸೌಭಾಗ್ಯವತಿ ಭಾಗೀರಥಿ ನ ಪಾಟೀಲ ನೋಲಾಪೂರ ಇವರು ಸಭೆಯ ಪತಿ ದ ಬರಕೊಂಡು ವಿನಂತಿಗೆ ಈ ಸಭೆಯವರು ಸಹಾನು ಯನ್ನು ತೋರಿಸಿದರು.

೩ ನೆಯ ಧರ್ಮೋತ್ತೇಜಕ ಸಭೆಯ ಠರಾವುಗಳು.

(೧) ವೀರಶೈವ ಸಮಸ್ತ ಗುರುಮಠಗಳಿಗೆ ನಿಯಮಿಸ ವ ಉತ್ತರಾಧಿಕಾರಿಗಳು ವಿದ್ಯಾಸಂಪನ್ನರೂ, ಪ್ರೌಢ ಸ್ಕರೂ, ಕುಲೀನರೂ ಸದಾಚಾರ ಸಂಪನ್ನರೂ ಇದ್ದ ಗೆ ಸರ್ವಾನುಮತದಿಂದ ಸಂಪ್ರದಾಯಸಿದ್ಧವಾದ ಸ್ತ್ರವಿಧಾನಗಳಿಂದ ಅಧಿಕಾರವಾಗಬೇಕು. ಇಂಥವ ಯೋಗ್ಯ ಅಧಿಕಾರಿಗಳೆಂದು ಸರ್ವರೂ ಮನ್ನಿಸತಕ್ಕ ಈ ಗುರುಮಠದವರು ಸಮಾಜದವರಿಂದ ಒಂದು ಟಿಯನ್ನು ಸ್ಥಾಪಿಸಿಕೊಂಡು ತಮ್ಮ ಕರ್ತವ್ಯಗಳ ಬಗ್ಗೆ ಕಮಿಟಿಯಿಂದ ತಯಾರಿಸಿದ ರೂಲ್ಸುಗಳಂತೆ ಸಂ ನಕಾರ್ಯಗಳನ್ನು ನೆರವೇರಿಸಬೇಕು. ಮತ್ತು ತಮ್ಮ ಸ್ಥಾನದ ಉತ್ಪನ್ನದ ಪಕಿಕೆ ಅಂಶವನ್ನು ಸಮಾಜೋನ್ನ ಗಿ ವಿನಿಯೋಗಿಸತಕ್ಕದ್ದೆಂದು ಅತ್ಯಂತ ವಿನಯಪೂರ್ವಕ ಈ ಸಭೆಯವರು ಪ್ರಾರ್ಥಿಸುತ್ತಾರೆ. (೨) ಸ್ವಮತ ಧಾರಣೆಯ ದೆಸೆಯಿಂದ ಬೋಧಕರನ್ನು ನಿರ್ಮಿಸಬೇ ದು ಸಭೆಯವರು ನಿರ್ಧರಿಸುತ್ತಾರೆ (೩) ವೀರಶೈವ ಜಾತ್ರೆಗಳ ಸುಧಾರಣೆಗಾಗಿ ಉಪದೇಶಕರನ್ನು ಕಳಿಸ ದ್ದೆಂದು ಅಭಿಪ್ರಾಯಪಡುತ್ತಾರೆ. (೪) ಸ್ವಮತಾಭಿ ನಿಗಳೆಲ್ಲರೂ ಹಿಂದಾದ ಠರಾವುಗಳನ್ನು ಆಯಾಭಾಗದಲ್ಲಿ ಬಳಕೆಯಲ್ಲಿ ತರುವ ಬಗ್ಗೆ ತಕ್ಕ ಪ್ರಯತ್ನಗಳನ್ನು ಕೈಕೊಳ್ಳ ೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. (೫) ವಯೋಗಮಂದಿರ ಸಂಸ್ಥೆಯು ಬೆಳೆಸ್ಥೆಯಾಯುಗಳುವ ಬಗ್ಗೆ ವರ್ಗದವರೂ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿ ಮೆಂಬರರೂ ಈ ಟ್ಟಾಗಿ ವರ್ಗಣಿಕೊಟ್ಟವರೂ ವಿದ್ಯಾ ರೂ ಶಾಸ್ತ್ರಿಗಳೂ ಸ್ವಮತಸುಧಾರಣ ಪ್ರಯತ್ನ ರೂ ಅಂತು ೧೨೫ ಮೆಂಬರರುಳ್ಳ ಒಂದು ಮಹಾಸಂಘ ಅದರಲ್ಲಿ ೨೫ ಜನರುಳ್ಳ ಮತ್ತೊಂದು ಕಾರ್ಯಕಾರೀ ಸಂ ಏರ್ಪಡಿಸಬಾಗಬೇಕೆಂದು ಸಭೆಯವರು ನಿರ್ಣ ಯಿಸುತ್ತಾರೆ. (೬) ಪ್ರಸ್ತುತಧರ್ಮ ಪರಿಪಾಲನ ಸ್ವಧರ್ಮ ನ್ನತಿಕೆ ಉನ್ನತಿ ಹೊಂದುವ ಉಪಯುಕ್ತ ವಿಷಯ ವಣೆಗೆಯ ಬಗ್ಗೆ ಶಿವಯೋಗಮಂದಿರದಲ್ಲಿ ಶ್ರೀಮನ್ನಿರಂ ಚಿತ್ತರಗಿ ಮಹಾಂತಸ್ವಾಮಿಗಳಸ್ಮಾರಕಕ್ಕಾಗಿ ಶ್ರೀ

ಯಿಂದ ಸ್ಥಾಪಿಸಬೇಕೆಂದು ಈ ಸಭೆಯವರು ನಿರ್ಣಯಿಸು ತ್ತಾರೆ. ಈ ಪ್ರಕಾರ ಠರಾವುಗಳನ್ನು ಪಾಸುಮಾಡಿದ ಮೇಲೆ ಅಧ್ಯಕ್ಷರು ಈ ಸಭೆಯ ಉಪಸಂಹಾರದ ಭಾಷಣ ಮಾಡಿದರು. ಆ ಮೇಲೆ ಸತರ ಮಹಾಂತ ಶಿವಯೋಗ ಸಿದ್ಧಾಲಯದ ಫಂಡನ್ನು ತಾವಾಗಿ ಕೆಲವರು ಕೊಡಲು ಒಪ್ಪಿ ದರು. ಸಭೆಗೆ ಸಹಾಯಮಾಡಿದವರ ಮತ್ತು ಅಧ್ಯಕ್ಷ ಮಹಾಶಯರ ಮತ್ತು ಪ್ರಮುಕೊಡಲೊಪ್ಪಿದ ಮಹನೀಯರ ಆಭಾರವನ್ನು ಮನ್ನಿಸಿ ಈ ಧರ್ಮೋತ್ತೇಜಕ ಸಭೆಯು ಎಲ್ಲ ಗೆ ಉಂಟಾಗಲೆಂದು ಅನನ್ಯಭಾವದಿಂದ ಶ್ರೀಮನ್ನಿರಂಜನ ಜಂಗಮವರ್ಯರನ್ನು ಪ್ರಾರ್ಥಿಸಿ ಸಭೆಯು ಸಮಾಪ್ತ ಮಂಗಲ ವನ್ನಾಚರಿಸಿದರು

ತಾ॥ ೨೦ರಲ್ಲಿ ಮುಂಜಾನೆ ಬೆಳಿಗ್ಗೆ ಸಭೆಯು ಸೇರಿತು. ಆಗ್ಗೆ ಧರ್ಮಗ್ರಂಥಗಳ ಪರೀಕ್ಷೆಯನ್ನು ಕೊಡತಕ್ಕವರನ್ನು ಒತ್ತ ಟ್ಟಿಗೆ ಕೂಡಿಸಿ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಇದ ರಂತೆ ಶಿವಯೋಗ ಸಾಧಕ ಪರೀಕ್ಷೆಯು ತೆಗೆದುಕೊಳ್ಳ ಲ್ಪಟ್ಟಿತು. ಆಗ್ಗೆ ಮಹಾಂತ ಮರಿದೇವರು ಇಷ್ಟಲಿಂಗ ಪೂಜೆ ಣ ವಿಷಯದ ಪಕ್ಕೆ ಕೇಳುವವರ ಮನಸ್ಸಿನಲ್ಲಿ ಪರಿಣಾಮ ವಾಗುವಂತೆ ಸರಳವಾದ ವಾಣಿಯಿಂದ ವ್ಯಾಖ್ಯಾನ ಕೊಟ್ಟ ರು. ಅಲ್ಲಮಪ್ರಭುಸ್ವಾಮಿಯ ಅನುಯಾಯಿಗಳಾದ ಈ ಶಿವಯೋಗಸಾಧಕರು ಶಿವಯೋಗಸಿದ್ಧಿಯನ್ನು ಪಡೆದು ತೀ ವ್ರವೇ ಜಗತ್ತಿನ ಉದ್ಧಾರ ಕೆಲಸಕ್ಕಾಗಿ ಅಲ್ಲಮಪ್ರಭುವಿ ನಂತೆ ಹೊರಬಿದ್ದಾರೆ. ವೀರಶೈವ ಮತ ತತ್ವಗಳು ಇಡೀ ಭೂಮಂಡಲದಲ್ಲಿ ತೀವ್ರವೇ ಪ್ರಸಾರವಾಗುವವೆಂಬ ವಿಷ ಯವು ಎಲ್ಲರ ಮನಸ್ಸಿನಲ್ಲಿ ಪ್ರತಿಬಿಂಬಿಸಿತು. ಮಧ್ಯಾಹ್ನ ಧರ್ಮಗ್ರಂಥ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇನಾ ಮುಗಳು ಹಂಚಲ್ಪಟ್ಟವು, ಅದರ ವಿವರ.—

೧ ಕಾಶೀಮಯ್ಯ ಹಿರೇಮಠ ನಾಲ್ವತ್ವಾಡ-ಪಂಚದಶಿ ೩ ರೂ; ಬಾಗಲಕೋಟಿ ವಿದ್ಯಾರ್ಥಿಗಳು — (೨) ಕಲ್ಯಾ ಣಯ್ಯ ಒಂಟಮುರಿ-ಮಲ್ಲಣ-೨॥ ರೂ; (೩) ಮಹಾಂತ ಮರಿದೇವರು ಒಂಟಮುರಿ-ಶಿವಾನಂದಲಹರಿ-೨॥ ರೂ; (೪) ಶಾಂತಮರಿದೇವರು ಒಂಟಮುರಿ-ಶಿವಾನಂದಲಹರಿ-೨॥ ರೂ; (೫) ಸಿದ್ಧಲಿಂಗದೇವರು ಒಂಟಮುರಿ-ಶಿವಾನಂದಲಹ ರಿ-೩ ರೂ; (೬) ರಾಜಕೋಟಿಮಠ-ಮಲ್ಲಣ ಶಿವಾನಂದಲಹರಿ ೩ ರೂ; (೭) ವಿರೂಪಾಕ್ಷ ಮರಿದೇವರು-ಮಹಿಮ್ನ-೨॥ ರೂ; (೮) ಮಲ್ಲಿನಾಥಯ್ಯ ಮಲ್ಲಣ-೨ ರೂ; (೯) ಚಂ ದ್ರಶೇಖರಯ್ಯ ಕೊಪ್ಪ-ಶತಕತ್ರಯ-೩ ರೂ; (೧೦) ವೀ ರನಗೌಡ ನಿಡಗುಂದಿ-ಶತಕತ್ರಯ ಬಸವಪುರಾಣ-೫ ರೂ; (೧೧) ಶಾಂತವೀರಯ್ಯ ನಿರಾನಿಮಠ ಹುಬ್ಬಳ್ಳಿ-ಶೈವ ಬ್ರಹ್ಮಪದ್ಧತಿ ೬॥ ರೂ; (೧೨) ಸಿದ್ಧಯ್ಯನವರು ಮಾದಿಹಾಳ-ಲಿಂಗಧಾರಣ ವಿಧಿ-೨॥ ರೂ. ಈ ಪ್ರಕಾರ ನಾಲ್ಕನೆಯ ದಿ ವಸದ ಕಾರ್ಯವು ನಡೆದು ಶಿವಯೋಗಮಂದಿರ ಕಮಿಟಿಯ ವಿ ಷಯವಾಗಿ ಆಲೋಚನೆಗಳು ಜರುಗಿದವು ಮತ್ತು ಎಲ್ಲಾ ದೇಶದಿಂದ ಬಂದಂಥ ಜನರು ತಂತಮ್ಮ ಗ್ರಾಮಗಳಿಗೆ ತೆರ ಳಿದರು

ಶ್ರೀಮದ್ಬಾದಾಮಿ ಪ್ರತಿನಾಮ ಬಾಳೆಹೊನ್ನೂರು ಸಂ ಸ್ಥಾನಮಠದಲ್ಲಿ ಜಗದ್ಗುರು ರುದ್ರಮುನೀಸ್ವಾಮಿ ರಥೋತ್ಸವ ಸಮಾರಂಭವು

ವಿರೋಧಿಕೃತ್ ನಾಮಸಂವತ್ಸರದ ಫಾಲ್ಗುಣ ಶುದ್ಧ ೧೫ ಸ್ಥಿರವಾರ ಸೂರ್ಯೋದಯವಾದ ೨೫ ಘಟಿಕೆಕ್ಕೆ ಸ ಲ್ಲುವ ಅಭಿಜಿ ಮುಹೂರ್ತದಲ್ಲಿ ರಥಾರೋಹಣಕ್ಕೋಸ್ಕ ರ ಸರ್ವರೂ ಸ್ಥಾನಮಠಿಯಿಂದ ಮಹಸ್ವಾಮಿಯವರ ಸ ವಾರಿಯನ್ನು ಬಿಜಯಂಗೈಸಿಕೊಂಡು ಸಮಸ್ತ ವಿರುದಾ ವಳಿಗಳಿಂದಲು ಸ್ತುತಿಪಾಠಕರ ಜಯಧ್ವನಿಗಳಿಂದಲು ವೇ ದಘೋಷದಿಂದಲು ವಾದ್ಯಸಂದಣಿಯಿಂದಲು ಭಕ್ತರ ಕಿ ತಿಣಿಯಿಂದಲು ಉಭಯಪಾರ್ಶ್ವದಲ್ಲಿ ಶೋಭಿಸುವ ಪಟ್ಟಚಕ ಮೂರ್ತಿಗಳ ಮಧ್ಯದಲ್ಲಿ ಶ್ರೀ ಮುಕ್ತಿಮುನೀಶ್ವರಸ್ವಾಮಿಯ ವರ ಶಿವಯೋಗಮಂಟಪಕ್ಕೆ ದಯಮಾಡಿಸಿ ಮಂಗಳಾರತಿ ಯನ್ನು ಸ್ವೀಕರಿಸಿಕೊಂಡು ಶ್ರೀ ರುದ್ರಮುನೀಶ್ವರಸ್ವಾಮಿಯ ವರ ದೇವಸ್ಥಾನಕ್ಕೆ ದಯಮಾಡಿ ಆ ಶಿವ ಅಲ್ಲಿ ನಡೆಯತ ಕ್ಕಂಥ ವಿಧಿಗಳನ್ನು ಪರಾಂಬರಿಸಿ ಮಹಾಮಂಗಳಾರತಿಯು ಸ್ವೀಕರಿಸಿದನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ಬಿಜಯಂಗೈಸಿಕೊಂಡು ಮಹಾರಥದ ಬಳಿಗೆ ದಯಮಾಡಿಸಿ ಅಲ್ಲಿ ನಡೆಯಬೇಕಾದ ಕಾರ್ಯಗಳನ್ನು ನಡಿಸಲು ಅಪ್ಪಣೆಯಿ ತ್ತು ನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ರಥಾರೋಹಣಗೈಸಿ ಮಹಸನ್ನಿಧಿಯಿಂದ ರಥಕಾಣಿಕೆಯ ನ್ನು ಸಮರ್ಪಿಸಿದನಂತರ ಪಟ್ಟಚರಮೂರ್ತಿಗಳು ಶಿವಾ ಧಿಕಾರಿಗಳು ಸುಭೆದಾರ್ರು ವಿದ್ವಾಂಸರು ತಾಲ್ಲೂಕ ಇಲಾಖಾ ದಾರರು ಮರ್ಚಂಟರು ಭಕ್ತಾದಿಗಳೆ ಮೊದಲಾದ ನೆರೆದ ಜನ ರೆಲ್ಲ ಕಾಣಿಕೆಯನ್ನು ಒಪ್ಪಿಸಿದನಂತರ ವಾದ್ಯಗಳ ಘೋಷಗಳು ತ್ತಿರಲು ಮಹಾರಥವು ಕಿಂಚಿತ್ತು ದೂರ ಸಾಗಿದರಲ್ಲೆ ಸಾಗಿಸಲ್ಪ

ವರ್ಗದವರಿಗೂ ಭಕ್ಷ್ಯಭೋಜ್ಯಗಳಿಂದ ಮಹಾಸಂತರ್ಪಣೆಯಾಗಿ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಈ ದಿನ ರಾತ್ರಿ ೩ ಘಂಟೆ ಸಮಯದಲ್ಲಿ ಮಹಸ್ವಾಮಿಯವರ ಸ್ವಾರಿ ಯು ರಥದಬಳಿಗೆ ಯಥಾಮರ್ಯಾದೆಯಿಂದ ದಯಮಾಡಿ ಅಲ್ಲಿ ನೆರದಿದ್ದ ಸಭಾಮಧ್ಯದಲ್ಲಿ ರಚಿಸಿದ್ದ ಅಲಂಕಾರಯುಕ್ತವಾದ ಪೀಠವನ್ನು ಅಲಂಕರಿಸಲು ಶಿವಕಥಾನಂತರ ಸಂಗೀತವು ಪೂರ್ತಿಯಾಗಲು ಪದ್ಧತಿಯಂತೆ ನಾರಿಕೇಳಫಲಗಳು ಸಭಾ ಸದರರಾದ ವೀರಶೈವ ಮಂಡಳಿಗು ಸರ್ಕಾರದವರಿಗು ಶಿಷ್ಯ ಸಮೂಹಗಳಿಗು ಈ ಸೇವೆ ನಾಡಿದವರಿಗು ಕೊಡ ಹಂಚಿ ತಟ ಚಕ್ರಗಳಿಗೆ ಪಾಸಿ ತೋರಿಸಿದನಂತರ ಮಹಸ್ವಾಮಿಯ ವರ ಸವಾರಿಯು ದೇವಸ್ಥಾನದ ಮುಂದಣ ಗಾಳಿ ಉಪ್ಪ ರಿಗೆ ದಯಮಾಡಿ ಪದ್ಧತಿಯಂತೆ ರಥವು ಸಂಪಿಗೆ ಕಟ್ಟೆವರಿ ಗೆ ಸಾಗಿ ಈ ಕಲಿ ೨೫ ಭಾನುವಾರ ಬೆಳಗಿನ ಏಳುಘಂಟೆಗೆ ಸ್ವಸ್ಥಾನಕ್ಕೆ ನೆಲೆಯಾಗಿ ನಿಲ್ಲಿಸಲ್ಪಟ್ಟಿತು. ತದನಂತರ ರುದ್ರ ಮುನಿಸ್ವಾಮಿಯ ಉತ್ಸವಮೂರ್ತಿಯು ದೇವಸ್ಥಾನ ಪ್ರವೇಶಿಸಿ ವಿಧವತ್ತಾಗಿ ಶಮನೋತ್ಸವವು ಆ ದಿನ ಸಾಯಂ ಕಾಲ ಐದು ಘಂಟೆಗೆ ಉತ್ಸಾಹೋತ್ಸವವು ನಡದು ತದನಂ ತರ ಶ್ರೀ॥ ರುದ್ರಸ್ವಾಮಿ ದೇವಸ್ಥಾನದ ಪೂರ್ವಭಾಗದ ಚಂ ದ್ರಶಾಲೆಯಲ್ಲಿ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿತು. ಈ ಸಭೆಯಲ್ಲಿ ಶ್ರೀ ಹೊನ್ನಾಳಿಮಠದ ಚೆನ್ನ ವೀರಸ್ವಾಮಿಗಳು, ತರೀಕೆರೆ ತಾಲೂಕು ಹಣೆಮಠದ ಕರಿ ಸಿದ್ಧಸ್ವಾಮಿಗಳು, ದೊಡ್ಡಗಣಿ ಒಪ್ಪದ ಗುರುಲಿಂಗಸ್ವಾ ಮಿಗಳು, ಮೂಡಗೆರೆ ಮಠದ ಚರಮೂರ್ತಿ ಶಾಂತವೀರ ಸ್ವಾಮಿಗಳು ಮೊದಲಾಗಿ ಅನೇಕ ಪಟ್ಟಚರಮೂರ್ತಿಗಳೂ ಮತ್ತೆ ರಾ॥ ಸ್ಥಾನದ ಎಜುಕೇಷನಲ್ ಸೂಪರಿಂಟೆಂಡೆಂಟ್ ಯಾದಿ ಹಳ್ಳಿ ಇಂಗಳಗೊಂಡ ಕಾಂತಪ್ಪನವರು ಪ್ರೊಬೆಷನರಿ ಡೆಪ್ಯುಟಿ ಕಮಿಷನರ್ ವೀರಪ್ಪಯ್ಯನವರು, ಮತ್ತೆ ರಾ॥ ಹಂಸಾಕೂರು ರುದ್ರಪ್ಪಶೆಟ್ಟರು, ರಾ॥ ರಾ॥ ಬೆಲಗೂರು ಚನ್ನಬಸಪ್ಪಶೆಟ್ಟ ರು ಮೊದಲಾದ ದೊಡ್ಡಮನುಷ್ಯರುಗಳು ನೆರೆದಿದ್ದರು.

ಶ್ರೀ ದೊಡ್ಡಗುಣಿ ಪಟ್ಟದಸ್ವಾಮಿಗಳ ಭಾಷಣವು.

ಭೋ ಪೀಠಾಚಾರ್ಯ ಗುರುವರ್ಯರೆ!

ಬಾಳೆಹೊನ್ನೂರು ಸಂಸ್ಥಾನಮಠದಲ್ಲಿ ಅನಾದಿಯಿಂದ ನಡೆಯುವ ಶ್ರೀ ರುದ್ರಮುನೀಶ್ವರ ಸ್ವಾಮಿಗಳ ರಥೋತ್ಸವ ವನ್ನು ನೋಡಿ ಮಹದಾನಂದವುಂಟಾಗಿ ಇವರ ಮಹತ್ವಗಳ ನ್ನು ಮತ್ತೂ ಇವರೇ ಮೊದಲಾದ ಪಂಚಾಚಾರ್ಯರ ಉತ್ಪ ತ್ತಿಯನ್ನು ನಿಮಗೆ ತಿಳಿದಮಟ್ಟಿಗೆ ಉಪನ್ಯಾಸಮಾಡಬೇಕಾಗಿ ಇಚ್ಛಿಸುತ್ತೇನೆ. ಸರ್ವರೂ ಕೇಳಿ ಹಂಸಕ್ಷೀರನ್ಯಾಯದಂತೆ ಗುಣಗ್ರಾಹಿಗಳಾಗಬೇಕಾಗಿ ನನ್ನ ಕೋರಿಕೆ. ಅನಾದಿಯ ಲ್ಲಿ ಪರಮೇಶ್ವರನು ಕೈಲಾಸದಲ್ಲಿ ಸಭೆಯನ್ನು ಮಾಡಿಕೊಂ ಡಿರಲಿಕ್ಕಾಗಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ ವಿಶ್ವಕರ್ಣರೆಂಬ ತನ್ನ ಗಣಗಳು ಭೂಲೋಕವರಾದ ಇವರುಗ ಳನ್ನು ಕುರಿತು "ನೀವು ಭೂಲೋಕಕ್ಕೆ ಹೋಗಿ ವೀರಶೈವ ಮತವನ್ನು ಸ್ಥಾಪನಮಾಡಬೇಕಾಗಿ ಅಪ್ಪಣೆಮಾಡಿದ್ದಕ್ಕೆ ಈಗ ವಿಚಾರಮಾಡಿದಿರಿ" ಎನ್ನಲು ಅದಕ್ಕೆ ಅವರು ಹೇಳಿ ದ್ದು "ನಾವು ಭೂಲೋಕಕ್ಕೆ ಹೋಗಿ ನೋಡುವಲ್ಲಿ ಪರ್ವ ತ, ಗಿರಿ, ನದಿ ಇವುಗಳ ಸಮುದಾಯವೇ ಹೊರತು ಯಾ ರೂ ಇರಲಿಲ್ಲ" ಅನಂತರ ತಮ್ಮ ಮಂತ್ರವನ್ನೇ ವಿಶಾಗ್ನಿಚ ತ್ತದಿಂದ ಸ್ಮರಿಸಲು ನನ್ನ ರೂಪಿನ ಸದ್ಭಕ್ತರಾದ ಏಳರು ಮಂತ್ರಶಕ್ತಿಯಿಂದ ಉತ್ಪನ್ನರಾದರು. ಆಗ ಅವರಿಗೋಸ್ಕ ರ ಶಕ್ತಿಸಂಸ್ಕಾರವನ್ನು ಪಾಲಿಸಿದನು. ಅದರಿಂದ ಏಳರು ಸ್ತ್ರೀಯರು ಉತ್ಪನ್ನರಾದರು. ಅವರಿಗೆ ಲಿಂಗಧಾರಣೆ ಯನ್ನು ಮಾಡಿ ವೀರಶೈವ ಮತದ ಆಚರಣೆಯನ್ನು ಬೋಧಿ ಸಿ ಅವರಿಗೆ ಸಂಬಂಧವನ್ನು ಮಾಡಿಸಿದೆವು. ನಾವು ಗುರುವಾ ಗಿ ಜ್ಞಾನಬೋಧೆಯನ್ನು ಮಾಡುತ್ತ ಇರುವವಲ್ಲಲ್ಲೇ ಅನೇಕ ಜನರು ಉತ್ಪನ್ನರಾದರು. ಅವರಿಗೂ ಲಿಂಗಧಾರ ಣೆಯನ್ನು ಮಾಡಿ, ಉಪದೇಶವ ನ್ನಿಯುತ್ತಾ ಬಂದುದರಿಂ ದ ನಾಲ್ಕು ದಿಕ್ಕಿಗೂ ವೀರಶೈವರೇ ತುಂಬಿಕೊಂಡು ಸದಾಶಿವ ಪೂಜಾಧುರೀಣರಾಗಿದ್ದಾರೆ" ಎನ್ನಲು ನಾವು ಇನ್ನುಮೇ ಲೆ ಸನ್ನಿಧಿಯಲ್ಲಿ ಸೇವಾ ಮಾಡಿಕೊಂಡಿರುತ್ತೇವೆಂದು ಹೇಳ ಲು, ಇನ್ನು ಮುಂದೆ ಒಂದೊಂದು ಯುಗದಲ್ಲಿ ಒಂದೊಂದು ಹೆ ಸರನ್ನು ಪಡೆದು ಪುನಃ ಭೂಲೋಕಕ್ಕೆ ಹೋಗಿ ವೀರಶೈವ ಮತವನ್ನು ವೃದ್ಧಿಗೊಳಿಸಬೇಕಾಗಿ ಅಪ್ಪಣೆಯಾದಂತೆ ಕೃತಯುಗದಲ್ಲಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ, ವಿಶ್ವಕರ್ಣ ರೆಂಬವರಾಗಿಯೂ, ತ್ರೇತಾಯುಗದಲ್ಲಿ ಏಕಾಕ್ಷರ, ದ್ವ್ಯಕ್ಷರ ತ್ರಿಯಕ್ಷರ, ಚತುರಕ್ಷರ, ಪಂಚಾಕ್ಷರ ಎಂಬುದಾಗಿಯೂ, ದ್ವಾಪರಯುಗದಲ್ಲಿ- ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತು ರ್ಮುಖ, ಪಂಚಮುಖ ರೆಂಬುದಾಗಿಯೂ, ಕಲಿಯುಗದಲ್ಲಿ- ರೇಣುಕಾರಾಧ್ಯ, ಪಂಡಿತಾರಾಧ್ಯ, ಏಕೋರಾಮೇಶ್ವರ, ಮರು ಳಸಿದ್ದೇಶ್ವರ, ವಿಶ್ವಾರಾಧ್ಯರೆಂಬುದಾಗಿಯೂ ಹುಟ್ಟಿದ ಕ್ರ ಮ ಹೇಗೆಂದರೆ- ಏಕೋರಾಮೇಶ್ವರರು ಹಿಮಾಲಯದ ಲ್ಲಿ ಹುಟ್ಟಿ ಸುಧಾಕುಂಡದೊಳು ಸೇರಿರಲು ಶಿವಾಜ್ಞಾನಮಾಡಿ

ದರು ಮರುಳಸಿದ್ಧೇಶ್ವರರು 'ಪಶ್ಚಿಮದ್ವಾರ'ದ ಸಿದ್ಧೇಶ್ವರಲಿಂಗದಲ್ಲಿ ಜನಿಸಿ ಉಜ್ಜಯಿನಿಯಲ್ಲಿ ಸಿಂಹಾಸನಾಧೀಶರಾದರು. ವಿಶ್ವಾರಾಧ್ಯರು ಕಾಶಿ ವಿಶ್ವೇಶ್ವರಲಿಂಗದಲ್ಲಿ ಆವಿರ್ಭವಿಸಿ ಕಾಶಿಯಲ್ಲಿ ಸಿಂಹಾಸನಾರೂಢರಾದರು. ಶ್ರೀಪಂಡಿತಾರಾಧ್ಯರು ... ಸಿದ್ಧೇಶ್ವರರು ಪರಮೇಶ್ವರನ ಅಪ್ಪಣೆಯಂತೆ ಶ್ರೀಶೈಲದ ಉತ್ತರ ಭಾಗದಲ್ಲಿರುವ ಕೈಲಾಸವೆಂಬ ಮಲ್ಲಿಕಾರ್ಜುನಲಿಂಗದಲ್ಲಿ ಉದ್ಭವಿಸಿ ಶಿವಾಚಾರ ಮಾರ್ಗವಾಗಿ ಮೆರೆಯಿಸಿ ಅಗಸ್ತ್ಯರಿಗೆ ಜ್ಞಾನಬೋಧೆಯನ್ನು ಮಾಡುತ್ತಾ ಆ ಕಾಲದಲ್ಲಿ ಸಂಚಾರಮಾಡಿ ಅನೇಕ ಮಹಾತ್ಮರನ್ನು ನೆರೆದು, ಬೆಳವಣಿಗೆಯಲ್ಲಿ ತುಂಬಿದ್ದ ಪರವಾದಿಗಳನ್ನು ಸದೆದು ನಿರ್ಮೂಲಮಾಡಿದಂತೆ ಬಂದೆಳೆ ಮಾಡಿ ಏಕಕಾಲದಲ್ಲಿ (ಸಿದ್ಧರಾಮನ ಮಹಾತ್ಮ್ಯ ದೇಶದಲ್ಲಿ) ಎಂಬಂತೆ ಉಳಿದ ಮೂರು ಕೋಟಿ ಲಿಂಗಗಳನ್ನು ಪ್ರತಿಯೊಂದು ಶಿವಾಲಯದಲ್ಲಿ ತಾನೇ ಇದ್ದು ಕೊಂಡು ಶಿವಲಿಂಗ ಸಂಸ್ಕಾರವೆಂಬ ಯೋಗದಿಂದಲೂ ... ವಿಭೂತಿ ... ಆಶೀರ್ವದಿಸಿ, ಈ ಪುಣ್ಯಕ್ಷೇತ್ರಕ್ಕೆ ದಯಮಾಡಿಸಿ ಇಲ್ಲಿ ಉಳಿಗಾಗಿದ್ದ ಭಾಗಕರ್ಮಗಳನ್ನು ಕಳೆದು ಜೊತೆಯಲ್ಲಿ ನೋಡಿದ್ದ ಶ್ರೀ ವೀರಭದ್ರಸ್ವಾಮಿಯ ಸನ್ನಿಧಿಯಲ್ಲಿ ಇಟ್ಟುಕೊಂಡು ಇಲ್ಲಿ ಪುನಃ ನೆಲಸಿದ್ದರಿಂದ ಈ ಸ್ಥಳಕ್ಕೆ ರಂಭಾಪುರಿ ಎಂಬುದಾಗಿ ಅಥವಾ ಬಾಳೆಹೊನ್ನೂರೆಂಬುದಾಗಿ ಹೆಸರಾಯಿತು. ನಂತರ ರೇಣುಕರು ಇಲ್ಲಿ ಮಠಸ್ಥಾಪಿಸಿ ತಮ್ಮ ಗರ್ಭಜಾತರಾದ ಶ್ರೀ ರುದ್ರಮುನೀಶ್ವರರಿಗೆ ಪಟ್ಟಾಭಿಷೇಕವ ಮಾಡಿ ತಮ್ಮ ಮಠಸ್ವಾಮ್ಯ ಇಲ್ಲಿ ನಡೆಸುವಂತೆ ಆಶೀರ್ವದಿಸಿ ದಯಮಾಡಿಸಿದರು. ಅವ್ಯಾಹತ ಪರಂಪರೆ ನಡೆಯುತ್ತಾ ಇದೆ. ತತ್ಸಂಬಂಧವಾದ ಪದ, ಆಚಾರ್ಯಾಧಿಕಾರಿಗಳ ಒಬ್ಬೊಬ್ಬರ ಮಹತ್ವವನ್ನು ಎಷ್ಟು ಸಿದ್ಧಿಸಿದರೂ ತೀರದ್ದಾಗಿದೆ. ಈ ರಂಭಾಪುರೀಶರ ಬಡಗಿ ... ಶ್ರೀ ಸನ್ನಿಧಿಯು ಅಪ್ಪಣೆಕೊಡುವವರಿಗೆ ಇಲ್ಲಿಗೆ ಪೂರ್ತಿಮಾಡಿದ್ದೇನೆಂದು ನನ್ನ ವಿನಂತಿಯು.

ಚೊನ್ನವಳ್ಳಿ ಮಠದ ಶ್ರೀ ಷಟ್ಸ್ಥಲ ಚನಮಲ್ಲಸ್ವಾಮಿಗಳ ಉಪನ್ಯಾಸವು — ಪರಮಪೂಜ್ಯರಾದ ಸಿಂಹಾಚಾರ್ಯರೇ! ಈ ಮಹಾಸಭೆಯಲ್ಲಿ ವಿದ್ಯಾವಿಷಯವಾಗಿ ಉಪನ್ಯಾಸಮಾಡಲಿಚ್ಛೈಸಿರುವೆನು. ಇದರಲ್ಲಿರತಕ್ಕ ನ್ಯೂನಾತಿರೇಕಗಳಿಗೆ ಕ್ಷಮಾಪಣೆಯನ್ನು ಬೇಡುವೆನು. ॥ಗ್ರಂ॥ ಮಾತೇವರಕ್ಷತಿ ಪಿತೇವಹಿತೇನಿಯುಂಕ್ತೇ । ಕಾಂತೇವಚಾಭಿರಮಯತ್ಯಪನೀಯಖೇದಂ ॥ ಕೀರ್ತಿಂಚದಿಕ್ಷುವಿತನೋತಿ ತನೋತಿ ಲಕ್ಷ್ಮೀಂ । ಕಿಂಕಿಂನಸಾಧಯತಿ ಕಲ್ಪಲತೇವ ವಿದ್ಯಾ ॥ ಇಂತಹ ವಿದ್ಯೆಯನ್ನು ಪ್ರತಿಯೊಬ್ಬ ವೀರಶೈವನೂ ಕಲಿತ ಹೊರತು ಮುಂದಕ್ಕೆ ಬರಲಾರನೆಂಬ ವಿಷಯವು ಅನೇಕರಿಗೆ ... ಶಾಲೆಗಳನ್ನು ಸ್ಥಾಪಿಸಿ ಕಾಲೇಜು ವ್ಯಾಸಂಗಮಾಡಿಸುತ್ತಾ ಇದ್ದಾರೆ. ನಮ್ಮ ಶ್ರೀಮದ್ರಂಭಾಪುರಿ ಜಗದ್ಗುರು ವೀರಸಿಂಹಾಸನಾಧೀಶ್ವರ ಶ್ರೀ ... ಮಹಾಸ್ವಾಮಿಯವರ ಅಪ್ಪಣೆ ಮೇರೆಗೆ ... ಶ್ರೀಮಂತ ಪತ್ರೇ ವೀರಪ್ಪನವರು, ಮೈಸೂರು ... ಶಾಂತಪ್ಪನವರು ಮೊದಲಾದ ವೀರಶೈವ ಮಹನೀಯರು ಫಂಡನ್ನು ಕೂಡಿಸಿ, ಸಂಸ್ಕೃತ ಪಾಠಶಾಲೆಯನ್ನು ಇಡಿಸಿ ನಾಲ್ಕರು ವರ್ಷಗಳು ನಡೆಯಿಸಿ ವಿದ್ಯಾರ್ಥಿಗಳಿಗೆ ಅನುಕೂಲತೆ ಕೊಡುತ್ತಾ ಇದ್ದರು ಸರಿಯಷ್ಟೆ. ಈಗ ವಿಶ್ವ ... ದಿಂದ ಪ್ಲೇಗಿನ ಹಾವಳಿಯಿಂದ ಆರು ತಿಂಗಳು ಅಥವಾ ಆರು ತಿಂಗಳು ವಿರಾಮ ಹಿಂಗಾಗಿ ಕೊರತೆಯುಂಟಾಗಿದೆ. ಇದಕ್ಕೆ ಪರಿಹಾರ ಅಂದರೆ ಗಲಾಟೆ ... ಲವಲ್ಲದೆಯೂ ಕೊನೆ ಮೇರೆ ಇನ್ನು ಅಧ್ಯಯನವು ನಡೆಯುವಂತೆ ಮಹಾಸನ್ನಿಧಾನದಿಂದ ಯಾತಿಸಾಧದ ... ಏರ್ಪಾಡನ್ನು ಮಾಡಿ ಅನುಕೂಲತೆ ಪಡಿಸಿ ಕೊಡಬೇಕೆಂದು ಪ್ರಾರ್ಥಿಸಿ ಪಾಠಶಾಲಾ ಎಂದು ಮೊದಲು ಇಟ್ಟಿರತಕ್ಕ ಅಭಿಪ್ರಾಯವು ಶಾಶ್ವತವಾಗಿ ನಡೆಯುವಂತೆ ಅಪ್ಪಣೆ ಮಾಡುತ್ತಾರೆಂದು ನಂಬಿದ್ದೇನೆ.

ತರೀಕೆರೆ ತಾಲ್ಲೂಕು ಅಜ್ಜೆ ಪಟ್ಟದ ಸ್ವಾಮಿಗಳ ಭಾಷಣವು — ಸರ್ವಾಧ್ಯಕ್ಷರೆನಿಸಿಕೊಂಡಿರುವ ಸಿಂಹಾಚಾರ್ಯರೇ! ನಾನು ಲಿಂಗಧಾರಣೆಯ ವಿಷಯವಾಗಿ ಉಪನ್ಯಾಸವನ್ನು ಮಾಡುವೆನು. ಏನಾದರೂ ನ್ಯೂನತೆಯಿದ್ದರೆ ಎಣಿಸದೆ ವಿಷಯಗ್ರಹಣಮಾತ್ರಕ್ಕಾಗಿ ನನ್ನ ವಿನಂತಿಯು. ಲಿಂಗಧಾರಣೆಯು ವೇದೋಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವುದರಿಂದ ಅನಾದಿಕಾಲದಿಂದ ನಡೆದು ಬಂದುದೇ ಹೊರತು ಇತ್ತೀಚಿನದಾಗಿ ಬಂದುದಲ್ಲವೆಂಬುದಾಗಿ ಸಕಲರಿಗೂ ಸ್ಪಷ್ಟವಾಗಿರುವುದು. ಆದರೂ ಸಂಕ್ಷೇಪವಾಗಿ ತಿಳಿಸಲಪೇಕ್ಷೆಯುಳ್ಳದ್ದರಿಂದ ವೇದ, ಉಪನಿಷತ್ತು, ಸ್ಮೃತಿ, ಪುರಾಣ ಇತಿಹಾಸ ಮುಂತಾದ ಗ್ರಂಥಗಳಲ್ಲಿ ಹೇಳಿದ ವಿಷಯವನ್ನು ಕ್ರಮವಾಗಿ ಹೇಳಲಿಚ್ಛಿಸುತ್ತೇನೆ. ಋಗ್ವೇದದಲ್ಲಿ— "ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ" ಎನ್ನುವ ಪಾಠವಿದೆ! ನಿನ್ನ ಲಿಂಗರೂಪವು ಇಷ್ಟ, ಪ್ರಾಣ, ಭಾವವೆಂದು ತ್ರಿವಿಧರೂಪವಾಗಿರುವುದು. ಮತ್ತು ಅಖಂಡಸ್ವರೂಪನಾದ ನೀನು ಇಷ್ಟಲಿಂಗರೂಪಿಯಾಗಿ ಸಕಲ ಶಿವಭಕ್ತರ ಮಸ್ತಕ, ಕಂಠ, ಕಕ್ಷ, ವಕ್ಷಸ್ಥಲ ಮೊದಲಾದ ಭಾಗಗಳಲ್ಲಿ ವಾಸಿಸುವೆ. ಮತ್ತು ಈ ಲಿಂಗವನ್ನು ಪೂರ್ವಜನ್ಮದಲ್ಲಿ ತಪಸ್ಸು ಮಾಡಿದವರು ಅಲ್ಲದವರು ಧರಿಸಲಾರರು. ಪೂರ್ವದಲ್ಲಿ ಅನೇಕ ತಪಸ್ಸನ್ನು ಮಾಡಿದವರು ಪರಬ್ರಹ್ಮಸ್ವರೂಪವಾದ ಲಿಂಗವನ್ನು ಧರಿಸಲು ಯೋಗ್ಯರಾಗುತ್ತಾರೆ ನಿಮ್ಮ ಕೋಟಿ ಅನೇಕ ಕಾಲಗಳಲ್ಲಿ ಕೂಡ ಧರಿಸತಕ್ಕದ್ದೆಂದು ಋಗ್ವೇದದಲ್ಲಿ ಹೇಳಿರುವುದು. 'ಅಯುಕ್ತ್ಯೈ ಅನಿಷ್ಟಭಗರ್ಭೇ ಅಯುಷ್ಯೈ ಭಗವತ್ಪತಯೇ' ಇತ್ಯಾದಿ ಯಜುರ್ವೇದವ ವಚನದಿಂದ ಅತಿ ಯೋಗ್ಯವನ್ನು, ಈ ಇಷ್ಟಲಿಂಗರೂಪಿಯಾದ ನನ್ನನ್ನು ಸ್ವೀಕರಿಸಿ ರೋಗಗಳನ್ನು ಹೋಗಲಾಡಿಸುವಲ್ಲಿ ವೈದ್ಯನು, ಇದನ್ನು ಶಿರಸ್ಸಿನಲ್ಲಿಟ್ಟು ಪೂಜಿಸಬೇಕೆಂದು ಯೋಗ್ಯತೆಯು. ಯಜುರ್ವೇದದಲ್ಲಿ— 'ಯಾತೇರುದ್ರಶಿವಾತನೂ ಶಿವಾ ವಿಶ್ವಾಹ ಭೇಷಜೀ' ಎಂಬ ಪ್ರಮಾಣಾನುಸಾರವಾಗಿ ಸ್ಥೂಲಸ್ವರೂಪವಾದ ಶಿವಲಿಂಗವ ಎಲ್ಲ ಪರಶಿವನ ನಿಷ್ಕಳ ಮಂಗಳ ಸ್ವರೂಪವಾದ ಶಿವಲಿಂಗವನ್ನು ಸಾರ್ವರಾ ಧರಿಸಲೇಬೇಕೆಂದು ಸಿದ್ಧವಾಯಿತು. ಶ್ವೇತಾಶ್ವತರೋಪನಿಷತ್ತಿನಲ್ಲಿ— 'ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ । ಸರ್ವವ್ಯಾಪೀ ಸ ಭಗವಾನ್ ತಸ್ಮಾತ್ ಸರ್ವಗತಃ ಶಿವಃ' ಸಕಲರಿಂದ ಪೂಜ್ಯನಾದ ಪರಶಿವನು ಸಮಸ್ತ ಪ್ರಾಣಿಗಳ ಶಿರಸ್ಸು ಮೊದಲಾದ ಸ್ಥಾನಗಳಲ್ಲಿ ವಾಸವಾಗಿರುವನು. ಆದುದರಿಂದ ಲಿಂಗಧಾರಣೆಯು ಮುಖ್ಯವಾದುದು. ಕೆಲವರು ಲಿಂಗವನ್ನು ಸರ್ವದಾ ಧರಿಸದೆಯೂ, ಕೆಲವರು ಜನಿವಾರದಂತಾಗಿ ಉದ್ದಕ್ಕೆ ಬಿಟ್ಟುಕೊಂಡು ಕೆಲವರು ... ಸಿಕ್ಕಿಸಿಕೊಂಡಿಯೂ ಇರುತ್ತಾರೆ. 'ನಾಭೇರಧೋ ಲಿಂಗಧಾರೀ ಪಾಪಾನ್ಮನುಸಯುಕ್ತಃ । ನಾಭೇರ್ಲಿಂಗಧಾರೀಚ ಸೌಭಾಗ್ಯಸ್ತ ... ವಿವರ್ಧನಂ' ನಾಭಿಯ ಕೆಳಭಾಗಕ್ಕೆ ಲಿಂಗವನ್ನು ಧರಿಸುವವನು ಪಾಪಿಷ್ಟನಾಗುವನು. ನಾಭಿಯ ಮೇಲ್ಭಾಗದಲ್ಲಿ ಉಕ್ತಸ್ಥಾನದಲ್ಲಿ ಧರಿಸುವವನು ಸೌಭಾಗ್ಯಜ್ಞಾನಸಂಪತ್ತುಯುಕ್ತನ್ನು ಪಡೆಯುತ್ತಾನೆ. ಆದುದರಿಂದ ಮಹನೀಯರೆಲ್ಲರೂ ಸರಿಯಾದ ಆಚರಣೆಯಲ್ಲಿ ಇರಬೇಕಾಗಿ ನನ್ನ ಕೋರಿಕೆ.

ಮ॥ ರಾ॥ ಕೋಡಚವಾಸೆಟ್ಟಿ ಹುಲುಕೂರು ಇವರ ಭಾಷಣ — ಶ್ರೀ ಗುರುವರ್ಯರೇ ಸಭಾಸದರೇ! ನಾನು ಅರಿಕೆ ಮಾಡಿಕೊಳ್ಳುವದೇನೆಂದರೆ— ವೀರಶೈವರಲ್ಲಿ ಕನ್ಯಾವಿಕ್ರಯ ಮಾಡುವ ಕೆಲವು ಪಾಪಿಗಳು ಅವರವರ ಶಕ್ತ್ಯಾನುಸಾರವಾಗಿ ವರನಿಗೆ ವರದಕ್ಷಿಣೆಕೊಟ್ಟು ಕನ್ಯಾದಾನಮಾಡುವದು ಉತ್ತಮವಾದದ್ದು. ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳನ್ನು ವಿಕ್ರಯಿಸುವದಾದರೂ ಉದರಭರಣಕ್ಕಾಗಿ ಮಾಡತಕ್ಕ ಘೋರಕೃತ್ಯವೇ ಸರಿ. ಮನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳನ್ನು ಸಾಕ್ಷಾತ್‌ಲಕ್ಷ್ಮಿಯಂತೆ ಕಾಣಬೇಕೆಂದು ನೀತಿಜ್ಞರು ಹೇಳುತ್ತಾರೆ. ಹೀಗಿರುವಲ್ಲಿ ಅಂತಹ ಲಕ್ಷ್ಮಿಯನ್ನು ಮಾರಿಕೊಂಡು ಹೊಟ್ಟೆಹೊರೆಯಬೇಕೆಂದೆಣಿಸುವ ಅಧಮಧಮನಿಗೆ ಲಕ್ಷ್ಮಿಯು ಎಂದಿಗಾದರು ಸ್ಥಿರಳಾಗಿಯಾಳೇ? ಅವನಿಗೆ ದರಿದ್ರಲಕ್ಷ್ಮಿಯೇ ಗತಿ. ಈ ದುಷ್ಟಪದ್ಧತಿಯು ನಮ್ಮ ವೀರಶೈವರಲ್ಲಿ ಬಹಳ ಮಟ್ಟಿಗೆ ಇರುವಂತೆ ತಿಳಿಯಬರುತ್ತದೆ. ಇದು ಬಹಳ ಶೋಚನೀಯವಾದ ಸಂಗತಿಯೆ ಸರಿ. ಈ ಕನ್ಯಾವಿಕ್ರಯ ಪದ್ಧತಿಯಿಂದ ಪ್ರಾಯಶಃ ಚಿಕ್ಕವಯಸ್ಸಿನ ಹೆಣ್ಣುಗಳಿಗೆ ವೃದ್ಧವರನೇ ಸಿಕ್ಕುವದು ವಿಶೇಷ. ಮುದುಕರಿಗೆ ಯೋಗ್ಯರಾದವರು ಯಾರೂ ಹೆಣ್ಣನ್ನು ಕೊಡುವದಿಲ್ಲ. ಆದ್ದರಿಂದ ಮುದುಕರು ಅಪಾರವಾದ ಹಣವನ್ನು ಚೆಲ್ಲಿ ಕೋಮಲಾಂಗಿಯರಾದ ಚಿಕ್ಕ ಕನ್ನೆಯರನ್ನು ಕೊಂಡುಕೊಂಡು ಅವರನ್ನು ಲಗ್ನಮಾಡಿಕೊಂಡು ಸ್ವಲ್ಪಕಾಲದಲ್ಲಿ ಅವರನ್ನು ದುಃಖಕ್ಕೆ ಗುರಿಮಾಡುತ್ತಾರೆ. ಕುನಿ, ಸರ್ಪ, ಮಾರ್ಜಾಲಗಳು, ತಮ್ಮ ತಮ್ಮ ಮರಿಗಳನ್ನು ತಾವೇ ತಿಂದುಬಿಡುತ್ತವೆ. ಈ ದುರ್ವ್ಯಾಪಾರಿಗಳು ಈ ದುಷ್ಟ ಜಂತುಗಳ ಗುಂಪಿಗೆ ಸೇರಬೇಕೆ ಹೊರತು ಮನುಷ್ಯಮಾತ್ರರಲ್ಲ. ಪ್ರಿಯ ಬಾಂಧವರೇ ಈ ಘೋರಕೃತ್ಯವನ್ನು ಎಷ್ಟು ಹೇಳಲಿಕ್ಕೆ ಬಂದರೂ ಸಾಲದ್ದಾಗಿದೆ. ಈ ವಿಷಯದಲ್ಲಿ ಮಹಾಸನ್ನಿಧಿಯಿಂದ ತಕ್ಕ ನಿರ್ಬಂಧವು ಕಲ್ಪಿಸಲ್ಪಡಬೇಕು. ಹಾಗೂ ತಪ್ಪಿ ಕನ್ಯಾವಿಕ್ರಯಮಾಡುವ ಜನಗಳಿಗೆ ತಕ್ಕ ಬಂದೋಬಸ್ತು ಮಾಡಿಸುತ್ತಾರಾಗಿ ನಿರೀಕ್ಷಿಸಿ ನಾನು ಈ ಭಾಷಣವನ್ನು ನನ್ನ ಅಲ್ಪಮತಿಗೆ ತೋಚಿದಷ್ಟು ಹೇಳಿ ಮುಗಿಸಿದ್ದೇನೆ. ಮಹಾಸ್ವಾಮಿ.

ಶಿಕಾರಿಪುರ ತಾ॥ ಇಲಾಖೆದಾರ್ ಬೂದ್ಯಪ್ಪನವರು ಮಾಡಿದ ಉಪನ್ಯಾಸ. ಪರಮಪೂಜ್ಯರಾದ ಗುರುವರ್ಯರೇ, ಸಭಾಧ್ಯಕ್ಷರೇ, ಸಿಂಹಾಚಾರ್ಯರೇ! ನಾನು ಈ ಸಭಾದಲ್ಲಿ ನನ್ನ ಬುದ್ಧಿಗೆ ತೋಚಿದಷ್ಟಕ್ಕೆ ಕೆಲವು ವಿಷಯಗಳನ್ನು ಉಪನ್ಯಾಸಮೂಲಕ ಅರಿಕೆಮಾಡಿಕೊಳ್ಳುತ್ತೇನೆ ಗಮನವನ್ನು ಕೊಟ್ಟು ಲಾಲಿಸಬೇಕೆಂದು ನನ್ನ ವಿನಂತಿ. ಈ ಹಿಂದೆ ಧಾರವಾಡ, ಬೆಂಗಳೂರು, ಸೋಲಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ ಈ ಸ್ಥಳಗಳಲ್ಲಿ ಕೂಡಿದ್ದ ಮಹಾಸಭೆಗಳಲ್ಲಿ ನಡೆದಿರುವ ವಿಷಯಗಳು ಜನರು ತಿಳಿದಿರುತ್ತವೆ. ಅವುಗಳನ್ನು ನಡಿಸಿದ ಮಹನೀಯರು ಪರಮ ಪೂಜ್ಯರು, ದೇಶಾಭಿಮಾನಿಗಳು ಪಂಡಿತವರ್ಯರು, ಕಲೆಕ್ಟರ್ ಮೊದಲಾದ ಸರಕಾರದ ಭಾರಿಉದ್ಯೋಗಸ್ಥರು ಅಲ್ಲದೆ ಸುತ್ತುಮುತ್ತ ಬಿ. ಎ. ಬಿ. ಎಲ್ ಪ್ಯಾಸುಮಾಡಿದ ಸರ್ಕಾರಿ ಉದ್ಯೋಗಸ್ಥರು, ಲಾಯರುಗಳು, ಶಾಸ್ತ್ರಜ್ಞರು, ಸಾಹುಕಾರರು ಮೊದಲು ಕೆಲವು ವಿಷಯಗಳಿಂದ ನಮ್ಮ ವೀರಶೈವ ಸಮಾಜವು ಬೇಗ ಸುಧಾರಣೆಗೆ ಬರುವದು ಸಂದೇಹವಿಲ್ಲವೆಂಬದಾಗಿ ನಂಬಬೇಕಾಗಿದೆ. ಆದ್ದರಿಂದ ನನ್ನ ಕೆ ಏನೆಂದರೆ— ತಮ್ಮ ತಮ್ಮ ಸಭಾಗಳಲ್ಲಿ ನಡೆದ ವಿಷಯವನ್ನು ವೀರಶೈವಮತದ ಜನಾಂಗವಾದ ಪ್ರತಿ ಒಂದು ಪಟ್ಟಣ ಹಳ್ಳಿ ಮೊದಲಾದ ಸ್ಥಳಗಳಲ್ಲಿ ಪ್ರಚಾರಕ್ಕೆ ಬರಲು ಅವರವರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಒಂದೆರಡು ಸ್ಥಳದಲ್ಲಿ ಕೂಡಿ ಮಾತನಾಡಿಕೊಂಡು ಹೋಗಿದು ಹಿಂದಿನಂತೆ ಆಗಿದೆಯೆ ಹೊರ್ತು ಕಿಂಚಿತ್ತಾದರು ಪ್ರಚಾರ ಬರಲಿಲ್ಲ. ಇದಕ್ಕೆ ವ್ಯಸನಪಡಬೇಕಾಗಿದೆ. ಪರಮೇಶ್ವರ ಶಿವಮತೋದ್ಧಾರಕ್ಕೆ ಪಂಚವೀರರೆದವರನ್ನು ಅನಾದಿಕಾಲದಲ್ಲೇ ಅಂದರೆ ಸೃಷ್ಟಿಕಾಲದಲ್ಲೇ ನಿರ್ಮಾಣಮಾಡಿದ್ದಾರೆ. ಆ ಪಂಚಪೀಠದವರಕತೆ ಮಹಾಸಭಾದವರು ಲಕ್ಷ್ಯಕೊಡ ... ಗಳ ಸೈಕೆ ಯಾರನ್ನಾದರು ತಮ್ಮ ಸಭಾಕ್ಕೆ ಅಧ್ಯಕ್ಷರನ್ನಾಗಿ ಮಾಡಿ ತಾವು ಉಪನ್ಯಾಸಮಾಡಿದವುಗಳನ್ನೆಲ್ಲ ನಿಜವಾಗಿ ಆಚರಣೆಗೆ ತರಬೇಕಾಗಿ ವಿನಂತಿಮಾಡಿಕೊಂಡಿದ್ದರೆ ಸದರಿ ವಿಷಯಗಳನ್ನೆಲ್ಲಾ ಒಂದೊಂದು ಸರಕ್ಯೂಲರನ್ನಾದರೂ ಎಲ್ಲಾ ಊರುಗ್ರಾಮಗಳಿಗೂ ಇಲಾಖಾ ಮಾಡಿ ಜಾರಿಮಾಡಿದ್ದಲ್ಲಿ ಇಡಿ ಒಂದೂ ಸ್ಥಾನದ ವೀರಶೈವ ಮತದವರಲ್ಲೆಲ್ಲ ತುಂಬಿ ತುಳುಕಾಡುತಿತ್ತು. ಇಂತಹ ವಿಷಯಕ್ಕೆ ಮಹಾಸಭಾದವರು ಲಕ್ಷ್ಯಕೊಡದೆ ಇರುವದರಿಂದ ಉಪನ್ಯಾಸವು ಆಚರಣೆಗೆ ಬಾರದೆ ಕೆಲವು ಸ್ಥಳಗಳಲ್ಲಿ ವಿನಯಗಳನ್ನು ತಿಳಿಗರೂ ಆಚರಣೆಗೆ ತರಲಿಕ್ಕೆ ನಿರ್ಬಂಧವಾಗಿದೆ. ಪ್ರತಿ ಒಂದು ಕಾರ್ಯದಲ್ಲಿಯು ನಾವು ತೊಡಗುವಾಗ ಶ್ರೀ ಸಿದ್ಧಿವಿನಾಯಕ (ಅಂದರೆ) ಗಣಪತಿ ಪೂಜೆಯಿಲ್ಲದೆ ಇದ್ದರೆ ಯಾವ ಕಾರ್ಯವು ನಿರ್ವಿಘ್ನವಾಗುವದಿಲ್ಲವಾಗಿ ಗಣಪತಿ ಪೂಜೆ ಮೊದಲು ನಡಿಸಬೇಕು. ಸಿಂಹಾಚಾರ್ಯರನ್ನು ಅಧ್ಯಕ್ಷರನ್ನಾಗಿ ಮಾಡದೆ ಮಠತದ್ದರಿಂದ ನ್ಯೂನತೆಗೆ ಕಾರಣವಾಗಿದೆ. ಈ ಹಿಂದೆ ನಡೆದ ಮಹಾಸಭಾದವರ ಅಭಿಪ್ರಾಯಕ್ಕೆ ತಕ್ಕಂತೆ ಅವರು ನಡೆಸಿರುವ ಉಪನ್ಯಾಸಗಳನ್ನು ಪರಂಪರೆಯ ಅಭಿಪ್ರಾಯಕ್ಕನುಸಾರವಾದ ವಿಷಯಗಳನ್ನು ಚುನಾಯಿಸಿಕೊಂಡು ಸಣ್ಣದಾದ ಬಾಸರ್ ಪುಸ್ತಕವಾಗಿ ಏರ್ಪಾಟನ್ನು ಇಸಿಕೊಂಡು ಪ್ರಚಾರಕ್ಕೆ ತಂದರೆ ಮಹಾಸಭಾದವರ ಮನಸ್ಸು ತೃಪ್ತಿಗೂ ಭಾವನವಾಗುತ್ತದಲ್ಲದೆ ವೀರಶೈವ ಮತೋದ್ಧಾರಕ್ಕೆ ಬರುವ ಚಿತ್ತಶುದ್ಧಿ ಬರಲು ಹೆಚ್ಚು ಅವಕಾಶಕೊಟ್ಟಂತೆ ಆಗುತ್ತೆ. ಸಮಸ್ತ ಭಕ್ತವೃಂದಕ್ಕೆ ಜ್ಞಾನವನ್ನು ಸನ್ಮಾನವನ್ನು ತೋರಿಸು ಮಹಾಕಾರ್ಯಕ್ಕೆ ಮನಗೊಡದ ವಿನಹ ಸಮಾಜಸುಧಾರಣೆ ಎಂದಿಗೂ ಆಗಲಾರದು. ಅಲ್ಲದೆ ಒಂದೊಂದು ಸ್ಥಾನದ ಪ್ರಾಂತಿಕಸಭಾ ಮೊದಲಾದವುಗಳನ್ನು ಏರ್ಪಡಿಸಿಕೊಂಡು ಸಮಾಜಸುಧಾರಣೆಗೆ ಪ್ರಯತ್ನಿಸಿದರೆ ಈ ಹಿಂದೆ ನಡೆದ ಮಹಾಸಭಾ ಪ್ರಾಂತಿಕಸಭಾ ಇವುಗಳಲ್ಲಿ ಮಾಡಿದ ವಿಷಯಗಳಲ್ಲಿ ಯಾವುದು ಪ್ರಚಾರಕ್ಕೆ ಬಂತು? ಯೇನೊಂದು ನಯಲ್ಲಿ. ಯಾತಕ್ಕೆ ಸುಮ್ಮನೆ ಸಭಾಗಳನ್ನು ಮಾಡಬೇಕು ಎಂದು ಅನೇಕ ಜನರು ಅಂದುಕೊಳ್ಳುತ್ತಾ ಇರುವರು. ಇದು ಸಾಕ್ಷಿ ಇನ್ನೇನು ತೊಗರ್ಸೆಯಲ್ಲಿ ಪ್ರಾಂತಿಕಸಭಾ ಮಾಡಿದರು. ಕೆರೆಯಲ್ಲಿ ಒಂದು ಪ್ರಾಂತಿಕಸಭಾ ಮಾಡಿದರು. ಶಿರಾಳಕೊಪ್ಪದಲ್ಲಿ ಪ್ರಾಂತಿಕಸಭಾ ಮಾಡಿದರು. ಇವುಗಳಲ್ಲಿ ತೆರೆಗಳು ತೆಗೆದುಕೊಳ್ಳತಕ್ಕದೆಂದು ಪ್ರಚಾರಪಡಿಸಿದರು. ಮದುವೆಗರು ಲಗ್ನಕಾಲದಲ್ಲಿ ಪಲ್ಲಕ್ಕಿ ಅಥವ ದಂಡಿಗೆ ಸತ್ತಕೊಳ್ಳಬೇಕೆಂದು ವಿಧಿಸಿದರು. ಇವುಗಳಲ್ಲೊಂದೂ ಆಚರಣೆಗೆ ಬರಲಿಲ್ಲ. ಆದ್ದರಿಂದ ಜನರಿಗೆ ನಿರ್ಬಂಧವಿಲ್ಲದೆ ಯಾವಕಾರ್ಯವು ನೆರವೇರುವದಿಲ್ಲವಾಗಿ ತೋರುತ್ತೆ. ಸಮಾಜೋನ್ನತಿಯು ಕೆಲಸ ಸ್ವಂತ ಕೆಲಸವೆಂದು ತಿಳಿದು ಹಗಲು ಇರುಳು ಚಿಂತನೆ ಮಾಡುತ್ತಿದ್ದು ಯೋಗ್ಯಕಂಡ ಸುಧಾರಣೆಗಳನ್ನು ದೃಢನಿಶ್ಚಯದಿಂದ ಕೆಲಸಕಾರ್ಯದಲ್ಲಿ ತರುತ್ತಾ ಹೋಗುವಲ್ಲಿ ನಮ್ಮ ವೀರಶೈವ ಸಮಾಜವು ಸ್ವಲ್ಪ ದಿವಸದಲ್ಲಿ ಉನ್ನತಸ್ಥಿತಿಗೆ ಬರುವದಕ್ಕೆ ಸಂದೇಹವಿಲ್ಲ. ಈ ಕೆಲಸವು ಅಂತಿಂಥವರಿಂದ ಆಗತಕ್ಕದ್ದಲ್ಲ ಸನ್ನಿಧಿಯಿಂದಲೇ ಜಾರಿಗೆ ಬರತಕ್ಕದ್ದೆಂದು ಹೇಳಿ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ. (ಸಶೇಷ)

ವಿವೇಕಮಂಜರಿ.

7 ಎನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವವು. ವಿಷಯವಿವೇಚನೆ, ವಾಕ್ಯಾರ್ಥವಿವೇಚನೆ, ವೇಮನೋಹಲಕ್ಷಣ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೆ ಪಾತ್ರವಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೆ ಇದನ್ನೂ ಉಪಾಧ್ಯಾಯರೂ, ಶಾಲೆಗಳ ವಿದ್ಯಾರ್ಥಿಗಳೂ ಇತರರೂ ಸಂಗ್ರಹಿಸುವುದಗತ್ಯವು. ಬೆಲೆ ಬಲುಕಡಿಮೆ.

೧ನೆಯ ಭಾಗ ೦ ಆಣೆ ೧೦೦ ಪುಟಗಳು.
೨ನೆಯ ಭಾಗ ೩ ಆಣೆ ೧೬೦ ಪುಟಗಳು.

ಸವೆಚ್ಚವು ಬೇರೆ.

ಆರ್. ಪ್ಯಾರಾಕೊಳ್ಳಿ ... ಮೈಸೂರು

ದ ಅನೇಕ ಮಹಾಶಯರಿಂದ ಬಹುಮಾನಪಡೆದ

ಎಂ. ಅರ್. ಸುಬ್ಬಾಜೆಟ್ಟಪ್ಪನವರ

ಅತಿಪ್ರಸಿದ್ಧವಾದ ಸುಗಂಧದ್ರವ್ಯಗಳು.

ಕೇಸರವಮಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯು ನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ. ಅಲ್ಲದೆ ಮಿದುಳಿಗೆ ಬಹು ತಂಪಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನೂ ಡಿಸುತ್ತದೆ. ಇದರ ಬೆಲೆ ಸೀಸೆ ೧ ಕ್ಕೆ ೦-೪-೦.

	ರೂ.		ರೂ.
...ಬತ್ತಿ ಸೇ೧ಕ್ಕೆ	೩	ಕಸೂರಿಬಿಲ್ಲೆ ತೊ೧ಕ್ಕೆ	೨
...ಬತ್ತಿ ,,	೪॥	ಜವಾಜಿಬಿಲ್ಲೆ ,,	೧
...ಬತ್ತಿ ,,	೨॥	ಅರಗಜ ,,	೧
...ಬತ್ತಿ ,,	೧	ಸುರಗಿಸೆಂಟ್ ಸೀ೧ಕ್ಕೆ	೧
...ಬತ್ತಿ ,,	।	ಮಾಲತಿಸೆಂಟ್ ,,	॥।

ಎಂ. ಅರ್. ಸುಬ್ಬಾಜೆಟ್ಟಪ್ಪ,

ಕೃಷ್ಣರಾಜ ಮೊಹಲ್ಲಾ, ಮೈಸೂರ್.

ಮೈಸೂರು ಸ್ಟಾರ್ ಚಂದಾನಿರ್ಣಯ.

ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ...ಯಿನಂತೆ ಚಂದಾ ಬೇಕೆಂಬುದಲ್ಲದೆ ಅಂಚೆಯ ವೆಚ್ಚ ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦-೪-೦.

೨ ರಿಂದ ೪ ರವರೆಗೆ ೧-೧೦-೦.

...ಕೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯದರ

...ಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃ... ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ...ನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃ... ...ದ ಪಙ್ಕ್ತಿ ೧ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ...ದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸ...ದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿ...ಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ...ಣವಾಗಿ ದರವು ಬೀಳುವುದು.

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ...ತ್ರವು ಉತ್ತಮವಾದ ಕನ್ನಡಟಿಪ್ಪಣಿಯಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವ... ...ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾ... ...ರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ...ವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ.ಪಿ. ೧-೪-೦ ಸಂಸ್ಕೃತ ...ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣಿಯಿಂದಲೂ ಕೂಡಿದೆ ಸ್ವ... ...ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ...ರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತವೆ. ...ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವ... ...ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ.ಪಿ. ೪ ಆ... ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ...ಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ.ಪಿ. ೧೦ ಆಣೆ. ಇದರಲ್ಲಿ ...ಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ.ಪಿ. ೪ ಆಣೆ. ನಿರಂಜನ ...ಸುಂದರವಾದ ಕನ್ನಡ ಟೀಕಾ ಸಮೇತವಾಗಿದೆ.

...ನೆವಲಿಂಗಸ್ವಾಮಿಗಳು, ಜೋನಮಠ, ಮೈಸೂರು.

೧೯೦೦ ನೆ ಇಸವಿಯ ಪಾಕೆಟ್ಡೈರಿ.

...ದನ್ನು ಬೆಳದು, ನುಣುಪಾದದ್ದು ...ನ ಕ್ಯಾಲಿಕೊ ಎಂಬ ಬಟ್ಟೆಯಿಂದ ...ಅಕ್ಷರ—ಸ್ಪಷ್ಟವಾದದ್ದು.

ಗಳಲ್ಲಿ ಮುದ್ರಣವಾದದ್ದು. (೪) ರಟ್ಟು—ಪ್ರತಿಪುಟಕ್ಕೂ ಮಾಡಿದರೆಳೆಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರಿಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿಂಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

೧. ಚಿಕ್ಕದು ಹೊಸದಕಟ್ಟು ಇದ್ದತಕ್ಕದ್ದು ೩ ಆಣೆ. ೨. ಚಿಕ್ಕದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೫ ಆಣೆ. ೩. ದೊಡ್ಡದು ಹೊಸದಕಟ್ಟು ಇದ್ದತಕ್ಕದ್ದು ೬ ಆಣೆ; ೪. ದೊಡ್ಡದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೮ ಆಣೆ. ಜೇಬಿನ ೧. ಚಿಕ್ಕದು ಹೊಸದಕಟ್ಟು ಇದ್ದತಕ್ಕದ್ದು ೪ ಆಣೆ ಜೇಬಿನ ೨. ಚಿಕ್ಕದು ಹೊಸದಕಟ್ಟು ಇದ್ದು ಮುಚ್ಚಳವುಳ್ಳದ್ದು ೬ ಆಣೆ

ವಿಳಾಸ—ವಿಜಯೇಶ್ವರಿ ಕಂಪನಿ,

ಬೆಂಗಳೂರ ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

೨೪ ಗುಣವಾಗದಿದ್ದರೆ ಹಣವಾಪಸ.

ಮ ದ ನೋ ದ್ಭ ವ ಗು ಳಿ ಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು ಕಿಮ್ಮತ್ತು ೩೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ,

ಜಿಲ್ಲ ಉತ್ತರಕನಡಾ.

ನೋ ಟೀ ಸ್.

೪ ಜಾತಕ ಸುಧಾಕರ

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.— ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವ ಮಾಡಿ ಮರ್ಮವನ್ನು ತಿಳಿಸಲಾರದೆ ಹೋದರು ಪ್ರತ್ಯಕ್ಷ ...ವನ್ನು ಬರ... ತ ಗ್ರಂಥವನ್ನು ರಚಿಸಲಿಲ್ಲ. ಅಂದು ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗಳನ್ನು ಪರಿಶೋಧಿಸಿ ಅಲ್ಪವಿದ್ಯರ ವರಿಗು ಸುಲಭ ...ಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ...ಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಗ್ರಂಥವು ಬಹಳ ಕಿಮ್ಮಿಯಾಗಿರುತ್ತದೆ. ಜಾತಕಸುಧಾಕರಗ್ರಂಥ ೧ಕ್ಕೆ ರೂ ೦-೧೦-೦. ೬ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತದೆ.

ಸಂಪೂರ್ಣಜಾತಕವು.

ಸನ್ಮಿತ್ರರೇ—ತಮ್ಮ ಮಕ್ಕಳಿಗೆ ಸಂಪೂರ್ಣ ಜಾತಕವನ್ನು ತಯಾರುಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಶಿಂಬ್ರುವರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ...ಭಾವಕುಂಡಲಿ ಚಕ್ರಾಧಿ ಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನ ತ್ರಯೋದಶವರ್ಗ ಷಡ್ಬಲಾಂಶಗಳು ಗ್ರಹಗಳವಸ್ಥೆ ಅವಸ್ಥಾಚಕ್ರ ...ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯೋಗಗಳು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿ ದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ದಶಾರಾಶಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತು ಫಲಗಳನ್ನು ...ಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣ ಜಾತಕ ೧ಕ್ಕೆ ಕ್ರಯ ರೂ ೧೦-೦-೦.

ಸಪ್ತ ಜಾತಕವು.

...ತಮ್ಮ ಜನನಕಾಲವು ತಿಳಿಯ... ...ಬರೆಸುವವರು ...

ದುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಈಗ ತಾವು ಮಾಡಿದ ಪ್ರಶ್ನವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಜನ್ಮಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರೆವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦

೧೨ ತಿಂಗಳ ಭವಿಷ್ಯತ್ಫಲ

ಮಹನೀಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಚಿತ್ರಬಂಧವಿಧದಿಂದ ವಾರ್ಷಿಕ ಭವಿಷ್ಯತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ವಿವಿಧ ...ಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು

ಜಾತಕಸುಧಾಕರ ರು ೦-೧೦-೦, ವೀರಶೈವಮತಬೋಧಿನಿ ರು ೦-೪-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಉಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಿಸಿದವರಿಗು ಸುಧಾಕರ ದೊರೆಯುತ್ತದೆ. ಜಾತಸುಧಾಕರ ವೀರಶೈವಮತಬೋಧಿನಿ ಯಾರಾದರು ತರಿಸಿಕೊಳ್ಳುವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ ಯದ್ದಕಿವ್ಯ ... ವಿ. ಪಿ. ಸಹಿತ ಯಿರತ್ತೆ ...

... ...

ಬಳ್ಳಾರಿ

ಸಂತೋಷಕರವಾದ ಪ್ರಕಟಣೆ.

೫ ಬರುವ ಮೂರು ತಿಂಗಳು ಆಖೈರು ವರೆಗೆ ಮಾತ್ರ

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ಇವುಗಳ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬುದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯುಳ್ಳದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಶೀಲು

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಬಂಗಾರದ ವಾಚ್ ಸರಪಣಿ. (2) ಉತ್ತಮ ಪೆನ್ನು. (3) ನಾಜೂಕಾದ ಕಲಮಕತ್ತಿ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನೆ ದ್ರವ್ಯವುಳ್ಳ ಸೀಸೆ (5) ಜೋಕ್ ಉಂಗುರ (6) ಸಮಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಬಂಗಾರದ ಸಾಗರು (8) ಎಲೆಕ್ಟ್ರಿಕ್ ಗಿಲ್ಟು ಕಾಪಂತಿಗೆ ಹೂವು (9) ಸ್ಟೇಂ ಪಿನ್ ಪಿನ್. (10) ಮಕ್ಕಳ ಮಜಾಕಿ ಗೊಂಬೆ (11) ಸುಂದರವಾದ ಪಾಕೆಟ್ ಡಬ್ಬಿ (ಡಬ್ಬಿಯನ್ನು ತೆರದಲ್ಲಿ ತನಗೆ ತಾನೇ ದೀಪವು ಇರುತ್ತದೆ) (12) ಸರ್ಮ ಗುಂಡಿ ಜೋಡು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

— ... ...

... 7 ... ...

ಲಗ್ನಪತ್ರಿಕೆಗಳ ಮುದ್ರಣ ಕ್ರಮವು

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶೇಷ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ಪಷ್ಟವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨ ೪ ೧ ರೂ ಆಗುತ್ತದೆ ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೧-೮-೦ ಆಣೆಯಂತೆ ಕೊಳುಹಬೇಕು ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧ ೯-೦ ರೂ ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಸ್ಟಾರ್ ಪ್ರೆಸ್, ಮೈಸೂರ್

27 ## ಸೂಚನೆ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು)

ಅಂಜೀರಾರ್ಕಮಧು — ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ ಮತ್ತು ಕಾಮೋದ್ದೀಪ್ತಿಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ದಾರ್ಢ್ಯವಾಗುತ್ತದೆ ಕರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನರದುರ್ಬಲ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದಾಗ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ, ೧ ಬಾಟ್ಲಿಗೆ, ೧-೧೦-೦ ರೂ ೨. ಬಾ, ೩-೧೦-೦ ರೂ ೩ ಬಾ, ೫-೪-೦ ರೂ, ಒಮ್ಮೆಗೆ ೧ ಡಜನ್ನು ಬಾಟ್ಲಿ ತರಿಸುವವರಿಗೆ ೧೫ ರೂ ಮೇಲೆ ೩ ಬಾಟ್ಲಿ ಇನಾಮು ಟ ಪ ಬೇರೆ

ಪಚ್ಛಾ ಕರ್ಪೂರರಸ:— ಇದರಿಂದ ಸ್ವಪ್ನಾವಸ್ಥೆಯು ಬಿಟ್ಟು ಧಾತು ಶುದ್ಧವಾಗುತ್ತದೆ ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಕ್ರಯ-೧ ಡಬ್ಬಿಗೆ ೧ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ ಪ ಬೇರೆ

ಮಲಹಮು ಇದರಿಂದ ಹಳೇ ಗಜಕರ್ಣ, ಇಸಬು, ತುರಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು ೧ ಡಬ್ಬಿಗೆ ೪ ಆಣೆ ೩ ಡಬ್ಬಿಗೆ ೧ ಡಬ್ಬಿ ಇನಾಮು ಟ ಪ ಬೇರೆ

“ಪಾಚಕ”

(“ಪಚನಮಾಡುವ ಔಷಧವು”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಚನ್ನಾಗಿ ಆಗುತ್ತದೆ ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮ್ಮರ ತೇಗುಗಳು ಬರುವದಿಲ್ಲ ೧ ಬಾ, ೮ ಆಣೆ. ಟ.ಖ. ಬೇರೆ

ನಂ ೫೫ “ಅಂಜೀರಾರ್ಕಮಧು ಕಂಪನಿ”

ಬಾಗವಾಡ ಮತ್ತು ಮಿರಜ (ಇಂಡಿಯಾ)

ಪಂಡಿತ ಎಸ್. ಗರಳಪುರಿ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ

32 ಮೈಸೂರು.

ಗೋರೋಚನ ಮಾತ್ರೆ— ೧-೨ ಮಾತ್ರೆಗಳ್ಳು ... ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾ... ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-...

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲ... ಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃ... ದ್ಧಿಯಾಗುವುದು. ೧೨ ಮಾತ್ರೆ ಸೀಸೆ ೦-೪-೦, ... ಸೀಸ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ... ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇ... ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊ... ಇದು ಅಮೃತಕ್ಕೆ ಸಮಾನ. ೫೦ ಮಾತ್ರೆ ಸೀಸೆ ೧-

ಬಾಲಸಂಜೀವಿನಿ — ಮಕ್ಕಳಿರುವ ಮನೆಯಲ್ಲಿ ... ದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯ... ತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷ... ೦-೪-೦ ತೊಲೆ ೧ ಕ್ಕೆ ೧-೮-೦.

ಪಚ್ಛಕರ್ಪೂರಮಾತ್ರೆ— ಇದರಿಂದ ಗರ್ಭವಿ... ಕಾಗಳೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತ... ಮಾತ್ರೆ ಸೀಸೆ ೦-೪-೦.

ಅಶ್ವಗಂಧ ರಸಾಯನ— ಮೂಲವ್ಯಾಧಿಗೆ ... ಸಂಜೀವನ. ಸೇರಿನ ಡಬ್ಬಿ ೧-೮-೦

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುರಿಯಾದ ಔಷಧಿ. ಸೇರಿನ ಡಬ್ಬಿ ೪-೧-೦. ೧೨ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧-೨ ಮಾತ್ರೆಗಳನ್ನು ... ವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾ... ೨೪ ಮಾತ್ರೆ ಸೀಸೆ ೦-

ಮಲಶೋಧನ ವಟಿಕಾ— ರಾತ್ರಿ ಮಲಗುವಾ... ದುಕೊಳ್ಳತಕ್ಕದ್ದು ಬೆಳಿಗ್ಗೆ ಏಳುವಾಗ್ಗೆ ಒಂದೆರ... ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪ... ಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ— ೩೦ ಮಾತ್ರೆ ಸೀಸೆ ೨-...

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-...

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-...

ಅಜೀರ್ಣಹರಮಾತ್ರೆ— ೪೦ ಮಾತ್ರೆ ಸೀಸೆ ೦-...

ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-...

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ... ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳ... ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ... ಹಿದಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾ... ಬರೆಯಿರಿ

ಬಿಂಗಿರಾಜಪುರಾಣವಿಜಯಂ

8

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಡುಗನ್ನಡನುಡಿಗಳಿಂದ ಮೆರೆಯುವೆವು ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ವಸ್ವಾರ್ಥ ವಿವರಣೆಯುಳ್ಳದ್ದಾಗಿಯೂ ಇರುವವು ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಭಕ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆ ಸಹಿತವಾಗಿ ಸ್ವಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚಸಹಿತವಾಗಿ ೨ ರೂ ೪ ಆಣೆ

ವಿಳಾಸ — ಎಂ ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

48

ಲೋಕಾನುಗ್ರಹ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಧುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ

ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೭೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ ಸಂದಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಹೇಬಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ರೋಗಳಕೆ ದಲ್ಲಿ ತರಿಸಿ ನೋಡಿ, ಅನುಮಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ೮. ೪. ವಿಪರರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಿಸುತ್ತೇನೆ.

(ಸೈ) ರಾಜಮನ್ನಾರನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಿಡಬ್ಲ್ಯೂಡಿ ಓವರ್‌ಸೀಯರ್, ಮೈಸೂರ್.

ಬೇರೆ ... ವಿಳಾಸಗಳು ಪ್ರತ್ಯೇಕವಾಗಿವೆ. ನಮ್ಮ ವಿಳಾಸ— ಶ್ರೀ ... ಶಾಲಾ.

ಗಡಿಯಾರದ ... ಇಸವಿ ಮಾರ್ಚಿ ತಾ|| ೨೫ ರಿಂದ ೧೯... ಮಾರ್ಚಿ ತಾ|| ೩೧ರವರೆಗೆ ಸಲ್ಲುವ ಶಾಲಿವಾಹನಶಕ ... ನೆಯ ಪರೀಧಾವಿ ಸಂವತ್ಸರದ ಚೈತ್ರ ಶು|| ಸಪ್ತಮಿಯಿಂ... ಚೈತ್ರ ಶ || ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
25	1 ಸೋ	ಸ	34-13	ಮೃಗ	36-56
26	2 ಮಂಗ	ಅ	28-28	ಆರಿದ್ರ	32 32
27	3 ಬುಧ	ನ	22-26	ಪುನ	28 23
28	4 ಗುರು	ದ	16-19	ಪುಷ್ಯ	24-8
29	5 ಶುಕ್ರ	ಏ	10 28	ಆಶ್ಲೇ	20-9
30	6 ಶನಿ	ದ್ವಾ	5-8	ಮಖ	55-38
31	7 ಭಾನು	ಚ	55-16	ಪುಬ್ಬ	13-35

(1) ಸಂತಾನಸಪ್ತಮಿ. (2) ಅಶೋಕಾಷ್ಟಮಿ, ... ಚಾಂದ್ರ ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠ... ರೀ ಉತ್ಸವ. (4) ಏಕಾದಶೀ ತಿಥಿ, ಮೇಲುಕೋಟೆ... ವೈರಮುಡೀ ಉತ್ಸವ. (5) ಸರ್ವತ್ರೈಕಾದಶಿ. (6) ... ಗತ ಪ್ರದೋಷ, ಪ್ರದೋಷ, ಶ್ರೀಕಂಠೇಶ್ವರರಥ, ... ಕೋಡಿನ ಅಗಸ್ತ್ಯೇಶ್ವರ ರಥ, ತಲಕಾಡು ವೈದ್ಯೇಶ್ವರ ... (7) ಮೇಲುಕೋಟೆಯಲ್ಲಿ ಚಾಮರಾಜಾಭ್ಯುದಯ ... ಗಡಿ ರಂಗನಾಥಸ್ವಾಮಿ ರಥ, ನರಸೀಪುರದಲ್ಲಿ ಪ್ರಾ... ತ್ಸವ.

ಮೈಸೂರು ... ಸನದಿಂದ ...

ಕ್ರಿಶ್ಚಿಯನ್ ...

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಿರಾರ್ದ್ರಿ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭ್ಯುದಯಶೀಲ ನಾಕವಿತಸಾದ್ಗುಣ್ಯಲಬ್ಧಾಲಂಬಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿರೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೯ | ಮೈಸೂರ್ ಸ್ಟಾರ್ ೧೯೧೦ ನೇಯ ಇಸವಿ ಏಪ್ರಿಲ್ ತಾರೀಖು ೧ ನೇಯ ಸೋಮವಾರ. [ಸಂಚಿಕೆ ೧೪

ಸ್ವದೇಶಬಾಂಧವರೆ! ನಾವು ಜನಗಳಿಗೆ ಉಪಯೋಗವಾಗುವಂತೆ ಆಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ

ಪ್ತ ಪೋಸ್ಟ್ ಕಾರ್ಡುಗಳನ್ನು { ಶ್ರೀ.........
ಮಹಾರಾಜಶ್ರೀ.......................ಸಾಹೇಬ
....ಗ್ರಾಮ
............ಅವರಿಗೆ ಈವರಿಗೆ ಉಭಯಕುಶಲೋಪರಿಸಾಂಪ್ರತ } ಎಂಬದಾಗಿ ಮೇಲು

ಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೧-೮-೦. ವಿ. ಪಿ. ಮೂಲಕ ೦-೬-೦. ೧೦೦೦ ಕ್ಕೆ ... ಗಟಿ ಚಿಕ್ಕೊತ್ತತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ಕ್ಯಾಷ್ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆ ವಿನಾಗೆ ಛಾರ್ಜು ಕಡಿಮೆಯಾಗುವುದು. ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚು ಕೊಡಲ್ಪ ಡುವುದು. ಮತ್ತು ೨೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೪ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೂಡ ಬಹುಮಾನವಾಗಿ ಕೊಡಲಾಗುತ್ತೆ.

ರಖಂ ವಾಚುಗಳ ಕ್ರಯದ ಪಟ್ಟಿ.



(1) ಡಬಲ್‌ವರ್ಕ್ ಡ್ರೆಸ್‌ವಾಚ್.


(2) ಕ್ಯಾಲೆಂಡರ್‌ವಾಚ್.



(3) ಗೆಟ್ಟಿಂ ಸ್ವಿಸ್ ರೆಗ್ಯುಲೇಟರ್‌ವಾಚ್.

(4) ಪ್ರೈವೇಟ್ ಡೇಸ್ ಕೀ ವಾಚ್.


(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ಬೆಲೆ:— (1) ಡಬಲ್‌ವರ್ಕ್ ಡ್ರೆಸ್ ವಾಚೆಂಬ ಗ್ಯಾರೆಂಟಿಯಾದ ಗಡಿಯಾರವು ಗ್ರೀನ್‌ವಿಚ್ ಟೈಮಿಗೂ ಸ್ವಿಸ್ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೪-೪-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೪-೦. (2) ಕ್ಯಾಲೆಂಡರ್ ವಾಚ್— ಇದು ಕಾಲವನ್ನು ತೋರಿಸುತ್ತದೆ. ೫-೧೦-೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮೆ, ಅಮಾವಾಸ್ಯೆ ಮೊದಲಾದ್ದೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಇಟ್ಟುಕೊಳ್ಳುದ್ದೇ ಆದರೆ ತನ್ನ ಸಂಗಡ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೮-೦ ಡಿಟೋ ಬೆಳ್ಳಿ ಕೇಸ್ ವಾಚ್ ೧೬-೮-೦. (3) ಗೆಟ್ಟಿಂ ಎಂಬ ಸ್ವಿಸ್ ರೆಗ್ಯುಲೇಟರ್ ವಾಚ್— ಇದು ಗೌರ್ನಮೆಂಟ್ ಗಂಟೆಗೆ ಸರಿಯಾಗಿ ವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩-೪-೦. (4) ಪ್ರೈವೇಟ್ ಡೇಸ್ ಕೀ ವಾಚ್— ವಾರಕ್ಕೊಂದಾವೃತ್ತಿ ಬೀಗ ಕೊಟ್ಟು ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ಸಲ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೨-೪-೦. ಡಿಟೋ ಬೆಳ್ಳಿ ವಾಚ್ ೧ ಕ್ಕೆ ೧೫-೮-೦. (5) ಪಿಕ್ಚರ್ಸ್ ವಾಚ್— ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ಚಿಕ್ಕ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷವುಂಟುಮಾಡುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ರವಾನಿಸುತ್ತೇವೆ. ೧ ಕ್ಕೆ ೬-೪-೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತೆ.

ಅವಶ್ಯ | ೧. ಕಾಗದ ಬರೆಯತಕ್ಕವರು | ವಿಳಾಸವನ್ನು ಬರೆಯತಕ್ಕದ್ದು.
ಶ್ರೀ | ಶ್ರೀ ಬ್ರದರ್ಸ್, ಬಸವರಕೆಮುಟ | ಸಾಗರ, ಮೈಸೂರು.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಂಗೆ ೧-೦-೦ ೫-೦-೦; ೩-೦-೦; ೨-೮-೦; ೧-೮-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಡಬ್ಬಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಸ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್‌ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಬಿರವಾಡಿಗಜಾಂಕುಶೆತಾರಾವಳಿ	೦-೪-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ಣಾಟಕಶಬ್ದಮಂಜರಿ	೦-೬-೦
ಸಟೀಕನಂದಾಮೃತ	೦-೬-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೩-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

32

ಬಸವರಾಜವಿಜಯಂ— ಬೆಲೆ ವಿ. ಪಿ ಯಿಂದ ೧-೬-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.- ೧-೪-೦ ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸಮಗ್ರಬದ್ಧ.)

ಸೌಂದರ ಪುರಾಣಂ.- ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಪದ್ಯಾದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷದ ದೀಕ್ಷೆಯ ಕಲ್ಪವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ- ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ— ಬಸವೇಶ ಪಂಚಪ್ರಕಾರ ಗದ್ಯಗಳಿಗಳವೆ. ೬ ಆಣೆ.

ರತ್ನಾಕರಶತಕಂ ೨ ಆಣೆ. ಶಂಕರದಾಸಿಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ- ... ... ವರ್ಷಕ್ಕೆ ... ರೂ. ... ...

ಕಳುಹಿಸತಕ್ಕ ವಿಳಾಸ
ಪ್ರಕಾಶಕ ಸಂಘ, ಮೈಸೂರು

[illegible]

[ಶಿಕ್ಷಣ ಪ್ರಸಂಗದ ...]

[illegible]

(ಸಶೇಷ)

[illegible]

SIX LAKHS IN CHARITY

Lingappa Iavappa Sir Desai of Naval gund in Belgaum by a will and codicil executed some days before his death which took place on 23rd August, 1906, disposed of six lakhs worth of property in charity for the benefit of his caste the Lingayets and for instructing them in the art and science of agriculture, he appointed a consultative committee of trustees with the Collector of Belgaum for the president. His widow Sundrabai and her adopted son Kariapagouda contested the will in the Court of Mr. E. Clements, District Judge of Belgaum, on the ground that on the day previous to his death the testator had revoked his will, and granted permission to his wife to adopt a son. Some witnesses were produced by Sundrabai in substantiation of this story.

Mr Clements remarked that although the Sir Desai had made up his mind not to have any adoption, it was incredible he should have changed his mind suddenly and revoked his will which he had deposited in a sealed envelope with Mr. A. M. T. Jackson, the then Collector, and about which the Deputy Collector Mr. Artal knew, and should have given permission to his wife to adopt. The probate of the will was consequently directed to be given with costs to the Collector of Belgaum, Mr B. A. Brandon, who had applied for it.

From the decision [illegible] Sundrabai and her adop[ted son] [illegible] appeal[ed] to the Bombay High Court. They were the defendants in the probate suit and among the other defendants were Narsing Ramchandra Phadnis and ten others. Mr. J. D. Inverarity with Mr. G. S. [illegible] and Mr Nilkanth Atmaram appeared for the appellants. Mr Lindesay J. Robertson with Mr Hormazdiar C. Coyajee, Mr Rudrappa and Mr G. S. Mulgaonkar appeared for the Collector-respondent. Provision had been made under the will that Sundrabai should be provided with a suitable residence, servants including a clerk, a mounted sepoy, four sepoys, three cooks, a horse carriage, a bullock carriage, and Rs 100 per month for her own expenses. All servants should be old men. The Hon. Mr Justice Chandavarkar and the Hon. Mr Justice Batchelor disposed of the appeal.

Their Lordships held that it was in evidence that on the day previous to his death when the testator was alleged to have changed his mind, he was extremely weak and not able to speak. It was a question whether he had the strength of mind to do what some people who were styled as the "Agitators" wanted him to do, viz., revoke the will, and the adoption to take place. When he spoke he did so in a low voice and at long intervals. It was possible that to get rid of the persons who were importunate with him he might have said the words he was alleged to have said. If he did say the words, why were they not committed to writing? The will had been made to the knowledge of the Collector and the codicil to the knowledge of the Mamlatdar. Mr Artal was on the spot and neither of them were informed of the testator's change of mind. When the widow called upon the Collector she did not say the will was revoked, she only said she wished to adopt a son. It was therefore extremely improbable that the testator said the words "I revoke the will and authorise my wife to adopt." When there was written testimony against oral in matters of will, it was laid down that the Court should be very zealous and cautious in scrutinizing the oral. Again there was the judgment of the Lower Court in favour of the probate. Mr Jackson when asked as to what the widow had told him at the time of her visit to him, replied that as far as he could recollect she stated to him that she wished to adopt, not that her husband had authorised her to adopt. The appeal was dismissed, with the Collector's cost upon the appellant.

ಬೆಳಗಾವಿ ನವಲ್ಗುಂದದ ಸರ್ ದೇಸಾಯಿ ... ಪ್ಪ ದಯಾಪ್ಪ ಇವರು ೧೯೦೬ನೆಯ ಆಗಸ್ಟ ತಾ|| ೨೩ ... ವಿಧಿವಶರಾದರು. ಇವರು ಸಾಯುವುದಕ್ಕೆ ಕೆಲದಿನಗಳ ಪೂರ್ವವೇ ತಮ್ಮಾಸ್ತಿಯಿಂದ ತಮ್ಮ ಸಜಾತೀಯರಾದ ಲಿಂಗಾಯತರು ಬೇಸಾಯಶಾಸ್ತ್ರ ಮತ್ತು ಇತರ ಶಾಸ್ತ್ರ... ಅಭ್ಯಾಸಮಾಡುವುದಕ್ಕಾಗಬೇಕೆಂದು ... ಮೃತ್ಯುಪತ್ರವನ್ನು ಬರೆದು, ಈ ಕಾರ್ಯ ನಿರ್ವಹಣೆಗಾಗಿ ಬೆಳಗಾವಿಯ ಕಲೆಕ್ಟರ ಅಧ್ಯಕ್ಷತೆಯಲ್ಲಿ ಟ್ರಸ್ಟಿಗಳನ್ನು ನೇಮಿಸಿದರು. ಮೃತ್ಯುಪತ್ರದ ಆಧಾರವೇಲೆ ... ಅಧಿಕಾರವನ್ನು ಕೊಡಿಸಬೇಕೆಂದು ಬೆಳಗಾವಿಯ ಕಲೆಕ್ಟರ ಮಿ|| ಬಿ. ಎ. ಬ್ರಾಂಡನರವರು ಡಿಸ್ಟ್ರಿಕ್ಟ್ ಜಡ್ಜರಾದ ಮಿ|| ಕ್ಲೆಮೆಂಟ್ಸರವರಲ್ಲಿ ... ವಿವಾದದಲ್ಲಿ ದೇಸಾಯಿಯವರು ತಮ್ಮ ಮರಣದ ಹಿಂದಿನ ದಿನಸ ತಾವು ಬರೆದಿದ್ದ ಮೃತ್ಯುಪತ್ರವನ್ನು ರದ್ದು ಮಾಡಿ ತಮ್ಮ ಪತ್ನಿಗೆ ಒಬ್ಬ ಮಗನನ್ನು ದತ್ತು ಮಾಡಿಕೊಳ್ಳಲು ಅನುಜ್ಞೆಯನ್ನಿತ್ತಿದ್ದರೆಂದು ದೇಸಾಯರ ಪತ್ನಿಯಾದ ಸುಂದರಾಬಾಯಿಯವರೂ, ಆಕೆಯ ದತ್ತಕ ಪುತ್ರ ... ಗೌಡನೂ ವಾದಿಸಿದರು ಮತ್ತು ತಮ್ಮ ಪರವಾಗಿ ಕೆಲ ಸಾಕ್ಷಿಗಳನ್ನು ನುಡಿಸಿದರು. ಸರ್ ದೇಸಾಯರು ದತ್ತುವನ್ನು ಮಾಡಿಕೊಳ್ಳಕೂಡದೆಂದು ಸಂಕಲ್ಪ ಮಾಡಿದ್ದಾಗ್ಯೂ ಕೂಡಲೆ ತಮ್ಮ ಮನಸ್ಸನ್ನು ಬದಲಾಯಿಸಿ ... ಕಲೆಕ್ಟರಾಗಿದ್ದ ಮಿ|| ಜ... ರು ಮಾಡಿದ ಡೆಪ್ಯೂಟಿ ಕಲೆಕ್ಟರ್ ಮಿ|| ಅರ್ಟಲ ...

ರದ್ದು ಪಡಿಸಿ ದತ್ತು ಮಾಡಿಕೊಳ್ಳಲು ತಮ್ಮ ಪತ್ನಿ ಯನ್ನಿತ್ತಿದ್ದರೆಂಬುದು ನಂಬಲ್ಪಡತಕ್ಕದ್ದಾಗಿಲ್ಲ ಕ್ಲೆಮೆಂಟ್ಸ್‌ರವರು ಅಭಿಪ್ರಾಯಪಟ್ಟು, ಕಲೆಕ್ಟ ಸಹಿತ ಫ್ರೊಬೇಟನ್ನು ಕೊಡಿಸಿದರು. ಮೆ|| ಕ್ಲೆ ತೀರ್ಪಿನಮೇಲೆ ಸುಂದರಾಬಾಯಿಯವರೂ, ಅ ಕ ಪುತ್ರನೂ ಬೋಂಬಾಯಿ ಹೈಕೋರ್ಟಿ ಲನ್ನು ಮಾಡಿದರು. ಮೃತ್ಯುಪತ್ರದ ಆಧಾರದ ಗಲ್ಪಟ್ಟಿದ್ದ ವಿವಾದದಲ್ಲಿ ಸುಂದರಾಬಾಯಿಯವರೂ ತಪುತ್ರನೂ ಪ್ರತಿವಾದಿಗಳಾಗಿದ್ದರಲ್ಲದೆ ಫಸ್ಟಿಸ್ ೧೦ ಜನರು ಪ್ರತಿವಾದಿಗಳಾಗಿದ್ದರು. ಮೆ|| ಜಿ. ವ್ ಮತ್ತು ಮೆ|| ನೀಲಕಂಠ ಆತ್ಮಾರಾಂ ಇವರು ಡ ಮೆ|| ಜೆ. ಡಿ ಇನ್‌ವೆರಾರಿಟಿಯವರು ಅಪೀಲು ದ ವಕೀಲರಾಗಿದ್ದರು. ಮೆ|| ಜಾರ್ಡಿಯಾ ಯಡಿ, ಮೆ||ಬಿ. ರುದ್ರಪ್ಪ ಮತ್ತು ಮೆ||ಜಿ. ಎಸ್ ಂಪಕರ್ ಇವರುಗಳೊಡನೆ ಮೆ|| ಲಿಂಡಿಸೆ ಜೆ. ರ್ಸರ್ವರವರು ಪ್ರತಿವಾದಿ ಕಲೆಕ್ಟರ ಕಡೆಯ ವಕೀಲ ರು ಸುಂದರಾಬಾಯಿಯವರಿಗೆ ವಾಸಕ್ಕಾಗಿ ಯೋ ಮನೆಯೂ, ಒಬ್ಬ ಕರ್ಣೀಕನೂ, ಒಬ್ಬ ಕುಂದಾಲಿಯ , ನಾಲ್ಕು ಜನ ಸಿಪಾಯಿಗಳು, ಮೂರು ಜನ ಅಡಿಗೆ , ಒಂದು ಕುದುರೆಯ ಬಂಡಿಯು ಒಂದು ಎತ್ತಿನ ು ಮತ್ತು ಸ್ವಂತವೆಚ್ಚಕ್ಕಾಗಿ ತಿಂಗಳೊಂದಕ್ಕೆ ರೂಪಾಯಿಗಳು ಸುಂದರಾಬಾಯಿಯವರಿಗೆ ಕೊಡಲ್ಪ ಡೆಂದು ಮೃತ್ಯುಪತ್ರದಲ್ಲಿ ಬರೆಯಲ್ಪಟ್ಟಿರುವುದು. ಲ್ಲರೂ ಮಮುಕ್ಷರಾಗಿರಬೇಕೆಂದಿರುವುದು. ಆನರ ಸ್ಟಿಸ್ ಚಂದ್ರಾವರ್ಕರವರು ಮತ್ತು ಆನರಬಲ್ ಬ್ಯಾಚಲರ್‌ರವರು ಈ ಅಪೀಲು ವಿವಾದವನ್ನು ಗೊಳಿಸಿದರು.

ಮೃತ್ಯುಪತ್ರವನ್ನು ಬರೆದಿರುವ ದೇಸಾಯಿಯು ಮೃತಿ ದಿನ ಹಿಂದಣ ದಿವಸ ತಮ್ಮ ಮನಸ್ಸನ್ನು ಬದಲಾ ರೆಂದು ಹೇಳುವ ಕಾಲದಲ್ಲಿ ಬಹಳ ನಿತ್ರಾಣವಾಗಿ ಮಾಡಲು ಅಶಕ್ತರಾಗಿದ್ದರೆಂಬುದು ರುಜುವಾತಾಗಿದೆ ದರಿಂದ, ಮೃತನು ಕೆಲ ಜನರು ಹೇಳುವ ಪ್ರಕಾರ ತನ್ನ ಪತ್ರವನ್ನು ರದ್ದುಪಡಿಸಿ ದತ್ತುಪುತ್ರನನ್ನು ಮಾಡಿ ಪ್ಪಣೆಯನ್ನು ಕೊಡುವಷ್ಟು ಆತನಿಗೆ ಬುದ್ಧಿ ಸ್ವಾ ದ್ಧಿಕೆ ಆತನು ಆ ರೀತಿ ಮಾತನಾಡಿದಾಗ್ಯೆ ಬಹು ರ್ಬಲನಿಯಂದಲೂ ಕಾಲ ವಿಳಂಬದಿಂದಲೂ ಹೇಳಿದ ಹೇಳಲ್ಪಟ್ಟಿದೆ. ಜನರು ತನ್ನನ್ನು ಪೀಡಿಸುವುದನ್ನು ಪುದಕ್ಕಾಗಿ ಆ ಪ್ರಕಾರ ಹೇಳಿದ್ದರೂ ಇರಬಹುದು. ಈ ಮಾತುಗಳನ್ನು ಆಡಿದ್ದಲ್ಲಿ ಅವು ಯಾಕೆ ಬರೆಸ ಲ್ಲ? ಮೃತ್ಯುಪತ್ರವು ಕಲೆಕ್ಟರ ಗಮನಕ್ಕೂ, ಅದಂ ಮಾಮಲೆದಾರರ ಗಮನಕ್ಕೂ ತರಲ್ಪಟ್ಟಿದ್ದವು ಮೆ|| ಆರ್ಟೆಲಿರವರು ಅದೇ ಸ್ಥಳದಲ್ಲಿದ್ದರು. ಹೀಗಿ ಮೃತ್ಯುಪತ್ರವನ್ನು ಬರೆದವನ ಮನಸ್ಸು ಬದಲಾಗಿ ದು ಅವರುಗಳ ಗಮನಕ್ಕೆ ತರಲ್ಪಡಲಿಲ್ಲವು. ದೇಸಾ ಹೆಂಡತಿಯು ಕಲೆಕ್ಟರವನ್ನು ಕಂಡಿದ್ದಾಗ್ಯೂ ಮೃತ್ಯುಪತ್ರ ನ್ನ ಪತಿಯಿಂದಲೇ ರದ್ದುಪಡಿಸಲ್ಪಟ್ಟಿದ್ದಿತೆಂದು ಹೇಳಿದ ಮಗನನ್ನು ದತ್ತು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ದೆಯೆಂದು ಹೇಳಿದರು. ಈ ಕಾರಣಗಳಿಂದ "ನನ್ನ ಮೃ ಪತ್ರವನ್ನು ರದ್ದುಪಡಿಸಿ ಒಬ್ಬ ಮಗನನ್ನು ದತ್ತುಮಾಡಿ ಳ್ಳಲು ನನ್ನ ಪತ್ನಿಗೆ ಅಧಿಕಾರವನ್ನು ಕೊಟ್ಟಿರುತ್ತೇನೆ." ು ಮೃತ್ಯುಪತ್ರವನ್ನು ಬರೆದಾತನು ಹೇಳಿದುದು ಬಹು ಭವವು. ಮೃತ್ಯುಪತ್ರಗಳ ವಿಚಾರದಲ್ಲಿ ಬರವಣಿಗೆಯು ಆ ವಿರುವಾಗ್ಯೆ ತತ್ಸಂಬಂಧವಾದ ಬಾಯಿಮಾತಿನ ಆಧಾರ ಬಹು ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ಗೊತ್ತಾ ವು. ಅಲ್ಲದೆ ಕೆಳಕೋರ್ಟಿನಲ್ಲಿ ಮೃತ್ಯುಪತ್ರವು ಸ್ಥಿರ ಸಲ್ಪಟ್ಟಿದೆ. ದೇಸಾಯಿಯ ಪತ್ನಿಯು ತಮ್ಮನ್ನು ನೋಡ ಬಂದಾಗ್ಗೆ ಏನುಹೇಳಿದರೆಂದು ಮೆ|| ಹಾರ್ಸ್ಟರವರನ್ನು ಕೇ ಾಗ ಅವರು ಆಕೆಯು ತನಗೆ ದತ್ತುಸ್ವೀಕಾರಮಾಡಲು ಇರುವುದೆಂದು ಹೇಳಿದರಲ್ಲದೆ ದತ್ತುಸ್ವೀಕಾರಮಾಡಲು ತನ್ನ ಪತಿಯು ಅಪ್ಪಣೆಕೊಟ್ಟಿರುವುದಾಗಿ ಹೇಳಲಿಲ್ಲವು." ು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈ ಕಾರಣಗಳಿಂದ ಲ್ ಡಿಸ್ಮಿಸ್ ಮಾಡಲ್ಪಟ್ಟಿದೆ. ಅಪೀಲ್‌ದಾರಿಯು ಕಲೆಕ್ಟ ಚ್ಚವನ್ನು ಕೊಡತಕ್ಕದ್ದು." ಎಂದು ಜಡ್ಜಿಯವರುಗಳು ರ್ಮಾನಿಸಿರುತ್ತಾರೆ.

ಯಳಂದೂರು ಜಹಗೀರಿಯ ವಿವಾದವು.

ಯಳಂದೂರು ಜಹಗೀರ್ದಾರರಾಗಿದ್ದ ಸರ್. ಪಿ. ಎನ್. ಕೃಷ್ಣಮೂರ್ತಿಯವರು ವಿಧಿವಶರಾದಮೇಲೆ ಅವರ ತ ಮಕ್ಕಳಾದ ಅ|| ಕಮಿಷನರ್ ಮೆ|| ನರಸಿಂಗರಾ ಪೂರ್ಣಯ್ಯನವರ ... ನರ ಸ್ಥಿತಿದಲ್ಲಿ ಯಳಂದೂರು ... ರಲಿಗೆಮಕ್ಕಳ ಬೇಕೆಂದು ಮೈಸೂರ ಸರ್ಕಾರದವರಲ್ಲಿ ಬಿನ್ನೈಸಿಕೊಳ್ಳಲು ಈ ವಿಚಾರದಲ್ಲಿ ವಿರುದ್ಧಾಭಿಪ್ರಾಯವುಳ್ಳ ಹಕ್ಕುದಾರರಿದ್ದರೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಲ್ಲಿಗೆ ಬರೆದು ತಿಳುಹತಕ್ಕದೆಂದು ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಕೃಷ್ಣಮೂರ್ತಿಯವರ ಪತ್ನಿಯವರೂ, ಅವರ ಮಗಳ ಅಪ್ರಾಪ್ತವಯಸ್ಕನಾದ ಮಗನ ಪರವಾಗಿ ಅವನ ತಂದೆಯೂ, ಪೋಲೀಸು ಸೂಪರಿಂಟೆಂಡೆಂಟರಾಗಿರುವ ಮೆ|| ವೈ. ಪಿ ಕೃಷ್ಣಮೂರ್ತಿಯವರೂ ಅರ್ಜಿಗಳನ್ನು ಹಾಕಿಕೊಂಡಿದ್ದರು. ಈ ವಿವಾದದ ವಿಚಾರಣೆಯು ಕಳೆದ ಮಾರ್ಚಿ ತಾ|| ೨೦ ರಲ್ಲಿ ಬೆಂಗಳೂರಲ್ಲಿ ದಿವಾನರು ಮತ್ತು ಇಬ್ಬರು ಕೌನ್ಸಿಲರುಗಳಲ್ಲಿ ನಡೆಯಿತು. ಆ ಕಾಲದಲ್ಲಿ ಮೆ|| ನರಸಿಂಗರಾವ್ ಪೂರ್ಣಯ್ಯನವರ ಪರವಾಗಿ ಮೈಸೂರ ಅಡ್ವೊಕೇಟ್ ಮೆ|| ಎಂ. ಸಿ. ರಂಗಯ್ಯಂಗಾರ್ ಬಿ. ಎ, ಯವರೂ, ಬೆಂಗಳೂರು ಅಡ್ವೊಕೇಟ್ ಮೆ||ಎಸ್ ರಂಗಣ್ಣ, ಬಿ. ಎ., ಬಿ. ಎಲ್., ರವರೂ, ಸರ್ ಕೃಷ್ಣಮೂರ್ತಿಯವರ ಪತ್ನಿಯವರ ಕಡೆ ಮದ್ರಾಸು ಹೈಕೋರ್ಟು ವಕೀಲರಾದ ದಿವಾನ್ ಬಹದ್ದೂರ್ ಆನರಬಲ್ ಎಲ್ ಎ. ಗೋವಿಂದರಾಘವಯ್ಯರ್ ಬಿ.ಎ., ಬಿ ಎಲ್., ರವರೂ; ಮೊಮ್ಮಗನ ಕಡೆ ಕಲಕತ್ತಿನ ಪ್ರಸಿದ್ಧ ಬ್ಯಾರಿಸ್ಟರಾದ ನಾರ್ಟನ್‌ರವರೂ, ಮದ್ರಾಸಿನ ಜೆಂಗ್ ಪಾರ್ಟರವರೂ, ಮೆ|| ವೈ. ಪಿ ಕೃಷ್ಣಮೂರ್ತಿಯವರ ಪರವಾಗಿ ಮೆ|| ಪಿ. ಅಭ್ಬಪ್ರರಾಯರೂ ವಾದಿಸಲು ನಿಯಮಿಸಲ್ಪಟ್ಟಿದ್ದರು. ಆದರೆ ಮೆ|| ನಾರ್ಟನ್‌ರವರು ತಂಜಾವೂರಿನ ಸೆಷನ್ಸು ಕೋರ್ಟಿನಲ್ಲಿ ಒಂದು ಕೊಲೆಯ ವಿವಾದದ ವಿಚಾರಣೆಯಲ್ಲಿ ವ್ಯಗ್ರರಾಗಿದ್ದುದರಿಂದ ಆ ದಿವಸ ಬೆಂಗಳೂರಿಗೆ ಬರಲಾಗಲಿಲ್ಲವಾಗಿ ಅವರ ವಿನಾ ಇತರ ವಕೀಲರುಗಳೆಲ್ಲರೂ ಬಂದಿದ್ದರು. ಮೆ|| ವೈ. ಪಿ. ಕೃಷ್ಣಮೂರ್ತಿಯವರಿಗೆ ಜಹಗೀರಿಯಿಂದ ಸಲ್ಲುವ ವರ್ಷಾಶನವನ್ನು ಹೆಚ್ಚಿಸಿಕೊಡಬೇಕೆಂದು ಅವರ ವಕೀಲರಾದ ಮೆ|| ಅಭ್ಬಪ್ರರಾಯರು ಹೇಳಲು ಕೌನ್ಸಿಲಿನ ಅಧ್ಯಕ್ಷರಾದ ದಿವಾನರು ಈಗ ಯಳಂದೂರು ಜಹಗೀರಿಯ ಯಜಮಾನರಾರೆಂಬುದನ್ನು ಗೊತ್ತುಮಾಡಬೇಕಾಗಿದೆಯೇ ವಿನಾ ವರ್ಷಾಶನವನ್ನು ಹೆಚ್ಚಿಸತಕ್ಕ ವಿವಾದವಾಗಿಲ್ಲವೆಂದು ಅಪ್ಪಣೆ ಕೊಡಿಸಿದರು. ಅನಂತರ "ಮೆ|| ನರಸಿಂಗರಾವ್ ಪೂರ್ಣಯ್ಯನವರು ಜಹಗೀರ್ದಾರರ ಗಂಡುಸಂತತಿಯಲ್ಲಿ ಮುಖ್ಯ ಹಕ್ಕುದಾರರಾಗಿರುವರಲ್ಲದೆ ಜಹಗೀರಿಯ ಹಕ್ಕುದಾರಿಕೆಯ ಸಂಬಂಧವಾಗಿ ೧೮೭೫ನೇ ವರ್ಷದಲ್ಲಿ ಹುಟ್ಟಿರುವ ಎಸ್ಟೇಟ್ ಬಿಲ್ಲಿನ ೧ ನೆಯ ಆಕ್ಟಿನಲ್ಲಿ ಹೇಳಿರುವ ಪ್ರಕಾರ ಎಲ್ಲಾ ಅರ್ಹತೆಯುಳ್ಳವರಾಗಿರುತ್ತಾರೆ. ಹೆಣ್ಣಿನ ಸಂತತಿಯಿಂದ ದತ್ತುಮಾಡಿಕೊಳ್ಳಲಿಕ್ಕೆ ಬರುವುದಿಲ್ಲ ಮತ್ತು ಸರ್. ಪಿ. ಎನ್ ಕೃಷ್ಣಮೂರ್ತಿಯವರು ತಮ್ಮ ಜೀವಿತ ಕಾಲದಲ್ಲಿ ದತ್ತುವನ್ನು ಮಾಡಿಕೊಂಡಿದ್ದರೆಂಬ ಬಗೆಗೆ ಯಾವಾಧಾರವೂ ಇರುವುದಿಲ್ಲ. ಆದುಕಾರಣ ಮೆ|| ನರಸಿಂಗರಾವ್ ಪೂರ್ಣಯ್ಯನವರು, ಸರ್ ಕೃಷ್ಣಮೂರ್ತಿಯವರ ಸ್ಥಾನದಲ್ಲಿ ಜಹಗೀರ್ದಾರರಾಗಿ ಸ್ವೀಕರಿಸಲ್ಪಡಬೇಕು" ಎಂದು ಮೆ|| ಎಂ ಸಿ ರಂಗಯ್ಯಂಗಾರರು ವಾದಿಸಿದರು. ಆ ವೇಳೆ ದಿ|| ಬ|| ಗೋವಿಂದರಾಘವಯ್ಯರ್‌ರವರು ಕೃಷ್ಣಮೂರ್ತಿಯವರ ಪತ್ನಿಯವರವರವಾಗಿ ವಾದಿಸಲುಪಕ್ರಮಿಸಿ, "ಎಸ್ಟೇಟ್ ಬಿಲ್ ಸಂಬಂಧವಾದ ಆಕ್ಟು ಹಿಂದೂ ಲಾಕ್ಕೆ ವಿರುದ್ಧವಾಗಿರುವುದರಿಂದ, ಸರ್ ಕೃಷ್ಣಮೂರ್ತಿಯವರು ದತ್ತುಮಾಡಿಕೊಳ್ಳುವ ವಿಚಾರದಲ್ಲಿ ಪ್ರತಿಬಂಧಕವಾಗಿರಲಿಲ್ಲವು. ಕಾಗದಪತ್ರಗಳೆಲ್ಲವೂ ಬಿಗಮುದ್ರೆಯಿಂದ ಭದ್ರಮಾಡಲ್ಪಟ್ಟಿರುವ ಪ್ರಯುಕ್ತ, ಗತಿಸಿದ ಜಹಗೀರ್ದಾರರ ಅಭಿಮತವು ಏನಾಗಿದ್ದಿತೆಂಬುದನ್ನು ಹೇಳುವುದಕ್ಕಿಲ್ಲವಾಗಿದೆ. ಅವುಗಳನ್ನು ನೋಡುವುದರಿಂದ ಅವರಭಿಪ್ರಾಯವು ಗೊತ್ತಾಗುವುದಾದ ಪ್ರಯುಕ್ತ ಆ ಕಾಗದಗಳನ್ನು ನೋಡಲು ಅವಕಾಶವನ್ನು ಕೊಡಿಸಬೇಕು" ಎಂದು ವಾದಿಸಿದರು. ಆ ರೀತಿ ಕಾಗದಗಳನ್ನು ತೆಗೆದು ನೋಡಲಾಗುವುದಿಲ್ಲವೆಂದು ದಿವಾನರು ಹೇಳಲು, ಸರ್ ಕೃಷ್ಣಮೂರ್ತಿಯವರ ಪತ್ನಿಯವರು ಕುಟುಂಬದಲ್ಲಿ ಪ್ರಮುಖರಾದುದರಿಂದ ಅವರ ಪತಿಯವರ ಮನೋಗತವನ್ನು ತಿಳಿಯಲು ಅವರಿಗಧಿಕಾರವಿರುವುದೆಂದು ಮೆ|| ರಾಘವಯ್ಯರ್‌ರವರು ಸಮಾಧಾನವನ್ನು ಹೇಳಿದರು. ಈ ಸಮಾಧಾನವು ಕೌನ್ಸಿಲರ್ ಮೆ|| ನಂಜುಂಡಯ್ಯನವರಿಗೆ ಒಪ್ಪಿತವಾದುದರಿಂದಲೂ, ೨ ನೆಯ ಕೌನ್ಸಿಲರು ಮೌನವಾಗಿದ್ದುದರಿಂದಲೂ ಸರ್ ಕೃಷ್ಣಮೂರ್ತಿಯವರ ಪತ್ನಿಯವರು, ಮೆ|| ನರಸಿಂಗರಾವ್ ಪೂರ್ಣಯ್ಯನವರು ಮತ್ತು ಕಾನೂನಿಯ ಸೆಕ್ರೆಟರಿಯವರು ಇವರುಗಳ ಪ್ರತ್ಯಕ್ಷದಲ್ಲಿ ಬೀಗಮುದ್ರೆಯಿಂದ ಭದ್ರಪಡಿಸಲ್ಪಟ್ಟಿರುವ ಕಾಗದಪತ್ರಗಳು ಜೋಪಾನದಿಂದ ತೆಗೆಯಲ್ಪಡತಕ್ಕದೆಂದು ದಿವಾನರು ಅಪ್ಪಣೆಮಾಡಿದರು. ವಿವಾದವನ್ನು ಮುಂದಕ್ಕೆ ಹಾಕಬೇಕೆಂದು ಮೆ|| ನಾರ್ಟನ್‌ರವರ ಪರವಾಗಿ ಮೆ|| ಪಾರ್ಟರವರು ಅಪೇಕ್ಷಿಸಿದುದರ ... ಮುಂದಕ್ಕೆ ಹಾಕಲ್ಪಟ್ಟಿತು.

ಮೈಸೂರ್ ಗೆಜೆಟ್ ಸಂಗ್ರಹವು.

—'೦'—

ರೆವಿನ್ಯೂ ಕಮಿಷನರಾಫೀಸಿಗೆ ಸೇರಿದ ಅ|| ಕಮಿಷನರ್ ಮೆ|| ಆನಂದರಾವ್ ಶಿರ್ಕೆ, ಬಿ. ಎ., ಎಲ್‌ಎಲ್. ಬಿ., ಯವರಿಗೆ ೧೯೧೨ನೆಯ ಏಪ್ರಿಲ್ ತಾ|| ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಮೇಲಿನ ರಜಾಕಾಲದಲ್ಲಿ ಅಥವಾ ಬೇರೆಯೊಂದಪ್ಪಣೆಯಾಗುವವರೆಗೆ ಅ|| ಕಮಿಷನರ್ ಮತ್ತು ಪೋಲೀಸು ಸೂಪರಿಂಟೆಂಡೆಂಟ್ ಮೆ|| ಪಿ ತಿಂಬೂಸೆಟ್ಟಿ, ಬಿ. ಎ, ಯವರು ರೆವಿನ್ಯೂ ಕಮಿಷನರಾಫೀಸಿನಲ್ಲಿ ಕೆಲಸಮಾಡಲು ಅನಿತ್ಯವಾಗಿ ನಿಯಮಿಸಲ್ಪಟ್ಟಿರುತ್ತಾರೆ

ಮಾಗಡಿ ತಾ|| ಅಮಲ್ದಾರ್ ಮೆ|| ಎಂ. ರಂಗನಾಥರಾವ್‌ರವರಿಗೆ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೇಜ್ ರಜದ ಮೇಗೆ ಅವರ ಸ್ವಂತ ಕೆಲಸಕ್ಕಾಗಿ ಇನ್ನೂ ೩ ತಿಂಗಳ ರಜವು ಹೆಚ್ಚಾಗಿ ಕೊಡಲ್ಪಟ್ಟಿರುತ್ತಾದುದರಿಂದ ಈಗಿರುವ ಬದಲಿ ವಿರ್ಬಂಧ ನಡೆಯತಕ್ಕದು

ಎಕ್ಸೈಸ್ ಕಮಿಷನರು ರಿಜಿಸ್ಟ್ರಾರ್ ಜನರಲ್ ರವರು, ಸ್ಟಾಂಪುಗಳ ಎಕ್ಸ್ ಅಫಿಷಿಯೋ ಕಮಿಷನರು ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರವರಾದ ಮೆ|| ಎಚ್ ಎಚ್ ಕ್ರಾಕ್ಸ್‌ರವರಿಗೆ ವೈದ್ಯರ ಅನುಮತಿಪತ್ರದ ಮೇಲೆ ೧೯೧೨ನೆಯ ಫೆಬ್ರವರಿ ತಾ|| ೧೯ ರಿಂದ ೬ ತಿಂಗಳ ರಜವು ಕೊಡಲ್ಪಟ್ಟಿದೆ.

ಸಿ. ಆರ್. ರಂಗರಾವ್ ಬಿ ಎ, ಬಿ. ಎಲ್., ರವರು ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರಿಗೆ ಅಸಿಸ್ಟೆಂಟಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರ ಡಿ|| ಪೋಲೀಸು ಸೂಪರಿಂಟೆಂಡೆಂಟ್ ಮೆ|| ತಿಂಬೂಸೆಟ್ಟಿಯವರು ಬೇರೆ ಉದ್ಯೋಗದ ಮೇಲಿರುವವರೆಗೆ ಪೋಲೀಸು ಇನ್ಸ್‌ಪೆಕ್ಟರ್ ಮೆ|| ಆರ್. ರಾಮರಾವ್, ಬಿ. ಎ., ಬಿ ಎಲ್, ರವರು ಬೆಂಗಳೂರ ಡಿ|| ಆಕ್ಟಿಂಗ್ ಅ|| ಕಮಿಷನರಾಗಿಯೂ ಮತ್ತು ಪೋ|| ಸೂಪರಿಂಟೆಂಡೆಂಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ತರೀಕೆರೆಯ ಆಕ್ಟಿಂಗ್ ಅಮಲ್ದಾರ್ ಮತ್ತು ೨ ನೆಯ ಅ|| ಮ್ಯಾಜಿಸ್ಟ್ರೇಟರಾದ ಮೆ|| ಬಿ. ಎಂ., ವೆಂಕಟೇಶಯ್ಯ, ಬಿ ಎ, ಯವರು ಆ ತಾಲೋಕಿನ ಅಮಲ್ದಾರರಾಗಿರುವವರೆಗೂ ಕೋರ್ಟ್ ಆಫ್ ರೆಂಟ್ಸ್ ಆಕ್ಟಿನಲ್ಲಿ ಕಂಡ ವಿವಾದಗಳನ್ನು ಹಿಡಿದು ವಿಚಾರಿಸಲು ಅಧಿಕಾರಕೊಡಲ್ಪಟ್ಟಿರುತ್ತಾರೆ.

ಮೆ|| ಪಿ. ಎಸ್. ಅಚ್ಯುತರಾವ್, ಎಲ್. ಎಂ. ಅಂಡ್ ಎಸ್, ರವರು ಸೀನಿಯರ್ ಸರ್ಜನರಾಗಿಯೂ, ಎಕ್ಸ್ ಅಫಿಷಿಯೋ ಸ್ಯಾನಿಟರಿ ಕಮಿಷನರಾಗಿಯೂ ಮತ್ತು ಜೈಲುಗಳ ಇನ್ಸ್‌ಪೆಕ್ಟರ್ ಜನರಲ್‌ರವರಾಗಿಯೂ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಡಾ ಮತ್ತು ರೆ. ಕಾಟಿಗಳ ಅಂಡರ್ ಸೆಕ್ರೆಟರಿ ಮೆ|| ಬಿ. ರಾಮಸ್ವಾಮಯ್ಯ, ಬಿ ಎ., ಬಿ ಎಲ್., ರವರು ತಮ್ಮ ನಿತ್ಯಗಟ್ಟಳೆಯ ಕೆಲಸಗಳೊಡನೆ ಮೆ|| ಸುಬ್ರಹ್ಮಣ್ಯಯ್ಯರ್ ರವರು ಬೇರೆ ಉದ್ಯೋಗದಮೇಲೆ ಇರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮುಜರಾಯಿ ಸೂಪರಿಂಟೆಂಡೆಂಟರ ಮತ್ತು ಎಕ್ಸ್ ಅಫಿಷಿಯೋ ಅಂಡರ್ ಸೆಕ್ರೆಟರಿಯ ಉದ್ಯೋಗಗಳ ಚಾರ್ಜನ್ನಿರತಕ್ಕದು

ಅರಮನೆಯ ಇನ್‌ಫೆಂಟ್ರಿಯವರಾದ ಮೆ|| ಬಿ. ರಾಮಕೃಷ್ಣರಾಯರು ಇನ್ನು ಅರಮನೆಯ ಕಂಟ್ರೋಲರೆಂದು ಕರೆಯಲ್ಪಡತಕ್ಕದು.

ಗಣಿಗಳ ಇನ್ಸ್‌ಪೆಕ್ಟರಾದ ಮೆ|| ಆರ್. ಬಕ್ವೆಟ್‌ರವರಿಗೆ ೧೯೧೨ ನೆಯ ಏಪ್ರಿಲ್ ತಾ|| ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ೩ ತಿಂಗಳ ಪ್ರಿವಿಲೇಜ್ ರಜದೊಡನೆ ೧ ವರ್ಷ ೩ ತಿಂಗಳು ಮತ್ತು ೨೧ ದಿವಸಗಳ ಫರ್ಲೋ ರಜವು ಕೊಡಲ್ಪಟ್ಟಿದೆ

ಮೆ|| ಬಕ್ವೆಟ್‌ರವರು ಬರುವವರೆಗೆ ಗಣಿಗಳ ಡೆ|| ಇನ್ಸ್‌ಪೆಕ್ಟರಾದ ಮೆ|| ಎಲ್. ಎಚ್. ಬೆಕ್‌ವಿತ್‌ರವರು ಗಣಿಗಳ ಅಫಿಷಿಯೇಟಿಂಗ್ ಇನ್ಸ್‌ಪೆಕ್ಟರಾಗಿರತಕ್ಕದು.

ಫ್ರಾನ್ಸಿನಲ್ಲಿ ೬ ದಿನ ಚೋರರು ಮಾರ್ಗದಲ್ಲಿ ಹೋಗುತ್ತಿದ್ದ ಒಂದು ಮೋಟಾರು ಬಂಡಿಯನ್ನು ಅಡ್ಡಕಟ್ಟಿ ನಿಲ್ಲಿಸಿ ಅದನ್ನು ನಡೆಯಿಸುತ್ತಿದ್ದವನನ್ನು ಹೊಡೆದು ಆಚೆಗೆ ನೂಕಿ ತಾವು ಬಂಡಿಯೊಳಗೆ ಕುಳಿತು ಅದನ್ನು ನಡೆಸಿಕೊಂಡು ಒಂದು ಜನಾದ ಬ್ಯಾಂಕಿಗೆ ಬಂದು ಅವರಲೊಬ್ಬನು ಬಂಡಿಯೊಳಗೇ ನಿಂತುಬಿಟ್ಟನು, ಮತ್ತೊಬ್ಬನು ಬ್ಯಾಂಕಿನ ಬಾಗಿಲಬಳಿ ಕಾವಲಿಗೆ ನಿಂತುಕೊಂಡನು; ಉಳಿದ ನಾಲ್ವರು ಒಳಗೆಹೋಗಿ ಅಲ್ಲಿದ್ದ ಇಬ್ಬರು ಕೆಲಸಗಾರರನ್ನೂ ಕ್ಯಾಷಿಯರನ್ನೂ ಬೆನ್ನಾಗಿ ಹೊಡೆದು ... ರೂ. ಗಳನ್ನು ಅಪಹರಿಸಿಕೊಂಡು ಮೋಟಾರು ಬಂಡಿಯಲ್ಲಿ ಕುಳಿತು ಕೊಂಡು ಓಡಿಹೋ ... ಸ್ಥಳದಲ್ಲಿ ಎಲ್ಲಿಯೋ ಹೋಯಿ ತಾರು

ಸ್ವದೇಶ ಸಮಾಚಾರ

೧೯೨೭ ನೆಯ ಏಪ್ರಿಲ್ ತಾ|| ೧೧ನೆಯ ಸೋಮವಾರ

ಕಂಚಿಯಲ್ಲಿ ನಡೆಯುವ ಪಂಡಿತರುಗಳ ಪರಿಷತ್ತು

ಹಿಂದೂಶಾಸ್ತ್ರಗಳಲ್ಲಿ ಪಂಡಿತರಾದವರುಗಳು ಒಂದ ಕಡೆಸೇರಿ ಹಿಂದೂಗಳ ಧರ್ಮಾಚರಣೆ ಮತ್ತು ಲೌಕಿಕಕ್ಕೆ ಸಂಬಂಧಿ ವಿಷಯಗಳನ್ನು ಪರ್ಯಾಲೋಚಿಸಿ, ಕಾಲಾನುಗುಣವಾದ ಸುಧಾರಣೆಯನ್ನು ಮಾಡತಕ್ಕ ಬಗೆಗೆ ಕಂಚಿಯ ಪಂಡಿತರುಗಳೂ, ಆಚಾರ್ಯರುಗಳೂ ಮದ್ರಾಸಿನ ಡಾಕ್ಟರ್ ಎಸ್ ಸುಬ್ರಹ್ಮಣ್ಯ ಅಯ್ಯರ್‌ರವರು, ಆನರಬಲ್ ಜಸ್ಟಿಸ್ ಸ್ವಂಪರಂ ಅಯ್ಯಂಗಾರ್‌ರವರು, ಪ್ರೊಫೆಸರ್ ರಾ|| ಬ|| ರಂಗಾಚಾರ್ಯರು ಮೊದಲಾದ ಪ್ರಮುಖ ವಿದ್ವಾಂಸರುಗಳೊಡನೆ ಆಲೋಚಿಸಿ ಈ ತಾ|| ೫ ರಿಂದ ೮ ದಿವಸಗಳವರೆಗೆ ಕಂಚಿಯಲ್ಲಿ ಒಂದು ಪಂಡಿತರುಗಳ ಪರಿಷತ್ತನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ಒಂದು ಕಾರ್ಯಕಾರಿ ಮಂಡಳಿಯನ್ನೇರ್ಪಡಿಸಿಕೊಂಡಿರುವರು ಈ ಪರಿಷತ್ತಿನ ಸಂಬಂಧವಾದ ಪ್ರಕಟನಪತ್ರಿಕೆಗಳೂ, ಆಮಂತ್ರಣಗಳೂ ಎಲ್ಲಾ ಕಡೆಗೂ ಕಳುಹಲ್ಪಟ್ಟಿರುವವು ಕಾರ್ಯಕಾರಿ ಮಂಡಳಿಗೆ ಡಾಕ್ಟರ್ ಸರ್ ಎಸ್ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷರಾಗಿಯೂ, ದಿವಾನ್‌ಬಹದ್ದೂರ್ ಕೆ ಕೃಷ್ಣಸ್ವಾಮಿ ರಾವ್, ಸಿ ಐ ಇ, ಯವರು, ಮ|| ಟಿ ಆರ್ ರಾಮಚಂದ್ರ ಅಯ್ಯರ್‌ರವರು, ಆನರಬಲ್ ಮ|| ಪಿ ಎಸ್ ಶಿವಸ್ವಾಮಿ ಅಯ್ಯರ್, ಸಿ ಐ ಇ, ಯವರು, ಆ|| ಮ|| ಟಿ ವಿ ಶೇಷಗಿರಿ ಅಯ್ಯರ್‌ರವರು, ಆ|| ಮ|| ಬಿ ಎಲ್ ಎ ಗೋವಿಂದರಾಘವಯ್ಯರ್‌ರವರು, ಮ|| ಪಿ ನಾಗಭೂಷಣಂರವರು, ಮ|| ಎಂ ಇ ಪಿಂಗಳಾಚಾರ್ಯರು, ಮಹಾಮಹೋಪಾಧ್ಯಾಯ ಚಂದ್ರಶೇಖರಶಾಸ್ತ್ರಿಗಳು, ಪಂಡಿತ ಟಿ ಲಕ್ಷ್ಮಣಾಚಾರ್ಯರು, ವಿದ್ವಾನ್ ಪ್ರತಿವಾದಿಭಯಂಕರ ಅನಂತಾಚಾರ್ಯರು, ವಿದ್ವಾನ್ ಶ್ರೀಶೈಲ ತಾತಾಚಾರ್ಯರು, ವಿದ್ವಾನ್ ಕಂದಾಡೈ ರಂಗಾಚಾರ್ಯರು, ವಿದ್ವಾನ್ ಕಂದ್ಲವಳ್ಳಂ ಶ್ರೀನಿವಾಸಾಚಾರ್ಯರು ಮತ್ತು ಆಯುರ್ವೇದ ಮಾರ್ತಾಂಡಭಿಷಗ್ಮಣಿ ಪಂಡಿತ ಡಿ ಗೋಪಾಲಾಚಾರ್ಯ, ಎ ವಿ ಎಸ್, ರವರು ಸಭಾಸದ್ಯರಾಗಿಯೂ, ವಿದ್ವಾನ್ ಕಂಚಿಯ ಎಂ ಕುಮಾರ ತಾತಾಚಾರ್ಯರು, ಮ|| ಆರ್ ಸ್ವಾಮಿನಾಥಯ್ಯರ್‌ರವರು ಮತ್ತು ಭಾರತ ಸೇವಾಶ್ರಮದ ಮ|| ವಿ ಎಸ್ ಶ್ರೀನಿವಾಸಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಇರುವರು. ಈ ಪರಿಷತ್ತಿನಲ್ಲಿ (೧) ಸಂಸ್ಕೃತ ವಿದ್ಯಾಭ್ಯಾಸ ಪ್ರೋತ್ಸಾಹ, (೨) ಸಮುದ್ರಯಾನ, (೩) ಮತಾಂತರವನ್ನು ಹೊಂದಿದವರನ್ನು ಹಿಂದೂ ಮತಕ್ಕೆ ಮಗಳಿ ಸೇರಿಸಿಕೊಳ್ಳುವುದು, (೪) ವಿವಾಹವಾಗತಕ್ಕ ಬಾಲಿಕೆಯರ ವಯಸ್ಸು, (೫) ವೈದಿಕಾಚರಣೆಗಳು ಮತ್ತು ಧರ್ಮಶಾಸ್ತ್ರಾನುಸಾರವಾದ ಸಾಮಾನ್ಯ ಆಚರಣೆಗಳು, (೬) ಹಿಂದೂಗಳಲ್ಲಿ ಆವಶ್ಯಕವಾದ ಬದಲಾವಣೆಗಳು, (೭) ಪಂಡಿತರುಗಳ ಐಕ್ಯ, ಸಹಾನುಭೂತಿ ಮತ್ತು ಪರಸ್ಪರ ಮರ್ಯಾದೆಗಳನ್ನು ಕಲ್ಪಿಸುವ ಉಪಾಯ ಇಂತಹ ವಿಷಯಗಳು ಪರ್ಯಾಲೋಚನೆಗಿಡಲ್ಪಟ್ಟಿರುವುವು ಈ ಪರಿಷತ್ತಿಗೆ ಬರತಕ್ಕ ಪಂಡಿತರುಗಳ ಪ್ರಯಾಣದ ವೆಚ್ಚವು ಕಾರ್ಯಕಾರಿ ಮಂಡಳಿಯವರಿಂದ ಕೊಡಲ್ಪಡುವುದಲ್ಲದೆ, ಅವರುಗಳ ಊಟ ಉಪಚಾರಗಳೂ ಮಂಡಳಿಯವರಿಂದಲೇ ನಿರ್ವಹಿಸಲ್ಪಡುವುವು.

ಈಗ ಶಾಸ್ತ್ರದಲ್ಲೂ, ನಮ್ಮ ಪೂರ್ವಾರ್ಯರಾದ ಋಷಿ ಮೊದಲಾದ ದೇಶೀಯರೂ ಕಾಲಾನುಗುಣವಾಗಿ ಸಮಾಜ ಸುಧಾರಣೆಗಳನ್ನು ಮಾಡಿಕೊಂಡು ಸುಖಸಂಪತ್ತಿನಿಂದ ಬಾಳುತ್ತಿರುವಾಗ್ಗೆ, ಭಾರತೀಯರು ಹಿಂದಿನ ಕಾಲಕ್ಕೆ ಅನುಕೂಲವಾಗಿದ್ದ ಆಚಾರವ್ಯವಹಾರಗಳನ್ನು ಕಟ್ಟಿಕೊಂಡು ಈ ನವನಾಗರಿಕ ಕಾಲದಲ್ಲೂ ಒದ್ದಾಡುತ್ತಿದ್ದರೆ ಎಂದಿಗೂ ಅಭಿವೃದ್ಧಿಗೆ ಬರುವುದಿಲ್ಲವೆಂಬುದರ ಮೇಲೆ, ಹಿಂದೂಗಳು ತಮ್ಮಲ್ಲಿ ಈಗ ಆಚರಣೆಯಲ್ಲಿರುವ ಬಾಲ್ಯವಿವಾಹವನ್ನು ಬಿಟ್ಟು ಪ್ರೌಢವಿವಾಹವನ್ನೂ ಪುನರ್ವಿವಾಹವನ್ನೂ ಮಾಡಲು, ಸ್ತ್ರೀಯರು ವಿದ್ಯಾವತಿಯರೂ, ಬುದ್ಧಿವಂತೆಯರೂ ಆಗಿ ತಮ್ಮ ಪತಿಗಳ ಕಾರ್ಯಗಳಲ್ಲಿ ನೆರವಾಗುವಂತೆ ಮಾಡಲು ಸಮುದ್ರಯಾನ ಮಾಡಿದವರನ್ನು ಜಾತಿಯಿಂದ ಬಹಿಷ್ಕರಿಸದೆ ಸಮ್ಮತಿಯಿಂದ ಸೇರಿಸಿಕೊಳ್ಳಲು, ಅತ್ಯಂಜರನ್ನು ತಿರಸ್ಕಾರದಿಂದ ನೋಡದೆ ಅವರುಗಳು ವಿದ್ಯಾವಂತರೂ, ವಿವೇಕಿಗಳೂ ಆಗುವಂತೆ ಮಾಡಲು ಜಸ್ಟಿಸ್ ಚಂದಾವರ್ಕರವರು, ದಿವಾನ್‌ಬಹದ್ದೂರ್ ರಘುನಾಥರಾಯರು ಮೊದಲಾದ ಸಮಾಜ ಸುಧಾರಕರು ಹಾತೊರೆಯುತ್ತಿರುವುದು ಎಲ್ಲರಿಗೂ ತಿಳಿದಿರುವುದಾಗಿದೆ. ಆದರೆ ಈ ಕಾರ್ಯಗಳಲ್ಲಿ ಇದುವರೆಗೆ ಯಾವ ಪಂಡಿತರುಗಳಾಗಲಿ, ಆಚಾರ್ಯರುಗಳಾಗಲಿ ಪ್ರಯತ್ನಿಸಿದುದಿಲ್ಲ. ಅಂತಹದರಲ್ಲಿ ಈಗ ಮಹಾಮಹಿಮರಾದ ಪಂಡಿತರುಗಳೇ ಸಭೆಸೇರಿ ಸಮಾಜಸುಧಾರಣಾ

—ಲೋಚಿಸಿ, ಅನುಕೂಲವಾ—

ರಗಳನ್ನು ಮಾಡಲು ಸಂಕಲ್ಪಿಸಿರುವುದು ಶುಭಸೂಚಕವೇ ಸರಿ ಬಾಲ್ಯವಿವಾಹವನ್ನು ತಪ್ಪಿಸಿ ಪ್ರೌಢವಿವಾಹವನ್ನು ಆಚರಣೆಗೆ ತರುವುದು, ಪುನರ್ವಿವಾಹಕ್ಕೆ ಪ್ರೋತ್ಸಾಹವನ್ನು ಕೊಡುವುದು, ಸಮುದ್ರಯಾನಮಾಡಿದವರನ್ನು ಜಾತಿಗೆ ತೆಗೆದುಕೊಳ್ಳುವುದು, ಒಂದು ಜಾತಿಯ ಭಿನ್ನಪ್ರಭೇದದವರು ಪರಸ್ಪರ ಸಹಪಂಕ್ತಿಭೋಜನವನ್ನೂ, ಬಾಂಧವ್ಯವನ್ನೂ ಬೆಳೆಸುವುದು ಮೊದಲಾದ ಕಾರ್ಯಗಳು ಪೂರ್ವಾಚಾರಕ್ಕೂ, ಶಾಸ್ತ್ರಸಮ್ಮತಿಗೂ ವಿರುದ್ಧವಾದುವೆಂದು ತಮ್ಮ ಪಟ್ಟಕ್ಕೆ ತಾವೇ ಹೇಳಿಕೊಳ್ಳುತ್ತ, ಅಂತಹ ಕಾರ್ಯಗಳಲ್ಲುದ್ಯುಕ್ತರಾದವರನ್ನು ಅವರಿಗೆ ಶಾಸ್ತ್ರಜ್ಞಾನವಿಲ್ಲವೆಂದು ಮೊದಲಾಗಿ ದೂಷಿಸುತ್ತ, ತಾವು ಹೇಳುವುದೇ ಮಹರ್ಷಿವಾಕ್ಯವೆಂದು ವಿಜೃಂಭಿಸುತ್ತಿರುವ ಪಂಡಿತವರ್ಗ್ಯರು ಕಂಚಿಯ ಮಹಾಪಂಡಿತರುಗಳು ಏರ್ಪಡಿಸಿರುವ ಪರಿಷತ್ತಿಗೆ ಅವಶ್ಯವಾಗಿ ದಯಮಾಡಿಸಿ, ಅಲ್ಲಿ ಪರ್ಯಾಲೋಚನೆಗಿಡಲ್ಪಟ್ಟಿರುವ ವಿಷಯಗಳನ್ನು ಕುರಿತು ಸಯುಕ್ತಿಕವಾಗಿ ಜಿಜ್ಞಾಸೆಯನ್ನು ಮಾಡಿ ತಾವು ಹಿಂದುಗಡೆ ಹೇಳಿಕೊಳ್ಳುತ್ತಿರುವುದೇ ಸರ್ವಸಮ್ಮತವಾಗಿ ತೋರಿದಲ್ಲಿ ಅದರಂತೆಯಾಗಲಿ, ಅಥವಾ ತಾವು ಹೇಳುವುದು ಅನುಚಿತವೆಂದಾದಲ್ಲಿ ಬಹುಜನರು ಸಮ್ಮತಿಸುವಂತಹ ನಿರ್ಧಾರಗಳನ್ನು ಮಾಡಿಸಿ, ಕಂಚಿಯ ವಿದ್ವಾಂಸರುಗಳು ಕೈಕೊಂಡಿರುವ ಮಹಾಕಾರ್ಯವು ನಿರ್ವಿಘ್ನವಾಗಿ ನಡೆದು ಸಫಲವಾಗಲು ಸಹಾಯ ಮಾಡುವರೆಂದೂ, ಸಭೆಯಲ್ಲಾದ ನಿರ್ಣಯಗಳು ಸರ್ವತ್ರ ಆಚರಣೆಗೆ ಬರಲು ನಿರ್ವಂಚನೆಯಿಂದ ಪ್ರಯತ್ನಿಸಿ ಕೀರ್ತಿವಂತರಾಗುವರೆಂದೂ ನಾವು ನಿರೀಕ್ಷಿಸುತ್ತೇವೆ

ಸೀನಿಯರ್ ಸರ್ಜನರವರು

ಮೈಸೂರ ಸಂಸ್ಥಾನದ ಸೀನಿಯರ್ ಸರ್ಜನರಾಗಿದ್ದ ಕರ್ನಲ್ ಸ್ಮಿತ್‌ರವರು ಉದ್ಯೋಗವನ್ನು ಬಿಟ್ಟು ಬ್ರಿಟಿಷ್ ಸರ್ಕಾರದಲ್ಲಿ ತಮ್ಮ ಪೂರ್ವದ ಉದ್ಯೋಗದಮೇಲೆ ಹೋದಂದಿನಿಂದ ಎಂದರೆ ೧೯೧೧ ನೆಯ ಜೂನ್ ತಾ|| ೧೭ ರಿಂದ ಸೀನಿಯರ್ ಸರ್ಜನರ, ಸ್ಯಾನಿಟರಿ ಕಮಿಷನರ ಮತ್ತು ಕಾರಾಗೃಹಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಉದ್ಯೋಗಗಳನ್ನು ಅಫಿಷಿಯೇಟಿಂಗಾಗಿ ನೋಡುತ್ತಿದ್ದ ಡಾಕ್ಟರ್ ಪಿ ಎಸ್ ಅಚ್ಯುತರಾಯರು ಮೇಲಿಕಂಡ ಉದ್ಯೋಗಗಳಲ್ಲಿ ಸ್ಥಿರಗೊಳಿಸಲ್ಪಟ್ಟಿರುವರೆಂದು ತಿಳಿಸಲು ಪರಮಾನಂದವಾಗುತ್ತದೆ ಈ ಸಂಸ್ಥಾನದ ಸರ್ಜನರ ಅಧಿಕಾರಸ್ಥಾನವು ಏರ್ಪಾಟಾದಂದಿನಿಂದ ಕಳೆದ ಜೂನ್‌ತಿಂಗಳವರೆಗೂ ಯೂರೋಪ್ಯಡಾಕ್ಟರುಗಳಿಗೇ ಅದು ಕೊಡಲ್ಪಡುತ್ತಿದ್ದಿತಲ್ಲದೆ, ದೇಶೀಯರಾದ ಡಾಕ್ಟರುಗಳಲ್ಲಾರಿಗೂ ಕೊಡಲ್ಪಡುತ್ತಿರಲಿಲ್ಲವು ಇದರಂತೆಯೇ ಸಂಸ್ಥಾನದ ಚೀಫ್ ಇಂಜನಿಯರ್ ಸ್ಥಾನವು ಪ್ರಸಿದ್ಧ ಇಂಜನಿಯರೆಂದು ಬ್ರಿಟಿಷ್ ಮತ್ತು ನೈಜಾಂ ಸರ್ಕಾರಗಳಲ್ಲೂ, ಸೀಮೆಯಲ್ಲೂ ಹೆಸರ್ಗೊಂಡಿರುವ ಮ|| ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಬಿ ಎ, ಎಲ್.ಸಿ ಇ, ಸಿ ಐ ಇ, ಯವರಿಗೆ ಲಭ್ಯವಾಗುವುದಕ್ಕೆ ಮೊದಲು ದೇಶೀಯರಲ್ಲಾರಿಗೂ ಕೊಡಲ್ಪಟ್ಟಿರಲಿಲ್ಲವು ಇದಕ್ಕೆ ಈ ಉಭಯ ಉನ್ನತಾಧಿಕಾರಸ್ಥಾನಗಳು ಯೂರೋಪ್ಯರಿಗಲ್ಲದೆ ದೇಶೀಯರಿಗೆ ಕೊಡಲ್ಪಡಲಾಗದೆಂಬುದು ಬ್ರಿಟಿಷ್ ಸರ್ಕಾರದವರ ಅಭಿಪ್ರಾಯವಾಗಿದ್ದುದೇ ಕಾರಣವೆಂದು ಕೆಲರು ಹೇಳುತ್ತಾರೆ ಆದರೆ ಈಗ ಈ ಉಭಯಸ್ಥಾನಗಳೂ, ದೇಶೀಯರಿಗೇ ಕೊಡಲ್ಪಟ್ಟಿರುವುದರಿಂದ ಮೇಲೆ ಹೇಳಿದ ಕಾರಣವು ಸಮಂಜಸವಾದುದಲ್ಲವೆಂದೂ, ಬಹು ಉತ್ತರವಾದಿತ್ವವುಳ್ಳುದೂ, ಘನವೂ ಆದ ಸ್ಥಾನಗಳಿಗೆ ಅರ್ಹರಾದ ದೇಶೀಯರ ನಿರೀಕ್ಷಣೆಯೇ ಕಾರಣವಾಗಿದ್ದಿತೆಂದೂ ಸ್ಪಷ್ಟವಾಗುತ್ತದೆ ಚೀಫ್ ಇಂಜನಿಯರ ಸ್ಥಾನವು ಸ್ವದೇಶೀಯರಾದ ಮ|| ಎಂ ವಿಶ್ವೇಶ್ವರಯ್ಯನವರಿಗೆ ಲಭ್ಯವಾದುದರಿಂದ, ಈ ದೇಶೀಯರಿಗುಂಟಾಗಿರುವ ಸಂತೋಷವು ಸ್ವದೇಶೀಯರಾದ ಡಾಕ್ಟರ್ ಅಚ್ಯುತರಾಯರಿಗೆ ಸೀನಿಯರ್ ಸರ್ಜನರ ಉದ್ಯೋಗವು ಕೊಡಲ್ಪಟ್ಟಿರುವುದರಿಂದ ಇನ್ನೂ ಅತಿಶಯವಾಗಿರುವುದು.

ಡಾ|| ಅಚ್ಯುತರಾಯರು ೧೮೫೭ ನೆಯ ಡಿಸೆಂಬರ್ ತಾ|| ೨೦ ರಲ್ಲಿ ಸಾಧಾರಣ ಕುಟುಂಬದಲ್ಲಿ ಜನಿಸಿ, ಬೆಂಗಳೂರಲ್ಲಿ ವಿದ್ಯಾಭ್ಯಾಸಮಾಡಿ ಅಲ್ಲಿಂದ ಬೊಂಬಾಯಿಗೆ ಹೋಗಿ ಅಲ್ಲಿ ವೈದ್ಯಪರೀಕ್ಷೆಗೆ ಓದಿ ಎಲ್. ಎಂ. ಅಂಡ್ ಎಸ್. ಪ್ರಶಸ್ತಿಯನ್ನು ಪಡೆದುಕೊಂಡು ಬಂದು ೧೮೮೪ ನೆಯ ಏಪ್ರಿಲ್ ತಾ|| ೧ ರಲ್ಲಿ ಮೈಸೂರ ಸರ್ಕಾರದಲ್ಲಿ ೩. ನೆಯ ತರಗತಿಯ ಅಸಿಸ್ಟೆಂಟ್ ಸರ್ಜನರಾಗಿ ಉದ್ಯೋಗಕ್ಕೆ ಸೇರಿ ೧೮೮೯ರಲ್ಲಿ ೨ ನೆಯ ತಾ|| ಗೆ ಅಭಿವೃದ್ಧಿಗೊಳಿಸಲ್ಪಟ್ಟು ಬೆಂಗಳೂರು ಮೈಸೂರು, ಕಡೂರು ಮತ್ತು ಶಿವಮೊಗ್ಗೆಗಳಲ್ಲಿ ಕೆಲಸ ಮಾಡಿ, ೧೮೯೧ ರಲ್ಲಿ ೩. ನೆಯ ತಾ|| ಸಿವಿಲ್ ಸರ್ಜನರಾಗಿ ಮಾಡಲ್ಪಟ್ಟರು. ಶಿವಮೊಗ್ಗ ಮತ್ತು ಕಡೂರುಗಳಲ್ಲಿದ್ದು ೧೮೯೬ ರಲ್ಲಿ ೨ ನೆಯ ತಾ|| ಗೆ ಅಭಿವೃದ್ಧಿಯನು. ಹೊಂದಿ ಮೈಸೂರಿಗೆ ಬಂದು ೧೮೯೮ ರಲ್ಲಿ ಮೈಸೂರ

೯೯ ರಲ್ಲಿ ಚೀಫ್ ಪ್ಲೇಗ್ ಆಫೀ

ಅಮೃತಸರದಲ್ಲಿ ಇಬ್ಬರು ಪೊಲೀಸರು ಒಬ್ಬ ಪಟವಾರಿಯನ್ನು ಬೆದರಿಸಿ ಸ್ವಲ್ಪ ಹಣವನ್ನೂ ನೋಟುಗಳನ್ನೂ ಕಸಿದುಕೊಂಡಿದ್ದುದರಿಂದ ಇಬ್ಬರಿಗೂ ೭ ವರ್ಷದ ಕಠಿಣ ಕಾರಾಗಾರವಾಸ ಶಿಕ್ಷೆಯಾಯಿತು.

ಲಂಡನ್ನಿನಲ್ಲಿ ಪೂರ್ವಭಾಗದಲ್ಲಿ ೬ ಸಾವಿರ, ಪಶ್ಚಿಮಭಾಗದಲ್ಲಿ ೫ ಸಾವಿರ ಮಂದಿ ದರ್ಜಿಯವರು ಕಡ್ಡಾಯಮಾಡಿಕೊಂಡು ಕೆಲಸಮಾಡದೆ ನಿಂತುಬಿಟ್ಟಿದ್ದಾರೆ ಇದರಿಂದ ಬಟ್ಟೆ ವರ್ತಕರಿಗೆ ಕೆಲಸವು ೧ ಕ್ಕೆ ದ್ವಿಗುಣವಾಗಿದೆ

ಗೋಂಬಾಯಿ, ಅಧಿಪತಿಗಳಲ್ಲಿ ಎಂಗು ರಾತ್ರಿ ... ಯಿ ಕೂಡುತ್ತಿದ್ದು ಕೆಲಕಾಲದಿಂದ ನಿಂತುಹೋಗಿದ್ದಿತು ಅದನ್ನು ಮತ್ತೆ ಕೂಡುವಂತೆ ನೋಡಬೇಕೆಂದು ಸರ್ಕಾರ ಕೌನ್ಸಿಲ್ ಪಟ್ಟ ತೀರ್ಮಾನವನ್ನು ಪ್ರಯತ್ನಿಸುತ್ತಿದ್ದಾರೆ

> ಮಹಾರಾಣಿ ತೀರ್ಥಪತ್ತದ ... ಸಂಸ್ಥಾನದ
> ಪರೀಕ್ಷಾಮಿಕ ಪತ್ರಗಳ ಲೇಖಕ
> ... ವಿಜೃಂಭಣೆಯಿಂದ ...
> ನಿರ್ಣಯಗಳನ್ನು ಮಾಡಿ ಮುಂದ
> ಷ ತಿರುವನಾಗರದಲ್ಲಿ ...
> ದು.
> ಮಹಾರಾಣಿಯಿಂದ ಧರಿಸಿ ...
> ಯಿಂದ ಮೇಲಕ್ಕೆ ಬೋಧಿಸುವ
> ಒಂದು ನೆ ... ವಿಚಾರಿಸ್ಟ್ ...

ದಯವಿಟ್ಟು ಇಂಗ್ಲೆಂಡಿನಿಂದ ಬರಿಕರು ... ಪರಿಣಾಮದಲ್ಲಿಯ ... ಗಳನ್ನು ...

ಕಳೆದ ತಾ॥ ೧೭ ರ ರಾತ್ರಿ ಮಾಯಮ್ಮ ಮಾಡಲೆಯ ದಕ್ಷಿಣ ... ಎಂಬ ಹಳ್ಳಿಗೆ ೩ ಜನ ಕಳ್ಳರು ದಾಳಿ ಯಂಬುದನ್ನು ಧರಿಸಿಕೊಂಡು ನುಗ್ಗಿ ಆ ಹಿಂದೂಗಳನ್ನು ಅಪಹರಿಸಿಕೊಂಡು ಹೋದರು ಆ ರಾತ್ರಿ ಗಾಢಾಂಧಕಾರವಾಗಿದ್ದುದರಿಂದ ಹಳ್ಳಿಯ ಜನರು ಅವರನ್ನು ಹಿಂಬಾಲಿಸಿ ಹಿಡಿಯಲು ಸಾಧ್ಯವಿಲ್ಲವಾಯಿತು.

ಭರತಖಂಡದ ವೈಸರಾಯರಿಗೆ ಕೆಲಕಾಲದವರೆಗೆ ಆಕ್ಟಿಂಗಾಗಿ ಮತ್ತೊಬ್ಬರನ್ನು ನಿಯಮಿಸಬೇಕಾಗಿ ಬಂದಾಗ ಮದ್ರಾಸ್ ಗವರ್ನರನ್ನೇ ತೆಗೆದುಕೊಳ್ಳುವ ವಿಷಯದಲ್ಲಿ ಇರುತ್ತಿದೆ ... ಜನರ ಕಲ್ಪನೆ ... ಅದೇ ಪತ್ರಿಕೆಯು ಹೇಳಲ್ಪಟ್ಟಿದೆ ಈ ಪಕ್ಷ ವಿಚಾರವಿರುವುದ ಬಂಗಾಳದ ಗವರ್ನರನ್ನು ... ಗವರ್ನರುಗಳಿಗೆ ... ಅನ್ಯಾಯವನ್ನುಂಟು ಮಾಡಿದಂತಾಗುವುದೆಂದು ಕೆಲರು ಆಕ್ಷೇಪಿಸುತ್ತಿದ್ದಾರೆ

೧೮೯೯ ನೆಯ ಇಸವಿ ಜುಲೈ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ ... ೩ ತಿಂಗಳವರೆಗೂ ಕುದುರೆಯ ಪಂದ್ಯಗಳು ನಡೆಯುತ್ತವೆ ಇದರಲ್ಲಿ ಲಂಡನಿನ ... ತರದಲ್ಲಿ ಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಇದು ಒಂದು ದೊಡ್ಡ ಜೂಜಾಗಿರುತ್ತದೆ ಈ ಜೂಜಿನ ಪಾಪವನ್ನು ತಡೆಯುವ ವಿಷಯದಲ್ಲಿ ಮೊನ್ನೆ ನಡೆದ ಪಾರ್ಲಿಮೆಂಟಿನ ಸಭೆಯಲ್ಲಿ ಕೂಡಿದ್ದ ಸಭ್ಯರಲ್ಲಿ ಒಬ್ಬರು ವಿಚಾರ ಮಾಡಬೇಕೆಂದು ಒಂದು ನಿರ್ಣಯವನ್ನು ತಂದಿದ್ದಾರೆ

ಈ ತಿಂಗಳು ತಾ॥ ೧೦ ರ ರಾತ್ರಿ ದಕ್ಷಿಣ ಇಂಡಿಯಾ ರೈಲ್‌ವೇ ಕಂಪನಿಯ ... ಎಂಬ ನಿಲ್ದಾಣಗಳಿಗೆ ... ಇರುವಾಗ ೬ ವ ... ಸಾಮಾನು ಬಂಡಿಗಳ ಕಾವಲಿನ ... ಪಾರ್ಸಲುಗಳೂ ... ನಾಶವಾಯಿತು ... ಒಟ್ಟು ... ರೂ ಇದ್ದ ... ಈ ವಾರದಲ್ಲಿ ... ದಿನಗಳವರೆಗೆ ... ಕಳ್ಳತನದ ... ಅತ್ತಿಯರು ... ವು ಪ್ರಕಟವಾಗಿದೆ

ಮದ್ರಾಸ್ ಹೈಕೋರ್ಟಿನ ನ್ಯಾಯಾಧಿಪತಿಗಳಲ್ಲಿ ಶ್ರೀಯುತರಾದ ಸುಬ್ರಹ್ಮಣ್ಯ ಅಯ್ಯರು ಅಣ್ಣಾಸ್ವಾಮಿ, ಶಿವಸ್ವಾಮಿ ಅಯ್ಯರು ಈ ಎಲ್ಲರೂ ಸ್ವದೇಶೀಯರು ನ್ಯಾಯಾಧಿಪತಿಗಳಾಗಿದ್ದಾರೆ ಬೊಂಬಾಯಿ ಹೈಕೋರ್ಟಿನ ನ್ಯಾಯಾಧಿಪತಿಗಳಲ್ಲಿ ಶ್ರೀಯುತರಾದ ಚಂದ್ರಾವರ್ಕರ್, ರಾನಡೆ ಎಂಬ ಇಬ್ಬರೇ ಸ್ವದೇಶೀಯರಿದ್ದಾರೆ ಅದುಕಾರಣ ಇಲ್ಲಿಯೂ ಸ್ವದೇಶದ ನ್ಯಾಯಾಧಿಪತಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಬೊಂಬಾಯಿ ನ್ಯಾಯಾಧಿಪತ್ಯದ ಸಭಿಕರು ... ಪ್ರಕಟವಾಗಿ ಸ್ಟೇಟ್ ಸೆಕ್ರೆಟರಿಯವರಿಗೆ ಬಿನ್ನಯಿಸಿಕೊಂಡಿದ್ದಾರೆ

ಅಮೇರಿಕಾದಲ್ಲಿ ಮದುಮಗಳು ಗಂಡನ ಕೈ ಹಿಡಿಯುವ ಒಂದು ವಿಚಿತ್ರ ಪದ್ಧತಿ ಅತ್ಯಂತ ಪ್ರಸಿದ್ಧವಾಗಿದೆ ಅವರ ಮದುವೆಗಳೆಲ್ಲಾ ಕ್ರೈಸ್ತ ದೇವಾಲಯದಲ್ಲೇ ನಡೆಯುವುದು ವಧೂವರರಿಗೂ ಯಾವ ರೋಗವೂ ಇಲ್ಲವೆಂಬುದಕ್ಕೆ ವೈದ್ಯರ ಅಭಿಪ್ರಾಯ ... ಅವರು ... ವರನು ಮದುವೆಯನ್ನು ... ಹೋಗುವುದಕ್ಕೆ ಸ್ವಲ್ಪ ... ಎಂಬ ವಿಷಯದಲ್ಲಿ ಒಬ್ಬ ದೊಡ್ಡಮನುಷ್ಯನ ಅಭಿಪ್ರಾಯ ... ವಧುವು ... ಮೊದಲಾದ ... ವನ್ನು ... ಒಂದು ಯೋಗ್ಯತಾಪತ್ರವು ಬೇಕು ಇವುಗಳನ್ನು ತೋರಿಸದಿದ್ದರೆ ಅಲ್ಲಿನ ಪುರೋಹಿತನು ಮದುವೆಮಾಡಿಸುವುದಿಲ್ಲ

ಈ ತಿಂಗಳು ತಾ॥ ೯ ರಲ್ಲಿ ರಾಜಮಹೇಂದ್ರದಲ್ಲಿ ರಾವ್ ವೀರೇಶಲಿಂಗಂ ಪಂತುಲುಗಾರವರ ಆಧಿಪತ್ಯದಲ್ಲಿ ಒಬ್ಬ ವೈಶ್ಯನ ವಿವಾಹವಾಯಿತು. ಕನ್ಯೆಯ ಎಂಬಾಕೆಗೆ ೧೪ ವರ್ಷ ದ ಮಗಳು ... ವರನು ಈಕೆಯ ತಂದೆಯಾದ ... ಇವರಿಬ್ಬರೂ ವೈಶ್ಯರು ಮೊದಲು ... ಪುನರ್ವಿವಾಹ ವಿಷಯದ ಚರ್ಚೆ ಹುಟ್ಟಿದಾಗ ... ವಿವಾಹವನ್ನು ಮದುವೆಯಾಗಬೇಕೆಂದು ... ಈ ಕನ್ನೆಯು ... ಈ ಕನ್ಯೆ ಈಕೆಯು ವೀರೇಶಲಿಂಗಂ ಪಂತುಲುಗಾರವರ ... ಓದಿ ೬ ನೆ ತರಗತಿಯಲ್ಲಿ ಉತ್ತೀರ್ಣಳಾಗಿರುವಳು. ವರನು ... ದಲ್ಲಿ ... ಮದರಾಸಿನ ... ಕಾಲೇಜಿನ ... ದರದಿಂದ ೬೦ ವರ್ಷವಯಸ್ಸುಳ್ಳ ದೊಡ್ಡ ವೈಶ್ಯಕುಟುಂಬಕ್ಕೆ ಸೇರಿದ ... ಎಂಬಾತನು ಈ ಮದುವೆಗೆ ... [redacted]ಗರು ಸಹ

> ಬೇಡಿದ್ದರು ಆದರಿಂದ ... ಯು
> ತು ... ಪೊಲೀಸಿ... ಅಥ
> ... ವಿಂಗಂ
> ... ಶಂ
> ... ಕಗಳೆ
> ... ನವು
> ... ದುಡು

ಮದುವೆಯು ... ನಿಗಾಗಿ ... ವ್ಯಕ್ತಿಗೆ ... ನಿಷ್ಠೆ ... ವಧುವನ್ನು ಪರಿಶೋಧಿಸಿದರು. ಪೈಸೆಷ್ಟು ... ದಿನದಲ್ಲಿ ... ಬೆಂಗಳೂರು ... ಮೊದಲು

ಶಿರಹಟ್ಟಿ ತಾಲೂಕು ಪಟ್ಟಣದ ೮ ೧೦ ಗಳಾದ ಸ್ವಾಮಿಗಳು ಮೆಣಸಿನ ಮನೆತನ್ನ ಚನ್ನಬಸವ ಪಿತ್ತಾಂ ದರ್ಮನ ಇವರುಗಳ ಮಗ್ನಳ ವಿವಾಹವಂದರೋ ನ್ನೇನಗಲ್ಲ ಶ್ರೀ ಮೈ ವೀರಸಂಗಪ್ಪ ನವರ ಜ್ಞಾಪನಾರ್ಥವಾಗಿ ತೆಗೆಯಲ್ಪಟ್ಟ ಅಗ್ರತಾಂಬೂ ಲದ ಬಾಬತು ಗರಬಡಿಯ ಸಂದಿಗ್ಧತ್ತದೆ ಮ ಶು

ಪತ್ರವ್ಯವಹಾರವು.

ವೀರಶೈವರಿಗೊಂದು ವಿಜ್ಞಾಪನೆ

ಸೋದರರೆ! ತ್ರಿಮೂರ್ತಿಗಳಲ್ಲಿ ಹರನು ಅಧಿಕನೆ ವಿನಿಸೋದರರೆ ಸ್ವರೂಪವ ಹರಿಯು ಅವನ ಕಿಂಕರನೆಂದೂ ವೈಷ್ಣವೇತರರು ಸ್ಥಾಪಿಸಿರುತ್ತಾರಷ್ಟೆ. ಹರನ ಅಡಿದಾವರೆಗ ಳನ್ನು ಹರಿಯು ಸಹಸ್ರ ಕಮಲಗಳಿಂದ ಅರ್ಚಿಸಿ ಅವನೊ ಲುಮೆಯನ್ನು ಪಡೆದಿರುವುದೂ, ಜಾನಕೀವಲ್ಲಭನಾದ ರಾ ಮನು ಶಿವನನ್ನು ಪೂಜಿಸಿದುದೂ, ರಾಮನವರೊಡೆಯ ನು ಹರನನ್ನಾರಾಧಿಸಿ ಪುತ್ರನನ್ನು ಪಡೆದು ಅವನಿಗೆ ಸಾಂ ಬನೆಂಬ ನಾಮವಿಟ್ಟಿರುವುದೂ, ಜಗದ್ಗುರುಗಳಾದ ಶ್ರೀಶಂ ಕರ ಭಗವತ್ಪಾದರು ಚಂದ್ರಮೌಳೀಶ್ವರನನ್ನು ಪ್ರಧಾನದೈ ವವೆಂದು ಭಾವಿಸಿ ಆ ದೇವನ ಚರಣವನ್ನು ಪಡೆದಿರುವುದೂ ನೋಡಿದರೆ ನಿಶ್ಚಯವೆಂದು ನಂಬಬಹುದಾಗಿದೆ.

ಹರಿಯು ಸಹಸ್ರಕಮಲಗಳನ್ನು ತೆಗೆದುಕೊಂಡು ಶಿವ ನನ್ನು ಪೂಜಿಸುವಾಗ ಶಂಕರನು ಇವನ ಭಕ್ತಿಯನ್ನು ಪರೀಕ್ಷಿ ಸಲು ಒಂದು ಪುಷ್ಪವನ್ನು ಅದೃಶ್ಯಮಾಡಿದಂತೆಯೂ ಹರಿಯು ಸಂಕಲ್ಪಭಗ್ನನಾಗಿ ಅದನ್ನು ನಿವಾರಿಸಲು ತನ್ನ ಕಮಲನೇ ತ್ರವನ್ನು ಅರ್ಪಿಸಿ, ಹರನೊಲುಮೆಯನ್ನು ಪಡೆದಂತೆಯೂ ಪುರಾಣಪ್ರಸಿದ್ಧ. ಹರಪ್ರೀತಿಗೆ ಪಾತ್ರನಾದ ಹರಿಯು ಪ್ರ ತಿಭಕ್ತನಾದರೂ ತನ್ನ ಲಿಂಗವನ್ನು ಧರಿಸುವಂತೆ ಹ ರನೇಕೆ ವಿಧಿಸಲಿಲ್ಲ? ಹಾಗೆ ಧರಿಸುವುದು ಶಂಕರನಿಗೆ ಅಭಿ ಮತವಿರಲಿಲ್ಲವೆಂದು ತೋರುತ್ತಿಲ್ಲವೆ? ಶಂಕರನಿಗಿಂತಲೂ ತನ ಭಕ್ತರು ಅಧಿಕರೆನ್ನುವ ತಾವುಗಳು ಹರಿಯನ್ನು ಏಕೆ ಕಡೆಗಣಿಸಬಾರದು? ಹರಿಯು ಹರನ ಪ್ರಥಮಭಕ್ತನಾಗಿದ್ದೂ ತಮ್ಮ ಮತೀಯರು ಅವನನ್ನು ಪೂಜಿಸದೆ ಇರುವುದ ರಿಂದ ಅವನು ಹರನ ಭಕ್ತನಲ್ಲವೆಂದೂ, ಭಕ್ತನೇ ದೈವವೆ ನ್ನುವ ತಮ್ಮಗಳ ನಿಯಮವು ತಪ್ಪಾದುದೆಂದೂ ತೋರುವು ದು. ಈ ನನ್ನ ಸಂಶಯವನ್ನು ನಿವೃತ್ತಿಗೊಳಿಸುವ ಮಹ ನೀಯರನ್ನು ವಂದಿಸುವೆನು

ಎಸ್. ನಾರಣಪ್ಪ.
ಹೆಡ್ಮಾಸ್ಟರು, ಲೀಡಕಲ್ಲು

ಹುಬ್ಬಳ್ಳಿಯಲ್ಲಿರುವ ಮ॥ ರಾ॥ ಸಾಹುಕಾರ ಸಿದ್ರಾಮಪ್ಪ ಮಲ್ಲಿಶೆಟ್ಟ ರವರ ಪೌತ್ರರಾದ ಮ॥ ಶ್ರೀಕಂಠಪ್ಪನವರ ಸಹೋದರಿಯೂ ಸೌ॥ ಸಂಗವ್ವನನ್ನು ಹೊಳೆನರಸೀಪುರದಲ್ಲಿರುವ ಮ॥ ಸೋ ಮಶೆಟ್ಟಿ ಮಲ್ಲಪ್ಪನವರ ಪುತ್ರರಾದ ಮ॥ ರುದ್ರಪ್ಪನವರಿಗೆ ಕೊಟ್ಟು ವಿವಾಹವನ್ನು ಹೋದ ಏಪ್ರಿಲ್ ತಾ॥ ೨೮ ರಲ್ಲಿ ಅತಿ ವಿಜೃಂಭಣೆಯಿಂದ ಹಾಸನದಲ್ಲಿ ನೆರವೇರಿಸಿದರು. ಈ ಮುಹೂರ್ತ ಸಮಾರಂಭಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಆ ದಿವಸ ಸುಮುಹೂರ್ತ ದಲ್ಲಿ ಬಂಧುಮಿತ್ರರು ನೆರೆದಿದ್ದರು. ಆ ದಿವಸ ಸುಮುಹೂರ್ತ ದ ಬಳಿಕ ಪೌರಜನರಿಂದ ಬಂದಿದ್ದ ಆಂಗ್ಲೋವ ರ್ನಾಕ್ಯುಲರ್ ಸ್ಕೂಲ್ ರಿಟೈರ್ಡ ಹೆಡ್ಮಾಸ್ಟರ್ ಮ॥ ಗುರುಶಾಂತಯ್ಯನವರು ಸಮಸ್ತ ಸಭಿಕರನ್ನು ಕುರಿತು ವೀರ ಶೈವ ಮತಾಭಿವೃದ್ಧಿಯಲ್ಲಿ ತಮಗೆ ತೋಚಿದಷ್ಟು ವಿಷಯ ಗಳನ್ನು ಸಂಗ್ರಹಿಸಿ, ಸರ್ವರಿಗೂ ವಿಶದವಾಗುವಂತೆ ಉಪ ನ್ಯಾಸದಿಂದ ಆನಂದಗೊಳಿಸಿದ್ದಲ್ಲದೆ, ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸರ್ವರೂ ತಂತಮ್ಮ ಶಕ್ತ್ಯನುಸಾ ರ ದ್ರವ್ಯಸಹಾಯಮಾಡಿ ಕೀರ್ತಿಭಾಗಿಗಳಾಗಬೇಕೆಂದು ತಿಳಿ ಸಿದರು. ಈ ವಿಷಯವನ್ನು ಸರ್ವರೂ ಅನುಮೋದಿಸಿದರ ಲ್ಲದೆ ಮ॥ ಸಾಹುಕಾರ ಶ್ರೀಕಂಠಪ್ಪನವರು ೨೫ ರೂ. ಗಳ ನ್ನು ಹೊಳೆನರಸೀಪುರದ ಸೋಮಶೆಟ್ಟಿ ಬಸಪ್ಪನವ ರು ೧೦ ರೂ. ಗಳನ್ನು ಅಂತೂ ೩೫ ರೂ. ಗಳನ್ನು ಫಂಡಿಗೆ ಸಹಾಯಮಾಡಿದರು. ಈ ಶುಭಕಾರ್ಯದಲ್ಲಿ ಸಾಹುಕಾರ ಮ॥ ರಾ॥ ಸಿದ್ರಾಮಪ್ಪ ಸಂಗವ್ವನವರ ಶ್ಲಾಘನೀಯರು. ಈ ವಿಷಯವು ವೀರಶೈವ ಬಾಂಧ ವರಲ್ಲಿ ಪ್ರಚಾರವಾಗಬೇಕೆಂಬುದು ನಮ್ಮ ಆಶಯವು.

ಪ್ರತ್ಯಕ್ಷದರ್ಶಿ.

ಹಿಂದಲೂ ಬಂದಿರುವ ನಮ್ಮ ಶಾಸಕರ ಕರ್ತವ್ಯವೇ ಇದಾ ಗಿದೆ. ಇದಕ್ಕಾಗಿಯೇ ದೇವರು ನಮ್ಮನ್ನು ಸೃಷ್ಟಿಸಿರುವ ನು" ಎಂದು ಮೊದಲಾದ ಶೋಚನೀಯವಾದ ಮಾತುಗ ಳನ್ನಾಡುತ್ತಿರುವರು. ಅಂದಮೇಲೆ ಇವರೆಂತಹ ಹುಚ್ಚರೀ ಬಹುದೋ ವಾಚಕರೇ ಊಹಿಸಲಿ.

ಇದರಲ್ಲಿ ತಮ್ಮ ಹೊಟ್ಟೆಯ ಪಾಡಿಗಾಗಿ ಮಾಡುವುದೋ ಇಲ್ಲವೇ ಬಂದುದನ್ನೆಲ್ಲಾ ಕೆಟ್ಟ ಕೆಲಸಕ್ಕಾಗಿ ಉಪಯೋಗಿ ಸುವುದೋ ಅಥವಾ ಪರಹಿತಕಾರ್ಯಕ್ಕಾಗಿ ಮಾಡುವದೋ ಇದು ಮೊದಲಾಗಿ ಅನೇಕ ತೆರನಾಗಿರುವುದು. ಅದಾವು ದನ್ನೂ ವಿಚಾರವಮಾಡದೆ ದಾತೃಗಳು ಕೊಡುತ್ತಿರುವರು. ಮತಧರ್ಮಗಳಲ್ಲಿ ವಿದ್ಯಾಸಹಾಯ ಮೊದಲಾದ ಸತ್ಕಾರ್ಯಗ ಗೂ ಅಥವಾ ಮುಪ್ಪು, ಅಂಗಹೀನತೆ, ರೋಗ ಮುಂತಾದ ವುಗಳಿಂದ ಅಶಕ್ತರಾಗಿರುವವರಿಗೆ ಯಾವ ದುಡಿತವೂ ಇಲ್ಲದೆ ಆಹಾರದಾನವನ್ನೂ, ದ್ರವ್ಯಸಹಾಯವನ್ನೂ ಮಾಡುವುದಕ್ಕೆ ಯಾರ ಆಕ್ಷೇಪಣೆಯೂ ಇಲ್ಲ. ಮತ್ತೂ ಅಂಥ ದಾನವು ಭಗ ವಂತನಿಗೆ ಪ್ರೀತಿಯೇ ಹೊಂತು. ಮತ್ತೂ ಅಂಥವರೂ ಅಗಲಾರ ದು. ಭಿಕ್ಷುಕರಲ್ಲಿ ಕೆಲವರು ಭಿಕ್ಷಾರ್ಥಿಗಳಂತೆ ನಟಿಸಿ, ಮನೆ ವಾರ್ತೆಗಳನ್ನು ತಿಳಿದುಕೊಂಡು ರಾತ್ರಿಯ ಕಾಲದಲ್ಲಿ ಕನ್ನವ ನ್ನಿಕ್ಕಿ ಇದ್ದುದನ್ನೆಲ್ಲಾ ಅಪಹರಿಸಿಕೊಂಡು ಹೋಗ ಬಹು ದುಂಟು. ಮತ್ತೆ ಕೆಲರು ಬಿಕ್ಷೆಯ ಕೊಡದಿದ್ದರೆ, ಜೋಂ ಪೆ ಮಾಡಿಕೊಳ್ಳುವದೆ, ಅಥವಾ ಶಪಿಸುವದೆ ಮುಂತಾದ ದ್ದನ್ನೂ ಮಾಡುವರು. ಇಂಥವರಿಂದ ಜನಗಳಿಗೆ ಕೊಂಚವೇ ಹೊರತು ಮತ್ತೆ ದೇಶದಲ್ಲಿ ಇವೆಲ್ಲಕ್ಕೂ ವಿದ್ಯಾವಿಹೀನತ್ವ ವೂ, ನಿರುದ್ಯೋಗಿತ್ವವೂ, ಸೋಂಬೇರಿತನವೂ ಕಾರಣವಾಗಿ ದೆ. ಅವುಕಾರಣ ಪ್ರತಿಯೊಬ್ಬರೂ ವಿದ್ಯಾವಂತರಾಗಿ ತ ಮ್ಮ ಬುದ್ಧಿಶಕ್ತಿಗಳಿಗನುಗುಣವಾದ ಕೆಲಸಗಳನ್ನು ಮಾಡಿ ಕೊಳ್ಳುತ್ತಾ ಹೋದಲ್ಲಿ ತಾವೂ ಸುಖಪಡುವರು, ದೇಶಕ್ಕೂ ಸುಖವಾಗುವುದು.

ಪುರುಷನೇ ಆಗಲಿ, ಸ್ತ್ರೀಯೇ ಆಗಲಿ ವಿದ್ಯಾವಂತ ರಿದ್ದರೂ, ತಮ್ಮ ಶಕ್ತ್ಯನುಸಾರ ಕಷ್ಟಪಟ್ಟರೆ ಅದಕ್ಕೆ ತಕ್ಕ ಫಲವನ್ನು ಅವರು ಹೊಂದೇ ಹೊಂದುತ್ತಿರುವರು. ಯಾವುದೂ ಇಲ್ಲದಿದ್ದಲ್ಲಿ ಕೂಲಿಗೆಲಸವಾದರೂ ಇದ್ದೇ ಇದೆ. ಅನೇಕ ಸ್ಥಳಗಳಲ್ಲಿ ಕೂಲಿಯವರು ಸಿಕ್ಕದೆ ತೊಂದರೆಯು ಟಾಗುವುದಕ್ಕೆ ಎಷ್ಟೋ ಜನರು ಜೀವವಾದ ಈ ಯಾಚ ನಾವೃತ್ತಿಯನ್ನವಲಂಬಿಸಿರುವುದೇ ಕಾರಣವಲ್ಲವೆ? ಅದುದ ರಿಂದ ಈ ದೇಶದ ಜನರು ಈ ಹೀನವೃತ್ತಿಯನ್ನು ಬಿಟ್ಟು ಕ ಷ್ಟಪಟ್ಟು ದುಡಿಯುವವರಾಗಬೇಂದು ಕೋರುವೆವು.

ಯಾವ ಗ್ರಾಮವೇ ಆಗಲಿ, ಪಟ್ಟಣವೇ ಆಗಲಿ ಭಿ ಕ್ಷೆಯನ್ನೇ ದಂಡಿಸಾದರೆ, ಮೊದಲು ಈ ದುಷ್ಪದ್ಧತಿಯ ನ್ನು ತಪ್ಪಿಸುವವರಾಗಬೇಕು. ಧರ್ಮಿಷ್ಠರು ಪಾತ್ರಾಪಾತ್ರ ವಿವರಿತು ದಾನಮಾಡಬೇಕು. ಆದರೆ ಒಬ್ಬ ದಿನದಿಂದಲೂ ರೂಢಿಗೆ ಬಂದಿರುವ ಈ ದುರ್ವೃತ್ತಿಯನ್ನು ತಪ್ಪಿಸಲು ಸ್ವ ಜನಕೋಟಿಗೆ ಸಾಧ್ಯವಲ್ಲ. ಇಂಗ್ಲೆಂಡ್ ಮುಂತಾದ ದೇಶ ಗಳಲ್ಲಿರುವಂತೆ ಇಲ್ಲಿಯೂ ಸರ್ಕಾರದವರು ಯಾವುದಾದರೋ ಂದು ವಿಧಿಯನ್ನು ಕಲ್ಪಿಸದ ಹೊರತು ಭಿಕ್ಷುಕರುಗಳಿಂದ ಉಂಟಾ ಗುತ್ತಿರುವ ಹಾನಿ ಇನ್ನೂ ಹೆಚ್ಚಿ ನಮ್ಮ ದೇಶವು ಮತ್ತಷ್ಟು ಕ್ಷೀಣಗತಿಗೆ ಬರುವಂತಾಗು ವುದು.

ದೇಶಾಭಿಮಾನಿ

ಅಬ್ಬಿಗೇರಿ.

ಈ ಗ್ರಾಮದಲ್ಲಿ ವೀರಶೈವ ಮತೋದ್ಧಾರಕರಾದ ಬಸ ವೇಶ್ವರರ ಜನನ ದಿವಸವಾದ ವೈಶಾಖ ಶು॥ ೩ ದಿವಸ ಶ್ರೀ ಪಟ್ಟದಯ್ಯನವರ ಸಂಸ್ಕೃತ ಪಾಠಶಾಲೆಯ ಬಾಗಲಕೋಟೆ ಈ ಮಹಾತ್ಮ ಭಗವಂತಿಯವರ ಸ್ಥಾಪಿಸಲ್ಪಟ್ಟ ಸಂಸ್ಕೃತ ಶಾಲೆಯಲ್ಲಿ ಸಭೆಯು ಕೂಡಿತ್ತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ॥ ರಾ॥ ಸುಪ್ರಸಿದ್ಧರಾದ ರೇವಣಸಿದ್ಧಶಾಸ್ತ್ರಿಗಳು ಪರೀಕ್ಷಕರಾದ ಇವ ರು ವಹಿಸಿದ್ದರು. ಸಭೆಯಲ್ಲಿ ವೀರಶೈವ ಮುಖಂಡರೂ, ಗ್ರಾ ಮ ಮತಧಾರಿಗಳೂ ಕೂಡಿದ್ದರು. ಈ ಸಭೆಯಲ್ಲಿ ಸಂಸ್ಕೃತ ಶಾಲೆಯ ವಿದ್ಯಾರ್ಥಿಗಳು ವೀರಶೈವ ಮತದ ವಿಷಯವಾಗಿ ಸಂಸ್ಕೃತಭಾಷೆಯಿಂದ ಬಹು ಸರಸವಾಗಿ ಭಾಷಣವನ್ನು ಮಾಡಿದರು. ಮ॥ ರಾ॥ ರೇವಣಸಿದ್ಧ ಶಾಸ್ತ್ರಿಗಳು ಬಸವೇಶ್ವ ರರ ಜನನ ಮತ್ತೂ ಅವರು ಮಾಡಿದಂಥ ಅಮಾನುಷಕೃತ್ಯ ವೀರಶೈವ ಮತವನ್ನು ಉದ್ಧಾರಮಾಡಿದುದು ಮುಂತಾದವು ಗಳನ್ನು ಹೇಳಿ ಯಾವತ್ತು ಸಭಿಕರ ಮನಸ್ಸನ್ನು ಸಂತೋಷ ಗೊಳಿಸಿದರು. ತದನಂತರದಲ್ಲಿ ಸಭೆಯಲ್ಲಿ ನೆರೆದಿದ್ದ ಜನರು ಈ ಶಾಲೆಯಲ್ಲಿ ವಾಚನಾಲಯವು ಇರುವುದು ಅವಶ್ಯವೆಂ ದು ಸೂಚಿಸಿದರು. ಮತ್ತೂ ವಾಚನಾಲಯಕ್ಕೆ ವರ್ಗಣಿ ಯನ್ನು ಕೊಡಲಿಕ್ಕೆ ಒಪ್ಪಿಕೊಂಡರು. ಆ ವೇಳೆ ರಾ॥ರಾ॥ ಅಯ್ಯಂಗಾರ ಶಾಸ್ತ್ರಿ ಇವರು ವಾಚನಾಲಯವೆಂದರೇ ನು? ಅದರಿಂದಾಗತಕ್ಕ ಲಾಭಗಳಾವುವು? ಎಂಬುದನ್ನು ಯಾವತ್ತು ಜನರಿಗೆ ಚೆನ್ನಾಗಿ ಮನವರಿಕೆಯಾಗುವಂತೆ ಹೇಳಿದ ರು. ರಾ॥ರಾ॥ ಮಲ್ಲಪ್ಪ ಕರಿಗುದ್ದಿ ಇವರಾದರೂ ವಾಚ ನಾಲಯದ ವಿಷಯವಾಗಿ ಆಂಗ್ಲಭಾಷೆಯಲ್ಲಿ ಅತ್ಯುತ್ತಮ ವಾಗಿ ಭಾಷಣವನ್ನು ಮಾಡಿದರು. ರಾ॥ರಾ॥ ಬಸನಗೌ ಡ ಪಾಟೀಲ ಇವರು ಕನ್ನಡಭಾಷೆಯಿಂದಲೂ, ರಾ॥ರಾ॥ ದೊಡ್ಡಪ್ಪ ಶೆಟ್ಟರ ಇಂಜನಿಯರ ಸಾಹೇಬ ಇವರು ಮರಾಠೀಭಾಷೆಯಿಂದಲೂ ಅತ್ಯುತ್ತಮವಾಗಿ ಭಾ ಷಣವನ್ನು ಮಾಡಿ ಯಾವತ್ತು ಸಭಿಕರ ಮನಸ್ಸನ್ನು ವಿಶ ದಗೊಳಿಸಿದರು.

ವರ್ಗಣಿಯನ್ನು ಕೊಡಲೊಪ್ಪಿದವರ ಹೆಸರುಗಳು — ವೇ॥ ಪಟ್ಟದದೇವರು ಅಬ್ಬಿಗೇರಿ ಮಠ, ವೇ॥ ಪಟ್ಟದದೇವರು ಹಿ ರೇಮಠ, ರಾ॥ ರಾ॥ ಗಳಾದ ಗಾಬಿ ರುದ್ರಪ್ಪ ಸಾಹುಕಾರ, ಚನ್ನ ಬಸಪ್ಪ ಒಳಗಾಗಂಲದ, ಪಾಠಶಾಲೆಯ ವಿದ್ಯಾರ್ಥಿಗ ಳು, ಬಸವಂತಗೌಡ ಪಾಟೀಲ, ಎಸನಗೌಡ ತಮ್ಮ ಗಂಗ ನಗೌಡ ಪಾಟೀಲ, ಬಸವಲಿಂಗಪ್ಪ ಬಸವಂತಪ್ಪ, ತಿಪ್ಪಣ್ಣ ಶೆಟ್ಟರ, ನೀಲಪ್ಪ ಶೆಟ್ಟರ, ಮಲ್ಲಿಕಾರ್ಜುನಗೌಡ ಪಾಟೀಲ ಹಿರನಗೌಡ ಪಾಟೀಲ, ಅಡಿವೆಪ್ಪ ಗಂಗ್ಗರಿ, ವೀ ರನಗೌಡ ಚನ್ನಪ್ಪಗೌಡರ, ದೊಡ್ಡಪ್ಪ ಇಂಜನಿಯರ, ಗುರು ಬಸಪ್ಪ ಸಾಹುಕಾರ, ಅಣ್ಣನಗೌಡ ಮಾಸ್ತರ, ಕರಿಬಸಪ್ಪ ಬಂಗಾರಿ ಹೊನ್ನಪ್ಪ ಮಾಸ್ತರ ಇವರೇ ಮೊದಲಾದ ಯಾ ವತ್ತು ಜನರು ಆ ಹೊತ್ತಿನ ದಿವಸ ೪೦ ರೂಪಾಯಿಗಳ ನ್ನು ವಾಚನಾಲಯದ ಸಹಾಯಾರ್ಥವಾಗಿ ಕೊಡುತ್ತೇ ವೆಂದು ವಾಗ್ದಾನಮಾಡಿದರು. ತದನಂತರದಲ್ಲಿ ವೀರಶೈವ ಕುಲದೀಪ ಒಳ್ಳೇರಿಯ ಸಕ್ಕರೆ ಕರಡೆಪ್ಪನವರು ಶ್ರೀ ವೀರ ಸಂಗಪ್ಪನವರು ಶ್ರೀ ಶಿರಸಂಗಿ ಯಜಮಾನರು ಶ್ರೀ ವಾರದ ಅಪ್ಪಾಸಾಹೇಬರು ಇವರ ಹೆಸರಲ್ಲಿ ಜಯಘೋಷವನ್ನು ಮಾಡಿ ಫಲಪುಷ್ಪ ತಾಂಬೂಲಾದಿಗಳನ್ನು ಹಂಚಿ ಸಭೆಯು ವಿ ಸರ್ಜನಗೊಳ್ಳಲ್ಪಟ್ಟಿತು. ಸದರಿ ಪಾಠಶಾಲೆಯಲ್ಲಿ ಇದೇ ವೈಶಾ ಖ ಬಹುಳ ೫ ದಿವಸ ಸಭೆಯು ಆಗ ವಾಚನಾಲಯವು ಸ್ಥಾ ಪಿಸಲ್ಪಟ್ಟಿತು. ಈ ವಾಚನಾಲಯವು ಬೆಳಗಾವಿ ಬಾಳೇಬೀ ಳಿಂದ ರಾ॥ರಾ॥ ಬಸವಂತಗೌಡ ಪಾಟೀಲ ರಾ॥ರಾ॥ ಬಸನ ಗೌಡ ಪ್ಯಾಟಿ ರಾ॥ರಾ॥ ಗಂಗನಗೌಡ ಒಡೆಯರ ರಾ॥ರಾ॥ ಬಸವಲಿಂಗಪ್ಪ ಬಸವಂತಪ್ಪ ರಾ॥ರಾ॥ ತಿಪ್ಪಣ್ಣ ಶೆಟ್ಟರ ಈ ೫ ಜನರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತದೆ. ಇವರು ೩ ತಿಂಗಳಿಗೊಂದಾವೃತ್ತಿ ಮೀಟಿಂಗು ಮಾಡಿದಲ್ಲಿ ಇಂಥಹ ಯಾ ವತ್ತು ಗ್ರಂಥಗಳ ಖರೀದಿಯನ್ನು ಮಾಡಬೇಕು. ಮತ್ತೂ ವಾ ಚನಾಲಯಕ್ಕೆ ಬೇಕಾದ ಗ್ರಂಥಗಳನ್ನು ತರಿಸಿಕೊಡಬೇಕು. ವಾಚನಾಲಯದ ವ್ಯವಸ್ಥೆಯ ಕಡೆಗೆ ವಿಶೇಷ ಲಕ್ಷ್ಯಗೊಡ ಬೇಕು. ಓದಲಿಕ್ಕೆ ಬಂದಂತಹ ಯಾವತ್ತು ಜನರಿಗೆ ಪುಸ್ತ ಕಗಳನ್ನು ಕೊಡುವುದು ಮತ್ತೂ ತಿರುಗಿ ತೆಗೆದುಕೊಳ್ಳುವುದು ಈ ವ್ಯವಸ್ಥೆಯನ್ನು ಪಾಠಶಾಲೆಯ ವಿದ್ಯಾರ್ಥಿಗಳಾದ ಇಬ್ಬ ರಿಗೆ ವಹಿಸಬೇಕು. ಈ ವಾಚನಾಲಯದಲ್ಲಿ ವೀರ ಶೈವ ಮತಾಧಾರಕ ಗ್ರಂಥಗಳು ಹೆಚ್ಚಾಗಿರಬೇಕು. ಮ ತ್ತೂ ಎಲ್ಲತರದ ಭಾಷೆಯ ಗ್ರಂಥಗಳೂ ಇರಬೇಕು. ಎಂದು ಯಾವತ್ತು ಸಭ್ಯಗೃಹಸ್ಥರು ನಿರ್ಣಯವನ್ನು ಮಾಡಿರುತ್ತಾ ರೆ. ಈ ಪ್ರಕಾರ ಯಾವತ್ತು ವ್ಯವಸ್ಥೆಯನ್ನು ಮಾಡಿ ವಾ ಚನಾಲಯವು ಸ್ಥಾಪಿಸಲ್ಪಟ್ಟಿತು. ಮತ್ತೂ ವೀರಶೈವ ಮ ತಪ್ರಚಾರಕರ ಹೆಸರಿನಿಂದಲೂ ಅದಕ್ಕೆ ಉತ್ತೇಜನಕೊಟ್ಟಂಥ ಮಹಾಪುರುಷರ ಹೆಸರಿನಿಂದಲೂ ಜಯಘೋಷವನ್ನು ಮಾಡಿ ಸಭೆಯು ವಿಸರ್ಜನೆಮಾಡಲ್ಪಟ್ಟಿತು.

ಒಬ್ಬ ವಿದ್ಯಾಭಿಮಾನಿ.

ಭಿಕ್ಷಾಟನ

ನಮ್ಮ ದೇಶದ ಎಷ್ಟೋ ಜನರು ಈ ವೃತ್ತಿಯಲ್ಲಿ ರುವರು, ಆದರೆ ಇದ ದಲ್ಲಿಕ್ಕೆ ಎಂಬುದ ಯೋಚಿಸ ಬೇಕಾಗಿದೆ. ವಸ್ತುಗಳನ್ನು ಪ್ರತ್ಯೇ ಕ್ಷೇತ್ರದಲ್ಲಿ ಇರಲು ಬೇಕಾದ ಧಾನ್ಯ ದಿನಸು ದ್ರವ್ಯ ಇತ್ಯಾದಿ ಯಾವುದಾದರೂ ಯಾವ ಕೆಲಸ ಭಾರದ ಮಾ ಡುವುದ ಮಾಡಿ ದೆಂಬುದು ಸರ್ಕಾರದಲ್ಲಿ ಮ ತ್ತು ಭಿಕ್ಷಾಟನವು ಜಾಸ್ತಿಯಾಗುತ್ತಾ ಇದೆ ಭಿಕ್ಷಾಟನವನ್ನು ಮಾಡುವವರಲ್ಲಿ ಯಾವ ವೃತ್ತಿ

ಮುಪ್ಪಿನಲ್ಲಿ ಊರ ಸಭೆ ಅಶಕ್ತ ರು ದೀನಗಳು ಮಾತ್ರ ಭಿಕ್ಷೆ ಕೊಡು ಕಷ್ಟ ಎಂದು ಜನರು ಇದರಿಂದ

ಮುಪ್ಪೀರಕ್ಷೈವ ಮಹಾಸಭೆಯ

ಇದ ವಿಷಯದ ತಿಂಗಳಿಂದ ಅದು ನಡೆಸ್ಟೆ ಮತ್ತೂ ರಿಪೋರ್ಟು ಸರಿಗೂ ತಮ್ಮ ಹಿತಚಿಂತಕರ ತೆರೆಯಾಗಿದೆ. ಇನ್ನಾದರೂ ಧರ ಸ್ವಮೇಲೆ ಬಂದು ಗ್ರಂಥ ಬರೆದು ಜೆಯು ರಿಪೋರ್ಟ ನಲ್ಲಿ ಬರುವ ಶುದ್ಧಿ ನಮ್ಮ ಸಭೆಯ ರಿಪೋರ್ಟನ್ನು ಜನರಿಗೆ ತಿಂಗಳೊಳಗೆ ತಿಳಿಸಬೇಕು

ಈ ಅಡಚಣಿಗಳ ಮು ಲ ವಿಷಯವಾಗಿದೆ. ಇದ ರಿಪೋರ್ಟು ಪ್ರ ಮಾಡಿದ ಬಳಿಕ ಸಿದ್ದರು ನಮ್ಮೆಯ ಪಟ್ಟಿಯನ್ನ

ಅದರಂತೆ ಮಹಾಸಭೆಯು ನಿರಂತರ ನಡೆಯುವುದಕ್ಕಾಗಿ ಗೊತ್ತಾದ ಫಂಡಿನಬಗ್ಗೆ ಕೆಳಗೆ ಬರೆದ ಸದ್ಗೃಹಸ್ಥರ ಕಡೆಗೆ ಪಾವತಿಯ ಪುಸ್ತಕಗಳನ್ನು ಶ್ರೀಮದ್ ನಿರಂಜನ ಜಗದ್ಗುರು ಶ್ರೀಗಳವರ ಆಜ್ಞಾನುಸಾರವಾಗಿ ಕಳುಹಿಸುತ್ತದೆ. ಆ ಜನರ ಕಡೆಗೆ ಸದರಿಯ ಹಣವನ್ನು ಕೊಟ್ಟು, ಪಾವತಿಯನ್ನು ತೆಗೆದುಕೊಳ್ಳಬೇಕು. ವಂದಿ ಈ ಹಣವನ್ನು ಕೊಟ್ಟವರೇ ಇನ್ವೆಸ್ಟಿಂಗ್ ಮತ್ತು ಸೆಲೆಕ್ಟ್ ಕಮಿಟಿಗಳ ಸಭಾಸದರಾಗತಕ್ಕದ್ದು. ಅವರು ಹಣ ಕೊಟ್ಟ ವೇಳೆಗೆ ಯಾವತ್ತು ರಕಮು ರಾ। ರಾ। ಶಾಂತವೀರಪ್ಪ ಅಂಣಾ ಮೆಣಸಿನಕಾಯಿ ಚೇರ್‌ಮನ್ ಇನ್ವೆಸ್ಟಿಂಗ್ ಕಮಿಟಿ ಧಾರವಾಡ ಇವರ ಕಡೆಗೆ ಒಪ್ಪಕೊಡಿ ಸೆಲೆಕ್ಟ್ ಕಮಿಟಿಯವರ ಸಮ್ಮತಿಯ ಪ್ರಕಾರ ಆ ಹಣದ ವ್ಯವಸ್ಥೆಯು ಪ್ರಾಂಸಿಸರಿ ನೋಟ್ ಅಥವಾ ಡಿಬೆಂಚರ್ ಅಥವಾ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟು ಬಂದ ಬಡ್ಡಿಯಲ್ಲಿ ಅರ್ಧ ಹಣವನ್ನು ಸಾಧಿಲವಾರ ಖರ್ಚಿಗಾಗಿ ಇಟ್ಟುಕೊಂಡು, ಅರ್ಧವನ್ನು ಭಾಗಸ್ಥರಿಗೆ ಹಂಚಿಕೊಡುವ ವಿಚಾರವು ಮಾಡ ವುದು ಸೆಲೆಕ್ಟ್ ಕಮಿಟಿಯ ಕಡೆಗೆ ಇದೆ. ಅದರಂತೆ ಘನತೆಯನ್ನೊಂದಿದ ಚಕ್ರವರ್ತಿ ೫ ನೇ ಜಾರ್ಜ ದೊರೆ ಮಹಾರಾಜರ್ ಸವೀಕರಾಗಿ ಹಿಂದೂಸ್ಥಾನಕ್ಕೆ ಬಂದು ತಮ್ಮ ರಾಜ್ಯಾರೋಹಣದ ಸುವಾರ್ತೆಯನ್ನು ನಮ್ಮೆಲ್ಲ ಪ್ರಜೆಗಳಿಗೂ ತಿಳಿಸಿದ ಗುರ್ತಿಗಾಗಿ ನಾವು ವೀರಶೈವರು ಬೆಳಗಾವಿಯಲ್ಲಿ ಅನಾಥರಿಗಾಗಿ ಒಂದು ಫಂಡನ್ನು ಏರ್ಪಡಿಸಿದ್ದು ಅದಕ್ಕೆ ಕೆಳಗೆ ಬರೆದ ಗೃಹಸ್ಥರು ವರ್ಗಣಿಯನ್ನು ಕೊಟ್ಟಿರುವರೆಂದು ತಿಳಿಸುವಲ್ಲಿ ನನಗೆ ತುಂಬಾ ಆನಂದವಾಗುತ್ತದೆ. ಆ ಹಣವನ್ನು ಕಮಿಟಿಯವರ ಅಪ್ಪಣೆ ಮೇರೆ ನಾನು ಈಸಿಕೊಂಡು ಗೋಕಾಕ ಮಿಲ್ಸ್ ಬ್ಯಾಂಕಿನಲ್ಲಿ ಸಧ್ಯಕ್ಕೆ ಒಟ್ಟಿಗೆ ಇಟ್ಟು ಹಣವನ್ನು ಕೊಟ್ಟ ಜನರಿಗೆ ಪಾವತಿಗಳನ್ನು ಕಳುಹಿಸಿರುವೆನು. ಅದು ಸಾಕಾದಷ್ಟು ಕೂಡಿದ ಕೂಡಲೆ ಕಮಿಟಿಯವರ ಮುಖಾಂತರ ಬೆಳಗಾಂವಿ ಜಿಲ್ಲೆಯ ಕಲೆಕ್ಟರ ಸಾ। ಬಾ। ರವರ ಸ್ವಾಧೀನಮಾಡಲ್ಪಡುವುದು. ಉಳಿದ ವಿಷಯಗಳ ಪ್ರತಿಪಾದನೆಯು ವಾರ್ಷಿಕ ರಿಪೋರ್ಟಿನಲ್ಲಿ ಬಾರದೇ ಬರುವುದು.

ಬೆಳಗಾಂವ ⎫ ಶಿವಮೂರ್ತಿಸ್ವಾಮಿ ಕಣಬರಗಿ ಮ. ರ,
೧೯—೮—೧೯೧೩ ⎭ ಜೇಪುಟಿಸೆಕ್ರೆಟರಿ, ೩ ನೆ ಶ್ರೀಮದ್ವೀರಶೈವ ಮಹಾಸಭೆ.

೩ ನೆಯ ಶ್ರೀಮದ್ವೀರಶೈವ ಮಹಾಸಭೆಗಾಗಿ ಬೆಳಗಾಂವಿಯಲ್ಲಿ ಆದ ಜಮಾಖರ್ಚಿನ ಪಟ್ಟಿ

ಜಮಾ	ರೂ	ಆ	ಪೈ	ಖರ್ಚು	ರೂ	ಆ	ಪೈ
ಪ್ರತಿನಿಧಿಗಳಿಂದ	2295	0	0	ಮಂಟಪಗಳ ಬಾಬತು	2697	0	9
ಪ್ರೇಕ್ಷಕರಿಂದ ..	656	0	0	ಮೈಸೂರ ಸ್ಟಾರಪ್ರಕಾಶಕರಿಗೆ .	202	6	0
ತೆಂಬುಗ ಮಾರಿದ ಬಾಬತು	520	0	0	ಗಂಡಿ, ಡಮಣಿ, ಕೈಲುಖರ್ಚು ..	819	15	0
ಅನ್ನಸಾಮಗ್ರಿಗಳಲ್ಲಿ ಉಳಿದುದನ್ನು ವಿಕ್ರಯಮಾಡಿದ ಬಾಬತು	1338	0	0	ಕಿರುಕುಳ ಪೋಸ್ಟು ತಾರು ಸ್ಟೇಶನರಿ	1274	3	3
ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರಿಂದ	3245	0	0	ಅನ್ನಖರ್ಚಿಗಾಗಿ	3056	7	0
ಒಟ್ಟು	8049	10	0	ಒಟ್ಟು	8049	10	0

ಸಭೆಯು ನಡೆದ ಕಾಲಕ್ಕೆ ಶ್ರೀ ಬಿಳ್ಳೂರ ಸ್ವಾಮಿಗಳವರು ಬೆಳಗಾಂವ ಶಹಾಪೂರದಲ್ಲಿ ಈ ಸಭೆಯ ವೆಚ್ಚಕ್ಕಾಗಿ ವರ್ಗಣಿಮಾಡಿ ಕೆಲವರ ಅಂಗಡಿಗಳಲ್ಲಿ ಎಣಿಕೆ ರಕಮು ಜಮಾ ಮಾಡಿಸಿರುವರೆಂದು ಕೇಳಿಕೆಯಲ್ಲಿ ಅದೆ. ಇದರ ಬಗ್ಗೆ ನಾನು ಶ್ರೀ ಸ್ವಾಮಿಗಳ ಸಹಾನುಭೂತಿಯ ಬಗ್ಗೆ ಋಣಿಯಾಗಿರುವೆನು. ಆದರೆ ಸದರೀ ರಕಮನ್ನು ಶ್ರೀಗಳವರು ಸಭೆಯ ವೆಚ್ಚಕ್ಕಾಗಿ ಉಪಯೋಗ ಆದದ್ದಕ್ಕೆ ನನಗೆ ಕೊಡಿಸದೆ ಬೆಳಗಾಂವ ಶಹಾಪೂರದ ವೀರಶೈವರ ಬೋರ್ಡಿಂಗಿಗೆ ಆ ಹಣವನ್ನು ಕೊಡಿಸುವಂತೆ ಮಾಡಬೇಕಾಗಿ ಬೇಡಿಕೊಳ್ಳುವೆನು. ಅದರಿಂದ ನನಗೆ ಪರಮಾನಂದವಾಗುವುದಲ್ಲದೆ ಅಲ್ಲಿಯ ಬೋರ್ಡಿಂಗಿನ ವಿದ್ಯಾರ್ಥಿಗಳ ಕಲ್ಯಾಣವೂ ಆಗುವಂತಿದೆ.

ಆಡಿಟರ್ಸ್:— ೧. ಬಸಂತಪ್ಪ ಮುನ್ಶಿ, ೨. ಜಗನ್ನಾಥಶೆಟ್ಟಿ ಪಾಟೀಲ.

ಕೆಳಗೆ ಬರೆದ ಸದ್ಗೃಹಸ್ಥರ ಕಡೆಗೆ ಮಹಾಸಭೆಯ ಫಂಡನ್ನು ವಸೂಲಮಾಡುವ ಕುರಿತು ಪಾವತಿಯ ಪುಸ್ತಕಗಳನ್ನು ಕಳುಹಿಸಿರುತ್ತದೆ. ಆವರ ಕಡೆಗೆ ಮಹನೀಯರಾದ ಅಭಿಮಾನಿಗಳೆಲ್ಲರೂ ಹಣವನ್ನು ಕೊಟ್ಟು ಪಾವತಿ ತೆಗೆದುಕೊಂಡು ಸ್ವಾರ್ಥ ಮತ್ತು ಪಾರಮಾರ್ಥವನ್ನು ಸಾಧಿಸುವರೆಂದು ನಂಬುವೆನು.

		ನಂಬರು.		
೧.	ಕೌನ್ಸಿಲ್ ಬುಕ್ಕು	೪೦೦—೪೯೯		ರಾ। ರಾ। ಶಾಂತವೀರಪ್ಪ ಅಂಣಾ ಮೆಣಸಿನಕಾಯಿ ಧಾರವಾಡ.
೨.	ಷೇರ್ ಬುಕ್ಕು	೩೦೧—೩೯೯		
೧	"	೩೫೧—೩೯೯	"	ಫಕೀರಪ್ಪ ಹಳಪಟ್ಟಿ ವಿಜಾಪೂರ.
೧.	"	೬೦೧—೬೨೫	"	ರುದ್ರಪ್ಪ ಅಂಣಾ ಗೂಗವಾಡ ಬಾಗಲಕೋಟ.
೧.	"	೫೫೧—೬೦೦	"	ತಮ್ಮಣ್ಣಪ್ಪ ಅಂಣಾ ಚಿಕ್ಕೋಡಿ ಬನಹಟ್ಟಿ.
೧.	"	೫೦೧—೫೫೦	"	ಗುರುಶಾಂತಪ್ಪ ಅಂಣಾ ಸೆಟ್ಟಿ ಅಥಣಿ.
೧.	"	೯೫೧—೯೯೯	"	ಬಂಡೆಪ್ಪ ಅಂಣಾ ಕಾತಾಪಿ ಸೊಲ್ಲಾಪುರ.
೧.	"	೯೦೧—೯೫೦	"	ರೇವಣ ಸಿದ್ದಪ್ಪ ಅಂಣಾ ಅಮರಪ ಸೊಲ್ಲಾಪುರ.
೧.	"	೩೫೧—೩೯೯	"	ಎಚ್. ಕೆ. ವೀರಬಸವಯ್ಯ ಬೆಂಗಳೂರ.
೧.	"	೩೦೧—೩೫೦	"	ವೈ. ವಿರೂಪಾಕ್ಷಯ್ಯ ಮೈಸೂರ.
೧.	"	೨೫೧—೩೦೦	"	ನಾಗಪ್ಪ ಅಂಣಾ ಮಹಾಲಿಂಗ ಸಂಕೇಶ್ವರ.
೧.	"	೨೦೧—೨೫೦	"	ಚೆನ್ನಪ್ಪ ಅಂಣಾ ಕೆಲ್ಲೂರ ದೇವಹೊಸೂರ.
೧.	"	—	"	ವೀರಪ್ಪ ಅಂಣಾ ಮಾನ್ವಿ ಗದಗ
೧.	"	—	"	ಚೆನ್ನಪ್ಪ ಅಂಣಾ ಲಕಶೆಟ್ಟರ ಯಾದವಾಡ
೧.	"	—	"	ಮರುಳಸಿದ್ದಯ್ಯನವರು ತಿರುಕಪ್ಪನವರ ಮಠ ದಾವಣಗೆರೆ
೧.	"	—	"	ಶ್ರೀಮಂತ ದೇಸಾಯಿಯವರು ಚಚಡಿ

ಒಂದೊಂದು ಷೇರಿನ ಬೆಲೆಯು ಹತ್ತು ರೂಪಾಯಿಗಳು. ಅಂತೂ ೧೦೦೦೦ ರೂಪಾಯಿಗಳನ್ನು ಕೂಡಿಸಿ ಇಟ್ಟರೆ ನಿರಂತರ ಮಹಾಸಭೆಯು ನಡೆಯುವಂತೆ ಆಗುವುದು. ಕಾರಣ ಸರ್ವ ಮತಾಭಿಮಾನಿಗಳೂ ದಯಮಾಡಿ ಗಮನಿಸಬೇಕು. ಘನತೆಯನ್ನೈದಿದ ನಮ್ಮ ಪರಮಪೂಜ್ಯ ಸಾರ್ವಭೌಮ ಚಕ್ರವರ್ತಿ ಪಂಚಮ ಜಾರ್ಜರೂ ಮಹಾರಾಣಿ ಮೇರಿಯವರೂ ರಾಜ್ಯಾರೋಹಣ ನಿಮಿತ್ತವಾಗಿ ಹಿಂದೂಸ್ಥಾನಕ್ಕೆ ಬಂದಿದ್ದುದರ ಸ್ಮರಣಾರ್ಥವಾಗಿ ಬೆಳಗಾಂವಿಯ ೩ ನೆ ಶ್ರೀಮದ್ವೀರಶೈವ ಮಹಾಸಭೆಯು ಸ್ಥಾಪಿಸಿದ ಅನಾಥ ಫಂಡಿಗಾಗಿ ಕೊಡಿದುವ ದಾನ —

ಗೌಡ ಚೆನ್ನವೀರಗೌಡ ಅಂಣಾ [redacted] ೨, ರೂ ೫೦೦, ಶ್ರೀಮಂತ
ಪ್ರಸೇನಾಯಕ ಬಾಹುದ್ದರ [redacted] ೦೦೦, ಮಲ್ಲಪ್ಪ ಅಂಣಾ ಸಿಂದ
ರಾ॥-ಗದಿಗಯ್ಯಾ ಹುಚ್ಚ ಯ್ಯಾ [redacted] ಕೀಲ ಧಾರವಾಡ ರೂ ೧೦೦;
ಬಸಪ್ಪಾ ಕತ್ತಿ ಬಾಗೇವಾಡಿ [redacted] ಪ್ಪ ಅಂಣಾ ಕೋಟಿವಾಲೆ
ಅಂಣಾ ಮಹಾಲಿಂಗ ಸಂಕ [redacted] ಪ್ಪ ಬಸಪ್ಪ ೫ ಬ್ರಪ್ಪ ಅಂಣಾ
ರುದ್ರಪ್ಪ ಅಂಣಾ ನಾಗಪ್ಪ [redacted] ೦೦, ಮಿ ರಾ। ರಾ। ಶಿವಮೂರ್ತಿ
ಶಾಕ ಫಾಲ್ಸ ರೂ. ೩೦೦. [redacted]
ಗತಿಯನ್ನೆಲ್ಲಾ ಸ್ಟಾರ ಪತ್ರದ ಪ [redacted] ಮಾಡಿರುತ್ತೇವೆ.

ಗೋಕಾಕಫಾಲ್ಸ. ⎬ ಶಿವಮೂರ್ತಿಸ್ವಾಮಿ, ಕಣಬರಗಿಮ.ರ,

ಆಶ್ಚರ್ಯ ಚಿಕಿತ್ಸೆ ಬಂದು ಪರಿಕಿಸಿ

ವಿವಿಧ ಬಂತು ಕೈಗಳಲ್ಲಿ ಕ್ಲೈಂಗಳಿಂದ ಇಲ್ಲುವುದು ಮನಗಾಣ ನಿಶ್ಚಯ ದಿವಸಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು

ಬ್ಲಡ್ ಸರ್ಕ್ಯುಲೇಟರ್ ಎಂಬ ನೂತನ ಯಂತ್ರದಲ್ಲಿ

ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ

ಗುಣಪಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ಇರಿದ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಸರ್ವ ರೋಗಗಳು ಕಿವಿಗಳಲ್ಲಿ ಸೋರುವದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯಯಿರುವ ಲಾಳದಲ್ಲಿ ಕಸಕಟ್ಟಿ ಗಾಳಿ ಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡು ಪ್ರಾಪ್ತ ವಾಗುವುದು ಇಂಥಾ ವಿಕಾರವನ್ನು ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆ [illegible] ಕಾಮಾಲೆ, [illegible] ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲು [illegible] ಗಳು ಹಿಡಿದು ಇರುವುದು, [illegible] ವಾದ ಹೀಗೆ ಎಲ್ಲಾ ತರಹ ವಾಯು. ರೋಗಗಳೂ ಮತ್ತು ಕೆಲ [illegible] ರೋಗಗಳನ್ನು ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಜೋಕತ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಮ್ಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀನಿವಾಸ್ ಯ್ಯ,
ರಾಜ್ಕುಮಾರ್, ಕಡೂರು ಕೈಲಿನ್ನಮಠ

ನೋಟೀಸ್.

ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ ಇಂಗ್ಲೀಷ್ ಲೋವರ್ ಸೆಕೆಂಡರಿ ಕಡಿಮೆಯಿಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಬೆಂಗ್ಳೂರಿನಲ್ಲಿ ವಿದ್ಯಾಭ್ಯಾಸಮಾಡಲು ವೈಶಿಷ್ಟ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಬೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವಾ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಶನ್ ಹಾಕತಕ್ಕದ್ದು.

ಎಚ್. ಕೆ. ವೀರಬಸವಯ್ಯ ಬಿ.ಎ.ಬಿ.ಎಲ್.
ಆನರೆರಿ ಸೆಕ್ರೆಟರಿ.
ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ
ತೋಟದಪ್ಪನವರ ಧರ್ಮಛತ್ರ,
ಬೆಂಗಳೂರು ಸಿಟಿ.

ಮೈಸೂರು ಸ್ಟಾರ್ ಬೆಲೆಯ ನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಬೆಂಬಾಗೀಳುವುದಲ್ಲದೆ ಅಂಚೆಯ ವೆಚ್ಚವನ್ನು ಮೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೨—೦.
೨ ರಿಂದ ೮ ರವರೆಗೆ ೧—೦—೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೦—೧—೦ ಜಾಸ್ತಿ

ಪ್ರಕಟಿಸುವುದರ

[redacted] ಕಾವಿಮ್ಮಗಂತಲೂ ಕಡಮೆ
ವಿಯಾಗಿ ಪ್ರಕಟನೆಯನ್ನು
ಆವೃತ್ತಿ ಮಟ್ಟಿ ೧ ಕ್ಕೆ ಖಿಲಣೆ
ಪಟ್ಟಿ ೧ ಕ್ಕೆ ೧೬ ಆಣೆ. ಜಾಹೀರ
ಪ್ರಕಟನೆಗಳನ್ನು ದ ವಾರಕ್ಕೆ
[illegible] ಮುಂಗಡ ಹಣವನ್ನು ಪ್ರತ್ಯೇಕವಾಗಿ [illegible]
ಮಾಡಿಕೊಳ್ಳಬಹುದು. ಬಂದಾಗಲಿಸಿ ಪ್ರಕಟಿಸಬೇಕಾದರೆ
[illegible]



ಮೈಸೂರ್ ಸ್ಟಾರ್

[illegible]

ಸಂಪುಟ ೨೫] ಮೈಸೂರ್ ಸ್ಟಾರ್ [illegible] [[illegible]

13 ಉದಯಪತ್ರಿಗಳು.

[illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible]

[illegible]

ಮದ್ರಾಸ್ ಪತ್ರಿಕೆ.

[illegible]

[illegible]

ಪ್ರಸಿದ್ಧ ಪತ್ರಿಕೆ.

ಮೈಸೂರ ಸ್ಟಾರ್ ಆಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿದೆ.

ಪೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆಗಲಾ ವಲಾಸುರನು ಆ ಧ್ವನಿಯಂ ಕೇಳಿ ವಿಸ್ಮಿತನಾಗಿ ವಿಮರ್ಶೆಯಂ ಮಾಡಿ ತಿಳಿದು, ಸಾಭ್ರಾಂತಿಯಿಂದ ಪತಂಗನು ದುರ್ಭಾಗ್ಯದೊಳ್ ಬೀಳುವಂತೆ ಶಚೀಪತಿಯು ಎಂದಿನಂತೆ ತನ್ನ ರಾಜ್ಯಶ್ರೀಯಂ ಪಡೆಯುವೆನೆಂದು ದುರಾಸೆಯಿಂದ ತನ್ನ ಸಮುಖಕ್ಕೆ ಬಾರದಿರುತ್ತೆ ಆಣತಿಯಿದೆ ಅದರಿಂದ ಅವನ ಅಹಂಕಾರವಂ ನೆಗ್ಗುತ್ತಿ ಮುಂದೆ ಎಂದಿಗೂ ಈ ಅಮರಾವತಿಯಂ ಕನಸಿನಲ್ಲಿಯೂ ನೆನೆಯದಂತೆ ಮಾಡುವೆನೆಂದು ಕನಲಿ ಕಾತರಿಸಿ, ಕೈದುಗಳಂ ಪಿಡಿದು, ಕರಿಘಟೆ ವನ್ನೇರಿ, ಕಾಳರಾತ್ರಿಯಂತೆ ತೋರುತ, ನಿಜಪರಿವಾರದಿಂ ಕೂಡಿಗೊಂಡು, ಪುರದಿಂ ಪೊರಮಟ್ಟು ಪುರಂದರನ ಸೈನ್ಯವಂ ಕಂಡು, ಕರ್ದೀವನವಂ ಕಂಡ ಮದ್ದಾನೆಯಂತೆ ಹೂಂಕರಿಸುತ್ತ, ಕಾಮ್ಯೋರ್ಮವಂ ಸೆಳೆದು, ಬಾಣಂಗಳಂ ಬೀರುತ, ಕಾಲಪ್ರಳಯಕಾಲದಂತೆ ಬರುತ್ತಿರಲು, ಇಂದ್ರನು ಶತ್ರುವಂ ಕಂಡು ಪ್ರಸನ್ನಹೃದಯನಾಗಿ, ಆಚಾರ್ಯರ ಆಜ್ಞೆಯಂ ನೀಳರಸದೆ, ಸ್ವಲ್ಪ ಯುದ್ಧವಂ ಮಾಡುತ, ಪೂರ್ವದೊಳ್ ಈ ವಲಾಸುರನ ಬಾಣಪ್ರಹಾರದಿಂದುಂಟಾದ ಗಾಯವನ್ನೇ ಅರಸುತ, ಬರುವ ಬಾಣಪರಂಪರೆಯು ಉಳಿವಳೆಯಂ ಸಹಿಸಲಾರದೆ, ಇನ್ನು ಎಂದಿಗೂ ಅಮರಾವತಿಯು ಅಭಿಮುಖವಾಗುವುದಿಲ್ಲವೆಂದು ಕೂಗುತ, ಹಿಮ್ಮೆಟ್ಟಿದಳಿರುವ ತನ್ನ ಸೈನ್ಯವಂ ಕರೆದು ತಾನೂ ಅವರೊಡನೆ ಓಡಿಹೋಗಲೇಕೆಂದು ಚಿಂತಿಸುತ್ತಿರಲು, ಆಗ ಸುರಾಚಾರ್ಯನು ಶಚೀಪತಿಯಂ ಕುರಿತು, ಈ ವಲಾಸುರನು ಪೂರ್ವದಲ್ಲಿ ಉಪವಾಸವ್ರತವಂ ಕುರಿತು ಘೋರತಪವಂ ಮಾಡಿ ಅಭಿಮುಖನಂ ಮಾಡಿಕೊಂಡು ಸಮಸ್ತ ಭೋಗಭಾಗ್ಯವಂ ಬಹುಕಾಲ ಅನುಭವಿಸಿ, ಮುಕ್ಕೋಟಿ ಸುರರುಗಳೂ ಸುರ ಚರಾಚರಪ್ರಾಣಿಗಳಿಂದ ಸಂಹಾರವಿಲ್ಲದಂತೆ ಒಂದು ವರವನ್ನು, ಮತ್ತೂ ಮನದೊಳ್ ಬಿದ್ದೀತೆ, ಸೂರ್ಯ, ಇಂದ್ರ ಮೊದಲಾದವರಿಂದ ಉತ್ಪನ್ನವಾದ ರತ್ನಂಗಳು ವಿರಳವಾಗಿರುವುದಂ ತಿಳಿದು, ಅದಂ ಸಮೃದ್ಧಿಯಂ ಮಾಡಿ ಲೋಕೋಪಕಾರವ ಮಾಡಬೇಕೆಂದು ಯೋಚಿಸಿ, ಧರ್ಮಬುದ್ಧಿಯಿಂದ ತನ್ನ ಶರೀರದಲ್ಲಿರುವ ಧಾತುಗಳೇ ನವರತ್ನವಾಗುವಂತೆ ಮತ್ತೊಂದು ವರವಂ ಪಡೆದಿರುವುದರಿಂದ ಯುದ್ಧದೊಳ್ ಈತನಂ ಜಯಿಸಲಶಕ್ಯವು. ಆದುದರಿಂದ ಮೊದಲು ನಾವು ಹೇಳಿದ ಉಪಾಯವೇ ಸರಿಯೆಂದೆನ್ನಲಾಗ ಸಂಕ್ರಂದನನು ಮಹಾಪ್ರಸಾದವೆಂದು ಗುರುವಾಕ್ಯವಂ ಮನ್ನಿಸಿದರು, ವ್ಯಾಜಾರ್ಥವಾಗಿ ಶಾಪವಂ ತಾಳಿಕೊಳಿಸಿ, ಸರ್ವಸ್ವವಂ ಹೂಡಿ, ಆ ದೈತ್ಯನಿಗಭಿಮುಖನಾಗಿ—ಎಲೈ ದುರಾತ್ಮನೆ! ಒಂದು ಕ್ಷಣವೆನ್ನೊಡನೆ ನಿಂತು ಕ್ಷಾತ್ರಗುಣವನ್ನು ತೋರಿಸುತ ನುಡಿದು ಸೆಳೆದುವವಲು, ಆಗ ವಲಾಸುರನು ನಸುನಗುತ ಪ್ರತ್ಯಸ್ತ್ರದಿಂದದಂ ಖಂಡಿಸಿ, ನುತಿಸುತ್ತ—ಎಲೋ ಸುರಾಧಮನೆ! ನೀನು ಗೌತಮಶಾಪವಂ ಕೈಕೊಂಡಿರುವ ವಿಷಯವನ್ನು ಕೇಳಿಲ್ಲವೆನು; ಸಮರಾಂಗಣದೊಳ್ ನಿನ್ನ ಗರ್ವವನ್ನು ಮುರಿದು, ಬಹಳ [illegible] ಹೋಗಿರುವುದು, ಅಲ್ಲದೆ ಭೋಗಭೋಗಿಗನು ನುಡಿದು, ಬಳಿಕ ತ್ರಿವಿಕ್ರಮನ ಗರ್ಭಿಣಿವಸರರೂ ನಮ್ಮನಾಗಿ ಮೂಲರಾಜಾಸವದ [illegible] ತರವಾದ ಯುದ್ಧವಂ ಮಾಡುತ, ಅಸ್ತ್ರಶಸ್ತ್ರ ಪ್ರಹಾರವಂ ಪ್ರಯೋಗಿಸಿದರಿಂ ಬತ್ತಳಿಕೆ ಬರಿದಾಗಲು, ಆಗ ಸುರಾಚಾರ್ಯನಾದ ಬೃಹಸ್ಪತಿಯು ಅಸುರಾಂತಕನಾದ ಇಂದ್ರನಂ ಕುರಿತು ಸಂನ್ನೆಯಂ ಮಾಡಲಾ ದೇವೇಂದ್ರ [illegible] ವಲಾಸುರನಂ ಕುರಿತು [illegible] ನಿನ್ನ ಸಾಹಸಕ್ಕೆ ಮೆಚ್ಚಿ [illegible] ನಂ ಬೇಡು, ಕೊಡುವೆನು, [illegible] ವಲಾಸುರನು ನಸುನಗುತ [illegible] ಕಾರವಲ್ಲ ಕೊಡುವ [illegible] ದೈತ್ಯರ ಕುಲದಲ್ಲಿ [illegible] ದುರ್ಭಾಗ್ಯನಾದ ನೀನು [illegible] ನು ಬೇಡುವೆನು. ನೀ ಅದರಂತೆ [illegible] ಕಾಲ ವರವಂ ಬೇಡು, ನಾನು ಕೊಡುವೆನು ಎಂದು ಹೇಳಿ

ರದಾನವಂ ಮಾಡಿರುವುದು ಅಪ್ರಸಿದ್ಧವು. ಇಂತಿರುವಲ್ಲಿ ಈಗ ನೀನು ಬರಿದೆ ದುರಭಿಮಾನದಿಂದ ವರವಂ ಕೊಡುವೆನೆಂದು ಹೇಳಿ ಕಡೆಗೆ ವರವಂ ಕೊಡುವುದಕ್ಕೆ ಅಶಕ್ತನಾಗಿ ಲೋಕದೊಳ್ ಅಪಕೀರ್ತಿಯಂ ಪಡೆಯುವೆ ಈ ದುರಹಂಕಾರವು ನಿನಗೇಕೆ? ಕ್ಷುದ್ರನದಿಯು ಸಮುದ್ರವಂ ಪೂರ್ಣವಂ ಮಾಡುವೆನೆಂದು ಓಡಿಬಂದಂತೆ ಬರಿದೆ ಸಾಹಸವಂ ಹೇಳಿ ಅಪಹಾಸ್ಯಕ್ಕೆ ಗುರಿಯಾಗಬೇಡವೆಂದು ಹೇಳುವ ಕುಹಕದ ಮಾತಂ ಕೇಳಿ ವಲಾಸುರನು ತನ್ನ ಕುಲಕ್ಕೆ ಸ್ವಭಾವಸಿದ್ಧವಾದ ದುರಹಂಕಾರದಿಂ ಮಂದಮತಿಯಾಗಿ, ತನಗೆ ಮುಂದೆ ಬರುವ ಹಾನಿವೃದ್ಧಿಗಳನ್ನರಿಯದೆ, ಮದಾಂಧನಾಗಿ, ದಾಯಾದಿಗಳಾದ ದೇವತೆಗಳಿಗೆ ದೈತ್ಯಶ್ರೇಷ್ಠನಾದ ನಾನು ಕೇಳಿದ ವರವನ್ನಿತ್ತು, ಲೋಕದೊಳ್ ಖ್ಯಾತಿಯಂ ಪಡೆಯುವುದುತ್ತಮೋತ್ತಮವೆಂದು ಮನದೊಳ್ ನಿಶ್ಚೈಸಿ, ಸುರಪತಿಯಾದ ದೇವೇಂದ್ರನಂ ಕುರಿತು:—ಎಲೈ ಸಹಸ್ರಾಕ್ಷನೆ! ನೀನು ಬೇಡಿದ ವರವಂ ತ್ರಿಕರಣಶುದ್ಧಿವಾಚಕವಾಗಿ ತ್ರಿನೇತ್ರನ ಅಡಿದಾವರೆಯಾಣೆಗೂ ಶೀಘ್ರದಿಂ ಕೊಡುವೆನು ಎನಲಾಗ ಅಮರೇಶನು ನಿಜಾಶ್ರಿತನವಾದ ಅಮರಾವತಿಯು ಭಾಗ್ಯವಂ ಪಡೆವೆನೆಂದು ಉತ್ಸಾಹದಿಂದ ತನ್ನ ರಥದಿಂದಿಳಿದು ದೈತ್ಯೇಂದ್ರನ ಅಭಿಮುಖನಾಗಿ ಬಂದು, ಅವನಂ ಕುರಿತು—ಎಲೈ ತ್ರಿಲೋಕವೀರನೆ! ಕೇಳು— ನಾನು ಒಂದು ಮಹಾಕ್ರತುವಂ ಮಾಡಲು ಉದ್ಯೋಗಿಸಿರುವೆನು. ಅದಕ್ಕೆ ನೀನು ಪಶುವಾಗುವುದೇ ನನಗೆ ನೀನು ಕೊಡುವ ವರವಲ್ಲದೆ ಮತ್ತೊಂದು ವರವು ಪ್ರಕೃತಕ್ಕೆ ಉಪಯುಕ್ತವಾಗಲರಿಯದು. ನೀನು ಮೊದಲು ಮಾಡಿದ ಪ್ರತಿಜ್ಞೆಯು ನಿಜವಾದರೆ ಪಶುವಾಗುವುದಕ್ಕೆ ಉದ್ಯುಕ್ತನಾಗು; ಇಲ್ಲದಿದ್ದರೆ ಪೂರ್ವದಲ್ಲಿ ನಾನು ಹೇಳಿದ ಮಾತಿಗೆ ಗುರಿಯಾಗಿ ಲೋಕದಲ್ಲಿ ಅಪಹಾಸ್ಯಕ್ಕೆ ಪಾತ್ರನಾಗುವೆ, ಎಂದು ಹೇಳಿದ ಮಾತಂ ಕೇಳಿ, ಸತ್ಯಸಂಧನಾದ ವಲಾಸುರನು, ಎಲೈ ಶಚೀಪತಿಯೆ! ಕೇಳು— ದೈತ್ಯಶ್ರೇಷ್ಠನಾದ ವಲಾಸುರನು ಕೊಟ್ಟ ವರವು ಎಂದಿಗೂ ತಪ್ಪಲಾರದು; ಹಿಂದು ಕಾಲದಲ್ಲಿ ಮಾರ್ತಾಂಡನು ಪಶ್ಚಿಮದಿಕ್ಕಿನಲ್ಲಿ ಉದಯಿಸುವನು, ಮತ್ತೂ ಮಹಾಪರ್ವತವಾದ ಮೇರುವು ಅಲ್ಲಾಡುವುದು; ಯಜ್ಞೇಶ್ವರನು ಶೈತ್ಯವಂ ತಾಳುವನು; ಶಿಲೆಗಳಲ್ಲಿ ಕಮಲಂಗಳು ಬಿರಿಯುವುವು; ನಾನು ಕೊಟ್ಟ ವರವು ಎಂದೆಂದಿಗೂ ಚಲಿಸದೆ ಸ್ಥಿರವಾಗಿರುವುದರಲ್ಲಿ ಸಂದೇಹ ಬೇಡವೆಂದು ನುಡಿದು, ಆ ಕ್ಷಣದಲ್ಲಿಯೇ ರಥವಂ ದುಮುಕಿ, ತನ್ನ ಪುತ್ರಮಿತ್ರಕಳತ್ರ ಬಂಧುಗಳಂ ತ್ಯಜಿಸಿ, ಅಮರಾವತಿಯ ಭೋಗರಂಜಿತ್ತಿನಲ್ಲಿ ರಕ್ತಿಯಂ ಬಿಟ್ಟು, "ಪಶುವಾದೆನು; ಶೀಘ್ರದಿಂ ಮಹಾಕ್ರತುವಂ ನೆರವೇರಿಸುವನಾಗು; ನನ್ನ ಯಶಸ್ಸು ಸೂರ್ಯಚಂದ್ರರಿರುವವರೆಗೂ ಲೋಕತ್ರಯ ಪ್ರಖ್ಯಾತವಾಗಿರಲಿ" ಎಂದು ಪೇಳಿ, ಇಂದ್ರನ ಸ್ವಾಧೀನನಾಗಲು ಆಗ ದೇವೇಂದ್ರನು ವಲಾಸುರನ ಸತ್ಯಕ್ಕೆ ಮೆಚ್ಚಿ ಕಟಕಟಾ ಇಂಥ ಧರ್ಮಾತ್ಮನಾದ ವೀರನನ್ನು ನಾನು ಕೇಳಲು ಅದಂ ಅಂಗೀಕರಿಸಿದನಲ್ಲಾ! ಎಂದು ಸಂತೋಷಪಡುತ, ಅವನಂ ಕುರಿತು, ಎಲೈ ದಾನವೇಂದ್ರನೆ! ಕೇಳು— ಜಗದೊಳ್ ನಿನ್ನಂಥ ಸತ್ಯಸಂಧನಾದ ದೈತ್ಯೇಶ್ವರನಂ ನಾನೆಲ್ಲಿಯೂ ಕಾಣೆನಲ್ಲ, ಮತ್ತೂ ನಿನಗೆ ಯಶೋವೃದ್ಧಿಯೂ ಶ್ರೇಯಸ್ಸೂ ಉಂಟಾಗಲಿ ಎಂದು ಹೇಳಿ ನಸುನಗುತ ಅವನಂ ಸಂಗ್ರಹಿಸಿಕೊಂಡು ಬಂದು, ಈ ಅಸುರನು ಅನ್ಯೋನ್ಯೋಪಾಯಗಳಿಂದ ಸಂಹರಿಸಲಶಕ್ಯನಾಗಿರುವನೆಂದು ಗುರುವಾದ ಬೃಹಸ್ಪತಿಯೊಡನೆ ಆಲೋಚಿಸಿ, ಒಂದು ಮಹಾಕ್ರತುವಂ ಪ್ರಾರಂಭಿಸಿ ತದಂಗವಾಗಿ ದೈತ್ಯೇಶ್ವರನಾದ ವಲಾಸುರನೆಂಬ ಪಶುವಂ ವಿಶಸನವಂ ಮಾಡಲು,

(ಸಶೇಷ.)

ಹತ್ತಿಯ ಬೆಳೆಸು.

ನಮ್ಮ ಮೈಸೂರು ಸೀಮೆಯೊಳಗೆ ದಾವಣಗೆರೆ, ಹರಿಹರ, ಚಿತ್ರದುರ್ಗ, ಹೊಳಲ್ಕೆರೆ, ಜಗಲೂರು, ಈ ತಾಲ್ಲೋಕುಗಳಲ್ಲಿ ಕಳೆದ ವಿರೋಧಿಕೃತು ಸಂವತ್ಸರದಲ್ಲಿ ದೊಡ್ಡ ಹತ್ತಿಯ ಬೀಜವನ್ನು ವಿಶೇಷವಾಗಿ ಬಿತ್ತಿದ್ದರು. ಕಳೆದ ವರ್ಷದಲ್ಲಿ ವಿಶೇಷ ಮಳೆಯಾಗದೆ ಹೋದುದರಿಂದ ಎಂಟಾಣೆಯ ಬೆಳೆ ಬೆಳೆಯಲು ಬಂದು, ದಾವಣಗೆರೆಯಲ್ಲಿರತಕ್ಕ ಎಂಟು ಹತ್ತಿ ಯಂತ್ರಗಳಲ್ಲಿ ೮-೯ ತಿಂಗಳು ಕೆಲಸವು ಸಂಪೂರ್ಣವಾಗಿ ನಡೆದು ಬರಬೇಕಾದರೆ ದೊಡ್ಡ [illegible] ಇನ್ನು ೩-೪ ತಿಂಗಳು ಬಡಜನ [illegible] ಪ್ಪವಿದೆ. ಆದರೆ ಹೋದವರ್ಷ [illegible] ಇಲ್ಲಿ ಹತ್ತಿ ಯಂತ್ರಗಳಿಗೆ [illegible] ಟಿಕವಾಗಿ ಬಡಜನರಿಗೆ ಅನ್ನವೂ [illegible] ಶೈ ಉಪಾಯವಿಲ್ಲ. [illegible] ವರ್ಷ ಮಳೆಗಾಲವು ಚೆನ್ನಾಗಿ [illegible] ೧೦ ಆಣೆಯ ರಾಗ ಆಗುವುದೆ [illegible] ಕೆ. ಆದುದರಿಂದ ರೈತರು [illegible] ಕೂಲಿಗಾಗಿ [illegible] ವಿಷಯವನ್ನು [illegible]

ಬೀಜವನ್ನು ರೋಹಿಣಿ ಮಳೆಯಿಂದ ಪುಬ್ಬ ಮಳೆಯವರೆಗೂ ಬಿತ್ತತಕ್ಕದು. ರೋಹಿಣಿ ಮಳೆಯಿಂದ ಪುನರ್ವಸು ಮಳೆಯ ವರೆಗೂ ಬಿತ್ತಿದ ಫಸಲು ಕಾರ್ತಿಕ ಮಾರ್ಗಶಿರ ಮಾಸದಿಂದ ಹತ್ತಿಯು ಬರುವುದಕ್ಕೆ ಆರಂಭವಾಗಿ ಮಾಘಮಾಸದ ಕೊನೆಯವರೆಗೂ ಹತ್ತಿ ಫಸಲು ಸಿಗುತ್ತದೆ. ಇದು ಕೆಂಪುಭೂಮಿ ಮತ್ತೂ ಮಡಿಕಟ್ಟು ಭೂಮಿಗಳಲ್ಲಿ ಬೆಳೆಯತಕ್ಕದು ಪುಬ್ಬ ಹುಬ್ಬಿಯ ಮಳೆಗಾಲದಲ್ಲಿ ಒಳ್ಳೇ ಯರೆ ಭೂಮಿಗೆ ಬಿತ್ತತಕ್ಕದು. ಮಾಘ ಫಾಲ್ಗುಣ ಮಾಸದಲ್ಲಿ ಹತ್ತಿಯ ಫಸಲು ಯಾವ ರೋಗಕ್ಕೂ ತಗಲದೆ, ಬಹಳ ಮೃದುವಾದ ಹತ್ತಿಯನ್ನು ಕೊಡುತ್ತದೆ ಈ ಹತ್ತಿಗೆ ವ್ಯಾಪಾರದ ಸೀಮೆಯವರು ಹಿಂಗಾರಿ ಹತ್ತಿಯೆಂದು ಹೇಳುತ್ತಾರೆ. ಇದು ಮುಂಗಾರಿ ಹತ್ತಿಗಿಂತ ೧ ಆಣೆ ೨ ಆಣೆ ಹೆಚ್ಚು ಬೆಲೆಗೆ ಮಾರಾಟವಾಗುವುದು. ಪುಷ್ಯ, ಮಾಘ, ಫಾಲ್ಗುಣಮಾಸದಲ್ಲಿ ರೈತರಿಗೆ ಬಹಳ ದುಡ್ಡಿನ ಸಹಾಯವು ಈ ಹತ್ತಿಯ ಬೆಳೆಯಿಂದ ಆಗುತ್ತದೆ. ಆದುಕಾರಣ ಭೂಮಿಗಳನ್ನು ಚೆನ್ನಾಗಿ ವ್ಯವಸಾಯಮಾಡಿ ದೊಡ್ಡ ಹತ್ತಿಯ ಬೀಜವನ್ನೂ ಕಾಂಬೋಡಿಯಾ ಹತ್ತಿಯ ಬೀಜವನ್ನೂ ಬಿತ್ತಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಳ್ಳೇ ಶ್ರೇಷ್ಠವಾದ ಭೂಮಿಗಳಲ್ಲಿ ನಾನು ಹತ್ತಿಯನ್ನು ಬೆಳೆಯುವ ವಿಷಯವನ್ನು ತಿಳಿಯ ಕೆಳಗೆ ವಿವರವಾಗಿ ತೋರಿಸಿದ್ದೇನೆ.

ಎಕರೆ ೧ಕ್ಕೆ ಆಗುವುದು:— ಸಣ್ಣ ಹತ್ತಿ ಮಣ ೧೫; ದೊಡ್ಡ ಹತ್ತಿ ಮಣ ೩೦; ಕಾಂಬೋಡಿಯಾ ಹತ್ತಿ ಮಣ ೪೦ ಈ ಪ್ರಕಾರ ಬೆಳೆಗೆ ಬರುತ್ತದೆ. ಆದುದರಿಂದ ಸರ್ವರೂ ಕಾಂಬೋಡಿಯಾ ಹತ್ತಿಯ ಬಿಜವನ್ನೇ ಭೂಮಿಗೆ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಕಾಂಬೋಡಿಯ ಹತ್ತಿಗೆ ಮಿಗಿಲಾದ ಯಾವ ಪದಾರ್ಥವೂ ಕಾಣುವುದಿಲ್ಲ. ಒಕ್ಕಲತನ ಮಾಡಿಸತಕ್ಕವರು ಕಾಂಬೋಡಿಯ ಹತ್ತಿಯ ಬೆಳೆಯನ್ನು ವೃದ್ಧಿಪಡಿಸಬೇಕೆಂದು ನನ್ನ ಕೋರಿಕೆ. ದೊಡ್ಡ ಹತ್ತಿ, ಕಾಂಬೋಡಿಯಾ ಹತ್ತಿ ಕೆಂಪುಭೂಮಿಗಳಲ್ಲಿ ಮಡಿಕಟ್ಟು ಭೂಮಿಗಳಲ್ಲಿ, ಎರೆಭೂಮಿಗಳಲ್ಲಿ ಕೂಡ ಬೆಳೆಯುತ್ತದೆ. ಚೆನ್ನಾಗಿ ಮಳೆಗಾಲವು ಆಗುವ ಪಕ್ಷದಲ್ಲಿ ಪುಷ್ಯಮಾಸದಲ್ಲಿ ಪಶ್ಚಿಮದ ಗಾಳಿಯು ತಗಲುವುದರಿಂದ ಗಿಡಗಳು ಒಳ್ಳೇ ರೋಷವಾಗಿ ಬೆಳೆದು ಯಾವ ರೋಗಕ್ಕೂ ತಗಲದೆ ಹತ್ತಿಯು ಫಸಲು ಸ್ವಚ್ಛವಾಗಿ ದೊಡ್ಡ ಕೊಳೆಯಾಗಿ ಸಿಗುತ್ತದೆ. ಪುಷ್ಯಮಾಸದಿಂದ ಆಚೆಗೆ ಬರುವುದಕ್ಕೆ ಹಿಂಗಾರಿ ಹತ್ತಿಯೆಂದು ಹೇಳುವುದುಂಟು. ಕಾರ್ತಿಕ ಮಾರ್ಗಶಿರ ಮಾಸದಲ್ಲಿ ಬರುವ ಹತ್ತಿಯು ಚೆನ್ನಾಗಿ ಕಾಯಿಯೊಡೆದು ಸಣ್ಣ ಕೊಳೆಯಾಗಿ ಬರುತ್ತದೆ. ಇದಕ್ಕೆ ಮುಂಗಾರಿ ಹತ್ತಿಯೆಂತಲೂ ಹೇಳುತ್ತಾರೆ. ನಮ್ಮ ಮೈಸೂರು ಸೀಮೆಯೊಳಗೆ ಎಲ್ಲಾ ತಾಲ್ಲೋಕುಗಳಲ್ಲಿ ದೊಡ್ಡ ಹತ್ತಿ, ಕಾಂಬೋಡಿಯಾ ಹತ್ತಿಗಳು ವಿಶೇಷವಾಗಿ ಬೆಳೆಯುತ್ತವೆಂದು ನನಗೆ ಸಂಪೂರ್ಣವಾಗಿ ತಿಳಿಯುತ್ತದೆ. ಕಾರಣವೇನೆಂದರೆ— ಈ ವರ್ಷ ಹಾಸನದ ತಾಲ್ಲೋಕು ಪ್ರತಿ ದೊಡ್ಡ ಹತ್ತಿಯು ಬೆಳೆದು ದಾವಣಗೆರೆಗೆ ಮಾರಾಟಕ್ಕೆ ಬಂದಿತ್ತು. ಈ ಹತ್ತಿಯು ಒಳ್ಳೆಯ ದಾರದಿಂದ ಮಾರಾಟವಾಯಿತು. ಈ ತಾಲ್ಲೋಕುಗಳೆರಡೂ ಮಲೆನಾಡಿಗೆ ಸಂಬಂಧಪಟ್ಟವು. ಆದುದರಿಂದ ಹತ್ತಿಯು ಬಹಳ ಮೃದುವಾಗಿ ಒಳ್ಳೇ ಕೊಳೆಯಾಗಿದ್ದುದರಿಂದ ಉತ್ತಮವಾದ ಬೆಲೆಯಿಂದ ಮಾರಾಟವಾಯಿತು. ಆದುದರಿಂದ ಮಲೆನಾಡು ಪ್ರಾಂತ್ಯದವರು ಹತ್ತಿ ಬೆಳೆಯುವುದರ ಮೇಲೆ ಗಮನಕೊಡಬೇಕೆಂದು ಬೇಡುತ್ತೇನೆ.

ಚೆನ್ನಗಿರಿ ತಾಲ್ಲೋಕು ಅಮಲ್ದಾರರವರು ಚೆನ್ನಗಿರಿ ರಥೋತ್ಸವಕಾಲದಲ್ಲಿ ವಸ್ತುಪ್ರದರ್ಶನವಮಾಡಿಸಿ, ಆ ಕಾಲದಲ್ಲಿ ಹತ್ತಿಯ ನಮೂನೆಯನ್ನು ತರಿಸಿ ಅಷ್ಟಮಾಯಿಷ್ಟಿಸಿ ನಾನು ಬೆಳೆದ ಕಾಂಬೋಡಿಯಾ ಹತ್ತಿಯನ್ನು ಬಹುಮಾನದಲ್ಲಿದೆ, ಚೆನ್ನಗಿರಿ ತಾಲ್ಲೋಕು ರೈತರಿಗೂ ಪ್ರೋತ್ಸಾಹ ಕೊಟ್ಟು ಇದೇ ಹತ್ತಿಯನ್ನು ಬೆಳೆಯಬೇಕೆಂದು ಹೇಳಿದರು. ಇದರಿಂದ ರೈತಜನರಿಗೆ ಪ್ರೋತ್ಸಾಹಪಡಿಸಿದ್ದಕ್ಕಾಗಿ ನನಗೆ ಬಹಳ ಸಂತೋಷವಾಯಿತು. ೫-೬ ವರ್ಷದ ಹಿಂದೆ ದೊಡ್ಡ ಹತ್ತಿಯು ಬೆಳೆಯು ನಿಂತುಹೋಗಿತ್ತು. ಈಚೆಗೆ ದಾವಣಗೆರೆ ಹಾಲ್ಲಿ ಜಿನ್ನುಗಳು ಸ್ಥಾಪಿತವಾದಾನಂತರ ದೊಡ್ಡ ಹತ್ತಿಯು ಸ್ವಲ್ಪಸ್ವಲ್ಪವಾಗಿ ಬೆಳೆಗೆ ಬಂದುದರಿಂದ ಇಲ್ಲಿ ಅದರ ವ್ಯಾಪಾರಸ್ಥರು ದೊಡ್ಡ ಹತ್ತಿಯ [illegible] ವಾದ ಅಂಗಳ ನಮೂನೆ [illegible] ಉದು ದೊಡ್ಡ ಹತ್ತಿಗೆ ಉತ್ತಮ [illegible] ಕಲೆ, ವರ್ಷವರ್ಷ ಹತ್ತಿ [illegible] ಕೆಯವಾಗಿ ದೊಡ್ಡ ಹತ್ತಿ [illegible] ದೊಡ್ಡ ಹತ್ತಿ [illegible] ದೊಡ್ಡ ಹತ್ತಿ ಕಾಂಬೋಡಿಯಾ [illegible] ಮಾರಾಟಮಾಡಿಕೊಳ್ಳುವರು [illegible] ಬಂದುದು ಕಾಂಬೋಡಿಯಾ ಹತ್ತಿ [illegible] ಈ ಬೀಜವನ್ನು [illegible]

ಕ್ಕೆ ತ್ರೀನೆ ಇ ಥ ಉತ್ತಮವಾದ ಹತ್ತಿಯನ್ನು ಬೆಳೆಯು ತ್ತ ಬಂದ ಕಲ್ಲನ್ನ ... ತರವಾಗಬೇಕಾಗಿ ದರಿಕರಾ ಗುವುದಕ್ಕೆ ಸಂಗ್ರಹವಿಲ್ಲ

ದಾವಣಗೆರೆಯಲ್ಲಿ ಹತ್ತಿಯು ಧಾರಣೆಯು ಮಣ ೧ ಕ್ಕೆ ಒಂದಾಣೆ ಹೆಚ್ಚು ಕಡಿಮೆಯಿಂದ ಮಾರಾಟವಾಗು ತ್ತಾ ಈವರೆಗೂ ಬಂದಿದೆ. ದಾವಣಗೆರೆಯು ತೂಕ ೧೦೪೦ ರೂ. ತೂಕಕ್ಕೆ ಒಂದು ನಮೂ ರಣ್ಣ ಹತ್ತಿ ಮ ಣ ೧ ಕ್ಕೆ ೩ ರೂ, ದೊಡ್ಡ ಹತ್ತಿ ಮಣ ೧ ಕ್ಕೆ ೨ ರೂ, ಕಾಂಬೋಡಿಯಾ ಹತ್ತಿ ಮಣ ೧ ಕ್ಕೆ ೩ ರೂ ಈರೀ ತಿ ಮಾರಾಟವಾಗುತ್ತಾ ಇದೆ, ಬೆಂಗ್ಲೂರು ಹತ್ತಿ ಬೀಜವೂ ಕಾಂ ಬೋಡಿಯಾ ಹತ್ತಿ ಬೀಜವೂ ನಮ್ಮಲ್ಲಿ ದೊರೆಯುತ್ತವೆ. ಅ ವಶ್ಯಕವಿದ್ದವರು ಬರೆದು ತರಿಸಿಕೊಳ್ಳಬೇಕೆಂದು ಹೇಳುತ್ತೇ ನೆ. ಈ ವ್ಯವಸಾಯದ ವಿಷಯದಲ್ಲಿ ಕ್ಯಾ ಶ್ರೀಮಂತ ರಾವ್ ಬಹದ್ದೂರ್ ಮಲ್ಲಪ್ಪಾ ಅಣ್ಣಾ ವಾರದ ಸೊಲ್ಲಾಪುರ ಇ ವರು ತುಂಬಾ ಅನುಭವಸ್ಥರಾಗಿದ್ದು, ಈಗಿನ ಕಾಲದಲ್ಲಿ ಬೈ ಲು ಬಂದಿರುವ ಎಲ್ಲಾ ದೇಶಗಳ ... ದಿಕೊಂಡುದಾದ್ದರಿಂದ ಸಮಸ್ತ ದಿವಸಗಳಿಗೂ ... ಗಳು ಹೆಚ್ಚು ವುದರಿಂದ ಐದಾರು ಭಾಗದಲ್ಲಿ ದೇಶ್ಯ ವೃದ್ಧಿ ಪಡಿಸಿಕೊಂಡು ನಾಯಿ ಡಿ ಹೊಂದುವುದಕ್ಕೆ ಯಾವ ಕೊರತೆಯೂ ಇಲ್ಲವೆಂತಲೂ, ವ್ಯಾಪಾರಸ್ಥರಿಗೆ ಎಲ್ಲಾ ದೇಶದಲ್ಲೂ ಒಂದೇ ಧಾರಣೆಗಳು ಇರುವುದರಿಂದ ಲಾಭನಷ್ಟಗಳು ಈ ಕಾಲದಲ್ಲಿ ಬಹು ಜಾ ಗ್ರತೆ ತಗಲುವುದರಿಂದ ವ್ಯವಸಾಯ ... ಭಾಗವು ... ವಾ ರುವಂತಲೂ, ೮ಲ ೧೯೦೧ ನೇ ಇಸವಿನಲ್ಲಿ ನಾನು ಸೊ ಲ್ಲಾಪುರಕ್ಕೆ ಹೋದಕಾಲದಲ್ಲಿ ನನ್ನ ಸಂಗಡ ಸೂಚಿಸಿದ್ದರು. ನೆಲೆ ವ್ಯವಸಾಯವೆಂದಾಗತಕ್ಕವರಿಗೆ ಅಬಾಯಬಲು ಕಾ ರಣವಿಲ್ಲವೆಂತಲೂ ನಾನು ವ್ಯತ್ಯವಾಗ ಹೇಳುತ್ತೇನೆ.

ಪಿ. ಬಸಪ್ಪ ಬಳಪ್ಪ, ದಾವಣಗೆರೆ.

ಘಟಿಕಾ ಯಂತ್ರಗಳು

ನಮ್ಮ ದೇಶದಲ್ಲಿ ಜ್ಯೋತಿಷ್ಯರು ಸರಿಯಾಗಿ ಘಟಿಕಾ ನಿರ್ಣಯವನ್ನು ಮಾಡ ವುದಕ್ಕೆ ಗಳಿಗೆ ಬಟ್ಟಲೆಂಬುದನ್ನೇ ಬಹುಕಾಲದಿಂದಲೂ ಉಪಯೋಗಿಸುತ್ತಿದ್ದರು. ಮಂತ್ರ ... ಗಳಲ್ಲಿ ಗಡಿಯಾರವೆಂಬುದು ೧೫೦೦ ನೇ ಇಸವಿ ... ದಲ್ಲಿ ಮೊದಲು ಜರ್ಮನಿಯಲ್ಲಿ ಕಂಡುಹಿಡಿಯಲ್ಪಟ್ಟಿತೆಂದ ಕೆಲವರು ಹೇಳುತ್ತಾರೆ. ಆದರೆ ಕ್ರಿ. ಶ. ೧೫೦೦ ನೇ ವರ್ಷ ದಿಂದ ೧೬೦೦ ರ ವರೆಗೆ ರಾಜ್ಯವನ್ನಾಳಿದ ಇಂಗ್ಲೆಂಡ್ ದೇ ಶ ಪ್ರಭುವಾದ ಮೊದಲನೆಯ ರಾಬರ್ಟನ ಬಳಿಯಲ್ಲಿ ೧ ಗ ಡಿಯಾರವಿದ್ದಿತೆಂತ ೧೫೦೦ ನೆಯ ವರ್ಷದಲ್ಲಿ ಮಾಡಲ್ಪಟ್ಟ ದೆಂದು ವೇಲ್ ಕೆತ್ತಲ್ಪಟ್ಟಿರುವ ಒಂದು ಗಡಿಯಾರವು ಹರ್ ಸ್ಟೆಫರ್ ಲಿವರ್ ಎಂಬುವರ ವಸ್ತುಪ್ರದರ್ಶನಾಲಯದಲ್ಲಿದ್ದು ೧೫೦೦ ನೆಯ ವರ್ಷಕ್ಕೆ ಮುಂಚೆ ... ಗಡಿ ಯಾರಗಳು ವ್ಯವಹಾರದಲ್ಲಿದ್ದುವೆಂತ ೧೬೦೦ ನೆಯ ... ದಲ್ಲಿ ೧ ಗಡಿಯಾರವಿದ್ದಿತು. ೧೫೦೦ ನೆಯ ವರ್ಷದಲ್ಲಿ ಕೈ ಗಡಿಯಾರಕ್ಕೆ ... ಗಡಿಯಾರವು ದು ಎಲಿಜಬೆತ್ ರಾಣಿಯವರಿಗೆ ದೊರೆತಿದ್ದಿತು. ಆದರೂ ... ಯು ಕತೆಯವರೆಗೂ ಗಡಿಯಾರಗಳು ಇಂಗ್ಲೆಂಡಿನಲ್ಲಿ ವ್ಯವಹಾರಕ್ಕೆ ಬಂದಿರಲಿಲ್ಲ. ಸ್ಪ್ರಿಂಗಿನ ಗಡಿಯಾರಗಳನ್ನು ... ಡಾಕ್ಟರ್ ಹುಕ್ ಎಂಬುವನು ಕಂಡುಹಿಡಿದ ನೆಂದು ಕೆಲವರು ಹೇಳುವರು. ಹ್ಯೂಗೆನ್ಸ್ ಎಂಬುವವ ಇದರ ರಚನೆಯನ್ನು ಕಂಡು ಹಿಡಿದನೆಂದು ಕೆಲವರು ಹೇಳು ವರು. ಎಂಕರ್ ಎಸ್ಕೇಪ್‌ಮೆಂಟ್ ಎಂಬ ಗಡಿಯಾರವನ್ನು ೧೬೦೦ ನೇ ವರ್ಷದಲ್ಲಿ ಲಂಡನ್ನಿನ ಒಬ್ಬ ಗಡಿಯಾರಗಳ ನ್ನು ಸರಿಮಾಡುವ ಮನುಷ್ಯನು ಕಂಡುಹಿಡಿದನು. ಹಾ ರಿಜಂಟಲ್ ವಾಚ್ ಎಂಬುದನ್ನು ೧೭೦೦ ರಲ್ಲಿ ಗ್ರೇಹಂ ಎಂ ಬುವನು ಕಂಡುಹಿಡಿದನು. ರಿಪೀಟರ್ ಎಂಬುವುದು ... ಯು ಚಾರ್ಲ್ಸ್ ನ ಕಾಲದಲ್ಲಿ ರಚಿಸಲ್ಪಟ್ಟಿತು. ೭ ನೆಯ ಜಾ ರ್ಜ್ ಕಾಲದಲ್ಲಿ ಅರ್ನಾಲ್ಡ್ ಎಂಬುವನು ಅಂಗುಲ ಹೊರ ಯ ಚಿಕ್ಕದ ಗಡಿಯಾರವೊಂದನ್ನು ಮಾಡಿ ೧೫೦೦ ನೆಯ ವರ್ಷ ತಾರೀಖಿನಲ್ಲಿ ೧ ನೇ ಜಾರ್ಜ್ ಪ್ರಭುವಿಗೆ ಒಪ್ಪಿಸಿದ್ದನು. ಈಗ ಸ್ವಿಟ್ಜರ್ಲೆಂಡಿನಲ್ಲಿ ಗಡಿಯಾರಗಳು ಹುಟ್ಟಿ ೧೫೦ ರೂ. ಗ ಳಿಗೆ ಮಾರಲ್ಪಡುತ್ತಲಿ ೩ ಪಟ್ಟಣದ ಊರಿಗೆಲ್ಲಾ ವ್ಯಾಪಿಸಿರು ತ್ತವೆ.

ಇನಾಕ್ಕೆ	
ಶ್ಲೇಗಿನ ತಗಲಿಕ್ಕೆ ಶಾ	ಪನ್ಯೆ
...	ದು ಅ
...	ಗು ಅ
...	...
...	...

ಯಾಗಳ ನಿಮೂರ್ಲನಕ್ಕಾಗಿ ಈ ವಿಷಯವಾಗಿ ಬಹು ಪ್ರ ಕಟನವನ್ನು ಮಾಡಿದ್ದಾರೆ. ಏನೆಂದರೆ ಇನಾಕ್ಯು ಲೇಷನ್ ಮಾಡಿಸಿಕೊಂಡವರಿಗೆ ಮೊದಲನೇ ವರ್ಷ ಪ್ಲೇಗು ರೋಗವು ತಗಲುವುದೇ ಇಲ್ಲ. ೨ ನೆಯ ವರ್ಷದಲ್ಲಿಯೂ ಆ ರೋಗವು ಬಗದಂತೆ ಮಾಡುವುದು. ಕೆಲ ದೇಶಗಳಲ್ಲಿ ಇ ನಾಕ್ಯುಲೇಷನ್ನಿನ ಶಕ್ತಿಯು ೫ ವರ್ಷಗಳವರೆಗೂ ನಿಲ್ಲುವು ದು. ೫ ವರ್ಷಗಳು ಕಳೆದ ಬಳಿಕ ಇನಾಕ್ಯುಲೇಷನ್ನು ಯಾ ವಪ್ರಯೋಜನವನ್ನೂ ಮಾಡಲಾರದು. ಅದು ಕಾರಣ, ಪ್ರತಿ ವರ್ಷವೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವವರ ಗೋ ಜಿಗೇ ಪ್ಲೇಗು ಬರುವದಿಲ್ಲ. ಇನಾಕ್ಯುಲೇಷನ್ನಿನಿಂದ ಪ್ಲೇಗು ಸುಲಭವಾಗಿ ತಗಲುವುದೆಂದು ಹೇಳುವವರು ... ರಪ್ಪಬದ್ಧವು. ಒಂದು ಆರೋಗ್ಯವಾದ ಇಲಿಯ ಮುಂದೆ ಈ ಸಿದ್ದುಬನ್ನು ಹಾಕಲಾಗಿ ಒಟ್ಟಿನಿಂದಲೂ ಪ್ಲೇಗು ಬರಲಿಲ್ಲ. ಈ ಸಿದ್ದುಬನ್ನು ಹಾಕುವ ಪ್ರಿವಕದಲ್ಲಿ ಪ್ಲೇಗನ್ನು ಹುಟ್ಟಿ ಸುವ ಕ್ರಿಮಿಗಳಿರುವುವೆಂದು ಹೇಳುವ ಮಾತು ನಿಜ. ಅ ದರ ಇವು ಶರೀರದೊಳಕ್ಕೆ ಸೇರಿದ ಕೂಡಲೆ ರಕ್ತದೊಡನೆ ಕರೆತಹೋಗಿ, ಹೊಸದಾಗಿ ಬಂದು ಸೇರುವ ಪ್ಲೇಗಿನ ವಿ ಷದ ಕ್ರಿಮಿಗಳನ್ನು ತತ್ ಕ್ಷಣವೇ ಕೊಂದುಬಿಡುವವು. ಈ ದ್ರಾವಕದಲ್ಲಿರುವ ಪ್ಲೇಗು ಕ್ರಿಮಿಗಳಿಗೂ ರೋಗದ ಮೂ ಲಬೀಜವಾದ ಕ್ರಿಮಿಗಳಿಗೂ ಸಂಬಂಧವು ಲೇಶವೂ ಇ ರುವುದಿಲ್ಲ. ಇನಾಕ್ಯುಲೇಷನ್ ರಸದಲ್ಲಿರುವ ಕ್ರಿಮಿಗಳ ಪ್ರಾಣವನ್ನು ಕಾಪಾಡುವುದು. ಪ್ಲೇಗಿನ ಕ್ರಿಮಿಗಳು ಪ್ರಾ ಣವನ್ನು ತೆಗೆದುಕೊಳ್ಳುವುವು.

ತೈಮ್ಮಾರ್ಕ್ ರಾಜನ ವೃಕ್ಷಿ.

೪ ನೆಯ ಫ್ರೆಡರಿಕ್ ಎಂಬ ಹೆಸರುಳ್ಳ ಈ ಪ್ರಭುವಿನ ... ಮ್ಮ ದೇಹಾರೋಗ್ಯದ ನಿಮಿತ್ತವಾಗಿ ಸಮೀಪದ ... ರ್ಮನಿಗೆ ಹೋಗಿದ್ದು ಸ್ವದೇಶಕ್ಕೆ ಹಿಂತಿರುಗಿ ... ಹಾಂಬರ್ಗ್‌ನಲ್ಲಿರುವ ಒಂದು ಭೋಜನಾಲಯದಲ್ಲಿದ್ದರು. ಕೊಂಡಿದ್ದ ... ತಾರೀಖು ೧೦ ರ ರಾತ್ರಿ ಇವರು ಭೋಜನಾನಂ ತರ ... ಯವರೇ ... ಒಬ್ಬರಾಗಿ ... ಯ ... ರಸ್ತೆಗೆ ವಿ ಹಾರಕ್ಕೆ ಹೋಗಿದ್ದರು. ಒರುವಾಗ ಆಕಸ್ಮಿಕವಾಗಿ ನ ... ರ್ಚೆಗೊಂಡು ಬಿದ್ದರು. ಯಾರೋ ದಾರಿಹೋಕರು ... ನೆಂದು ತಿಳಿದು ಪೋಲೀಸರು ವೈದ್ಯಶಾಲೆಗೆ ಸಾಗಿಸಿದರು. ಈ ಪ್ರಭುವು ಆ ರಾತ್ರಿಯೇ ಒಂದು ಮಾತನ್ನೂ ಆಡದೆ ಮೂ ರ್ಛೆಯೂ ತಿಳಿಯದೆ ವೈದ್ಯಶಾಲೆಯ ... ದೇಹತ್ಯಾಗವಾದಿದರು. ದಿಳಿಗ್ಗೆ ಮುಂದಿನ ಸಂಸ್ಕಾರಕ್ಕಾಗಿ ಶ ವವನ್ನು ಸ್ವಸ್ಥಳಕ್ಕೆ ಸಾಗಿಸಿದ್ದರು. ಅಷ್ಟರಲ್ಲಿ ಪ್ರಭುವಿ ನ ಕಡೆಯವರು ರಾತ್ರಿಯೆಲ್ಲಾ ಹುಡುಕಿ, ಕಡೆಗೆ ಶವವಿದ್ದ ಸ್ಥಳಕ್ಕೆ ಹೋಗಿ ಗುರುತಿಸಿ, ಅಸಲಿಯಾಗಿ ... ತಾ ವಿದ್ದ ... ಸಾಗಿಸಿದರೆಂದು, ... ತಮ್ಮ ರಾಜರು ನಿಧನರಾದ ... ಯೋಗ ... ಹಿರಿಯ ... ಕೈಗೊಂಡು ... ಮುಂದಿನ ಕಾರ್ಯಗಳಲ್ಲಿ ನಡೆಸಲ್ಪಡುವುವು ಇವರು ಗತಿಸಿದ ಎವ್ವರ್ ...

ಪ್ರಾರಕ್ವೇಷಾಕ್ನವು, ಬೆಂಗಳೂರು.

ಬೆಂಗಳೂರಲ್ಲಿ ಓದತಕ್ಕ ವಿದೇಶ್ಯದ ವಿದ್ಯಾರ್ಥಿಗಳಿಗೂ, ವ್ಯಾಪಾರಸ್ಥರಿಗೂ, ಕೋರ್ಟು ಮೊದಲಾದ ಕೆಲಸಗ ಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗ ಳೂರಿಗೆ ಬರತಕ್ಕ ಮಾರಕ್ವೆಯ ವರ್ತಕರು, ಶ್ರೀಮಂತರು ಮಾಳಿಯಾಗಾರರು, ಅಧಿಕಾರಿಗಳು ಮೊದಲಾದವರ್ಯಾರಿಗೂ ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲ್ಯ ವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿ ನಲ್ಲಿ ಶಿವಾರಕ್ವೆಯವರಿಗಾಗಿ ಒಂದು ಆಶ್ರಮವು ಕಟ್ಟಲ್ಪಟ್ಟಿರು ವಂತೆ ಈ ದಿನಗಳೊಳಗಿನಲ್ಲಿ ... ದ ಬಹುಜನಗಳು, ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿಷಾದಸ್ಥರು ಆಸ್ಪತ್ರೆ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ... ಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋ ಟಿಪೇಟೆಗೆ ಪ್ರೋತ್ಸಾಹಿಸಿದ ಮುಗ್ಗುಲಲ್ಲಿರುವ ವಿಶಾಲವಾದ

ಬಂಗಲೆಯಲ್ಲಿ ವಿದಕ್ಕೆ	ಡಿಸಿವೆ. ಈ
ಕಟ್ಟಡದಲ್ಲಿ ಕ್ಷೇಮಕ್ಕೆ	ರರೂ, ಅದಿ
ಕಾರಿಗಳೂ ಮನಿಸು	ಚಿದಿಗಳಿರುವ
ವ್ವದೆ, ಬಿಗಿನ ಕಾಲ	ಸೌಕರ್ಯ
ಇದೆ. ಒದ್ದಿಬಂಕಲ	ಮಿಸಿ ವೃತಿ
ಯೊಪ್ಪದ ಆಹಾರ	ಲವನ್ನಿಟ್ಟಿದೆ
ಮಾತ್ರೂ ಬಂದವ ಸಿ	ಸುಬದ್ಧವಾಗಿ
ದೆ. ಇಲ್ಲಿಯ ವಿಶಾ	ಕೈ ಬೆಂಬ ವಿದ್ಯಾ

ರ್ಥಿಗಳೂ ಇತರರೂ ಈ ಕೆಳಗಿನ ನಿಬಂಧನೆಯಿಂದ ವ ಕ್ಕ ...

ಚಕ್ರವರ್ತಿಗೆ ೧ ನೆಲ ... ನಿಯಿಂದ ಅನಿಗಿತ್ತುಂಡು ... ರಾಜ್ಯ ... ಸೋದರರು, ಎಂದರ ನಮ್ಮ ಈಗಿನ ೫ ನೆಯ ಜಾರ್ಜ್ ಚಕ್ರವರ್ತಿಯವರ ಸೋದರಮಾವಂದಿ ರು. ಇವರಿಗೆ ಅಂತ್ಯಕಾಲದಲ್ಲಿ ೬೦ ವರ್ಷಗಳು ಮಾತ್ರವೇ ಆಗಿದ್ದುವು. ಇವರ ತಂದೆಯವರಾದ ೯ ನೆಯ ಕ್ರಿಶ್ಚಿಯನ್ ಪ್ರಭುಗಳ ಗತಿಸಿ ೫ ವರ್ಷಗಳಾಗಿದ್ದುವು. ಫ್ರೆಡರಿಕ್ ಪ್ರ ಭುಗಳು ಹೆಚ್ಚವಯಸ್ಸಿನಲ್ಲೇ ವಿದೇಶದಲ್ಲಿ ಆತಂಕ ... ಯಾವು ದೋ ಒಂದು ವೈದ್ಯಶಾಲೆಯಲ್ಲಿ ಸ್ವಕೀಯರೊಡನೆಯೂ ೧ ಮಾತನ್ನೂ ಆಡುವುದಕ್ಕಿಲ್ಲದೆ ವಿಧಿವಶರಾದುದನ್ನು ಕೇಳಿದರೆ ವಿಧಿವಿಲಾಸವು ಎಷ್ಟು ಬಲವತ್ತರವಾದುದೆಂಬುದು ವ್ಯಕ್ತ ವಾಗುತ್ತದೆ. ಈ ವಾರ್ತೆಯು ಹರಡಿದ ಕೂಡಲೇ ಯೂ ರೋಪಿನ ಪ್ರತಿರಾಜರೂ, ಮಂತ್ರಿಮಂಡಲದವರೂ ಸಹ ಈ ಪ್ರಭುಗಳ ಕುಟುಂಬದವರಿಗೆ ತಮ್ಮ ಅನುತಾಪವನ್ನು ತಿಳಿಯಪಡಿಸಿದರು. ಶ್ರೀ ಜಾರ್ಜ್ ಸಾರ್ವಭೌಮರು ತಮ್ಮ ಪತ್ನೀ ಸಮೇತರಾಗಿ, ತಮ್ಮ ಮಾತೃಶ್ರೀಯವರ ಬಳಿಗೆ ಹೋ ಗಿದ್ದು, ಅವರ ದುಃಖೋಪಶಮನವನ್ನು ಮಾಡಿಬಂದರು. ಈ ಫ್ರೆಡರಿಕ್ ಪ್ರಭುಗಳ ಕುಮಾರರಾದ ೧೦ನೇ ಕ್ರಿಶ್ಚಿಯನ್ ರವರು ಆ ದೇಶದ ಪ್ರಭುಪದವಿಗೆ ಪಟ್ಟಾಭಿಷಿಕ್ತರಾದ್ದಾರೆ.

ಒಬ್ಬ ದೇಶಾಭಿಮಾನಿಯ ದಿನಚರ್ಯ.

೯ ವರ್ತಕರಲ್ಲೆಲ್ಲಾ ಸಂಪತ್ತಿನಲ್ಲಿಯೂ, ದೇಶಾಭಿಮಾನದಲ್ಲಿ ... ವ್ಯಾಪಾರದಲ್ಲಿಯೂ, ವ್ಯಾಪಾರದಲ್ಲಿಯೂ, ರಾಜ ತಂತ್ರದಲ್ಲಿಯೂ ಅಗ್ರಸ್ಥಾನವನ್ನು ಅಲಂಕರಿಸಿದ್ದವರು ಪಡೆ ... ಇವರು ೫ ದಿ ... ಅಧಿಕಕ್ಕೆ ಸೇರಿದವರು ... ವರ್ಷದೊಳ್ಳಗಿದ್ದ ವೃತ್ತಿ ... ಇವರ ಮೃತ್ಯು ... ಕಲಸ್ಥಿಗುವರ ... ರಾಷ್ಟ್ರದವರ ... ಕೆಲಸ ... ಘಂಗಳವಲ್ಲ ತತ್ತ್ವತಃ ... ದೇಶ ಸೇವೆಯನ್ನು ... ಪದವಿ ... ಅ ಸ ದಿನದ ಅಭ್ಯಾಸ ... ದೇವ ... ಪ್ರಭುತ್ವವು ... ಕೆಲ ... ದಿನಕ್ಕೆ ... ರಾತ್ರಿಯಾಗಿ ... ಹೊಂದಿ ... ಆರೋಗ್ಯ ... ಹೇಳುವುದೇನು? ... ಸಮಯಕ್ಕೆ ... ರಾತ್ರಿ ... ಗಂಟೆ ... ದೆವಸಕ್ಕೆ ... ಗಂಟೆಗಳನ್ನು ... ಪುಸ್ತಕಗಳ ... ಗಳನ್ನು ... ಓದುವನು. ... ಇಲ್ಲವೆ ... ಬರೆಯುವನು. ... ನವರು ... ವರು. ೪ ಗಂಟೆಯಾದ ಮೇಲೆ ತಿಂಡಿತಿನಿಸುಗಳನ್ನು ... ತಾ ... ಹೋಗುವ ರು. ಅಲ್ಲಿಂದ ೯ ಗಂಟೆವರೆಗೆ ... ಅನಂತರ ... ೧೦ ಗಂಟೆಯವರೆಗೂ ... ಸೆಗಳಿಂದ ... ೧೦ ಗಂಟೆಯ ನಂತರ ಮಧ್ಯಾಹ್ನ ೧ ಗಂಟೆಯ ವರೆಗೂ ತಮ್ಮನ್ನು ನೋಡುವುದಕ್ಕಾಗಿ ಬರುವ ನಾನಾ ಪಕ್ಷದ ... ಸಂಭಾಷಿಸುತ್ತಿರುವ ರು. ೧ ರಿಂದ ೨ ಗಂಟೆಯವರೆಗೆ ... ಭೋಜನ ... ಕಾರ್ಯದ ... ಮಧ್ಯಾಹ್ನದ ಭೋ ಜನಕ್ಕೆ ತೆರಳುವರು. ೨ ಗಂಟೆಗೆ ... ಟೆಲಿಫೋನಿನ ಮೂಲಕ ...

ಲಕ ಹಣಿಯುವ	ಇವರು ...
ದಿತಿಸಾ ಅಕ್ಕ	... ನಡತ್ತಿರ್ದ
ಈ ಪದವನ್ನು	... ಪದಸಿ
...	... ಗಂಟೆಗೆ ...
...	...
ಗಳನ್ನಿಕ್ಕಿರದ	...
ರಾತ್ರಿ ...	...
...	... ದ. ಪರು.

೬ ಗಂಟೆಯೊಳಗೆ ... ಕಾರ್ಯಗಳನ್ನು ...

ಯಿಂದ ೯ ಗಂಟೆಯವರೆಗೂ ಅನೇಕವಾಗಿ ಸ್ನೇಹಿತರೊಡನೆಯೂ, ಅತಿಥಿಗಳೊಡನೆಯೂ, ತಮ್ಮ ಹೆಂಡತಿ ಮಕ್ಕಳೊಡನೆಯೂ ಕೂಡಿ ಭೋಜನವನ್ನು ಮಾಡುವರು. ಬೆಳಗಾಲದಲ್ಲಿ ಟಾಫ್ಟರವರು ವಾಲಕ್ಕಿಗಡ ವಿನ ನಾಟಕಾವಲೋಕನಕ್ಕೆ ಹೋಗುವರು. ಅಂಥದಿವಸ ಹೊತ್ತಿಗೆ ಮುಂಚೆ ಊಟವನ್ನು ತೀರಿಸಿ ೭॥ ಗಂಟೆಗೆ ಹೋಗಿ ೯ ಗಂಟೆ ವರೆಗಿದ್ದು ಬರುವರು. ೯ ಗಂಟೆಯಮೇಲೆ ಅರ್ಧಗಂಟೆ ಯವರೆಗೆ ತಮ್ಮ ಪತ್ನಿಯೊಡನೆಯಾಗಲಿ ಇನ್ನಾವ ಸ್ನೇಹಿತರೊಡನೆಯಾಗಲಿ ಬ್ರಿಡ್ಜ್ ಎಂಬ ಆಟವನಾಡುವರು. ಅಲ್ಲಿಂದ ೧೨ ಗಂಟೆಯ ರಾತ್ರಿಯವರೆಗೆ ತಾವು ಆ ವಾರದಲ್ಲಿ ಮಾಡಬೇಕಾಗಿರುವ ಉಪನ್ಯಾಸಗಳನ್ನು ಬಾಯಿಂದ ಹೇಳಿ ಬರೆಯಿಸಿ ಮುದ್ರಣಕ್ಕಾಗಿ ಸಿದ್ಧಗೊಳಿಸುವರು. ೧೨ ರಿಂದ ೧॥ ವರೆಗೆ ನಾನಾದೇಶದ ಚರಿತ್ರುವನ್ನಾಗಲಿ, ಕಥೆಗಳನ್ನಾಗಲಿ ಓದುತ್ತಿರುವರು. ಬಳಿಕ ನಿದ್ರಿಸುವುದಕ್ಕೆ ಹೋಗುವರು. ಹೀಗೆ ನಿಯತವಾಗಿ ಕೆಲಸ ಮಾಡುವುದಕ್ಕೆ ಅಭ್ಯಾಸವು ಸರ್ವರಿಗೂ ಆವಶ್ಯಕವಾದುದು.

ಮೈಸೂರ್ ಸ್ಟಾರ್

೧೯೧೨ ನೆಯ ನೋ॥ ತಾ॥ ೨೭ ನೆಯ ಸೋಮವಾರ

ವರ್ಷವರ್ಧಂತ್ಯುತ್ಸವವು.

ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರವರಿಗೆ ನೆನ್ನೆಯ ದಿವಸಕ್ಕೆ ೨೮ ವರ್ಷಗಳು ತುಂಬಿ, ಈಗ ೨೯ ನೆಯ ವರ್ಷವು ನಡೆಯುತ್ತಿದೆ. ನೆನ್ನೆಯ ದಿವಸ ತತ್ಸಂಬಂಧವಾದ ವರ್ಷವರ್ಧಂತ್ಯುತ್ಸವಗಳು ಸಂಭ್ರಮಾಡಂಬರಗಳಿಂದ ಯಥಾವಿಧಿಯಾಗಿ ನೆರವೇರಿಸಲ್ಪಟ್ಟುವು. ಕಳೆದ ಜೈನವರಿ ಬಹುಳ ೧೧ ಕ್ಕೆ ೫೮ ವರ್ಷಗಳು ತುಂಬಿ ೫೯ ನೆಯ ವಯಸ್ಸಿನಲ್ಲಿ ಪದಾರ್ಪಣ ಮಾಡಿರುವ ಶ್ರೀಮದ್ಯುವರಾಜರ ಸಮೇತರಾಗಿ ನಮ್ಮ ಮಹಾರಾಜರವರು ಅಶ್ವಾರೂಢರಾಗಿ ರಾಜವೀಧಿಗಳಲ್ಲಿ ಸಕಲ ಪರಿವಾರದೊಡನೆ ಉತ್ಸವಗೊಂಡು ಬಂದು ನೆರೆದಿದ್ದ ಪ್ರಜಾವರ್ಗಕ್ಕೆಲ್ಲಾ ಅಮಿತಾನಂದವನ್ನುಂಟುಮಾಡಿದರು.

ರಾಜಧಾನಿಯಲ್ಲಿ ನಡೆಯತಕ್ಕ ವಿಶೇಷೋತ್ಸವಗಳಲ್ಲಿ ಮಹಾನವಮಿಯ ಮಹೋತ್ಸವವೊಂದು, ಈ ವರ್ಧಂತ್ಯುತ್ಸವವೊಂದು—ಇವೆರಡೇ ಮುಖ್ಯವಾದುವುಗಳು. ಈ ಎರಡು ಸಮಯಗಳಲ್ಲೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ಪ್ರಜಾವರ್ಗದವರನೇಕರೂ ರಾಜಧಾನಿಗೆ ಬಂದು ಸೇರುವ ಪದ್ಧತಿಯುಳ್ಳುದು. ಇಂಥ ಸುಸಮಯವನ್ನು ಬರಿದಾಕಳೆಯದೆ ಪ್ರಯೋಜನವಾಗುವಂತೆ ಉಪಯೋಗಿಸಬೇಕೆಂಬ ಉದ್ದೇಶದಿಂದಲೇ ಮಹಾನವಮಿಯ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ಕೂಡುವ ನಿರ್ಬಂಧವು ಶ್ರೀಚಾಮರಾಜೇಂದ್ರರವರ ಕಾಲದಲ್ಲಿ ಗತಿಸಿದ ರಂಗಾಚಾರ್ಲುಯವರ ಮಂತ್ರಿತ್ವದಲ್ಲಿ ಸ್ಥಾಪಿತವಾಯಿತು. ಅಂತಹ ಏರ್ಪಾಡನ್ನೇ ವರ್ಧಂತ್ಯುತ್ಸವ ಸಮಯದಲ್ಲೂ ಬೇರು ವಿಧವಾಗಿ ಮಾಡಿದ ಕೀರ್ತಿಯು ನಮ್ಮ ಶ್ರೀಮನ್ಮಹಾರಾಜರವರಿಗೂ, ಅವರ ಮಂತ್ರಿವರ್ಯರಾದ ಮ॥ ರಾ॥ ಆನಂದರಾಯರವರಿಗೂ ಪ್ರಾಪ್ತವಾಗಿರುವುದು. ಕಳೆದ ವರ್ಷದಿಂದಲೂ ಈ ವರ್ಧಂತಿಯ ಸಮಯದೊಳಗೆ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಒಂದು ಸಂಘವು ಏರ್ಪಡಿಸಲ್ಪಟ್ಟು ನಡೆಯುತ್ತಾ ಬಂದಿರುವ ಸಂಗತಿಯು ನಮ್ಮ ಪತ್ರಿಕಾ ವಾಚಕರಿಗೆಲ್ಲಾ ಗೊತ್ತೇ ಇದೆ. ಈ ಸಂಘಕ್ಕೆ ಸಂಬಂಧಿಸಿದ ವ್ಯವಸಾಯ, ವ್ಯಾಪಾರಿಕ ಮತ್ತು ವಿದ್ಯಾಭ್ಯಾಸಗಳೆಂಬ ಉಪಸಭೆಗಳ ಕೂಟಗಳು ಈಗ ರಾಜಧಾನಿಯಲ್ಲಿ ಕೂಡಿ ಕೆಲಸಮಾಡುತ್ತಿವೆ. ಪ್ರಜಾಪ್ರತಿನಿಧಿಸಭೆಯಂತೆ ಈ ಸಭೆಗಳ ಕೆಲಸವು ಬಹಿರಂಗವಾಗಿ ನಡೆಯದೆ ಇರುವುದು ಕೊರತೆಯಾಗಿದ್ದರೂ ಈ ಸಭೆಯು ಉತ್ಪಾದನೆಯಲ್ಲಿ ಶ್ರೀಮನ್ಮಹಾರಾಜರಿಗಿರುವ ಶ್ರೇಷ್ಠವಾದ ಉದ್ದೇಶವನ್ನು ನೆರವೇರಿಸುವಲ್ಲಿ ಈ ಸಭೆಯು ಮನಮುಟ್ಟಿ ಕೆಲಸಮಾಡುತ್ತಿರುವುದೆಂದು ಊಹಿಸಬಹುದಾಗಿದೆ. ಅದರೂ ಇಂಥ ಸಂಘವು ದೇಶಹಿತಕ್ಕಾಗಿ ಸ್ಥಾಪಿಸಲ್ಪಟ್ಟಿರುವುದೆಂಬುದನ್ನು ಕೇಳಿ ಉಲ್ಲಾಸಗೊಂಡಿರುವ ಪ್ರಜೆಗಳು ಇದರಿಂದ ದೊರೆಯಬೇಕಾದ ಫಲವಿಶೇಷವನ್ನು ಎಂದಿಗೆ ಕಾಣುವೆವೋ ಎಂದು ನಿರೀಕ್ಷಿಸುತ್ತಿದ್ದಾರೆ. ಅದನ್ನು ಆದಷ್ಟು ಶೀಘ್ರವಾಗಿ ಸ್ವಲ್ಪಸ್ವಲ್ಪವಾಗಿ ಯಾದರೂ ದೊರಕಿಸಿಕೊಡುವುದು ಈ ಸಂಘದವರ ಕರ್ತವ್ಯವಾಗಿದೆ.

ಶಾಶ್ವತವಾದ ಕಾರ್ಯಫಲವನ್ನು ಕಲ್ಪಿಸುವುದಕ್ಕೆ ಬಲವತ್ತರವಾದ ವಿಚಾರಗಳು ಆವಶ್ಯಕವಾಗಿರುತ್ತವೆ. ಆದರೂ ಅಂತಹ ಸಂದರ್ಭಗಳಲ್ಲಿ ಹೆಚ್ಚು ಕಾಲವಿಳಂಬನೆಮಾಡುವುದರಿಂದ ಮನಸ್ಸಿನಲ್ಲಿ ಕುತೂಹಲದ ವೇಗ ತಮ್ಮ ನಿಜಸ್ವರೂಪವನ್ನು ಕಳೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಪ್ರಜೆ

ಸಂಘದ ಉದ್ದೇಶವು ನೆರವೇರಬೇಕಾದರೂ ಸರ್ಕಾರದವರ ಪ್ರಯತ್ನದ ಜತೆಗೆ ಪ್ರಜೆಗಳ ಸಾಹಸವೂ ಜತೆಗೂಡಬೇಕಾಗಿಯೇ ಇರುತ್ತದೆಂಬ ದನ್ನು ಹೇಳಬೇಕಾಗಿಲ್ಲ. ಉತ್ತರ ಹಿಂದೂಸ್ಥಾನದೇಶದ ಪ್ರಜೆಗಳಿಗಿರುವಷ್ಟು ಸ್ವೋನ್ನತಿಸಾಧನದಕ್ಷತೆಯಾಗಲಿ, ಕರ್ತವ್ಯತತ್ಪರತೆಯಾಗಲಿ ದಾಕ್ಷಿಣಾತ್ಯರಾದ ನಮ್ಮ ದೇಶೀಯರಿಗೆ ಇನ್ನೂ ಉಂಟಾಗಿಲ್ಲ. ಅಲ್ಲಿನ ಜೋಗಕೆಲ ಬೋರ್ಡುಗಳಲ್ಲಿ ಪ್ರಜಾಪ್ರತಿನಿಧಿಗಳು ಹೇಗೆ ತಮ್ಮ ಕಾರ್ಯವನ್ನು ತಾವೇ ತಾವೇ ಜರಗಿಸಿಕೊಳ್ಳುತ್ತಿರುವರೆಂಬುದನ್ನು ನೋಡಿದರೆ ಈ ಸಂಗತಿಯು ಸ್ಪಷ್ಟವಾಗುತ್ತದೆ. ಅಂಥ ಸಾಮರ್ಥ್ಯವು ನಮ್ಮ ದೇಶೀಯರಲ್ಲಿ ಉಂಟಾಗುತ್ತ ಬಂದಿಲ್ಲವೆ. ಸರ್ಕಾರದವರ ಮೇಲೆ ಕಂಡಂತಹ ಉದ್ದೇಶಗಳು ಸಫಲವಾಗಲಾರವು. ಅಂಥ ಸಾಮರ್ಥ್ಯವು ಉಂಟಾಗಬೇಕಾದರೆ ಪ್ರಜಾಸಾಮಾನ್ಯದಲ್ಲಿ ಮುಖ್ಯವಾಗಿ ವಿದ್ಯಾಪ್ರಚಾರವಾಗಬೇಕು. ಮನುಷ್ಯನ ಅಂಗಾಂಗಗಳ ಕೆಲಸಗಳೆಲ್ಲಾ ಸರಿಯಾಗಿ ನಡೆದು ದೇಹಸ್ಥಿತಿ ತಾರ್ಥವು ಸಮಗ್ರವಾಗಿ ಆಗಬೇಕಾದರೆ, ಮಿದುಳು ಸವಿಶೇಷವಾದ ಸ್ಥಿತಿಯಲ್ಲಿರಬೇಕಾದುದು ಆವಶ್ಯಕವಾಗಿರುವಂತೆ ವಿದ್ಯಾವಿಶೇಷಗಳ ಸಹಾಯವು ಪ್ರಜೆಗಳಿಗಿಲ್ಲದಿದ್ದರೆ ಅವರಿಂದ ಮಾಡಲ್ಪಡತಕ್ಕ ಉದ್ಯೋಗಗಳು ಸಮಗ್ರವಾದ ಪುಷ್ಟಿಯನ್ನು ಅವರಿಗೆ ಉಂಟುಮಾಡಲಾರವು. ವಿದ್ಯೆಯೆಂದರೆ ಪಕ್ಷಾಂತರ ಸರ್ಕಾರದಧಿಕಾರ ಮೊದಲಾದುವುಗಳನ್ನು ಸಂಪಾದಿಸುವುದಕ್ಕೋಸ್ಕರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ತಮ್ಮ ನಿರೀಕ್ಷಣೆಯುವವರ ಹಣವನ್ನು ಸುಲಿದು ಕೊಳ್ಳುವುದಕ್ಕಾಗಿಯೇ ಮಾಡಲ್ಪಡುವುದಲ್ಲ. ಅಂಥ ವಿದ್ಯೆಯು ಹೆಚ್ಚುವುದರಿಂದ ದೇಶದ ಸಂಪತ್ತು ಎಂದಿಗೂ ವೃದ್ಧಿಯಾಗುವುದಿಲ್ಲ. ದೇಶದ ಸಂಪತ್ತನ್ನು ನಿಜವಾಗಿ ಹೆಚ್ಚಿಸತಕ್ಕವು ಕೃಷಿವಾಣಿಜ್ಯಶಿಲ್ಪಗಳೇ ಆಗಿರುತ್ತವೆ. ನಮ್ಮ ದೇಶದಲ್ಲಿ ಇದುವರೆಗೆ ಪ್ರಸರಿಸಿರುವ ಪ್ರೌಢವಿದ್ಯೆಯು ಸಹಾಯವೆಲ್ಲವೂ ಮೇಲಿನದೇಶದ ನೆರೆಹೊರೆಯವರು ಗಳಿಸಿದ ಹಣದಲ್ಲಿ ಪಾಲು ಮಾಡಿಕೊಳ್ಳುವ ಕೆಲಸಕ್ಕೆ ವಿಶೇಷತಃ ಸಹಾಯವಾಯಿತೇ ಹೊರತು ಕೃಷಿವಾಣಿಜ್ಯಾದಿಗಳಿಗೆ ಸಹಾಯಕವಾಗಲಿಲ್ಲ. ಅದರಿಂದಲೇ ಈ ದೇಶದ ಸಂಪತ್ಸ್ಥಿತಿಯು ತಲೆಕೆಳಗಾಗುವಂತಾಯಿತು. ಈ ದೋಷವನ್ನು ತಿಳಿದೇ ಲಾರ್ಡ್ ಕರ್ಜನರವರು ಈ ದೇಶದ ವಿದ್ಯಾಭ್ಯಾಸಕ್ರಮದಲ್ಲಿ ಪ್ರೌಢವಿದ್ಯೆಗಿಂತಲೂ ಬಾಲ್ಯವಿದ್ಯಾಪ್ರಚಾರಕ್ಕಾಗಿ ಹೆಚ್ಚಾದ ಪ್ರೋತ್ಸಾಹವನ್ನು ಮಾಡಬೇಕಾದುದಾವಶ್ಯಕವೆಂದು ನಿರ್ಧರಿಸಿದರು.

ಕೃಷಿವಾಣಿಜ್ಯಶಿಲ್ಪಗಳನ್ನು ಮಾಡುವ ಪ್ರಜೆಗಳೇ ದೇಶದ ಸಕಲ ಸಂಪತ್ತಿಗೂ ತಳಹದಿಯಾಗಿರುವಲ್ಲಿ ನಮ್ಮ ದೇಶದ ಆ ಜನರಿಗಿರುವ ಮೌಢ್ಯಸ್ಥಿತಿಯನ್ನು ನೋಡಿದರೆ ಯಾರಿಗೆ ತಾನೇ ಮರುಕವುಂಟಾಗುವುದಿಲ್ಲ? ದೇಶದಲ್ಲಿನ ಸ್ವಜನಾತಿರೇಕಗಳನ್ನು ಪರಿಹರಿಸುವ ಭಾರವು ಮುಖ್ಯವಾಗಿ ಪಾಲಕರ ಮೇಲೆ ಬಿದ್ದಿರುವಾಗ, ಎಲ್ಲಕ್ಕಿಂತಲೂ ಮೊದಲು ಆ ತಳಹದಿಯನ್ನು ಸರಿಪಡಿಸುವ ಕಾರ್ಯವನ್ನು ಅವರು ಮಾಡಬೇಕಲ್ಲವೆ? ವಿದ್ಯೆಯಲ್ಲಿ ಮುಂದುವರಿದಿರುವ ಜನವರ್ಗದವರ ಪ್ರೌಢವಿದ್ಯೆಗೇ ಸರ್ಕಾರದವರು ಹೆಚ್ಚು ವೆಚ್ಚವನ್ನು ಮಾಡುತ್ತ ಅವರಿಗೇ ಗಮನಕೊಡುವುದು ಮರದ ಬುಡದಲ್ಲಿ ಗೊಬ್ಬರ ನೀರುಗಳನ್ನು ಹಾಕಿ ಪಾತಿಗಟ್ಟಿ ಬೇರು ಕಾಪಾಡುವುದನ್ನು ಬಿಟ್ಟು, ಮೇಲಿನ ಕೊಂಬೆಗಳಲ್ಲಿ ಕಸಿ ಮಾಡುವುದರಿಂದ ಹಣ್ಣುಗಳನ್ನು ವಿಶೇಷವಾಗಿ ಬಿಡಿಸುವುದಕ್ಕೆ ಪ್ರಯತ್ನಿಸುವ ವನಪಾಲಕನ ಕೆಲಸದಂತಾಗುತ್ತದೆ. ಆದು ಕಾರಣ ನಮ್ಮ ದೇಶದ ಸಂಪದಭ್ಯುದಯ ಸಮಾಜದವರೂ ಅದನ್ನು ಸ್ಥಾಪಿಸಿದ ಪ್ರಭುತ್ವದವರೂ ಸಹ ಮೊದಲು ಬಾಲ್ಯವಿದ್ಯಾಪ್ರಚಾರರೂಪ ಪ್ರಯತ್ನವನ್ನೇ ತಮ್ಮ ವಿಚಾರದ ಪ್ರಥಮ ಫಲವನ್ನಾಗಿ ನಿರ್ಣಯಿಸದೆ ಇರಲಾರರೆಂದು ಆತ್ಯಾತುರದಿಂದ ನಿರೀಕ್ಷಿಸುತ್ತೇವೆ.

ಆ॥ ಗೋಪಾಲಕೃಷ್ಣನವರು ನಿಯಮನಿರ್ಮಾಣ ಸಭೆಯಲ್ಲಿ ಸೂಚಿಸಿದಂತೆ ಒಂದು ವಿಧಿಯನ್ನೇರ್ಪಡಿಸಿ, ಬಲಾತ್ಕಾರದಿಂದ ಬಾಲ ವಿದ್ಯಾಭ್ಯಾಸವನ್ನು ಮಾಡಿಸುವುದೇ ನಮ್ಮ ದೇಶಕ್ಕೆ ಅನ್ಯಾಯವಲ್ಲವೆಂದು ಯೋಚಿಸಬೇಕಾಗಿದೆ. ಪ್ರಜೆಗಳೇ ತಾವಾಗಿ ವಿದ್ಯಾಕಾಂಕ್ಷೆಯನ್ನು ಹೊಂದಿ ತಮ್ಮತಮ್ಮ ಮಕ್ಕಳುಗಳಿಗೆ ವಿದ್ಯೆಯನ್ನು ಹೇಳಿಸುವಂತಾಗಲಿ ಎಂದು ಸರ್ಕಾರದವರು ನಿರೀಕ್ಷಿಸತಕ್ಕದ್ದಲ್ಲ. ಸರ್ಕಾರವು ಹಾಗೆ ಉಪೇಕ್ಷಿಸಿಬಿಟ್ಟು ಪ್ರಸಕ್ತ ಸಂಘದಂತಹ ನೂರಾರು ಕೂಟಗಳನ್ನು ಕೂಡಿಸಿ ಲಕ್ಷಾಂತರ ಗಜ ಕಾಗದಗಳಲ್ಲಿ ಅವುಗಳ ನಡವಳಿಕೆಯ ಬಗವಣಿಗೆಯನ್ನು ತುಂಬಿಸಿದರೂ ದೇಶಕ್ಕೆ ನಿಜವಾದ ಕಲ್ಯಾಣವಾಗುವುದಿಲ್ಲ. ಪ್ರಜೆಗಳ ಅಜ್ಞಾನವನ್ನು ತಪ್ಪಿಸುವುದಕ್ಕಾಗಿ ಸರ್ಕಾರದವರು ಬಲಾತ್ಕರಿಸಿ ಸಿದ್ಧಿ ಮೊದಲಾದವುಗಳನ್ನು ಹಾಕಿಸುವುದಿಲ್ಲವೆ? ಅದಕ್ಕಿಂತಲೂ ಬಲಾತ್ಕಾರ ವಿದ್ಯಾಭ್ಯಾಸವು ಅನ್ಯಾಯವಲ್ಲ.

ಪ್ರಜೆ ಪ್ರಜಾಗಳನ್ನು ವಿಶೇಷವಾಗಿ ಬಳೆಯಿಸುವುದಕ್ಕಿಂತಲೂ ದೃಢ ಪ್ರಜೆಗಳನ್ನು ವಿವೇಕಿಗಳನ್ನಾಗಿ ಮಾಡುವ ಪ್ರಯತ್ನ ಅತ್ಯಂತ ಮುಖ್ಯವಾದುದೆಂಬುದನ್ನು ಹೇಳಬೇಕಾಗಿಲ್ಲ. ಆ ಕಾರಣ ಬಾಲ್ಯವಿದ್ಯಾಪ್ರಚಾರದ ಹೆಚ್ಚು ವೆಚ್ಚಕ್ಕಾಗಿ ಇತರ ಶಾಖೆಗಳ ವೆಚ್ಚದಲ್ಲಿ ಕಡಿಮೆಯನ್ನಾದರೂ ಮಾಡಿ, ಇದಕ್ಕೆ ಉಪಯೋಗಿಸಿಕೊಂಡಾದರೂ, ಇಲ್ಲವೆ ಲೋಕಲ್ ಸೆಸ್ಸಿನ ಜತೆಗೆ ಇನ್ನಷ್ಟು ಕಂದಾಯವನ್ನು ಹೆಚ್ಚಿಸಿ ಉತ್ಪತ್ತಿ ಮಾಡಿಕೊಂಡಾದರೂ ಸಹ ಸರ್ಕಾರದವರು ಬರೋಡಾ ಪ್ರಭುತ್ವದ ಮೇಲ್ಪಂಕ್ತಿಯನ್ನನುಸರಿಸಿ, ಕಾರ್ಯಮಾಡಲು ಅವಶ್ಯಕವಾಗಿ ಸಿದ್ಧರಾಗಬೇಕೆಂದೂ, ಪ್ರಸಕ್ತ ಸಂಘದವರು ಅದಕ್ಕೆ ತಕ್ಕ ಸೂಚನೆಯನ್ನು ಸರ್ಕಾರದವರಿಗೆ ಕೊಡುವವರಾಗಬೇಕೆಂದೂ ಕೋರುತ್ತೇವೆ.

ಪ್ರಜಾರಂಜನಾರ್ಥವಾಗಿಯೇ ಹೊಸಹೊಸ ವಿಧಾನಗಳನ್ನು ಮಾಡಲು ಅಹರ್ನಿಶಿಯೂ ವ್ಯಗ್ರರಾಗಿರುವ ನಮ್ಮ ಶ್ರೀಮನ್ಮಹಾರಾಜರವರು ಈ ಅವಶ್ಯಕವಾದ ವಿಧಾನವನ್ನು ಕಲ್ಪಿಸಿಕೊಡುವ ವಿಷಯದಲ್ಲಿ ಉದಾರ ಚಿತ್ತವನ್ನು ತೋರಿಸಿ ಪ್ರಜೆಗಳ ಶಾಶ್ವತವಾದ ಕೃತಜ್ಞತೆಗೂ, ವಂದನೆಗೂ ಪಾತ್ರರಾಗಲೆಂದೂ, ಅಂತಹ ಸ್ಮೃತಿಯನ್ನು ಶ್ರೀಮನ್ಮಹಾರಾಜರವರಿಗೂ, ಅವರ ಕೈಕೆಳಗೆ ಸುಖಶಾಂತಿ ಭೋಗವನ್ನು ಮಾಡುತ್ತ, ಈಗನಂತಹ ಅನೇಕ ವರ್ಷ ವರ್ಧಂತ್ಯುತ್ಸವವನ್ನು ಅನೇಕಕಾಲ ಸಂದರ್ಶಿಸುವ ಪುಣ್ಯವನ್ನು ಪ್ರಜೆಗಳಿಗೂ ಆ ಜಗದಂಬಿಕೆಯಾದ ಚಾಮುಂಡೇಶ್ವರಿಯು ಅನುಗ್ರಹಿಸಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ತಾ॥ ೨೨ ರ ಸಾಯಂಕಾಲದಲ್ಲಿ ರಾಜಧಾನಿಯಲ್ಲಿ ಒಂದು ಹದ ಮಳೆಯು ಬಿದ್ದಾಗಾಯಿತು. ಆದರೂ ಧಗೆಯು ಮಾತ್ರ ಇನ್ನೂ ಕಡಿಮೆಯಾಗಿಲ್ಲವು.

ಮೈಸೂರ ನಿಯಮನಿರ್ಮಾಣ ಸಭೆಯು ಬರುವ ಡಿಸೆಂಬರ್ ತಾ॥ ೧ ನೆಯ ಶನಿವಾರದ ಮಧ್ಯಾಹ್ನ ೧ ಗಂಟೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರುವುದು.

ರಾಜಧಾನಿಯಲ್ಲಿ ಕಳೆದವಾರ ಒಬ್ಬ ಜಲಗಾರನು ಜೋಡೆತ್ತಿನ ಬಂಡಿಯನ್ನು ಹೊಡೆದುಕೊಂಡು ಹೋಗುತ್ತಿದ್ದಾಗ ಮಾರ್ಗಮಧ್ಯದ ಏಕೋ ಒಂದು ಅಕಸ್ಮಾತ್ ಕಾರಣದಿಂದಲೋ ಬಂಡಿಯಿಂದ ಕೆಳಗೆ ಬಿದ್ದು ಕತ್ತಿಗೆಯ ಮೇಲೆ ಚಕ್ರವು ಹರಿದು ಮೂರ್ಛೆ ಹೋಗಿದ್ದ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಮಾಡ ಲ್ಪಟ್ಟಾಗ್ಯೂ ಗುಣವನ್ನು ಹೊಂದದೆ ಸತ್ತುಹೋದನು.

ರಾಜಧಾನಿಯಲ್ಲಿ 'ಸರ್ವಜನ ಹಿತೋಪಕಾರಿಣಿ' ಎಂಬ ಹೆಸರಿನಿಂದ ಒಂದು ದೈನಿಕ ಪತ್ರಿಕೆಯು ಕಳೆದ ೧ ತಿಂಗಳಿಂದಲೂ ಪ್ರಕಟವಾಗುತ್ತಿದೆ. ಬೆಂಗಳೂರಲ್ಲೂ ಈಚೆಗೆ ಮಂದ್ಯದಲ್ಲೂ ಉದ್ಭವಿಸಿದ್ದ ದೈನಿಕ ಪತ್ರಿಕೆಗಳ ಸ್ಥಿತಿಯು ಈ ಪತ್ರಿಕೆಗೆ ಪ್ರಾಪ್ತವಾಗದೆ, ಇದು ತನ್ನ ಹೆಸರಿಗೆ ತಕ್ಕಂತೆ ಸರ್ವಜನರಿಗೂ ಹಿತವನ್ನುಂಟುಮಾಡುತ್ತ ಚಿರಕಾಲ ಬಾಳಲಿ ಎಂದು ನಾವು ಹಾರೈಸುತ್ತೇವೆ.

ಈ ವರ್ಷದ ವರ್ಧಂತಿಯುತ್ಸವಕ್ಕೆ ಯಥಾಪ್ರಕಾರ ಮಂತ್ರಿಗಳೂ, ಉಪಮಂತ್ರಿಗಳೂ, ಶಾಖಾಧಿಕಾರಿಗಳೂ, ಡೆಪ್ಯುಟಿ ಕಮಿಷನರುಗಳೂ ಬಂದಿರುವರಲ್ಲದೆ, ಚೀಫ್ ಜಡ್ಜಿಯ ಉದ್ಯೋಗದಿಂದ ನಿವೃತ್ತಿ ಸುಖವನ್ನನುಭವಿಸುತ್ತಿರುವ ಮಿ॥ ರಾಮಚಂದ್ರಯ್ಯರ್‌ರವರೂ ಬಂದಿರುವರು. ಇವರಿಗೆ ದರ್ಬಾರಿನಲ್ಲಿ ಕೌನ್ಸಿಲರುಗಳ ಮೇಲಿನ ಸ್ಥಾನವು ಕೊಡಲ್ಪಟ್ಟಿದ್ದಿತು. ಉದ್ಯೋಗದಿಂದ ನಿವೃತ್ತರಾಗಿರುವವರಲ್ಲಿ ಮಿ॥ ಮಾಧವರಾಯರ ವಿನಾ ಇತರರೆಲ್ಲರೂ ಬಂದಿರುವರು. ಈ ದಿವಸದಿಂದ ಸಂಸ್ಥಾನದ ಸಂಪದಭ್ಯುದಯಸಂಘವು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರಿ ಹಿಂದಣವರ್ಷದಲ್ಲಾದ ಕಾರ್ಯಗಳ ಸಮಾವಲೋಕನವು ಮಾಡಲ್ಪಟ್ಟು, ಮುಂದೆ ಜರುಗಬೇಕಾದ ಕಾರ್ಯಗಳು ಪರ್ಯಾಲೋಚಿಸಲ್ಪಡುವುವು.

ಸರ್ಕಾರಿಯ ಮುದ್ರಣಾಲಯಗಳ ಸೂಪರಿಂಟೆಂಡೆಂಟರಾದ ಮಿ॥ ವಿಟ್ಸ್‌ರವರು ೩ ತಿಂಗಳ ಪ್ರಿವಿಲೆಜ್ ರಜವನ್ನೂ, ಸರ್ಕಾರಿಯ ಉದ್ಯೋಗದ ಮೇಲೆ ೧ ತಿಂಗಳ ರಜವನ್ನೂ ಪಡೆದುಕೊಂಡು ಸೀಮೆಗೆ ಪ್ರಯಾಣಮಾಡುತ್ತಿರುವುದರಿಂದ ಅವರು ಬರುವವರೆಗೆ ಅ॥ ಸೂಪರಿಂಟೆಂಡೆಂಟರಾದ ಮಿ॥ ಬಿ. ಬಿ. ರಾಮಚಂದ್ರಮೊದಲಿಯಾರರು ಸೂಪರಿಂಟೆಂಡೆಂಟರಾಗಿಯೂ, ಗೆಜೆಟ್ಟಿನ ಕಂಪೈಲರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಬೆಂಗಳೂರ ಸರ್ಕಾರಿಯ ಮುದ್ರಣಾಲಯದಲ್ಲಿ ಪ್ರಿಂಟರಾಗಿರುವ ಮಿ॥ ಬಿ. ಪುಟ್ಟಣ್ಣ ಬಿ. ಎ., ಮತ್ತು ಮ॥ ಬಿ. ಶ್ರೀನಿವಾಸಯ್ಯಂಗಾರ್ ಬಿ. ಎ., ಇವರುಗಳನ್ನು ರವರು ತಮ್ಮ ಕೊಡ ಸೀಮೆಗೆ ರ್ಣ ಸಂಬಂಧವಾದ ಕೆಲಸ ಕ್ಷೆಯಗಳ ಸಂಘದ ಜನರಲ್ ಸ ರ್. ರಾಮಯ್ಯನವರು ಸೀಮೆ

ನ್ನು ತಕ್ಕ ಸಹಾಯ ಮಾಡಲು ಸರ್ಕಾರ ನೇಮಿಸಿದ್ದಾರೆ ಸಿದ್ಧಾಂತದ ಮಗನಿಗಿಂತಲೂ ವಿದ್ಯಾವಂತನಾದ ಮಗನೇ ಶ್ರೇಷ್ಠನೆಂದು ವ ಪ್ರಾರ್ಥಿಸುವನೆಂಬ ಚರಿತ್ರೆಯನ್ನು ಕೇಳಿಲ್ಲವೆ? ಅನೇಕರು ಬಹು

ಬ್ಯಾರಿಸ್ಟರ್ ಪರೀಕ್ಷೆಯನ್ನು ಕೊಟ್ಟು ಬರಲು ಮೂಸಾಹೆಬ ವನ್ನು ಮೈಸೂರು ಸರ್ಕಾರದಿಂದ ಪಡೆಯಲು ಕೇಳಿಕೊಳ್ಳುತ್ತಿರುವರೆಂದು ಈಗ ಸ್ವಾರ್ಥವಿಲ್ಲದೆ ದಿಂದಲೇ ಮೇಲೆ ಕಂಡ ವಿದ್ಯಾರ್ಥಿಗಳಕೂಡ ಹೋಗಬಯಲು ಯತ್ನಿಸುತ್ತಿದ್ದಾಗ ತಿಳಿಯುತ್ತೇವೆ. ಮಿ॥ ರಾಮಯ್ಯಂಗಾರರು ಹಿಡಿದ ಕಾರ್ಯವನ್ನು ಬಾಧಿಸದೆ ಬಿಡತಕ್ಕವರಲ್ಲವಾದುದರಿಂದ ತಮ್ಮ ದೃಢತ ಸಂಕಲ್ಪವನ್ನು ನೆರವೇರಿಸಿಕೊಂಡು ಅಲ್ಲಿಯ ಇತರ ಶತಾಪಿ ರೈತರ ಸ್ಥಿತಿಗತಿಯನ್ನು ಜನರಿಗೆ ವಾರ್ತೆಯ ಮೂಲಕ ತಿಳಿಸಿ, ಬಂದು ಇಲ್ಲಿ ತಮ್ಮ ರೈತ ಸಹೋದರರ ಸ್ಥಿತಿಯನ್ನು ಉತ್ತಮಸ್ಥಿತಿಗೆ ತರಲು ಸಹಾಯಕರಾಗಲೆಂದು ನಾವು ಹಾರೈಸುತ್ತೇವೆ.

ವರ್ತಮಾನ ಸಂಗ್ರಹವು.

ಇನ್ನುಮೇಲೆ ನೋಟುಗಳನ್ನು ಒಬ್ಬೊಬ್ಬರು ಕಾಗದದ ಮೇಲೆ ಅಂಗವಾದ ಅಕ್ಷರಗಳ ಮುದ್ರೆ ಹಾಕಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದಾರೆ.

೧ ವರ್ಷದಲ್ಲಿ ಹಿಂದೆ ಕೊಡುವ ಒಪ್ಪಂದದ ಮೇಲೆ ಯೂರೋಪಿನ ವರ್ತಕರು ಚೀನಾಕ್ಕೆ ೧೩ ಕೋಟಿ ರೂ ಗಳ ಸಾಲವನ್ನು ಕೊಡಲು ಸಮ್ಮತಿಸಿದ್ದಾರೆ.

ಲಂಡನ್ನಿನ ಡೇಲಿ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ತುರ್ಕಿಯವರ ಸೇನೆಯ ಮಧ್ಯದಲ್ಲಿದ್ದನು. ಎತ್ತಣಿಂದಲೋ ಇದಲಿಯವರ ಒಂದು ಗುಂಡು ಬಿದ್ದು ದಿಸಾರ್ಬಿ ಯುದ್ಧಕಾಲದಲ್ಲಿ ಮೃತನಾದನು.

ಮಹಾಬಲೇಶ್ವರದಲ್ಲಿ ಹಿಂದೂಗಳ ಕೈಗಾರಿಕೆಯ ಶಾಲೆಯೊಂದು ಸ್ಥಾಪಿಸಲ್ಪಟ್ಟಿತು. ಅದರ ಆರಂಭಸಮಯೋತ್ಸವವನ್ನು ಬೊಂಬಾಯಿ ಗೌರ್ನರು ಮಾಡುವಾಗ್ಗೆ ಹಿಂದೂಗಳಲ್ಲಿ ಸೇರಿರುವ ಪ್ರತಿಯೊಂದು ಜಾತಿಯವರನ್ನೂ ಭೇದಬುದ್ಧಿಯಿಲ್ಲದೆ ಇದಕ್ಕೆ ಸೇರಿಸಿಕೊಳ್ಳುವೆವೆಂದು ನುಡಿದರು.

೧೬ ವರ್ಷಕ್ಕೆ ಮೀರಿದ ಹೆಂಗುಸರನ್ನು ದೇವಾಲಯಗಳಲ್ಲಿ ಗೇಯಸಾಹಿಯರನ್ನಾಗಿ ನಿಯಮಿಸಕೂಡದೆಂದೂ ೧೬ ವರ್ಷದೊಳಗಿನ ಬಾಲಿಕೆಯರನ್ನು ಭೋಗಿನಿಯರ ವೃತ್ತಿಗೆ ಸೇರಿಸಲಾಗದೆಂದೂ ಒಂದು ವಿಧಿಯನ್ನು ನಿಯಮನಿರ್ಮಾಣ ಸಭೆಗೆ ತರಲು ಆಡಿದಾಬಾಯಿಯವರಿಗೆ ಅಪ್ಪಣೆಯಾಗಿದೆ.

ಉದಕಮಂಡಲದಲ್ಲಿ ಮೃಗಯಾ ವಿಹಾರಕ್ಕೆ ಹೋಗಿದ್ದ ಬರೋಡಾ ಮಹಾರಾಜರ ಪುತ್ರರು ಕುದುರೆಯ ಮೇಲಿಂದ ಬಿದ್ದು ಘೋರ ಪೆಟ್ಟನ್ನು ತಿಂದಿದ್ದರೆಂದು ಕಳೆದವಾರ ತಿಳಿಸಿದ್ದೆವಷ್ಟೆ. ಯುವರಾಜರು ವೈದ್ಯರ ಚಿಕಿತ್ಸೆಯಿಂದ ಗುಣವನ್ನು ಹೊಂದುತ್ತಿರುವರೆಂದು ತಿಳಿಸಲು ಹರ್ಷವಾಗುತ್ತದೆ.

ಅಲಿಘರಿನಲ್ಲಿರುವ ಮಹಮ್ಮದೀಯ ಕಲಾಶಾಲೆಯನ್ನೇ ವಿಶ್ವವಿದ್ಯಾಲಯವನ್ನಾಗಿ ಮಹಮ್ಮದೀಯರು ಮಾಡಿಕೊಳ್ಳಬಹುದೇ ಹೊರತು ಇತರ ಕಲಾಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳನ್ನು ಇವರು ಪರೀಕ್ಷಿಸಿ ಯೋಗ್ಯತಾಪತ್ರಿಕೆಗಳನ್ನು ಕೊಡಲಾಗದೆಂದು ಸ್ಟೇಟ್ ಸೆಕ್ರೆಟರಿಯವರು ನುಡಿದಿರುವರಂತೆ.

ದಿಲ್ಲಿಯು ಭರತಖಂಡದ ರಾಜಧಾನಿಯಾಗಿರುವುದರಿಂದ ಅದರ ಸಮೀಪದಲ್ಲಿರುವ ಕಾಶ್ಮೀರದಲ್ಲಿ ಯೂರೋಪ್ಯರು ಶಾಶ್ವತವಾದ ವಾಸವನ್ನೇರ್ಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಬಹುದೆಂದೂ, ಆಗ್ಗೆ ದಕ್ಷಿಣ ಆಫ್ರಿಕಾದಲ್ಲಿನ ಹಿಂದೂಗಳ ಸ್ಥಿತಿಯೇ ಕಾಶ್ಮೀರದ ಜನರಿಗೂ ಸಂಭವಿಸಬಹುದೆಂದೂ, ಮಾಡರ್ನ್ ರಿವ್ಯೂ ಪತ್ರಿಕೆಯು ಹೇಳುತ್ತದೆ.

ಹಂಗೇರಿಯಾದಲ್ಲಿ ಒಬ್ಬ ದೊಡ್ಡ ಮನುಷ್ಯನು ತನ್ನ ಮಕ್ಕಳ ಮದುವೆಯನ್ನು ಏಕಕಾಲದಲ್ಲಿ ನಡೆಸಿದನು. ಅದರ ಔತಣವು ೩ ರಾತ್ರಿ ನಡೆದುದರಲ್ಲಿ ೧೯೦ ಸೀಸೆಗಳ ಸಾರಾಯಿ, ೧೦೩ ಸೀಸೆಗಳ ರಮ್ಮು, ೭೫೦ ಪೌಂಡ್ ಎತ್ತಿನ ಮಾಂಸ, ೬೦೦ ಪೌಂಡ್ ಹಂದಿಯ ಮಾಂಸ, ೧೫೦ ಕೋಳಿಗಳು, ಬಾತುಗಳು ೫೦೦ ಮೊಟ್ಟೆಗಳು ಧ್ವಂಸವಾದುವಂತೆ.

ಆಸ್ಟ್ರೇಲಿಯಾದ ಒಬ್ಬ ಶ್ರೀಮಂತ ವಿಧವೆಯು ೧ ಕೋಟಿ ೫೦ ಲಕ್ಷ ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟು ಆ ವರುಷ್ಪತ್ತಿಯನ್ನು ಆಸ್ಟ್ರೇಲಿಯಾದಲ್ಲಿ ವಿಪನ್ನರಾದವರ ಸಹಾಯಾರ್ಥಕ್ಕಾಗಿಯೂ, ವಿದ್ಯಾಭಿವೃದ್ಧಿಗಾಗಿಯೂ, ಮತಪ್ರಚಾರಕ್ಕಾಗಿಯೂ ಉಪಯೋಗಿಸಲ್ಪಡತಕ್ಕದೆಂದು ಗೊತ್ತುಮಾಡಿರುತ್ತಾಳೆ.

ನಿಯಮನಿರ್ಮಾಣ ಸಭೆಯಲ್ಲಿ ದಾದಭಾಯಿ ನವರೋಜಿ ವಿದ್ಯಾಭ್ಯಾಸ ವಿಧಿಯನ್ನು ಮಿ॥ ಗೋಖಲೆಯವರಿಂದ ಸೂಚಿತವಾಗಿದ್ದುದನ್ನು ಗೌರ್ನರ್ ಜನರಲರವರು ಮುಂದಿನ ವರ್ಷಕ್ಕೆಂದು ಅಂಗೀಕರಿಸದೆ ಹೋದದ್ದಕ್ಕೆ ಭರತ ... ಹೊಟ್ಟೆಯುರಿದು ಈ ಹೊಸ ಹೆಣ್ಣುಗಳನ್ನು ಲಂಡನ್ನಿನ ನೇಷನ್ ಪತ್ರಿಕೆ ಲಂಡನ್ನಿನಲ್ಲಿ ಜಾಗ್ರತೆಯಾಗಿ ... ದ್ವಿ ಆಡಿಯಾಕ್ಕೆ ಪತ್ರವನ್ನು ...

ದ್ದುವನ್ನು ಅಸ್ವಕೋಶವೊಳಕ್ಕೆ ಸೇರಿಸಿಬಿಟ್ಟು, ಹೊಟ್ಟೆ ಹಸಿದಾಗ ಆ ಗೊಟ್ಟದ ತಾಯಿಯ ಮೂಲಕ ದ್ರವದ ಆಹಾರಗಳನ್ನು ಒಳಕ್ಕೆ ಸಾಗಿಸುವರು. ಹೀಗೆ ಆಹಾರವನ್ನು ತಿಂದುಕೊಂಡು ಕೆಲರು ೬ ವರ್ಷಗಳವರೆಗೂ ಬದುಕಿರುವರಂತೆ.

ಇಂಡ್ಯಾ ಸರ್ಕಾರದವರು ಕಲಕತ್ತಾದಲ್ಲಿರುವ ಸರ್ಕಾರಿ ಕಟ್ಟಡಗಳನ್ನು ಬಂಗಾಳಾ ಗೌರ್ನಮೆಂಟಿಗೆ ಈ ಕೆಳಗಿನ ಕ್ರಯಕ್ಕೆ ಮಾರುತ್ತಾರಂತೆ. ವಾರ್ಟ್ ಆಫೀಸಿನ ಕಟ್ಟಡಕ್ಕೆ ೨೧ ಲಕ್ಷ ರೂ, ಸೆಕ್ರೆಟರಿಯಟ್ಟಿಗೆ ೧೦ ಲಕ್ಷದ ೩ ಸಾವಿರ ರೂ.. ವ್ಯಾಪಾರದ ಆಫೀಸಿಗೆ ೧೬ ಲಕ್ಷದ ೪೩ ಸಾವಿರ ರೂ, ಎರಡನೆಯ ಆಫೀಸಿಗೆ ೯ ಲಕ್ಷದ ೪೩ ಸಾವಿರ ರೂ. ಫಾರೆಸ್ಟ್ ಆಫೀಸ್ ಕಟ್ಟಡವನ್ನೇ ಮುಂದೆ ಮ್ಯೂಸಿಯಂ ಆಫೀಸಿಗೆ ಉಪಯೋಗಿಸಿಕೊಳ್ಳುವರು.

ಟಿಟಾಗಿಕ್ಕಿಯಲ್ಲಿ ನ್ಯಾಯಾಧಿಕಾರಿಯಾದ ಮಿ॥ ವಿಲಿಸ್. ಕ್ರಿಸ್ಟಿಯನವರಿಗೆ ಈಗ ಒಬ್ಬ ಕುಮಾರಿಯಿರುವಳು. ಆಕೆಯು ಗ್ರಂಥಕರ್ತೃಯಾಗಿದ್ದರೂ ಒಂದು ನಾಟಕದ ಕಂಪನಿಯಲ್ಲಿ ನೇಪಥ್ಯದಾರಿಣಿಯಾಗಿ ಕೆಲಸಮಾಡುತ್ತಿರುವಳು. ಒಬ್ಬನೇ ಒಬ್ಬ ಪುತ್ರನು ರಿವ್ಯೂ ಆಫ್ ರಿವ್ಯೂಸ್ ಎಂಬ ಪತ್ರಿಕೆಗೆ ಉಪಸಂಪಾದಕನಾಗಿದ್ದುಕೊಂಡು, ತಂದೆಗೆ ಸಹಾಯಮಾಡುತ್ತಿದ್ದು, ತನ್ನ ೩೦ ನೆಯ ವಯಸ್ಸಿನಲ್ಲೇ ಪ್ರಾಣವನ್ನಿತ್ತು ತಂದೆಗೆ ಅಪಾರವಾದ ಶೋಕವನ್ನುಂಟುಮಾಡಿದನು.

ಹೈದರಾಬಾದಿನಲ್ಲಿ ವರ್ಷಕ್ಕೆ ಲಕ್ಷ ರೂ. ನ ಆದಾಯವುಳ್ಳ ಒಂದು ಜಹಗೀರುದಾರಿಗೆ ಸಂಬಂಧಿಸಿದ ಕಾರ್ಯದಲ್ಲಿ ೩ ಲಕ್ಷ ರೂ ಗಳ ಲಂಚವನ್ನು ಮಂತ್ರಿಗಳಿಗೆ ಕೊಟ್ಟು ತಮಗನುಕೂಲ ಮಾಡಿಕೊಳ್ಳಬೇಕೆಂದು ಗೌರ್ನಮೆಂಟಿನ ಒಬ್ಬ ಸೆಕ್ರೆಟರಿಯ ಮೂಲಕ ಆ ಜಹಗೀರುದಾರಿಯು ಕಡೆಯವರು ಪ್ರಯತ್ನಿಸಿದುದು ಮಂತ್ರಿಗಳ ಮುಖೇನ ನಿಜಾಮರಿಗೆ ತಿಳಿದುಬರಲು, ಅವರು ಆ ಸೆಕ್ರೆಟರಿಯನ್ನು ಆ ದಿವಸವೇ ಕೆಲಸದಿಂದ ತೆಗೆದುಬಿಟ್ಟರು. ಇದಕ್ಕೆ ಸಂಬಂಧಿಸಿದ್ದ ಇತರ ಜನರಿಗೂ ತಕ್ಕ ಶಿಕ್ಷೆಯನ್ನು ಮಾಡಿದರು.

ಕಲಕತ್ತಾದಲ್ಲಿ ಗಣೇಶಚಂದ್ರ ಕರ್ಮಾಕರ ಎಂಬ ಸಾಧು ಘೋಟ್ಟನು ಸ್ಮಶಾನದಲ್ಲಿ ಆಗತಾನೇ ಸುಡುತ್ತಿದ್ದ ಶವವನ್ನು ತಿನ್ನುತ್ತಿದ್ದುದರಿಂದ ಪೋಲೀಸರಿಂದ ಹಿಡಿಯಲ್ಪಟ್ಟನು. ವಿಚಾರಣೆಯ ಕಾಲದಲ್ಲಿ ತಾನು ಅಘೋರಪಂಥ ಎಂಬ ವರ್ಗಕ್ಕೆ ಸೇರಿದವನೆಂದೂ, ನರಮಾಂಸಭಕ್ಷಣೆಯು ತಮ್ಮ ಮತಕ್ಕೆ ಬಂದ ಪದ್ಧತಿಯೆಂದೂ, ಹೀಗೆಯೇ ಇದುವರೆಗೆ ಕೆಲ ಸಮಾಧಿಗಳನ್ನಗೆದು ಹೆಣಗಳನ್ನು ತಿಂದಿರುವೆನೆಂದೂ, ೧೦ ವರ್ಷಗಳಿಂದೀಚೆಗೆ ತಾನು ಈ ಕೆಲಸಕ್ಕೆ ಬಿದ್ದೆನೆಂದೂ ತಾನು ಕಲಕತ್ತಾ ನಿವಾಸಿಯೆಂಗೂ ವಾಙ್ಮೂಲವನ್ನು ಕೊಟ್ಟಿರುವನು.

ಕಳೆದ ತಾ॥ ೧೪ ಕ್ಕೆ ಕೊನೆಯಾದ ಒಂದು ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೮೫೩೩ ಜನರಿಗೆ ಪ್ಲೇಗು ತಗಲಿ ೩೭೨೫ ಜನರು ಸತ್ತರು. ಇವರಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ೧೪೯೯; ಮುಂಬಯಿ ಪಟ್ಟಣದಲ್ಲಿ ೩, ಬಂಗಾಳದಲ್ಲಿ ೫೬, ಬಿಹಾರದಲ್ಲಿ ೫೧೦; ಸಂಯುಕ್ತ ಪ್ರಾಂತಗಳಲ್ಲಿ ೭೬೯, ಪಂಜಾಬಿನಲ್ಲಿ ೧೩೯೦; ಬರ್ಮಾದಲ್ಲಿ ೧೦; ಮಧ್ಯಪ್ರಾಂತಗಳಲ್ಲಿ ೫; ಮೈಸೂರು ಸೀಮೆಯಲ್ಲಿ ೫; ಹೈದರಾಬಾದ್ ಸೀಮೆಯಲ್ಲಿ ೩; ಮಧ್ಯಹಿಂದುಸ್ಥಾನದಲ್ಲಿ ೫೪; ರಾಜಪುಟಾನದಲ್ಲಿ ೯೦ ಮತ್ತು ಕಾಶ್ಮೀರದಲ್ಲಿ ೨೫ ಈ ಪ್ರಕಾರವಾಗಿ ಮರಣಗಳಾಗಿರುತ್ತವೆ.

ಅಮೇರಿಕಾದಲ್ಲಿ ನೂರಾರು ಹಸುಗಳನ್ನು ಕಟ್ಟಿರುವ ಒಬ್ಬ ಗೌಳಿಗನು ಹಾಲನ್ನು ಕರೆಯುವಾಗ ಹಾರ್ಮೋನಿಯ ಮನ್ನಾಗಲಿ ಇನ್ನಾವ ವಾದ್ಯವನ್ನಾಗಲಿ ಬಾರಿಸುವ ಏರ್ಪಾಡನ್ನಿಟ್ಟಿರುವನು. ಈ ಗೀತವನ್ನು ಕೇಳುತ್ತಾ ಹಸುಗಳು ಆನಂದದಿಂದ ಮೊದಲಿಗಿಂತ ಮೂರನೆಯ ಒಂದುಭಾಗದಷ್ಟು ಹೆಚ್ಚಾಗಿ ಹಾಲನ್ನು ಕೊಡುವುವು. ಮತ್ತೊಂದು ಕಡೆ ಇನ್ನೊಬ್ಬನು ಬೇಸಗೆಯ ಹಸುಗಳ ಹಲ್ಲನ್ನು ತಿಕ್ಕಿ ಸ್ನಾನಮಾಡಿಸಿ, ಮೇಲೆ ಉಣ್ಣೆಯ ಬಟ್ಟೆಗಳನ್ನು ತೊಡಿಸಿ ಬಿಡುವನು. ಅವರಿಂದ ಅವುಗಳಿಗೆ ನೊಣ ಉಣ್ಣೆ ಮೊದಲಾದುವುಗಳ ಕಾಟವಿಲ್ಲದ ಕಾರಣ, ಅವು ಆರೋಗ್ಯವಾಗಿಯೂ ತುಂಬಾ ಹಾಲನ್ನು ಕೊಡುವುವಾಗಿಯೂ ಇರುತ್ತಿರುವುವು.

ಐರ್ಲೆಂಡಿಗೆ ಸ್ವರಾಜ್ಯಾಧಿಕಾರವನ್ನು ಕೊಡುವುದಕ್ಕೆ ಏರ್ಪಟ್ಟಿರುವ ಬಿಲ್ಲನ್ನು ಪಾರ್ಲಿಮೆಂಟ್ ಸಭಾಸದರ ಅನುಮೋದನೆಗೆ ತರಲ್ಪಡ್ಡಾಗಲಿಲ್ಲ. ಯಾಬನಾದರೊಂದು ನಾವೆಯು ಅನಾಹುತವು ಸಂಭವಿಸುತ್ತಿರುವುದು ಆಶ್ಚರ್ಯವೆಂದು ಕೆಲರಾಡುತ್ತಿದ್ದಾರೆ. ೧೯೧೪ ರಲ್ಲಿ ಈ ಬಿಲ್ಲು ಪಾರ್ಲಿಮೆಂಟ್ ಸಭೆಯ ಮುಂದಿಡಲ್ಪಟ್ಟಾಗ ಓರಿಸಾರ್ ಎಂಬ ನಾವೆಯು ಟೈಟಾನಿಕ್ ... ಮುಳುಗಿಹೋಯಿತು; ... ನಾವೆಯು ... ಯಿತು, ಮತ್ತೊಂದು ... ತೇಲುತ್ತಿರುವ ...

... ಯಲ್ಲಿ ... ದ ... ಸ್ವ ...

ಅಮೇರಿಕಾದಲ್ಲಿರುವ ವಿಶ್ವವಿದ್ಯಾಲಯದ ವಾರ್ಷಿಕೋತ್ಸವ ಸಭೆಗೆ ವಿದ್ಯಾರ್ಥಿಗಳೆಲ್ಲರೂ ಬ್ಲಾಕ್‌ಸ್ಟೋನ್ ಭೋಜನಶಾಲೆಯಲ್ಲಿ ಕುಳಿತು ಊಟಮಾಡುತ್ತಿದ್ದರು. ಆ ದೃಷ್ಟಾಂತದ ಸಮ್ಮೇಳನವರು ಅಲ್ಲಿಗೆ ೧೫೦ ಮೈಲಿಗಳ ದೂರದ ನ್ಯೂ ಹಾವೆ ಎಂಬ ನಗರದಲ್ಲಿರುವ ತಮ್ಮ ಮನೆಯಲ್ಲಿ ಕುಳಿತುಕೊಂಡು ಆ ವಿದ್ಯಾರ್ಥಿಗಳಿಗಾಗಿ ಒಂದು ಉಪನ್ಯಾಸವನ್ನು ಮಾಡಿದರು. ಅದು ಆ ಭೋಜನಶಾಲೆಯಲ್ಲಿದ್ದ ವಿದ್ಯಾರ್ಥಿಗಳಿಗೋಸುಗ ವಿದ್ಯುಚ್ಛಕ್ತಿಯ ಮೂಲಕ ಕೇಳಿಸುವಂತೆ ಮಾಡಲ್ಪಟ್ಟಿದ್ದಿತು. ಅದನ್ನು ಕೇಳುವಾಗ ಆನಂದದಿಂದ ಮಾಡುವ ಕರತಾಡನದ ಧ್ವನಿಗಳು ಆ ಅಧ್ಯಕ್ಷರು ಕುಳಿತಿದ್ದ ಮನೆಯಲ್ಲಿ ಕೇಳಿಸುವ ಹಾಗೆ ಬೇರೊಂದು ಸಾಧನವು ಏರ್ಪಡಿಸಲ್ಪಟ್ಟಿದ್ದಿತು.

ಅಮೇರಿಕಾದ ಒಂದು ಪಟ್ಟಣದಲ್ಲಿ ಒಬ್ಬ ವೈದ್ಯನು ದೂರದೇಶದ ಬಂಗಾ ಅನಾರೋಗ್ಯಶಾಲೆಗಳಲ್ಲಿರುವ ರೋಗಿಗಳಿಗಾಗಿ ಸತ್ತ ನಾರಿ ಮೇಣದ ಔಷಧಗಳನ್ನು ಪೊಟ್ಟಣ ಕಟ್ಟಿ ಗಾಳಿಪಟದ ಹಕ್ಕಿಗಳ ಮೂಲಕ ಸಾಗಿಸುವನು. ರೋಗಿಗಳು ತಮ್ಮ ದೇಹಸ್ಥಿತಿಯನ್ನು ಕುರಿತು ಬರೆದ ಕಾಗದಗಳನ್ನೂ ಅವೇ ವೈದ್ಯನಿಗೆ ತಂದುಕೊಡುತ್ತವೆ. ಪಾರಿವಾಳಗಳು ತಮಗೆ ೩ ರಷ್ಟು ತೂಕದ ವಸ್ತುಗಳನ್ನು ಹೊರಬಲ್ಲುವಂತೆ. ಆ ದೇಶದಲ್ಲಿ ಕೆಲ ಫೋಟೋಗ್ರಾಫರು ಪಾರಿವಾಳಗಳ ಕಾಲಿಗೆ ಸಣ್ಣ ಫೋಟೋಗ್ರಾಫ್ ಯಂತ್ರಗಳನ್ನು ಕಟ್ಟಿ ಆಕಾಶಕ್ಕೆ ಹಾರಿಸಿ, ಅವು ಹಾರುವಾಗ ಆ ಯಂತ್ರಗಳು ಗ್ರಹಿಸಿದ ಛಾಯಾಚಿತ್ರಗಳನ್ನೆಲ್ಲಾ ಸಂಗ್ರಹಿಸಿ ಮಾರಿ, ಧನವ ಗಳಿಸುತ್ತಿರುವರು. ಇವೆಲ್ಲಾ ಸಾಹಸವಂತರು ಹೊಂದುವ ಫಲಗಳಾಗಿವೆ.

ಹುಬ್ಬಳ್ಳಿ ಜಿಲ್ಲೆಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಸನ್ಯಾಸಿಯು ೧೦ ವರ್ಷದ ಅನಿಮೊಂಬ ಬ್ರಾಹ್ಮಣ ಬಾಲಕನನ್ನು ಶಿಷ್ಯನನ್ನಾಗಿ ಮಾಡಿಕೊಂಡು ಅವನಿಗೆ ಬೇಕಾದ ಬಂಗಾರದೊಡವೆಗಳನ್ನು ಕಳಿಸಿ, ತನ್ನೊಡನೆಯೇ ಮನೆಗೂ ಬಿಟ್ಟು ಬರುವಂತೆ ಹೇಳಿದನು. ಆದರೆ ತಂದೆಯಾದವರಿಗೂ ಆ ಹುಡುಗನು ಸನ್ಯಾಸಿಯಾಗಿ ಬರಲಾರನೆಂಬುದು ಸನ್ಯಾಸಿಗೆ ಗೊತ್ತಾಗಲು, ತಂದೆಯನ್ನು ಕೊಂದುಬಿಡುವೆನೆಂದು ಆ ಹುಡುಗನಿಗೆ ದುಬೋಧೆ ಮಾಡಿದನು. ಒಂದು ದಿನ ರಾತ್ರಿ ಹರಿಯು ಮಂಚದ ಮೇಲೆ ತಂದೆಯು ಜತೆಗೆ ಮಲಗಿದ್ದು ನಿದ್ರೆಯು ಹೊತ್ತಿನಲ್ಲಿ ಕತ್ತಿಯಿಂದ ತಂದೆಯ ಕೊರಳನ್ನು ಕೊಯ್ದನು. ತಂದೆಯು ಅರಚಿಕೊಳ್ಳಲು, ಸನ್ಯಾಸಿಯು ಓಡಿಬಂದು ಹೊಗೆ ತಂದೆಯನ್ನು ಕೊಂದುಬಿಟ್ಟು, ಗುರುಶಿಷ್ಯರಿಬ್ಬರೂ ಪಲಾಯನಗೊಂಡರು. ಈಗ ಆ ಘಾತುಕರಿಬ್ಬರೂ ಪೋಲೀಸರ ವಶದಲ್ಲಿದ್ದಾರೆ. ಬಾಲ್ಯದಲ್ಲಿ ದುಸ್ಸಂಗವು ಯಾವ ಅನರ್ಥವನ್ನು ತಾನೇ ಮಾಡುವುದಿಲ್ಲ?

ಗತಿಸಿದ ವಿಲಿಯಂ ಸ್ಟೆಡ್‌ರವರಿಗೆ ಒಂದು ಬಾರಿ ಕಾರಾಗೃಹ ವಾಸ ಪ್ರಾಪ್ತಿಯಾಗಿತ್ತೆಂದು ಹಿಂದೆ ಬರೆದಿದ್ದೆವಷ್ಟೆ. ಇವರು ಆ ಕಾರಾಗೃಹದಿಂದ ಮುಕ್ತರಾಗಿ ಬರುವಾಗ್ಗೆ ಅಲ್ಲಿನ ಅಧಿಕಾರಿಯು ತನ್ನ ಉಡುಪನ್ನು ಇವರಿಗೆ ಕೊಟ್ಟಿದ್ದನು. ಇವರು ಅದನ್ನು ತಮ್ಮ ಅವಸಾನ ಕಾಲದವರೆಗೂ ಅಮೂಲ್ಯವಸ್ತುವನ್ನಾಗಿ ಕಾಪಾಡಿಟ್ಟುಕೊಂಡಿದ್ದರು. ತಮ್ಮ ಕಾರಾಗೃಹ ಪ್ರವೇಶದಿನದ ವರ್ಧಂತಿಯನ್ನು ಪ್ರತಿವರ್ಷವೂ ಸ್ಟೆಡ್ ಮಹಾಶಯರು ನಡೆಯಿಸುತ್ತ, ಆ ದಿನ ಆ ಉಡುಪುಗಳನ್ನು ಧರಿಸಿಕೊಂಡು ಸ್ನೇಹಿತರನ್ನು ಬರಮಾಡಿ, ಅವರಿಗೆ ಔತಣ ಮೊದಲಾದುವುಗಳನ್ನು ಆ ದಿನ ಮಾಡಿಸುತ್ತಿದ್ದರಂತೆ. ಸರ್ ಚಾರ್ಲೆಸ್ ಡಿಲ್ ಎಂಬುವವನಿಗೆ ಇನ್ನೊಬ್ಬನ ಹೆಂಡತಿಯೊಡನೆ ಸಂಬಂಧವಿದೆಯೆಂಬುದನ್ನು ಈ ಸ್ಟೆಡ್ ಮಹಾಶಯರು ತಮ್ಮ ಪತ್ರಿಕೆಯಲ್ಲಿ ಬರೆದು, ಮಂತ್ರಿ ಸಮಾನ ಪ್ರಜ್ಞೆಯುಳ್ಳ ಆ ಡಿಲ್ಲನನ್ನು ರಾಜಕೀಯಕಾರ್ಯ ಪ್ರವರ್ತನದಿಂದಲೇ ದೂರಸ್ಥನಾಗುವಂತೆ ಮಾಡಿಬಿಟ್ಟರು. ಐರಿಷ್ ಜನ ಪ್ರಮುಖನಾದ ಪಾರ್ನೆಲ್ ಎಂಬುವನಿಗೂ ಇದೇ ಗತಿಯನ್ನುಂಟುಮಾಡಿದರು. ಆ ಕಾಲದಲ್ಲಿ ದೊಡ್ಡದೊಡ್ಡ ಮನುಷ್ಯರೂ ವ್ಯಭಿಚಾರ ದೂಷಿತರಾಗಿದ್ದರು. ಅಂಥವರ ಗುಟ್ಟನ್ನು ಬಯಲಿಗೆ ತಾರೆ ಅವರು ತಲೆಯೆತ್ತದಂತೆ ಮಾಡುವುದರಲ್ಲಿ ಈ ಸ್ಟೆಡ್‌ರವರು ಜಟಮಾರಿಗಳಾಗಿದ್ದರು. ಇದಕ್ಕಾಗಿ ತಮಗೆ ಅನೇಕರು ವಿರೋಧಿಗಳಾದರೂ ಅದಕ್ಕೆ ಹೆದರದೆ ತಮ್ಮ ನ್ಯಾಯವಾದ ಕೃತ್ಯವನ್ನು ದಿಟ್ಟತನದಿಂದ ಮಾಡುತ್ತಿದ್ದರು. ಈ ಸ್ಟೆಡ್‌ರವರು ಯಾವಾಗಲೂ ಸಿಂದು ದಿಟ್ಟ ಸಹಾಯವನ್ನು ಕೇಳಿದವರಲ್ಲವಂತೆ.

ಆಂಗ್ಲ ಯುದ್ಧ ನಾವೆಗಳಲ್ಲಿ ಕೆಲವನ್ನು ಮೆಡಿಟೆರೇನಿಯ ... ನ ೧೯೦೯ ಮೇ ತಾಂತ್ರಿಕ ಜಾರ್ಜ್ ... ಪರೀಕ್ಷಿಸ ... ಕ ... ಅವನ ... ಶ್ರೀ ... ವಾ ... ... ಕ್ಕೊಪ್ಪದರು. ... ಮಂತ್ರಿಗಳಾದ ... ... ಅ ...

ಳಿಗಾಗಿ ವಿನಿಯೋಗಿಸಿಕೊಳ್ಳುವ ಕಾಲವು ಎ ದಿಗೆ ಬರುವುದೋ ಎಂಬು ನನ್ನ ಮನಸ್ಸಿನಲ್ಲಿ ಯೋಚಿಸುತ್ತಿದ್ದೆ" ನೆಂದು ನುಡಿದರು. ಈ ನಿರೀಕ್ಷಣೆಯನ್ನು ಜಾರ್ಜ್ ಪ್ರಭುಗಳು ಜರುಪಿರುವರೆಂಬ ನಂಬಿಗೆ ನೀರಿನೊಳಗೇ ಹೋಗದೆ ಒಂದು ತೆರದ ದೋಣಿಯಲ್ಲಿ ಕುಳಿತು ಎ ವ್ಯಕ್ತಿಗಳವರೆಗೆ ಪ್ರಯಾಣಮಾಡಿ ಬಂದರು

ಪತ್ರ ವ್ಯವಹಾರವು.

ಆಲೂರ ತಾಲ್ಲೂಕು ಹಾಸನಗಲ್ಲ

ಅನಂತರ ಸಭಾಧ್ಯಕ್ಷರು ಪಿ ವಿ ಕೃಷ್ಣರಾಯರವರು ಈ ಸಭೆಗೆ ಬಂದಿರುವ ನಿಮ್ಮೆಲ್ಲರಿಗೂ ಶ್ರೀ ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ವಿಷಯದಲ್ಲಿ ತೋರಿಸುವ ಭಕ್ತಿ ವಿಶ್ವಾಸಗಳಿಗಾಗಿ ತುಂಬ ಆನಂದವಾಗುತ್ತದೆ. ಅಲ್ಲದೆ ನೀವುಗಳೆಲ್ಲರೂ ವಿದ್ಯಾವಿಷಯದಲ್ಲಿ ಬಹಳ ಆಸಕ್ತರಾಗಿ ಸಹಾಯ ಅಭಿವೃದ್ಧಿಗೆ ತುಂಬಾ ಪ್ರೋತ್ಸಾಹವನ್ನುಂಟುಮಾಡುತ್ತಿದ್ದೀರಿ. ಈ ವಿಷಯದಲ್ಲಿಯೂ, ಮತ್ತು ಎಲ್ಲರಿಗೂ ಸಹಾಯ ಮಾಡಿದ ಇತರ ವಿಷಯದಲ್ಲಿಯೂ ನಿಮ್ಮ ವಿಷಯದಲ್ಲಿ ನಾನು ತುಂಬಾ ಕೃತಜ್ಞನಾಗಿದ್ದೇನೆ ಎಂದು ಅಪ್ಪಣೆಕೊಡಿಸಿದರು.

ಈ ಪ್ರಕಾರವಾಗಿ ಕೆಲಸ ನಡೆದ ಮೇಲೆ ಸಭಾಸದರಿಗೆ ಯಥೋಚಿತವಾದ ಹರ್ಷಕಾಗುವಂತೆ ವೀಳೆಯವು ಕೊಡಲ್ಪಟ್ಟಿತು. ಅನಂತರ ಗಂಧ ಪುಷ್ಪ ತಾಂಬೂಲ ಸಕ್ಕರೆ ಮೊದಲಾದುವು ಎಲ್ಲರಿಗೂ ಹಂಚಲ್ಪಟ್ಟಿತು. ಬಾಲಕ ಬಾಲಿಕೆಯರಿಗೆ ಸಕ್ಕರೆ ಬಾಳೆಹಣ್ಣು ಹಂಚಿದ್ದಲ್ಲದೆ ಮರುದಿನ ಎಲ್ಲರಿಗೂ ಊಟವಾದ ಅವರಿಗೆ ಅಡಿಗೆಯ ಅಡಿಗೆಯನ್ನು ದೊಡ್ಡದಾಗಿ ಬಡಿಸಿ ದಯಾರೂಪವಾದ ಬಹುಮಾನವು ಸಭಾಧ್ಯಕ್ಷರ ಕೈಯಿಂದ ಕೊಡಲ್ಪಟ್ಟಿತು. ಅನಂತರ ಸರ್ವರೂ ಸಂತೋಷವನ್ನು ಸೂಚಿಸುವ ಕೋಲಾಹಲ ಧ್ವನಿಯಿಂದ ಸಭೆಯನ್ನು ಮುಗಿಸಿದರು.

ಪ್ರತ್ಯಕ್ಷದರ್ಶಿ

ಉತ್ಸವ ಪ್ರೋತ್ಸಾಹ—ಮುದ್ದಿಕೆರೆ

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನದ ಗುರು ಪಟ್ಟಾಧ್ಯಕ್ಷ ಚೆನ್ನವೀರರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಸವಾರಿಯು ಶೋಭಕೃತ್ಸಂವತ್ಸರದ ತಾ ೧–೨–೦೩ ರಲ್ಲಿ ಮುದ್ದಿಕೆರೆ ಮುಕ್ಕಾಂಪಟ್ಟಣದ ವೀರಶೈವ ಮಂಡಲಿಯವರ ಸ್ಥಳಕ್ಕೆ ಬಿಜಯಮಾಡಿ ಎಲ್ಲಾ ಪಂಗಡಗಳವರಲ್ಲಿ ಗುರುಭಕ್ತಿಯನ್ನು ಶಾಸ್ತ್ರೋಕ್ತ ಆಚಾರ ವಿಚಾರ ಬೋಧನೆಗಳನ್ನು ನಡೆಸಿ, ಸತ್ಪುರುಷರುಗಳ ಭಕ್ತವರ್ಗದವರ ಪದ್ಧತಿ ಪ್ರಕಾರ ಆಚಾರ ಪದ್ಧತಿಗಳಿಂದ ಉಪಚಾರ ಸೇವಾಸತ್ಕಾರಗಳನ್ನು ಸ್ವೀಕರಿಸಿ, ಶಿವಯೋಗಾನಂದ ವಿಷಯದಲ್ಲಿರುವಾಗ್ಗೆ, ಈ ಗ್ರಾಮದ ವೀರಶೈವ ಮಂಡಲಿಯವರೂ ಕಾಲುಮುತ್ತಿದವರೂ ಸೇರಿ ಮಹಾಸನ್ನಿಧಿಯವರು ತಮ್ಮ ಗ್ರಾಮಕ್ಕೆ ವಿಜಯ ಮಾಡಿಸಿದ ಉತ್ಸವ ಸಂದರ್ಭವಾಗಿ ಉತ್ಸವೋತ್ಸಾಹವನ್ನು ನಡೆಸಬೇಕೆಂಬ ಕುತೂಹಲದಿಂದ ತಾ ೧೫–೩–೦೩ ರಲ್ಲಿ ನಡೆಯಬೇಕೆಂದು ನಿಶ್ಚಯಿಸಿ, ಸಮೀಪದ ಗ್ರಾಮಾಂತರಗಳಿಗೆಲ್ಲಾ ಪ್ರಕಟಿಸಿದರು. ಅದೇ ಪ್ರಕಾರ ಗ್ರಾಮಾಂತರಗಳಿಂದ ನೋಡತಕ್ಕವರು ತಂಡ ತಂಡವಾಗಿ ಬಂದು ಸೇರಿದರು. ಪೇಟೆಗಳು ಅಲ್ಲಲ್ಲಿ ಮಂಟಪ ತೋರಣ ಚಪ್ಪರಗಳಿಂದಲಂಕರಿಸಲ್ಪಟ್ಟವು. ಉತ್ಸವಸಮಾರಂಭ ಸನ್ನಾಹ ಸಿದ್ಧವಾಯಿತು. ಸಾಯಂಕಾಲ ೬ ಗಂಟೆಯ ಸಮಯಕ್ಕೆ ಅಂದಣದಲ್ಲಿ ಶ್ರೀ ಸ್ವಾಮಿಯವರು ವಿಜಯಮಾಡಿದ್ದು, ಸಕಲ ಬಿರುದಾವಳಿಗಳೊಡನೆ ಮೆರವಣಿಗೆಯು ಹೊರಟಿತು. ಸುಮಾರು ೧೫ ಸಾವಿರದವರೆಗೂ ಜನಸಂದಣಿಯು ಸೇರಿತ್ತು. ಬಾಣಬಿರುಸು ಮತ್ತು ಬಾಜಾಗಳಲ್ಲಿಯೂ ಸಹ ಕ್ಷೇತ್ರ ಭಕ್ತರು ಉದ್ಘೋಷಿಸುತ್ತಿದ್ದರು. ನಗಾರಿ ಭೇರಿ ದುಂದುಭಿ ಮೊದಲಾದ ವಾದ್ಯಗಳ ರವಂಗಳು ಮೊಳಗುತ್ತಿದ್ದವು. ಅಲ್ಲಲ್ಲಿ ಚಿತ್ರವಿಚಿತ್ರವಾದ ಮದ್ದು ಬಿರುಸು ಬಾಣಗಳ ಚಾರಿಯು ನೋಡತಕ್ಕವರಿಗೆ ಅತ್ಯಂತ ಉತ್ಸಾಹವನ್ನುಂಟುಮಾಡುತ್ತಿತ್ತು. ಬೀದಿಗಳಲ್ಲಿ ಜನಸ್ತೋಮವು ಕಾಲುದಾರಿಯಾಗಿ ಕಿಕ್ಕಿರಿದು ನಿಂತಿತ್ತು. ಎಲ್ಲಾ ಕಡೆಯೂ ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿಗಳಿಗೆ ದೀಪಾಲಂಕಾರ ಮಾಡಿದ್ದು ನಾನಾ ರೀತಿಯ ಪುಷ್ಪಗಳಿಂದ ಪುರಪ್ರದೇಶ ಅಲಂಕಾರದಿಂದ

ಹಾದಿಹೋಕರಿಂದಲೂ ಶತ್ಕವಿ
ಯಲ್ಲಿ ಗಲಾಟೆ ಎತ್ತಿದೆ ನಡೆದು.
ಬಗ್ಗಿ ಫೊಟೋ ಸಬ್ ಇನ್ಸ್
ಇಂತಿಯೊಡನೆ ಬಂದು ಚಿಕ್ಕಪ್ಪ

ವಂಶಜರಾದ ಪಾಳಿ ಸರಸ್ವತಿಯ ಸನ್ಮಾನದಿಂದೊಡಗೂಡಿ ದಂಪತಿ ರಾಮಚಂದ್ರರಾಜು ಇವರು ಭಕ್ತಿ ವಿಶ್ವಾಸಪೂರ್ವಕವಾಗಿ ಮುಂದಾಳಾಗಿ ನಿಂತು ಮಾರ್ಗದರ್ಶಕರಾಗಿದ್ದು ಸಂತೋಷಪಡುವದಲ್ಲದೆ ಶೆಟ್ಟಿ ಬಸಪ್ಪನವರು, ವೀರಭದ್ರಯ್ಯನವರು, ದಿವಾನ್ ಬಸಪ್ಪನವರು, ಈ ಗ್ರಾಮದ ಪ್ರಸಿದ್ಧ ಗೌಡರಾದ ಮಲ್ಲಶೆಟ್ಟಿಯವರು, ಬಿ ರಾಚಪ್ಪನವರು, ಕಾಲುಮುತ್ತಿದ ಮಲ್ಲಪ್ಪನವರು ಮುಂತಾದವರು ಮೆರವಣಿಗೆಯಲ್ಲಿ ಜೊತೆಗಾರರಾಗಿದ್ದು ಗ್ರಾಮಾಂತರದವರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರು. ಈ ಮೇರೆ ಕೋಟೆ ಪೇಟೆಗಳಲ್ಲಿ ಬಹು ವಿಜೃಂಭಣೆಯಿಂದ ರಾತ್ರಿ ೧೧ ಗಂಟೆಯವರೆಗೂ ಉತ್ಸವ ನಡೆದು ಪುನಃ ನಿರಂಜನ ಮಠಕ್ಕೆ ಸವಾರಿ ಬಿಜಯಮಾಡಲು ಮಂಗಳಾರತಿ ಆದ ಮೇಲೆ ಶಾನುಭೋಗ ಎ ಬಿ ರುದ್ರಯ್ಯನವರು ಆ ದಿನ ನಡೆದ ಗ್ರಾಮ ಸಂಬಂಧವಾದ ವಿಷಯದಲ್ಲಿ ಪಟ್ಟದವರುಗಳು ಕೊಟ್ಟ ಸಹಾಯವನ್ನು ಕುರಿತು ಶ್ರೀ ಸನ್ನಿಧಿಗೆ ಅರಿಕೆ ಮಾಡಿ ಆಶೀರ್ವಾದವನ್ನು ಪಡೆದು ಓದಿದ ನಂತರ ಸಭಿಕರಿಗೆ ಪುಷ್ಪಗಳನ್ನು ಕೊಟ್ಟು ಆಶೀರ್ವಾದವನ್ನು ಪಡೆದು ಹೇಳಿದ ನಂತರ ದೈವಸನ್ನಿಧಿಯಲ್ಲಿ ವೃದ್ಧಾಪ್ಯದ ಭೋಜನ ಸಂತರ್ಪಣೆ ನಡೆಸಿದರು.

ಗ್ರಾಮಸ್ಥ

ನೋಟೀಸು

3

ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ೫೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶಿಗರಾಗಿಯೂ, ವೀರಶೈವರಾಗಿಯೂ ಇಂಗ್ಲೀಷ್ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಮತ್ತು ಬೌದ್ಧ ವಿದ್ಯಾಭ್ಯಾಸವನ್ನು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖ ವೀರಶೈವರ ದಸ್ತಾವೇಜು ಅಥವಾ ತಾವು ಓದುವ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರ ದಸ್ತಾವೇಜುಗಳ ಸರ್ಟಿಫಿಕೇಟನ್ನು ತರಬೇಕು. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಚ್ ಕೆ ವೀರಬಸವೈಯ್ಯ ಬಿ ಎ ಬಿ ಎಲ್
ಆನರರಿ ಸೆಕ್ರೆಟರಿ
ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಧರ್ಮಛತ್ರ,
ಬೆಂಗಳೂರು ಸಿಟಿ

---

2 ಕಾರೋನೇಷನ್ ಸಾಬೂನು

“ಆರೋಗ್ಯವಿದ್ದರೆ ಲೋಕವು ಸಿರಿ”

ಈ ಸಾಬೂನನ್ನು ರೋಗವಿರುವ ಸ್ಥಳದಲ್ಲಿ ಹಚ್ಚಿದರೆ ಇಜಿಮಿ ಮುಂತಾದ ಗುಳ್ಳೆಗಳೊಳಗಾಗಿ ರೋಗವು ಮಾಯವಾಗುವುದು. ಉರಿ, ಸೆಕೆ ಮುಂತಾದ ಬಾಧೆಗಳಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಕ್ರಯ 1—0—0
8 ಸಾಬೂನುಗಳುಳ್ಳ 3 ಪೆಟ್ಟಿಗೆ ಕ್ರಯ 1—1—0 ಅಂಚೆ ಹಾಸಲು 0—4—0
ವ್ಯಾಪಾರಿಗಳಿಗೆ ಒಳ್ಳೇ ಕಮೀಷನ್ ದೊರೆಯುವುದು.

ಬಿ ಸಿ ಷಾ ಅಂಡ್ ಕೋ,
177 ಬೋಸಾಬಜಾರ್ ಸ್ಟ್ರೀಟ್, ಮದ್ರಾಸು

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಎಂದರ್ಥದಿಂದ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ದೊರೆ ವಹಿಸಲ್ಪಡುವ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೬—೦
೨ ರಿಂದ ೬ ಪ್ರತಿಗೆ ೦—...

ಮುಂದೆ ಪ್ರತಿನಾಲ್ಕು ಪತ್ರಿಕೆಗಳ
ಪ್ರಕಟಣೆಯ ದರ
ಈ ಕಾಲವನ್ನು ಕಂಪನಿಯ ಕಛೇರಿ
ದಯವಿಟ್ಟು ಪ್ರಕಟಿಸುತ್ತೇವೆ

ತ್ತಿಯಿಂದ ಪತ್ರಿಕೆ ೧ ಕ್ಕೆ ೧ ಆಣೆ ಕಾಲಕಾಲವಿದ್ದಂತೆ ಲೆಕ್ಕಾಚಾರ ಪ್ರಕಟನೆಗಳನ್ನು ಕವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಬಾಕಿ ಹರಿಸಿ ಪ್ರಕಟಿಸಬೇಕಾದರೆ ಗುಗುಂಪಾಗಿ ದರವು ಹೆಚ್ಚು.

ವೀರಶೈವಾಶ್ರಮ ಬೆಂಗಳೂರು.

2

ಬೆಂಗಳೂರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಜಹಗೀರುದಾರರು, ಅಧಿಕಾರಿಗಳು ಮೊದಲಾದವರುಗಳಿಗೆ ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲವು ಇಲ್ಲದೆ ಬಹು ತೊಂದರೆಯಾಗುತ್ತಿರುವುದರಿಂದ ಬೆಂಗಳೂರಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಲ್ಪಟ್ಟಿರುವ ಈ ಬೆಂಗಳೂರಿನಲ್ಲಿ ವಿವೇಕಿಗಳಾದ ಕೆಲವು ಮಹನೀಯರು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿವಾದಸ್ಥರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ಬರಲು ಸವಿಶೇಷ ಅನುಕೂಲವಾಗಿರುವ ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪದಲ್ಲಿರುವ ಕಬ್ಬನ್‌ಪೇಟೆಯ ಜೋಡಿ ಬಸವನಗುಡಿ ಬೀದಿಯಲ್ಲಿ ವಿಶಾಲವಾದ ಮನೆಯನ್ನು ಬಾಡಿಗೆಗೆ ಗೊತ್ತು ಮಾಡಿ ಏರ್ಪಡಿಸಿದೆ. ಈ ಕಟ್ಟಡದಲ್ಲಿ ಕೋಣೆಗಳು, ಸ್ನಾನದ ಮನೆ, ಅಡಿಗೆಮನೆ ಮುಂತಾದವುಗಳೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುವಲ್ಲದೆ, ಈ ಆಶ್ರಮದ ಆರೋಗ್ಯ ಸಂಬಂಧವಾದ ನಿಯಮಗಳನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕ ಏರ್ಪಾಟನ್ನಿಟ್ಟಿದೆ. ಮತ್ತು ಊಟದ ಖರ್ಚನ್ನು ಕಡಿಮೆಮಾಡಿ ಸುಲಭವಾಗಿದೆ. ಇದ್ದಲ್ಲದೆ ಏರ್ಪಾಟನ್ನು ತಿಳಿಯ ಅಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಿಂದ ಪ್ರತ್ಯಕ್ಷವಾಗಾಗಲಿ ಅಥವಾ ಕಾಗದ ಮೂಲಕವಾಗಲಿ ತಿಳಿಯಬಹುದು.

ಎಸ್ ಪಟ್ಟಣಶೆಟ್ಟಿ.
ಗಣಪತಿ ... ದೊಡ್ಡಪೇಟೆ ಬೆಂಗಳೂರು

ಕಾಶೀವಿಶ್ವೇಶ್ವರ ಪ್ರಸನ್ನ

ಅಗ್ಗವಾದ ಬಹುಮಾನಗಳು

ನಮ್ಮಲ್ಲಿ ಶ್ರೀ ಕ್ಷೇತ್ರ ಕಾಶಿಯಲ್ಲಿ ತಯಾರಾಗುವ ಬನಾರಸ್ ಜರಿ ಸೀರೆ, ಸೀಟಿ, ಶಾಲು, ಶೌಲು, ಜಮಖಾನಗಳು, ಪೀತಾಂಬರ ಮಗ್ಗದ ವಸ್ತ್ರಗಳು, ಬನಾರಸ್ ಪೇಟಗಳು, ರುಮಾಲುಗಳು, (ಇವುಗಳಲ್ಲಿ ೩ ಮಾದರಿಗಳು) ಮಾರಿಸಿದ ಪದಗಳೂ ಉತ್ತಮವಾಗಿ ಕಾಶಿಕ್ಷೇತ್ರವಾಸಿಗಳ ಪ್ರತಿಮಾ ಭೂಷಣ ಸಾಮಗ್ರಿಗಳು, ಪಚ್ಚೆ ಸ್ಫಟಿಕ ಹಾಗೂ ಸ್ಫಟಿಕ ಸರ, ಗಂಗಾಜಲ, ಚಾಕಲೇಟು ಮೊದಲು ಗಂಗಾಜಲದಿಂದ ಕಲ್ಲು ಇಲಾಖೆ ಅಷ್ಟು ಬಗೆಗಳು, ವಿಧವಿಧವಾದ ಪದಗಳು ಪುಸ್ತಕಗಳು ಸಾಹಿತ್ಯಗಳನ್ನು ಬನಾರಸ್ನಲ್ಲಿ ಎಲ್ಲರಿಗೂ ಸಹಾಯವಾಗುವ ಯೋಗ್ಯವಾದ ಕ್ರಯಕ್ಕೆ ಉತ್ತಮವಾಗಿ ಮಾಲುಗಳನ್ನು ತಯಾರಿಸಿ ದೇಶ ವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಬಹುಮಾನಗಳ ಕ್ರಯ ವಿವರ ತಿಳಿಯಬೇಕಾದರೆ ಹಾಫ್ ಪೋಸ್ಟೇಜ್ ಸ್ಟಾಂಪ್ ಅಥವಾ ಕಾರ್ಡಿನ ಮೂಲಕ ಕೇಳಬೇಕು. ವಿಳಾಸ: ಬನಾರಸ್ ... ಕಾಶೀವಿಶ್ವೇಶ್ವರ ... ನಮ್ಮ ಕಂಪನಿಯ ...
... ಪೂರ್ತಿ ...
... ಬನಾರಸ್ ...

ಸ್ವದೇಶಿ ! (ರತ್ನವೀಣಾಪಟಾಂಬೆ) ಸ್ವದೇಶಿ !

48 ಗುಣವಾಗದಿದ್ದರೆ ಹಣವಾಪಸ್.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭದಾತ ಗುಪ್ತಪ್ರವೇಶದ ವೇಳೆ ಹುಟ್ಟಿರುವ ಎಲ್ಲಾ ಖಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮೊದಲಾದವು ಅತಿ ತ್ವರಿತ್ವಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ತಿನ್ನುತ್ತ ೧೦ ಗುಳಿಗೆಗಳಿಗೆ ೧ ರೂ. ಒಟ್ಟಿಗೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೩ ರೂ. ಗಳಿಗೆ ಕೊಡುವೆವು ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಒಕೆಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ;
ಪೋಸ್ಟ್ ಜನವಾಡಿ,
ಜಿಲ್ಲೆ ಉತ್ತರಕನಡಾ.

37 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು)

ಅಂಜೀರಾರ್ಕಮಧು.— ಇದರ ಸೇವನದಿಂದ ವೈದ್ಯರೂ ಗನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಗರ್ಭಕೋಶವೂ ಪೆಟ್ಟಾಗಿ ಸಂತತಿ ಧಾರಣೆಯೋಗ್ಯವಾದ ಧಾತುವಾಗುತ್ತದೆ. ಸಕಲವ್ಯಾಧಿಯಿಂದ ಅಥವಾ ಯೌವನಮದರಿಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ; ೧ ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೦—೦ ರೂ. ೩. ಬಾ, ೩—೧೪—೦ ರೂ. ಒಮ್ಮೆಗೆ ೧ ಡಜನ್ನು ಬಾಟ್ಲಿ ತರಿಸುವವರಿಗೆ ೧೪ ರೂ. ಮೇಲೆ ೩ ಬಾಟ್ಲಿ ಇನಾಮು ಟ ಖ ಬೇರೆ.

ವಜ್ರಾಂಗಚೂರ್ಣವು.— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದಾಗುತ್ತದೆ ಹಸಿವೆಯು ಜಾಸ್ತಿಯಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಕ್ರಯ ೧ ಡಬ್ಬಿಗೆ ೧೪ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ

ಮಲಮು.— ಇದರಿಂದ ಹಳೇ ಗಜಕರ್ಣ, ಇಸುಬು, ಸಿಬ್ಬು, ದದ್ದು ಖಾತ್ರಿಯಿಂದ ನೆಟ್ಟಗಾಗುವದು ೧ ಡಬ್ಬಿಗೆ ೪ ಆಣೆ. ೨ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಶಕ್ತಿಯೂ ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಜಾಸ್ತಿಯಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮ್ಮು ರೋಗಗಳು ಬರುವದಿಲ್ಲ. ೧ ಬಾ. ೮ ಆಣೆ. ಟ.ಖ. ಬೇ.

ಪ್ರೊ “ಅಂಜೀರಾರ್ಕಮಧು ಕಂಪನಿ”

ದಾಗವಾಗ ಪೇಟ, ಮಿರಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ

96 ಮೈಸೂರು.

ಗೋರೋಚನ ಮಾತ್ರೆ.— ೧—೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦—೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೮—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯೂ ಟಾಗುವುದು. ೧೦ ಮಾತ್ರೆ ಸೀಸೆ ೦—೪—೧, ೨೪ ಮಾತ್ರೆ ಸೀಸೆ ೦—೪—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೦ ಮಾತ್ರೆ ಸೀಸೆ ೧—೦—೦.

ಬಾಲರಂಜಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೫೦ ಸಲಕ್ಕೆ ಆಗುವ ಔಷಧ ಡಬ್ಬಿ ೦—೪—೦ ತೊಲೆ ೧ ಕ್ಕೆ ೦—೪—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭಪಿಟ್ಟವೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಸೆ ೦—೪—೦

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೪—೦

ಶ್ರೀಖಂಡಲೇಹ್ಯ.— ಗೊನಹರ್ಯಾಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೩—೦—೦ ೧೦ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧—೨ ಮಾತ್ರೆಗಳನ್ನು ಸೇವಿಸಿದರೆ ೧ ಅಥವ ೨ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೪೦ ಮಾತ್ರೆ ಸೀಸೆ ೦—೬—೦

ಮಲಶೋಧನ ವಟಿಕಾ. ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ ೩೦ ಮಾತ್ರೆ ಸೀಸೆ ೦—೪—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೧—೦—೦

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೪—೦

ಅಜೀರ್ಣಹರಮಾತ್ರೆ.— ೪೦ ಮಾತ್ರೆ ಸೀಸೆ ೦—೪—೦

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಸಹ ಲಭಿಸುವುವು. ದೇಶಾಂತರದವರು ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಡುವವರು ಮೇಲಿನ ವಿಳಾಸಕ್ಕೆ ಬರೆಯಿರಿ

ಲಿಂಗರಾಜಪುರಾಣವಿಜಯಂ

18

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಲಿಂಗರಾಜಪುರಾಣದ ಕಥೆಗಳು ಬಸವಣ್ಣನವರ ಪುರಾಣಗಳಿಂದ ಸೇರಿಯುವದು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ವಿಸ್ತಾರವಾಗಿಯೂ ಸವಿವರವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವದು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೆಂಬುದೆಲ್ಲವೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಭಕ್ತಿಪೂರ್ವಕವಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟವು ಬೋಧೆಯಾಗುವುದು ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೪ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ ಹಳೆಂಗ ಹಾಳ, ಜೀವಿತಿಗೆವೀದಿ ಮೈಸೂರು

ಮಹಾ ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

8



ಲೋಕಾಪವಾದದ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹರಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆನೋವು ಸಂದುಗಳ ನೋವು ಮೈ ಕಾಲು ಊದುತ (ಬಾವು), ಮೈನಡುಕ, ಶೀತವಾತಗಳ ದೋಷ, ಅಜೀರ್ಣ ಬೇನೆ ಪಿತ್ಥ, ಕಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಜಾಜಿಕಾಯಿ ರಸವು ಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯೌವನಾವಸ್ಥೆಯನ್ನೂ ದಾಟಿಸಿಕೊಡುವದೆ, ನೀರುಗಳ ಹವಾ ಬದಲಾವಣೆಯನ್ನು ಸಹಿಸಿ ಮೆದು, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ನೋವು, ಮಕ್ಕಳ ಎಕ್ಕ, ಜ್ವರ, ಸನ್ನು ಜ್ವರ, ಕೃತಕೆಮ್ಮುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ. ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ವೈದ್ಯರಿಗಿಂತಲು ಶೀಘ್ರವಾಗಿಯೂ, ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ವಾಂತಿಯುಬ್ಬರಿಕೆ, ಮೂತ್ರಸ್ತಂಭ ಕಟ್ಟಿದರೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಸಹಾಯದೊರಿಯ ಸೀಸೆ ಒಂದು ಬುಡ್ಡಿಯು ನಿಮ್ಮಲ್ಲಿರಲಿ ಪದೇ ಒಂದು ಸಲ ಯಾವಿನ್ನು ಅಪೇಕ್ಷಿಸದೆ ಕಾಲಲಾಭವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ

ಅನುಪಾನಸಹ ಕ್ರಯವು ಒಂದು ಬುಡ್ಡಿಗೆ

ಪಾಲ್ ಖರ್ಚ ಬೇರೆ.

ವಿಳಾಸ:— ಶ್ರೀ ನಿಲಯ

೧೯೧೨ ನೆಯ ಇಸವಿ ಜೂನ್ ತಾ|| ೩ ರಿಂದ ೧೯೧೨ನೆಯ ಜೂನ್ ತಾ|| ೯ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೪ನೆಯ ಪರಿಧಾವಿ ಸಂವತ್ಸರದ ಜ್ಯೇಷ್ಠ ಬ|| ತದಿಗೆಯಿಂದ ಜ್ಯೇಷ್ಠ ಬ|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸೂರ್ಯೋದಯ
3	[1] ಸೋಮ	ತ	3-7	ಪೂರ್ವಾ	9-53	23
4	ಮಂಗಳ	ಚ	8-55	ಉತ್ತರಾ	16-22	25
5	[2] ಬುಧ	ಪ	12-54	ಶ್ರವಣ	22-57	24
6	[3] ಗುರು	ಷ	18-44	ಧನಿ	29-13	25
7	[4] ಶುಕ್ರ	ಸ	22-54	ಶತಭಿಷ	34-45	26
8	ಶನಿ	ಅ	26-15	ಪೂರ್ವಾ	39-21	27
9	ಭಾನು	ನ	27-56	ಉತ್ತರಾ	42-43	28

(1) ಸಂಕಷ್ಟಹರ ಚತುರ್ಥಿ, ಕಾಂಚಿವರದರಾಜಸ್ವಾಮಿ ರಥ, ಮೇಲುಕೋಟೆ ನರಸಿಂಹಸ್ವಾಮಿ ರಥ. (2) ಮೇಲುಕೋಟೆಯಲ್ಲಿ ದವನ ಪರ್ವ (3) ವಾರ್ಷಿಕ

ಮೈಸೂರು

ವ್ಯವಹಾರದ

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

[illegible]

ಸಂಪುಟ ೨೯] ಮೈಸೂರ್ ಸ್ಟಾರ್ [illegible] ನೆಯ ಇಸವಿ [illegible] ನೆಯ ಸೋಮವಾರ [ಸಂಚಿಕೆ ೨೩

REGISTERED No. M 1241

1 ಉಡುಪುಗಳು.

ವಿಧವಿಧವಾದ ಉಡುಪುಗಳು [illegible] ಅಂಗಡಿಯಲ್ಲಿ ದೊರೆಯುತ್ತವೆ. [illegible] ಬಾಲಗ್ರಹದೋಷ [illegible] ಅಪೇಕ್ಷೆ ಪಟ್ಟವರು ತರಿಸಿಕೊಳ್ಳಬಹುದು.

ಟಿ ಎಸ್ ಉಪಾಧ್ಯಾಯ,

ಮೈಸೂರು, ಸುಗ ಧಶಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

[illegible]ಪೂಜಾವಿಧಿ	[illegible]
[illegible]ಶರಣಾವಳಿ	[illegible]
[illegible] ಚರಿತೆ,	[illegible]
[illegible]ಶಬ್ದಮಂಜರಿ	[illegible]
[illegible] ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	[illegible]
[illegible]ಸಂದೀಪ್ತ	[illegible]
[illegible] ವಿವಾಹವಿಧಿ	[illegible]
[illegible]ವ್ರತಪಂಚಕ	[illegible]
[illegible] (ಮುಕ್ತಿಸಾಧನ)	[illegible]
ಗುರುಶಂಕರೇಶ್ವರಶತಕಂ	

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

42

ಬಸವರಾಜವಿಜಯಂ— ಬೆಲೆ [illegible] ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ

ಚೆನ್ನಬಸವೇಶವಿಜಯಂ [illegible] ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡದನುಡಿಯಿಂದ ಬರೆಯಲ್ಪಟ್ಟಿವೆ

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತೆ— ಇದು ವೀರಶೈವಮತದ [illegible] ಚರಿತ್ರೆ [illegible] ನೆಯ ಪ್ರಕರಣ [illegible]

ವೀರಶೈವ ಧರ್ಮಶಿರೋಮಣಿ— [illegible] ವೀರಶೈವ [illegible] ವಿಮರ್ಶಿಸಲ್ಪಟ್ಟಿವೆ (ಸವ್ಯಾಖ್ಯಾನ)

[illegible]ಂದರ ಪುರಾಣಂ.— [illegible] ನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಪುಸ್ತಕವಿದು.

ಷಟ್‌ಸ್ಥಲ ತತ್ವಪ್ರಕಾಶಿಕೆ.— [illegible] ಆಣೆ ಸಿದ್ಧಾಂತಸಾರವಾಗಿ [illegible] ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಷಟ್‌ಸ್ಥಲ ಶತಸೂತ್ರರತ್ನಂ.— ಜ್ಞಾನಿಗಳ [illegible] ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ [illegible] ಆಣೆ.

ಷಟ್‌ಸ್ಥಲ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ [illegible] ಆಣೆ.

[illegible] ಮುಕ್ತಾವಳಿ.— ಬಸವೇಶ [illegible] ಗದ್ಯಾನುವಾದ [illegible] ಆಣೆ.

[illegible]ಶತಕಂ.— [illegible] ಆಣೆ [illegible]

[illegible] ಉತ್ತಮವಾದ [illegible] ಪುಸ್ತಕ [illegible] ತರಿಸಬಹುದು [illegible]

ಮಧುರ ವಾಣಿ.

10 ವಾರ್ಷಿಕ ಚಂದಾ [illegible]

[illegible] ಶಾಸ್ತ್ರಿ, [illegible] ಪಂಡಿತರ [illegible] ನಾಟಕ, [illegible] ಜೀವನ ಚರಿತೆ ಮುಂತಾದ ಉತ್ತಮ ಗ್ರಂಥಗಳೂ, [illegible] ನೀತಿ, [illegible] ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, [illegible] ಉಪಯುಕ್ತ ವಿಷಯಗಳೂ, [illegible] ಪ್ರತಿವಾರವೂ ತಪ್ಪದೆ ಪ್ರಕಟಿಸಲ್ಪಡುವುವು [illegible] ಚಂದಾದಾರರಿಗೆ ಅನೇಕ ಪುಸ್ತಕಗಳು ಅರ್ಧ ಬೆಲೆ [illegible] ದೊರೆಯುವುದು ಅನೇಕ ಪದವೀಧರರೂ, ಪಂಡಿತರೂ ನಮ್ಮ [illegible] ಅನೇಕರ ಸದಭಿರುಚಿಗೆ ಪಾತ್ರವಾಗಿದೆ

ವಿಳಾಸ— [illegible] ಮತ್ತು [illegible]

ಮೈಸೂರು.

---

18 [illegible]

[illegible] ನೆಯ ಭಾಗ.

[illegible] ಸಾಗಿರುವುವು ವಿಷಯವಿವೇಚನೆ, [illegible] ಮನೋಹರಶೈಲಿ, [illegible] ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ [illegible] ಭಾಗದಂತೆಯೇ [illegible] ಉಪಾಧ್ಯಾಯರೂ, [illegible] ವಿದ್ಯಾರ್ಥಿಗಳೂ, ಇತರರೂ [illegible]

[illegible] ನೆಯ ಭಾಗ [illegible]

ಅಂಚೆ ವೆಚ್ಚ ಬೇರೆ

ವಿಳಾಸ— « ಮೈಸೂರ್ [illegible] » ಮೈಸೂರ್

---

42 ಉತ್ತಮ ಗ್ರಂಥಗಳು.

[illegible]ಶಿರೋಮಣಿ — ಬೆಲೆ [illegible] ಆಣೆ [illegible] ಉತ್ತಮವಾದ [illegible]

[illegible]ಪ್ರಕಾಶಿಕೆ — ಬೆಲೆ [illegible] ಆಣೆ [illegible] ಪ್ರಕಾಶಕ [illegible] ವೀರಶೈವರಿಗೂ [illegible]

[illegible]ಪಂಚಾಕ್ಷರಿ— [illegible] ಸ್ತೋತ್ರ [illegible] ವೀರಶೈವ [illegible] ಅರ್ಥ ಬರೆದು [illegible] ಉಪಾಧ್ಯಾಯರಿಂದ [illegible] ಬರೆದುದು

ವೀರಶೈವ [illegible] ಬೆಲೆ [illegible] ವೀರಶೈವ [illegible] ಧರ್ಮಾಚಾರ [illegible]

[illegible] ಬೆಲೆ [illegible] ಆಣೆ [illegible]

[illegible]

ಮೈಸೂರು ಸ್ಟಾರ್ ಚಂದಾಸಿರ್ಬಂದಿಯು.

[illegible] ಪತ್ರಿಕೆ [illegible] ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ [illegible] ವೆಚ್ಚ [illegible] ಕೊಡಬೇಕಾಗುವುದು

[illegible]

[illegible]

[illegible]

[illegible]

[illegible] ಪ್ರಕಟಿಸುವುವೆಗೆ ಮೊದಲನೇ ಆವೃತ್ತಿ [illegible] ಎರಡನೇ ಆವೃತ್ತಿಯಿಂದ [illegible] ಪ್ರಕಟಿಸ [illegible] ಅವುಗಳ ದರವನ್ನು [illegible] ಬರೆದು ತಿಳಿದುಕೊಳ್ಳಬಹುದು [illegible] ಪ್ರಕಟಿಸಬೇಕಾದರೆ [illegible]

[illegible] ವಿಶ್ವೇಶ್ವರಪ್ರಸಾದ

[illegible]

ನಮ್ಮಲ್ಲಿ [illegible] ಬನಾರಸ್ [illegible] ಶಾಸ್ತ್ರೀಯ [illegible] ಪುಸ್ತಕಗಳು, [illegible] ವರೆಗೂ [illegible] ವಿಧವಿಧವಾದ [illegible] ಯೋಗ್ಯವಾದ [illegible] ಉತ್ತಮವಾದ [illegible] ಬರೆಯಲ್ಪಟ್ಟಿದೆ.

[illegible]

[illegible]

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಿಸಿದೆ.

ಎಂ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಶ್ರೀಮನ್ಮಗ್ಗೆಮಾಯಿದೇವಪ್ರಭುವಿರಚಿತ
ಶಿವಾಧವ ಶಿವಾಶಿವಲ್ಲಭ ಮಹದೈಪುರೀಶ್ವರ

ಶತಕತ್ರಯವು

ಕರ್ನಾಟಕ ಟೀಕೆಯೊಡನೆ ಈಗ್ಗೆ [illegible] ವರ್ಷಗಳ ಕೆಳಗೆ ಮುದ್ರಿಸಲ್ಪಟ್ಟಿತ್ತು. ಆ ಟೀಕೆಯಿದ್ದರೂ, ಸಾಧಾರಣ ಜನರಿಗೆ ಅರ್ಥವಾಗುವಂತೆ ಇರಲಿಲ್ಲವಾದುದರಿಂದ, ಪ್ರತಿಯೊಬ್ಬರಿಗೂ ತಿಳಿಯುವಂತೆ ಈಗ ಸುಲಭವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಣಮಾಡಿ ಭದ್ರವಾದ ರಟ್ಟಿನಿಂದ ಬೈಂಡು ಮಾಡಿಸಿರುತ್ತೇವೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತರೀತ್ಯಾ ಭಕ್ತಿ, ಜ್ಞಾನ, ವೈರಾಗ್ಯಗಳ ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪರಮಸಾಧನಗಳಿಗೆ ಅತ್ಯಂತಸಾಧನವಾಗಿರುತ್ತದೆ.

ಇದರಬೆಲೆ ೧—೦—೦. ವಿ. ಪಿ. ಯಿಂದ ೧—೩—೦

ಮ್ಯಾನೇಜರ್,
"ಮೈಸೂರ್ ಸ್ಟಾರ್" ಆಫೀಸ್, ಮೈಸೂರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ]

ಮತ್ತು ಬ್ರಹ್ಮಜಾತಿಯ ವಜ್ರಗಳನ್ನೇ ಬ್ರಾಹ್ಮಣನು ಧರಿಸಬೇಕು. ಕ್ಷತ್ರಿಯಜಾತಿಯ ವಜ್ರಗಳಂ ಕ್ಷತ್ರಿಯನೇ ಧರಿಸಬೇಕು—ವೈಶ್ಯ ಶೂದ್ರಜಾತಿಗಳನ್ನು ವೈಶ್ಯ ಶೂದ್ರರೇ ಧರಿಸಬೇಕು. ಬ್ರಾಹ್ಮಣನು ಈ ನಾಲ್ಕು ಜಾತಿಯ ವಜ್ರಗಳನ್ನೂ ಧರಿಸಬಹುದು. ಮತ್ತು ಸೂರ್ಯೋದಯದ ಹೊಳೆಯುವ ವರ್ಣವುಳ್ಳ ಸೂರ್ಯಪ್ರಕಾಶವಾದ ವಜ್ರಕ್ಕೆ ಬೆಲೆಯಿಲ್ಲ. ಅಂಥ ವಜ್ರವಂ ಧರಿಸಿದ ಅರಸಿಗೆ ಅತ್ಯಂತ ಐಶ್ವರ್ಯವೂ, ಆರೋಗ್ಯವೂ, ವಿಜಯವೂ ಉಂಟಾಗುವುದು. ಇಂಥ ವಜ್ರಂಗಳಂ ಕೆತ್ತಿದ ಆಭರಣವಂ ಧರಿಸಿ ರಣಾಂಗಣಕ್ಕೆ ತೆರಳುವ ಅರಸಿಗೆ ಆಯುಧಗಳಿಂದ ಗಾಯವಾಗಲಾರದು. ಶತ್ರುಗಳಂ ಜಯಿಸುವನು. ಪ್ರಪಂಚವಂ ಆಳುವ ಅರಸು ಈ ಸೂರ್ಯೋದಯದ ಹೊಳೆಯುವ ವಜ್ರವಂ ಧರಿಸಿದರೆ ಮಂಗಳಪ್ರದನಾಗುವನು. ಈ ರತ್ನವಂ ಧರಿಸಿದ ಪುರುಷನ ಸಮೀಪಕ್ಕೆ ದಾರಿದ್ರ್ಯವೂ, ಸರ್ಪವೂ, ಅಗ್ನಿಯೂ, ಪಿಶಾಚವೂ, ರಾಕ್ಷಸರೂ, ಮೃತ್ಯುವೂ ಸಹ ಸೇರಲಾರವು. ಮತ್ತು ವಜ್ರಗಳ ಉತ್ಪತ್ತಿಗೆ ಯುಗಭೇದದಿಂ ಸ್ಥಳಗಳು ಭೇದಿಸಿರುವುವು. ಕೃತಯುಗದಲ್ಲಿಯೂ ಕಲಿಯುಗದಲ್ಲಿಯೂ ಕೋಸಲದೇಶದಲ್ಲಿ ಹುಟ್ಟುವುವು. ತ್ರೇತಾಯುಗದಲ್ಲಿ ಹಿಮವತ್ಪರ್ವತದಲ್ಲಿಯೂ, ಮಾತಂಗಪರ್ವತದಲ್ಲಿಯೂ ಹುಟ್ಟುವುವು. ದ್ವಾಪರಯುಗದಲ್ಲಿ ಪುಂಡ್ರದೇಶದಲ್ಲಿಯೂ, ಮಹಾರಾಷ್ಟ್ರದೇಶದಲ್ಲಿಯೂ ಹುಟ್ಟುವುವು. ಮತ್ತು ಕಲಿಯುಗದಲ್ಲಿ ಸೌರಾಷ್ಟ್ರದೇಶದಲ್ಲಿ ಹುಟ್ಟುವುವು. ಎಲೈ ರಾಜೇಂದ್ರನೆ! ಕೇಳು— ವಜ್ರಂಗಳಲ್ಲಿ ಐದು ಗುಣಂಗಳೂ, ಐದು ದೋಷಂಗಳೂ ಇರುವುವು. ಇದಲ್ಲದೆ ಛಾಯೆಯು ನಾಲ್ಕು ವಿಧವಾಗಿರುವುದು. ಐದು ಗುಣಂಗಳು ಯಾವುವೆಂದರೆ—ಆರುಮೂಲೆಯುಳ್ಳವಾಗಿಯೂ, ಲಘುವಾಗಿಯೂ, ಮೂಲೆಗಳು ಎಸಳಾಗಿಯೂ, ಕೊನೆಗಳು ಮೊನೆಯಾಗಿಯೂ, ನಿರ್ಮಲವಾಗಿಯೂ ಇರುವುದೇ ಐದು ಗುಣಂಗಳೆನಿಸುವುವು. ಐದು ದೋಷಂಗಳಾವುವೆಂದರೆ— ಮಲವೂ, ಬಿಂದುವೂ, ರೇಖೆಯೂ, ಎಳೆಯೂ, ಕಾಕಪಾದವೂ ಇವು ಐದೂ ದೋಷಂಗಳು. ಛಾಯೆಯು ನಾಲ್ಕು ಯಾವುವೆಂದರೆ— ಬಿಳುಪು, ಕೆಂಪು, ಹಳದಿ, ಕಪ್ಪು ಇವು ನಾಲ್ಕೂ ಛಾಯೆಗಳು. ಮತ್ತು ಮೌಲ್ಯ ಯಾವುದೆಂದರೆ— ವಜ್ರದಲ್ಲಿ ಪ್ರತಿಫಲಿಸುವುದೇ ಮೌಲ್ಯವೆನಿಸಿಕೊಂಬುವುದು. ವಜ್ರಗಳಿಗೆ ಮಧ್ಯದಲ್ಲಿ ಕಪ್ಪಾಗಿದ್ದರೆ ಅದರಿಂ ಅಗ್ನಿಭಯ [illegible] ಮೂಲೆಗಳಲ್ಲಿ ಕಪ್ಪಾಗಿದ್ದರೆ ವ್ಯಾಧಿಭಯವುಂಟಾಗುವುದು. [illegible] ವಜ್ರದಲ್ಲಿ ಬಿಂದುವಾಗಿ [illegible] ಬಿಂದುವು [illegible]

ಸಿಕೊಂಬುವುದು. ಆ ಬಿಂದುವಿನಿಂ ಹುಟ್ಟಿದ ಗಂಡುರೇಖೆಯು ಪ್ರದಕ್ಷಿಣವಾಗಿದ್ದರೆ ಪರಿವರ್ತವೆನಿಸಿಕೊಂಬುವುದು. ಇದು ಆಯುಷ್ಯಂ ಧನವಂ ಕೂಡ ನಾಶಮಾಡುವುದು. ಆವರ್ತವು ಭಯವನ್ನುಂಟುಮಾಡುವುದು. ಪರಿವರ್ತವು ವ್ಯಾಧಿಯನ್ನುಂಟುಮಾಡುವುದು. ಎಳೆಗೆ ಲಕ್ಷಣವೇನೆಂದರೆ— ರಕ್ತವರ್ಣವಾಗಿಯೂ, ಶ್ವೇತವರ್ಣವಾಗಿಯೂ, ಪೀತವರ್ಣವಾಗಿಯೂ ಇರುವುದೇ ಎಳೆಯು. ಇವುಗಳಲ್ಲಿ ರಕ್ತವರ್ಣವಾಗಿರುವ ಎಳೆಯು ಕುದುರೆಗಳಂ ನಾಶಗೊಳಿಸುವುದು. ಶ್ವೇತವರ್ಣವಾಗಿರುವ ಎಳೆಯು ಆಯುಷ್ಯಂ ಧನವಂ ಕೂಡ ಕೆಡಿಸುವುದು. ಪೀತವರ್ಣವಾಗಿರುವ ಎಳೆಯು ವಂಶವಂ ಧ್ವಂಸಮಾಡುವುದು. ರೇಖೆಯ ಲಕ್ಷಣವೆಂತೆಂದರೆ—ಯಾವ ವಜ್ರಕ್ಕೆ ರೇಖೆಯು ಬಲಮುಖವಾಗಿರುವುದೋ ಆ ವಜ್ರವು ಉತ್ತಮವು, ರೇಖೆಯು ಎಡಮುಖವಾಗಿದ್ದರೆ ಭಯವನ್ನುಂಟುಮಾಡುವುದು. ಕಾಕಪಾದವು ವಜ್ರದಲ್ಲಿ ಬರೆದ ತ್ರಿಕೋಣ ರೇಖೆಯು ಕಾಕಪಾದವೆಂಬ ಹೆಸರಂ ಪಡೆದು ಶತ್ರುಬಾಧೆಯನ್ನುಂಟುಮಾಡುವುದು. ರೇಖೆಯು ಕಪಿಲವಾಗಿದ್ದರೆ [illegible] ಕಲಹವನ್ನುಂಟುಮಾಡುವುದು. ಯಾವ ವಜ್ರಕ್ಕೆ ಕಾಗೆಯ ಹಜ್ಜೆಯಂತೆ ರೇಖೆಯಿರುವುದೋ ಆ ರೇಖೆಯು ಕಾಕಪಾದವೆನಿಸಿಕೊಂಬುವುದು. ಅದರಿಂದ ಧನಧಾನ್ಯನಾಶವಾಗುವುದು. ಮತ್ತು [illegible] ಭಯವುಂಟಾಗುವುದು. ಇದಲ್ಲದೆ ವಜ್ರಕ್ಕೆ ಸಾಧಾರಣ ಲಕ್ಷಣವೆಂತಿರುವುದೆಂದರೆ— ಮೇಲೆ ಮೂರಿರುವುದು. ಅದು [illegible] ನೊಂದಿರುವುದು, ಮೂಲೆಗಳು ತೀಕ್ಷ್ಣವಾಗಿರುವುದು, [illegible] ಮೂಲೆಯಾಗಿರುವುದು, ದೋಷವು ಇಲ್ಲದೆಯಿರುವುದು. [illegible] ತಿರ್ಯ ವಜ್ರದಿಂ ಗುಣವೂ ಇಲ್ಲ ದೋಷವೂ ಇಲ್ಲ. ಮತ್ತು ವಜ್ರದಲ್ಲಿ ಒಡೆದಂತೆ ಕಾಣಿಸುವುದು ತ್ರಾಸವು. ಇಂತಿರ್ಪ ವಜ್ರವಂ ಧರಿಸಿದವಂಗೆ ನಷ್ಟವುಂಟಾಗುವುದು. ಮತ್ತು ವಜ್ರಗಳಲ್ಲಿ ಸ್ತ್ರೀಜಾತಿ, ಪುರುಷಜಾತಿ, ನಪುಂಸಕಜಾತಿಗಳೆಂದು ಮೂರುಜಾತಿಗಳಿರುವುವು. ಅದೆಂತೆನೆ— ವಜ್ರಗಳಲ್ಲಿ ದುಂಡಾಗಿಯೂ, ಸಿಲುಕಾಗಿಯೂ, ಚೆನ್ನಾಗಿ ಹೊಳಪಾಗಿಯೂ, ದೊಡ್ಡದಾಗಿಯೂ ಬಿಂದುರೇಖೆ ಮೊದಲಾದ ದೋಷಗಳಿಲ್ಲದೆಯಿರುವುದೇ ಪುರುಷಜಾತಿಯು. ದುಂಡಾಗಿ ಸಿಲುಕಾಗಿ, ಚೆನ್ನಾಗಿ, ಹೊಳಪಾಗಿ ದೊಡ್ಡದಾಗಿ, ಬಿಂದು ರೇಖೆ ಈ ಎರಡೂ ಇರುವ ವಜ್ರವು ಸ್ತ್ರೀಜಾತಿಯು. ಸಿಲುಕಾಗಿ, ಮೂರು ಮೂಲೆಯಾಗಿ ಇರುವ ವಜ್ರವು ನಪುಂಸಕಜಾತಿಯು. ಈ ಮೂರುಜಾತಿಯ ವಜ್ರಗಳಲ್ಲಿ ಪುರುಷಜಾತಿಯ ವಜ್ರವು ಪುರುಷರಿಗೇ ಯೋಗ್ಯವು. [illegible] ಜಾತಿಯ ವಜ್ರವು ಸ್ತ್ರೀಯರುಗಳಿಗೇ ಯೋಗ್ಯವು. ನಪುಂಸಕಜಾತಿಯ ವಜ್ರವು ನಪುಂಸಕರಿಗೇ ಯೋಗ್ಯವು. ಪುರುಷಜಾತಿಯ ವಜ್ರವಂ ಈ ಮೂವರೂ ಧರಿಸಬಹುದು. ಸ್ತ್ರೀಜಾತಿ ವಜ್ರವಂ ನಪುಂಸಕಜಾತಿ ವಜ್ರವಂ ಸ್ತ್ರೀ ನಪುಂಸಕರೇ ಧರಿಸಬೇಕು. ವಿದ್ವಾಂಸರು ಧರಿಸಕೂಡದು. ಇನ್ನು ಮುತ್ತುಗಳು ಹುಟ್ಟುವ ಸ್ಥಳಂಗಳಂ ಅದರ ಲಕ್ಷಣಂಗಳಂ ವಿಸ್ತರಿಸುವೆನು. ಅದೆಂತೆನೆ ಮುತ್ತುಗಳಲ್ಲಿ ಜಲಜವೆಂದೂ ಸ್ಥಲಜವೆಂದೂ ಎರಡುಬಗೆಯು. ಅದರೊಳ್ ಸ್ಥಲಜವಾವುದೆಂದರೆ— ಶಂಖದಲ್ಲಿಯೂ, ಮೀನಿನ ತಲೆಯಲ್ಲಿಯೂ, ಮೇಘದಲ್ಲಿಯೂ, ಉತ್ತಮ ಸ್ತ್ರೀಯರುಗಳ ಕಿವಿಗಳಲ್ಲಿಯೂ, ವರಾಹನಲ್ಲಿಯೂ, ಕಾಡುಹಂದಿಯ ಕೋರೆಗಳಲ್ಲಿಯೂ, ಹಾವಿನ ತಲೆಯಲ್ಲಿಯೂ ಆನೆಯ ಕೊಂಬಿನಲ್ಲಿಯೂ, ಕೊಕ್ಕರೆಯ ಕಿವಿಯಲ್ಲಿಯೂ, ಕಬ್ಬಿನ ಗಿಣ್ಣಿನಲ್ಲಿಯೂ, ಬತ್ತದ ದಂಟಿನಲ್ಲಿಯೂ ಕಪ್ಪೆಯ ಚಿಪ್ಪಿನಲ್ಲಿಯೂ, ಸಿಂಹದ ಭುಜದಲ್ಲಿಯೂ ಇಂತು ಹದಿಮೂರು ಕಡೆಯಲ್ಲಿ ಹುಟ್ಟುವ ಮುತ್ತುಗಳು ಸ್ಥಲಜವೆನಿಸಿಕೊಳ್ಳುವುವು. ಈ ಮುತ್ತುಗಳ ವರ್ಣಂಗಳಂ ಹೇಳುವೆನು. ಅದೆಂತೆನೆ— ಶಂಖದಲ್ಲಿ ಹುಟ್ಟಿದ ಮುತ್ತುಗಳು ಬಿಳುಪಾಗಿ ಕಪೋತದ ಕಣ್ಣಿನ ಬೊಟ್ಟಿನಂತೆ ಇರುವುವು. [illegible] ದು ಉತ್ತಮವು. ಮೀನಿನ ತಲೆಯಲ್ಲಿ ಹುಟ್ಟಿದ ಮುತ್ತುಗಳು ಪಾದರಿ ಹೂವಿನ ವರ್ಣದಂತಿರುವುವು. ಮೇಘದಲ್ಲಿ ಹುಟ್ಟುವ ಮುತ್ತುಗಳು ಸೂರ್ಯನ ಪ್ರಭೆಯಿಂದ ಒಪ್ಪಿರುವುವು. ಉತ್ತಮ ಸ್ತ್ರೀಯರುಗಳ ಕಿವಿಗಳಲ್ಲಿಯೂ, ಕೊಕ್ಕರೆಯ ಕಿವಿಗಳಲ್ಲಿಯೂ ಸಿಂಹದ ಭುಜದಲ್ಲಿಯೂ ಹುಟ್ಟುವ ಮುತ್ತುಗಳು ದುರ್ಲಭಂಗಳು. ವರಾಹನಲ್ಲಿ ಹುಟ್ಟಿದ ಮುತ್ತು [illegible] ವರ್ಣದಿಂದಿರುವುದು. ಇದು ಶ್ರೇಷ್ಠವು. ಹಂದಿಯ ಕೋರೆದಾಡೆಯೊಳ್ ಹುಟ್ಟಿದ ಮುತ್ತು [illegible] ವಾಗಿರುವುದು. ಹಾವಿನ ತಲೆಯೊಳ್ ಹುಟ್ಟಿದ ಮುತ್ತು ನೀಲವರ್ಣವಾಗಿರುವುದು. ಆನೆಯ ಕೊಂಬಿನೊಳ್ ಹುಟ್ಟುವ ಮುತ್ತು ಹಳದಿ ವರ್ಣವಾಗಿರುವುದು. ಕಬ್ಬಿನ ಗಿಣ್ಣಿನಲ್ಲಿಯೂ, ಬತ್ತದ ದಂಟಿನಲ್ಲಿಯೂ ಇರುವ ಮುತ್ತುಗಳು ಅತಿಪೀತ ವರ್ಣವಾಗಿರುವುವು. ಕಪ್ಪೆಯ ಚಿಪ್ಪಿನಲ್ಲಿ ಹುಟ್ಟುವ ಮುತ್ತುಗಳು ಚಂದ್ರನ ಕಾಂತಿಯಂತಿರುವುವು. ಕಪ್ಪೆಯ ಚಿಪ್ಪಿನಲ್ಲಿಯೂ, ಶಂಖದಲ್ಲಿ [illegible] ಹುಟ್ಟಿದ ಮುತ್ತುಗಳು ಬಹ [illegible] ಗಳು ಅಪೂರ್ವಗಳಾದುದರಿಂದಲೂ [illegible] ದವು [illegible]

ಹೊಸ ಮಾದರಿಯ ಕಾಂಬೋಡಿಯ ಹತ್ತಿ ಬೀಜವು ಬಿತ್ತತಕ್ಕ ವಿಷಯ

ಆರ್ದ್ರ, ಪುನರ್ವಸು, ಪುಷ್ಯ, ಈ ಮಳೆಗಳಲ್ಲಿ ನಿಲ್ಲತಕ್ಕ ನೆಲದಲ್ಲಿ ಮತ್ತು ತರೀಜಮೀನುಗಳಲ್ಲಿ [illegible] ವನ್ನು ಹಾಕತಕ್ಕದು — ಅತಿ ದಾಯದ [illegible] ಕಾಲು ಹೊಡೆದು, [illegible] ಗೊಬ್ಬರವನ್ನು [illegible] ಎಡೆಗೆ [illegible] ಕಾಳು [illegible] ಗುತ್ತದೆ [illegible] ನಾಲ್ಕು ಎಲೆಯುಳ್ಳ [illegible] ಎರಡು ಮೂರು [illegible] ದಿವಸಕ್ಕೊಂದಾವೃತ್ತಿ ಹರಗುತ್ತಾ [illegible] ಗಳು ೧ ಅಡಿ ಎತ್ತರ [illegible] ಬರುವಲ್ಲಿ ಕಳೆ ತೆಗೆಯಬೇಕು. [illegible] ಗಿಡಗಳು ಬಹಳ ಪುಷ್ಟಿಯಿಂದ ಬೆಳೆದು ಚಿತ್ತೆ ಮಳೆ [illegible] ಮಾರ್ಗಶಿರ ಪುಷ್ಯ ಮಾಸದಿಂದ [illegible] ರುವುದಕ್ಕೆ ಆರಂಭವಾಗುತ್ತದೆ.

ಮತ್ತು [illegible] ಎರೆ [illegible] ಗಳಲ್ಲಿಯೂ [illegible] ಬಿತ್ತಬೇಕಾದರೆ [illegible] ಮಳೆಗಳಲ್ಲಿ ಬಿತ್ತಬೇಕು. [illegible] ಬಿತ್ತುವ [illegible] ತಾಳು [illegible] ಮಧ್ಯದಲ್ಲಿರುವ [illegible] ಸಾಲು [illegible] ಅಗಲವಾಗಿ [illegible] ಬೇಕು. [illegible] ದಿವಸಕ್ಕೊಂದಾವೃತ್ತಿ [illegible] ಗುತ್ತಾ [illegible] ಹಾಗಗುವುದರಿಂದ [illegible] ಬಹಳ [illegible] ಅದುಕಾರಣ [illegible] ಬಹಳ ಕಡಿಮೆಯಾಗುವುದರಿಂದ ಹರಗುತ್ತಾ [illegible] ಇಂಟಿನೊಳಗೆ [illegible] ಆಗುವುದಿಲ್ಲ [illegible] ವುದು [illegible] ಗನೆ ನೆಲವು [illegible] ಬಂದು, ಹಸಿಯು ನಿಂದಿರುವುದಿಲ್ಲ [illegible] ವುದಕ್ಕೆ ಈ ಬೀಜವು ಎಕರೆ ೧ ಕ್ಕೆ ೭ ಪೌಂಡು [illegible] ಗುತ್ತದೆ. ದೊಡ್ಡಹತ್ತಿ ಬೀಜವನ್ನು ಮೇಲೆ ತಿಳಿಸಿದ [illegible] ಗೆ ಬಿತ್ತತಕ್ಕದ್ದು.

ಈಗ [illegible] ನೆಯ ಮೈಸೂರು ಸರ್ಕಾರಿನ [illegible] ತ್ತಿ ಧಾರಣೆಯು ವಿಚಾರಿಸುವದರಲ್ಲಿ, ಇನ್ನು ಕೆಲವು ವಿಷ [illegible] ಸಣ್ಣ ಹತ್ತಿ ೧೦೦ ಕ್ಕೆ [illegible] ರಂತೆ ಅಂಳೆ ಬರುತ್ತದೆ. ದೊಡ್ಡ [illegible] ಮಣ ೧೦೦ ಕ್ಕೆ [illegible] ಅರಳೆ ಬರುತ್ತದೆ. ಕಾಂ [illegible] ೧೦೦ ಕ್ಕೆ [illegible] ಅರಳೆ ಬರ [illegible] ದೆ. ಕಾಂಬೋಡಿ ಅರಳೆಗೆ ಇಲ್ಲಿನವರು ಖಂಡಿ [illegible] ೫೦೦ ಪೌಂಡುತೂಕ ಅರಳೆಗೆ ೧೦—೧೫ ರೂಪಾಯಿ [illegible] ಕೊಡುತ್ತಾರೆ. ಈ ವರ್ಷ ಇದೇ ಕಾಂಬೋಡಿ ಹತ್ತಿ [illegible] ಗದಗಿನ ಮಾರ್ಕೆಟ್ಟಿಗೆ ಬಂದ [illegible] ೧ ಕ್ಕೆ [illegible] ೧೧೯ ರಿಂದ [illegible] ಗೂ ( ) ಮಿಸರ್ಸ್ ಕಾತಾ ಅಂಡ್ ಸನ್ಸ್ ಇವರು [illegible] ಎರಡು [illegible] ಯಿಂದ ಖರೀದಿ ಮಾಡಿದ್ದಾರೆ. [illegible] ಧಾರವಾಡದ ಜಿಲ್ಲೆಯಲ್ಲಿ ಸಾಗುವಳಿ [illegible] ಹೋದದ್ದಾಗಿ ಸಾಂಪತ್ತಿಕ ಸ್ಥಿತಿಯೂ ಸುಧಾರಿಸಿದ [illegible] ಗೆ ಕಾಣುತ್ತದೆ.

ನಮ್ಮ ಮೈಸೂರು ಗೌರ್ನಮೆಂಟಿನವರು ಕಾಂಬೋಡಿ ಹತ್ತಿ "ಕೆಮಾಡಬೇಕೆಂದು ಎರಡುಮೂರು ವರ್ಷದಿಂದ ಎಷ್ಟು ಪ್ರೋತ್ಸಾಹ ಪಡಿಸಿದಾಗ್ಯೂ ನಾವು ಇಂಥ ಹೊಸ [illegible] ಮಾದರಿಯ ಹತ್ತಿಯನ್ನು ಬೆಳೆಯದೆ ಇರುವುದರಿಂದ ನಮ್ಮ ಪೂರ್ವದ ಸ್ಥಿತಿಯನ್ನು ಬಿಡುವುದಕ್ಕೆ ಆಗದೆ ಸಾಹುಕಾರರ ಮನೆ ಬಾಗಿಲು ಕಾಯುವುದು ತಪ್ಪಲೊಲ್ಲದು. ಈ ರೀತಿಯಾಗಿಯೇ ನಾವು ಇದ್ದರೆ ನಮ್ಮ ಹೀನಸ್ಥಿತಿಯು ಯಾವಕಾಲಕ್ಕೆ ತಪ್ಪಬೇಕು? ಸಾಹುಕಾರರುಗಳಿಗೆ ಬಡ್ಡಿ ಕೊಡತಕ್ಕ ಅಂಶವು ಯಾವ ಕಾಲಕ್ಕೆ ತಪ್ಪಬೇಕು? ಇಂಥ ಮಂಟಿಸ್ಥಿತಿಯ ಬುದ್ಧಿಯನ್ನು ಬಿಟ್ಟು ನಾವು ಒಳ್ಳೆ ಧನಿಕರಾಗಬೇಕೆಂಬ ಪ್ರಯತ್ನವನ್ನು ಮಾಡಬೇಕು. ಪ್ರಯತ್ನಕ್ಕೆ ಸರಿಯಾಗಿ ದೇವರು ಸಹಾಯವನ್ನು ಮಾಡುತ್ತಾನೆ. ಈ ಕಾಲದಲ್ಲಿ ಪ್ರಯತ್ನವೇ ಮುಖ್ಯವಾದುದು. ಈ ಕಾಂಬೋಡಿ ಹತ್ತಿ ಬೆಳೆಯನ್ನು ೦ ವರ್ಷದಿಂದಲೂ ನಾನು ತರೀ ಜಮೀನಿನಲ್ಲೂ ಕುಷ್ಕಿ ಜಮೀನಿನಲ್ಲೂ ಹಾಕಿ ಬೆಳೆದು ನೋಡಿ, ಈ ಹತ್ತಿಯ ಗುಣಾಂಶವನ್ನು ಕಂಡು ನಮ್ಮ ಮೈಸೂರು ಸೀಮೆಯಲ್ಲಿನ ಜಮೀನ್ದಾರರು ಇಂಥ ಹತ್ತಿಯನ್ನೇ ವೃದ್ಧಿಪಡಿಸಬೇಕೆಂದು ಕೋರುತ್ತೇನೆ.

ಕಾಂಬೋಡಿ ಹತ್ತಿಯ ಬೀಜವು ಬೇಕಾದವರು ನಮ್ಮಲ್ಲಿ ಎಲ್ಲಾ ಕಾಲದಲ್ಲೂ ಆಗಾಗ ಒಕ್ಕಲಿಗರು ಬೀಜವನ್ನು ಕಳುಹಿಸಬೇಕೆಂದು ಬರೆದಿದ್ದರು.

ಸಿಗಳ್ಳಿ.
ಈಗ ನಮ್ಮಲ್ಲಿ ದೊಡ್ಡ ಹತ್ತಿ
ಬೀಜವು ಕೂಡ ಇರುತ್ತದೆ.
ಹತ್ತಿ
[illegible] ಕೊಕ್ಕ
ಖರೀದು
ನಾಗೆರೆ.

ವರ್ ಸೆಕೆಂಡರಿ ಪರೀಕ್ಷೆಯಲ್ಲಿ ೯ ಮಂದಿ ರಾಜಮನೆತನದ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಇವರಲ್ಲಿ ಒಬ್ಬರು ೧ನೇ ತರಗತಿಯಲ್ಲಿ ಉತ್ತೀರ್ಣರಾಗಿ ತೇರ್ಗಡೆಯಾಗಿರು ವರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ೭ ಬಿ. ಏ., ಪರೀಕ್ಷೆಯಲ್ಲಿ ೪ [illegible] ರಾಜ ಅರಸಿನವರೆಂಬ ಮತ್ತೊಬ್ಬರೂ ತೇರ್ಗಡೆಯಾಗಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಡಾಕ್ಟರ್ ಸಿದ್ಧಪ್ಪನವರು ಕನ್ನಂಬಾಡಿಯಿಂದ ಮೂಡಗೆರೆಗೂ, ಅಲ್ಲಿಯ ಡಾಕ್ಟರು ಕನ್ನಂಬಾಡಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಈ ತಿಂಗಳ [illegible] ದ ನಮ್ಮ ಶ್ರೀಮನ್ಮಹಾರಾಜರವರ ಬಳಿಯಲ್ಲಿ ದರ್ಬಾರ್ ಸರ್ಜನ್ ಕೆಲಸಕ್ಕೆ ಮೇಜರ್ [illegible] ಎಂಬುವರು ನಿಯಮಿತರಾಗಿ, ಅವರು ಮತ್ತೀ ಸರ್ವತ್ರರಾಗಿ ಬಂದು ತಮ್ಮ ಕೆಲಸವನ್ನು ವಹಿಸಿಕೊಂಡಿರುತ್ತಾರೆ. ಅವರು ನಿತ್ಯದಲ್ಲೂ ೧ — ಗಂಟೆಯ ಕಾಲ ಬವರಿಂಗ್ ಆಸ್ಪತ್ರೆಗೆ ಬಂದು ಶಸ್ತ್ರ ಮೊದಲಾದ ಚಿಕಿತ್ಸೆಗಳನ್ನು ಮಾಡುತ್ತಿರುವರೆಂದರಿಯುತ್ತೇವೆ.

ರಾಜಧಾನಿಯಲ್ಲಿ ಇರುವರಿಗೆ ರಾತ್ರಿ ೯ ಗಂಟೆಗೂ, ಬೆಳಗಿನ ೫ ಗಂಟೆಗೂ ಸಮಯ ಸೂಚಕವಾದ ಒಂದೊಂದು ಗುಂಡನ್ನು ಹಾರಿಸುತ್ತಿದ್ದರು. ಕಳೆದ ೩ ನೆಯ ತಾ ೨ ಯಿಂದ (ಚಕ್ರವರ್ತಿಯವರ ವರ್ಧಂತಿಯ ದಿನದಿಂದ) ಮಧ್ಯಾಹ್ನದ ೧೨ ಗಂಟೆಗೆ ಮತ್ತೊಂದು ಗುಂಡನ್ನು ಹಾರಿಸುವ ಏರ್ಪಾಡನ್ನು ಶ್ರೀಮನ್ಮಹಾರಾಜರವರು ಮಾಡಿಸಿರುತ್ತಾರೆ. ಆದರೆ ಹಗಲು ಹೊತ್ತಾದುದರಿಂದ ಜನರ ಕಲಕಲದಲ್ಲಿ ಒಂದು ಮೂಲೆಯಲ್ಲಿ ಹಾರಿಸುವ ಗುಂಡಿನ ಶಬ್ದವು ರಾಜಧಾನಿಯ ಎಲ್ಲಾ ಕಡೆಗೂ ಕೇಳುವುದಿಲ್ಲ.

ಕಳೆದ ಮಂಗಳವಾರ ಮೂರು ಜಾವದಲ್ಲಿ ರಾಜಧಾನಿಯಲ್ಲಿ ೧ ಗಂಟೆಯ ಕಾಲ ಬಲವಾದ ಮಳೆಯಾಯಿತು. ವಿಪರೀತವಾಗಿ ಆಲಿಕಲ್ಲುಗಳು ಸುರಿದು ಹಾದಿಬೀದಿಯೆಲ್ಲಾ ಬಿಳಿದಾಗಿದ್ದುವು. ಮಾವಿನ ಫಲಕ್ಕೆ ಇದರಿಂದ ಸ್ವಲ್ಪ ಕೇಡಾಯಿತು. ಆದರೆ ಜೋಳ ಮೊದಲಾದ ಒಣಗುತ್ತಿದ್ದ ಪೈರಿಗೆ ಬಹಳ ಅನುಕೂಲವಾಯಿತು. ಅರಮನೆಯ ಶಿಖರದ ಮೇಲೆ ಇಟ್ಟಿದ್ದ ವಿದ್ಯುಚ್ಛಕ್ತಿ ದೀಪದ ಗಾಜಿನ ಬುರುಡೆಗಳಲ್ಲಿ ಕೆಲವು ಆಲಿಕಲ್ಲಿನೇಟಿನಿಂದ ಒಡೆದುಹೋಗಿರುವುವು. ಕಳೆದ ಶನಿವಾರವೂ ಇದರಂತೆ ಮಳೆಯಾಯಿತು.

ಬೆಂಗಳೂರಿನಲ್ಲಿ ಮುಂದಣ ಜನವರಿಯಿಂದ ಒಂದು ಸ್ಕೂಲ್ ಆಫ್ ಸೈನ್ಸ್ [illegible] ಶಾಲೆಯನ್ನು ನಮ್ಮ ಸರ್ಕಾರದವರು ಸ್ಥಾಪಿಸುವವರಾಗಿದ್ದಾರೆಂದು ಮುಂದೆ ತಿಳಿಯಬಹುದು. ಇದರಲ್ಲಿ ಸ್ಕೂಲ್ ಶಾಸ್ತ್ರ, ರಸಾಯನಶಾಸ್ತ್ರ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ, ಸಜೀವಸೃಷ್ಟಿಶಾಸ್ತ್ರಗಳಲ್ಲಿ ಸಾಮಾನ್ಯವಾದ ತಿಳುವಳಿಕೆಯುಂಟಾಗುವಂತೆ ೨ ವರ್ಷಗಳವರೆಗೆ ವಿದ್ಯಾಭ್ಯಾಸ ಮಾಡಿಸುತ್ತಾರೆ. ಇದಕ್ಕೆ ಸೇರುವ ವಿದ್ಯಾರ್ಥಿಗಳು ಜಮೀನ್ದಾರರ ಮಕ್ಕಳಾಗಿಯೂ, ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೂ, ಅಥವಾ ಮೆಟ್ರಿಕ್ಯುಲೇಷನ್ ತರಗತಿಯವರೆಗೆ ಓದಿ ಸ್ವಲ್ಪಮಟ್ಟಿಗೆ ಇಂಗ್ಲೀಷನ್ನು ಅರಿತವರಾಗಿಯೂ ಇರಬೇಕು. ಇವರುಗಳು ಬೆಬ್ಬಾಳಿನ ಪರೀಕ್ಷಾ ಕ್ಷೇತ್ರದಲ್ಲಿ ವಾಸಮಾಡಬೇಕು. ಇವರ ಊಟ ಉಪಚಾರಗಳಿಗೂ ವಾಸಕ್ಕೂ ತಕ್ಕ ಏರ್ಪಾಟನ್ನು ಗೌರ್ನಮೆಂಟಿನವರು ಮಾಡಿಸುವರು.

ಕಳೆದ ತಾ ೧ ರಲ್ಲಿ ಮೈಸೂರಲ್ಲಿ ಕೂಡಿದ್ದ ನಿಯಾಮಕ ಸಭೆಯಲ್ಲಿ ಚರ್ಚಿತಗಳಾಗಿ ತೀರ್ಮಾನವಾದ ವಿಷಯಗಳಲ್ಲಿ ಇವು ಮುಖ್ಯವಾದುವು—(೧) ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಸ್ಥಳಿಕ ಕಾರ್ಯಗಳ ಅವಶ್ಯಕತೆಗಾಗಿ ಬೇಗರಾದ ಭೂಗಂದಾಯದ ಮೇಲೆ ರೂಪಾಯಿ ೧ ಕ್ಕೆ ೩ ಕಾಸಿನಂತೆ ಹೆಚ್ಚಾಗಿ ಎತ್ತಿಕೊಂಡು ಒಂದು ಧನವನ್ನು ಕೂಡಿಸುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅಧಿಕಾರ ಕೊಡುವುದು (೨) ಮ್ಯುನಿಸಿಪಾಲಿಟಿಗಳು ತಮ್ಮ ಸ್ಥಳಿಕ ಕಾರ್ಯಗಳ ಅವಶ್ಯಕತೆಗಾಗಿ ಸರ್ಕಾರದವರ ಅಪ್ಪಣೆ ಪಡೆದು ಸರ್ಕಾರದಿಂದಲೋ ಅಥವಾ ವ್ಯಕ್ತಿಗಳಿಂದಲೋ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಗೆ ಅಧಿಕಾರ ಕೊಡುವುದು. (೩) ಮ್ಯುನಿಸಿಪಲ್ ಎಲ್ಲೆಯೊಳಗಿರುವ ಮನೆ ಯಜಮಾನರುಗಳು ತಮ್ಮ ಮನೆ ಮೊದಲಾದುವುಗಳನ್ನು ಇತರರಿಗೆ ಕ್ರಯಾದಿಗಳನ್ನು ಮಾಡಿದರೆ, ಅಂಥ ಪರಾಧೀನತೆಯನ್ನು ಕುರಿತು ಮ್ಯುನಿಸಿಪಾಲಿಟಿಗೆ ನಿಯತ ಮೂಲಕವಾಗಿ ಒಂದು ಪರ್ಮದೊಳಗಾಗಿ ತಿಳುಹಬೇಕೆಂತ, ಅದಕ್ಕೆ ತಪ್ಪಿದವರಿಗೆ ೫೦ ರೂ. ಗಳ ವರೆಗೆ ಅಪರಾಧದಂಡ[illegible] (೪) ಇನಾಂದಾರರಿಗೆ ತಮ್ಮ [illegible]

ಮಂಗಳ ಸ್ಥ	೬ ವರ್ಷಗಳ ವರೆಗ
ಹಿಂದಿನ ಕ	[illegible] ಅಧಿಕಾರ
ವಿಷ್ಣು ಕೊ	

ವರ್ತಮಾನ ಸಂಗ್ರಹವು.

ಸೋಲಾಪುರ—ಸಿಕಂದರಾಬಾದು ರೈಲುಮಾರ್ಗಗಳಲ್ಲಿ ವಾಂತಿಭೇದಿ ರೋಗವು ವ್ಯಾಪಿಸಿಕೊಂಡಿದೆ.

ಇಂಗ್ಲೆಂಡಿನಲ್ಲಿ ೫೩೦೦೧ ಶಾಲೆಗಳು [illegible] ವೆ. ಅದಕ್ಕೆ ಹಾಕಿರುವ ಖರ್ಚು [illegible] ಬಿರಾ ಗಳು.

ಪ್ರಪಂಚದಲ್ಲಿ ಎಲ್ಲಾ ಗುಜ್ಜರರೂ ವರ್ಷ ೧ ಕ್ಕೆ ಯುದ್ಧಕ್ಕಾಗಿ [illegible] ಗಳನ್ನು ಖರ್ಚು ಮಾಡುತ್ತಿರುವರು.

ಪುದುಚೇರಿಯಲ್ಲಿ ವಾಸವಾಗಿರುವ [illegible] ಮೊದಲಾದ ಕೆಲವು ಮನೆಗಳು ಈ ವಾರ್ತೆ ಪೋಲೀಸಿನವರಿಂದ ಪರಿಶೋಧಿಸಲ್ಪಟ್ಟವು.

ಕಳೆದವಾರ ಇಂಗ್ಲೆಂಡಿನಲ್ಲಿ ಬೋರಾದಗಾಳಿ [illegible] ದಿಂದಲೇ [illegible] ಮಂದಿಗಳು [illegible] ಮಂದಿಗಳಿಗೆ ಗಾಯವಾಯಿತು.

ಬಂಗಾಳ ದೇಶದಲ್ಲಿ [illegible] ಸರ್ಕಾರದವರಿಂದ ನಡೆಯುತ್ತಿದ್ದ " ಸುಬೋಧ ಸಮಾಚಾರ " ವೆಂಬ ಪತ್ರವು ನಿಂತುಹೋಯಿತು.

ಟರ್ಕಿಯ ಕಡೆಗೆ [illegible] ರೀತಿಯನ್ನು ಕಲ್ಕತ್ತಾ ಬೊಂಬಾಯಿ ಪಟ್ಟಣದ [illegible] ಮೊಹರಂ [illegible] ಗಳಲ್ಲಿ ತೋರಿಸುತ್ತಿದ್ದಾರೆ.

ಸರ್ ಗೋಪಾಲರಾವರು ಸುರಕ್ಷಿತವಾಗಿ ಲಂಡನ್ನನ್ನು ಸೇರಿದರು. ಸಮುದ್ರಯಾನದಿಂದ ಅವರ ಆರೋಗ್ಯವು ಸುಧಾರಿಸುತ್ತದೆ. ದು ಕೇಳಿ ಸಂತೋಷಿಸುತ್ತೇವೆ.

[illegible] ನೆಯ ವರ್ಷಕ್ಕೆ ಮುಂಚೆ ಇಂಗ್ಲೆಂಡಿನಲ್ಲಿ ಟೀ ಸೊಪ್ಪು ಪೌಂಡ್ ೧ ಕ್ಕೆ ೧೫೦ ರೂ. ಗೆ ಮಾರಲ್ಪಡುತ್ತಿದ್ದಿತು. ಈಗ ೧ ಆಣೆಗೆ ಮಾರಲ್ಪಡುತ್ತಿದೆ.

ತಿಂಗಳಿಗೆ ೧೫೦ ರೂ. ಕೂಲಿ ಕೊಡುತ್ತೇವೆಂದು ಹಡಗಿನವರು ಹೇಳಿದರೂ ಲಂಡನ್ನಿನಲ್ಲಿ ಮುಷ್ಕರ ಹೂಡಿರುವ ಕೂಲಿಯವರುಗಳು ಒಪ್ಪದೆ ಕೆಲಸಕ್ಕೆ ಬರದೆ ನಿಂತಿದ್ದಾರೆ.

ಬಂಗಾಳ ದೇಶದ ಚಿತ್ತಗಾಂಗದಲ್ಲಿ ಮೋಸದ ವಿಮಾ ಕಂಪನಿಗಳು ೫೩ ರ ಮೇಲೆ ಸರ್ಕಾರದವರು ವ್ಯಾಪಾರ ಮಾಡಿದ ಅಪರಾಧವನ್ನು ಹೊರಿಸಿ ವಿಚಾರಣೆಗೆ ಗುರಿಮಾಡಿದ್ದಾರೆ.

ಕೇಸರಿ ಪತ್ರಿಕೆಯಲ್ಲಿ ಸರ್ಕಾರಕ್ಕೆ ವಿರುದ್ಧವಾದ ಲೇಖನಗಳು ಬರುತ್ತಿದ್ದುದರಿಂದ ಅದರ ಅಧಿಕಾರಿಯು ೫ ಸಾವಿರ ರೂ ಗಳನ್ನು ಸರ್ಕಾರದಲ್ಲಿ ಜಾಮೀನಾಗಿಡಬೇಕೆಂದು ಅಪ್ಪಣೆಯಾಗಿದ್ದಿತು. ಅದರಂತೆ ಸಂಪಾದಕರು ಸರ್ಕಾರಕ್ಕೆ ಹಣವನ್ನು ಕಟ್ಟಿದ್ದಾರೆ.

ಬಂಗಾಳದ ವಿಧಾಯಕನಿರ್ಮಾಣ ಸಭೆಯ ನಿರ್ಬಂಧನೆಗಳನ್ನು ಕುರಿತು ವಿಚಾರಮಾಡುವುದಕ್ಕಾಗಿ ಅಲ್ಲಿನ ಗೌರ್ನರಾದ ಕಾರ್ಮೈಕೆಲ್ ಪ್ರಭುಗಳು ಸುರೇಂದ್ರನಾಥ ಬ್ಯಾನರ್ಜಿ—ಭೂಪೇಂದ್ರನಾಥಭಾಸುರವರುಗಳನ್ನು ಡಾರ್ಜಿಲಿಂಗಿಗೆ ಬರಮಾಡಿಕೊಂಡಿರುವರು.

ದಿಲ್ಲಿಯಲ್ಲಿ ಹೊಸ ಸ್ಥಳದೊಳಗೆ ನಗರದ ಕಟ್ಟಡಗಳನ್ನು ಕಟ್ಟಬೇಕೆಂಬುದನ್ನು ಪರೀಕ್ಷಿಸಿ ಗೊತ್ತುಮಾಡುವುದಕ್ಕೆ ಬಂದಿರುವ ಅಧಿಕಾರಿಗಳು, ಈ ವರ್ಷದ ಮಳೆಗಾಲದಲ್ಲಿ ಅಲ್ಲಿನ ಸ್ಥಿತಿಯನ್ನು ನೋಡಿದನಂತರ ಯಾವ ಸ್ಥಳದಲ್ಲಿ ಕಟ್ಟಬೇಕೆಂಬುದನ್ನು ನಿರ್ಧರಿಸಿ ಹೇಳುವವರಾಗಿದ್ದಾರೆ.

ಬೊಂಬಾಯಿ ಗೌರ್ನರಾದ ಸರ್ ಜಾರ್ಜ್ ಕ್ಲಾರ್ಕ್ ರವರು ಇಷ್ಟರಲ್ಲೇ ಕೆಲಸವನ್ನು ಬಿಟ್ಟು ಸೀಮೆಗೆ ಪ್ರಯಾಣವಾಗುವವರಾಗಿರುವರು. ಕಳೆದ ತಾ ೪ ರಲ್ಲಿ ಆ ದಂಪತಿಗಳಿಗೆ ಮಹಾಬಲೇಶ್ವರದಲ್ಲಿರುವ [illegible] ಭವನದಲ್ಲಿ ಜಾಗಗಳುಹಿಸುವ ವಿನೋದೋತ್ಸವಗಳು ಜರುಗಿದುವು.

ಯುದ್ಧವು ಬಹುಕಾಲ ಜರಗುವುದಿಲ್ಲವೆಂತಲೂ, ತುರ್ಕಿಯು ಬೇಗನೆ ಅಧೀನವಾಗದಿದ್ದರೆ ನಾಗಿಗೀತಲೂ ಹೆಚ್ಚಾಗಿ ಅದನ್ನು ದುಡಿಸಬೇಕಾಗಿ ಬರುವುದೆಂತಲೂ, ಇಟಾಲಿಯ ವಿದೇಶಾಂಗ ಮಂತ್ರಿಯು ಜೇಸಿ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯೊಡನೆ ನುಡಿದಿರುವನು. ಇಂಥ ದಬ್ಬಿನ ಮಾತನ್ನು ಆ ಮಂತ್ರಿಯು ಯುದ್ಧಾರಂಭದಿಂದಲೂ ಆಡುತ್ತಲೇ ಇರುವನು.

ಅಮೇರಿಕಾಕ್ಕೂ ಇಂಗ್ಲೆಂಡಿಗೂ ಅಟ್ಲಾಂಟಿಕ್ ಸಮುದ್ರದ ಮೇಲೆ ಪೋಸ್ಟ್ ಮೊದಲು ವಾರ್ತೆಯ ತಂತಿಗಳನ್ನು ಹಾಕಬೇಕಾದರೆ ಬಹು ಪ್ರಯಾಸವಾಯಿತು. ಹಾಕಿದ ತಂತಿಗಳು ಜಾರಿ ಸಮುದ್ರದೊಳಗೆ ಮುಳುಗಿ ಹೋಗುತ್ತಿದ್ದುವು. ಪುನಃ ಅವನ್ನು ಮೇಲಕ್ಕೆತ್ತುತ್ತಿದ್ದರು. ಹೀಗೆ ಮೂವತ್ತು ಬಾರಿ ಮಾಡಿದಮೇಲೆ ಕಡೆಗೆ ತಂತಿಗಳ ಸಂಬಂಧವಾಯಿತು.

ಬೊಂಬಾಯಿಯವರು ರೋಜನ್ನು ಕಳೆಯುವುದಕ್ಕಾಗಿ ಮಹಾಬಲೇಶ್ವರವೆಂಬ ಪರ್ವತ ಪ್ರಾಂತಕ್ಕೆ ಹೋಗುವ [illegible]

ಜೂ	[illegible]
ಜು	[illegible]
ಭಿ	[illegible]

ರಕ್ಕಾಗಿ ಅಲ್ಲಿನ ಕೆಲ ವರ್ತಕರೊಡನೆ [illegible] ಯೋಚಿಸುತ್ತಿದ್ದಾರೆ.

[illegible] ನಿಂದ ಪಶ್ಚಿಮ ರಾಜಸ್ಥಾನದರವರೆಗೆ ವಿಸ್ತರಿಸಿಕೊಂಡು ಬಂದ ರಾಜ್ಯಾಧಿಪತ್ಯ [illegible] ವಿಭಜಿಸುತ್ತಿದ್ದ [illegible] ಅಮೇರಿಕಾದವರು ಈಗ ಎಲ್ಲೆಲ್ಲೂ ಶೋಧನೆ ಮಾಡುತ್ತಿದ್ದಾರೆ. ಮೃತರಾದ ಆಸ್ಕರ್ [illegible] ಎಂಬ [illegible] ಪತ್ತೆಯಾಗಿ ಈಚೆಗೆ ಶೋಧನೆ ಮಾಡಿಸಿದರು. ಅಲ್ಲಿ ಪ್ರಬಲ [illegible] ರೂ ನ [illegible] ಅವರಿಗೆ ಬಹುಮಾನವಾಗಿ ದೊರೆತಿದೆ.

[illegible] ಮಹಾಬಲೇಶ್ವರದಲ್ಲಿ [illegible] ಕಳೆದ [illegible] ವರ್ಷಗಳಿಂದ [illegible] ದೇಶಗಳಲ್ಲಿ ರಾಜಕಾರ್ಯ ನಡೆಸುತ್ತಿವೆಂದೂ, ಈಗ [illegible] ಬಂದಿದ್ದರೂ, ಹಿಂದೂದೇಶದಲ್ಲಿರುವುದಕ್ಕೆ ತಮಗೂ ಏನೂ ಪತ್ನಿಯವರಿಗೂ ಇರುವ ಆಸಕ್ತಿಯು ಕಡಿಮೆಯಾಗಿಲ್ಲವೆಂದೂ, ಹಿಂದೂದೇಶವು ಮುಂದೆ [illegible] ಒಳ್ಳೆಯದೆಂದೂ, ತಾವು ಕಳೆದ [illegible] ರಾಜಕಾರ್ಯದ [illegible] ವನ್ನು [illegible]

ಬೊಂಬಾಯಿಯಲ್ಲಿ [illegible] ಗಳವಾಗ [illegible] ಲ ದೊಡ್ಡ [illegible] ಬಿರುಗಾಳಿ [illegible] ಮನೆಮಠಗಳಿಗೂ ವಿಪರೀತವಾಗಿ ತುಂಬಿತು. ಎಷ್ಟೋ ಮರಗಳು ಮುರಿದುಬಿದ್ದುವು. ಸಮುದ್ರದ ತೀರದಲ್ಲಿ ಕೆಲದೋಣಿಗಳು ಮುಳುಗಿಹೋದುವು. [illegible] ತಿಂಗಳಿನಿಂದಲೂ [illegible] ರ ಕಡಿಮೆಯಾಗಿದ್ದು [illegible] ಮಳೆಗೆ ಉಷ್ಣವಾದರೆ [illegible] ೬ ಅಂಶವು ಕಡಿಮೆಯಾಯಿತು.

ಗತಿಸಿದ ಸ್ಟೆಡ್ ರವರು ಈ ಮಧ್ಯೆ ಇಂಗ್ಲೆಂಡಿನಲ್ಲಿರುವ ದಿವ್ಯಾತ್ಮ ಸಮಾಜದ ಒಬ್ಬ ಸ್ತ್ರೀಯ ಸ್ವಪ್ನದಲ್ಲಿ ಬಂದು, ಒಂದು ಲೇಖನವನ್ನು ಬರೆಯೆಂದು ಹೇಳಲು, ಆಕೆಯು ಎದ್ದು ಮಸಿಕುಡಿಕೆಯನ್ನೂ ಲೇಖನಿಯನ್ನೂ ತೆಗೆದುಕೊಂಡು ಸಿದ್ಧಳಾಗಲು, " ಟೈಟಾನಿಕ್ ಹಡಗಿನಲ್ಲಿ ಮುಳುಗಿಹೋದವರ ಆತ್ಮಗಳಿಗೆ ಶಾಂತಿಯುಂಟಾಗಿಲ್ಲ. ಈ ಲೋಕದ ಜನರ ಪ್ರಾರ್ಥನೆಯಿಂದ ಆ ಶಾಂತಿಯುಂಟಾಗುವುದಿಲ್ಲ. ನಿಮ್ಮ [illegible] ಗಳನ್ನು ಮಾಡುವುದು ವ್ಯರ್ಥ " ಎಂದು ಹೇಳಿದರಂತೆ. ಈ ವಿಷಯವನ್ನು ಆಕೆಯು ಲೈಟ್ ಎಂಬ ಪತ್ರಿಕೆಗೆ ಬರೆದಿದ್ದಾಳೆ. ಇದು [illegible]

[illegible] ಕೆಲವರ ಧರ್ಮಪತ್ನಿ [illegible] ಎಂಬುವರು ತಮ್ಮ ಪತಿಯ [illegible] ವರ್ಷದ [illegible] ವಾಸಕ್ಕೆ [illegible] ದರ್ಶನ [illegible] ದ ಮನೆಯಲ್ಲಿ [illegible] ರಾಗಿದ್ದು ಕಳೆದ ತಾ ೬ ರ ರಾತ್ರಿ [illegible] ತಮ್ಮ ಗೃಹದಲ್ಲಿ ನಿಧನರಾದರೆಂದು ತಿಳಿದು ವ್ಯಸನವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ [illegible] ವಯಸ್ಸಾಗಿದ್ದಿತು. ಮತ್ತು ಮೂರು [illegible] ಮಕ್ಕಳೂ, ಇಬ್ಬರು ಗಂಡು ಮಕ್ಕಳೂ ಇವರು. [illegible] ಕಾಲದಲ್ಲಿ ಪತಿಯು ಮುಂಬಯಿ [illegible] ಆಕೆಯವರಿಗುಂಟಾಗಿದ್ದ ಸಂಕಟವನ್ನೂ [illegible] ಗಳ ಹಿಂದೆ ಅಗಲಿದ ಪತ್ನಿಯನ್ನು [illegible] ವರಿಗೆ ಪ್ರಾಪ್ತವಾಗಿರುವ ವ್ಯಸನಪ್ರಲಾಪವನ್ನೂ ಎಷ್ಟೆಂದರೂ ಹೇಳಲಸಾಧ್ಯವಾಗಿದೆ.

ಲಂಡನ್ ಪಟ್ಟಣದ ಸ್ಟ್ರ್ಯಾಂಡ್ ಎಂಬ ಬೀದಿಯಲ್ಲಿ ಒಬ್ಬ ಅಮೇರಿಕಾದವನು ೧೦ ಸಾವಿರ ರೂ. ಗಳ ಬೆಲೆಯ ನೋಟುಗಳನ್ನು ಬೀದಿಯಲ್ಲಿ ಚೆಲ್ಲಿದನು. ಅವನ್ನು ಆರಿಸಿಕೊಳ್ಳುವುದಕ್ಕೆ ಜನರು ಗುಂಪು ಕೂಡಿಕೊಳ್ಳಲು, ಬಂಡಿ ಮೊದಲಾದುವುಗಳ ಸಂಚಾರಕ್ಕೆ ಅಡ್ಡಿಯಾಯಿತು. ಆ ಅಮೇರಿಕಾದವನನ್ನು ಪೋಲೀಸರು ಹಿಡಿದು, ದಂಡಾಧಿಕಾರಿಯವರಿಗೆ ಒಪ್ಪಿಸಿದಾಗ, ತಾನು ಇಷ್ಟೊಂದು [illegible] ಹೇಳಿಕೊಳ್ಳಲು, ಹಣವನ್ನು ಮುಚ್ಚಿಟ್ಟಿದ್ದೇನೆಂದೂ, ಎಲ್ಲರಿಗೆ ಹೋದವರೂ [illegible] ನೊರೆಯಿಲ್ಲವೆಂದೂ, [illegible] ರಸ್ತೆಯಲ್ಲಿ ಆ ಹಣದ ಜೋರೆ [illegible] ಗೊತ್ತಿಲ್ಲವೆಂದೂ, ಅದನ್ನು ತಪ್ಪಿಸುವುದಕ್ಕಾಗಿ [illegible] ದಿಂದ [illegible] ನ್ನು ಹೇಳಿದನು. ಬಳಿಕ ದಂಡಾಧಿಕಾರಿಯು [illegible] ಬಿಟ್ಟನು.

[illegible]

[illegible]

ಪತ್ರಸ್ಥ ಸಮಾಚಾರವು.

ದಾವಣಗೆರೆ ತಾಲ್ಲೂಕು ಅಣಜಿ

ಇದೇ ಗ್ರಾಮದಲ್ಲಿರುವ ಸಿಗಬಸಿನೆ ವ॥ ರಾ॥ ದೊಡ್ಡ ನಾಗಪ್ಪನವರು ತಮ್ಮ ಪುತ್ರ ಚಿ॥ ಕೊ॥ ಬಸಪ್ಪನಿಗೆ, ದೊಡ್ಡ ಶೆಟ್ಟಿ ಗಜಾಪುರದ ವ॥ ದ್ಯಾವಪ್ಪನವರ ಪುತ್ರಿ ರಾಜಮ್ಮನಿಗೆ ಕೊಟ್ಟು ತಮ್ಮ ಸ್ವಗೃಹದಲ್ಲಿ ವೈಶಾಖ ಬ ೮ ರಲ್ಲಿ ವಿವಾಹಮಹೋತ್ಸವವನ್ನು ಪೂರೈಸಿದರು. ಬೈಲೂರು ವೀರಶೈವ ವಿದ್ಯಾವರ್ಧಕ ಸಂಘಕ್ಕೆ ವಧುವಿನ ತಂದೆಯಾದ ಡೊ॥ ರಾ॥ ದೊಡ್ಡ ನಾಗಪ್ಪನವರಿಂದ ೧ ರೂ. ವರನ ಚಿಕ್ಕಪ್ಪ ಬಣಕಾರ ವ॥ ರಾ॥ ಬಸವಲಿಂಗಪ್ಪನವರಿಂದ ೧ ರೂ. ಹೀಗೆ ೨ ರೂ. ಕಳುಹಿಸಿ ಕೊಡಲು ನನ್ನ ವಶಕ್ಕೆ ಕೊಟ್ಟಿದ್ದನ್ನು ಎಂ ಎಲ್ ಇ ಸಂಘದ ಸೆಕ್ರೆಟರಿಯವರಿಗೆ ಕಳುಹಿಸಿಕೊಡಲು ವ॥ ರಾ॥ ಶ್ರೀ ವಿಶ್ವರ್ ಎಡಿಟರವರಲ್ಲಿಗೆ ಈ ಮೂಲಕ ರವಾನಿಸಿರುತ್ತೇನೆ.

ತಾ॥ ೩೦-೪-೧೨ ವೀರಶೈವ ಮತಾಭಿಮಾನಿ

ಬ್ಯಾಡಗಿ ತಾಲ್ಲೂಕು ದೊಡ್ಡೇರಿ

ಕಳೆದ ಮೆ ತಿಂಗಳು ೨೭ ನೇ ಗುರುವಾರದ ದಿವ ಶ್ರೀ ಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ, ಯವರ ವರ್ಷ ವರ್ಧಂತ್ಯುತ್ಸವದ ನಿಮಿತ್ತವಾಗಿ ಈ ಗ್ರಾಮದ ಕನ್ನಡ ಸ್ಕೂಲನ್ನು ನಾನಾವಿಧವಾಗಿ ತಳಿರ ತೋರಣಗಳಿಂದ ಅಲಂಕರಿಸಿ ವ॥ ರಾ॥ ಹಲಿಲ್ ಘಾಣ್ಮಾನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಶ್ರೀಮನ್ಮಹಾರಾಜರವರ ಛಾಯಚಿತ್ರವನ್ನು ಶೃಂಗಾರ ಪೀಠದಲ್ಲಿ ಮೂಹೂರ್ತಗೊಳಿಸಿ ದೈವಭಕ್ತಿ ಮತ್ತೂ ರಾಜಭಕ್ತಿಗಳ ವಿಷಯಕವಾದ ಉಪನ್ಯಾಸಗಳು ನಡೆದ ತರುವಾಯ ಜಗದೀಶನು ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ, ಯವರಿಗೂ, ಶ್ರೀಮನ್ ಯುವರಾಜರವರಿಗೂ, ರಾಜಕುಟುಂಬಕ್ಕೂ ದೀರ್ಘಾಯುರಾರೋಗ್ಯಗಳನ್ನು ಸರ್ವದಾ ಕೊಟ್ಟು ಕಾಪಾಡುತ್ತಾ ಬರಲೆಂದು ಜಗದೀಶನನ್ನು ಪ್ರಾರ್ಥಿಸಿ, ಕರತಾಡನದ ಮೂಲಕ ತಮ್ಮತಮ್ಮ ಸಂತೋಷತೆಯನ್ನು ಪ್ರಕಾಶಪಡಿಸಿದುದಲ್ಲದೆ ಬಾಲಕರಿಂದ ಆಟಪಾಟಗಳ ವಿನೋದೋತ್ಸವವನ್ನು ನಡೆಸಿ, ಗಂಧಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ವಿದ್ಯಾ ಕೂಪಾರಿಕೆಯು ಬಗ್ಗೆ ಗ್ರಾಮದ ಅನೇಕರು ಒಲವೆಯ ಕಾರಣವಾಗಿರುವುದರಿಂದ ಧನ ಸಂಚಯವನ್ನು ಯಾವತ್ತೂ ಸುಲಭ ಮಾರ್ಗಗಳಿಂದ ಮಾಡುವುದು ಅತ್ಯವಶ್ಯವು. ನಮ್ಮ ಸಮಾಜದ ಅನ್ನತಿಗೆ ವಿದ್ಯೆಯೇ ಮೂಲಕಾರಣವಾಗಿರುವುದು. ಆದಕಾರಣ ನಮ್ಮ ಸಮಾಜದ ಅನೇಕರು ಪರಿಸ್ಥಿತಿಯನ್ನು ತಿಳಿದು ಫಂಡುಗಳನ್ನು ಕೂಡಿಸಿದ್ದು ಸರ್ವರಿಗೂ ವಿದಿತವಷ್ಟೆ. ಕೆಳಗೆ ಕಾಣಿಸಿದ ಮಹನೀಯರು ಸದ್ಗೃಹಸ್ಥರು ತಮ್ಮ ಲಗ್ನಾದಿ ಕಾರ್ಯಗಳಲ್ಲಿ ವಿದ್ಯಾ ಸಂಸ್ಥೆಗಳಿಗೆ ಕೆಳಗೆ ಬರೆದ ಪ್ರಕಾರ ಸಹಾಯಮಾಡಿರುತ್ತಾರೆ. ಇದರಂತೆ ಯಾವತ್ತೂ ಮಹನೀಯರು ಸಹಾಯಮಾಡಿ ವಿದ್ಯಾದಾನ ಪುಣ್ಯಭಾಗಿಗಳಾಗಬೇಕೆಂದು ಸವಿನಯ ಪ್ರಾರ್ಥನೆಯು.

ಬಾಗಲಕೋಟೆ ಮುನ್ಸಿಪಲ್ ಕೌನ್ಸಿಲರಾದ ವಿ॥ ಗ ಇದ್ದಿನಪ್ಪ ಶಾಶೆಮಿಯವರು ತಮ್ಮ ಪಮೋದರಿಯನ್ನು ಗದಗಿನ ದುಂಡೂರ ರಾಚಪ್ಪನವರ ಪುತ್ರ ಮುತ್ತಪ್ಪನಿಗೆ ಕೊಟ್ಟು ನಿಶ್ಚಿತಾರ್ಥ ಮಾಡಿದ ಕಾಲಕ್ಕೆ ಶ್ರೀ ಶಿವಯೋಗಮಂದಿರಕ್ಕೆ ಪ ಬಾಗಲಕೋಟೆಯ ವಾಚನ ಪೇಠಿಕೆಗೆ ೧೦ ರೂ. ಗಳನ್ನೂ ಮುತ್ತು ರಾಚಪ್ಪಾ ದುಂಡೂರ ಇವರು ೩ ರೂ. ಗಳನ್ನೂ ಕೊಟ್ಟಿರುವರು. ಇದರಂತೆ ಅವರೇ ಲಗ್ನದ ಕಾಲಕ್ಕೆ ೧೦ ರ ದಿವಾನ ಗದಗ ಮುಕ್ಕಾಮಿನಲ್ಲ ಆಯಿತು. ಅಲ್ಲಿ ದುಂಡೂರ ಇವರು ೧೦ ರೂ. ಗಳನ್ನೂ, ಮಾ॥ ಅಪ್ಪಯ್ಯ ಗ್ರಾಶೆ ಇವರು ಧಾರವಾಡ ವಿದ್ಯಾವರ್ಧಕ ಫಂಡಿಗೆ ೫ ರೂ. ಗಳನ್ನೂ, ಶ್ರೀ ಶಿವಯೋಗ ಮಂದಿರಕ್ಕೆ ೫ ರೂ. ಗಳನ್ನೂ ಕೊಟ್ಟಿರುತ್ತಾರೆ.

ಇದೇ ತಾಲ್ಲೂಕಿನ ಪೈನ ಮುರನಾಳೆಂಬ ಗ್ರಾಮದ ತಮ್ಮ ಇವರು ತಮ್ಮ ಪುತ್ರರ ಲಗ್ನದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ೫ ರೂ. ಗಳನ್ನು ಕೊಟ್ಟಿರುತ್ತಾರೆ.

ಇದರಂತೆ ದಿವಾನಿ ಗಳಲ್ಲಿ ಸೋಮಪ್ಪ ಹುನಗುಂದ ಬಾಗಲಕೋಟೆ ಇವರಿಗೆ ಕೊಟ್ಟಿದ್ದರು ಎದ್ದನಾಳ ಪಟಪದ ವಿರುಪಾಕ್ಷಪ್ಪನವರ ಪುತ್ರಿ ನೀಲಮ್ಮನವರನ್ನು ಕೊಟ್ಟ ನಿಶ್ಚಿತಾರ್ಥವಾದ ಕಾಲದಲ್ಲಿ ಇವರು ೫ ರೂ. ಗಳನ್ನು ಶ್ರೀ ಶಿವಯೋಗಮಂದಿರಕ್ಕೆ ಕೊಟ್ಟಿರುತ್ತಾರೆ.

ಭದ್ರಪ್ಪನವರು ವೀರಬಸಪ್ಪಾ ನಾಗನೂರ ಇವರು ಶ್ರೀ ಶಿವಯೋಗಮಂದಿರಕ್ಕೆ ೫

ತಮ್ಮ ವಾಚನ ಪೇಠಿಕೆಗೆ ೩ ರೂ. ಗಳನ್ನು ಕೊಟ್ಟಿರುತ್ತಾರೆ.

ಇದೇ ಪ್ರಕಾರವಾಗಿ ಎಲ್ಲ ಮಹನೀಯರೂ ಸಹಾಯ ಮಾಡುತ್ತಾ ಹೋದರೆ ಯಾವತ್ತೂ ವಿದ್ಯಾ ಭಾರವಿಲ್ಲದೆ, ಸಮಾಜದಲ್ಲಿನ ವಿದ್ಯೋನ್ನತಿಯು ಕೆಲವರಿಗಳು ನಿರ್ವಿಘ್ನವಾಗಿ ನಡೆಯುವುವು.

ಶ್ರೀ ಶಿವಯೋಗಮಂದಿರದ ವ್ಯವಸ್ಥಾಪಕ

೧೯೧೧-೧೨ ರಲ್ಲಿ ಧಾರವಾಡದ ಲಿಂಗಾಯತ ಎಜ್ಯುಕೇಶನ್ ಫಂಡಿಗೆ ವಿವಾಹ, ದೀಕ್ಷೆ, ಮರಣ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಕಾಣಿಕೆ ಸಲ್ಲಿಸಿದವರ ಹೆಸರುಗಳು.—

ಯಾತ್ರೆ ಮಹೋತ್ಸವಕಾಲದಲ್ಲಿ—

೧	ಶ್ರೀ ಗದ್ದಿ ಮಹಾಸ್ವಾಮಿಗಳವರು ಯಾತ್ರೆ	೫೧—೦

ದೀಕ್ಷಾಕಾಲದಲ್ಲಿ—

೨	ಶಿವಲಿಂಗಪ್ಪಾ ಗದಗಪ್ಪಾ ಹಿರೇಮಠ ಕಡಗಣಿ ಕೊಲ್ಲಾಪುರ ಇಲಾಖೆ	೧೭—೮—೦

ವಿವಾಹಕಾಲದಲ್ಲಿ—

೩	ಮ॥ರಾ॥ಗಳಾದ ಮಣ್ಣುಬಸಪ್ಪ ಯೋಗಪ್ಪ ಬಸಲಿಂಗಪ್ಪರ ಶ್ರೀ ಇ॥ ಹುಬ್ಬಳ್ಳಿ	೨೫—೦—೦
೪	ವೀರಪ್ಪ ಅನ್ನದಾನಪ್ಪಾ ಮಾಪ್ಸಿ ಗದಗ	೧೦—೦—೦
೫	ಬಸಪ್ಪಪ್ಪ ವಾಲಿ ಹುಬ್ಬಳ್ಳಿ	೧೦—೦—೦
೬	ಅಡಿವೆಪ್ಪ ಶಿದ್ದಪ್ಪ ತುಪ್ಪದ ಗದಗ	೨೫—೦—೦
೭	ಚೆನ್ನಬಸಪ್ಪ ರಂಗಣ್ಣನವರ ಸವದತ್ತಿ	೨೦—೦—೦
೮	ಬಸಪ್ಪ ಕಣ್ಣೂರ ಗಜೇಂದ್ರಗಡ	೧೫—೦—೦
೯	ಅಪ್ಪಣ್ಣಪ್ಪಗೌಡಾ ಚೆನ್ನಪ್ಪಗೌಡಾ ಪಾಟೀಲ ಶಿಗ್ಗಾವಿ	೫—೦—೦
೧೦	ಕುಮಾರಗೌಡಾ ದೇಸಾಯಿ ಮುನ್ನಿಗಟ್ಟಿ	೨೦—೦—೦
೧೧	ಅಂದಾನೆಪ್ಪಾ ದೇಸಾಯಿ ಅಣ್ಣಿಗೇರಿ	೫—೦—೦
೧೨	ದುಂಡಪ್ಪಾ ಮಲ್ಲೇಶಪ್ಪಾ ಲಕಮನಹಳ್ಳಿ ಧಾರವಾಡ	೫—೦—೦
೧೩	ಬಸಪ್ಪಪ್ಪಾ ಇಚ್ಚಂಗಿ ಹುಬ್ಬಳ್ಳಿ	೧೫—೦—೦
೧೪	ಅಡಿವೆಪ್ಪಾ ಜಾಬಿಬ್ಬಿ ಕುಂದಗೋಳ	೫—೦—೦
೧೫	ಗುರುಸಿದ್ದಪ್ಪಾ ಚಕಬಸಪ್ಪಾ ನವಲಿ ಧಾರವಾಡ	೧೫—೦—೦
೧೬	ಈರಪ್ಪ ನವಲಿ ಧಾರವಾಡ	೫—೦—೦
೧೭	ಕಾಶೀನಸ್ವಲ್ಲಿ	೨೫—೦—೦
೧೮	ಶಿ॥ರಾ॥ ಬಿಕ್ಷಯ್ಯಸ್ವಾಮಿ ರಣಕಟ್ಟಿ ಮಠ ಶಿತ್ತೂರ	೧೦—೦—೦

ಮರಣಕಾಲದಲ್ಲಿ—

೧೯	ಮ॥ರಾ॥ ಮಹದೇವಪ್ಪಾ ಸಿಂದಗಿ	೧೨೫—೦—೦
೨೦	ಶ್ರೀಮತಿ ಬಸಮ್ಮನವರು ನರಗುಂದ	೩೦—೦—೦
೨೧	ಬಸಪ್ಪ ಎಮ್ಮಿ ಹುಂಡಿಗನೂರ	೧—೦—೦

ಒಟ್ಟು ೩೩೪—೮—೦

ಶಾಂತವೀರಪ್ಪಾ ಮೆಣಸಿನಕಾಯಿ,
ಅನರರಿ ಸೆಕ್ರೆಟರಿ,
ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್
ಧಾರವಾಡ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಕೊಟ್ಟೂರಿನ ಶ್ರೀ ನಿರುಪಾದಿ ವೀರಶೈವ ಮತ ಪ್ರಚೋಧಕ ಸಂಘ.

ಸೆಪ್ಟೆಂಬರ್ ೧೯೧೧ ನೇ ಇಸವಿ ಮೇ ೨೭ ನೇ ತೇದಿ ಸೋಮವಾರ ಹಗಲು ೩ ಗಂಟೆಗೆ ಇದೇ ಗ್ರಾಮದಲ್ಲಿರುವ ಜಗದ್ಗುರು ಗುರು ಬಸವಸ್ವಾಮಿಗಳ ಹಿರೇಮಠದಲ್ಲಿ ವೀರಶೈವ ಮಹನೀಯರ ಮಂಡಳಿಯು ಕೂಡಿತ್ತು. ಅದರಲ್ಲಿ ಇದೇ ಗ್ರಾಮದ ಪೇದಮೂರ್ತಿ ಪ್ರಭುಸ್ವಾಮಿಯವರ ಮಠದ ಶಿವಲಿಂಗಯ್ಯನವರು ಒಳ್ಳೆ ಸರಸದಿಂದ ಜಂಗಮಾರಾಧನೆಯನ್ನು ಮಾಡಿದರು. ತರುವಾಯ ವ॥ ನೊಣ್ಣದ ವೀರಪ್ಪನವರು ನಮ್ಮ ಮತದಲ್ಲಿ ಜೋಕೆಯಾಗ್ಯರಿರುವ ಮುಖ್ಯವಾದ ಮಹನೀಯರುಗಳನ್ನು ಸಭೆಯು ಭೇದವಿಲ್ಲದೆ ವಿಷಯ-ಪ್ರಸ್ತಾಪ ನಿರೂಪಿಸಿ, ಅದನ್ನು ಅಗತ್ಯವಾಗಿ ತಪ್ಪಿಸಬೇಕೆಂಬುದಕ್ಕೆ ಸರ್ವರಿಗೂ ಮನಮುಟ್ಟುವಂತೆ ಪ್ರತಿಪಾದನೆಮಾಡಿದರು. ಮ॥ ರಾ॥ ಜಂಬೂರಕಟ್ಟೆಯ ಬಸಪ್ಪನವರು ವೀರಶೈವರು ಅವಶ್ಯವನ್ನು ಬಿಡಬಾರದು, ಭಾಜಿಸಬಾರದು, ಅನ್ಯದೇವತೆಗಳ ಹೆಸರನ್ನು ಮಕ್ಕಳಿಗೆ ಕರೆಯಬಾರದು ಎಂಬುದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟು ಸರ್ವರಿಗೂ ತಿಳಿಯುವಂತೆ ಉಪನ್ಯಾಸ ಮಾಡಿದರು. ಈ ತರುವಾಯ ವೇ॥ ಚೆನ್ನಬಸವಯ್ಯನವರು ಮಹಾಸಭೆಯು ಆಚಾರ್ಯ ಕರ್ತರ

ದವರಿಗೆ ಅನೇಕ ಬಂಧನಗಳಾಗುತ್ತವೆ ಎಂಬುದಕ್ಕೆ ತಕ್ಕ ಉದಾಹರಣೆಗಳನ್ನು ಕೊಟ್ಟು ಸವಿನಯದಿಂದ ಬ್ರಾಹ್ಮಣರನ್ನು ನೋಡಿದ್ದಕ್ಕೆ ಸರ್ವರೂ ಕರತಾಡನವನ್ನು ಮಾಡಿ ಆನಂದಪಟ್ಟರು. ವೇ॥ ಮಿಂಚಿನಕಟ್ಟೆಯ ಮಠದ ಪಾಗೆಟಿಗೆರಿ ಚಣ್ಣವೀರಯ್ಯನವರು ಹಿಂದೆ ಹೇಳಿರುವ ಎಲ್ಲಾ ವಿಷಯಗಳನ್ನು ಪ್ರತಿಪಾದಿಸಿ ವೀರಶೈವ ಮತವು ಬ್ರಾಹ್ಮಣ್ಯಕ್ಕೆ ಕೀಳ್ಪಾಡುದು ಆಗಿರುವದು ದೇವತೆಗಳಲ್ಲಿ ಬ್ರಾಹ್ಮಣನು ಅವರ ಭಕ್ತರು ಜಂಗಮರೇ ಬ್ರಾಹ್ಮಣರು ಎಂಬ ವಿಷಯಕ್ಕೆ ಅನೇಕಗಳ ಪುರಾಣೇತಿಹಾಸಗಳ ಆಧಾರದಿಂದಲೂ ಎಲ್ಲರಿಗೆ ಸ್ವಾನುಭವದಿಂದ ಒಪ್ಪುವ ಉಪನ್ಯಾಸವನ್ನು ಮಾಡಿದರು. ವೀರಶೈವ ಮತದ ಪ್ರವೃತ್ತಿಯನ್ನೂ ಸರ್ವರಿಗೂ ತಿಳಿಯುವಂತೆ ಸನ್ಮಾರ್ಗದಿಂದ ಹೇಳಿದುದಲ್ಲದೆ ವೀರಶೈವರ ದೀಕ್ಷೆ ಕಾಲದ ಮೂರು ಜನ ಎಂಬುವ ಅನೇಕ ಪ್ರಮಾಣ ಉದಾಹರಣೆಗಳ ಪ್ರಮಾಣಿಕರವನ್ನು ಮಾಡಿ ಈ ನಿಧಿಯವರ ಅನುಷ್ಠಾನದಿಂದವನ್ನು ತೆಗೆದುಕೊಂಡು ಇದೇ ಗ್ರಾಮದಲ್ಲಿ ಒಬ್ಬ ವರದಿಗಾರರು ಒಂದಿದ್ದೆವು ಮತದ ವಿಷಯಕ್ಕೆ ವಿಕ್ರಯಿಸುವ ತಂತ್ರಗಳಲ್ಲಿ ಪಾತಕತ್ವ ನನ್ನು ತಿಳಿಯದ ಹೀನ್ಯದ ಬಣಕಾರ ಗೌಡ ಮೊದಲಾದವರು ನಂಥ ಸಮಾಜವೆಂದುಕೊಂಡು ಕೋಟಿ ಕವಿಗಳನ್ನು ಕರೆದು, ನಮ್ಮಲ್ಲಿ ನಮ್ಮ ಭಂಗವಡೆಯೆಂದು ಅದರಲ್ಲಿ ಮಹಾದ್ವಾರ ಹಿಂದೆ ನಮ್ಮ ಬಾಗದಿಂದ ಹೇಳಿ ತೆಗೆದುಕೊಂಡು ನಾನೇ ಒದನ್ನು ಉಪಯೋಗಿಸುವುದಿಲ್ಲವೆಂತಲೂ ನಮ್ಮ ಒಕ್ಕಲು ಮಾಡಿದರಿಗೆ ಕೊಡುವುದಿಲ್ಲವೆಂತಲೂ ಇದರಿಂದ ನಮಗೆ ದೋಷವು ಪ್ರಾಪ್ತವಾಗುವುದಿಲ್ಲವೆಂತಲೂ ಹೇಳುತ್ತಿದ್ದರು. ಈ ಕೆಟ್ಟವೃತ್ತಿಗಳನ್ನು ತಪ್ಪಿಸಬೇಕೆಂದ. ಈ ನಿಧಿಯಲ್ಲಿ ದರಾವಲಯ ನಂದುದವನ ಅಂದರೆ ... ನೇ ತೇದಿಯ ದಿನ ಇದೇ ಗ್ರಾಮದಲ್ಲಿ ಊರವ್ವನ ವಿಗ್ರಹದ ಉತ್ಸವದಲ್ಲಿ ಕೋಣ ಕುರಿಗಳನ್ನು ಕಡಿಸದೆ, ವೀರಶೈವ ಮತದ ಧರ್ಮಕ್ಕನುಸರಿಸಿ ಇದ್ದರು. ಮುಂದಾದರೂ ಪ್ರಾಯಶ್ಚಿತ್ತ ಇದರಲ್ಲಿ ನಮ್ಮ ದಾಟು ಅದೇ ಎಂಬ ಮಹಾದಶನ ದ ಹಿಂಥಿಮಾನವನ್ನು ಬಿಟ್ಟು ನಮ್ಮ ಮತದ ಪಾವಿತ್ರ್ಯವನ್ನು ಕಾಪಾಡಿ ತಮಗೂ ತಮ್ಮ ಮಾತಿಗೂ ಗೌರವ ತಂದು ಕೊಳ್ಳುವರೆಂದು ನಂಬಿದ್ದೇವೆ. ಎಲ್ಲ ವೀರಶೈವ ಬಾಂಧವರು ಎಲ್ಲೆಲ್ಲಿ ಮತವಿರುದ್ಧ ಆಚರಣೆಯಾಗುವುದೋ ಅಂಥ ಗ್ರಾಮಗಳನ್ನು ಸಹ ತಿಳಿಸಿ ನಮ್ಮ ಮತಕ್ಕನುಸರಿಸಿದ ಧೈವವನ್ನೇ ಭಜಿಸಬೇಕೆಂದು ತಿಳಿವಳಿಕೆಯನ್ನು ಮಾಡಿ ಪರಮೇಶ್ವರನ ಪ್ರೀತಿಗೆ ಪಾತ್ರರಾಗಬೇಕೆಂದು ನನ್ನ ಮಾತಿನ ... ಪ್ರಾರ್ಥನೆಯನ್ನು ಮಾಡಿ ವೀರಶೈವರಿಗೆ ತಿಳುವಳಿಕೆಯನ್ನು ಪ್ರೋತ್ಸಾಹವನ್ನೂ ಉಂಟುಮಾಡಿದವರ ಹೆಸರುಗಳನ್ನು ಇದರ ಬಿಗತವಕೊಟ್ಟಿದೆ.

ಮತಾಭಿಮಾನಿ.

(ಸ್ಥಳ ಸಂಕೋಚದಿಂದ ಆ ಹೆಸರುಗಳನ್ನೆಲ್ಲಾ ಪ್ರಕಟಿಸಲಾಗಲಿಲ್ಲ.—ಪ ಸಂ)

ಶ್ರೀ ಬಿ.ಎಸ್. ವೀರಶೈವ ವಿದ್ಯಾಭಿವೃದ್ಧಿ ಸಂಬಂಧಿಸಿದ ಸಂಘ.

ತಾ॥ ೨೦—೩—೧೨ ರಲ್ಲಿ ಸಂಘದ ಪ್ರೆಸಿಡೆಂಟರಾದ ರಾಜಸಭಾಭೂಷಣ ದಿವಾನ್ ಬಹದೂರ್ ವಿ॥ ಕೆ. ಪಿ ಪುಟ್ಟಣ್ಣ ಶೆಟ್ಟರ ಗೃಹದಲ್ಲಿ ಕೂಡಿದ್ದ ಮೇಲೆ ಕಂಡ ಸಂಘದ ೧೯೧೧-೧೨ ನೆ ವರ್ಷದ ಜನರಲ್ ಕಮಿಟಿಯ ಮೀಟಿಂಗಿನಲ್ಲಿ ನಡೆದ ನಡವಳಿಕೆಗಳು —

೧. ಈ ಕೆಳಗೆ ಕಂಡ ದೊಡ್ಡ ಮನುಷ್ಯರು ಮೀಟಿಂಗಿಗೆ ದಯಮಾಡಿದ್ದರು — (೧) ರಾಜಸಭಾಭೂಷಣ ದಿವಾನ್ ಬಹದೂರ್ ವಿ॥ ರಾ॥ ಕೆ. ಪಿ ಪುಟ್ಟಣ್ಣಶೆಟ್ಟರು (ಅಧ್ಯಕ್ಷರು), (೨) ವ॥ ರಾ॥ ಗಳಾದ ಎಚ್. ಕೆ. ವೀರಬಸವಯ್ಯನವರು ಬಿ. ಎ, ಬಿ. ಎಲ್., (೩) ಸಾಹುಕಾರ್ ಕಾರಪ್ಪನವರು ಚಿತ್ರದುರ್ಗ, (೪) ಕೆ ಸಿದ್ದರಾಮಯ್ಯನವರು, ಬಿ ಎ., (೫) ಯಜಮಾನ ಬಸಪ್ಪನವರು, (೬) ಸಪ್ಪನ ವೀರಭದ್ರಪ್ಪನವರು, (೭) ಗಂ. ಬಾಪಣ್ಣನವರು (ಟ್ರೆಜರರ್), (೮) ಕಂ. ಶಿವಪ್ಪನವರು, (೯) ಗುಬ್ಬಿ ಶಿವರಾಂಪ್ಪನವರು, (೧೦) ಸಿದ್ದಬಸವಪ್ಪನವರು, (೧೧) ಜೆ. ಕೆ. ರುದ್ರಪ್ಪಯ್ಯನವರು, (೧೨) ಕರಣಿಕ್ ಶಿದ್ಧಲಿಂಗಪ್ಪನವರು, (೧೩) ವಾರಣಿ ಅಪ್ಪಣ್ಣನವರು, ಗುಬ್ಬಿ, (೧೪) ಗುಬ್ಬಣ್ಣನವರು, (೧೫) ಜಿ. ಶಾಂತವೀರಪ್ಪನವರು, ಬಿ. ಎ., (ಸೆಕ್ರೆಟರಿ).

೨. ಸೆಕ್ರೆಟರಿಯವರಿಂದ ಓದಲ್ಪಟ್ಟ ೧೯೧೧-೧೨ ನೇ ವರ್ಷದ ರಿಪೋರ್ಟನ್ನು ಕಮಿಟಿಯವರು ಅನುಮೋದಿಸಿದರು.

೩. ಆಡಿಟರುಗಳ ರಿಪೋರ್ಟು ಓದಲ್ಪಟ್ಟಿತು. ಅದರಲ್ಲಿ ಕಂಡ ಸೂಚನೆಗಳನ್ನು ಕುರಿತು ವಿಚಾರಮಾಡಲಾಯಿತು.

೪. ಮೀಟಿಂಗಿಗೆ ಬಂದಿದ್ದ ಮೆಂಬರುಗಳಿಗೆ ...

ಪ್ರಾಯಶ್ಚಿತ್ತ ಮೇಲೆಗೆ ಪ್ರೈಸಿಕರ ... ದೀನನ ಪ್ರಮಾಣ ಗೋಸ್ಕರ ... ನೆ ನಿಯಾಮಕನನ್ನು ಕೆಳಗೆ ಕ

ಭಾರತೀಯರೂ ಮಾಂಸ ಭಕ್ಷಣವೂ

ಯುರೋಪ್ ಖಂಡದಲ್ಲಿ ಹುಟ್ಟಿದವರು ಮಾಂಸ ಭಕ್ಷಕರು ... ಹುಟ್ಟಿದವರು ಶಾಕಾಹಾರಿಗಳು. [illegible] ... ಮಾಂಸಾಹಾರದ ದೋಷವನ್ನು ... [illegible] ... "ನಿರ್ಮಾಂಸಾಹಾರಿಗಳು ... ಹಿಂದೂಗಳಿಗೂ ... ಸ್ವಾತಂತ್ರ್ಯ ..." ... [illegible]

... ಯುರೋಪ್ ದೇಶದವರು ... ಮಾಂಸಾಹಾರಿಗಳಿಂದ ಹಿಂದೂಗಳನ್ನು ... [illegible] ... " ಎಂಬುದಾಗಿ ಹೇಳಿರುವರು ... [illegible]

... ಹಿಂದೂಗಳು ... [illegible] ... ತುಂಬಿದೆ ಕಂಬನಿ ..." ಎಂಬುದಾಗಿ ಹೇಳಿದರು.

ಆನೆಯು ಬೇಟೆಯಲ್ಲಿ ... [illegible] ... ವರುಷಗಳ ... ಹಿಂದ ... ಮಾಂಸ ... [illegible] ... ಪರಿಣಮಿಸಿ ... ಬರೆದಿರುವರು ... ದೊಡ್ಡ ... ದಿನವೂ ... ಕೋಳಿಯ ... ಕಟ್ಟುವ ... ಮಾಂಸ ... [illegible] ... ಎಂಥಾ ಪಟ್ಟನ್ನಾದರೂ ಸಹಿಸಿಕೊಳ್ಳುತ್ತದೆ ... [illegible] ... ಮಾಂಸ ತಿನ್ನದಿರು ... ಕಾರಣ ... ಯುರೋಪಿಯನರಲ್ಲಿ ... ಮಾಂಸ ತಿನ್ನುತ್ತಿದ್ದ ... ಬಲಾಢ್ಯವಾಗಿಯೂ, ಶಾಂತವಾಗಿಯೂ, ... ಇದ್ದುಕೊಂಡು ... ಮನುಷ್ಯ ... ಭಕ್ಷಿಸುವ ಆಹಾರಗಳಲ್ಲಿ ಮಾಂಸವು ... ಬಿರಾಗಿ ಇಷ್ಟಲ್ಲಾಗದ ವೈದ್ಯರು ಹೇಳುತ್ತಿರುವರು. ಅದರಿಂದ ಮಾಂಸ ಭಕ್ಷಣೆಯನ್ನು ತ್ಯಜಿಸುವುದು ಒಳ್ಳೆಯದು.

(ಸ್ವದೇಶಾಭಿಮಾನಿ)

ಸಂಘ ಸಂಸ್ಕರಣ ಭಾಷಣ

ಮದರಾಸು ಅಧಿಪತ್ಯಕ್ಕೆ ಸೇರಿದ ಕೃಷ್ಣಾ ಗುಂಟೂರು ... ಗಳ ಸಂಬಂಧಿಸಿದ ... ಸಂಘ ಸಂಸ್ಕರಣ ... ಸಭೆಗಳು ... ತಿಂಗಳ ಕೊನೆಯಲ್ಲಿ ... ನಡೆದುವು. ಸಂಸ್ಕರಣ ಸಭೆಗೆ ... ಕೆ. ವಿ. ಲಕ್ಷ್ಮಣರಾವ್ ಪಂತಲು ಎಂ. ಎ, ರವರು ಅಧ್ಯಕ್ಷರಾಗಿದ್ದರು. ಅವರು ಮಾಡಿದ ಭಾಷಣವು ... ಅದರ ಸಾರಾಂಶವನ್ನು ಇಲ್ಲಿ ... [illegible]

ಸಂಸ್ಕರಣವೆಂದರೆ ತಿದ್ದುವುದು. ಇದು ಸಂಘದ ... ಸಂಘಕ್ಕೆ ... ಮುಖ್ಯವಾಗಿರುವುದು

[illegible] ... ೧

... ೨

... ೩

... ೪

ಅವುಗಳ ... [illegible] ... ಅವರಿಗೆ ... ಅವರ ... ಅಂತ್ಯಜಾತಿಯವರ ... ಅಗ್ನಿ ... [illegible]

ಅಂತ್ಯಜಾತಿಯ ... [illegible] ... ಅಂತ್ಯಜಾತಿಯವರನ್ನು ... ಪೂರ್ವಜರು ... ಈ ಜಾತಿಯವರ ... ಅವರ ... [illegible] ... (ಮಾದಿಗರು) ... [illegible]

[illegible]

(ಇನ್ನೂ ಇದೆ)

ನಾಗಪಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವವು

[illegible] ... "ಕನ್ನಡಿಗರ ..." ... [illegible]

ಕಲ್ಲಿಸಿಸಿ, ಪ್ರತಿಸಂಘ್ಯವಿಗೂ ಭಾಷಾಭಿಮಾನ ದೇಶಾಭಿಮಾನಗಳು ಇರಬೇಕಾದುದಾವಶ್ಯಕವೆಂದು ನಿರೂಪಿಸಿದರು. ಬಳಿಕ ಸಂಗೀತಕ್ರಮಣವೂ, ಪುಷ್ಪಗಂಧ ತಾಂಬೂಲಗಳ ವಿನಿಯೋಗವೂ ನಡೆದು ಚಕ್ರವರ್ತಿಯಾದವರ ಮತ್ತೂ ಸರ್ಕಾರದ ಸಿಂಹಾಸನಾಧೀಶರಾದ ಮೈಸೂರು ಮಹಾರಾಜರ ಮತ್ತೂ ಸ್ಥಳಾಧಿಕಾರಿಗಳಾದ ಕಲೆಕ್ಟರ್ ಸಾಹೇಬರ ಜಯದಿಂದ ಜಯಘೋಷವು ಮಾಡಲ್ಪಟ್ಟು ಸಭೆಯು ಮುಗಿಯಿತು.

ಈ ಸಂಘದ ಸಂಕ್ಷೇಪ ವೃತ್ತಾಂತವನ್ನು ಸವಿಸ್ತಾರವಾಗಿ ಬರೆದ ಭಾರತವಾಸಿ ಕನ್ನಡಿಗರಾದ ನಮ್ಮ ಬಾಂಧವರು ನೋಡುತ್ತಿರುವ ಭಾಷಾಸೇವೆಯು ಉತ್ಕ್ರಾಂತ ಪ್ರೇಮಕ್ಕಾಗಿ ಸ್ವದೇಶ ಭಾಷಾಭಿಮಾನವು ಕನ್ನಡನಾಡಿಗರಲ್ಲಿ ಭಾಷಾಭಿಮಾನವಿಲ್ಲದ ಕಾರಣದಿಂದ ಅವರ ಪ್ರಯತ್ನಕ್ಕೆ ತಕ್ಕಷ್ಟು ಜಯವು ಸಿಕ್ಕದೆ ಯಿರುವುದಕ್ಕಾಗಿ ಖೇದ ವಿಷಾದವೂ ಉಂಟಾಗುತ್ತಿದೆ. ಕನ್ನಡಿಗರು ಪಡೆದಿರುವ ಒಂದು ಬಹುಮಾನವನ್ನು ಪಡೆಯಬೇಕೆಂದು ಈ ಸಂಘದವರು ೧-೨ ತರಗತಿಗಳನ್ನೇ ಸ್ಥಾಪಿಸಿದ್ದರೂ ೧-೨ ತರಗತಿಗಳಲ್ಲಿ ಯಾರೂ ಬರದೆ ಉಳಿದ ತರಗತಿಗಳಿಗೆ ೧೪ ಮಂದಿಗಳು ಮಾತ್ರವೇ ಬಂದಿದ್ದರೆಂಬ ಸಂಗತಿ ಸಾಕ್ಷ್ಯ. ಪ್ರತಿವರ್ಷವೂ ಸಂಘಕ್ಕೆ ತಕ್ಕಷ್ಟು ವರಮಾನವಿಲ್ಲದೆ ವೆಚ್ಚವು ಹೆಚ್ಚುತ್ತಿಯಾಗುತ್ತಿರುವುದಷ್ಟು, ಇದುವರೆಗೆ ಸಂಘದ ಹಣದ ಬಾಕಿ ೪೦೦೦ ರೂಪಾಯಿಗಳವರೆಗೆ ಸಾಲವು ಹೊತ್ತಿರುವುದೆಂಬುದಷ್ಟು, ಸಂಘದ ಆಲಯದ ನಿರ್ಮಾಣಕ್ಕಾಗಿ ಮೈಸೂರು ಗವರ್ನಮೆಂಟಿನಿಂದ ೩೦೦೦, ಬೊಂಬಾಯಿ ಗವರ್ನಮೆಂಟಿನಿಂದ ೩೦೦೦ ರೂಪಾಯಿಗಳು ಸಂದಿದ್ದರೂ ಕಟ್ಟಡವು ಅರ್ಧಾಂತವಾಗಿ ನಿಂತಿರುವುದೆಂಬುದಷ್ಟು ಕೇಳಿದರೆ ಭಾಷಾಸೇವಾ ಪ್ರಯತ್ನದಲ್ಲಿ ಕನ್ನಡಿಗರು ಎಷ್ಟುಮಟ್ಟಿಗೆ ಶಿಥಿಲಪ್ರಯತ್ನರಾಗಿರುತ್ತಿರುವರೆಂಬುದು ಗೊತ್ತಾಗುವುದು. ಆಂಧ್ರ, ಗುಜರಾತಿ, ಮರಾಠಿ, ವಂಗ ಮೊದಲಾದ ಭಾಷೆಗಳ ಏಳ್ಗೆಗಾಗಿ ಆಯಾ ದೇಶೀಯರು ಇದುವರೆಗೂ ಈಗಲೂ ಅನಂತ ಪ್ರಯತ್ನಗಳನ್ನು ಮಾಡಿಯೂ, ಮಾಡುತ್ತಲೂ ಇದ್ದಾರೆ. ಆ ಆ ನಾಡಿನ ಪ್ರಭುಗಳೂ, ಜಮೀನ್ದಾರರೂ, ಶ್ರೀಮಂತರೂ ತಾವೇ ಸಭೆಗಳಲ್ಲಿ ಅಗ್ರಸ್ಥಾನವನ್ನು ವಹಿಸಿ ನಿಂತು, ಭಾಷಾಭಿವೃದ್ಧಿಯ ವಿಷಯವಾಗಿ ವಿದ್ವಾಂಸರಿಗೂ ಪತ್ರಿಕರ್ತರಿಗೂ ಧನಸಹಾಯಾದಿಗಳ ಮೂಲಕ ವಿಶೇಷವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಅದಕ್ಕಾಗಿ ಅಲ್ಲಲ್ಲಿಗೆ ಅನೇಕ ಸಂಘಗಳು ಸ್ಥಾಪಿತವಾಗಿವೆ. ನಮ್ಮ ಕನ್ನಡ ನಾಡಿನಲ್ಲಿ ಭಾಷಾಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಸಂಘವೆಂದರೆ ಇದೊಂದೇ ಆಗಿರುವುದು. ಕೋಟ್ಯಂತರಜನ ಕನ್ನಡಿಗರಿದ್ದರೂ ಇದೊಂದು ಸಂಘದ ಸ್ವಾತಂತ್ರ್ಯಯತ್ನವೂ ಒತ್ತಾಯವಿಲ್ಲದೆ ಅಧೋಮುಖವಾಗುತ್ತಿರುವುದೆಂಬ ಸಂಗತಿಯು ನಿಜವಾಗಿಯೂ ಕನ್ನಡಿಗನಿಸಿಕೊಳ್ಳುವ ಪ್ರತಿಯೊಬ್ಬನಿಗೂ ಲಜ್ಜಾಸ್ಪದವಾಗಿದೆ. ಸಂಘದಿಂದ ಮುದ್ರಿತವಾಗಿರುವ ಗ್ರಂಥಗಳೂ, "ವಾಗ್ಭೂಷಣ" ವೆಂಬ ಮಾಸಪತ್ರವೂ ಪ್ರತಿಯೊಬ್ಬರಿಗೂ ವಿವೇಕವರ್ಧಕಗಳಾಗಿವೆ. ಪಠನೀಯವಾದ ಅವುಗಳನ್ನು ಪರಿಗ್ರಹಿಸುವುದರಲ್ಲಿ ಸಾಧಾರಣ ಪ್ರಿಯರುಗಳು ಉತ್ಸಾಹಶೀಲರಾಗುತ್ತ ಬಂದರೂ, ಉದಾತ್ತರಾದ ಜನರು ಈ ಸಂಘದ ಸಭಾಸದರಾಗಿಯೋ ಕಟ್ಟಡದ ಸಂಡಿಗೆ ಧನಸಹಾಯನೀಡಿಯೋ ತಮ್ಮ ಬುದ್ಧಿಶೀಲವನ್ನು ತೋರುತ್ತ ಬಂದರೂ, ಈ ಸಂಘವು ಇನ್ನಷ್ಟು ಕಾಲ ಬಾಳಿ ಭಾಷಾಸೇವೆಯ ಮೂಲಕ ದೇಶಕ್ಕೆ ಉಪಕಾರವೊದಗ ಸಮರ್ಥವಾಗುವುದು.

ಮೈಸೂರ್ ಸ್ಟಾರ್

ಅಗಸ್ಟ್ ತಿಂಗಳು ೧೮ನೇ ತಾರೀಖು ಸೋಮವಾರ

ಮೈಸೂರು ಸಂಪದಭ್ಯುದಯ ಸಮಾಜವು

ಈ ಸಭೆಯು ಕೆಲಸಗಳು ನಮ್ಮ ಸಂಸ್ಥಾನದ ಮಂತ್ರಿವರ್ಯರ ಅಧ್ಯಕ್ಷತೆಯಲ್ಲಿ ಒಂದು ವಾರದವರೆಗೂ ರಾಜಧಾನಿಯಲ್ಲಿ ನಡೆದುವು. ಚರ್ಚೆಯಿಂದ ನಿಶ್ಚಿತವಾದ ವಿಷಯಗಳೆಲ್ಲಾ ರಹಸ್ಯವಾಗಿರುವುದರಿಂದ ಮುಂದೆ ಅವುಗಳನ್ನೆಲ್ಲಾ ಗವರ್ನಮೆಂಟಿನವರೇ ಪ್ರಕಾಶಪಡಿಸಬಹುದು. ಕಳೆದ ವರ್ಷದಲ್ಲಿ ಈ ಸಮಾಜದ ಉಪಸಭೆಗಳವರು ವಿದ್ಯಾಭ್ಯಾಸ, ಕೃಷಿ, ವಾಣಿಜ್ಯ, ಕೈಗಳ ಅಭಿವೃದ್ಧಿಗಾಗಿ ತಮ್ಮ ಪರಿಶೀಲನೆ ಯಿಂದ ನಿಶ್ಚಯಿಸಿ, ಸರ್ಕಾರಕ್ಕೆ ನಿವೇದಿಸಿದ್ದ ವಿಷಯಗಳ ಸಂಗ್ರಹಕ್ಕಾಗಿ ಮಾತ್ರ ಹೊರಬಿದ್ದಿರುವುವು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ:— ೧ ವಿಶ್ವವಿದ್ಯಾಲಯವನ್ನು ಉಚಿತವಾಗಿ (ಶೀಘ್ರವಾಗಿ) ಸ್ಥಾಪಿಸಿ, ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೆ ತರುವುದಕ್ಕಾಗಿ ಸಂಸ್ಥಾನಕ್ಕೆಲ್ಲಾ ಅನ್ವಯಿಸುವಂತೆ ಒಂದು ವಿಧಿಯನ್ನೇರ್ಪಡಿಸಬೇಕು. ಅವಕ್ಕಾಗಿ ಒಂದು ಹೊಸ ತೆರಿಗೆ ... ಸಾಕಷ್ಟು ... ಬೇಕು ...

ಳನ್ನು ೭ ಲಕ್ಷ ರೂ ವೆಚ್ಚಮಾಡಿ ಸ್ಥಾಪಿಸಬೇಕು. ಈ ಸೂಚನೆಯು ಅತ್ಯಂತ ಸಮಂಜಸವಾದುದೆಂಬುದಕ್ಕೆ ಬಿತ್ತರಿಸಬೇಕಾಗಿಲ್ಲ. ಎಲ್ಲಕ್ಕಿಂತಲೂ ಮೊದಲು ಗವರ್ನಮೆಂಟಿನವರು ಇದ್ದ ಕಡೆಗೆ ಗಮನಿಸಿ, ಕಾರ್ಯಾರಂಭಮಾಡಿದರೆ, ಅವರು ತಮ್ಮ ಹಣಗಳನ್ನು ಸಂಗ್ರಹಿಸುವುದಕ್ಕಾಗಿ ಮಾಡುವ ದಕ್ಕಾಗಿ ಎಲ್ಲರೂ ಪ್ರಯತ್ನಗಳೆಲ್ಲಾ ಸುಲಭವಾಗಿ ಈಡೇರುವುದಕ್ಕೆ ಅವಕಾಶವಾಗುವುದು. ಬಲಾತ್ಕಾರ ವಿದ್ಯಾಭ್ಯಾಸಕ್ಕೆ ಆರಂಭಿಸಿದರೆ ಅನೇಕ ಗ್ರಾಮಾಂತರಗಳಲ್ಲಿ ಹೊಸದಾಗಿ ಶಾಲೆಗಳ ಸ್ಥಾಪನೆಯನ್ನು ಮಾಡಬೇಕಾಗುವುದರಿಂದ ಅದಕ್ಕಾಗಿ ೩-೪ ವರ್ಷಗಳ ವರೆಗೂ ೧೦ ಲಕ್ಷದಂತೆ ವೆಚ್ಚ ಮಾಡುತ್ತ ಬಂದರೆ ಮತ್ತೂ ಸಂಸ್ಥಾನದ ಅಂಥ ಶಾಲೆಗಳು ಸಿದ್ಧವಾಗುತ್ತ ಬಂದಹಾಗೆಲ್ಲಾ ಮೊದಲು ಬಲಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ಪ್ರವರ್ತಿಸುತ್ತಾ ದಿನಕ್ರಮೇಣ ಸರ್ವತ್ರ ವ್ಯಾಪಿಸುವಂತೆ ಮಾಡಬಹುದು.

ಮತ್ತೂ ಉಪಾಧ್ಯಾಯರನ್ನು ಅನುಮೋದಿಸುವ ಶಾಲೆಗಳನ್ನು ಏರ್ಪಡಿಸಬೇಕು. ಸ್ತ್ರೀ ವಿದ್ಯಾರ್ಥಿನಿಯರಿಗೆ ಶಿಕ್ಷಣವನ್ನು ಏರ್ಪಡಿಸಬೇಕು. ಪಂಚಮರ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹವನ್ನು ಕಲ್ಪಿಸಬೇಕು. ಎಂಬ ವಿಷಯಗಳಿಗೆ ಉಚಿತವಾದ ಉಪಾಯಗಳನ್ನೂ ಈ ಸಭೆಯವರು ಸೂಚಿಸಿರುತ್ತಾರೆ. ಅವೆಲ್ಲಾ ಸಮಂಜಸವಾಗಿವೆ. ಮತ್ತೂ ಪಂಚಮರಲ್ಲಿ ದೊಡ್ಡ ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾದವರಿಗೆ ಸರ್ಕಾರದಲ್ಲಿ ತಕ್ಕ ಅಧಿಕಾರವನ್ನು ಕೊಡುತ್ತ ಬರಬೇಕೆಂಬ ವಿಷಯವು ಕೂಡ ಈ ಸಭೆಯಲ್ಲಿ ಚರ್ಚೆಗೆ ಬಂದಿದ್ದು ಅನುಮೋದಿತವಾಯಿತೆಂದು ಕೇಳುತ್ತೇವೆ. ಅಂಥ ಪ್ರೋತ್ಸಾಹವಿರಬೇಕಾದುದು ಅವರಿಗೆ ಅವಶ್ಯಕವೂ ನ್ಯಾಯವೂ ಆಗಿರುತ್ತದೆ. ಮದ್ರಾಸಿಗೆ ಸಂಬಂಧವಿಲ್ಲದಂತೆ ಮೈಸೂರು ಸಂಸ್ಥಾನಕ್ಕೇ ಕೇವಲ ಪರೀಕ್ಷಕವಾಗಿರದೆ ಬೋಧಕವೂ ಆಗಿರುವ ಒಂದು ವಿದ್ಯಾಪೀಠವು (ಯೂನಿವರ್ಸಿಟಿ) ಸ್ವತಂತ್ರವಾಗಿರಬೇಕೆಂದು ಈ ಸಭೆಯವರು ಸೂಚಿಸಿದ್ದಾರೆ. ದಿನಕ್ರಮೇಣ ಧನಾನುಕೂಲ್ಯವಾದಂತೆ ಉತ್ತರೋತ್ತರ ಇದನ್ನೂ ಗವರ್ನಮೆಂಟಿನವರು ನೆರವೇರಿಸಬಹುದಾಗಿದೆ.

ಕೈಗಾರಿಕೆಯು ಮತ್ತೂ ವ್ಯಾಪಾರದಭಿವೃದ್ಧಿಯ ವಿಷಯವಾಗಿ ಕೊಟ್ಟಿರುವ ಸೂಚನೆಗಳಲ್ಲಿ—೧ ಈ ದೇಶದ ನಾಡಿನಲ್ಲಿ ಜೀವದಶಕ್ತಿಗೆ ಉಪಯೋಗವಾಗತಕ್ಕ ಮೂಲಗಳು ಬಹಳ ಜಾತಿಯವುಗಳು ಇರುವುದರಿಂದ ಜೀವದ ಶಕ್ತಿಯನ್ನು ಮಾಡುವ ಕಾರ್ಯಾಲಯವೊಂದನ್ನು ಸ್ಥಾಪಿಸಬೇಕು. ಪರಿಶೀಲನೆ ಸುತ್ತಿನಲ್ಲಿ ವಿಶೇಷವಾಗಿ ಅರಳಿಯ ಹುಟ್ಟುವ ಯಾಗುವುದರಿಂದ ಅಲ್ಲಿ ನೇಯುವ ಯಂತ್ರಾಲಯವೊಂದನ್ನು ಸ್ಥಾಪಿಸಬೇಕು. ಮೈಸೂರು ದೇಶದಲ್ಲಿ ವರ್ಷ ೧ ಕ್ಕೆ ೧ ಕೋಟಿ ರೂ. ನ ರೇಶಿಮೆಯು ಸಿದ್ಧವಾಗುತ್ತದೆ. ಅದರಲ್ಲಿ ಕೆಲಸಕ್ಕೆ ಬಾರದೆಂದು ಬಹುಭಾಗವು ವ್ಯರ್ಥವಾಗಿ ಹೋಗುತ್ತದೆ. ಅದನ್ನೂ ಯಂತ್ರಗಳಿಂದ ಸೂಲುಮಾಡಿದರೆ ೧ ಲಕ್ಷ ರೂ ನಷ್ಟು ಲಾಭವಾಗುತ್ತದೆ. ಈ ಕಾರ್ಯಕ್ಕಾಗಿಯೂ ಒಂದು ಸಂಘವನ್ನು ಸ್ಥಾಪಿಸಬೇಕು. ಮತ್ತೂ ಅನುಕೂಲವಾದ ಕೆಲವೆಡೆಗಳಲ್ಲಿ ಕಾಳಿನಿಂದ ಎಣ್ಣೆ ತೆಗೆಯುವ ಯಂತ್ರಾಲಯಗಳನ್ನು ಸ್ಥಾಪಿಸಬೇಕು. ಕಾಗದವನ್ನು ಮಾಡುವ ಯಂತ್ರಾಲಯವನ್ನು ಸ್ಥಾಪಿಸಬೇಕು. ಅರಗು ಗಂಧದೆಣ್ಣೆ ಗಳನ್ನು ಮಾಡುವ ಕಾರ್ಯಾಲಯಗಳನ್ನು ಸ್ಥಾಪಿಸಿದರೆ ಲಾಭಕರವಾಗುವುದು. ಮೈಸೂರು ಬೆಂಗಳೂರುಗಳಲ್ಲಿ ಕೊಟ್ಟರಿಯ ಕ್ಕೆ ತೆಗೆಯುವ, ಚರ್ಮವನ್ನು ಹದಮಾಡುವುದು, ನೀರನ್ನು ಬಾವಿಗಳಿಂದೆತ್ತಿ ವ್ಯವಸಾಯಕ್ಕುಪಯೋಗಿಸುವುದು ಇತ್ಯಾದಿಯಾದ ಸಣ್ಣ ಸಣ್ಣ ಕೆಲಸಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಮಾಡಿಸಬಹುದು. ದೇಶದ ಪ್ರಜೆಗಳೆಲ್ಲರಿಗೂ ಉಪಯೋಗಸುವಂಥ ಒಂದು ಜನವಿಮೆಯ ಭಂಡಾಗಾರವನ್ನು ಸ್ಥಾಪಿಸಬಹುದು. ಕೆಲವೆಡೆ ಹೊಸದಾಗಿ ರೈಲುಮಾರ್ಗವನ್ನು ಸ್ಥಾಪಿಸಬೇಕು. ಕೈಗಾರಿಕೆಯ ಅಭಿವೃದ್ಧಿಯ ಕೆಲಸಗಳಿಗೋಸ್ಕರ ಬೇಕಾಗುವ ವೆಚ್ಚ ವೆಚ್ಚಕ್ಕಾಗಿಯೂ ಸಹ ಪ್ರಜೆಗಳ ಮೇಲೆ ಒಂದು ಹೊಸ ಕಂದಾಯವನ್ನು ಹಾಕಿದರೂ ಹಾಕಬಹುದು, ಇತ್ಯಾದಿಯಾಗಿ ಅವರ ವರದಿಯಲ್ಲಿ ಕಾಣಿಸಿದ್ದಾರೆ.

ಈ ಸೂಚನೆಗಳೆಲ್ಲಾ ದೀರ್ಘವಾದ ಪರ್ಯಾಲೋಚನೆ ಯಿಂದಲೂ, ಪರಿಶೋಧನೆಯಿಂದಲೂ, ಅನೇಕ ಸ್ಥಳಗಳ ಸಂಚಾರದ ಮೂಲಕ ಲಭ್ಯವಾದ ಅನುಭವದಿಂದಲೂ ಸಹ ಮಾಡಲ್ಪಟ್ಟಿವೆಯೆಂದು ಗೊತ್ತಾಗುತ್ತದೆ. ಈ ಸಮಾಜವು ಸ್ಥಾಪಿತವಾಗಿ ಸ್ವಲ್ಪಕಾಲವಾಗಿದ್ದರೂ ಇಷ್ಟರ ವಿಚಾರಗಳು ಬಹುದೂರದವರೆಗೂ ನಡೆಸಿರುವೆಂಬುದನ್ನು ಕೇಳಿದರೆ ದೇಶೀಯರಾದ ಪ್ರಜೆಗಳೆಲ್ಲರೂ ಸಂತೋಷಪಡಬಹುದು. ಆದರೆ ಧನಕ್ಕೇ ಇಷ್ಟು ಮುಖ್ಯವಾಗಿರುವ ಈ ಸಮಾಜದ ಕೆಲಸಗಳು ... ಯ ... ಉತ್ಸಾಹದಿಂದ ನಡೆಯು

ವಿಶೇಷವಾಗಿ ಉಪಕಾರಕ
ಕ್ಕೆ ಸೂಚಿಸಿಯವಿಲ್ಲ. ಈ ಸೂ
ಎಷ್ಟುಗಳ ಮೇಲೆ ಹಚ್ಚಿ

ದೇವರ ... ನಿರ್ಮಾಣವಾಗಿರುವುದೆಂಬ ದನ್ನು ಮುಂದೆ ತಿಳಿಯಬೇಕಾಗಿದೆ.

ಅಂತೂ ಈ ಸಭೆಯಲ್ಲಾದ ತೀರ್ಮಾನಗಳಲ್ಲಿ ಬಹುಭಾಗದವುಗಳನ್ನೆಲ್ಲಾ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಈಡೇರಿಸಿ ಕೊಡದೆ ಹೋದರೆ, ಈ ಸಮಾಜದ ಕಾರ್ಯವು ಉದ್ದೇಶವು ಸಾರ್ಥಕವಾಗುವುದಿಲ್ಲ. ಅದನ್ನು ಈಡೇರಿಸಬೇಕಾದರೆ, ಬಹಳ ಧನಸಹಾಯವು ಬೇಕಾಗುವುದು. ಅದಕ್ಕಾಗಿ ಹೊಸ ಕಂದಾಯವನ್ನು ಪ್ರಜೆಗಳ ಮೇಲೆ ಹೊರಿಸುವುದೆಂದರೆ ಬಲವಾಗಿ ಹಿಡಿಯುವುದಕ್ಕಿಂತಲೂ, ಮಿತಿಮೀರಿ ಕಲ್ಪಿಸಲ್ಪಡುತ್ತಿರುವ ರಾಜ್ಯಕಾರ್ಯನಿರ್ವಾಹಕ ಉದ್ಯೋಗಗಳನ್ನು ಕಡಿಮೆಮಾಡಿ, ಈಗಿರುವ ಸರ್ಕಾರದ ವೆಚ್ಚದ ಭಾಗದಲ್ಲಿ ಕಡಿಮೆಮಾಡಿಕೊಂಡೂ ಸಹ ಅದರಿಂದಲೂ ಸ್ವಲ್ಪ ಧನವನ್ನು ಈ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದು ಅತ್ಯಾವಶ್ಯಕ. ಸದ್ಯಕ್ಕೆ ಕನ್ನಂಬಾಡಿಯ ಕಟ್ಟೆಯ ಕೆಲಸದ ವೆಚ್ಚದ ಭಾರದ ದೊಡ್ಡವಾಗಿ ಬಿದ್ದಿದೆ. ಅದು ಮುಗಿಯುವ ವರೆಗೂ ಈ ವಿಷಯ ಎಂಬ ದನ್ನು ಒದಗುವುದರಲ್ಲಿ ಸರ್ಕಾರದಲ್ಲಿ ಸುಗಮವಾಗಬಹುದು. ಆದರೂ ಅವಶ್ಯಕವಾದ ಈ ಭಾಗವನ್ನು ಸರ್ಕಾರವು ಉಪೇಕ್ಷಿಸಲಾಗುವುದಿಲ್ಲ. ಈ ಸಮಯದಲ್ಲಿ ಯಾವುದಾದರೊಂದು ಕರದಲ್ಲಿ ಹೊಸ ಕಂದಾಯವನ್ನು ಪ್ರಜೆಗಳ ಮೇಲೆ ಹಾಕಬೇಕೆಂದು ಸರ್ಕಾರದವರು ಯುಕ್ತಿಸಿದರೂ ಅದು ಪ್ರಜೆಗಳ ಕ್ಷೇಮಾರ್ಥವಾದ ಕೆಲಸಕ್ಕೋಸ್ಕರವೇ ಆಗಿರುವುದರಿಂದ ಅದನ್ನು ಪ್ರಜೆಗಳು ಕಿರಿಕಿರಿ ಮಾನ್ಯಮಾಡಲಾರದೆ ಸಹಿಸಲಾರರೆಂದು ನಿರೀಕ್ಷಿಸುತ್ತೇವೆ. ಮತ್ತೂ ಪ್ರಕೃತದ ಸಮಾಜದ ಉಪಸಭೆಯವರು ಎಷ್ಟು ಬೇಗನೆ ಚಳುವಳಿಯಿಂದ ಕೆಲಸಮಾಡಿ ಸೂಚನೆಗಳನ್ನು ತಂದರೋ ಸರ್ಕಾರದವರೂ ಹಾಗೆಯೇ ಚಳುವಳಿಯಿಂದ ಸ್ವಲ್ಪಸ್ವಲ್ಪವಾಗಿ ಅವನ್ನು ಕಾರ್ಯರೂಪವಾಗಿ ತರುವುದಾದರೆ ಮೈಸೂರು ಸಂಪದಭ್ಯುದಯಕ್ಕೆ ನಿಜವಾಗಿಯೂ ಮಾರ್ಗವಾಗುವುದು.

ಸರ್ವಾಧಿಕಾರಿ ಮಿ॥ ಎಂ ಎಸ್ ಬಾಳರಾಜ ಅರಸಿನವರು

ಈ ಯೌವನಸ್ಥರು ಶ್ರೀ ವಾಣೀವಿಲಾಸದ ಮಹಾಮಾತೃಶ್ರೀಯವರ ಸಹೋದರಿಯವರ ಜ್ಯೇಷ್ಠ ಪುತ್ರರು. ಇವರು ಮಿ॥ ಎಂ ನಂದರಾಜ ಅರಸಿನವರು ನಮ್ಮ ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದು ಬೆಕ್ಕವಸ್ಥಿತಿಯಲ್ಲೇ ಮೃತಪಟ್ಟರು. ಮಿ॥ ಬಾಳರಾಜ ಅರಸಿನವರು ಚಿಕ್ಕ ವಯಸ್ಸಿನಲ್ಲೇ ಮಾತಾಪಿತೃವಿಯೋಗವು ಸಂಭವಿಸಿದ್ದುದರಿಂದ ಇವರ ಸೋದರಮಾವಂದಿರಾದ ಸರ್ವಾಧಿಕಾರಿ ಮಿ॥ ಎಂ. ಕಾಂತರಾಜ ಅರಸಿನವರೇ ಇವರಿಗೂ, ಇವರ ಸಹೋದರ-ಸಹೋದರಿಯರಿಗೂ ಪೋಷಕರಾಗಿದ್ದರು. ಶ್ರೀಯುತ ಕಾಂತರಾಜ ಅರಸಿನವರು ವಿದ್ಯಾವಂತರಾದುದರಿಂದ ವಿದ್ಯೆಯ ಪ್ರಯೋಜನವನ್ನರಿತು ಈ ತಮ್ಮ ಸೋದರಳಿಯಂದಿರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಶ್ರದ್ಧೆಯನ್ನು ವಹಿಸಿದರು. ಶ್ರೀಮಂತರ ಪುತ್ರರು ವಿದ್ಯಾವಂತರಾಗುವುದು ವಿರಳವೆಂಬುದು ಸರ್ವತ್ರಪ್ರಸಿದ್ಧವಾಗಿದೆ. ಆದರೆ ಕೀರ್ತಿಶೇಷರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರ ಕೃಪಾಪೋಷಣೆಯಲ್ಲಿ ಮಿ॥ ಕಾಂತರಾಜ ಅರಸಿನವರು ಹೇಗೆ ವಿದ್ಯಾವಂತರಾದರೋ ಹಾಗೆಯೇ ಅವರ ಪೋಷಣೆಯಲ್ಲಿ ಮಿ॥ ಬಾಳರಾಜ ಅರಸಿನವರು ವಿದ್ಯಾವಂತರಾದುದಕ್ಕಾಗಿ ನಾವು ಸಂತೋಷಪಡುತ್ತೇವೆ. ಇವರು ಬಿ ಎ, ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಇವರು ಬಹಳ ೨೧-೨೨ ವರ್ಷ ವಯಸ್ಸುಮಾತ್ರವೇ ಆಗಿರುವುದು. ಇವರು ವಿನಯ ನಿಗರ್ವಿಗಳೂ, ಸರಸಿಗಳೂ ಮತ್ತೂ ದಯಾಪರರೂ ಆಗಿರುತ್ತಾರೆ. ಲೋಕಪಾವನರಾದ ಶ್ರೀ ಚಾಮುಂಡಾಂಬಿಯು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವಲ್ಲದೆ ಈ ನಮ್ಮ ಬಾಳರಾಜ ಅರಸಿನವರು ಉತ್ತರೋತ್ತರ ನಮ್ಮ ಸಂಸ್ಥಾನದಲ್ಲಿ ದೊಡ್ಡದೊಡ್ಡ ಅಧಿಕಾರಗಳನ್ನು ವಹಿಸಿ ದೇಶಕ್ಕೆ ಹಿತವನ್ನುಂಟುಮಾಡತಕ್ಕವರಾಗಲೆಂದೂ ಕೋರುತ್ತೇವೆ. ನಮ್ಮ ರಾಜಬಂಧುಗಳು ಈ ರೀತಿಯಾಗಿ ಕ್ರಮ ವಿದ್ಯಾವಂತರಾಗುತ್ತ ಬಂದಲ್ಲಿ ನಮ್ಮ ಸಂಸ್ಥಾನದ ಭಾವಿ ಇತಿಹಾಸಕ್ಕೆ ಶೋಭೆಯುಂಟಾಗಿ ಉತ್ತಮಸ್ಥಿತಿಯನ್ನು ಹೊಂದುವುದಲ್ಲದೆ, ಪ್ರಜಾರಂಜಕವಾಗುವುದರಲ್ಲಿ ಸಂದೇಹವಿಲ್ಲ. ಹೈದರಾಬಾದು, ಬರೋಡಾ ಮೊದಲಾದ ಸಂಸ್ಥಾನಗಳಲ್ಲಿ ರಾಜವರ್ಗದವರು ಸರ್ಕಾರದಧಿಕಾರ ವಹಿಸುವುದು ವಿಶೇಷವಾಗಿರುತ್ತಾರೆ. ನಮ್ಮ ಸಂಸ್ಥಾನದಲ್ಲಿ ಆ ಸ್ಥಿತಿಯು ಇರುವುದಿಲ್ಲ. ಈ ಲೋಪವನ್ನು ಪರಿಹರಿಸುವ ಉದ್ದೇಶದಿಂದಲೇ ಅರಿದ ಮಹಾಸ್ವಾಮಿಯವರಾದ ... ರಾಜೇಂದ್ರ ಒಡೆಯರವರು ತಮ್ಮ ... ಕ್ಕೆ ... ಸ್ಥಾನಕ್ಕಾಗಿ ಅರಸು ... ದು. ಆ ಮಹಾಸ್ವಾಮಿಯವರ ... ಯೋಗ ಫಲಪ್ರದವಾಗುತ್ತಿದೆ.

ಯಿಸಲಾಯಿತು:— ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘದ ಉದ್ದೇಶವೇನೆಂದರೆ,— (೧) ಫಂಡಿಗೆ ಬರುವ ಬಡ್ಡಿಯಿಂದ ಮೈಸೂರು ಸೀಮೆಯ ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ವಿದ್ಯಾಭಿವೃದ್ಧಿಯನ್ನುಂಟುಮಾಡುವುದು, ಮತ್ತೂ (೨) ವೀರಶೈವ ಗ್ರಂಥಗಳ ಪ್ರಸಾರವನ್ನು ಪ್ರೋತ್ಸಾಹಿಸುವುದು.

ವಿದೇಶೀ... ...ಬ್ಯಾಂಕಿನಲ್ಲಿಟ್ಟಿದ್ದನ್ನು ಖರ್ಚು
ಬಿದ್ದ ದು

ಪತ್ರಿಕಾ ವಾಚಕರಿಗೆ ಸೂಚನೆ

ಶ್ರೀ ಗಣೇಶನ ಹಬ್ಬದುದ್ದೇಶದಿಂದ ಪದ್ಧತಿಯಂತೆ ಕಾರ್ಯ ಮುಂದಿನವಾರದ (ತಾ| ೧೬-೯-೧೯೩೦ ರ) ಮೈಸೂರ್ ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್.

೧೯೩೦ನೇ ಸೆಪ್ಟೆಂಬರ್ ೧೫ನೇ ಸೋಮವಾರ

ಮೈಸೂರು ಸಂಸ್ಥಾನದ ಆರೋಗ್ಯರಕ್ಷಣಾ ಶಾಖೆಯ ವರದಿಯು.

ಪ್ರಜೆಗಳನ್ನು ಯಾವ ಈತಿಬಾಧೆಗಳೂ ಇಲ್ಲದಂತೆ ಕಾಪಾಡುವುದಕ್ಕಾಗಿಯೇ ಪ್ರಭುತ್ವವೆಂಬುದು ಏರ್ಪಟ್ಟಿದೆ. ಪ್ರಜೆಗಳಿಗೆ ಬಹಿಶ್ಶತ್ರು ಅಂತಶ್ಶತ್ರುಗಳೆಂದು ಎರಡು ತೆರನ ವೈರಿಗಳಿರುತ್ತಾರೆ. ಬಹಿಶ್ಶತ್ರುಗಳು ಪರರಾಜರೇ ಮೊದಲಾದವರು. ಅಂತಶ್ಶತ್ರುಗಳೆಂದರೆ ರೋಗ-ದಾರಿದ್ರ್ಯ-ಅಜ್ಞಾನ ದುರ್ವೃತ್ತಿ ಮೊದಲಾದವುಗಳು. ಈ ಉಭಯವಿಧದ ಶತ್ರುಗಳನ್ನೂ ಪ್ರತಿಭಟಿಸಿ, ಅವನ್ನು ನಿರ್ಮೂಲವಮಾಡಿ ಪ್ರಜೆಗಳನ್ನು ಸ್ವಸ್ಥರನ್ನಾಗಿ ಮಾಡುವುದಕ್ಕಾಗಿಯೇ ಪ್ರಭುವು ತನ್ನ ರಾಜ್ಯದ ಆದಾಯವನ್ನೂ ತನ್ನ ಬುದ್ಧಿವಿವೇಕ ಶಕ್ತ್ಯಾದಿ ಸಾಮರ್ಥ್ಯಗಳನ್ನೂ ವಿನಿಯೋಗಿಸಬೇಕು. ಅದನ್ನು ಸಮಗ್ರವಾಗಿ ನೆರವೇರಿಸಲಾರದ ಪ್ರಭುವು ಪ್ರಭುತ್ವಕ್ಕನರ್ಹನಾಗುವುದಲ್ಲದೆ ಅಂಥ ಪ್ರಭುವಿಗೆ ರಾಜನೆಂಬ ಬಿರುದು ನಾಮಮಾತ್ರದಿಂದ ಒಪ್ಪುವುದೇ ಹೊರತು ಅನ್ವರ್ಥವಾಗಿಸಲೊಪ್ಪುವುದಿಲ್ಲ. ಅಂಥ ಪ್ರಭುವಿನಲ್ಲಿ ಜನಗಳಿಗೆ ಭಕ್ತಿವಿಶ್ವಾಸಗಳೂ ಅಕುಟಿಲವಾಗಿರಲಾರವು.

ಈಗಿನ ಕಾಲದಲ್ಲಿ ಭಗವದನುಗ್ರಹದಿಂದ ಸರ್ವಥಾ ಸಮರ್ಥರಾದ ಆಂಗ್ಲ ಪ್ರಭುಗಳ ಸಾರ್ವಭೌಮತ್ವವು ನಮಗೆ ದೊರೆತಿರುವ ಕಾರಣ, ಬಹಿಶ್ಶತ್ರುಗಳ ಬಾಧೆಯು ಈ ದೇಶದ ಸಂಸ್ಥಾನಗಳಿಗಿಂದಕ್ಕೆ ತಪ್ಪಿದಂತೆಯೇ ಇಲ್ಲ. ಅದು ಕಾರಣ, ನಮ್ಮ ದೇಶೀಯ ಪ್ರಭುಗಳಿಗೆಲ್ಲಾ ಮುಖ್ಯತಃ ರವಾದ ಆ ಬಾಗದ ಹೊರೆಯು ತಪ್ಪಿದೇ ಹೋಗಿರುವುದು. ಅಗಳು ಅಫ್ಘನಿ-ಸುಡ್ಡು ಗುಂಡು-ಬತ್ತಿಯಂಗ ಮೊದಲಾದ ಸಾಧನೆಗಳ ಸಂಪಾದನೆಗಾಗಿ ಧನವ್ಯಯ ಮಾಡಬೇಕಾದೇ ದಗಳನ್ನು ಮಾಡಬೇಕಾಗಿಯೇ ಇಲ್ಲ. ಅಂತಶ್ಶತ್ರು ನಿರ್ಮೂಲನ ಕಾರ್ಯಭಾರವೊಂದೇ ಇವರ ಮೇಲೆ ನಿಲ್ಲುತ್ತಿರುವುದು. ಇದರ ನಿರ್ವಾಹಕ್ಕಾಗಿಯೇ ಆರೋಗ್ಯರಕ್ಷಣಾಶಾಖೆ, ವಿದ್ಯಾಶಾಖೆ ಮೊದಲಾದವುಗಳು ಏರ್ಪಟ್ಟಿರುತ್ತವೆ. ನಮ್ಮ ಸಂಸ್ಥಾನದವರು ವರ್ಷೇವರ್ಷೇ ಪ್ರಜೆಗಳಲ್ಲಿ ವಿದ್ಯಾಪ್ರಚಾರವನ್ನು ಹೆಚ್ಚಾಗಿ ಮಾಡುತ್ತಿರುವುದಕ್ಕಾಗಿ ಅಧಿಕವಾಗಿ ಧನವ್ಯಯವನ್ನು ಮಾಡಲು ಸನ್ನದ್ಧರಾಗಿರುವುದು ಜನಗಳಲ್ಲಿನ ಅಜ್ಞಾನವನ್ನು ನಿರ್ಮೂಲಮಾಡುವುದಕ್ಕೆ ತುಂಬಾ ಸಹಾಯಕವಾಗಿದೆ. ಸಂಸ್ಥಾನದವರು ಸರ್ವಜನ ಮೂಲಕವಾದ ಪ್ರಯತ್ನವೂ ದೊಡ್ಡದೊಡ್ಡ ನೀರಾವರಿಯ ಕೆಲಸಗಳನ್ನು ಮಾಡಿಸುತ್ತಿರುವುದೂ, ನೂತನ ಲೋಕಮಾರ್ಗಾಭಿವೃದ್ಧಿಯ ಸಾಧನಗಳೂ ಸಹ ದೇಶದ ಐಶ್ವರ್ಯವೆಂಬ ಮಹಾಶತ್ರುವನ್ನು ತೊಲಗಿಸುವ ಕಾರ್ಯಗಳಾಗಿ ಕೆಲಸ ನಡೆಸುತ್ತಿವೆ. ಆರೋಗ್ಯರಕ್ಷಣಾಶಾಖೆಯವರು ಜನೋಪಕಾರಕವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಸಾಂಕ್ರಾಮಿಕ ರೋಗಗಳನ್ನೂ ಸಾಮಾನ್ಯರೋಗಗಳನ್ನೂ ನಿರೋಧಿಸುವುದಕ್ಕಾಗಿ ವೈದ್ಯಶಾಖೆಯನ್ನೂ ಆರೋಗ್ಯವರ್ಧನ ಶಾಖೆಯನ್ನೂ ಸ್ಥಾಪಿಸಿ ಉಪಯುಕ್ತವಾಗಿ ಅವುಗಳ ಮೂಲಕ ಧನವ್ಯಯವನ್ನು ಮಾಡುತ್ತಿದ್ದಾರೆ. ಪ್ರಭುತ್ವದವರ ಈ ಕರ್ತವ್ಯ ಜಾಗರೂಕತೆಯು ಪ್ರಜೆಗಳನ್ನು ಕೃತಜ್ಞತಾಬದ್ಧರನ್ನಾಗಿ ಮಾಡಿರುತ್ತದೆ.

ಆದರೂ ಈಗತಾನೇ ಪ್ರಕಟವಾಗಿರುವ ಕಳೆದ ೧೯೨೮-೨೯ನೇ ವರ್ಷದಲ್ಲಿನ ಸಂಸ್ಥಾನದ ಆರೋಗ್ಯಸ್ಥಿತಿಯ ವಿಷಯಕವಾದ ವರದಿಯನ್ನು ನೋಡಿದರೆ, ಮನಸ್ಸು ತೃಪ್ತಿಗೊಳ್ಳುವಂತಾಗುವುದಿಲ್ಲ. ಏಕೆಂದರೆ-ಪ್ರಸಕ್ತ ವರ್ಷದಲ್ಲಿ ಸಂಸ್ಥಾನದೊಳಗೆಲ್ಲಾ ೧೯೨೭ನೇ ಇಸವಿಗಿಂತ ಜನನಸಂಖ್ಯೆಯೂ ಕಡಿಮೆ, ಮರಣಸಂಖ್ಯೆಯೂ ಹೆಚ್ಚಾಗುತ್ತದೆ. ಇದರಿಂದ ಪ್ರಜಾಕ್ಷಯವು ಹೆಚ್ಚುತ್ತಿರುವುದೆಂದು ಸ್ಪಷ್ಟವಾಗುತ್ತದೆ. ದೇಶಕ್ಕೆ ಪ್ರಜೆಗಳೇ ಸಂಪತ್ತಾಗಿರುವರು. ಆ ಪ್ರಜೆಗಳೂ ದೃಢ ಆರೋಗ್ಯವನ್ನುಳ್ಳವರೂ ಉದ್ಯೋಗಶೀಲರೂ ಆಗಿ ವೃದ್ಧಿ ಹೊಂದಿದರೆ ರಾಜ್ಯಕ್ಕೆ ಲಕ್ಷ್ಮಿಯು ನರ್ತನ ಮಾಡುತ್ತಿರುವಳು. ಪ್ರಜೆಗಳು ಬಲಹೀನರೂ, ನಿರುದ್ಯೋಗಿಗಳೂ ರೋಗಗ್ರಸ್ತರೂ ಆಗಿರುವ ಪಕ್ಷದಲ್ಲಿ ಅಂಥ ದೇಶವು ಕ್ಷೀಣಿಸುವುದು

ನ್ನುವದೆ	ಕ್ಷಾಮಗಳುಂದಲೇ ಭಾವಿಸಿದ
ಜೀವನ	ವನೆಷ್ಟು ಮಾಡುತ್ತಿರುವುದು
ದರಿದ್ರ	ರೋಗ ಬಾಧೆ ವ್ಯಾಧಿ
ಷ್ಟ	ಸಿಲ್ಲ ಸ್ವಾಭಾವಿಕವಾದುದು

ವು ಅಧೋಗತಿಗೆ ಇಳಿಯುವುದು. ಆದುದರಿಂದ ಪ್ರಜೆಗಳನ್ನು ಸ್ವಸ್ಥರನ್ನಾಗಿ ಮಾಡಲೋಸ್ಕರ ಆಯಾ ಶಾಖೆಗಳಲ್ಲಿ ಪ್ರಭುತ್ವದವರು ಹಣವನ್ನು ವೆಚ್ಚಮಾಡುತ್ತಿದ್ದಾರೆ. ಇದಕ್ಕಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯಗಳೂ ದೇಶದ ಜನಸಂಖ್ಯಾಭಿವೃದ್ಧಿಗಳಿಗೆ ಉಪಯೋಗವಾಗುವುದಕ್ಕೆ ತಕ್ಕವನ್ನು ನಿರ್ಧರಿಸಿದರೆ ನಮ್ಮ ಸಂಸ್ಥಾನದಲ್ಲಿ ವರ್ಷ ಒಂದಕ್ಕೆ ವೈದ್ಯಶಾಖೆ ಆರೋಗ್ಯರಕ್ಷಣಾಶಾಖೆಗಳಿಗಾಗಿ ೪ ಲಕ್ಷ ರೂ. ಗಳಿಗೂ ಹೆಚ್ಚುವೆಚ್ಚ ಮಾಡುತ್ತಿದ್ದರೂ ಪ್ರಜಾಕ್ಷಯವು ಅಧಿಕವಾಗಿ ಆಗುತ್ತಿರುವುದು ಏಕೆ? ಅದರಲ್ಲೂ ಶೀಘ್ರ ಗತಿಯಲ್ಲಿ ಕ್ಷಯವಾಗುತ್ತಿದೆ. ಹೀಗಾದಲ್ಲಿ ಆರೋಗ್ಯವರ್ಧಕ ಕಾರ್ಯಗಳು ಉಪಯುಕ್ತಗಳಾಗುವುವೆಂದು ಹೇಳುವುದು ಹೇಗೆ? ಪಟ್ಟಣಗಳಲ್ಲಿಯೇ ಮರಣಸಂಖ್ಯೆಯು ಅಧಿಕವಾಗಿರುವುದೆಂಬುದನ್ನು ಕೇಳಿದರೆ ಮತ್ತಷ್ಟು ವಿಷಾದವಾಗುತ್ತದೆ. ಜನನಸಂಬಂಧವಾದ ಲೆಕ್ಕಗಳು ಸಮರ್ಪಕವಾಗಿ ಸ್ಥಿರಗೊಳಿಸಿರುವುದರಿಂದ, ಈ ಜನನ ಮರಣಗಳ ಲೆಕ್ಕವನ್ನು ಸಹಜವಾದುದೆಂದು ನಂಬಲಾಗುವುದಿಲ್ಲವೆಂಬ ಅಂಶವನ್ನು ಈ ಶಾಖೆಯ ಅಧಿಕಾರಿಗಳು ಪದೇಪದೇ ತಿಳಿಸುತ್ತಿದ್ದಾರೆ. ಈ ದೋಷವು ಪರಿಹರಿಸಲಶಕ್ಯವಾದದೆ? ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಜನನ ಮರಣ ಸಂಖ್ಯೆಯನ್ನು ಗೊತ್ತುಮಾಡುವುದಕ್ಕೇ 'ರಿಜಿಸ್ಟ್ರೇಷನ್' ಏರ್ಪಡಿಸಲ್ಪಟ್ಟಿದೆ. ಹೀಗಿದ್ದರೂ ಅದರ ಲೆಕ್ಕವು ಸಮರ್ಪಕವಾಗಿ ತಿಳಿಯುವುದಿಲ್ಲವೆಂದು ಹೇಳುತ್ತಿರುವುದು ಸರ್ಕಾರದ ಆ ಶಾಖೆಯ ಪರ್ಯಾಲೋಚನೆಗೆ ತಕ್ಕದ್ದಾಗಿಯೇ ಇರುವುದು.

ಪ್ರಸಕ್ತ ವರ್ಷದಲ್ಲಿ ಸಿಡುಬಿನಿಂದಾದ ಮರಣಗಳ ಸಂಖ್ಯೆ ಕಡಿಮೆಯಾಗಿಯೂ ವಾಂತಿಭೇದಿಯಿಂದಾದ ಮರಣಗಳು ಬಹಳ ಕಡಿಮೆಯಾಗಿಯೂ ಇವೆ. ಆದರೂ ಪ್ಲೇಗು ಉಲ್ಬಣವಾಗಿ ಅದರ ಮರಣಗಳ ಸಂಖ್ಯೆಯು ಹಿಂದಿನ ಎರಡು ವರ್ಷಗಳ ಸಂಖ್ಯೆಗಿಂತಲೂ ಹೆಚ್ಚಾಗಿದ್ದಿತು. ಎಂದರೆ ಆ ವರ್ಷಗಳಲ್ಲಿ ಪ್ಲೇಗಿನಿಂದಾದ ಮರಣಗಳೇ ೧೭೩೦. ಆ ಎಷ್ಟೋ ಪ್ಲೇಗು ವಾಂತಿಭೇದಿಯ ರೋಗಗಳು ಘೋರರೂಪವಾಗಿ ದಿನೇದಿನೇ ಬಲಿಯಾಗುತ್ತಿದ್ದರೂ ಇತರ ಜ್ವರಗಳಿಂದ ಆಗುತ್ತಿರುವ ಪ್ರಜಾನಾಶವನ್ನು ನೋಡಿದರೆ ಅವುಗಳ ಸ್ಥಿತಿಯು ಎಷ್ಟೋ ಹೆಚ್ಚಾಗಿರುವುದು. ಇತರ ಜ್ವರಗಳಿಂದ ೧೯೨೯ನೆಯ ವರ್ಷದಲ್ಲಿ ೭೭ ಸಾವಿರ ಮರಣಗಳಾಗಿ ಹಿಂದಿನ ವರ್ಷದಲ್ಲಿ ೭೮ ಸಾವಿರ ಮರಣಗಳಾಗಿರುತ್ತವೆ. ಈ ದುಷ್ಟಜ್ವರಗಳ ಹಾವಳಿಯು ಹಳ್ಳಿಗಳಲ್ಲಿಯೇ ಹೆಚ್ಚಾಗಿದೆ. ಅದನ್ನು ಅಣಗಿಸುವುದಕ್ಕೆ ಗವರ್ನಮೆಂಟಿನವರು ಶಕ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿದ್ದಾರೆ. ಜ್ವರರೋಗಿಗಳಿಗೆ ಎತ್ತಿ ರುವ ಕ್ವಿನೈನ್ ಎಂಬ ಪುಡಿಯನ್ನು ಉಚಿತವಾಗಿ ಪೋಸ್ಟಾಫೀಸಿನಲ್ಲಿ ಹಂಚುವಂತೆ ಏರ್ಪಡಿಸಿದ್ದಾರೆ.

ಗವರ್ನಮೆಂಟಿನವರು ಜನರಲ್ಲಿ ವಿದ್ಯಾಪ್ರಚಾರ ಮಾಡುವುದನ್ನು ಎಷ್ಟು ಆವಶ್ಯಕವೆಂದು ತಿಳಿದಿರುವರೋ ಅಷ್ಟೇ ಆವಶ್ಯಕತೆಯು ಆರೋಗ್ಯರಕ್ಷಣ ವಿಷಯದಲ್ಲಿಯೂ ಇರುವುದೆಂದು ತಿಳಿಯುವರು. ಕಳೆದ ವರ್ಷ ವೈದ್ಯಶಾಖೆಗಾಗಿ ೬ ಲಕ್ಷದ ೧೫ ಸಾವಿರ ರೂ. ಗಳನ್ನು ವ್ಯಯಮಾಡಿರುವಲ್ಲಿ ಈ ವರ್ಷ ೮ ಲಕ್ಷದ ೩೭ ಸಾವಿರ ರೂ. ಗಳನ್ನು ವ್ಯಯಮಾಡಲು ಏರ್ಪಡಿಸಿದ್ದಾರೆ. ಇದರಂತೆಯೇ ವರ್ಷೇವರ್ಷೇ ಈ ಶಾಖೆಯ ವೆಚ್ಚವನ್ನು ಹೆಚ್ಚಿಸಿ, ವೈದ್ಯಶಾಲೆಗಳ ಸೌಕರ್ಯವನ್ನೂ, ಆರೋಗ್ಯವರ್ಧನೋಪಾಯ ಸಾಧನಗಳನ್ನೂ ಮಾಡುವರೆಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ ಪ್ರಜೆಗಳು ತಮ್ಮ ವಿದ್ಯಾಬುದ್ಧಿ ವಿವೇಕಗಳ ವೃದ್ಧಿಗೂ ಆರೋಗ್ಯ ಸಂಪತ್ತಿಯ ಬೆಳವಣಿಗೆಗೂ ಸಹ ತಾವೂ ಒತ್ತಾಸೆಯಾಗುತ್ತ ಬಂದಲ್ಲದೆ, ಗವರ್ನಮೆಂಟಿನವರು ಈ ವಿಷಯಗಳಲ್ಲಿ ಮಾಡುವ ಸಾಹಸವೂ ಧನವ್ಯಯವೂ ಚರಿತಾರ್ಥವಾಗುವುದಿಲ್ಲ. ಪ್ರಜೆಗಳು ತಮ್ಮೆಲ್ಲಾ ಜನನ ಮರಣಗಳ ವಿಷಯವನ್ನು ಆಯಾ ಸರ್ಕಾರದ ಉದ್ಯೋಗಿಗಳಿಗೆ ಸಮರ್ಪಕವಾಗಿ ತಂದುಕೊಡಬೇಕು. ಹಾಗೆ ನೋಡುತ್ತ ಬಂದರೆ ಸರ್ಕಾರದವರಿಗೆ ನಿಜಸ್ಥಿತಿಯು ಗೊತ್ತಾಗಿ, ರೋಗಗಳ ಪರಿಹಾರಕ್ಕೆ ತಕ್ಕ ಪ್ರಯತ್ನವನ್ನು ಮಾಡುವರು. ಪ್ರಜೆಗಳ ಕ್ಷೇಮಕ್ಕಾಗಿಯೇ ಸರ್ಕಾರದವರು ಮಾಡಿಸಿಕೊಡುವ ಚುಚ್ಚುಮದ್ದು ಮುಂತಾದ ಕೆಲಸಗಳಿಗೆ ಪ್ರಜೆಗಳು ತಮ್ಮ ಮಕ್ಕಳನ್ನು ಕಳುಹಿಸಿ ಅದನ್ನು ಸಕಾಲದಲ್ಲೇ ಮಾಡಿಸದೆ, ಭಯಂಕರವಾದ ಮಾರಿಬೇನೆಯಂಥ ರೋಗಗಳ ಬಾಧೆಗೆ ತಮ್ಮ ಮಕ್ಕಳನ್ನು ಏಕೇಕ ವಾಗಿ ಬಲಿಕೊಡುತ್ತಿರುವರು. ಈ ವ್ಯಸನಕರವಾದ ಅವಸ್ಥೆಯನ್ನು ಸರ್ಕಾರದವರು ನೋಡಿ, ಬಲಾತ್ಕಾರದಿಂದ ಸಿಡುಬು ನ್ನು ಹಾಕಿಸುವ ಕಾನೂನನ್ನಾದರೂ ಸಹ ಜಾರಿ ಮಾಡಬೇಕು ಆಗುವುದು. ತಮ್ಮ ಹಿತವನ್ನೇ ತಿಳಿಯದಿರುವ ಪ್ರಜೆಗಳನ್ನು ಇಂಥ ಬಲಾತ್ಕಾರವಿಧಿಗೆ ಒಳಗಾಗುವಂತೆ ಮಾಡಿಕೊಳ್ಳ

ತಮ್ಮ ಹಿತಕ್ಕೆ ಆವಶ್ಯಕವಾ
ಹಾಕಿಸಿಕೊಳ್ಳದೆ ರೋಗ ಸಿಕ್ಕಿ
ನ ಸ್ಥಿತಿಯು ಶೋಚನೀಯವಾದುದು
ಸರ್ಕಾರದವರಿಗೆ ಕೃತಜ್ಞತೆಯ

ರಾಜಧಾನಿಯ ಪ್ರಿನ್ಸಿಪಲ್ ಮುನಸೀಫರು

ಈ ಉದ್ಯೋಗದಲ್ಲಿ ಕಳೆದ ೫ ೬ ವರ್ಷಗಳಿಂದಲೂ ರುವ ಮಿ|| ಎಂ ಟಿ ಗೋಪಾಲಯ್ಯಂಗಾರ್, ಬಿ. ಎ., ಎಲ್ ಬಿ., ಯವರು ನಿಷ್ಪಕ್ಷಪಾತವಾಗಿ ವಿವಾದಗಳ ವಿಚಾರಣೆಯು ಕಾಲದಲ್ಲಿ ಉಗ್ರವಾದವನ್ನು ಪ್ರದರ್ಶಿಸಿ ಕಕ್ಷಿದಾರರುಗಳನ್ನಾಡುತ್ತಿರುವುದರಿಂದಲೂ, ಸ್ವಲ್ಪಕಾಲದಲ್ಲಿ ಇತ್ಯರ್ಥಗೊಳಿಸಬಹುದಾದ ಸಾಮಾನ್ಯ ವಿವಾದಗಳನ್ನೆಲ್ಲಾ ವ್ಯರ್ಥ ವಿಳಂಬಿಸಿಕೊಂಡು, ಕಕ್ಷಿದಾರರಿಗೆ ಅರ್ಥಕ್ಷಯ ದೇಹಕ್ಲೇಶಗಳೂ, ಲಾಯರು ಗಳಿಗೆ ಕಾಲಹರಣವೂ ಉಂಟಾಗುವಂತೆ ಮಾಡುತ್ತಿರುವುದರಿಂದ ಉಭಯರೂ ಈ ಜಡ್ಜಿಯವರ ನಡವಳಿಕೆಯಿಂದ ಬಹುವಾಗಿ ನೊಂದಿರುವರಲ್ಲದೆ, ಈ ಕೋರ್ಟಿನಲ್ಲಿ ಕೆಲಸವಾದ ತಕ್ಕವರೂ ಸಹ ಜಡ್ಜಿಯವರ ವರ್ತನೆಯಿಂದ ಜಿಗುಪ್ಸಿತರಾಗಿರುವರೆಂದು ಕೇಳುತ್ತೇವೆ. ಒಂದು ದಿವಸದಲ್ಲಿ ವಿಚಾರಿತವಾಗಬೇಕಾಗಿರುವ ವಿವಾದಗಳಲ್ಲಿ ಒಂದು ವಿವಾದವು ವಿಳಂಬದ ನಡೆಯುತ್ತಿರುವಾಗ್ಗೆ, ಇತರ ವಿವಾದದ ಕಕ್ಷಿಗಾರರಾಗಲಿ, ಸಾಕ್ಷಿಗಳಾಗಲಿ ಜಲಮಲ ವಿಸರ್ಜನೆಗಳಿಗೋ ಅಥವಾ ಫಲಾಹಾರಾದಿಗಳಿಗೋ ಹೊರಗೆ ಹೋಗಿ ಬರುವಷ್ಟರಲ್ಲಿ ಅವರ ವಿವಾದವು ವಿಚಾರಣೆಗೆ ತೆಗೆದುಕೊಳ್ಳಲ್ಪಟ್ಟು ಅವರ ಹೆಸರುಗಳನ್ನು ಕೂಗದ ಮೇಲೆ ಯಲ್ಲಿ ಅವರು ಹಾಜರಿಲ್ಲದಿದ್ದರೆ ವಿವಾದವು ವಜಾಮಾಡಲ್ಪಡುವುದೆಂದು ಜರುಗುತ್ತಿದೆ. ಬೆಳಗಿನ ೧೧ ಗಂಟೆಯಿಂದ ಸಂಜೆಯ ಕಾಲದವರೆಗೂ ಸ್ವಾಭಾವಿಕ ವಿರುದ್ಧವಾಗಿ ಜಲಮಲ ವಿಸರ್ಜನೆಯನ್ನು ಮಾಡದೆ ಕವಲದಂತೆ ಕುಳಿತಿರಲು ಸಾಧ್ಯವೇ? ಮತ್ತು ಆ ವಿವಾದವನ್ನು ನಡೆಸಲು ಗೊತ್ತು ಕೊಂಡಿರುವ ಲಾಯರು ಅದೇ ದಿವಸ ಬೇರೆ ಕೋರ್ಟುಗಳಲ್ಲಿ ನಡೆಯುವ ವಿವಾದಗಳನ್ನೆಲ್ಲ ಬಿಟ್ಟು ಒಂದೇ ಕಡೆ ಕಾದುಕೊಂಡಿದ್ದರೆ ಅವರಿಗೆ ಸಹ ಪಲ್ಲವೇ? ಹೀಗೆ ಲಾಯರುಗಳಿಗೂ ಕಕ್ಷಿಗಾರರಿಗೂ ಇರುವ ತೊಂದರೆಯ ಭಾಗಗಳು ಈ ಜಡ್ಜಿಯವರ ಮನಸ್ಸಿಗೆ ಹೋಗದಿರುವುದು ಸಖೇದಾಶ್ಚರ್ಯವಾಗಿದೆ. ಕೋರ್ಟುಗಳಿರುವುದು ವಿವಾದಗಳ ಇತ್ಯರ್ಥಕ್ಕಾಗಿಯೇ ಹೊರತು ಅವರ ತಮ್ಮ ಸ್ವಂತ ಉದ್ದೇಶವನ್ನು ವೆಚ್ಚ ಮಾಡಿಕೊಂಡು ತೊಂದರೆಯನ್ನು ಸಹಿಸುವುದಕ್ಕಲ್ಲವು. ಈ ಜಡ್ಜಿಯವರ ಉಗ್ರವಾದ ವರ್ತನೆಗೆ ತಕ್ಕ ಉತ್ತರವನ್ನೂ ಸಮಾಧಾನವನ್ನೂ ಹೇಳಬಲ್ಲ ಲಾಯರುಗಳೂ ಕಕ್ಷಿಗಾರರೂ ಇರುವರಾದರೂ ಅವರ ಕೋಪಕ್ಕೆ ಪಾತ್ರರಾಗಿ ತಮ್ಮ ಕಾರ್ಯವನ್ನು ಕೆಡಿಸಿಕೊಳ್ಳಬೇಕಾದೀತೆಂಬ ಭೀತಿಯಿಂದ ಮೂಕನೊಳಗಿನ ಗುದ್ದಿನಂತೆ ಅನುಭವಿಸಿ ತಮ್ಮಲ್ಲಿಯೇ ಗೊಣಗುತ್ತಿದ್ದಾರೆ. ಅದುಕಾರಣ ಚೀಫ್ ಕೋರ್ಟಿನವರೂ, ಸರ್ಕಾರದವರೂ ಒಟ್ಟು ಜಡ್ಜಿಗಳನ್ನು ಒಂದೇಕಡೆ ಬಹುಕಾಲವಿರಿಸಿರುವುದರಿಂದ ಜನರಿಗೆ ಪ್ರತಿಕೂಲವೆಂಬ ಭಾಗವನ್ನು ಮೇಲೆ ಹೇಳಿದ ಕಾರಣದಿಂದ ಮೂಲಕ ಮಾವರಿಕೆಮಾಡಿಕೊಂಡು ಮಿ|| ಗೋಪಾಲಯ್ಯಂಗಾರರನ್ನು ಬೇರೆ ಕಡೆಗೆ ವರ್ಗಾಯಿಸಿ ರಾಜಧಾನಿಯ ಸಬ್ ಜಡ್ಜ್ ಮಿ|| ಡಿ ಎ ನರಸಿಂಗರಾಯರಂತೆ ನ್ಯಾಯವಿಚಾರಣೆಯಲ್ಲಿ ಸಮರ್ಥರಾಗಿಯೂ, ಚಟುವಟಿಕೆಯಿಂದಲೂ, ದಕ್ಷತೆಯಿಂದಲೂ ಕೆಲಸಮಾಡಿ ಕಕ್ಷಿಗಾರರ ಮತ್ತು ಲಾಯರುಗಳ ಅನುರಾಗಕ್ಕೆ ಪಾತ್ರರಾಗಿಯೂ ಇರುವಂಥವರೊಬ್ಬರನ್ನು ಪ್ರಿನ್ಸಿಪಲ್ ಮುನಸೀಫರನ್ನಾಗಿ ನಿಯಮಿಸಿದರೆ ಉತ್ತಮವೆಂದು ನಮಗೆ ತೋರುತ್ತದೆ.

ಊರೊಳಗಿನ ವೃತ್ತಾಂತಗಳು.

ರಾಜಧಾನಿಯ ಬೆಂಚ್ ಮ್ಯಾಜಿಸ್ಟ್ರೇಟರುಗಳಲ್ಲಿ ಮಿ|| ಎಂ ಅನಂತರಾಮಯ್ಯನವರೂ ಮಿ|| ಮಹಮ್ಮದ್ ಜಾಫರ್ ಸಾಹೇಬರೂ ಮುಂದೆ ೩ ವರ್ಷಗಳ ಕಾಲ ಉದ್ಯೋಗದಲ್ಲಿರಲು ತಮಗೆ ಸಮ್ಮತವಿಲ್ಲವೆಂದು ತಿಳಿಸಿರುವುದಾಗಿಯೂ ಕೇಳಿದೆ.

ರಾಜಧಾನಿಯಲ್ಲೂ ಅದರ ಸುತ್ತುಮುತ್ತಣ ಗ್ರಾಮಾಂತರಗಳಲ್ಲೂ ಮಳೆ ಸಾಲದು. ಧಾನ್ಯಗಳ ಬೆಲೆಯೂ ಇಳಿದಿಲ್ಲ. ಸ್ಥಳಿಕ ಧರ್ಮಾತ್ಮರಾಗಲಿ ಮ್ಯುನಿಸಿಪಾಲಿಟಿಯವರಾಗಲಿ ಸರ್ಕಾರದವರಾಗಲಿ ಬಡವರ ಸಹಾಯಕ್ಕಾಗಿ ಯಾವ ಏರ್ಪಾಟನ್ನು ಮಾಡಲು ಇದುವರೆಗೂ ಯೋಚಿಸಿದಂತೆ ಕಾಣುವುದಿಲ್ಲ. ಖಾತರದಿಯೂ ಅತ್ಯವಶ್ಯವಾದುದಾಗಿದೆ. ಇಷ್ಟು ಕಷ್ಟ ಅನ್ನವಿಲ್ಲದೆ ಜನರು ಸತ್ತರೆಂಬ ವರದಿಯು ಬಂದಮೇಲೆ ಮುಂದಿನ ಯೋಚನೆಯನ್ನು ಮಾಡಬಹುದು ! ನೆನ್ನೆಯ ಸಾಯಂಕಾಲ ಕೊಂಚ ಮಳೆಯಾಯಿತು.

ಮೈಸೂರಿನವರಾದ ಅಡ್ವೊಕೇಟ್ ಎಂ ಸಿ. ರಂಗಯ್ಯಂಗಾರ್ ... ಪ್ಪನವರು ... ರಾಯರು, ಎಚ್. ... ರಾಜ್ ... ನಿನಿಂದ ಬೆಂಗಳೂರಿಗೆ ಬಂದು ಉದ್ಯೋಗದಿಂದ ... ವನ ಮೇಲೆ ಮುನಿಸಿಪ್ಪಾಲ್ ... ವರ್ತನೆಯ ಸಾಹೇಬರು ರಾಜಧಾನಿಯ ... ಗಳಿಗೆ ಸರ್ಕಾರದವರಿಂದ ... ರಂಗಯ್ಯಂಗಾರ್ರಿಗೆ ತಿಳಿಸಿದ್ದ ... ಗಳ ದೊರೆಯದೇ ಇದ್ದಾಗ್ಗೆ ...

ಸರ್ಕಾರದವರು ನಿಯಮಿಸಿರುವುದರಿಂದ ಅವರ ಯೋಗ್ಯತಾಪ್ರಶಂಸೆಯು ಪ್ರಕಟಿತವಾಗುತ್ತದೆ

ಮೈಸೂರಿನಿಂದ ಹಾಸನಕ್ಕೂ, ಬೀರೂರಿನಿಂದ ಶಿವಮೊಗ್ಗ ಕಡೂರು ರೈಲ್ವೆ ಲೋಹಮಾರ್ಗಗಳನ್ನು ಹಾಕಿಸುತ್ತಿರುವ ವ್ಯವಸ್ಥೆಯು ಬಹಳ ಲಾಭಕರ್ತವ್ಯವಾಗಿರುವುದಲ್ಲದೆ, ಕೋಲಾರದಿಂದ ಚಿಕ್ಕಬಳ್ಳಾಪುರಕ್ಕೂ, ಕಡೂರಿಂದ ಚಿಕ್ಕಮಗಳೂರಿಗೂ ಲೋಹಮಾರ್ಗಗಳನ್ನು ಹಾಕಬೇಕೆಂದು ರೈಲ್ವೆ ಚೀಫ್ ಇಂಜನಿಯರಾದ ಮಿ॥ ಬೆಲ್‌ರವರು ಸರ್ಕಾರಕ್ಕೆ ಸೂಚಿಸಿರುತ್ತಾರೆ ಇದು ಶ್ಲಾಘ್ಯವಾದ ಸೂಚನೆಯಲ್ಲದೆ ಇದರಿಂದ ಆಯಾ ಸ್ಥಳಗಳ ವ್ಯಾಪಾರಾಭಿವೃದ್ಧಿಗೆ ವಿಶೇಷ ಸಹಕಾರವಾಗುವುದು. ಮಿ॥ ಬೆಲ್‌ರವರ ಅಸಿಸ್ಟೆಂಟರಾದ ಮಿ॥ ಕ್ರಿಸ್‌ರವರ ಆಫೀಸು ರಾಜಧಾನಿಯಲ್ಲಿ ಏರ್ಪಡಿಸಲ್ಪಡುವುದಾಗಿಯೂ, ಇದಕ್ಕಾಗಿ ಮಿ॥ ರಾಘವಲುನಾಯಡುರವರ ಮನೆಯು ಬಾಡಿಗೆಗೆ ಗೊತ್ತುಮಾಡಲ್ಪಟ್ಟಿರುವುದಾಗಿಯೂ ತಿಳಿಯುತ್ತೇವೆ

ರಾಜಧಾನಿಯ ಮ್ಯುನಿಸಿಪಾಲಿಟಿಗೆ "ಹೆಲ್ತ್ ಪ್ರೆಸಿಡೆಂಟ್" ಕೆಲಸಕ್ಕೆ ಎಂ.ಎಚ್. ನಂಜುಂಡರಾಜೆಅರಸಿನವರನ್ನು ನಿಯಮಿಸಿ ಕೊಡಬೇಕೆಂದು ಕೆಲ ಪ್ರಜೆಗಳು ಸೇರಿ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವವರಾಗಿದ್ದಾರೆಂದು ಕೇಳುತ್ತೇವೆ ಈ ಕೆಲಸಕ್ಕೆ ಮಿ॥ ಅರಸಿನವರು ಸರ್ವಪ್ರಕಾರದಿಂದಲೂ ತಕ್ಕವರೆಂದು ಒಪ್ಪತಕ್ಕದ್ದಾದರೂ ಈಗಿನ ಗವರ್ನ್‌ಮೆಂಟಿನವರು ಸೆಷನ್ಸ್ ಜಡ್ಜಿಗಳೂ ಮೈಸೂರು ಪಟ್ಟಣದ "ಸೆಷನ್ಸ್‌ಕೋರ್ಟ್" ಉದ್ಯೋಗಸ್ಥರನ್ನು ನಿಯಮಿಸಬೇಕೆಂದು ಮಾಡಿದೆ ಈ ಪ್ರೆಸಿಡೆಂಟು ಮ್ಯುನಿಸಿಪಲ್ ಕೆಲಸವು ಪರಿಣಾಮ ಕೆಲಸವಾಗಿ ನಡೆಯುತ್ತಿಲ್ಲದೆ ಅದಕ್ಕೆ ಇತರ ಸರ್ಕಾರಿ ನೌಕರರ ಅನುಭವವೂ ಬೇಕಾಗಿದ್ದು ಹಾಗೆ ನಡೆಸಿರುವುದರಿಂದ ತಪ್ಪಾಗುವುದು ಸಹ ಅರಸಿನವರನ್ನು ನಿಯಮಿಸುವುದರಿಂದ ಆ ಕಾಲಕ್ಕೆ ನೆರವಾಗುವರು

ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯವರು ಕಳೆದ ಶನಿವಾರ ರಾತ್ರಿ ರುಕ್ಮಾಂಗದ ಚರಿತೆಯನ್ನು ಅಭಿನಯಿಸಿ ತೋರಿಸಿದರು. ಅದ್ಭುತವಾಗಿ ಏರ್ಪಡಿಸಿದ್ದ ಸೀನರಿಗಳೂ, ಮುಖ್ಯವಾದ ಪಾತ್ರಗಳ ಅಭಿನಯಗಳೂ ಸಮಯೋಚಿತವಾಗಿಯೂ ಗಂಭೀರವಾಗಿಯೂ ಇದ್ದುವು ಅತ್ಯಂತ ಭಕ್ತಿಯುಕ್ತಿ ಸಾಗಿದ್ದ ರುಕ್ಮಾಂಗದ ರಾಜನು ತನ್ನ ಏಕಾದಶೀ ವ್ರತ ಫಲವನ್ನು ಸರ್ವತೋರ್ಥವಾಗಿ ದಾನ ಮಾಡುವುದಕ್ಕೆ ನಿಯುಕ್ತನಾಗಿದ್ದ ಪುರೋಹಿತನ ಸಂಕಲ್ಪವು ರಾಜಸಾನ್ನಿಧ್ಯದ ಮರ್ಯಾದೆಗೆ ತಕ್ಕಂತೆ ನಿರರ್ಗಳವಾಗಿಯೇ ಬಂದಿರುವುದು, ಹಾಸ್ಯನಾಯಕರಾಗಿಯೂ, ಆಸಮಯದವನಾಗಿಯೂ ಇರುವಂತೆ ಮಾಡಿರುವುದು ಪಾತ್ರದ ಔಚಿತ್ಯಕ್ಕೂ ಮುಕ್ತಾಯವಾದ ಅರ್ಥಕ್ಕೂ ಹೊಂದಿಕೊಂಡು ರಂಗವಲ್ಲಿ ಪ್ರತಿಮೆಯಂತೆ ರಚಿತವಾಗಿದ್ದುದರಿಂದ ಅದರ ಘನತೆಯು ಒಪ್ಪವಾಗಿದ್ದಂತೆ ಇರುವುದು.

ರಾಜಧಾನಿಯ ಇಪ್ಟಿಸ್ಟೆನಿಟಿ ಎ. ವಿ. ಸ್ಕೂಲಿನ ಹೆಡ್ ಮಾಸ್ಟರಾದ ಮಿ॥ ಎಂ. ಎ. ಲಿಂಗಣ್ಣನವರು ಅಕ್ಷರಲೇಖನಾಭ್ಯಾಸಿಗಳಾದ ಬಾಲಬಾಲಿಕೆಯರುಗಳಿಗೋಸ್ಕರವಾಗಿ ರುವಂತೆ ಪ್ರಬಂಧ್ಯ ಕಾಪಿ ಪುಸ್ತಕವನ್ನು ಸಿದ್ಧಪಡಿಸಿ ತುಂಬ ಅಂದವಾದ ಅಕ್ಷರಗಳ ಮೇಲ್ಪಂಕ್ತಿಗಳಿಂದ ಮುದ್ರಣ ಮಾಡಿಸಿರುತ್ತಾರೆ. ಈ ಮೇಲ್ಪಂಕ್ತಿಗಳಲ್ಲಿ ಸುಲಭ ಪದಗಳು, ಕರಿವಿನ ಅಗಳು ನಾಣ್ಣುಡಿಗಳು ನೀತಿವಾಕ್ಯಗಳು ಕೊಡಲ್ಪಟ್ಟಿವೆ ಮೇಲ್ಪಂಕ್ತಿಗಳನ್ನನುಸರಿಸಿ ಬರೆಯುವುದರಿಂದ ಕೈ ಬೇಗನೆ ಕುದುರಿ ಮುದ್ದಾದ ಅಕ್ಷರಗಳನ್ನು ಬರೆಯಲಿಕ್ಕೆ ಬರುವುದಲ್ಲದೆ ಅನೇಕ ಶಬ್ದಗಳ ಮತ್ತು ನೀತಿಗಳ ಪರಿಚಯವಾಗುವಂತಿದೆ. ಮೇಲ್ಪಂಕ್ತಿಯ ಅಕ್ಷರಗಳನ್ನು ಶಿಕ್ಷಕನು ಪ್ರತಿಯೊಂದು ಅಕ್ಷರವೂ ಬರೆಯುವ ರೀತಿ, ಮತ್ತು ಎತ್ತರವಿರುವಂತೆ ಮಾಡಿದ್ದರೆ ಇವರ ಶ್ರಮವು ಸಾರ್ಥಕವಾಗುತ್ತಿತ್ತು. ಇದರ ಬೆಲೆ ೦—೧—೦. ಈ ಲೇಖನ ಪುಸ್ತಕವನ್ನು ಪ್ರಾರಂಭಿಸಿದ ಮೇಲೆ ವಿದ್ಯಾರ್ಥಿಗಳು ೮ ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳಿಗೆ ಇವು ಬಹುಯೋಗ್ಯವಾಗಿ ಒಂದು ಬಗೆಯ ಪುಸ್ತಕವನ್ನು ಒಂದಾಗಿ ೫ ರೂ. ಬೆಲೆ ಬಾಳುವ ಬಹುಮಾನಗಳನ್ನು ಕೊಡುವುದಾಗಿ ಪ್ರಕಟಿಸಿರುವುದು ಪ್ರಶಂಸನೀಯವಾಗಿರುತ್ತದೆ

ರಾಜಧಾನಿಯ ಜನರಲ್ ಆಸ್ಪತ್ರೆಯ ಅಧಿಕಾರವನ್ನು ಮಿ॥ ಕೃಷ್ಣಸ್ವಾಮಿಅಯ್ಯರ್‌ರವರಿಂದ ಸರ್ಜನ್ ಪ್ರೊಫೆಸರ್ ರವರು ಕಳೆದ ತಾ॥ ೪ರಲ್ಲಿ ವಹಿಸಿಕೊಂಡರು. ಮಹಾರಾಣಿಯವರ ಆಸ್ಪತ್ರೆಯು ಮತ್ತು ಹಾಸ್ಪಿಟಲ್ ಮೇಟ್ರನ್ ಕೆಲಸಗಳ ಅಧಿಕಾರವು ಎಂದಿನಂತೆ ಮಿ॥ ಮೆಡಿಕಲ್ ಆಫೀಸರರ ಅಧಿಕಾರದಲ್ಲಿಯೇ ಇರುವುದು.

ದ್ದವಿದ್ಯೆಯನ್ನು ಕಲಿತು ಬರಲು
ಣಾವಮಾಡುವರೆಂಬ ವದಂತಿಯು
ರೀಲ್‌ಆಸ್ಪತ್ರೆಗೆ ಚಿಕಿತ್ಸೆಗಾಗಿ
ಚಿಕ್ಕವರು ಎಂಬ ಭೇದವಿಲ್ಲದೆ
ದವರಿಂದ ಕಾಲಾಂತ್ಯವಲ್ಲದೆ,
ಅಗತ್ಯ ಕೆಲಸಗಾರರನ್ನೂ ವಿಶ

ಮನ್ನಣೆಗೂ ಪಾತ್ರರಾಗಿರುವರು. ವಿತಥಾಪಿಗಳೂ ದಯಾದ್ರ್ರಹೃದಯರೂ, ಶಾಂತಮೂರ್ತಿಯೂ ಆಗಿರುವ ತಾ॥ ಅಯ್ಯರ್‌ರವರು ಜನರಲ್ ಆಸ್ಪತ್ರೆಯನ್ನು ಬಿಟ್ಟು ಹೋದುದರಿಂದ ಅನೇಕ ರೋಗಿಗಳು ಬಹಳ ದುಃಖಿತರಾಗಿ ಚಿಂತಿಸುತ್ತಾರೆ ಇವರಿಗೆ ಬದಲು ಬಂದಿರುವ ಮೇಜರ್‌ರವರು ಶಸ್ತ್ರಚಿಕಿತ್ಸೆಯಲ್ಲಿ ವಿಶೇಷ ಪರಿಶ್ರಮವುಳ್ಳವರಾಗಿರುವುದಲ್ಲದೆ ಶಾಂತಸ್ವಭಾವದವರಾಗಿ ತೋರುತ್ತಿರುವುದರಿಂದ ತಾ॥ ಅಯ್ಯರ್‌ರವರಿಗಿಂತಲೂ ಅಧಿಕವಾದ ಜನಾನುರಾಗವನ್ನು ಸಂಪಾದಿಸುವರೆಂದು ನಂಬಿದ್ದೇವೆ

ವರ್ತಮಾನ ಸಂಗ್ರಹವು.

ಬಿಜಾಪುರ ಬೋಲಾಪುರ ಅಹಮ್ಮದ್‌ನಗರದ ಜಿಲ್ಲೆಗಳಲ್ಲಿ ಮಳೆಯಿಲ್ಲದೆ ಬಹಳ ತೊಂದರೆಯಾಗಿದೆ

ಗುಜರಾತಿನ "ಐಮನಿಪಾಲಣಕಾಲ್ಗ" ಈಗಲೂ ೩೬ ನಂಬರುಗಳು ರೀತಿ ಸರ್ಕಾರದ ವಶವಾಗಿ ನಿಲ್ಲುತ್ತಿದ್ದಾರೆ

ಲಾರ್ಡ್ ಕಾರ್ಮೈಕೇಲ್‌ರವರು ಈಗ ತಮ್ಮ ಪತ್ನೀ ಸಮೇತರಾಗಿ ಸಿಮ್ಲಾಕ್ಕೆ ಹೋಗಿ ವೈಸ್‌ರಾಯರ ಅತಿಥಿಗಳಲ್ಲಿದ್ದಾರೆ

ಬರುವ ವರ್ಷದ ಜನವರಿ ತಾ ೬ ಗಲ್ಲಿ ದಿಲ್ಲಿ ಪಟ್ಟಣದಲ್ಲಿ ಹಿಂದಲನೆ ಕಾನ್ಫರೆನ್ಸ್ ನಡೆಸ ನಿರ್ಣಯ ಸಭೆಯು ನಡೆಯುವುದಾಗಿದೆ

ಸ್ವದೇಶೀವೊಳ ಮೆಯು ಒದು ಬೇರೊಬ್ಬರುವರಲ್ಲ ವರ್ತನಾದಿಂದ ಬಹಳ ಹಿಂದೆ ವರ್ಷದಲ್ಲಿ ಎಲ್ಲಾ ರಾಷ್ಟ್ರೀಯ ಸಭೆಗಳ ಪ್ರಯತ್ನ ನಡೆಸುತ್ತಿದ್ದಾರೆ

ಸಿಕ್ಕಲ್ಪಟ್ಟವರಲ್ಲಿ ಯೂರೋಪಿಯನ್ ಸರ್ವೀಸಿನವರು ಮೇಲಿನಿಂದ ಕೆಲಸಗಾರರು ಪಟ್ಟ ಹಿಡಿದು ಕೆಲಸಕ್ಕೆ ಹೋಗದೆ ನಿಂತಿ ಬಿಟ್ಟಿದ್ದಾರೆ. ಕಾರ್ಖಾನೆಗಳ ಬಾಗಿಲುಗಳು ಎಲ್ಲವೂ ಮುಚ್ಚಲ್ಪಟ್ಟಿರುವವು ತುಂಬಾ ಕಷ್ಟದಲ್ಲಿ ಇರುತ್ತಾರೆ. ಹಣವಳಿಸಿಯ ಕೆಲಸದವರಲ್ಲಿ ಬಂದಿ ಹೊಳೆಯುವುದು ಮೊದಲಾದ ಕೆಲಸವನ್ನು ಮಾಡುತ್ತಿದ್ದಾರೆ

ಬೊಂಬಾಯಿ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್ ರವರು ಅಕ್ಟೋಬರ್ ತಿಂಗಳಿಂದ ಪತ್ತೆ ೬ ತಿಂಗಳವರೆಗೂ ಅದೇ ಉದ್ಯೋಗದ ಮೇಲೆಯೇ ಇರಬೇಕೆಂದು ಸೆಕ್ರೆಟರಿ ಆಫ್ ಸ್ಟೇಟ್ ರವರು ತೀರ್ಮಾನಿಸಿರುವರಂತೆ, ಅನಂತರದ ಅವರು ಮುಂದಿನ ವರ್ಷದ ಏಪ್ರಿಲ್ ತಿಂಗಳಲ್ಲಿ ಸೀಮೆಗೆ ಪ್ರಯಾಣ ಮಾಡುವವರಾಗಿರುವರು.

ಉದಯಪುರದ ಮಹಾರಾಣರು ಹಿಂದೂ ವಿಶ್ವವಿದ್ಯಾಲಯಕ್ಕೆ ಲಕ್ಷ ರೂಗಳನ್ನು ಕೊಟ್ಟರು ಪಂಡಿತ ಮದನಮೋಹನ ಮಾಲವೀಯರವರು ಇಂದಾರಿಗೆ ಹೋಗಿದ್ದಾಗ್ಗೆ ಅಲ್ಲಿನ ಮಹಾರಾಜರವರ ಅಧ್ಯಕ್ಷತೆಯಿಂದ ಕೂಡಿದ ಸಭೆಯಲ್ಲಿ ವಿಶ್ವವಿದ್ಯಾಲಯದ ಆವಶ್ಯಕತೆಯನ್ನು ಕುರಿತು ಉಪನ್ಯಾಸ ಮಾಡಿದರು. ಆ ಮಹಾರಾಜರು ೫ ಲಕ್ಷ ರೂ ಗಳನ್ನು ಕೊಟ್ಟರು ಉತ್ತರ ಇನ್ನು ೫ ಲಕ್ಷ ರೂಗಳನ್ನು ಕೊಡುವೆವೆಂದು ವಾಗ್ದಾನ ಮಾಡಿದರು

ಪಂಜಾಬ್ಪ್ರಾಂತ್ಯದ ಕಣೆಸಿಗರನ್ನು ತೆಗೆಯುವ ಜನರಿಗೆ ತೊಂದರೆಯುಂಟಾಗದಂತೆ ಮಾಡುವುದಕ್ಕಾಗಿ ಆಂಗ್ಲಪ್ರಭುತ್ವದವರು ಏರ್ಪಡಿಸಿಕೊಂಡಿರುವ ಒಪ್ಪಂದದ ಪ್ರಕಾರ ಆ ಪ್ರಾಂತ್ಯದ ಜಮೀನುದಾರರು ಅವರ ಪ್ರಾಂತ್ಯದಲ್ಲಿ ಅನುಕೂಲಗಳನ್ನು ಕೊಡಬೇಕೆಂದು ಮುಂದಿನ ಗವರ್ನರ್‌ಜನರಲ್ ಎಂಬ ಸ್ಥಳಕ್ಕೆ ಅಟ್ಟಿದ್ದಾರೆ ಆ ಪ್ರಾಂತ್ಯದ ಪ್ರತಿಯೊಂದು ಗ್ರಾಮದ ಸಂರಕ್ಷಣೆಗೋಸ್ಕರವಾಗಿ ಸುತ್ತಲಿನ ಗ್ರಾಮಗಳ ಮೇಲೆಲ್ಲಾ ಪೋಲೀಸು ತೆರಿಗೆಯನ್ನು ಹಾಕಬೇಕೆಂದಿದ್ದಾರೆ.

ಭರತಖಂಡದಲ್ಲಿ ಬೇಟೆಯಾಡುವ ಪಕ್ಷಿಗಳು ಪಕ್ಷಿಗಳ ಕೊಲ್ಲುವುದು ಜಾಸ್ತಿ ಇದೆ ಬೆಳೆಸಿದ ಪೈರುಗಳ ಹುಳುಗಳನ್ನು ಈ ಪಕ್ಷಿಗಳು ತಿನ್ನುವುದರಿಂದ ಇಂಥ ಪಕ್ಷಿಗಳ ನಿರ್ನಾಮದಿಂದ ಬೆಳೆಸಿಗೆ ಹುಳುಗಳ ಬಾಧೆ ಅಧಿಕವಾಗುತ್ತಿದೆ ಕೆಲವು ಪಕ್ಷಿಗಳ ತುಪ್ಪಳವನ್ನು ಸೀಮೆಗೆ ರಫ್ತು ಮಾಡುತ್ತಿದ್ದಾರೆ ಅದುಕಾರಣ ಈ ಪಕ್ಷಿಗಳನ್ನು ಕೊಲ್ಲುವುದು ಬಾರದೆ ಒಂದು ವಿಧಿಯನ್ನೇರ್ಪಡಿಸಿದರೆ ಶ್ರೇಯಸ್ಕರವಾಗುವುದೆಂದು ಬಂಗಾಳಿ ಟೈಂಸ್ ಪತ್ರಿಕೆಗೆ ಒಬ್ಬರು ಬರೆದುಕೊಂಡಿದ್ದಾರೆ. ಇದು ಯುಕ್ತವಾದ ಸೂಚನೆ

ಭರತಖಂಡದ ವ್ಯಾಪಾರಾಭಿವೃದ್ಧಿಯಲ್ಲಿರುವ ಅನೇಕ ವ್ಯಾಪಾರಾಧಿಕಾರಿಗಳ ಭದ್ರತಾಪತ್ರ ನಿರ್ವಹಣೆ ಪರಿಶೀಲಿಸಲ್ಪಟ್ಟಿತು

ಲೂ ಕರಿ ರೇಶುಮೆ ಆಗಿರುವವರು — ಸ್ವದೇಶ
ರೇಷ್ಮೆ ನಾಗಿರುವ ವರ್ತಕರು — ಬಂಗಾಳ
ತಿಗಳನ್ನು ಆರಿಸ್ಸ ಆದವರು — ಈ ವಿಧ
ಯುವನ್ನು ವಿಚಾರಿಸುವುದೇ — ಹೋಯಿತು
ಅವೃದ್ಧಿಯ ಹೇಳಿಕೆ ಎಂದು ಸಿಂ — ರ ಪತ್ರ
ಯಾವಾಧಿಕಾರಿಯಾಗಿದ್ದ ಸರ್ — ಲಂಡ
ಪ್ರತಿಪ್ರಮಾಣ ಪತ್ರಿಕೆಗೆ ಬರೆದ

ನನ್ನ ಜಂಪರು ಜಾರ್ಜ್ ಪ್ರಾಸ್ಟರ್‌ರವರು ಒಂದು ಪತ್ರಿಕೆಗಳಿಗೆ ಬರೆದ ಒಂದು ಪತ್ರದಲ್ಲಿ ಹಿಂದೆ ಬರದಲ್ಲಿ ಅನೇಕ ಪಕ್ಷಿಗಳನ್ನು ಬೇಟೆಯಾಡಿ ತಿಂದರು ಇದಕ್ಕೆ ಮುಂಚೆ ಮತ್ತೊಂದು ದಿನದಲ್ಲಿ ದಾರ್ಜಿ ಪ್ರಭುಗಳೊ ಇನ್ನಾರು ಮಂದಿಯೂ ಸೇರಿ ಒಂದೇದಿನದಲ್ಲಿ ೫೦೦ ಪಕ್ಷಿಗಳನ್ನು ಕೊಂದು ಹಾಕಿದ್ದಂತೆ ಮಾಡುತ್ತಿರುವಾಗಲೇ ಪಕ್ಷಿಗಳನ್ನು ಬೇಟೆಯಾಡುವುದರಲ್ಲಿ ಈ ನಮ್ಮ ಪ್ರಭುಗಳಿಗೆ ಬಲು ಇಷ್ಟವಾಗಿರುವುದು ಈ ತರದ ಬೇಟೆಯಲ್ಲಿ ಇವರಿಗಿಂತ ಮಿಂಚಿದ ಬೇಟೆಗಾರರು ಮತ್ತಾರೂ ಇಲ್ಲವೇ ?

ಅಫೀಮನ್ನು ಹುಕ್ಕಾದಲ್ಲಿಟ್ಟು ಧೂಮವನ್ನು ಸೇದುವಂತೆ ಸೇದುವವರು ಭರತಖಂಡದಲ್ಲಿ ಅನೇಕರಿದ್ದಾರೆ ಹೀಗೆ ಸೇವನೆ ಮಾಡುವುದರಿಂದ ಅಫೀಮನ್ನು ತಿನ್ನುವುದರಿಂದಾಗುವ ಅನರ್ಥಕ್ಕಿಂತಲೂ ಜಾಸ್ತಿ ಅನರ್ಥವಾಗುವುದು ಅದುಕಾರಣ, ಒಂದು ಸ್ಥಳದಲ್ಲಿ ಮೂರುಮಂದಿ ಸೇರಿ ಅಫೀಮನ್ನು ಸೇದುತ್ತಿದ್ದರೆ ಅಂಥವರನ್ನು ಪ್ರಾಸಿಕ್ಯೂಟ್ ಮಾಡಬಹುದೆಂದು ಪಂಜಾಬ್ ರಾಜ್ಯದವರು ಇತ್ತೀಚೆಗೆ ಒಂದು ಶಾಸನವನ್ನು ಮಾಡಿದವರಾಗಿದ್ದಾರೆ ಅಫೀಮು ಸೇವನೆಯ ಅಭ್ಯಾಸವುಳ್ಳ ಮನುಷ್ಯನು ಕ್ರಮೇಣ ಅದನ್ನು ಬಿಟ್ಟರೆ ಗುಣಹೊಂದಬಹುದು ಅಫೀಮು ಪ್ರತಿಯೊಬ್ಬನಿಗೂ ಸ್ವಲ್ಪ ಸ್ವಲ್ಪ ಸಮಾಧಾನವಾಗುವುದು ಮತ್ತೂ ಅದರ ಬೆಲೆಯು ಇನ್ನೂ ಹೆಚ್ಚುತ್ತಿರುವುದು

ತಾಸ್ಕರ್ ಜಿಲ್ಲೆಯ ಒಬ್ಬನು ಪ್ರಾರ್ಥನೆಯ ಒಂದು ದಿನ ಕೆಲಸಗಾರನಾದ ಗುಮಾಸ್ತನು ಅತನು ಕೆಲವೊಂದು ಅನೇಕ ತತ್ವಗಳನ್ನು ವಿವರಿಸುವ ಅನೇಕ ಪುಸ್ತಕಗಳನ್ನು ಓದಿ ತಾನು ಕಲ್ಪಿತವನ್ನು ರಾತ್ರಿಯ ಕೊಠಡಿಯಲ್ಲಿ ನೋಡುವ ಕೆಲಸವನ್ನು ಕೈಕೊಂಡನು ಕೋಟಿ ಸ್ಥಳಗಳಿಂದ ಅವನ ವಾಸಸ್ಥಳದ ಸಮಯವನ್ನು ನೋಡಿ, ಅವನ ಮನೆಗೆ ಬಂದು ಸುತ್ತಮುತ್ತಲಿನಂತೆ ಹೋಗಿ, ಅವುಗಳ ಮೇಲೆ ಯಜಮಾನನಂತೆ ಅಧಿಕಾರವನ್ನು ಮಾಡುತ್ತ, ಹೀಗೆಯೇ ಕಳವಿನ ನಿಂದ ಹಣವನ್ನು ಅಪಹರಿಸಿಕೊಂಡು ಬರುತ್ತಿದ್ದನು. ಆ ಅ ಮನೆಯ ಯಜಮಾನರ ಬಾಂಕಿನ ಪುಸ್ತಕಗಳನ್ನು ಕದ್ದು ತಂದು, ಅವರ ಹಸ್ತಾಕ್ಷರದ ಚೆಕ್ಕನ್ನು ಬರೆದು ಬ್ಯಾಂಕಿಗೆ ಕೊಟ್ಟು ಬಹಳ ಹಣವನ್ನು ಸಂಪಾದಿಸಿದನು ಕೊನೆಗೆ ಇವನು ಪೋಲೀಸರ ಕೈಗೆ ಸಿಕ್ಕಿ ಬಿದ್ದನು ಆಗ ದಂಡಾಧಿಕಾರಿಗಳಿಗೆ ನಾನು ೫೦೦ ಲಕ್ಷ ರೂ ಗಳವರೆಗೆ ಕದ್ದಿರುವೆನೆಂದೂ, ಅದರಲ್ಲಿ ೧ ಕಾಸಿನಷ್ಟು ಉಪಯೋಗಿಸಿಕೊಳ್ಳದೆ ಭದ್ರವಾಗಿ ಇಟ್ಟಿರುವೆನೆಂದೂ, ತಾನು ಜೀವನಕ್ಕೋಸ್ಕರ ಪುಸ್ತಕಗಳಲ್ಲಿ ಕಂಡ ವಿಷಯವನ್ನು ಅನುಭವದ ಮೂಲಕ ಪರೀಕ್ಷಿಸುವುದಕ್ಕಾಗಿ ಹೀಗೆ ಮಾಡಿದೆನೆಂದೂ, ಅದರಲ್ಲಿ ಕಾಸಿನ ಹಣವೂ ನಾನು ಉಪಯೋಗಿಸಲಿಲ್ಲವೆಂದೂ, ಅಂತ ಕರ್ಮಕ್ಕಾಗಿ ಅಣುಮಾತ್ರವಿಲ್ಲ ಇಂತ ಕಾರ್ಯದ ಮನೆಯವರು ಆ ಪುಸ್ತಕಗಳ ಪ್ರಭಾವದಿಂದ ಹೀಗಾಯಿತೆಂದೂ ಹೇಳಿದನು ಮನ್ನಿಸಬೇಕೆಂದೂ ವಿಚಾರಕನು ಆಲೋಚಿಸಿ ಬಿಡಬೇಕೆಂದೂ, ತಾನು ಕಾರ್ಯಕ್ಕೆ ಬೇಕಾದರೂ ಹೇಳಲು ಸಿದ್ಧನಾಗಿರುವೆನೆಂದ ಹೇಳಿಕೆಯನ್ನು ಕೊಟ್ಟಿರುವನು.

ಬೊಂಬಾಯಿಗೆ ಎಂ ವಿ ಕಿ ದೂರದಲ್ಲಿರುವ ರಾಗಿರಾದ ವಿಡಲ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿರುವ ಗೆಟಾಸನ ಗೋವಿಂದ ನಾರಾಯಣ ನೆಂಬುವವನು ನಾಲ್ಕು ಮಂದಿಗಳೊಡನೆ ಬೇರೆಬೇರೆ ಸಮಯಗಳಲ್ಲಿ ಆಂಗ್ಲ ಸರ್ಕಾರಕ್ಕೆ ವ್ಯತಿರೇಕವಾಗಿ ವರ್ತಿಸಿದನು ಆ ಸಮಯಗಳು ಇ ಪಿ. ಕೋಡು ೧೨೪ ನೇ ವಿಧಿಯ ಪ್ರಕಾರ ಶಿಕ್ಷಾರ್ಹವಾದವುಗಳೆಂಬ ಕಾರಣದಿಂದ ಅವನು ಶಿಕ್ಷೆಗೆ ಗುರಿಮಾಡಲ್ಪಟ್ಟನು. ಅತನು ದತ್ತ ಎಂಬ ವಿದ್ಯಾರ್ಥಿಯೊಡನೆ ಅಜ್ಞಾನಿಯಂದು ಸನ್ಯಾಸವನ್ನು ಹಿಡಿಸುತ್ತಿದ್ದಾರೆ ಸಮೂಹ ಗ್ರಾಮಾದ್ಯವ್ಯ ಅಧಿಪರನ್ನು ನಮ್ಮ ಮತವನ್ನು ಪ್ರಾಚೀನದಂತೆ ಪ್ರಜೆಗಳನ್ನು ಆಳುತ್ತಿದ್ದಾರೆ. ಕೆಲವು ದಿನಗಳ ಮೇಲೆ ಪತ್ರದ ನಾನ್ಯಾಯವನ್ನು ಕೊಡ ಮಾಡಿ ವ್ಯವಹಾರಕ್ಕೆ ತರುತ್ತಾರೆ ಪದ್ಯ ವ್ಯಾಪಾರದಲ್ಲಿ ಅವರು ಪ್ರೋತ್ಸಾಹ ಕೊಡ ಬೇಕಿಲ್ಲ ನಮ್ಮ ಮೇಲೆ ಕಂಡಾಯಗಳನ್ನು ಹೆಚ್ಚಿಸುತ್ತಿದ್ದಾರೆ ಅದುಕಾರಣ ನಾವೆಲ್ಲರೂ ಒಗ್ಗಟ್ಟಾಗಿ ಸ್ವರಾಜ್ಯವನ್ನು ಸಂಪಾದಿಸಬೇಕು ಎಂದು ಬೋಧಿಸಿದನು, ಮತ್ತೂ ಒಬ್ಬ ಮಾರೋಡೆಯನು ಒಬ್ಬ ಜಂಗಮನನ್ನು ಹಿಡಿದುಬಿಟ್ಟರೂ ಅವನಿಗೆ ಶಿಕ್ಷೆಯಾಗದೆ ಹೋಯಿತು ಎಂದು ಹೇಳಿದನಂತೆ, ಅವರು ಬರೆದಿದ್ದ ಪದ್ಯಗಳನ್ನು ಕೆಲವರು ಓದಿ ಕೇಳಿದರು, ತಿಲಕರನ್ನು ಕಾರಾಗೃಹಕ್ಕೆ ಕಳುಹಿಸಿದುದು ಅನ್ಯಾಯವೆಂದು ಅನೇಕರು ನುಡಿದರು. ಇಲ್ಲಿಂದ ಸ್ವಲ್ಪ ದೂರ ಕೂರ ಸಂಬಂಧಿಸಿ ಬಂದು ಬೋಧಿಸುತ್ತಿದ್ದ

ನ. ಇವುಗಳ ತಾ — ಪಿಕಾಣಿಯು. ಈ
ಕಾದಿನ ೧ ನವ್ವ — ಸಂಸ್ಕೃತ, ಎಂ
ಸಿಕ ಇರಿ ಅ ೧ — ಎ. ಪಿ ಶಿಷ್ಯ ಸು
ನು ಆ ಹೋಟೆಲಿನ — ಸಿಂಗ , ಗೋಟ
ಜನ್ಮ ವಾಗಿದ ಜಿಪ — ಪ್ರಸವನ್ನು ಹಾಜ
ರಾಜ್ಯದ ಸ್ಥಾಪನ — ಸಿದ್ಧ ವ್ಯಾಪಾರ
ವರ್ತಕರು ೧೯ —

ಸತ್ರ ಪ್ರ ಪಂಚ ವೃತ್ತ.

ವೀರಶೈವ ಮಹಾಸಭೆ.

ಕೆಲವು ದಿವಸಗಳ ಹಿಂದೆ ತಮ್ಮ ಪತ್ರಿಕೆಯಲ್ಲಿ ಈ ವರ್ಷ ಕೊಲ್ಲಾಪುರದಲ್ಲಿ ನೆರೆಯುವ ಮಹಾಸಭೆಗೆ ಶ್ರೀಮಂತ ಬಂಡೆಮ್ಮಾರಿ ದೇಸಾಯಿಯವರು ಅಧ್ಯಕ್ಷರಾಗುವುದು ಯುಕ್ತವೆಂದು ಒಬ್ಬ ಪತ್ರವ್ಯವಹಾರಕರರು ಸೂಚಿಸಿರುವರಷ್ಟೆ. ಶ್ರೀಮಂತದೇಸಾಯಿಯವರು ಅಧ್ಯಕ್ಷ ಸ್ಥಾನವನ್ನು ವಹಿಸಲಿಕ್ಕೆ ವಿಶೇಷವಾಗಿ ಯೋಗ್ಯರಾಗಿದ್ದರೂ ಕೆಲವು ಕಾರಣಗಳ ಪ್ರಯುಕ್ತ ಈ ಸಾರೆ ಅವರು ಅಧ್ಯಕ್ಷರಾಗುವದಕ್ಕಿಂತ ಬೇರೆ ಯಾರಾದರೂ ಆ ಸ್ಥಾನವನ್ನು ವಹಿಸಿದರೆ ಹೆಚ್ಚು ಯುಕ್ತವಾದದ್ದೆಂದು ನನ್ನ ಅಲ್ಪ ಮತಿಗೆ ತೋರುವ ಅಭಿಪ್ರಾಯವಾಗಿದೆ. ಶ್ರೀಮಂತ ದೇಸಾಯಿಯವರು ಕೊಲ್ಲಾಪುರಕ್ಕೆ ಸಮೀಪವಾದ ಪ್ರಾಂತದಲ್ಲಿ ವಾಸಿಸುವದಲ್ಲದೆ ಕೊಲ್ಲಾಪುರ ಸಂಸ್ಥಾನದ ಸೀಮೆಯೊಳಗೆ ಅವರ ಆಸ್ತಿಯು ಕೆಲವು ಅಂಶವು ಇರುವುದೆಂದೂ ನನ್ನ ಕೇಳಿಕೆಯುಂಟು. ಹೀಗಾದ ವೇಳೆ ಅವರು ಒಂದು ರೀತಿಯಿಂದ ಸದರಿ ಸಂಸ್ಥಾನದ ಪ್ರಜೆಯೆಂದು ಸಹ ಅನ್ನಬಹುದು. ಕಾರಣ ಸ್ಥಳಿಕ ಜನರನ್ನೇ ಅಧ್ಯಕ್ಷರನ್ನಾಗಿ ಆರಿಸುವುದಕ್ಕಿಂತ ದೂರದಲ್ಲಿರುವ ಪ್ರಾಂತದ ಯಾರನ್ನಾದರೂ ಆರಿಸುವುದು ಹಿತಕರವಾದದ್ದು. ಅಲ್ಲದೆ ಹೋದರೆ ದೂರದಲ್ಲಿರುವ ಪ್ರಾಂತದ ಜನರ ಲಕ್ಷವು ಸಭೆಯ ಕಡೆಗೆ ಕಡಿಮೆಯಾಗುವ ಮಾತ್ರ ಅಲ್ಲದೆ ಸಭೆಯ ಮುಂದಾಳುಗಳ ಕಾರ್ಯದ ಬಗ್ಗೆ ತಪ್ಪು ತಿಳುವಳಿಕೆಯಾಗುವ ಸಂಭವವುಂಟು. ನಮ್ಮಲ್ಲಿ ಈವರೆಗೆ ಅಧ್ಯಕ್ಷಸ್ಥಾನದ ಮಾನವನ್ನು ಹೊಂದದ ಯೋಗ್ಯ ಜನರು ಅನೇಕರಿರುವರು. ಇವರಲ್ಲಿ ಬೆಳಗಾವಿಯ ಡಾ॥ ಡಾ॥ ಕಲಕೋಟಿ ಹೂಗಾರ ರಾ॥ ಬಸವರಾಜ ಹೊಳೆಯವರು ಚನಪಾಳಗೌಡ ಅಂಟಾಳಕರವರು ಒಬ್ಬರಾಗಿರುವರು. ಈ ಸಾರೆಯ ಅಧ್ಯಕ್ಷಸ್ಥಾನವನ್ನು ಇವರಿಗೆ ಕೊಡಬೇಕೆನ್ನುವ ಸೂಚನೆಯನ್ನು ಯಾವತ್ತೂ ಜನರು ಆಕ್ಷೇಪವಿಲ್ಲದೆ ಮನಃಪೂರ್ವಕವಾಗಿ ಸ್ವೀಕರಿಸಬಹುದೆಂದು ನನ್ನ ನಂಬಿಗೆಯು ಉಂಟು. ಸ್ವಾಗತ ಕಮಿಟಿಯ ಬೇರೆ ಮನ್ನಣೆಯ ಮೆಂಬರರೂ ಈ ವಿಷಯವನ್ನು ಚೆನ್ನಾಗಿ ಲಕ್ಷದಲ್ಲಿ ತಂದು ಯಾವ ಯಾವ ಕಾಲಕ್ಕೆ ಯಾರ ಯಾರ ಉಪಯೋಗ ವಿಶೇಷವಾಗಬಹುದೆಂಬುದನ್ನು ವಿಚಾರಿಸಿ ಮುಂದಿನ ಕಾರ್ಯವನ್ನು ಜರುಗಿಸಬೇಕೆಂದು ನನ್ನ ವಿನಯಪೂರ್ವಕ ಸೂಚನೆಯಿದೆ.

ಇನ್ನೊಂದು ಮಹತ್ವದ ಸೂಚನೆಯೇನೆಂದರೆ ವೀ. ಮಹಾಸಭೆಯು ರಚನೆಯಾದಾಗಿನಿಂದ ವೇಳೆಯಿಂದ ವೇಳೆಗೆ ಬೇರೆ ಬೇರೆ ಸಭೆಗಳಲ್ಲಿ ನಿಯಮಗಳಾಗುತ್ತಾ ಬಂದಿದ್ದು ಅವುಗಳಲ್ಲಿ ಕೆಲವು ಒಂದಕ್ಕೊಂದು ವಿರುದ್ಧವಾಗಿ ಕಂಡುಬರುತ್ತಿದ್ದರೂ ಆ ವಿರೋಧವನ್ನು ಹೋಗಲಾಡಿಸಿ ಅವುಗಳನ್ನು ಸರಿಪಡಿಸುವ ಕ್ರಮವನ್ನು ಈವರೆಗೆ ಯಾರೂ ವಹಿಸಿದ ಇರುವರು ನಮ್ಮ ಮುಂದಾಳುಗಳಲ್ಲಿಯ ಕರ್ತವ್ಯಹೀನತೆಯನ್ನು ಸ್ಪಷ್ಟಪಡಿಸುತ್ತದೆ. ನೀತಿ ಈ ವಿರೋಧವನ್ನು ವಿಸ್ತಾರವಾಗಿ ಹೇಳುವ ಕಾರಣವಿಲ್ಲ. ಬೇರೆ ಬೇರೆ ಮಹಾಸಭೆಗಳಲ್ಲಿಯೂ ವಿಜಾಪುರದಲ್ಲಿ ಆದೆಯ ವರ್ಷ ನೆರೆದ ಸ್ಟ್ಯಾಂಡಿಂಗ ಕಮಿಟಿಯ ಸಭೆಯಲ್ಲಿಯೂ ಓದಿದ ಎಲ್ಲ ನಿಯಮಗಳನ್ನೂ ಓದಿದರೆ ಈ ವಿರೋಧವು ಸಹಜವಾಗಿ ಕಾಣಬರುತ್ತದೆ. ಬರುವ ಸಭೆಯಲ್ಲಿ ಈ ವಿಷಯವನ್ನು ಚೆನ್ನಾಗಿ ಚರ್ಚಿಸಿ ಮೇಲೆ ಹೇಳಿದ ವಿರೋಧವನ್ನು ಹೋಗಲಾಡಿಸಿ ಮಹಾಸಭೆಯು ಕೆಲಸವು ಮುಂದೆ ನಿರಾತಂಕವಾಗಿ ಸಾಗುವಂತೆ ಒಂದು ಘಟನೆಯ ವಿಧಾನವಾಗುವಂತೆ ಮಾಡುವ ಶ್ರೇಯಸ್ಸನ್ನು ಸಭೆಯು ಮುಂದಾಳುಗಳು ಹೊಂದುವರೆಂದು ಅಪೇಕ್ಷಿಸುತ್ತೇನೆ.

ಒಬ್ಬ ಸ್ಟ್ಯಾಂಡಿಂಗ ಕಮಿಟಿ ಮೆಂಬರ

ವಿ. ನೇಟಿವ ವಿಜಾಪುರ ಜಿಲ್ಲಾ ಸಭೆಯು.

(ಕಳೆದಸಾರಿಯ ಶೇಷ)

(ಅ) ಸಂಸ್ಕೃತ ಪಾಠಶಾಲೆಗಳು

ರಾ॥ ರಾ॥ ವೀರಭದ್ರಪ್ಪನವರು ಪಾಟೀಲ ಸೊಲ್ಲಾಪುರ:— ಸಂಸ್ಕೃತ ಪಾಠಶಾಲೆಗಳಿಗಾಗಿ ನಮ್ಮ ಜನರು ಬಹಳ ಹಣ ಖರ್ಚುಮಾಡುತ್ತಿದ್ದಾರೆ. ಆದರೆ ಇವುಗಳಿಂದ ನಮ್ಮ ಸಮಾಜಕ್ಕೆ ಉಪಯೋಗವಾಗಲಿಲ್ಲ. ಪಾಠಶಾಲೆಯ ಅಭ್ಯಾಸ ಕ್ರಮವು ಬೇನ್ನಾಗಿಲ್ಲ. ಶ್ರೀಮಂತ ಅಗ್ನಿಹೋತ್ರಿಗಳು ಪಾಠದ ಇವರು ಕಾಶಿ ಪಠಣ ಪಾಠಶಾಲೆ ನಡೆಸಿದ್ದಾರೆ. ಆದರೆ ಅದರಿಂದ ಆಗತಕ್ಕಷ್ಟು ಉಪಯೋಗವಿಲ್ಲ. [illegible]

[illegible]

ರಿಂದ ಸಂಸ್ಕೃತ ಪಾಠಶಾಲೆಗಳು ಅಪಾಯವಾಗಿಲ್ಲ. — ಸಂಸ್ಕೃತ ಪಾಠಶಾಲೆಯು ಉಪಯೋಗವು ಆಗತಕ್ಕದ್ದೆಂದು ಶ್ರೀಮಂತ ಅಪ್ಪಾಸಾಹೇಬರು ಅನೇಕರಿಂದ ಹೇಳುವದನ್ನು ನಾನು ಕೇಳಿದ್ದೇನೆ. ಶಿವ ಆಗಿದರಲ್ಲಿ ಸಂಸ್ಕೃತದಂತೆ ಕನ್ನಡ ಒಬ್ಬ ಇಂಗ್ಲೀಷು ಗ್ರಾಜ್ಯುಯೇಟ ವನ್ನು ಅವರು ತಮ್ಮ ಪಾಠಶಾಲೆಯಲ್ಲಿ ಇಟ್ಟರು. ವಿಜಾಪುರದಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ೭-೮ ವರ್ಷ ನಡೆದು ಅದು ಅನುಪಯೋಗವಾದದರಿಂದ ತೆಗೆದು ಹಾಕಲ್ಪಟ್ಟು ಅದರ ಹಣವು ಅಲ್ಲಿಯವರಿಂದ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಿದೆ. ಇಂಗ್ಲೀಷ್ ಗ್ರಾಜ್ಯುಯೇಟರೆಂದರೆ ಸಹ ಅವರು ಸಂಸ್ಕೃತ ವಿದ್ಯಾಭ್ಯಾಸ ಮಾಡಬೇಕಾಗುವುದು. ಮತ್ತು ಈ ತರದ ಶಿಕ್ಷಣವಿದ್ದವರೇ ನಮ್ಮ ಧರ್ಮದ ಮೂಲತತ್ವಗಳನ್ನು ಕಂಡು ಹಿಡಿದು ಪ್ರಸಾರಪಡಿಸಲಿಕ್ಕೆ ಸಾಮರ್ಥ್ಯವುಳ್ಳವರಾಗುವರು. ವಿವೇಕಾನಂದ, ರಾನಡೇ ಮೊದಲಾದವರ ಉದಾಹರಣೆಗಳನ್ನು ನೋಡಿರಿ. ಆರ್ಯ ಜನರು ಒಂದು ಧಾರ್ಮಿಕ ವಿದ್ಯಾಲಯವನ್ನು ಸ್ಥಾಪಿಸಿ, ಅಲ್ಲಿ ವಿದ್ಯಾರ್ಥಿಗಳು ಗ್ರಾಜ್ಯುಯೇಟರೇ ಇರತಕ್ಕದ್ದೆಂದು ಕಟ್ಟು ಮಾಡಿರುವರು. ಮತ್ತೂ ಅವರನ್ನು ಅವರು ತಮ್ಮ ಪ್ರಚಾರಕಾರರನ್ನಾಗಿ ನೇಮಿಸುವರು. ಆದುದರಿಂದ ನಮ್ಮ ಸಾಧಾರಣ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಲಿಕ್ಕೆ ಯತ್ನಿಸದೆ, ಒಂದೇ ಕಡೆಯಲ್ಲಿ ಸ್ಥಾಪಿಸಿ, ಒಂದು ಯೋಗ್ಯ ಶಿಕ್ಷಣ ಕ್ರಮವನ್ನು ಸಿದ್ಧಪಡಿಸತಕ್ಕದ್ದು.

ರಾ॥ ರಾ॥ ಜೋಳ್ಳಪ್ಪ ನಾಗರಾಳ — ಹುನಗುಂದದಲ್ಲಿ ಒಂದು ಪಾಠಶಾಲೆಯು ಇದ್ದು ಅದು ಮುರಿದಿರುತ್ತದೆ. ಈಗಿನ ಪಾಠಶಾಲೆಗಳ ಶಿಕ್ಷಣಕ್ರಮವು ಚೆನ್ನಾಗಿಲ್ಲ. ತಕ್ಕ ಶಿಕ್ಷಕರೂ ಇಲ್ಲ. ಆದುದರಿಂದ ಒಂದೇ ಕಡೆಗೆ ಒಂದು ಸಂಸ್ಕೃತ ಶಾಲೆಯನ್ನು ಸ್ಥಾಪಿಸಿ ಯೋಗ್ಯ ರೀತಿಯಿಂದ ಶಿಕ್ಷಣ ಕೊಡತಕ್ಕದ್ದು.

ಠರಾವ — ಪಾಠಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಲಿಕ್ಕೆ ಪ್ರಯತ್ನಿಸದೆ ಸಮಯೋಚಿತವಾದ ಸ್ಥಳದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿ ಅದಕ್ಕೆ ಎಲ್ಲರೂ ಸಹಾಯ ಮಾಡಬೇಕು. ಮತ್ತೂ ಅದು ಈಗಿನ ಕಾಲಕ್ಕೆ ಅನುಗುಣವಾಗಿ ತಕ್ಕ ಶಿಕ್ಷಣಕ್ರಮವು ಇರತಕ್ಕದ್ದು.

(ಬ) ಧಾರ್ಮಿಕ, ನೈತಿಕ, ಸ್ತ್ರೀ ಪುಸ್ತಕಗಳು.

ಸಿ. ಜಿ. ದೇಸಾಯಿ:— ಬೇರೆ ಬೇರೆ ಭಾಗಗಳಲ್ಲಿ ವೀರಶೈವ ಜನಾಂಗದ ಭಿನ್ನ ಭಿನ್ನ ಆಚಾರಗಳಿರುವವು. ನಮ್ಮ ಧಾರ್ಮಿಕ ತತ್ವಗಳು ಗೊತ್ತಿಲ್ಲ. ಮಿಷನರಿಗಳಂತೆ ಅವುಗಳ ಚಿಕ್ಕ ಸಣ್ಣ ಸಣ್ಣ ಪುಸ್ತಕಗಳನ್ನು ಬರೆಯಿಸುವುದು ಅವಶ್ಯವಾಗಿದೆ. ಈ ಪ್ರಯತ್ನಗಳನ್ನು ನಮ್ಮಲ್ಲಿ ಯಾರೂ ಮಾಡಿಲ್ಲ. ಇಂಥವರು ಯಾರಾದರೂ ಇದ್ದರೆ, ನಮ್ಮ ಸಂಘದವರು ಇವರಿಗೆ ತಕ್ಕ ಸಹಾಯಮಾಡತಕ್ಕದ್ದು. ಶ್ರೀ ಚೆನ್ನಬಸವಣ್ಣನವರ ಚರಿತ್ರೆಯನ್ನು ಮಾಡಿ ಕಳಿಸಿದವರಿಗೆ ೫೦೦ ರೂ. ಬಹುಮಾನಗಳು ಕೊಡುವದಾಗಿ ಇಡಲ್ಪಟ್ಟಿತ್ತು. ಆ ವೇಳೆಗೆ ಮೂವರು ಹಸ್ತಲೇಖನಗಳನ್ನು ಕಳುಹಿಸಿರುವರು. ಇವುಗಳನ್ನು ನೋಡಿ ಬಹುಮಾನ ಕೊಡಲಿಕ್ಕೆ ರಾ॥ ನಾ॥ ಶಾಂತವೀರಪ್ಪ ಮೆಣಸಿನಕಾಯಿ ರಾ॥ ರಾ॥ ಸಿದ್ದರಾಮಪ್ಪ ಸಾಹುಕಾರ, ಗುರು ಭ. ಹಳಕಟ್ಟಿ ಇವರದೊಂದು ಕಮಿಟಿಯನ್ನು ನಿಯಮಿಸತಕ್ಕದ್ದು. ಈ ಚರಿತ್ರೆಯನ್ನು ಅಚ್ಚುಹಾಕಲಿಕ್ಕೆ ಜಿಲ್ಲಾ ಸಭೆಯವರು ೫೦೦ ರೂ. ಮಂಜೂರು ಮಾಡತಕ್ಕದ್ದು. ರಾ॥ ಬಿ. ಬಸವಲಿಂಗಪ್ಪ ಕಾಗಿ ಇವರು ಇದಕ್ಕೆ ಅನುಮೋದಿಸಿದರು. ಇದು ಸರ್ವಾನುಮತದಿಂದ ಪಾಸಾಯಿತು.

(ಕ) ಜಿಲ್ಲಾ ಸಭೆಯು ಫಂಡನ್ನು ಹೆಚ್ಚಿಸುವ ರೀತಿಗಳು.

ಶ್ರೀ ಶಿವಸಿದ್ದಪ್ಪ ಸರನಾಯಕ:— ಜಿಲ್ಲಾ ಸಭಾ ಫಂಡನ್ನು ಬೆಳೆಯಿಸತಕ್ಕದ್ದು. ಇಲ್ಲಿ ಕೂಡಿದ ತಾಲ್ಲೂಕಿನವರು ತಮ್ಮ ತಮ್ಮಲ್ಲಿ ಈ ಬಗ್ಗೆ ಯತ್ನಿಸಿ ಹಣಕೂಡಿಸತಕ್ಕದ್ದು. ಅಗ್ಯಮುಖ್ಯವಾದ ಕಾರ್ಯಗಳಿಗೆ ಈ ಫಂಡಿಗೆ ಹಣ ಕೊಡತಕ್ಕದ್ದು. ನಿಧಾನ ಪ್ರತಿಯೊಬ್ಬ ವೀರಶೈವನೂ ೧ ರೂ. ಯಂತೆಯಾದರೂ ಈ ಫಂಡಿಗೆ ಸಹಾಯಮಾಡತಕ್ಕದ್ದು. ಈ ವೇಳೆಗೆ ಎಲ್ಲರೂ ಚಿನ್ನನವರಿಂದ ಪ್ರಯತ್ನಿಸಿದರೆ ಬೇಕಾದಷ್ಟು ದೊಡ್ಡ ಫಂಡು ಆಗಬಹುದು. ಇದರಿಂದ ವಿದ್ಯಾರ್ಥಿಗೆ ಮೊದಲಾದ ಉಚ್ಚ ಪ್ರತಿಯು ಶಿಕ್ಷಣವನ್ನು ಕಲಿಸತಕ್ಕ ಶಾಲೆಗಳನ್ನು ಸ್ಥಾಪಿಸಬಹುದು.

ರಾ॥ ರಾ॥ ಶಾಂತವೀರಪ್ಪ ಮೆಣಸಿನಕಾಯಿ:— ಅಲ್ಲಲ್ಲಿ ಇರುವ ಫಂಡುಗಳಿಂದರೆ ಬಹಳ ವ್ಯರ್ಥವಾಗುವುದು. ಇದರಿಂದ ನಮ್ಮ ಧಾರ್ಮಿಕ ವಿದ್ಯಾರ್ಥಿ ಫಂಡಿನ ಭಾರವು ಕೆಲವರ ಮೇಲಾಗುವುದು. ಆ ಹಣದ ಉಪಯೋಗವನ್ನು ಬೇಕಾದರೆ ಶಿಕ್ಷಣಕ್ಕೆ ಮಾಡತಕ್ಕದ್ದು. [illegible] ಹಣವನ್ನು ನಿಯಮದಿಂದ ಎತ್ತಿ ಜಿಲ್ಲಾ ಸಭೆಗೆ ಕೊಡತಕ್ಕದ್ದು. ಈ ಪ [illegible]

[illegible] ೪೦೦ ರೂ. [illegible]

[illegible]

ರಾ॥ ಶಿವಲಿಂಗರಾವ ದೇಸಾಯಿ:— ಊರ ಜನಗಳಿಂದ ಇನ್ನು ಗಲಿಸಗಳಿಗೆ ಕೊಂಡರೆ ಬರತಕ್ಕದ್ದಲ್ಲ. ಬಂದರೆ ಅದು ನಮ್ಮ ಜನರ ಅಜ್ಞಾನವು. ಆ ಅಜ್ಞಾನವನ್ನು ಹೋಗಲಾಡಿಸಲಿಕ್ಕೆ ಜಿಲ್ಲಾ ಸಭೆಯಂಥ ಸಂಸ್ಥೆಗಳೂ, ಶಿಕ್ಷಣಸಾಧನಗಳೂ ಬೇಕು. ಒಂದು ಊರಲ್ಲಿ ಪ್ಲೇಗು ಬಂದಿತು. ಆ ಊರಿನವರು ಯಾರೂ ಒಂದು ಸಾವಿರವಿದ್ದಿತು. ಅಲ್ಲಿ ಪ್ಲೇಗಿನ ವ್ಯಾಕ್ಸಿನ್ ತೆಗೆಯಲಿಕ್ಕೆ ಒಬ್ಬ ಡಾಕ್ಟರು ಬಂದರು. ಆದರೆ ಅಲ್ಲಿ ಎರಡು ಜಾತಿಗಳಿದ್ದದರಿಂದ ಒಂದು ಜಾತಿಯವರು ವ್ಯಾಕ್ಸಿನ್ ತೆಗೆಸಿಕೊಳ್ಳಲು ಒಪ್ಪಿಕೊಂಡರು. ಆದರೆ ಅವರು ಹೀಗೆ ಒಪ್ಪಿಕೊಂಡ ಕಾರಣ ಎರಡನೆಯ ಜಾತಿಯವರು ವ್ಯಾಕ್ಸಿನ್ ತೆಗೆಸಿಕೊಳ್ಳಲಿಕ್ಕೆ ತಯಾರ ಆಗಲಿಲ್ಲ. ಊರಲ್ಲಿ ಪ್ಲೇಗು ಬರಲು ವ್ಯಾಕ್ಸಿನ್ ತೆಗೆಸಿಕೊಂಡವರಲ್ಲಿ ಬಹು ಸ್ವಲ್ಪ ಜನರು ಪ್ಲೇಗಿನಿಂದ ಸತ್ತರು. ಆದರೆ ಬೇರೆ ಜಾತಿಯವರು ನೂರಾರು ಜನ ಸತ್ತು ಹೋದರು. ಇಂಥ ಹಿಡಿದು ಹೀಗೆ ಅರ್ಧ ಸಾರ್ಗ ಹತ್ತುವಾಗ ಅದರ ಕೇಡು ಯಾರಿಗೆ ಆಗುವುದು? ಇದನ್ನು ನಮ್ಮ ಜನರು ತಿಳಿದುಕೊಂಡು ಎಲ್ಲರಿಗೂ ಹಿತವಾಗುವಂಥ ಕಾರ್ಯದಲ್ಲಿ ಎಲ್ಲರೂ ಕೂಡಬೇಕು. ಸಶೇಷ.

ಮೈಸೂರ ಸ್ಟೇಟ್ ಚಂದಾನಿರ್ಣಯ

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಕೊಡುವುದಲ್ಲದೆ ಅಂಚೆಯ ವೆಚ್ಚ ನಮ್ಮ ಮೇಲೆ. ಈ ರೀತಿಗೆ ಕೆಳಗಿನಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೧—೮—೦.

೨ ರಿಂದ ೮ ಪ್ರತಿಗಳಿಗೆ ೧—೦—೦

ಇದರಂತೆ ಮುಂದೆ ಪ್ರತಿನಾಲ್ಕು ಪ್ರತಿಗಳಿಗೂ ೧—೦—೦ ಯಂತೆ

ವ್ಯವಸ್ಥಾಪಕರು

ಕಾಲು ಕಾಲಕ್ಕೆ ಗಿಂತಲೂ ಕಡಿಮೆಯಾಗಿ ನಾಲ್ಕಾರು ಪ್ರತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪತ್ರಿ ೧ ಕ್ಕೆ ೨ ಆಣೆ; ಎರಡನೇ ಆವೃತ್ತಿಯಿಂದ ಪತ್ರಿ ೧ ಕ್ಕೆ ೧ ಆಣೆ. ಕಾಲು ಕಾಲಕ್ಕಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೬ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಪಾಪಾಮಂಡಳಿ ಪ್ರಕಟಿಸತಕ್ಕವರು [illegible]

ಜಿ ಮದನಮಂಜರೀ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸಹಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವುದು ಮುಂತಾದ ಸಕಲ ಮೂತ್ರ ಪಿಂಡರೋಗಗಳನ್ನು ನಿರ್ಮೂಲ ಮಾಡುವುದಲ್ಲದೆ ಹಿಗ್ಗಿನ ಮಾನಸಿಕ ದಣಿವನ್ನೆಲ್ಲಾ ಬೆಗನೆ ಸಕಲ ವಿಧವಾದ ಬೋಧುಗಳನ್ನು ಕ್ರಮವಾಗಿ ತಿರುವುವು. ಈ ಮಾತ್ರೆಗಳು ಅಜೀರ್ಣ, ಮಲಬದ್ಧ, ಅರುಚಿ ಇವುಗಳನ್ನು ನಿಶ್ಯೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನು ದೀರ್ಘಾಯುಷ್ಯವನ್ನು ಮುಖಕ್ಕೆ ಒಳ್ಳೇ ಕಾಂತಿಯನ್ನೂ ಉಂಟುಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳೂ ಈ ಮಾತ್ರೆಗಳಲ್ಲಿ ಮಾರ್ಜನವಾಗಿವೆ. ೩೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧—೦—೦.

ಜಿಟ್ಟಿ! ವೈದ್ಯ ವಿದ್ಯೆ. ಪುಗಸಟ್ಟೆ!!

ಸಂಪೂರ್ಣಾರೋಗ್ಯವನ್ನು, ದೀರ್ಘಾಯುವನ್ನು, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವುದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯೆ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲುಗು, ಕನ್ನಡ, ಇಂಗ್ಲೀಷು ಮುಂತಾದ ೪ ಭಾಷೆಗಳಲ್ಲಿ ದೊರೆಯುವುದು. ಕೋರಿದವರಿಗೆ ಕ್ರಯವು ಅಂಚೆ ಖರ್ಚು ಸಹ ಇಲ್ಲದೆ, ಪುಗಸಟ್ಟೆಯಾಗಿ ಕಳುಹಿಸಲ್ಪಡುತ್ತದೆ. ಜಾಗ್ರತೆ ನಿಮ್ಮ ವಿಳಾಸವನ್ನು ತಿಳಿಸಿರಿ. ಈವರೆಗೂ ೬೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ವಿಳಾಸಕ್ಕೆ ಬರೆಯಿರಿ.

ರಾ॥ [illegible] ವೇ॥ ಕೇಶವಪ್ಪ,
[illegible] ವೈದ್ಯಶಾಲೆಯು,
[illegible] ಬಜಾರ್ ರೋಡ್,
[illegible] ಮದರಾಸು.

ನನ್ನ ತಂದೆ ಚಂದ್ರಪ್ಪನವರು [illegible] ಹಿರಿದಿರುವ [illegible] ಸರ್ಕಾರದ ವಿದ್ಯಾ [illegible] ಇಂಥಾವರಿಂದ [illegible] ಗಳನ್ನು ಪರಬಾರೆ ಪಡಿಸಿಕೊಳ್ಳುವವರಿಗೆ ಸಾಲದ ಪತ್ರಗಳ [illegible] ಈ ಮೂಲಕ ತಿಳಿಸಲಾಗಿದೆ.

ಕೊಟ್ಟೂರು ದರ್ವ ನಿವಾಸಿ ಸಜ್ಜನ ಶಿವಾಚಾರದ ಗುಬ್ಬಿ ಚಂದ್ರಪ್ಪನ ಮಗ ಗುಬ್ಬಣ್ಣನ [illegible]

ತಾ॥ [illegible]

ಬೆಲೆ ಸುಲಭ! ತ್ವರೆಮಾಡಿರಿ!! ಬಹಳ ವಿಷಯಗಳು!!!

ಸರ್ವಜ್ಯೋತಿಷರತ್ನ

3 ವೆಂಬ ಹೊಸಗ್ರಂಥವು

ಜ್ಯೋತಿಶ್ಶಾಸ್ತ್ರವನ್ನು ತಿಳಿಯಬೇಕೆಂಬುವವರಿಗೂ, ಅನುಭವಶಾಲಿಗಳಿಗೂ [illegible] ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ [illegible] ಈ ಕೊರತೆಯನ್ನು [illegible] ಮುರಾರಿ ಹಿಂದಿ ಮೊದಲಾದ ಭಾಷಾಂತರಗಳಲ್ಲದೆ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನಭಾಗ, ಗ್ರಹ [illegible] ಹಸ್ತರೇಖಾಸಾಮುದ್ರಿಕ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯವಶ್ಯಕವಾದ ವಿಷಯಗಳನ್ನು ಸ್ಪಷ್ಟವಾಗಿಯೂ, ಸುಲಭವಾಗಿಯೂ ತಿಳಿಯುವಂತೆ ಬರೆದಿರುವುದಲ್ಲದೆ, [illegible] ಚಕ್ರ, ಕೋಷ್ಟಕ ವಿವರಣೆ, ಉದಾಹರಣೆ ಮೊದಲಾದುವುಗಳನ್ನು ಬರೆದು, ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು [illegible] ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವುದು. ಜ್ಯೋತಿಷ್ಯರಿಗೆ ಅಲ್ಲದೆ, ಸಾಮಾನ್ಯವಾದವರಿಗೂ ವಿಶದವಾಗಿ ತಿಳಿಯುವಂತಿರುವುದು.

ಈ ಪುಸ್ತಕದ ಬೆಲೆ [illegible]; ಪೋಸ್ಟೇಜ್ ಖರ್ಚು [illegible]

ನಮ್ಮ ವಿಳಾಸ—ಶ್ರೀ ಶಿವಲಿಂಗಂಶೆಟ್ಟಿ,
ಕರ್ನಾಟಕ ಬುಕ್‌ಡಿಪ್ಪೋ ಏಜಂಟ್,
ಬಳ್ಳಾರಿ.

9 ರಾಸ್ಕೋಪ್ ಸಿಸ್ಟಂ ಲಿವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಹಿತ ರೂ 2—4—0 ಮಾತ್ರ 5 ವರ್ಷಗಳ ಗ್ಯಾರಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟದ್ದು. ನೋಡುವುದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇದ್ದು, ಬಡವರಿಗೆಲ್ಲಾ ಮೊದಲು ನವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. [illegible] ಗಡಿಯಾರಗಳು [illegible] ಗಡಿಯಾರ, ಕೂಡಲೆ ಬರೆದು ತರಿಸಿಕೊಳ್ಳಿರಿ.

[illegible] ಮುಖ್ಯವಾಗಿ ಗಮನಿಸಿ ಓದಿರಿ.

[illegible] ಬಹುಮಾನಸಹಿತ ಗಡಿಯಾರ.

ಈ ಚಿತ್ರದಲ್ಲಿ ಕಂಡ ಲೀವರ್ ವಾಚ್ ಬೀಗ ಕೀ ಇಲ್ಲದ [illegible] ಬಹು ಬಲಿಷ್ಠವಾದ [illegible] ಗ್ಯಾರಂಟಿ ಉಳ್ಳ ಗಡಿಯಾರ ಕಟ್ಟಿಕೊಳ್ಳುವ [illegible] ಇದನ್ನು ಆಗಸ್ಟ್ [illegible] 40 ಗಂಟೆಗೊಂದಾವೃತ್ತಿ [illegible]

ಸುಪೀರಿಯರ್ ವಾಚ್ ಕಂ
ಪೋಸ್ಟ್ ಬಾಕ್ಸ್ ನಂ. 167. [illegible]

7

ಸ್ವಭಾವಕರ ಚೂರ್ಣ.— ಇದರ ಸೇವನೆಯಿಂದ [illegible] ಅಪ್ಪೈಬುವರ, ಮಾತನಾಡುವಾಗ ಉಗುಳು, ನಾಲಿಗೆ [illegible] ಗುಳ್ಳೆ, ಮತ್ತು ದೋಷ ಕಂಡುಬಂದರೆ, [illegible] ಪರಿಹರಿಸಿ ಹಿತವನ್ನುಂಟುಮಾಡುತ್ತದೆ. [illegible] ತೊಲ ಡಬ್ಬಿಗೆ ಬೆಲೆ ರೂ [illegible]

ಪಂಡಿತ ಶ್ರೀಕಂಠಯ್ಯ
ಮೈಸೂರು

ಅಮರೇಶ್ವರ ಚರಿತ್ರೆ

6

ನೈಜಾಂ ಇಲಾಖಾ ರಾಯಚೂರು ಜಿಲ್ಲೆ [illegible] ತಾಲೂಕಿಗೆ ಸೇರಿದ ಯರಡೋಣಿ ಎಂಬ ಗ್ರಾಮದಲ್ಲಿ ಈಗಲೂ ರಥೋತ್ಸವವಾಗುತ್ತಿರುವ ಅಮರೇಶ್ವರನ ಚರಿತ್ರೆಯು ಸುಲಭವಾದ ಕನ್ನಡ ರೂಪಕವಾಗಿ ರಚಿಸಲ್ಪಟ್ಟಿದೆ. ಇದರಲ್ಲಿ ವೀರಶೈವರು ಓದತಕ್ಕ ಅನೇಕ ವಿಷಯಗಳು ಅಡಗಿರುವವು. ಪ್ರತಿಯೊಬ್ಬರು ಅವಶ್ಯಕವಾಗಿ ನೋಡತಕ್ಕದ್ದಾಗಿದೆ. ಭಕ್ತರ ವಿಶೇಷವು, ದಂಪತಿಗಳ [illegible] ನೀತಿ ಭಕ್ತಿ ಜ್ಞಾನ ವೈರಾಗ್ಯಾದಿಗಳು ಸವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. [illegible] ಒಂದೇ ಸಲಕ್ಕೆ [illegible] ಪ್ರತಿಗಳನ್ನು ತರಿಸಿಕೊಂಡವರಿಗೆ [illegible] ಉಚಿತವಾಗಿ ಕಳಿಸುತ್ತೇವೆ. ಜಾತಕ, ಪ್ರಶ್ನೆಜಾತಕ, ಜನನಕಾಲದಿಂದ ಭವಿಷ್ಯತ್ಕಾಲ [illegible] ತಕ್ಕವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ನಮ್ಮ ವಿಳಾಸ —
ಮಲ್ಲಿಕಾರ್ಜುನ ಸಿದ್ಧಾಂತಿಗಳು,
ಕೊಟ್ಟೂರು ಸ್ವಾಮಿಗಳ ಮಠ, ಬಳ್ಳಾರಿ

1



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ವಕ್ಕ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ, ಉಸಿರು ಕಟ್ಟಿಕೊಳ್ಳುವುದು, (ಪೀನಸಿ) [illegible] ಮತ್ತು ನೆತ್ತಿಯ ನರಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಭಾರವಾಗುವುದು, ಈ ದೋಷವಿದ್ದರೂ ತಪ್ಪದೆ ಗುಣವಾಗುತ್ತದೆ. [illegible] ಒಂದು ಬಾರಿ [illegible] ಸಾಧಾರಣ ಪುಡಿಯೊಡನೆ ಬೆರಸಿದರೆ [illegible] ಡಬ್ಬಿಯ ಬೆಲೆ [illegible]

ಉತ್ತಮವಾದ ನಶ್ಯದಪುಡಿ

[illegible] ಸುಗಂಧವಾದ ವಾಸನೆಗಳಿರುವ ಒಳ್ಳೆ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಸುವಾಸನೆ ಬೀರುವ, ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದು ಸಲ ಪರೀಕ್ಷಿಸಿ ನೋಡಿದರೆ [illegible] ತೊಲೆ ತೂಕದ ಡಬ್ಬಿಗೆ [illegible]

[illegible] ಹೊಗೆ ಸೊಪ್ಪು

[illegible] ವಾಸನೆ, ಹಲ್ಲುನೋವು, ಬಾಯಿ ಹುಣ್ಣು [illegible] ರೋಗಗಳು ಹೋಗುತ್ತವೆ. [illegible] ಬಾಯಿ ವಾಸನೆ ಹುಟ್ಟಿಸಿ [illegible] ಈ ಹೊಗೆ ಸೊಪ್ಪನ್ನು [illegible] ಡಬ್ಬಿಗೆ ನಾಲ್ಕು ಆಣೆ, ಒಂದು ಡಜನ್ ಡಬ್ಬಿಗಳಿಗೆ [illegible] ಪೋಸ್ಟೇಜ್ ಖರ್ಚು ಬೇರೆ

ವಿಳಾಸ — ಕೆ ಮಲ್ಲಿಕಾರ್ಜುನಸೆಟ್ಟಿ,
ಗೋಪಾಲಪಟ್ಣವೋಡು, ಚನ್ನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

ಸಿಂಗಿರಾಜಪುರಾಣ ಪ್ರಚಾರ

32

ಬಾಲಕರು ಕೂಡ ಓದಿಕೊಳ್ಳುವಂತೆ [illegible] ಸಿಂಗಿರಾಜಪುರಾಣದ ಕಥೆಗಳು [illegible] ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ [illegible] ಸಪ್ರಮಾಣವಾಗಿಯೂ, ಸ್ವಷ್ಟಾರ್ಥ ವಿವರಣೆಯುಳ್ಳದ್ದಾಗಿಯೂ [illegible] ವೀರಶೈವ ಮತಧರ್ಮಗಳ [illegible] ವಿಷಯಗಳನ್ನು [illegible] ಸ್ಪಷ್ಟವಾಗಿ ವಿವರಿಸಿ [illegible] ಒಂದುವೇಳೆ ಪ್ರಾರ್ಥನೆಯಾಗಿ ಪಾರಾಯಣಮಾಡಿದ್ದ [illegible] ಸಂಶಯವಿಲ್ಲ [illegible] ಒಳ್ಳೆಯ ಕಾಗದದಲ್ಲಿ [illegible] ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ [illegible] ರೂ [illegible] ಆಣೆ

ವಿಳಾಸ—[illegible]

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

22

ಲೋಕೋಪಯೋಗದ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು [illegible] ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. [illegible] ಜ್ವರ, [illegible]



[illegible] (ಭಾರ), [illegible] ಶೀತವಾತಗಳ ಬಾಧೆ, [illegible] ಹಲ್ಲುನೋವು, [illegible] ನೆಗಡಿ, [illegible] ಅನೇಕ ರೋಗಗಳಿಗೆ [illegible] ಗುಣಪಡಿಸುತ್ತವೆ. [illegible] ನೀರಾಗಿಳಿ [illegible] ಡಿಸಿ, ರಕ್ತದಲ್ಲಿರುವ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ [illegible] ಕೆಮ್ಮು, ಮಕ್ಕಳ [illegible] ಜ್ವರ, [illegible] ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು [illegible] ರೋಗದ [illegible] ಮಾತ್ರೆಗಳುಳ್ಳ [illegible] ಆಣೆ, [illegible] ಹೆಚ್ಚು [illegible] ಬೆಲೆಗೆ [illegible] ಆಣೆ.

1913 ಶ್ರೀ ಸೀತಾರಾಮದ ಪಾಕೆಟ್ ಡೈರಿಗಳು. 1913

ಈ ಡೈರಿಗಳನ್ನು [illegible] ಉಪಯೋಗಿಸಿದವರು ಪ್ರತಿ [illegible] ಅನೇಕ ವಿಷಯಗಳನ್ನು [illegible]

[illegible]

ಊದಬತ್ತಿಗಳು

ವಿಧವಿಧವಾದ ಊದುಬತ್ತಿಗಳು ಸೇರಿನ ೧—೦—೦ ೫—೦—೦ ; ೩—೦—೦ ; ೨—೭—೦ ; ೧—೮—೦ ; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧—೦—೦ ; ಪಸಿ ಗಂಧ ತೊಲಾ ೧ ಕೆ ೧೨ ಆಣೆ, ದಶಾಂಗ ಪೊಟ್ಟ ೧ ಕ್ಕೆ ೪ ಆಣೆ ; ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ ೧ ಕೆ ೮ ಆಣೆ, ಅನೇಕ್ಕ ಯೂಳ್ಳವರು ತರಿಸಿಕೊಳ್ಳಬಹುದು

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಕಾರಿ

ಮೈಸೂರು ಸ್ಟಾರಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೨—೧೦—೦
ಪರವಾದಿಗಜಾಂಕುಶಮಾಲಾವಳಿ	೦—೭—೦
ಚಾರುಶೀಲೆ ಚರಿತ್ರೆ	೦—೫—೦
ಷಟ್‌ಸ್ಥಲಶತಕ ಶಬ್ದಮಂಜರಿ	೦—೮—೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತಿ)	೦—೮—೦
ಸತೀಕೈಸಂದೀವ್ರತ	೦—೮—೦
ಸತೀಕ ವಿವಾಹವಿಧಿ	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗಂಗಾಕಂಕಲೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ

---

16 ಕಾರೋನೇಷನ್ ಸಾಬೂನು.

“ ಅರ್ಧಾಯುವಿಲ್ಲದ ರೋಗಸಂಹಾರಿ ”

ಈ ಸಾಬೂನನ್ನು ರೋಗವಿರುವ ಸ್ಥಳದಲ್ಲಿ ಹಚ್ಚಿದರೆ ಹಸಿಮೈಗಳಿಗಾಗಿ ರೋಗ ಶಮನ ಮಾಡುವುದಾಗುವುದು ಅಲ್ಲದೆ ಸೀಕ ಮುಂತಾದ ಬಾಧೆಗಳಲ್ಲಿಯೂ ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು

೩ ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0

೬ ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0. ಅಂಚೆ ಹಾಸಲು 0—4—

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ಕೊಡುವುದು

ಬಿ. ಸಿ. ಷಾ ಅಂಡ್ ಕೋ,

177 ಬೇನಾಬಜಾರ್ ರೋಡ್, ಮದ್ರಾಸು

ಉತ್ತಮ ಗ್ರಂಥಗಳು.

55

ಬಸವರಾಜವಿಜಯ.— ಬೆಲೆ ವಿ ಪಿ ಯಿಂದ ೧-೪-೦ ಬಾಲಕರು ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ

ಚೆನ್ನಬಸವೇಶವಿಜಯಂ - ೧-೭-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಪಟ್ಟಾಚಾರ್ಯರ ಚರಿತ್ರೆ ೧ ನೇಯ ಪ್ರಕರಣಕ್ಕೆ ೧—೩—೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ—೧—೩—೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧—೩—೦. ಸೌಂದರ ಸಂಬನ್ನನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ

ಷಟ್‌ಸ್ಥಲ ತತ್ವಪ್ರಕಾಶಿಕಾ – ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಷಟ್‌ಸ್ಥಲ ಶಿವಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಶೋಡಶವು ಸೃಷ್ಟಿಕ್ರಮವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ.

ಷಟ್‌ಸ್ಥಲ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೨ ಆಣೆ.

ಸ್ತುತಿ ಮುಕ್ತಾವಳಿ— ಬಸವೇಶ ಪಂಚಪ್ರಕಾರ ಗದ್ಯಗಳಿವೆ. ೩ ಆಣೆ.

ದಕ್ಷಾಧ್ವರಶತಕಂ. —೨ ಆಣೆ. ಇಶ

ವೀರಶೈವ ಗ್ರಂಥಪ್ರಕಾಶ ಸರ

ಗ್ರಂಥಗಳನ್ನು ಪ್ರಕಟಿಸು ಸ್ಥ

ಪುಸ್ತಕ ಪಟಗಳು ದೊರೆವವು ಎ

ಎಸ್. ಆರ್. ಶೆಟ್ಟಿ

ಗ್ರಂಥಪ್ರಕಾಶ

---

5 ಎಲ್. ೨ ಪಟವಾಸನಿಧಿ, ಮೈಸೂರು.

ಊದುಬತ್ತಿಗಳು ಗಂಧದ ಬಿಲ್ಲೆಗಳು.

ಈವರೆಗೆ ತಾವು ಉಪಯೋಗಿಸಿರುವ ಸುವಾಸನಾ ದ್ರವ್ಯಗಳಂತೆ ಎಷ್ಟು ಉತ್ತಮ ಮತ್ತು ಬೆಲೆ ಸುಲಭವೆಂಬ ಸಂಗತಿಯು ಒಂದೇ ಒಂದಾವೃತ್ತಿ ನಮ್ಮಿಂದ ತರಿಸಿ ಪರೀಕ್ಷಿಸುವುದರಿಂದ ಗೊತ್ತಾಗುತ್ತದೆ ತಮಗಳ ಶುಭಶೋಭನಗಳಲ್ಲಿ, ತಮ್ಮ ಸುಖಸಂತೋಷಗಳಲ್ಲಿ ಮರೆಯದೆ ನಮ್ಮಿಂದ ತರಿಸಿ ಪ್ರೋತ್ಸಾಹಿಸುತ್ತೀರೆಂತ ನಂಬಿರುತ್ತೇನೆ

ಊದುಬತ್ತಿಗಳು.

ಗಂಧರಾಜವರ್ತಿ ಸೇರು ೧ ಕ್ಕೆ ರೂ.		೨೮—೦—೦
ಮನಮೋಹನವರ್ತಿ	„	೧೨—೦—೦
ಸುರಭಿಸಾರವರ್ತಿ	„	೭—೦—೦
ಅಂಬರ್‌ಬತ್ತಿ ನಂ ೧	„	೧೨—೦—೦
„ ನಂ ೨	„	೭—೦—೦
„ ನಂ ೩	„	೬—೦—೦
„ ನಂ ೪	„	೪—೦—೦
ನಂ ೧ ಅಗರಬ (ಹಸಿಗಂಧ) ತೊಲ ೧ಕ್ಕೆ		೨—೦—೦
ನಂ. ೨		೧—೦—೦

ಗಂಧದ ಬಿಲ್ಲೆಗಳು.

ಕಸ್ತೂರಿಬಿಲ್ಲೆ ೧ ಕ್ಕೆ ದೊಡ್ಡದು		೨—೦—೦
ಜವಾಜಿಬಿಲ್ಲೆ ೧ ಕ್ಕೆ	„	೧—೦—೦
ಕೇಸರಿಬಿಲ್ಲೆ ೧ ಕ್ಕೆ	„	೦—೨—೦
ಪುನುಗೋಟೆ ಬಿಲ್ಲೆ ೧ ಕ್ಕೆ	„	೦—೭—೦
ಕಸ್ತೂರಿಬಿಲ್ಲೆ ೧ ಕ್ಕೆ ಚಿಕ್ಕದು		೦—೭—೦
ಜವಾಜಿಬಿಲ್ಲೆ ೧ ಕ್ಕೆ	„	[illegible]
ಕೇಸರಿಬಿಲ್ಲೆ ೧ ಕ್ಕೆ	„	[illegible]

ವ್ಯಾಪಾರಿಗಳಿಗೆ ಅನುಕೂಲವಾದ ಕಮಿಷನ್ ಕೊಡಲ್ಪಡುತ್ತದೆ

ವಿಳಾಸ :— ವೈ. ಬಿ. ಶ್ರೀನಿವಾಸರಾವ್,

ಎಲ್. ವಿ. ಪಟವಾಸನಿಧಿ, ಮೈಸೂರು.

---

13 ಶ್ರೀ ಕಾಶೀ ವಿಶ್ವೇಶ್ವರ ಪ್ರಸನ್ನಾ.

ಅಗ್ಗವಾದ ಸಾಮಾನುಗಳು

ನಮ್ಮಲ್ಲಿ ಶ್ರೀಕ್ಷೇತ್ರ ಕಾಶಿಯಲ್ಲಿ ತಯಾರಾಗುವ ಬನಾರಸ್ ಜರಿ ರೇಷ್ಮೆಸೀರೆ, ಮೊಗಟ, ಪೇಟ, ಕಾಶ್ಮೀರ ಶಾಲು ಕೋಲ್ಲಗಾಲ ಮೊಳಕಾಲ್ಮೂರು ನಮೂನೆ ವಸ್ತ್ರಗಳು, ಜಗ ರೇಷ್ಮೆ ಧೋತ್ರಗಳು, ರುದ್ರಾಕ್ಷಿ ಸರಗಳು, (ಇದರಲ್ಲಿ ೩ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಕಾಸಿಕೊಂಡಿರುವುವು) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥದ ಬಾಗಲಿ, ಸ್ಫಟಿಕಸರ, ಬಾಣಲಿಂಗ, ಚೌರಿಕತ್ತಲು, ಗಂಗಾಧಾರೆ ಶಿವಲಿಂಗ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಜರಿಗಳು ಮಸ್ತಕ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶ ವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಪೋಸ್ಟೇಜ್ ಭಾಬ್ತಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು, ೪ ಸಾಮಾನುಗಳ ... ಕಾಶೀವಿಶ್ವೇಶ್ವರನ ಪಟ, ಎನನ್ನು ... ಇವುಗಳ ನ್ನು ತಾವು ಬರದು ಕ ... ಹಿಸುವೆವು ವು. ಜೇರಿಂಗ್ ಪತ್ರ :

ವಿಳಾಸ,—

ಎ. ... ಕಂಪೆನಿ,

ಶ್ರೀ ಸಿಟಿ,

ಪಂಡಿತ ಎಸ್. ಗಣೇಶಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ

110 ಮೈಸೂರು

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦—೪೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೮—೦.

ಜ್ವರದಮಾತ್ರೆ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು ೧೨ ಮಾತ್ರೆ ಸೀಷೆ ೦—೪—೦, ೨೪ ಮಾತ್ರೆ ಸೀಷೆ ೦—೭—೦

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಷೆ ೧—೦—೦

ಬಾಲಸಂಜೀವಿನಿ — ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೩—೦ ತೊಲೆ ೧ ಕ್ಕೆ ೧—೭—೦

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೇಷ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತೃಪ್ತಿಯಾಗುತ್ತದೆ ೧೨ ಮಾತ್ರೆ ಸೀಷೆ ೦—೬—೦

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿದವರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೭—೦

ಶ್ರೀಖಂಡಲೇಹ್ಯ.— ಮೇಹಜಾತ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ ಸೇರಿನ ಡಬ್ಬಿ ೪—೦—೦ ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩—೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೩—೦

ಮಲಶೋಧನ ವಟಿಕಾ — ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦—೭—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨—೩—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೩—೦

ಕೆಮ್ಮಿನಮಾತ್ರೆ. — ೩೦ ಮಾತ್ರೆ ಸೀಷೆ ೦—೭—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೧—೧೨—೦

ದಂತಶುದ್ಧಿ ಚೂರ್ಣ — ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರೆಯುವುವು. ದವಾಲು ಬಿರ್ಜನ್ನು ಅಲಾಹಿದಾ ಕೊಡಲಾಗುವುದು. ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೇಯ ಇಸವಿ ಸೆಪ್ಟಂಬರ್ ತಾರೀಖಿನಿಂದ ೧೯೧೨ ನೆ ಸೆಪ್ಟಂಬರ್ ತಾರೀ ೧೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ನೇಯ ಪರಿಧಾವಿ ಸಂವತ್ಸರದ ಶ್ರಾವಣ ಬಹುಳದಿಂದ ಭಾದ್ರಪದ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾರೀ	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಪೇರ
9	[1] ಸೋ	ತ್ರ	20-31	ಆಶ್ಲೇಷ	28-15	25
10	[2] ಮಂಗ	ಚ	14 32	ಮಖ	19-8	26
11	ಬುಧ	ಅ	8 40	ಪುಬ್ಬ	15-25	27
12	[3] ಗುರು	ಪಾ	3-38	ಉತ್ತರ	55 0	28
13	[4] ಶುಕ್ರ	ತ	55-44	ಹಸ್ತ	9-28	29
14	[5] ಶನಿ	ಚೌ	52 14	ಚಿತ್ತ	7-56	30
15	[6] ಭಾನು	ಪಂ	50-41	ಸ್ವಾತಿ	7-17	31

(1) ಶಿವಾಲಯ.. ಮಹಾಶಿವರಾತ್ರಿ (2) ಗಸ್ತಾತ ... ಮೂಡುವಾಡ್ಯ, ಮಂ... ಉಪ್ಪರಶೈಗಂ (... ನ್ಯಾಪ್ಟಲ್ ಜಂಗ ... ನಿ, ತಾಮಸರ ... ಸ್ವಾತಿ, ಸ್ವರ್ಣಗ ... ನಾಯಕಪ್ರತಿ ... (6) ಮಹಿಪಂಚಮಿ

ಮೈಸೂರ್ : ... ವರಿಂದ ಕ್ಯಾ...

ಪ್ರಿಂಟಿಂಗ್ ವರ್ಕ್ಸ್

REGISTERED No M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪ್ರಜ್ಞಜನ ಪ್ರವೃತ್ತಿಪೋಷಣರಾಜೀಯಾತ್ ।
ಶ್ರೀಮತ್ಕೃಷ್ಣನೃಪಬಾಲನುತ್ತಮಕಲಾಲೋಲಂಸುಧೀಪುಂಗವ । ಸುಸ್ತ್ರೀಮಾಧಿಪ್ಸದಶೀಲ ನಾಕಲಿತಸಾಧ್ವಿಗ್ರಾಲವಾಲಂನಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರ ತಿಯಂ ಸದಾಪ್ಯೊರೆಗೆ ಗೌರೀಕಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೦ ನೆಯ ಇಸವಿ ಸೆಪ್ಟೆಂಬರ್ ತಾರೀಖು ೨೬ ನೆಯ ಸೋಮವಾರ. [ಸಂಚಿಕೆ ೩೮

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು

ಸಾಹಿತಕ್ರಯಗಳು ! ಪರೀಕ್ಷಿಸಿರಿ !! ಸಂತೋಷಪಡುವಿರಿ !!!

ರಾಸ್ಕೋಪ್ ಸಿಸ್ಟಂ ಪೇಟೆಂಟ್ ಲಿವರ್ ಜ್ಯೂವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದ ಒಳ್ಳೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸು ಹಾಕಿರುವುದು. ನೋಡುವುದಕ್ಕೆ ಬಹು ರಮಣೀಯವಾಗಿದೆ. ಇದು ಮಜಬೂತಾದ ದೀರ್ಘಕಾಲ ಬಾಳಿಕೆಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೪ ವರ್ಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಡಿಮೆ ದರ್ಜೆಯ ಘಡಿಯಾರವನ್ನು ರೂ. 2—8—0 3—8—0 ಬೆಲೆಗೆ ಮಾರುತ್ತಾರೆ. ಕಾರಣ ಮೋಸಹೋಗದಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವಿರಿ.

ಕ್ರಯ ರೂ 2—8—0 ವಿ ಪಿ ಪಿ. ಚಾರ್ಜ ರೂ 0—4—0.

ಸ್ವಿಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯೂವೆಲ್ಡ್ ವಾಚ್.



ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಅಧಿಕಾರಿಗಳಿಗೂ ಇರತಕ್ಕದ್ದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವುದು. ಇದು ಒಳ್ಳೆ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿರುವುದು. ಇದಕ್ಕೆ ಒಳ್ಳೆ ಸೆಕೆಂಡು ಮುಳ್ಳು ಸಹ ಇರುವುದು. ಇದಕ್ಕೆ ೪ ವರ್ಷಗಳ ಗ್ಯಾರಂಟಿ.

ಕ್ರಯ ರೂ. 3—8—0 ವಿ. ಪಿ. ಚಾರ್ಜ ರೂ. 0—4—0

ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.



ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವುದು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೪ ವರ್ಷಗಳು.

ಕ್ರಯ ರೂ 6—0—0 ವಿ. ಪಿ ಪಿ ಚಾರ್ಜ 0—6—0

ಪ್ರೋಟಾರ್ ಲಿವರ್ ವಾಚ್

(ವಾರಕ್ಕೊಂದಾವರ್ತಿ ಕೀಗಕೊಡುವ ಘಡಿಯಾರವು)

ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಕೀಗ ಕೊಡುವ ಗಡಿಯಾರವು. ಇದು ಬಹಳ ಗಟ್ಟಿಯಾದದ್ದು. ಇದು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ರೋಲ್ಡ್) ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಘಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದನ್ನು ಪರೀಕ್ಷಿಸುವರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರ್ಷಗಳು.

ಕ್ರಯ ರೂ 10—0—0 ವಿ ಪಿ ಪಿ 0—೧—0

ಟೇಬಲ್ ಟೈಂಪೀಸು ಘಡಿಯಾರವು.



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವವಲ್ಲದೆ, ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರೆಗೆ ಬಾಳಿಕೆ ಬರುವವು. ಈ ಗಡಿಯಾರಗಳನ್ನು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧ ತಾರೀಖುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕಾಲೆಂಡರ್ ಅಲಾರಂ ಟೈಂಪೀಸು ೧ಕ್ಕೆ ಕ್ರಯ ರೂ 2—೮—0 ವಿ ಪಿ ಪಿ ಚಾರ್ಜ 0—6—0

ನಂಬರ್ ೨ ತಾರೀಖುಗಳು ಇಲ್ಲದೆ ಬರೀ ಅಲಾರಂ ಟೈಂಪೀಸು ೧ಕ್ಕೆ ಕ್ರಯ ರೂ 2—0—0 ವಿ ಪಿ ಪಿ ಚಾರ್ಜ 0—6—0

ನಂಬರ್ ೩ ತಾರೀಖು ಮತ್ತು ಅಲಾರಂಯಿಲ್ಲದ ಸಾದಾ ಟೈಂಪೀಸು ೧ಕ್ಕೆ ಕ್ರಯ ರೂ 1—4—0 ವಿ ಪಿ ಪಿ ಚಾರ್ಜ 0—6—0

ಕ್ಯಾರೇಜು ಕ್ಲಾಕು ಘಡಿಯಾರಗಳು



ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರೆಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮವಾದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸ್ಫಟಿಕದ ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲ್ಲಿಯೂ, ಇಡುವುದಕ್ಕೆ ಯೋಗ್ಯವಾದವುಗಳು. ನಂಬರ್ ೧— ಘಂಟೆ ಅರ್ಧಘಂಟೆ ಹೊಡೆಯುವುದು ಮತ್ತು ಅಲಾರಂ ಸಹ ಇರುವುದು. ಕ್ರಯ ರೂ. ೯—0—0 ವಿ ಪಿ ಪಿ ಚಾರ್ಜ 0—10—0 ನಂಬರ್ ೨— ಘಂಟೆ ಅರ್ಧಘಂಟೆ ಮಾತ್ರ ಹೊಡೆಯುವದು ೪—೪ 0 ವಿ. ಪಿ. ಪಿ 0—8 0

ನಂಬರ್ ೩— ಕಾಲವನ್ನು ಮಾತ್ರ ತೋರಿಸಿ ೧೫ ನಿಮಿಷಗಳವರೆಗೆ ... ಸುತ್ತದು. ರೂ ೯—0—0 ವಿ

ನಂಬರ್ ೪— ... ನ್ನು ಬಾರಿಸುವದು ೯—8—0 ... 0—10—0

ನಿಕ್ಕ... ...ರಕಣೆ.— ಇದು ಮಣಿಕಟ್ಟಿ... ನಿಕ್ಕಲ್ ಬೆಳ್ಳಿಯಿಂದ ಮಾಡ...

...ಕ್ಕೆ ಬಹಳ ... ಮನೋಹರವಾಗಿಯೂ ಇರು... ೮—0 ವಿ ಪಿ ಪಿ ಚಾರ್ಜ 0

...ತೊ... ಗಡಿಯಾರದ ಸರಪಣಿ.— ... ಇದರಂತೆ ಹೊಳೆಯುವ ...

ಬಹಳ ಉತ್ತ... ...ರೂ. ೩—0—0 ವಿ. ಪಿ. ಪಿ. ಚಾ...

...ಕ... ಸರಪಣಿ.— ಇದು ೧ ನೇ ನ... ...ದ ಮಾಡಲ್ಪಟ್ಟದ್ದು. ಇದರ ... ...ಯೂ ರಮಣೀಯವಾಗಿ...

...ಮನೋಹರವಾ... ...೧ಕ್ಕೆ 3—0—0 ವಿ. ಪಿ. ಪಿ

ಶ್ರೀಮನ್ನಗೇವಾಯಿದೇವಪ್ರಭುವಿಂಚಿತ

ಶಿವಾಧ್ವ ಶಿವಾನಳಪಥ ವದ್ಯೆಪ್ರರೀಶ್ವರು

ಶ್ರುತಕತ್ರಯ

ಎಂಬ ಈ ಪುಸ್ತಕವು

ಕರ್ನಾಟಕ ಟೀಕೆಯೊಡನೆ ಈಗ್ [illegible] ಗಳ [illegible] ಪ್ರಕಟಿಸಲ್ಪಟ್ಟಿದ್ದು ಈ ಟೀಕೆಯುದ್ದಗಲ, ಸಾಧಾರಣ ಜನರಿಗೆ ಪಟ್ಟದರ್ಥ ತಿಳಿಯುವ ಹಾಗೆ ತಿಳಿಸಲಾಗಿರುವುದರಿಂದ ಪ್ರತಿಯೊಬ್ಬರಿಗೂ ತಿಳಿಯುವಂತೆ ಟೀಕೆಯನ್ನೊಳಗೊಂಡ ಸುಂದರವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಣಮಾಡಿ ಛದವಾದ ರಟ್ಟಿನಿಂದ ಬೈಂಡನ್ನು ಕಟ್ಟಿಸಿರುತ್ತೇನೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತ [illegible] ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪಠನಮನನಾದಿಗಳಿಗೆ ಅತ್ಯಂತ ಸಾಧನವಾಗಿರುತ್ತದೆ.

ಆವರ ಬೆಲೆ ೧-೦-೦, ವಿ ಪಿ ಯಿಂದ ೧-೩-೦.

ಮ್ಯಾನೇಜರ್,

"ವೀರಶೈವ ಸ್ಟಾರ್" ಆಫೀಸ್, ಮೈಸೂರ್

ನೌಗಂಧಿ ಕಾಪರಿಣಯ.

(ಕಳೆದವಾರದ ಶೇಷ)

[illegible] ಪಂಚಮಹಾಭೂತಂಗಳು ಜಗತ್ಕಾರಣವಾಬ [illegible] ಯಂಬ ಚಿತೆಯಲ್ಲಿ ಕೂಡಲು, ಅದಂ ಸದಾಶಿವನು ತನ್ನ [illegible] ಸುಡುವ [illegible] ವಾಪಿ, ಬಳಿಕ [illegible] ಮಹಾತ್ಮ [illegible] ರಿಂದ ಸ್ವಗೂಡನೊಳಗೆ [illegible] ನವಾಗುತ್ತಿರಲು, ಆಗ ಬ್ರಹ್ಮಾದಿ [illegible] ಚರಾಚರಾತ್ಮಕ ಪ್ರಪಂಚವೆಲ್ಲವೂ ವಸ್ತುಗಳು, ಆ ಭಸ್ಮವು ಪರಮೇಶ್ವರನ ಪಾದಗಳ [illegible] ದಿಂದ ಪ್ರಳಯದ್ದು ಆಶ್ರಯಕ್ಕೆ ಯೋಗ್ಯವಾದ ಮ[illegible] ವಸ್ತುವಿಲ್ಲದೆಯಿರುವುದರಿಂದ, ಮಾತ್ರವಲ್ಲದೆ ಆ [illegible] ಶರೀರದಿಂ ವ್ಯಾಪಿಸಿ ಅಲ್ಲಿಯೇ [illegible], ಇದಂ [illegible] ಮಾನುಷಜನಂಗಳು ಪರಮೇಶ್ವರನ ಸಾಧಾರಣವಾದ ಸ್ವಕಾಶವಾಸಿ[illegible], ಕೇವಲ ಚಿತಾಭಸ್ಮಧಾರಿಯೆಂದು ನುಡಿಯುವರು, [illegible]ರಂತಿರಲಿ, ಪೂರ್ವೋಕ್ತಮಾದ ಆ ಮಹಾಸ್ಮಶಾನದೊಳ್ "ನರ್ತನವಂ ನೋಡುತಿರ್ದ [illegible]" [illegible] ಜೀವರಾಶಿಗಳಲ್ಲಿ [illegible], ಮಹಾಪ್ರಳಯಾನಂತರ ಜಗತ್ಸೃಷ್ಟಿಯಂ ಮಾಡಬೇಕೆಂಬ ಇಚ್ಛೆ [illegible] ಯೊಳ್ [illegible] ನಿರ್ಮಲವಾದ [illegible] ಬರುವುದ[illegible] ಪರಮೇಶ್ವರನು ತಿಳಿದು [illegible] ಮಹಾಭೂತಂಗಳಿಗೆ ಭಸ್ಮವೇ ಕಾರಣವೆಂದು ನಿಶ್ಚಯಿಸಿ [illegible] ಸೃಷ್ಟಿ ಮೊದಲಾದ ಮಹಾಭೂತಂಗಳ [illegible] ಪ್ರಕೃತಿಯನ್ನೇ [illegible] ಮಾಡಿ, ಬಳಿಕ ಸಕಲ [illegible] ದಿಂದಲೂ ಅಧಿಕವಾಗಿ ಸಂರಕ್ಷಣೆ [illegible] ಜೀವರಾಶಿಗಳಿಗೆ [illegible] ತಿಳಿದು [illegible] ಭಸ್ಮವೇ [illegible] ಸೃಷ್ಟಿ [illegible] ಭಸ್ಮಸಂಬಂಧವಾದ ಪೃಥ್ವಿ [illegible] ಪ್ರಕೃತಿಯಿಂ [illegible] ಭಸ್ಮವು [illegible] ಪ್ರಕೃತಿಯೊಳ್ [illegible] ಸಂಬಂಧವಾದ [illegible] ಪವಿತ್ರವಾದ [illegible] ಭಸ್ಮಸಂಬಂಧಿಯಾದ ಪ್ರಕೃತಿ [illegible]

ಶರಾಣಿವಸಿ [illegible]
[illegible] ಸ್ಮರಣ [illegible]
[illegible]
[illegible]
[illegible]
[illegible]

ದುವುಗಳಲ್ಲಿಯೂ [illegible] ಪವಿತ್ರವಾಗಿ ಸಮಸ್ತ ಪ್ರಪಂಚದ [illegible] ಗಳೆಲ್ಲವಂ ಪರಿಗ್ರಹ [illegible] ಮಾಡುವುದಕ್ಕೆ ಯೋಗ್ಯಂಗಳಾದುವು [illegible] ಭಸ್ಮವು [illegible] ಸಂಬಂಧಿಸಿರುವ [illegible] ಪವಿತ್ರ [illegible] ಕಾರಣವಾ[illegible] [illegible] ಪಟ್ಟಿರುವಾದ [illegible] ದಿಂದ [illegible] ಯೆಂದೂ, ಭಸ್ಮವೆಂದೂ, [illegible] ಎಂದು [illegible] ಗಳ [illegible] ಶಾಸ್ತ್ರಂಗಳೊಳೆಂದರೆ–ಐಶ್ವರ್ಯವನ್ನು [illegible] ಕಾರಣ [illegible] ಸಮಸ್ತಪಾಪಂಗಳು ಪರಿಹರಿಸುವ ದರಿಂದ [illegible] ದಲೂ ಘೋರ ವ್ಯಾಧಿ [illegible] ದಲೂ [illegible] ರಕ್ಷಿಸುವುದರಿಂದ ರಕ್ಷೆಯೆಂದೂ ಹೆಸರುಂಟಾಯಿತು. ಈ ಅರ್ಥವು [illegible] [illegible] ಶಿವನ [illegible] ಭಸ್ಮ [illegible] ವೇ, ಅಘೋರ [illegible] ಸಂಬಂಧವಾದ ಭಸ್ಮವೇ, ತತ್ಪುರುಷ [illegible] ಸಂಬಂಧವಾದ [illegible] ಈಶಾನನೆಂಬ ಊರ್ಧ್ವಮುಖದೊಳ್ ಸಮುದ್ಭವಿಸಿದ [illegible] ಸಂಬಂಧವಾದ ರಕ್ಷೆಯುಂ–ಈ ಪರಿಯಾಗಿ ಪಂಚ [illegible] ದು ಜಗದ್ರಕ್ಷಣೆಯಾದ ಭಸ್ಮವಂ ನಿರಂತರದಲ್ಲೂ ಧರಿಸಿ, ಬ್ರಹ್ಮ [illegible] ವಿಷ್ಣು [illegible] ಬ್ರಹ್ಮಾದಿ ದೇವತೆಗಳ್ [illegible] ಭಸ್ಮದಲ್ಲಿರುವ ಅಭಿಮಾನವಂ ತಿಳಿದು ನಾವೂ ಭಸ್ಮವಂ ಧರಿಸಿ ಕೃತಾರ್ಥರಾಗಿ, ಆ ಪರಮೇಶ್ವರನ ಕಟಾಕ್ಷಕ್ಕೆ ಪಾತ್ರರಾಗಿ ನಿಜಪದವಿಯಂ ಪಡೆದು, ನಿಸ್ಸಂಗಭಾವದೊಳ್ ಆಸಕ್ತಿಯುಳ್ಳವರಾಗಿರುವರು, ಅದುಕಾರಣ ಭಸ್ಮವಂ ಸದಾಧರಿಸಲು ಆತನೇ ಸಾಕ್ಷಾತ್ ರುದ್ರನೆಂತೆ [illegible] ನಿಷ್ಕಲಂಕನಾಗಿ ಚರಿಸುತ್ತ ದೇವತೆಗಳಿಂದ [illegible] ಪೂಜಿಸಲ್ಪಡುವವನಾಗುವನು. (ಸಶೇಷ)

ಮಿತವ್ಯಯದ ಫಲವು.

(ಗತವಾರದ ಶೇಷ)

[illegible] ದುಷ್ಪರಿಣಾಮಗಳ್ [illegible] ನಾವು [illegible] ಮಿತವ್ಯಯದಿಂದ [illegible] ನಾವು ಯೋಚಿಸುವುದೂ [illegible] ದುವು [illegible]

ನಮ್ಮ ಆವಶ್ಯಕತೆಗೂ [illegible] ಆರ್ಜನೆಗೂ ತಕ್ಕಂತೆ ವ್ಯಯ ಮಾಡುವುದರಿಂದ ಇತರ ವಿಧವಾದ ಅನಾವಶ್ಯಕ ವಸ್ತುಗಳಿಗಾಗಿ ಹೋಗಬಹುದಾದ ಹಣವೆಲ್ಲವೂ ಉಳಿಗುವುದಲ್ಲವೆ? ಇದರಿಂದ ನಾವು ತೃಪ್ತಿಯನ್ನು ಹೊಂದುವೆವು. ನಮ್ಮ [illegible] ಸ್ಥಿತಿಗೆ ತಕ್ಕಂತೆ ಸುಖವನ್ನು ಪಡೆಯಿರುವುದು [illegible] ಸುಖವಾಗಿಯೇ ಪರಿಣಮಿಸುವುದು.

ಸಾಲವು ಮಾಡಬೇಕಿಲ್ಲದಿರುವುದು.

ನಾವು ನಮ್ಮ ಸ್ಥಿತಿಗೆ ತಕ್ಕಂತೆಯೇ ವ್ಯಯಮಾಡುವುದರಿಂದಲೂ, ಯೋಗ್ಯತೆಗೆ ಮೀರಿದ ಆಸೆಯನ್ನು [illegible] ವುದರಿಂದಲೂ ನಮಗೆ ಸಾಲ[illegible] ಆವಶ್ಯಕತೆಯು ಉಂಟಾಗುವುದಿಲ್ಲ. ಹಾಗೆ ಮಾಡದೆ ನಮಗೆ ಸಂಬಳವೆಂದು [illegible] ಮಾಡಿದರೆ [illegible] "ಕೆಟ್ಟಮೇಲೆ ಕಣ್ಣು ತೆರೆಯುವಂತೆ, ಸಾಲಗಾರರ [illegible] ಕೇಳಿದಾಗ [illegible] ದಂತೆ" ಎಂದು ಹೇಳುವ ಸರ್ವಜ್ಞನ ವಚನವನ್ನು [illegible] ಸಂಗೀತದಲ್ಲಿ ಸೇರಿಸಿ ಹಾಡಬೇಕಾಗುವುದು.

ಗೌರವವು ನಿಲ್ಲುವುದು.

ನಾವು ಮಿತವ್ಯಯವನ್ನು ಮೀರಿ ಕಡೆಗೆ [illegible] ವುದಕ್ಕೆ ಹಿಂದೆ [illegible] ಕಾಲದಲ್ಲಿ ನಮಗೆ [illegible] ನಡೆಸುತ್ತಿದ್ದವರೆಲ್ಲರೂ [illegible] ಅಗಲು ಅಲ್ಲಲ್ಲಿ ಇದನ್ನು ನಾವು ನೋಡಬಹುದು. ಮಿತವ್ಯಯದಿಂ

[illegible] ಇದರ
[illegible]
[illegible]
[illegible]
[illegible]
[illegible]

ದ [illegible] ಕಾರಣವಾಗುವುದು.

ಸ್ವಾತಂತ್ರ್ಯವಿರುವುದು.

ಯಾರ ಮನಸು [illegible] ದರೆ ಸ್ವಾತಂತ್ರ್ಯವಿ[illegible] ಅವರ [illegible] ನಿಲ್ಲದೆ [illegible] ಆಳಾಗಲೇ [illegible] ಸೇವಾವೃತ್ತಿಯ [illegible] ಸ್ವಾತಂತ್ರ್ಯವಾಗಿರುವುದು [illegible] ಪಡಬೇಕಾಗುವುದು [illegible] ಸ್ವಾತಂತ್ರ್ಯನಾಗಿದ್ದರೆ ಅವನ [illegible] ಅತ್ಯಾವಶ್ಯಕವಾಗಿರುವುದು.

ಆಪದ್ರಕ್ಷಣೆ.

[illegible] ದ ಮಾತಿಗೂ ಹಾಗಿರಲಿ ಯಾವ ಮನುಷ್ಯ [illegible] ಇರುವುದುಂಟೋ? [illegible] ಆ ಸಮಯದಲ್ಲಿ [illegible] ಗತಿಯೇನು? [illegible] ಒಂದುವೇಳೆ ಆ [illegible] ಪರಿಣಮಿಸಿದರೆ [illegible] ತಕ್ಕಷ್ಟು [illegible] ಕೊಡಲು [illegible] "ಆಪದರ್ಥೇ ಧನಂ [illegible]" [illegible]

[illegible]

[illegible] ಮಕ್ಕಳ [illegible] ಈ ಕಾಲದಲ್ಲಿ [illegible] ಇತರ ಕಾಲದ [illegible] ಆವಶ್ಯಕತೆಯು [illegible] ಅನಿವಾರ್ಯವಾಗುವುದರಿಂದ [illegible] ಈ ಪರಿವಾರ [illegible] ಕಟ್ಟಬೇಕು [illegible] ಆದುದರಿಂದ ತಕ್ಕಂತೆ ಸ್ವಲ್ಪ ಹಣವನ್ನು ಮೊದಲಿಂದಲೂ ಕೂಡಿಟ್ಟು [illegible] ಕೂಡಿಡಬೇಕೆಂದರೆ [illegible] ಕೂಡಿಡುವ ಹಣಕ್ಕಾಗಿಯೂ ಒಂದು [illegible] ತಿಳಿದು ಕೂಡಿಡುವುದು ಒಳ್ಳೆಯದು.

ಹೀಗೆಯೇ [illegible] ದಿಂದ ನಮ್ಮ ವಿಪತ್ತುಗಳನ್ನು ತಕ್ಕಮಟ್ಟಿಗೆ ಪರಿಹರಿಸಿಕೊಳ್ಳಬಹುದು. ಆದರೆ ಮಿತವ್ಯಯವೆಂದರೇನು? ಅದನ್ನು ಸಂಪಾದಿಸುವುದು ಹೇಗೆಂಬುದನ್ನು ಸ್ವಲ್ಪ ತಿಳಿಸದೆ ಈ ಪ್ರಬಂಧವು ಪೂರ್ಣವೆನಿಸಲಾರದು.

ಮಿತವ್ಯಯ ವೆಂದರೇನು?

[illegible] ಅರೆಹೊಟ್ಟೆಗೆ ತಿಂದ [illegible] ಪರೋಪಕಾರ ಮಾಡದೆ ಕೂಡಿಡುವುದು [illegible] ಉಪಯೋಗಿಸದೆ [illegible] ನೋಡದಿರುವುದೇ [illegible] ಇದರಿಂದ [illegible] ತನ್ನ ಯೋಗ್ಯತೆಗೆ ತಕ್ಕಂತೆ [illegible] ವ್ಯಯಮಾಡಬೇಕೆಂದರ್ಥವು [illegible] ವ್ಯಾಪಾರ [illegible] ಕಾಸಿನ ವ್ಯಾಪಾರ [illegible] ಮಾಡುವುದು ಎಷ್ಟು ಹಾಸ್ಯಾಸ್ಪದವೆಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕು. ಇದರಿಂದಲೇ "ಅತಿ ಸರ್ವತ್ರ ವರ್ಜಯೇತ್" ಎಂದು ಹೇಳಿರುವರು. ಆದುದರಿಂದ ಪ್ರತಿಯೊಬ್ಬರೂ ಮಿತವ್ಯಯದ ಅಭ್ಯಾಸವನ್ನು ಮಾಡುವುದು ಕ್ಷೇಮಕರವಾದುದು.

ಮಿತವ್ಯಯವನ್ನು ಕಲಿವುದು ಹೇಗೆ?

ಮಿತವ್ಯಯವನ್ನು ಕಲಿಯಬೇಕಾದರೆ ನಾವು ನಮ್ಮ ಸಂಪಾದನೆಯನ್ನು ಮೊದಲು ಲೆಕ್ಕಹಾಕಬೇಕು. ಅದಕ್ಕೆ ತಕ್ಕಂತೆ ಒಂದು ಲೆಕ್ಕವನ್ನಿಟ್ಟು ತಿಂಗಳ ಜೀವನಕ್ಕಾಗಿ ಇಷ್ಟು ವ್ಯಯವೆಂದೂ, ವಿಪತ್ತುಗಳಿಗಾಗಿ ಇಷ್ಟು ಧನವೆಂದೂ, ಪರೋಪಕಾರಕ್ಕಾಗಿ ಇಷ್ಟೆಂದೂ ಗೊತ್ತುಮಾಡಿಕೊಳ್ಳುವುದು ಮಾತ್ರವಲ್ಲ. ಇದನ್ನು ಇಷ್ಟಕ್ಕೇ ನಿಲ್ಲಿಸಿಯೆಂದು ಹೇಳಲಾಗುವುದಿಲ್ಲ. ಸಂಪಾದನೆಯು ಕಡಿಮೆಯಾಗಿದ್ದರೆ [illegible]

——ಹಾಸಿಗೆಯಿದ್ದಷ್ಟು ಕಾಲುಚಾಚು——

ಹಾಸಿಗೆಯನ್ನು ಕಟ್ಟಿದಮೇಲೆ ಪರದೇಶಕ್ಕೆ ತನ್ನ ಶಕ್ತಿಗೆ ತಕ್ಕಷ್ಟು ಬಿಡಬೇಕು. ಹಿರಿಯರು "ಶಿವನಿದ್ದಂತೆ" [illegible] ಬಿಡುವನೆ [illegible] ಮಾಡಬಾರದು [illegible]

ಎಂದು [illegible] ಆದರೆ
[illegible]
[illegible] ಜೊ
[illegible]
[illegible]
[illegible]
[illegible]

ಇತರ ರಂಜನೆಯಾದ ಪದಾರ್ಥಗಳನ್ನು ಕೊಂಡುಕೊಳ್ಳದಿರುವುದು ಎರಡನೆಯವರು ತಿನ್ನುವರಲ್ಲ ಎಂಬ

—ಮೇಲಾಟವನ್ನು ಬಿಡಬೇಕು—

ಆ ಮೇಲಾಟದಿಂದ ಪರರಿಗೆ ನಾವು ತಿಳಿಯುತ್ತೇವೆಂತಿಲ್ಲ. ಎರಡನೆಯವರಿಗಾಗಿ ನಾವು ಬದುಕಬೇಕಾಗಿಲ್ಲ. ನಮ್ಮ ಸ್ವಂತ ಸಾರ್ಥಕತೆಗಾಗಿ ನಾವು ಬಾಳಬೇಕು. ನಮ್ಮ ಸುಖದುಃಖಗಳಿಗೆ ನಾವೇ ಬಾಧ್ಯರು. ನಮ್ಮನ್ನು ಬೇರೆಯವರು ಕಾಪಾಡುವವರೇ? ವ್ಯಯದ ವಿಷಯದಲ್ಲಿ ಎರಡನೆಯವರ ಸ್ಥಿತಿಗತಿಯ ವಿಚಾರ ನಮಗೇಕೆ? ಎಂಬುದನ್ನು ಚೆನ್ನಾಗಿ ವಿಮರ್ಶಿಸಿ ತಮ್ಮ ಯೋಗ್ಯತೆಯಿದ್ದಂತೆ ವರ್ತಿಸಬೇಕು. ಹೀಗೆ ವರ್ತಿಸಿದರೂ ಸ್ವಲ್ಪವಾದರೂ ಧನವನ್ನು ಸಂಚಿತವಾಗಿ ಮಾಡದೇ ಇರುವುದು ತುಂಬಾ ಅಪಾಯಕರವಾದುದರಿಂದ ಹೇಗಾದರೂ ತನ್ನ ಯೋಗ್ಯತೆಗೆ ತಕ್ಕಂತೆ ತನ್ನ ಸಂಪಾದನೆಯಲ್ಲಿ ಕನಿಷ್ಠ ಪಕ್ಷಕ್ಕೆ ರೂಪಾಯಿಗೆ ೧ ಆಣೆಯಂತಾದರೂ

—ಕೂಡಿಡಬೇಕು —

ಕೂಡಿಡಬೇಕು. ಇದರಿಂದ ನಮಗೆ ಮುಂದೆ ಆಗುವ ಶುಭಾಶುಭಗಳಿಗೆ ಸಹಾಯವಾಗುವುದು.

ಹಬ್ಬ ಮುಂತಾದ ಕಾಲಗಳಲ್ಲಿಯೂ ಮದುವೆ ಮುಂತಾದವುಗಳಲ್ಲಿಯೂ ಈಗ ವ್ಯಯವಾಗುತ್ತಿರುವುದನ್ನು ನೋಡಿದರೆ ಪ್ರತಿಯೊಬ್ಬರೂ ತನ್ನ ಸ್ಥಿತಿಗೆ ಮೀರಿ ವ್ಯಯ ಮಾಡುತ್ತಿರುವನೆಂದು ತೋರುವುದು. ಆದ ಕಾರಣ

—ಅವಶ್ಯವಿದ್ದಷ್ಟನ್ನು ವ್ಯಯ ಮಾಡುವುದು —

ಅವಶ್ಯವಿದ್ದಷ್ಟನ್ನು ವ್ಯಯ ಮಾಡುವುದು ಬಹು ಒಳ್ಳೆಯ ಅಭ್ಯಾಸವು. ಉಡುಗೆ ತೊಡುಗೆಗಳ ಆಡಂಬರವನ್ನೂ ಅನಾವಶ್ಯಕ ಪದಾರ್ಥಗಳ ಕೊಳ್ಳುವಿಕೆಯನ್ನೂ ನಿಲ್ಲಿಸಬೇಕು.

ಉಪಸಂಹಾರ

ಹೀಗೆ ಕ್ರಮಕ್ರಮವಾಗಿ ಮಿತವ್ಯಯವನ್ನು ಅಭ್ಯಾಸಿಸಿ ದುಂದುಗಾರರಾಗದೇ ಇದ್ದರೆ ತತ್ಕಾಲದಲ್ಲಿ ಸ್ವಲ್ಪ ಕಷ್ಟವಾದರೂ ಪರಿಣಾಮದಲ್ಲಿ ಸುಖವೂ ಗೌರವವೂ ಸಿದ್ಧಿಸುವದಾಗಿರುವುದರಲ್ಲಿ ಸಂದೇಹವಿಲ್ಲ. ಸಾಲಗಾರರ ಮನೆಗೆ ಸುಳಿಯುವುದಕ್ಕಿಂತಲೂ ಇಂದ್ರಿಯ ವಿಷಯಗಳನ್ನು ನಿಗ್ರಹಿಸಿ ತಮ್ಮ ಹೆತ್ತವರ ಮನೆಯನ್ನು ಬೆಳಗಿಸುವುದು ದೈವಾನುಗ್ರಹದ ಸೂಚನೆಯೆಂಬುದನ್ನು ವಿವೇಕಿಗಳು ತಿಳಿಯಬಲ್ಲರು.

ಆರ್ ಶ್ರೀನಿವಾಸರಾವ್.

ಗತಿಸಿದ ಜಪಾನ್ ಚಕ್ರವರ್ತಿಯವರ ಶವಸಂಸ್ಕಾರ.

ಮೊದಲೇ ಗೊತ್ತಾಗಿದ್ದ ಮೇರೆಗೆ ಜಪಾನಿನ ದಿಂವಂಗತ ಚಕ್ರವರ್ತಿಯವರ ಶವಸಂಸ್ಕರಣ ಕ್ರಿಯೆಯು ಕಳೆದ ೧೩ ನೆಯ ತಾರೀಖಿನ ದಿನ ನೆರವೇರಿಸಲ್ಪಟ್ಟಿತು. ಆ ದೇಶದ ರಾಜಧಾನಿಯಾದ ಟೋಕಿಯೋ ನಗರಕ್ಕೆ ಪ್ರಪಂಚದ ಮೇಲಣ ಮುಖ್ಯಮುಖ್ಯ ರಾಷ್ಟ್ರದ ಪ್ರಭುಗಳ ಪ್ರತಿನಿಧಿಗಳೆಲ್ಲರೂ ಬಂದಿದ್ದರು. ೧೩ ನೆಯ ತಾರೀಖು ಶುಕ್ರವಾರದ ದಿನ [illegible] ಅರಮನೆಯ ಸಭಾಂಗಣದಲ್ಲಿ ಚಕ್ರವರ್ತಿಯ ಶರೀರವನ್ನು ಅಲಂಕಾರವಾಗಿ ಇರಿಸಿದ್ದರು. ಗತಿಸಿದ ಚಕ್ರವರ್ತಿಯವರ ಪಟ್ಟಮಹಿಷಿಯವರು ಅವರ ಬಳಿಯಲ್ಲೇ ಇದ್ದರು. ಈಗಿನ ಚಕ್ರವರ್ತಿಯವರು ಸೈನ್ಯಾಧಿಕಾರಿಯ ಉಡುಪನ್ನು ಧರಿಸಿ ದೇಶಪದ್ಧತಿಯ ಮೇರೆಗೆ ತಮ್ಮ ತಂದೆಯವರ ಪವಿತ್ರ ಕಳೇಬರವನ್ನು ಪುರೋಹಿತರ ಸಹಾಯದಿಂದ [illegible] ಭಕ್ತಿಯಿಂದಲೂ ಪೂಜಿಸಿ ನಮಸ್ಕರಿಸಿದರು. ಬಳಿಕ ಹಿಂದಿನ ಚಕ್ರವರ್ತಿನಿಯವರೂ ಈಗಿನ ಚಕ್ರವರ್ತಿನಿಯವರೂ ಅವರ ಬಂಧುವರ್ಗದ ಹೆಂಗಸರೂ [illegible] ದೇಶೀಯ ಉಡುಗೆಗಳನ್ನು ಧರಿಸಿಕೊಂಡು ಬಂದು ಪೂಜಾದಿಗಳನ್ನು ಸಲ್ಲಿಸಿದರು. ಅನಂತರ ರಾಜಬಂಧುವರ್ಗದವರೂ ಮಂತ್ರಿವರ್ಗ ಮೊದಲಾದ ಮುಖ್ಯಾಧಿಕಾರಿಗಳೂ ಸಹ ಯಥೋಚಿತ ನಮಸ್ಕಾರ ಪೂಜಾದಿಗಳನ್ನು ನೆರವೇರಿಸಿದರು. ಬಳಿಕ ಮುಖ್ಯರಾಯಭಾರಿಗಳೂ ಅದೇ ರೀತಿಯಲ್ಲಿ ಪೂಜಿಸಿದರು.

ಬಳಿಕ ಆ ಶರೀರವನ್ನು ೧೮ ಅಡಿ ಉದ್ದವೂ ೯ ಅಡಿ ಅಗಲವೂ ಉಳ್ಳ ಒಳ್ಳೆಯ ಕುಶಲಕರ್ಮಿಗಳಿಂದ ಅಲಂಕೃತವಾದ ಪೆಟ್ಟಿಗೆಯಲ್ಲಿ ಮಲಗಿಸಿ, ಮೇಲೆ ಮುಚ್ಚಳವನ್ನು ಮುಚ್ಚಿ, ಚಿತ್ರವಾದ ಜರಿಯ ಬಟ್ಟೆಗಳನ್ನು ಹೊದ್ದಿಸಿ, ಅರಮನೆಯಿಂದ ಹೊರಕ್ಕೆ ಸಾಗಿಸುವ ಹೊತ್ತಿಗೆ ಸಾಯಂಕಾಲವಾಗಿದ್ದಿತು. ಒಳಗೂ ಹೊರಗೂ ಬೀದಿಗಳಲ್ಲೂ ದೀಪಗಳು ಉರಿಯುತ್ತಿದ್ದುವು. ಶವದ ಪೆಟ್ಟಿಗೆಯು [illegible] ಸಿದ್ಧವಾಗಿದ್ದ ಬಂಡಿಯ [illegible] ಅಲಂಕೃತವಾಗಿಯೂ ಅದ್ಭುತವಾಗಿಯೂ ಇದ್ದಿತು [illegible] ಬಿಳಿಯ ಬಣ್ಣದ ಎತ್ತುಗಳನ್ನು ಹೂಡಿದ್ದರು [illegible] ಕಪ್ಪು ಬಣ್ಣದ ಉಡುಪನ್ನು [illegible] ಅದರ ಹಿಂದುಮುಂದೆ [illegible]

ಯಾವಾಗ ಶವಪೆಟ್ಟಿಗೆಯು ಅರಮನೆಯಿಂದ ಹೊರಗೆ ಹೊರಟಿತೋ ಆ ದಳವು ಆ ಸಮಯದ ವಿಧಿಯನ್ನು ಸೂಚಿಸುವಂತೆ ಫಿರಂಗಿಗಳು ಹಾರಿದುವು. ಬೀದಿಗಳ ಎರಡು ಪಕ್ಕಗಳಲ್ಲಿಯೂ ಸೈನಿಕರೂ ಪೋಲೀಸರೂ ಕಾವಲಿದ್ದರು. ಪ್ರತಿಯೊಂದು [illegible] ಮನೆಯ ಮುಂದೆಯೂ ಜಪಾನಿನ ಜನರು ಗುಂಪುಗುಂಪಾಗಿ ನಿಂತಿದ್ದರು. ಎಲ್ಲೆಲ್ಲಿಯೂ ದುಃಖಸೂಚಕವಾದ ಬಿಳಿಯ ಬಣ್ಣದ ದೀಪಗಳೇ ಕಣ್ಣಿಗೆ ಕಾಣುತ್ತಿದ್ದುವು. ಬೀದಿಗಳೆಲ್ಲಾ ಬಿಳಿಯ ಮರಳಿನಿಂದ ಮುಚ್ಚಲ್ಪಟ್ಟಿದ್ದುವು. ಶವದ ಬಂಡಿಯ ಜೊತೆಯಲ್ಲಿ ಜಪಾನ್ ದೇಶದ ಅಧಿಕಾರಿಗಳೆಲ್ಲರೂ ದೇಶಪದ್ಧತಿಯಂತೆ ತಮ್ಮ ತಮ್ಮ ಕೈಗಳಲ್ಲಿ ಹಿಡಿದುಕೊಂಡು [illegible] ದೀಪಗಳನ್ನು ಹಿಡಿದುಕೊಂಡಿದ್ದರು. ಶೋಕಸೂಚಕ ರಾಗಗಳನ್ನು ವಾದ್ಯಗಾರರ ಗುಂಪುಗಳು [illegible] ಚತುರಂಗ ಸೇನೆಯೂ, ರಾಜ ಪ್ರತಿನಿಧಿಗಳು [illegible] ಧುರೀಣರೂ, ಮಂತ್ರಿಮಂಡಲದವರೂ [illegible] ಪ್ರಸಿದ್ಧ [illegible] ಮುಂದೆ ಹೋಗುತ್ತಿದ್ದರು. [illegible] ಪ್ರವಾಹದಂತೆ [illegible] ಶಾಂತರಸ [illegible] ಅಪೂರ್ವವಾದ [illegible] ಆ ಉತ್ಸವವು [illegible] ಸಾಕಷ್ಟು [illegible] ದಕ್ಷಿಣ [illegible] ಶವದ ಪೆಟ್ಟಿಗೆಗೆ [illegible] ಒಳಗೆ ರಾಜವರ್ಗದವರು ಮೊದಲಾದವರು [illegible] ಮಂದಿ ಪ್ರಾರ್ಥನೆಗಳನ್ನು ನೆರವೇರಿಸಿದರು. [illegible] ಕತೆಗೆ ಒಬ್ಬ ದುಃಖಿತನು [illegible] ಚಕ್ರವರ್ತಿಯವರು ಶವದ ಪೆಟ್ಟಿಗೆಯ ಮೇಲೆ ತಮ್ಮ [illegible] ಬಗ್ಗಿಸಿ, ಅಂತ್ಯಪ್ರಾರ್ಥನೆಯನ್ನು ನೆರವೇರಿಸಿ. ಅನಂತರ [illegible] ಆ ಮಹಾಜನಸಮೂಹದ ಮಧ್ಯದಲ್ಲಿ [illegible] ಹಸ್ತಪತ್ರಿಕೆಯನ್ನೋದಿ ಹೇಳಿದರು. ಆಗ ಸರ್ವರೂ ತಲೆಬಗ್ಗಿ ಗತಿಸಿದ ಚಕ್ರವರ್ತಿಯವರ ವಿಷಯವಾಗಿ ಭಯಭಕ್ತಿಯಿಂದಲೂ ವಿಧೇಯತೆಯಿಂದಲೂ ನಿಶ್ಶಬ್ದರಾಗಿ ನಿಂತು ಅದನ್ನು ಕೇಳುತ್ತಿದ್ದರು. ಜನರು ಉಕ್ಕಿಬರುತ್ತಿರುವ ದುಃಖದಿಂದ ಗತಿಸಿದ ಚಕ್ರವರ್ತಿಯವರ ಗುಣಾವಳಿಯನ್ನು ಪ್ರಶಂಸಿಸಿ ಉಪನ್ಯಾಸಮಾಡಿದರು. ಸರ್ವರೂ ಗತಿಸಿದ ಆ ಪ್ರಭುವಿನ ವಿಷಯವಾಗಿ ದೇವತಾಪ್ರಾರ್ಥನೆಯನ್ನು ಮಾಡಿದರು. ಆ ಸಮಯದಲ್ಲಿ ಎತ್ತೆತ್ತಲೂ ದೇವಾಲಯಗಳ ಗಂಟೆಗಳು ಮೊಳಗುತ್ತಿರುವಾಗ, ಫಿರಂಗಿಗಳು ಢಾಂಕಾರಗಳನ್ನು ಮಾಡುತ್ತಿರುವಾಗ, [illegible] ಆ ಬೈಲು ಜನಮಯವಾಗಿ ಒಪ್ಪಿರುವಾಗ [illegible] ವಿಶೇಷತೆಯಿಂದ ನಡೆದ ಈ ಪಾರಲೌಕಿಕ ಕ್ರಿಯೆಗಳೆಲ್ಲವೂ ಗಂಭೀರವಾಗಿಯೂ ಪ್ರೇಕ್ಷಣೀಯವಾಗಿಯೂ [illegible] ದೇಶದ ಅದ್ಭುತಕೀರ್ತಿಪ್ರತಿಷ್ಠೆ [illegible] ಅದಕ್ಕೆ [illegible] ನಡೆಯುವ ಉತ್ತರಕ್ರಿಯೆಗಳೆಲ್ಲಾ ಮುಗಿದುವು.

ನಮ್ಮನಾಳುವ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ ರವರ ಶ್ರೀ [illegible] ಈ ಕರಣ ಕ್ಲೋಸ್ ಸ್ಟೇಷನ್ [illegible] ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟು [illegible] ಬಹುರಮ್ಯವಾಗಿ ಕಂಗೊಳಿಸುತ್ತಿತ್ತು. ಈ ಉತ್ಸವಕ್ಕೆ ಸರ್ಕಾರಿ ಮತ್ತು ಸಾಹುಕಾರಿ ದೊಡ್ಡ ಮನುಷ್ಯರುಗಳೂ [illegible] ಗ್ರಾಮಗಳ ಪಟೇಲರುಗಳೂ ಬರಮಾಡಲ್ಪಟ್ಟಿದ್ದರು. ವಿಜಯದಶಮಿಯಿಂದ ನಾಲ್ಕು ದಿವಸಗಳು [illegible] ಶ್ರೀ ಮಹಾರಾಜರವರ ಶ್ರೇಯಸ್ ಪ್ರಾರ್ಥನೆಗಳು ನಡೆಯಿಸಲ್ಪಟ್ಟವು. ಒಳಗಡೆ ಮಧ್ಯದಲ್ಲಿ ಶ್ರೀಮನ್ಮಹಾರಾಜರವರ ಛಾಯಾ ಚಿತ್ರವನ್ನು ಸ್ಥಾಪಿಸಿದ್ದು ಇದನ್ನು ರತ್ನಗಳೂ ಮುಂತಾದ [illegible] ಅಲಂಕರಿಸಿದ್ದರು. ಮ|| ರಾ|| ಸ್ಕೂಲ್ ಮಾಸ್ಟರೊಬ್ಬರು ಶ್ರೀ ಶ್ರೀಮಾನವರ ಶ್ರೇಯಸ್ ಪ್ರಾರ್ಥನೆಯನ್ನು ಮಾಡಿ ಸಭಿಕರಿಗೆ ರಾಜನಾಳಿಕೆಯಲ್ಲಿ ನಡೆಯುವ ವಿಶೇಷೋತ್ಸವಗಳನ್ನೂ ಪ್ರಜಾ ಸೌಕರ್ಯವನ್ನೂ ಸುಗುಣಾತಿಶಯವನ್ನೂ ತಿಳಿಯಪಡಿಸಿದರು. ತರುವಾಯ ನೆರೆದಿದ್ದ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ರೀತಿ ೪ ದಿನಗಳು ನಡೆದವು ಈ ಕೆಲಸದಲ್ಲಿ ಮ|| ರಾ|| ಶಿವಲಿಂಗರ ಮಹನೀಯರ ಶ್ಲಾಘನೀಯವಾದುದು ಎಲ್ಲಾ ಕಡೆಗಳಲ್ಲಿಯೂ ಇಂತಹ ಸಂತೋಷ ಕಾರ್ಯಗಳು ಹದೇಹದೇ ನಡೆಯುತ್ತಿರಲೆಂದು ಹಾರೈಸುತ್ತೇನೆ ಈ ಮಧ್ಯೆ ಯುಕ್ತಿಕ ಅಂಗಸಾಧನೆ ಮುಂತಾದ ಆಟಪಾಟಗಳು ನಡೆದವು

ಪ್ರತ್ಯಕ್ಷದರ್ಶಿ

ಪುರಾಣಶ್ರವಣವು.

ಶಾಲಿವಾಹನಶಕ ೧೮೩೪ ನೆ ಪರೀಧಾವಿ ಸಂವತ್ಸರದ ಬಾದ್ರಪದ ಬ|| ೫ ಲಾಗಾಯ್ತು ಆಶ್ವೀಜ ಬಹುಳ ೭ ವರಿಗೆ ಶ್ರೀ ಚನ್ನಬಸವೇಶ್ವರ ಪುರಾಣವು ಶ್ರೀಮದ್ ಧನುಗೂರು ಮಠದ ಪ|| ಮುಮ್ಮಡೀರ ಸ್ವಾಮಿಗಳವರು ತಮ್ಮ ಮಠದಲ್ಲಿ ಓದಿ ಪೂರೈಸಿಯಾದುದಕ್ಕೆ ಈ ದಿವಸ ಗಣಾರಾಧನೆಯನ್ನು ನೆರವೇರಿಸಿದರು ಈ ಆರಾಧನೆಗೆ ಕುಂದೂರು ದೊಡ್ಡ ಮಠದ ಮ|| ಪ|| ಚನ್ನಮಲ್ಲಸ್ವಾಮಿಗಳವರು ಮತ್ತು ದೇವಪಟ್ಟಣದ ಸಣ್ಣ ಮಠದ ಪ|| ಶಿ|| ಮಲ್ಲಿಕಾರ್ಜುನ ಸ್ವಾಮಿಗಳವರು ಸಹ ದಯಮಾಡಿಸಿದ್ದರು. ಮಧ್ಯಾಹ್ನ ೧೨ ಗಂಟೆಗೆ ಮಹಾದಾಸೋಹ ಪೂರೈಸಿಯೂ ಶ್ರೀ ಮಠದ ಉದ್ದಾನಸ್ವಾಮಿ ಗದ್ದಿಗೆಗೆ ರುದ್ರಾಭಿಷೇಕವು ಸಹ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಯಥಾಶಕ್ತಿ ದಕ್ಷಿಣೆ ತಾಂಬೂಲ ಗಂಧ ಪುಷ್ಪಾದಿಗಳು ಸಹ ಹಂಚಿದರು. ಸಾಯಂಕಾಲ ಹತ್ತು ಗಂಟೆಯ ವೇಳೆ ದೀಪಾದಿಗಳನ್ನು ಬೆಳಗಿ ಸೇರಿಸಿ ವೀರಶೈವ ಸಂಬಂಧವಾಗ ಆಚರಣೆಗಳನ್ನು ಕುರಿತು ಉಪನ್ಯಾಸ ಮಾಡಿ ಸರ್ವರಿಗೂ ತಿಳುವಳಿಕೆ ಉಂಟು ಮಾಡಿದರು. ಮತ್ತು ಮೈಸೂರ್ ಸ್ಟಾರ್ ಪತ್ರಿಕೆಯಲ್ಲಿ ಕಂಡ ಸೌಗಂಧಿಕಾ ಪರಿಣಯದಲ್ಲಿ ಬಿಲ್ವಮಹಾತ್ಮೆಯೂ, ಭಸ್ಮರುದ್ರಾಕ್ಷಿ ಮಹಿಮೆಯೂ ಸಹ ವಿವರಿಸಲ್ಪಟ್ಟು ಈ ಸ್ಟಾರ್ ಪತ್ರಿಕೆಗೆ ಚಂದಾದಾರರಾಗುವುದರಿಂದ ಆಗುವ ತಿಳುವಳಿಕೆಯನ್ನು ಕುರಿತು ಉಪನ್ಯಾಸ ಮಾಡಿ, ಸರ್ವರಿಗೂ ಕರ್ಣಾನಂದವಾಗುವಂತೆ ಅಪ್ಪಣೆ ಕೊಡಿಸಿದರು. ಪ್ರತಿ ಗ್ರಾಮಕ್ಕೆ ಐದ್ಹತ್ತರಂತೆ ಚಂದಾದಾರರಾದರೆ ನಮ್ಮ ಸಮತದ ವಿಷಯವು ಬಹಳವಾಗಿ ತಿಳಿಯಬರುವದಾಗುತ್ತೆ. ಎಂದು ಶ್ರೀ ಪ|| ಮುಮ್ಮಡೀರಸ್ವಾಮಿಗಳು ಉಪನ್ಯಾಸ ಮಾಡಿದರು. ತರುವಾಯ ಶ್ರೀ ಕುಂದೂರು ದೊಡ್ಡ ಮಠದ ಪ|| ಪ|| ಚನ್ನಮಲ್ಲಸ್ವಾಮಿಗಳು ಸ್ಟಾರ್ ಆಫೀಸಿಗೆ ಚಂದಾದಾರರಾಗುತ್ತೇವೆಂದು ಅಪ್ಪಣೆಕೊಡಿಸಿ ಆ ಕ್ಷಣದಲೆ ಆಫೀಸಿಗೆ ಕಾಗದ ಬರೆಸಲಾಯಿತು.

ಮೇಲ್ಕಂಡ ಉಪನ್ಯಾಸಗಳನ್ನು ಮಾಡಿದ ಮಹನೀಯರುಗಳಂತೆ ಪ್ರತಿಯೊಬ್ಬರೂ ತಿಳುವಳಿಕೆಯುಳ್ಳವರಿಗೆ ತಿಳಿಯಪಡಿಸುತ್ತಾ ಬಂದಲ್ಲಿ ಸ್ಟಾರಾಫೀಸಿಗೆ ಅನೇಕ ಜನರು ಚಂದಾದಾರರಾಗುವರೆಂಬುದಾಗಿ ನಮ್ಮ ಬುದ್ಧಿಗೆ ತೋರುತ್ತೆ.

[illegible] ಮಲ್ಲಿಕಾರ್ಜುನ ಸ್ವಾಮಿಗಳು ಸಣ್ಣಮಠ ದೇವಪಟ್ಟಣ

ಚಾಮ್ಲೂರು ತಾಲ್ಲೂಕು.

ಆಯುಷ್ಯ ತಮ್ಮ ಶಾಖೆ ೩೦ ನೆಯ ಸಪ್ಟಂಬರ ಸರ್ಕಾರ್‌ದ ನೆಯ ಇವತ್ತಿಯ ತಮ್ಮ ಕಾರ್ತ್ಯವಾದರ ೩ ನೆಯ ಪುಟದ [illegible] ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮೈಸೂರು ಶ್ರೀ [illegible] ಸಿಂಹಾಸನಾಧೀಶ್ವರ ಶ್ರೀಮದ್ ಶಿವಾನುಭವ ಚರವರ್ಯ ಕಲ್ಯಾಣಮಹೋತ್ಸವ ವಿಜೃಂಭಣೆಯಿಂದ ಬಿ ನಡೆದ ಸಂಗತಿ ನೀವೇ ಸಾಕ್ಷಿ. ಇದು ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರ ಉತ್ಸವವಾಗಿದ ನ್ಯಾಗರಿಯಲ್ಲಿ ನಡೆದ ಉತ್ಸವವು ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರ ಕರಕಮಲೋದ್ಭವರಾದ ಶಿವಾನುಭವ ಚರವರ್ಯ ಅನ್ನದಾನಸ್ವಾಮಿಗಳು ನೆರವೇರಿಸಿದ ಉತ್ಸವದಲ್ಲಿ ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳ ಉತ್ಸವವು ಪಂಚಕಲಶ ಅಡ್ಡಪಲ್ಲಕ್ಕಿ ವಸ್ತ್ರ ಸಕಲ ಬಿರುದಾವಳಿಗಳೊಡನೆ ಬಹಳ ವೈಭವದಿಂದ ಸಾಂಗವಾಗಿ ೩-೪ ದಿವಸ ೧೦-೧೫ ಸಾವಿರ ಜನರಿಗೆ ಅನ್ನ ಸಂತರ್ಪಣೆಯಾಯಿತು. ತಮ್ಮ ಪತ್ರ್ಯದನಾರದಲ್ಲಿ ಅನ್ನದಾನ ಚರವರ್ಯರಿಗೆ ಜಗದ್ಗುರುಗಳೆಂದು ಬರೆದಿರುವಿರಿ, ಈ ಪದವಿಯು ಶ್ರೀ ತೋಂಟದ ಮಹಾಸ್ವಾಮಿಗಳಿಗೆ ಇರುವುದಲ್ಲದೆ ಚರವರ್ಯರಿಗೆ ಇರುವುದಿಲ್ಲವು ಇವರಾಗಲಿ ಇವರ ಹಿಂದಿನ ಅನ್ನದಾನ ಚರವರ್ಯರಾಗಲಿ ಎಂದಿಗಾದರೂ ಶ್ರೀ ತೋಂಟದ ಮಹಾಸ್ವಾಮಿಗಳ ಶಿಷ್ಯರಂತೆ ಪ್ರಸಿದ್ಧರವರೆ [illegible] ಆಗಿದ್ದ ಚರಮೂರ್ತಿಗಳ ಹಿಂದಿನವರು ಅನ್ನದಾನಸ್ವಾಮಿಗಳೆಂತ ಅನ್ನಿಸಿಕೊಂಡವರು ಶ್ರೀ ಜಗದ್ಗುರು ತೋಂಟದ ಮಹಾಸ್ವಾಮಿಗಳ ಕೂಡ ಆಡಿದ್ದು, [illegible] ಅದರ ಪರಂಪರಾಗತವಾಗಿ [illegible] ಅದರಲ್ಲಿ ನಿರ್ಣಯ ಮಾಡಿರುವ [illegible] ಲ್ಲದೆ ಈಗಿನ [illegible] ಮೂರ್ತಿಗಳಾದರೂ ಕಳೆದ [illegible] ದಲ್ಲಿ ಶ್ರೀ ತೋಂಟದ ಮಹಾಸ್ವಾಮಿಗಳ ಉತ್ಸವ [illegible] ಅವರ ಶಿಷ್ಯರು ಮಾಡಲಪೇಕ್ಷಿಸಲು ಈಗ ಇರುವ [illegible] ರ್ತಿಗಳು ಅನ್ನದಾನ ಸ್ವಾಮಿಗಳೆಂತ ಅನ್ನಿಸಿಕೊಳ್ಳುವಾಗ ಅದರಂತೆ ಅನ್ನದಾನಕ್ಕೆ ಪಲ್ಲಕ್ಕಿ ಉತ್ಸವ ಮಾಡಬೇಕೆಂದು ಪ್ರಸಿದ್ಧಿಸಲು, ಅದು ಪ್ರಸಿದ್ಧವಾಗಿದ ಪ್ರಕಾರ ಆಗಲಿಕ್ಕೆ ಯೋಗ್ಯ ಅಧಿಕಾರಸ್ಥರ ಕಡೆಯಿಂದ ಆ ಹಕ್ಕು ತನಗೆ ಅದೆ ಅಂತ ಸಾಬೀತು ಮಾಡಿಕೊಳ್ಳುವವರೆಗೆ ಮಾಡಬಾರದಂತೆ ನಿಷೇಧವಾಗಿ ಉತ್ಸವ ಬಂದುಆದ ಸಂಗತಿ ಸಹ ತಮಗೆ ಪತ್ರಿಕೆವರಿಗೆ ಗೊತ್ತು ಇಲ್ಲದೇ ಇರಬೇಕು.

ಈ ಪ್ರಕಾರ ಒರೇ ಸರೀಕತು ತಮ್ಮ ವರ್ತಮಾನ ಪತ್ರದಲ್ಲಿ ಛಾಪಿಸಿ ಅದನ್ನು ಜನ ಪ್ರಸಿದ್ಧಮಾಡಿದಲ್ಲಿ ಹಿಂದಿನ ಪತ್ರದಿಂದ ಆದ ತಪ್ಪು ತಿಳುವಳಿಕೆ ದೂರಮಾಡಬೇಕೆಂತ ವಿನಂತಿ ಅದೆ.

ಬಸವಣ್ಣಯ್ಯ ಕಟ್ಟಿರ ಸಿದ್ಧಲಿಂಗಯ್ಯ ಅರಳೆಲೆಮಠ ನ್ಯಾಗರಿ

---

೩ ನೆಯ ವೀರಶೈವ ಮಹಿಳಾಪರಿಷತ್ತು.

ವೀರಶೈವ ಮಹಾಸಭೆಯೋ ವೀರಶೈವ ಮಹಿಳಾಸಂಪತ್ತಿಗೆ ಮೂಲಕಾರಣವಾಗಿದ್ದು ೭ ನೆಯ ವೀರಶೈವ ಮಹಾಸಭೆಯು ಕೊಲ್ಹಾಪುರದಲ್ಲಿ ಕೂಡುವ ಬಗ್ಗೆ ಬೆಳವಳಿಯು ನಡೆದಾಗ್ಯೂ ಮಹಿಳಾ ಪರಿಷತ್ತಿನ ಬಗ್ಗೆ ಯಾವ ಕೆಲಸಗಳೂ ನಡೆದಿಲ್ಲವಾಗಿ ತೋರುತ್ತದೆ. ಆದುದರಿಂದ ಕೊಲ್ಹಾಪುರದಲ್ಲಿ ೩ ನೆಯ ವೀರಶೈವ ಮಹಿಳಾಪರಿಷತ್ತು ಕೂಡಿಸುವ ವಿಷಯದಲ್ಲಿ ಮಹಾಸಭೆಯ ಮುಂದಾಳುಗಳೂ ಮತ್ತು ವಿಶೇಷವಾಗಿ ಸ್ತ್ರೀಯರ ಉನ್ನತಿಯ ವಿಷಯದಲ್ಲಿ ಮುಂದಾಳುಗಳಾದ ಮತ್ತು ೧-೨ ನೆಯ ಮಹಿಳಾಪರಿಷತ್ತುಗಳ ಅಧ್ಯಕ್ಷಸ್ಥಾನವನ್ನು ವಹಿಸಿದ (೧) ನಾಗಮ್ಮನವರು ದೇಸಾಯಿಣಿ ಆಲಮೇಲ, (೨) ಭಾಗೀರಥೀಬಾಯಿ ಪಾಟೀಲ ಸೊಲ್ಲಾಪುರ ಮುಂತಾದ ಅಭಿಮಾನಶಾಲಿನಿಯರು ಲಕ್ಷ್ಯ ತೀವ್ರ ಲಕ್ಷ್ಯ ಕೊಡಬೇಕು.

೩ ನೆಯ ವೀರಶೈವ ಮಹಿಳಾಪರಿಷತ್ತಿನಲ್ಲಿ ಸ್ತ್ರೀಯರಲ್ಲಿ ತೀವ್ರ ಉನ್ನತಿಯಾಗುವ ವಿಷಯಕ್ಕೂ ಮತ್ತು ಮಹಿಳಾಪರಿಷತ್ತಿನ ಕಾರ್ಯಪದ್ಧತಿ ಬರುವ ವಿಷಯಕ್ಕೂ ಯೋಗ್ಯ ಉಪಾಯಗಳನ್ನು ಕಂಡು ಹಿಡಿಯಬೇಕು

"ಯತೋಧರ್ಮಸ್ತತೋಜಯಃ" ಎಂಬ ಮಹನೀಯರ ವಚನಾನುಸಾರವಾಗಿ ಸ್ತ್ರೀ ಉನ್ನತಿ ರೂಪವಾದ ಜಯವನ್ನು ಸಂಪಾದಿಸಲಿಕ್ಕೆ ಧರ್ಮವೇ ಸುಧಾರಣೋಪಾಯವನ್ನಾಗಿ ಇಟ್ಟುಕೊಂಡು ನಡೆಯುವ ತತ್ವವನ್ನು ಎಲ್ಲ ವೀರಶೈವ ನಾರೀಮಣಿಗಳು ಮರೆಯಕೂಡದೆಂಬುದನ್ನು ಅವರ ನೆನಪಿಗೆ ತರುತ್ತೇನೆ. ಈ ಸಾಲಿ ಕೆಳಗೆ ಕಂಡ ವಿಷಯಗಳ ಉಪಯುಕ್ತತೆಯ ಬಗ್ಗೆ ಆಲೋಚಿಸಬೇಕು.

(೧) ಮಹಾಸಭೆಗೆ ಒಂದು ಸ್ಟಾಂಡಿಂಗ್ (Standing) ಕಮಿಟಿಯಿರುವಂತೆ ಮಹಿಳಾಪರಿಷತ್ತಿನ ಏತಚಿಂತನ ಮಾಡಲಿಕ್ಕೆ ಆ ಪ್ರಕಾರದ ವ್ಯವಸ್ಥೆಯಿರಬೇಕು. (೨) ಮಹಿಳಾಪರಿಷತ್ತಿನ ಚಿರಂಜೀವಿತೆಗಾಗಿ ಒಂದು ಧನರಾಶಿಯನ್ನು ಕೂಡಿಸಬೇಕು. (೩) ಯೋಗ್ಯಸ್ಥಳಗಳಲ್ಲಿ ಚಿಕ್ಕ ಮತ್ತು ದೊಡ್ಡ ಸ್ತ್ರೀಯರ ಸುಧಾರಣೆಯಾಗಲಿಕ್ಕೆ ಅನುಕೂಲವಾದ ಶಿಕ್ಷಣ ದೊರಕುವ ಉಪಾಯಗಳನ್ನು ಯೋಜಿಸಬೇಕು. (೪) ಧರ್ಮ ಸದಾಚಾರದ ಉದಾಹರಣೆಗಾಗಿ ಪ್ರಸಿದ್ಧರಾಗಿದ್ದ ವೀರಶೈವ ಮಹಿಳೆಯರ ಚರಿತ್ರೆಗಳನ್ನು ಬರೆಸುವದು. (೫) [illegible], ಶಿಶುಸಂಗೋಪನ, ಪಾಕ ಪ್ರಸ್ತಕ [illegible] ಗಳಲ್ಲಿರುವ ದೋಷಗಳ ನಿವಾರಣೆಗಾಗಿ ವ್ಯಾಖ್ಯಾನಕಾರರನ್ನು ನಿಯಮಿಸುವುದು (೬) ವೀರಶೈವ ಮಹಿಳಾಪರಿಷತ್ತಿನ ಉದ್ದೇಶಗಳನ್ನು ಪ್ರಸಿದ್ಧ ಮಾಡುವುದಕ್ಕಾಗಿ ಸಣ್ಣ ಪುಸ್ತಿಕೆಗಳನ್ನು ಹೊರಡಿಸುವುದು.

ತಾ|| ೨ ೧೦ ೧೨. ವೀರಶೈವ ಬಂ

ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ವಿಜಯೋತ್ಸವ
ವರ್ತಮಾನಸಾರ ಭಕ್ತಿ ಸಂಸಕ್ತ ಚೇತಸ
ಸರ್ವೇಷಾಂ ವೀರಶೈವಾನಾಂ ಮತಿರ್ಧರ್ಮೇ ಪವರ್ತ
ಶ್ರೀ ವೀರಶೈವ ಮತ ಸಿಂಧು ಸಂವರ್ಧನ ಧುರೀಣರಾದ ರಕ್ಷ [illegible] ವೀರಶೈವ ಮತ ಬಾಂಧವರಿಗೆ ಈ ಪ್ರಪತ್ರ ಮೂಲಕ ಸೂಚಿಸುವುದೇನೆಂದರೆ,—

ಸಕಲ ಶಾಸ್ತ್ರಂಗಳಿಗೆ ಪ್ರತಿಪಾದ್ಯವೆನಿಸಿಕೊಂಡ ಕಾಶೀ ಪುಣ್ಯಕ್ಷೇತ್ರದ ನಮ್ಮ ಸಂಸ್ಥಾನದಲ್ಲಿ ವಿಶ್ವಾರಾಧ್ಯ [illegible] ಸ್ಥಾಪಿಸಿ ಒಂದರ [illegible] ಸದರಿ ಸುಪ್ರಸಿದ್ಧವಾದ ಫಂಡಿಗಾ [illegible] ಮುಂತಾದ ಸಕ [illegible] ಪ್ರತಿ ಸಂವತ್ಸರದ [illegible] ಶ್ರೀ ವಿಶ್ವಾರಾಧ್ಯರ [illegible] ಕಾಲದಲ್ಲಿ ಬಂದ ವೀರಶೈವ ಭಕ್ತ [illegible] ಯಥಾಶಕ್ತಿ ಧನ [illegible] ಧನಸಹಾಯವನ್ನು ಮಾಡಿ [illegible] ನಮ್ಮ ಪ್ರಸಿದ್ಧ ಪ [illegible] ಗೋಚರವಾಗಿರಬಹುದು ಇ [illegible] ಆರಂಭಿಸಿದ ಫಂಡಿಗೆ ಸಹಾಯವನ್ನು [illegible] ವೇ|| ಉಮಾಪತಿ ಶಾಸ್ತ್ರಿ ಅಧ್ಯಂಗಾರ ಇವರು ತಮ್ಮ ವಿವಾಹ ಕಾರ್ಯದಲ್ಲಿ ೧೦ ಮ|| ರಾ|| ಚನ್ನಪ್ಪಗೌಡ ಪಾಟೀಲ ವ ಸಿದ್ಧರಾಮ [illegible] ಅಧಿಮಯ್ಯ ಜಿಲ್ಲಾ ವಿಜಾಪೂರ ಮುಕ್ಕಾಂ ಕ [illegible] ಇವರ ಮೊದಲ [illegible] ೮೫ ರೂ ಪರೂಪಾಕ್ಷಯ್ಯ [illegible] ಮುಕ್ಕಾಂ ಕಿವ್ದಾ [illegible] ತಾಲೂಕ ಇವರು ೫೦ ರೂ ಶ್ರೀ ಶಾಂತವೀರಸ್ವಾಮಿ ಜಿ [illegible] ಮುಕ್ಕಾಂ ಹೆಬ್ಬಾಳ ಇವರು ೨೫ ರೂ ಪಾಲ್ಲದ ವೀರಬಸಪ್ಪ ಮನಗೋಳಿ ಜಿಲ್ಲಾ ವಿಜಾ [illegible] ಇವರು ೧೦ ರೂ ಈ ಪ್ರಕಾರವಾಗಿ ತಮ್ಮ ತಮ್ಮ [illegible] ಸಹಾಯ ಮಾಡಿರುತ್ತಾರೆ [illegible] ಸಿದ್ಧಾಂತ ಶಿಖಾಮಣಿ [illegible] ನಿದಗುಂದಿಮಠ ಮುಳಗುಂದ ಇವರು ೫ ರೂ, ಸಂತೆಯೂ, ಕೆಲವು [illegible] ರೂ, ಸಂತೆಯೂ ವರ್ಷಾಶನವನ್ನು ಕೊಡಲೊಪ್ಪಿರುತ್ತಾರೆ ಮತ್ತೂ ಅತ್ಯಂತ ಶಾಂತಸ್ವಾಂತರಾದ ಪ|| [illegible] ಇವರು ಪತ್ನಿ [illegible] ವಿವಾಹ ಮಹೋತ್ಸವ ಕಾಲದಲ್ಲಿ [illegible] ಗಳನ್ನು ಮತ್ತೂ ಅವರ ಅಳಿಯರಾದ ಹಲ್ಲೂರ [illegible] ಸಿದ್ದಶೆಟ್ಟಿ [illegible] ಮಗಳ ನಿಶ್ಚಯ ಕಾರ್ಯದಲ್ಲಿ [illegible] ಅಂತೂ ೫೫ ರೂ ಗಳನ್ನು ಫಂಡಿಗೆ [illegible] ಪ್ರಾಜ್ಞ ಮಹಾಸನ್ನಿಧಾನಕ್ಕೆ ಬಿನ್ನಹ ಪತ್ರ [illegible] ತೋರಿಸಿರುತ್ತಾರೆ ಈವರೆಗೂ ಮೈಸೂರ [illegible] ಸದರಿ ಫಂಡಿನ ವಿಷಯದಲ್ಲಿ [illegible] ದಾಗಲಿಲ್ಲವೆಂದು ಭಾವಿಸುವುದಕ್ಕಿಲ್ಲ. ಮಹಾಶಯರು ಫಂಡಿನ ಮೇಲಿನ ಸಹಾಯದಕ್ಷತೆಯ ಸಂಸ್ಥಾನಾಭಿಮಾನವನ್ನೂ ಭಕ್ತಿಭಾವವನ್ನೂ ಪತ್ರಿಕೆ ವ್ಯಕ್ತಗೊಳಿಸಲು ಅತ್ಯಂತ ಸಂತೋಷವಾಯಿತು ರೀತಿಯೇ ಉತ್ತರೋತ್ತರ ಸಹಾಯವನ್ನು ಮಾಡುತ್ತಲೂ ಡಿಸುತ್ತಲೂ ಸದರಿ ಫಂಡನ್ನು ಅಭಿವೃದ್ಧಿಗೆ ತರುವ ತುಂಬಾ ನಂಬಿರುತ್ತೇವೆ. ಈ ಸದ್ಗುಣಿಗಳ ಮೇಲ್ಪಂಕ್ತಿ ಅವಲಂಬಿಸಿ ಇನ್ನುಳಿದ ಮಹನೀಯರಾದರೂ ಇತ್ತ ಲಕ್ಷ್ಯವನ್ನಿತ್ತು ಸಹಾಯಶೀಲರಾಗಬೇಕೆಂದು ಆಶಿಸುತ್ತೇವೆ. ಇದೇ ನಮ್ಮ ಸಂಸ್ಥಾನದಲ್ಲಿ ೪-೧೦ ವರ್ಷಗಳ ಪರ್ಯಂತವಾಗಿ ನ್ಯಾಯ ವ್ಯಾಕರಣ ವೇದಾಂತ ಮುಂತಾದ [illegible] ಗಳನ್ನು ಅಭ್ಯಾಸ ಮಾಡಿ ಸ್ವದೇಶಂಗತರಾ [illegible] ಕೆಲವರು ಸಂಸ್ಥಾನದ ಅಧಿಕಾರಿಗಳಾಗಿಯೂ ಕೆಲವರು ಪ್ರಕಾಂಡಧ್ಯಾಪಕರಾಗಿಯೂ ಸುಪ್ರಸಿದ್ಧರಾದ ಶಾಸ್ತ್ರಜ್ಞರು ಈ ನಮ್ಮ ಸಂಸ್ಥಾನದಲ್ಲಿ ವೇಳೆ ಕಾಲೇಜ್ ಸ್ಥಾಪಿಸಿರುವದನ್ನು ಈ ಭಾವದ ಪ್ರಸಿದ್ಧ ಪತ್ರಿಕೆಯಿಂದ ತಿಳಿದಿರುವರಾದಾಗ್ಯೂ ಸದರಿ ಫಂಡನ್ನು [illegible] ಗೆ ತರಬೇಕೆಂಬುವ ಇಚ್ಛಾರಹಿತರಾಗಿ [illegible] ಉದಾಸೀನರಾಗಿಯೂ ಸುಮ್ಮನೆ ಕುಳಿತಿರುವರನ್ನು ನೆನೆದರೆ ಮನಸ್ಸು [illegible] ಆಗುತ್ತದೆ.

ಸಹಿ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂ

ಸಬೋಧ ಶತಕತ್ರಯ		೧-
ಶಿವ		[illegible]
ಷಟ್	ಪಶ	[illegible]
ಚಾ		[illegible]

...ಕ ಕರ್ನಾಟಕ...ಮಂಜರಿ	೦—೮—೦
...ಡ ಭರ್ತೃಹರಿ (ಆನ್ವಯಕರ ಬಸ ವಪ್ಪಶಾಸ್ತ್ರಿ ಕೃತ)	೦—೮—೦
...ಕ ಸಂದೀಪ್ತ	೦—೪—೦
...ಕ ವಿವಾಹವಿಧಿ	೦—೩—೦
...ಕಮಂಜರಿ	೦—೨—೦
...ತಪಂಚಕ	೦—೨—೦
...ಲವಿದ್ಯಾ (ಮುಕ್ತಿಸಾಧನ)	೦—೨—೦
...ರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ

(ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣವಪಸತ

ಮದನೋದ್ಭವ ಗುಳಿಗೆ

ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗಳಿಗೆ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ ...ನೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ...ದ್ರನೇಶದ ವೇಳೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ...ಗಳೂ, ಪಿತ್ತದ ಬಾಧೆಗಳೂ, ಕಟಿಶೂಲೆ, ಪಾತರೋ... ...ಂತಾದುವು ಅತಿ ತ್ವರ್‍ಯ ಗುಣವುಂಟಾಗಿ, ಶರೀರಕ್ಕೆ ...ಸತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ...ಉಂಟಾಗುತ್ತದೆ. ಒಬ್ಬನಿಗೆ ೩೦ ಗುಳಿಗೆಗಳ ... ಬೇಕಾಗುವುವು. ಕಿಮ್ಮತು ... ಗುಳಿಗೆಗಳಿಗೆ ... ... ಗುಳಿಗೆಗಳನ್ನು ತರಿಸೊಂಡರೆ ... ...ವು ... ಅಂಚೆ ಬೇರೆ. ಲಘುಸಾರ ಪತ್ರಿಕೆ ...ನ್ನು ಔಷಧದ ಸಂಗಡಲೇ ಕಳುಹಿಸುವೆವು. ... ...ವು ಕಳಿಸಿದರೆ ಸರ್ವ ಸಾಮಾನುಗಳ ಕ್ಯಾಟಲಾಗ್ ... ವಾನಿಸುವೆವು.

ಸ— ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ, ಪೋಸ್ಟ ಬನವಾಸಿ, ಜಿಲ್ಲ ಉತ್ತರಕನಡಾ.

15 ಮದನಮಂಜರೀ ಮಾತ್ರೆಗಳು

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆತ್ಮೆ... ...ರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖ... ...ತ ಮೂತ್ರದೊಡನೆ ಇಂದ್ರಿಯ ಸ್ರವಿಸುವು... ...ದು ಮುಂತಾದ ಸಕಲ ಮೂತ್ರ ಪಿಂಡರೋಗ... ಗಳನ್ನು ನಿರ್ಮೂಲಮಾಡುವುದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧ ವಾದ ದೋಷಗಳನ್ನು ಕ್ರಮವಡಿಸುವುವು ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರು... ...ಚಿ ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿ... ...ಸಿ ಪೂರ್ಣಾರೋಗ್ಯವನ್ನು ದೀರ್ಘಾಯುಸ್ಸ... ...ನ್ನು ಮುಖಕ್ಕೆ ಒಳ್ಳೇ ಕಾಂತಿಯನ್ನೂ ಉಂಟು ಮಾಡುತ್ತವೆ. ಮುಖ್ಯವಾಗಿ ಸ್ತ್ರೀಪುರುಷರಿ... ...ಗೆ ಅವಶ್ಯಕವಾದ ಸಕಲ ಪಂಚಭೂತಗಳೂ ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೮೦ ಮಾತ್ರೆಗಳಿರುವ ಡಬ್ಬಿ ಕ್ರಯ ಗೂ ೧—೦—೦.

ಬಿಟ್ಟಿ! ವೈದ್ಯ ವಿದ್ಯ ಪುಗಸಟ್ಟೆ

ಸಂಪೂರ್ಣಾರೋಗ್ಯವನ್ನು, ದೀರ್ಘಾಯು... ...ವನ್ನು, ಶಾಶ್ವತವಾದ ಸುಖವನ್ನು ಹೊಂದ... ...ಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವುದ... ...ಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ... ...ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅ... ...ರವ, ತೆಲಗು, ಕನ್ನಡ, ಇಂಗ್ಲೀಷು ಮುಂತಾ... ...ದ ... ಭಾಷೆಗಳಲ್ಲಿ ದೊರೆಯುವುದು. ಕಾಗದ ...ದರಿಗೆ ಕ್ರಯವು ಅಂಚೆ ಹಾಸಲು ಸಹ ಇಲ್ಲದೆ, ...ಮುಫತ್ತಾಗಿ ...ಕಳುಹಿಸಲ್ಪಡುವುದು. ಜಾಗ್ರತೆ ...ನಿಮ್ಮ ವಿಳಾಸವನ್ನು ತಿಳುಹಿಸಿ ಈ ವರೆಗೂ ...೫೦೦೦೦ ಪ್ರತಿಗಳು ಕೊಡಲ್ಪಟ್ಟವೆ. ಈ ವಿವರ ...ಸ್ಟ ಕಾರ್ಡು ಬರೆಯಿರಿ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ ಔಷಧಾಲಯ, ... ಜೀನಾಬಜಾರ್ ರೋಡ್, ಮದರಾಸು.

ಅಗ್ಗವಾದ ಸಾಮಾನುಗಳು

ನಮ್ಮಲ್ಲಿ ಕ್ಷೇತ್ರ ಕಾಶಿಯಲ್ಲಿ ತಯಾರಾಗುವ ಬನಾ... ...ರಸಿ ಜರಿ ರೇಷ್ಮೆ ಸೀರೆ, ಮೊಗಟ, ಪೇಟ, ಕಾಶ್ಮೀರ ಶಾ... ...ಲು, ಕೊಳ್ಳೇಗಾಲ ಮೊಳಕಾಲ್ಮೂರು ನಮೂನೆ ವಸ್ತ್ರಗಳು, ಜರಿ ರೇಷ್ಮೆ ಧೋತ್ರ, ರುದ್ರಾಕ್ಷಿ ಸರಗಳು, (ಇದರಲ್ಲಿ ... ...ಮುಖದಿಂದ ... ಮುಖದ ವರೆಗೆ ... ಉತ್ತಮವಾಗಿ ... ...ದೊರೆಯುವುವು) ಮತ್ತೂ ... ...ಳು, ಜಗನ್ನಾಥ ... ಸ್ಫಟಿಕಸರ, ...ಕೊಡಲು, ... ವಿಧವಾ... ...ದ ಅತ್ತರುಗಳು, ವಿಧವಿಧವಾದ ... ... ವಸ್ತುಗಳ ಸಾಮಾ... ...ನುಗಳನ್ನು ಬನಾರಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿ ... ... ಕಳುಹುತ್ತಾ ... ...

ಈ ಸಾಮಾನುಗಳ ಕ್ರಯದ ವಿವರ ತಿಳಿಯ ಬೇಕಾದರೆ ಫಕ್ತ ಪೋಸ್ಟ್ ... ಗೆ ... ಸ್ಟಾಂಪನ್ನು ... ...ಳುಹಿಸಿದಲ್ಲಿ ... ಕ್ಯಾಟಲಾಗು, ... ಸಾಮಾನುಗಳು, ... ವಿಶ್ವೇಶ್ವರನ ಪಟ, ... ನಮ್ಮ ಕಂಪನಿ ವಿಳಾಸದ ಕಾರ್ಡು ಇವುಗಳನ್ನು ನಾವು ಬರೆದು ಕಳುಹುವ ವಿಳಾಸಕ್ಕೆ ಕಳು... ...ಹಿಸುವೆವು. ... ಪತ್ರ ಬರೆದುಕೊಳ್ಳಬೇಕೆವು.

ವಿಳಾಸ— ಮ್ಯಾನೇಜರ್,

ಎಸ್. ಮೂ ಎಸ್ ಅಂಡ್ ಕಂಪೆನಿ,

ಬನಾರಸ್ ಸಿಟಿ

ಕಾರೋನೇಷನ್ ಸಾಬೂನು.

21 "ಅಪೂರ್ವ ವಿಲ್ಲರ ರೋಮಸಂಹಾರಿ"



ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ... ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ ಬೇನೆ ಮುಂತಾದ ಬಾಧೆಗಳಿಲ್ಲವು ಉಪಯೋಗಿಸಿದರೆ ಗೊತ್ತಾಗುವುದು

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1-0-0

6 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1-12-0

ಅಂಚೆ ಹಾಸಲು 0-4-0

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ಕೊಡಲಾಗುವುದು

... ಬಿ ಸಿ ... ಅಂಡ್ ಕೋ,

177 ಜೀನಾಬಜಾರ್ ರೋಡ್, ಮದ್ರಾಸ್

ಮಧುರವಾಣಿ.

ಮಾಸಿಕ ಚಂದಾ ೧—೪—೦

23 ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಸ್ವಾರಿ, ಚಮತ್ಕಾರ, ಪರಿ... ...ಹಾಸ, ವಿವೇಕ... ... ಪಂಡಿತರಿಂದ ... ನಾಟಕ... ...ಕಾದಂಬರಿ, ಜೀವಚರಿತ್ರೆ ಮುಂತಾದ ಉತ್ತಮಗ್ರಂಥಗ... ...ಳು, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ... ...ತ್ರ ಲೇಖನ ... ಉಪನ್ಯಾಸಗಳು, ...ಲಾದ ಬಗೆಬಗೆಯ ... ವಿಷಯಗಳೂ, ...ದೆ ಪುಟಗಳಲ್ಲಿ ... ಪ್ರಕಟಿಸಲ್ಪಡುವುವು. ... ಸುಂದರಿ ಸಂಚಿಕೆಗೂ, ... ಗ್ರಾಹಕರಿಗೆ ಅನೇಕ ಪುಸ್ತಕಗಳು ... ...ಗೆ ... ದೊರೆಯುವುವು. ಅನೇಕ ... ಪಂಡಿತರೂ ... ... ಪತ್ರಿಕೆಗಾಗಿ ... ಅನೇಕರ ... ...

—... ... ಮೈಸೂರು

ಸರ್ವಜ್ಯೋತಿಷರತ್ನ.

10 ... ಹೊಸಗ್ರಂಥವು

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ, ಅನುಭ... ...ವಕ್ಕೂ ತಂದುಕೊಳ್ಳುವುದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ... ...ದ್ದರೂ ಅಮ್ಯಸಾಧ್ಯವಾಗಿಯೂ, ಅಸಂಪೂರ್ಣವಾಗಿಯೂ ಇರುವುವು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮರಾಠಿ, ಹಿಂದಿ ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ, ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನಭಾಗ, ಗ್ರಹಫಲಗಳು, ಶಕುನಭಾಗ, ಸ್ವಪ್ನ ... ... ತಂತ್ರಮೊದಲಾದ ಅತ್ಯವಶ್ಯಕವಾದ ವಿಷಯಗಳನ್ನು ಸ್ಪಷ್ಟವಾಗಿಯೂ, ಸುಲಭವಾಗಿಯೂ ತಿಳಿಯುವಂತೆ ಬರೆದಿರುವುದಲ್ಲದೆ, ... ಪ್ರತಿಯೊಂದಕ್ಕೂ ... ... ಉದಾಹರಣೆ ಮೊದಲಾದುವುಗಳನ್ನೂ ಬರೆದು, ಸುಂದರವಾದ ಅಕ್ಷರಗಳಿಂದ ... ... ಈ ಪುಸ್ತಕವು ... ... ಪುಸ್ತಕವನ್ನು ಓದಿದರೆ ಇದರ ಉಪಯೋಗವೂ, ... ಸಾಮಾನ್ಯವಾದ ವರಿಗೂ ವಿಶದವಾಗಿ ತಿಳಿಯುವಂತಿರುವುದು

ಈ ಪುಸ್ತಕದ ಬೆಲೆ ... , ಟಪಾಲ್ ಖರ್ಚು ...

ನಮ್ಮ ವಿಳಾಸ—ಶ್ರೀ ಶಿವಲಿಂಗಶೆಟ್ಟಿ

ಕರ್ನಾಟಕ ಬುಕ್‍ಡಿಪ್ಪೋ ಏಜಂಟ್, ಬಳ್ಳಾರಿ.

ಸತ್ಯಾರ್ಥಪ್ರಕಾಶ.

(ಹೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ)

The Greatest treasure of true Vedic Principles

7 ಇದರಲ್ಲಿ ಪ್ರಾಚೀನರಿಗೆ ಪರಸ್ಪರ ಸಂಬಂಧವು ... ಉಂಟಾಯಿತೆಂಬುದೂ, ಜೀವನ ... ಪರಮೇಶ್ವರನ ಸಂಬಂಧವೂ, ಪರಮೇಶ್ವರನ ... ಗುಣಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ... ... ವೇದಾಧ್ಯಯನದ ಅಧಿಕಾರವು ... ... ವಿವೇಚನವೂ, ಜಗತ್ತಿನ ಉತ್ಪತ್ತಿ, ಸ್ಥಿತಿ, ಮತ್ತು ಪ್ರಳಯಗಳ ವಿಚಾರವೂ, ಬಂಧಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರ ... ... ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ... ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತ್ತು ... ೧—೪—೦. ... ... ೧—೦—೦ ಟಪಾಲ್ ಖರ್ಚು ಬೇರೆ ಪ್ರತಿ ೩೦

ಸತ್ಯಾರ್ಥ ಪ್ರಕಾಶ

(೧೧ ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ... ... ದೇಶಗಳು ... ... ಆರ್ಯಾವರ್ತ ದೇಶದ ಅವನತಿಗೆ ಕಾರಣಗಳೂ, ... ಬ್ರಾಹ್ಮಸಮಾಜ ... ... ಟಪಾಲು ಖರ್ಚು ಬೇರೆ

ಈ ಗ್ರಂಥವನ್ನು ... ... ಬಿ. ಎ., ಎಲ್. ಎಲ್. ಬಿ., ...

ಬೇಕಾದವರ ... — ... ...

... ...

ಹೊಸಪುಸ್ತ[redacted]

೬೨

ಪಾಲ್ಕುರಿಕೆ ಸೋಮೇಶ್ವರಪುರಾಣಂ — ಪ್ರಸಿದ್ಧರಾದ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ ಸಂದರ್ಭೋ ನುಸಾರ ಅನೇಕ ಪುರಾಣಕಥೆಗಳನ್ನೂ ನಿರೂಪಿಸುವ ೩೧೧ ಪುಟಗಳುಳ್ಳ ಕನ್ನಡದ ಗ್ರಂಥ ಬೆಲೆ ವಿ ಪಿ ೧—೩ ೧

ದೇವೀಕಾಲೋತ್ತರಾಗಮದ ಟೀಕಾಚಾರ ಬೋಧಕ ಪಟಲವು—ಶಿವಜ್ಞಾನ ಶಿವಾಚಾರ ವಿಷಯವನ್ನು ನಿರೂಪಿಸುವ ಸಟೀಕ ಗ್ರಂಥ ಬೆಲೆ ೧ ೩ ೦

ಪಂಚಶ್ಲೋಕಿ ಶಿವ... ... ಅನಂತ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ... ವಾಧಿಸುವ ಉತ್ತಮಗ್ರಂಥ ಬೆಲೆ ೧—೦ ೦

ಬಸವರಾಜ ವಿಜಯಂ — ... ೧—೪—೦ ಬಾಲಕರು ಕೂತ ಓದಿ ತಿಳಿದುಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿ ಬರೆಯಲ್ಪಟ್ಟಿವೆ

ಚೆನ್ನಬಸವೇಶವಿಜಯಂ — ೧—೮—೦ ಇದು ವಚನರೂಪವಾದ ಚೆನ್ನಬಸವಪುರಾಣ

ವೀರಶೈವ ಧರ್ಮಶಿರೋಮಣಿ ೧—... ೦ ವೀರಶೈವ ಮತಸ್ವರೂಪವೂ, ತದ್ಧರ್ಮವೂ, ನಿರೂಪಿತವಾಗಿದೆ ಸವ್ಯಾಖ್ಯಾನ

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ ಒಬ್ಬ ವೀರಶೈವ ಮತಾಚಾರ್ಯರ ಚರಿತ್ರೆ ಕನ್ನಡ ಟೀಕಿನಿಂದ ಕೂಡಿದೆ ೧ ನೆ ಪ್ರಕರಣಕ್ಕೆ ೧—೩—೦ ೨ ನೆ ಪ್ರಕರಣಕ್ಕೆ ೧—೦—೦

ಸೌಂದರಪುರಾಣಂ ೧—೨—೦ ಸೌಂದರನಂಬಿಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಕಾವ್ಯ

ಸಟೀಕ ತತ್ವಪ್ರಕಾಶಿಕಾ ೦—೩—೦ ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವನ್ನು ನಿರೂಪಿಸುವುದು

ಸಟೀಕ ಶತರೂತ್ರರತ್ನಂ— ... ಬದ್ಧಮೋಕ್ಷ ಲಕ್ಷಣವಂ ನಿರೂಪಿಸ ವುದು ಬೆಲೆ ೩ ಆಣೆ

ಸಟೀಕ ದೀಕ್ಷಾವಿಧಿ— ೦—೧—೦ ಸ್ತುತಿಮುಕ್ತಾವಳಿ— ೧—೩—೦ ರತ್ನಾಶತಕ— ೦—೨—೦ ಶಂಕರಲಿಂಗರಂದಂ ೧ ಆ

ವೀರಶೈವ ಗ್ರಂಥಸಂಚಿಕಾ — ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವುವು ವರ್ಷದಚಂದಾ ೨—೮—೦

ರ್ಯ ಆರ್ ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು

ಊದಬತ್ತಿಗಳು

೩೫

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨ ೧—೦ ೫—೦—೦; ೩—೦—೦, ೨—೮—೦, ೧—೪—೦, ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧—೦—೦, ಪಸಿಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗಪೊಟ್ಟಣ ೧ ಕ್ಕೆ ೪ ಆಣೆ, ಧೂಪದಗಟ್ಟಿ ೧ ಕ್ಕೆ ೨ ಆಣೆ, ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ ಎಲ್. ಉಪಾಧ್ಯಾಯ,
ಸುಗಂಧಿಕಾರಿ, ಮೈಸೂರ

೬ ಗಂಧರ[redacted]



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚರ್ಮ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ ಉಬ್ಬಸಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ವ ... ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ಗಿರಗುಟ್ಟುವಿಕೆ ಮುಂತಾದವುಗಳು ಈ ಯಾವುವಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ ಒಂದು ಚಿಟಕಿ ಈ ಪುಡಿಯನ್ನು ಸಾಧಾರಣಪುಡಿಯೊಡನೆ ಬೆರಸಿದರೆ ವಾಸನೆ ಘಮಘಮಿಸುತ್ತದೆ ೧ ಡಬ್ಬಿಯು ಬೆಲೆ ೬ ಆಣೆ ೧ ಡಜನ್ ಡಬ್ಬಿಗಳಿಗೆ ೧ ೧೦ ೦

ಉತ್ತಮವಾದ ನಶ್ಯದಪುಡಿ

ಘಂಟು ಸಹಜವಾದ ವಾಸನೆಗಳಿರುವ ... ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ ಮೂಗಿನಲ್ಲಿ ಹುಳಿವಾಸನೆ ಬರುವ, ... ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ ಒಂದೇ ಒಂದಾವೃತ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೬ ಸೇರಿಗೆ ೩—೮—೦

ಮುಖೋಲ್ಲಾಸಿನಿ ಹೊಗೆಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ ನೀವು ಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ನಾರು—ರುಚಿ ವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ ೧ ಡಬ್ಬಿಗೆ ೪ ಆಣೆ ಒಂದು ಡಜನ್ ಡಬ್ಬಿಗಳಿಗೆ ೧—೧೪—೦ ಟಪಾಲ್ ಖರ್ಚು ಬೇರೆ

ವಿಳಾಸ ಕೆ ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್,
ಕೊಳ್ಳೇಗಾಲದ ತಾಲ್ಲೂಕು

ಶೀತಕಾಲ.

೧೪

ಪ್ರಭಾಕರ ಚೂರ್ಣ,— ಇದರ ಸೇವನೆಯಿಂದ ಗೂರಲು, ಉಬ್ಬಸ, ಶ್ವಾಸವಾಸ ಕಫಕ್ಷಯ, ನೆಗಡಿ, ಕೆಮ್ಮು ಅಸ್ಥಿಜ್ವರ, ವಾತನಾಡವಾಗ ಉಗುಳುವಿಕೆ, ನಾಲಿಗೆ ಒಣಗುವಿಕೆ, ರಕ್ತ ದೋಷ ಕಂಡುಬಂದರೆ, ನೀರಿನ ದೋಷಗಳು, ಶ್ವಾಸಕೋಶದ ಎಲ್ಲಾ ಉಪಹತಿಗಳನ್ನು ಖಂಡಿತವಾಗಿ ತತ್‌ಕ್ಷಣದಲ್ಲಿ ಪರಿಹರಿಸಿ ಹಿತವನ್ನುಂಟುಮಾಡುತ್ತಿ ೮ ತೊಲ ಡಬ್ಬಿ ೧ ಕ್ಕೆ ಬೆಲೆ ರೂ. ೨—೦—೦, ವಿ ಪಿ ಬೇರೆ

ಪಂಡಿತ ಶ್ರೀಕಂಠಯ್ಯ.
ಬೀರೂರು

[redacted]

ಪಂಡಿತ ಜಿ. ... ಗುರಳಿಸ್ತುರಿ ...

ಓರಿ ... ಫಾರ್ಮಸಿ, ದೊಡ್ಡಗಡಿಯಾರದ ಬಳಿ
೧೭ ಮೈಸೂರ

ಗೋರೋಚನ ಮಾತ್ರೆ — ೧೨ ಮಾತ್ರೆಗಳನ್ನು ... ಟ್ಟರೆ, ಆ ದಾರ್ ... ದಂತೆ ಸುಖವಾಗಿ ಭೇದಿ ಮಾಡಿಸುತ್ತ ೩೦ ೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦

ಜ್ವಾಲಾದನಾತಿ — ಇದರ ಸೇವನೆಯಿಂದ ಎಲ್ಲಾ ... ಗಳೂ ... ಗುಣವಾಗುವುದಲ್ಲದೆ ಅಗ್ನಿವೃದ್ಧಿ ... ಗುವುದು ... ೧೨ ಮಾತ್ರೆ ಸೀಸೆ ೦—೬—೦, ೨೪ ಮಾ... ಸೀಸೆ ೧—೮ —೦

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒ... ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕ ... ವ್ಯಾಧಿಗಳ ನಿವೃತ್ತಿ ... ಆರೋಗ್ಯವು ನೆಲಸೊಳ್ಳುವು ... ಕ್ಕೆ ರವಾನೆ ೪೮ ಮಾತ್ರೆ ಸೀಸೆ ೧—

... — ... ಮನೆಯಲ್ಲಿ ಇ... ಸದಾ ಮನೆಯಲ್ಲಿ ಇ... ತಕ್ಕ ... ೨೦ ಸಲಕ್ಕೆ ಆಗುವ ಔಷಧಿ ... ತೊಲೆ ೧ ಕ್ಕೆ ೧ —೮ —೦

... ರಮಾತ್ರೆ — ಇದರಿಂದ ... ಕಾರಕವೂ ... ದೇಹಕ್ಕೆ ತಂಪಾಗುತ್ತದೆ ಮಾತ್ರೆ ಸೀಸೆ ೦—೪—೦

ಅಶೋಕಹರ ರಸಾಯನ — ಮೂಲವ್ಯಾಧಿ ನಿವೃತ್ತಿಗೆ ಇದ ಸಂಜೀವನ ಸೇರಿದ ಡಬ್ಬಿ ೧—೮—೦

ಸ್ತ್ರೀ... — ... ಗಳಲ್ಲಿ ಒಹುಳ ... ರಿಯಾದ ಔಷಧಿ ಸೇರಿದ ಡಬ್ಬಿ ೪—೦—೦ ೧೨ ದಿನ ... ೨ ೦ ೦

ಸುಖಭೇದಿ ಮಾತ್ರೆ —೧೨ ಮಾತ್ರೆಗಳನ್ನು ಸೇ... ವುದರಿಂದ ೩ ೪ ಆವೃತ್ತಿ ಸುಖವಾಗಿ ಭೇದಿಯಾಗು... ೨೦ ಮಾತ್ರೆ ಸೀಸೆ ೦—೩

ಮಲಶೋಧನ ವಟಿಕಾ —ರಾತ್ರಿ ಮಲಗುವಾಗ ... ಸಾಯಂಕಾಲ ... ಬೆಳಗ್ಗೆ ಏಳುವಾಗ್ಗೆ ಒಂದೆರಡಾ... ಮಲವಿಸರ್ಜನೆಯಾಗುತ್ತೆ ೩೦ ಮಾತ್ರೆ ಸೀಸೆ ೦—೮

ಕಸ್ತೂರಿಮಾತ್ರೆ —ತಾಂಬೂಲದೊಡನೆ ಉಪಯೋಗಿಸತಕ್ಕದು ೩೦ ಮಾತ್ರೆ ಸೀಸೆ ೦—೮—೦

ಪುರುಷ ಸಂಜೀವಿನಿ — ೩೦ ಮಾತ್ರೆ ಸೀಸೆ ೨—೦
ಕಾಲರಾ ಮಾತ್ರೆ — ೩೦ ಮಾತ್ರೆ ಸೀಸೆ ೧—೦
ಕೆಮ್ಮಿನಮಾತ್ರೆ — ೩೦ ಮಾತ್ರೆ ಸೀಸೆ ೦—೮
ಅಜೀರ್ಣಮಾತ್ರೆ — ೪೦ ಮಾತ್ರೆ ಸೀಸೆ ೦—೧೨
ದಂತಶುದ್ಧಿ ಚೂರ್ಣ —ಡಬ್ಬಿ ೧ಕ್ಕೆ ೦—೨

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ... ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಲ ... ಕ್ರಯಕ್ಕೆ ದೊರಕುವುವು ಟಪಾಲು ಖರ್ಚನ್ನು ... ಹಿದಾ ಕೊಡಬೇಕು ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೇಯ ಇಸವಿ ನವೆಂಬರ್ ತಾ॥ ೧೧ ರಿಂದ ೧ನೆ ಡಿಸೆಂಬರ್ ತಾ॥ ೧೧ ರವರೆಗೆ ಸಲ್ಲುವ ಶಾಲಿವಾಹನ ೧೮೩೪ ನೇ ಪರಿಧಾವಿ ಸಂವತ್ಸರದ ಕಾರ್ತೀಕ ಶುದಿಯಿಂದ ಕಾರ್ತೀಕ ಶು॥ ಅಷ್ಟಮಿವರೆಗಿನ ಪಂಚಾಂ...

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	
11	[1] ಸೋ	೨	0-5	ಜ್ಯೇಷ್ಠ	48-28	
12	[2] ಮಂಗ	೩	1-18	ಮೂಲ	52 36	
13	[3] ಬುಧ	೪	4 50	ಪೂಷಾ	56-58	
14	ಗುರು	೫	7 26	ಉಷಾ	60	30
15	[4] ಶುಕ್ರ	೬	11-37	ಉಷಾ	3-3	1
16	[5] ಶನಿ	೭	17 7	ಶ್ರವಣ	9-22	2
17	[6] ಭಾನು	೮	22 35	ಧನಿಷ್ಠ	15-55	3

(1) ಕಾರ್ತೀಕ ಸೋಮವಾರ, (2) ... ದ್ ... ನಕ್ಷತ್ರ, (3) ವಿಶ್ವೇಶ್ವರ ತಿರುನಕ್ಷತ್ರಂ, (4) ವಿಷ್ಣು... ಪದ ... ಕಾಲಃ, (5) ... (6) ...

ಮೈಸೂರ್ ಪ್ರೆ... ... ದಿಂದ ಸ್ವಾ...
ಕೃಷ್ಣನಲ್ಲಿ ಮುದ್ರಿಸಿ

ಡೈರಿಗಳು ! ಸಕ ೧೯೧೩ ನೇ ಇಸವಿಯ ಡೈರಿಗಳು !!

೨೯

ಶ್ರೀ ಸೀತಾರಾಮನ ಪಾಕೆಟ್ ಡೈರಿಗಳು.
ಮೊದಮೊದಲೇ ಬರೆದು ತರಿಸಿಕೊಳ್ಳಿರಿ!

ನಂ ೧ ಸಣ್ಣಸೈಜು ಸಾದಾಡೈರಿ ೧ ಕ್ಕೆ ೦—೪
ನಂ. ೨. ಸಣ್ಣಸೈಜು ಪೆನಸಲ್ ಇಟ್ಟು ... ಹಾಕಿರುವ ಪ್ಲಾಪ್ ಡೈರಿ ೧ ಕ್ಕೆ ೦—೬—೦
ನಂ ೩. ದೊಡ್ಡಸೈಜು ಸಾದಾಡೈರಿ ೧ ಕ್ಕೆ ೦—೬ ೦
ನಂ. ೪. ದೊಡ್ಡಸೈಜು ಪೆನಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೧ ಕ್ಕೆ ೦—೮—೦
ಒಂದೇಸೈಜಿನ ಹತ್ತು ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಒಂದು ಇನಾಮು

(೧) ಈವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದಗಳಲ್ಲಿ ಸ್ಪಷ್ಟವಾಗಿ ಮುದ್ರಿಸಿ ಬೇರೆಬೇರೆ ಬಣ್ಣಗಳ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿರುತ್ತದೆ

(೨) ದೇಹನಿರ್ವಾಹ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಬಾಧಕಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿರುತ್ತದೆ ಪಂಚಾಂಗ, ಕ್ಯಾಲೆಂಡರ್ ರಾಹುಕಾಲ ಗುಳಿಕಕಾಲಗಳು, ಸಂವತ್ಸರ ಫಲಗಳು, ಗ್ರಹಣ, ಶಕುನ ಭಾಗ, ಪ್ರಯಾಣ ವಿಷಯ, ಜಾತಕರ್ಮ ಮೊದಲು ಮೋಕ್ಷಕರ್ಮಕ್ಕೆ ಬೇಕಾದ ಲಗ್ನಾದಿಗಳು, ಶ್ರೀಕೃಷ್ಣಚಕ್ರ ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತದೆ.

(೩) ಪೋಸ್ಟಾಫೀಸ್ ಆಕ್ಟ್, ಪೋಸ್ಟಾಫೀಸಿನ ರಂಗತಿ, ಸ್ಟಾಂಪ್ ಆಕ್ಟ್, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಸುತ್ತೊಂದು ಡೈರಿಯಲ್ಲಿ ಕೇಳದಿರುವ ಹೊಸ ವಿಷಯಗಳನ್ನೂ ಕೂಡ ಸೇರಿಸಿದೆ.

(೪) ಮದ್ರಾಸ್ ಮತ್ತು ಸದರ್ನ್‌ಮರಾಠಾ ರೈಲ್ವೆಗಳ ಛಾರ್ಜು, ರೈಲು ಹೊರಡುವ ಕಾಲ, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ಸಂಬಳ, ಗೌರ್ನಮೆಂಟ್ ರಜಾದಿನಗಳು, ಮುಂದಿನ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಕೋಕದಾ ಹೂಡುವಿದ್ದಿ, ತಲಬುಜರ್ತಿ ಪಟ್ಟಿ ಸಹಾ ಇರುತ್ತದೆ. ಜೋಬಿನಲ್ಲಿ, ಹಾಲು ಕೊಡುವವನ ಲೆಕ್ಕ, ಮುಖ್ಯವಾದ ವಿಷಯ, ಬಟ್ಟೆ ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಟಪಾಲ್ ಖರ್ಚು ಬೇರೆ

ಸಿ.— ಶ್ರೀ ಸೀತಾರಾಮಯ್ಯ ರು.

ಮೈಸೂರ್ ಸ್ಟಾರ್

REGISTERED NO M 124.

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ } ೧—೦—೦

ಮಹಿಶೂರಪುರೀತಾರಾ ವರನುಧಿಗತರಾಜಮಂಡಲಹಿತೈಷಿಣಾ । ಕುಶಲಪಥಕೃತಾವತಾರಾ ಪಕ್ಷವಿಶ್ಲ[illegible]ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸತ್ತ್ವಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದ[illegible]ವಾಲಂಪಟಂ
[illegible]ಪುಲಂ[illegible]ವೃತ್ತಮಾಲಾಕಿಲಂ । ಪ್ರೇಮಂ[illegible]ಕಾಲಂ ॥

{ ಅಂಚೆವೆಚ್ಚ ಸೇರಿ ೧—೧೦—೦

ಸಂಪುಟ ೨೫) ಮೈಸೂರ್ ಸ್ಟಾರ್ ಸನ್ ೧೯೧೦ ನೆಯ ಇಸವಿ ನವಂಬರ್ ತಾರೀಖು ೧೪ ನೆಯ ಸೋಮವಾರ. (ಸಂಚಿಕೆ ೪೫

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು

ಸುಲಭಕ್ರಯಗಳು! ಪರೀಕ್ಷಿಸಿರಿ !! ಸಂತೋಷಪಡಿರಿ !!!

ರಾಸ್ಕೋಪ್ ಸಿಸ್ಟಂ ಪೇಟೆಂಟ್ ಲಿವರ್ ಜ್ಯುವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಒಂಭಾಗದ [illegible] ಇದ್ದು, ನೋಡಲಿಕ್ಕೆ ಬಹು ರಮಣೀಯವಾಗಿದೆ ಬಹು [illegible] ಕಾಲ [illegible] ವ ಗಡಿಯಾರವು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಬೇರೆ ಕಂಪೆನಿಯವರು ಇದಕ್ಕಿಂತ [illegible] ೩—೪—೦ ಬೆಲೆಗೆ ಮಾರುತ್ತಾರೆ ಕಾರಣ ಮೋಸಪಡದೇ ಇದಿರಿ ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವುದು

ಕ್ರಯ ರೂ 2—8—0 ವಿ ಪಿ ಪಿ ಚಾರ್ಜ್ ರೂ 0—4—0

ಸ್ವಿಸ್ ಮೇಡ್ ಟೈಮ್ ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.



ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ ಇದು ಆಯುಷ್ಪರಿಮಿತಿಯವರೆಗೂ ಇರುವುದು ಇದು ಬಹಳ ರಮಣೀಯವಾಗಿಯೂ [illegible] ಇರುವುದು, ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿರುವುದು ಇದಕ್ಕೆ [illegible] ಗ್ಲಾಸು [illegible] ಸಹ ಇರುವುದು, ಇದಕ್ಕೆ ೫ ವರ್ಷಗಳ ಗ್ಯಾರಂಟಿ ಕ್ರಯ ರೂ 3—8—0 ವಿ ಪಿ ಪಿ ಚಾರ್ಜ್ ರೂ 0—4—0

ಲೇಡಿಸ್ ಸಿಲ್ವರ್ ಜುವೆಲ್ಡ್ ವಾಚ್.



ಈ ಗಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವುದು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ ಉಪಯೋಗಕ್ಕೆ ಯೋಗ್ಯವಾದುದು ಇದನ್ನು [illegible] ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು, ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು ಇದಕ್ಕೆ ಗ್ಯಾರಂಟಿ ೫ ವರ್ಷಗಳು ಕ್ರಯ ರೂ 6—0—0 ವಿ ಪಿ ಪಿ ಚಾರ್ಜ್ 0—6—0

ಪ್ರೋಲಾರ್ ಲಿವರ್ ವಾಚ್.

(ವಾರಕ್ಕೊಂದಾವೃತ್ತಿ ಕೀಗ್ ಕೊಡುವ ಗಡಿಯಾರವು)



ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವೃತ್ತಿ ಕೀಗ್ ಕೊಡುವ ಗಡಿಯಾರವು ಇದು ಬಹಳ ಗಟ್ಟಿತರವಾದದ್ದು ಇದು [illegible] ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಭಂಗಾರದ ಪದಕಗಳನ್ನು ಹೊಂದಿರುತ್ತದೆ ಇದು ಶುದ್ಧ (ಚೊಕ್ಕ) ಬೆಳ್ಳಿಯಿಂದ ಮಾಡಲ್ಪಟ್ಟಿ[illegible] ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು ಇದನ್ನು [illegible] ರೂ ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ ಇದಕ್ಕೆ ಗ್ಯಾರಂಟಿ ೧೦ ವರ್ಷಗಳು ಕ್ರಯ ರೂ 10—0—0 ವಿ ಪಿ ಪಿ 0—8—0

ಟೇಬಲ್ ಟೈಂಪೀಸು ಘಡಿಯಾರವು.



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವುದಲ್ಲದೆ, ನೋಡುವುದಕ್ಕೆ ಬಹಳ [illegible] ಇರುವುವು ಇವುಗಳು ಅನೇಕ ಸಂವತ್ಸರಗಳವರೆಗೆ ಬಾಳಿಕೆಬರುವುವು ಈ ಗಡಿಯಾರಗಳು [illegible] ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಅವಶ್ಯ ಇಡತಕ್ಕದ್ದು

ನಂಬರ್ ೧. ತಾರೀಖುಗಳನ್ನು ತೋರಿಸುವ ಮತ್ತೂ ಅಲಾರಂ ಸಹ ಇರುವ ಕ್ಯಾಲೆಂಡರ್ ಅಲಾರಂ [illegible] ಕ್ರಯ ರೂ 2—8—0 ವಿ ಪಿ ಪಿ ಚಾರ್ಜ್ 0—6—0

ನಂಬರ್ ೨ ತಾರೀಖುಗಳು ಇಲ್ಲದೆ ಬರೀ ಅಲಾರಂ ಟೈಂಪೀಸು ೧ ಕ್ಕೆ ಕ್ರಯ 2—0—0 ವಿ ಪಿ ಪಿ ಚಾರ್ಜ್ 0—6—0

ನಂಬರ್ ೩. ತಾರೀಖು ಮತ್ತೂ ಅಲಾರಂಯಿಲ್ಲದ ಸಾದಾ ಟೈಂಪೀಸು ೧ ಕ್ಕೆ ಕ್ರಯ 1—4—0 ವಿ ಪಿ ಪಿ ಚಾರ್ಜ್ 0—6—0

ಕ್ಯಾರೇಜ್ ಕ್ಲಾಕು ಘಡಿಯಾರಗಳು.



ಇವು ಬಹಳ ರಮ್ಯವಾದವುಗಳು ಮತ್ತೂ ಮನೋಹರವಾದವುಗಳು ಅನೇಕ ವರ್ಷಗಳವರೆಗೂ ಬಾಳಿಕೆ ಬರತಕ್ಕವುಗಳು ಇವು ಉತ್ತಮತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ [illegible] ಗ್ಲಾಸುಗಳು ಸಹ ಇವೆ ಇವು ಇವನ್ನು [illegible] ತಮ್ಮ ಮನೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಮತ್ತೂ ಇತರ ಕಚೇರಿಗಳಲ್ಲಿಯೂ ಇಡುವುದಕ್ಕೆ ಯೋಗ್ಯವಾದವುಗಳು. ನಂಬರ್ ೧ — ಅರ್ಧಗಂಟೆ ಹೊಡೆಯುವುದು ಮತ್ತೂ ಅಲಾರಂ ಸಹ ಇರುವದು ಕ್ರಯ ರೂ 5—0—0 ವಿ. ಪಿ. ಪಿ. ಚಾರ್ಜ್ 0—10—0. ನಂಬರ್ ೨ — ಗಂಟೆ ಅರ್ಧಗಂಟೆ ಮಾತ್ರ ಹೊಡೆಯುವುದು 4—8—0 ವಿ ಪಿ ಪಿ 0—8—0

ನಂಬರ್ ೩ — ಕಾಲವನ್ನು ಮಾತ್ರ ತೋರಿಸಿ ೧೫ ನಿಮಿಷಗಳವರೆಗೂ ವಾದ್ಯವನ್ನು ಬಾರಿಸುವುದು ರೂ 5—0—0 ವಿ ಪಿ ಪಿ 0—10—0

ನಂಬರ್ ೪ — ಗಂಟೆಗಂಟೆಗೆ ವಾದ್ಯವನ್ನು ಬಾರಿಸುವುದು ರೂ. 5—8—0 ವಿ. ಪಿ ಪಿ ಚಾರ್ಜ್ 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ — ಇದು ಎಂದೆಂದಿಗೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು [illegible] ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ಕ್ರಯ ೧ ಕ್ಕೆ 0 8—0 ವಿ. ಪಿ. ಪಿ 0—4 0

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರದ ಸರಪಣಿ — ಇದು ಎಂದೆಂದಿಗೂ ಭಂಗಾರದಂತೆ ಹೊಳೆಯುವ [illegible] ಕೆಲಸದ ಸರಪಣಿ ೧ ಕ್ಕೆ ಕ್ರಯ ರೂ 5—0—0 ವಿ. ಪಿ ಪಿ 0—4—0.

ಶುದ್ಧ ಬೆಳ್ಳಿಯ ಗಡಿಯಾರದ ಸರಪಣಿ — ಇದು ೧ ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟದ್ದು [illegible] ಕ್ರಯ ೧ ಕ್ಕೆ 3—0—0 ವಿ. ಪಿ [illegible]

ಮನೋಹರ: ಲಿಂಗಪ್ಪ ಅಂಡ್ ಕಂಪನಿ ಟ್ರೇಡ್ ಲೇಡಿ, ವಾಚ್‌ಮೇಕರ್ಸ್ [illegible], ಮದ್ರಾಸು.

ಪ್ರಜಾಪ್ರತಿನಿಧಿಸಭೆಯಲ್ಲಿ ಸಭಾಸದರು ಮಾಡಿದ ಪ್ರಾರ್ಥನೆಗಳಿಗೆ ದಿವಾನರು ಕೊಟ್ಟ ಉತ್ತರಗಳು —

[ಡಿಸ್ಟ್ರಿಕ್ಟುವಾರು]

ಶಿವಮೊಗ್ಗಾ ಡಿಸ್ಟ್ರಿಕ್ಟು

ಅಜ್ಜಂಪುರದಿಂದ ಚನ್ನಗಿರಿಗೂ, ಶಿವನಿ ಸ್ಟೇಷನಿನಿಂದ ಉಬ್ರಾಣಿ ಡಿಪೋವಿಗೂ ರಸ್ತೆಗಳು ಸರ್ಕಾರದಿಂದ ಶಾಘ್ರ ಕೊಡಲಾಗಲಾಗದೆಂದೂ, ಶಿಕಾರಿಪುರದಿಂದ ಮಾಸೂರಿಗೆ ೩ ಮೈಲಿ ರಸ್ತೆ ಹಾಕಿಸುವುದನ್ನು ಯೋಚಿಸುತ್ತೇವೆಂದೂ ದಿವಾನರವರು ಹೇಳಿದರು ಶಿಕಾರಿಪುರದ ಶ್ರೀಹೊರಿಹೊಳೆ ಭಾಗಣ್ಣ ದೇವರ ದೇವಸ್ಥಾನದ ರಿಪೇರಿಯನ್ನು ಲೇಟ್ ಮಹಾರಾಜಾ ಕೃಷ್ಣರಾಜ ಒಡೆಯರವರು ಮಾಡಿಸಿರುತ್ತಾರೆಂದೂ, ಅದು ಪ್ರಾಚೀನಕಾಲದ ಚರಿತ್ರಾರ್ಹವಾದ ದೇವಸ್ಥಾನವಾಗಿ ಪ್ರಸಿದ್ಧಿ ಹೊಂದಿದ್ದು ಈಗ ಜೀರ್ಣವಾಗುತ್ತಿರೋಣದರಿಂದ ಅದರ ರಿಪೇರಿಯನ್ನು ಸರ್ಕಾರದವರಿಂದ ಮಾಡಿಸಿಕೊಡಬೇಕೆಂದೂ, ಒಬ್ಬ ವ್ಯಕ್ತಿ ೧೦೦೦ ರೂ ನ್ನು ಅಲ್ಲಿನ ವೃತ್ತಿಗಳು ಒದಗಿಸಿಕೊಡಲು ಸಿದ್ಧರಾಗಿದ್ದಾರೆಂದೂ ಮೆಂಬರುಗಳು ಹೇಳಿದ್ದರ ಮೇಲೆ ದಿವಾನರವರು ಅದನ್ನು [illegible] ಪರ್ಯಾಲೋಚನೆಯಿಂದ ಹುಕುಂ ಕೊಡುವುದಾಗಿ ಅಪ್ಪಣೆ ಕೊಟ್ಟರು ತಾವರೆಕೆರೆಯಲ್ಲಿ ಮತ್ತೆ ಪೋಸ್ಟ್ ಆಫೀಸನ್ನು ಇಡಿಸುವ ವಿಷಯದಲ್ಲಿ ವಿಚಾರಿಸುತ್ತೇವೆಂದು ದಿವಾನರವರು ಹೇಳಿದರು

ಕಡೂರು ಡಿಸ್ಟ್ರಿಕ್ಟು

ತರೀಕೆರೆಯಲ್ಲಿ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನು ನೇಮಕಮಾಡುವುದು, [illegible] ಕೋರ್ಟನ್ನು ಇಡುವುದು, [illegible] ತಾಲ್ಲೂಕು [illegible] ಮಾಡುವುದು, ಕಡೂರು—ಚಿಕ್ಕಮಗಳೂರು ಘಾಟಿ ರಸ್ತೆಯನ್ನು ಕಣಿವೆಗಳಿರುವ ಕಡೆ ಅಗಲಮಾಡುವುದು, ಕಂಪ್ರನಳ್ಳಿಗೆ ರಸ್ತೆ ಮಾಡಿಸುವುದು, ಚಿಕ್ಕಮಗಳೂರಿನಲ್ಲಿ ಕಸಬುದಾರಿ ಸ್ಕೂಲನ್ನು ಇಡಿಸುವುದು, ಚಿಕ್ಕಮಗಳೂರು ಹಿಂದುಸ್ಥಾನಿ ಸ್ಕೂಲಿನಲ್ಲಿ ಇಂಗ್ಲಿಷ್ ಕ್ಲಾಸನ್ನು ಇಡುವುದು, ಕಡೂರಿನಲ್ಲಿ ಗರ್ಲ್ಸ್ ಸ್ಕೂಲ್ ಕಟ್ಟಿಸುವುದು, ಇವುಗಳನ್ನು ದಿವಾನರವರು ವಿಚಾರಮಾಡಲು ಗುರುತು ಹಾಕಿಕೊಂಡಿರುತ್ತಾರೆ ಕೊಪ್ಪ ಟವರ್ನಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅಂದಾಜು ಪಟ್ಟಿ ತಯಾರಾಗುತ್ತಿದೆ ಎಂದೂ, ಅದನ್ನು ಜಾಗ್ರತೆಪಡಿಸಬೇಕೆಂದೂ ಇಂಜನಿಯರ್ ಇಲಾಖೆಗೆ ಬರೆಯುವುದಾಗಿಯೂ, ಹರಿಹರಪುರದಲ್ಲಿ ತುಂಗಾನದಿಯ ಸೇತುವೆ ಟೋಲ್ ಕಂಟ್ರಾಕ್ಟರ ಕೂಡ ರೈತರು ಒಪ್ಪಂದ ಮಾಡಿಕೊಂಡು ನಿಯಾಮತಿ ದರದ ಟೋಲ್ ಸುಂಕವನ್ನು ಖಾವತಿಮಾಡಿ [illegible]ನ್ನು ಸಾಗಿಸಬಹುದೆಂದೂ ಮುಂದೆ ಆ ರೈತರ ಮಕ್ಕಳಿಗೋಸ್ಕರ ಮುಂಡಿಗೆರೆಯಲ್ಲಿ ಸ್ಟುಡೆಂಟ್ಸ್ ಹೋಮನ್ನು ಕಟ್ಟಿಸುವುದಕ್ಕೆ ಅಂದಾಜುಪಟ್ಟಿ ತಯಾರ್ಮಾಡುವಂತೆ ಅಪ್ಪಣೆಮಾಡುವುದಾಗಿಯೂ, ಅದರ ಕಾಮಗಾರಿ ಖರ್ಚಿಗೆ ಸರ್ಕಾರದಿಂದ ಕೆಲವು ಹಣವನ್ನು ಗ್ರಾಂಟು ಕೊಡಿಸುತ್ತೇವೆಂದೂ ದಿವಾನರವರು ತಿಳಿಸಿರುತ್ತಾರೆ.

ಚಿತ್ರದುರ್ಗ ಡಿಸ್ಟ್ರಿಕ್ಟು

ಹರಿಹರ ತಾಲ್ಲೂಕಿಗೆ ಸೇರಿದ ದೇವರಬೆಳಕೆರೆಯ ಕಾಮಗಾರಿ, ಹರಿಹರದಲ್ಲೂ ದಾವಣಗೆರೆಯಲ್ಲೂ ವ್ಯವಸಾಯದ ಫಾರಮನ್ನು ಮಾಡಿಸುವುದು, ಚಿತ್ರದುರ್ಗದಲ್ಲಿ ಕಸಬಿನ ಶಾಲೆಯನ್ನಿಡುವುದು, ದಾವಣಗೆರೆಯಲ್ಲಿ ಒಂದು ಹೈಸ್ಕೂಲು ಮತ್ತು ವ್ಯಾಪಾರ ಶಾಲೆಯನ್ನು ಕಲ್ಪಿಸುವುದು, ದಾವಣಗೆರೆಯ ರೈಲ್ವೆ ಗುಡ್ಸ್ ಷೆಡ್ಡನ್ನು ಬದಲಾಯಿಸುವುದು; ಚಿಕ್ಕಸೂರು, ಮಾಯಕೊಂಡ, ರಾಮಗಿರಿ, ಚಿಕ್ಕಜಾಜೂರು, ಸಾಸಲು, ಹೊಸದುರ್ಗ ರೋಡ್ ಸ್ಟೇಷನ್‌ಗಳಲ್ಲಿ ಗುಡ್ಸ್ ಷೆಡ್ಡುಗಳನ್ನು ಕಟ್ಟಿಸುವುದು, ಹರಿಹರದಲ್ಲಿ ರಂಗನಾಥೇಶ್ವರಸ್ವಾಮಿ ದೇವಸ್ಥಾನವನ್ನು ಎತ್ತರಿಸಿ ಕಟ್ಟುವುದು, ಈ ವಿಷಯಗಳನ್ನು ತನಿಖೆಮಾಡುವುದಕ್ಕೋಸ್ಕರ ದಿವಾನರವರು ಗುರುತು ಹಾಕಿಕೊಂಡರು. ಹರಿಹರದ ಶ್ರೀಹರಿಹರೇಶ್ವರ ದೇವಸ್ಥಾನಕ್ಕೆ [illegible] ಲೇಟ್ ಕೃಷ್ಣರಾಜ ಒಡೆಯರವರು [illegible] ಕೊಟ್ಟ [illegible] ಇನಾಮತಿ ಗ್ರಾಮವನ್ನು ದೇವಸ್ಥಾನಕ್ಕೆ ಬಿಟ್ಟುಕೊಡಬೇಕೆಂದು ವಿಚಾರದಲ್ಲಿ ಸನ್ನದಿನ ನಕಲು ಸಮೇತ ಗವರ್ನಮೆಂಟಿಗೆ ಬರೆದುಕೊಂಡರೆ ತನಿಖೆಮಾಡುತ್ತೇವೆಂದೂ; ಚಿತ್ರದುರ್ಗದ ಸುತ್ತಲಿರುವ ಕಂದಕಗಳನ್ನು ಮುಚ್ಚಿರುವುದಕ್ಕೆ ಸರ್ಕಾರದಿಂದ ಹಣವನ್ನು ಒದಗಿಸಲಾಗದೆಂದೂ, ಚಿತ್ರದುರ್ಗದ ಟವರ್ ಮ್ಯುನಿಸಿಪಲ್ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳದೆ ನೀರು ಒದಗಿಸುವ ಏರ್ಪಾಡನ್ನು ಮಾಡಿಸುವುದು ಸಾಧ್ಯವಿಲ್ಲವೆಂದೂ ದಿವಾನರವರು ತಿಳಿಸಿದರು

ಹಾಸನ ಡಿಸ್ಟ್ರಿಕ್ಟು

[illegible] ನೀರನ್ನು ಒದಗಿಸಿ, ಆರೋಗ್ಯ [illegible] ವುದಕ್ಕೆ [illegible] ಮ್ಯುನಿಸಿಪಲ್ [illegible] ಸ್ಥಳೀಯ ಹುಟ್ಟುವಳಿಯನ್ನು ಹೆಚ್ಚಿಸಬೇಕಾಗಿದೆಯೆಂದೂ, ಬೇಲೂರು ಶ್ರೀ ಚೆನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಬೇಕಾಗುವ ರಿಪೇರಿಯನ್ನೆಲ್ಲಾ ಸರ್ಕಾರದವರೇ ಮಾಡಿಸುವುದಲ್ಲದೆ ಲಕ್ಷಣವಾದ ಒಂದು ವಿಮಾನವನ್ನು ಕಟ್ಟಿಸುವ ಏರ್ಪಾಡು ಮಾಡುತ್ತೇವೆಂದೂ ಅಪ್ಪಣೆಕೊಟ್ಟರು

ತುಂಕೂರು ಡಿಸ್ಟ್ರಿಕ್ಟು

ತುಂಕೂರು ಟವರ್ನಲ್ಲಿ ಆನರರಿ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡುತ್ತೇವೆಂದೂ, ಬೇಗೂರು ಕೆರೆಯ ನೀರನ್ನು ಹುಲ್ಲುಗಾವಲಿಗೆ ಬೇಸಗೆಯಲ್ಲಿ ಬಿಟ್ಟುಕೊಳ್ಳುವ ವಿಷಯದಲ್ಲಿ ಡೆಪ್ಯುಟಿ ಕಮಿಷನರಿಂದ ರಿಪೋರ್ಟನ್ನು ತರಿಸಿಕೊಂಡು ರೈತರಿಗೆ ನಷ್ಟವಾಗದಂತೆ ಏರ್ಪಾಡು ಮಾಡುತ್ತೇವೆಂದೂ ದಿವಾನರವರು ಅಪ್ಪಣೆ ಕೊಟ್ಟರು ಊರುಕೆರೆಯನ್ನು ದುರಸ್ತು ಮಾಡುವ ವಿಷಯದಲ್ಲಿ ಇಂಜನಿಯರ್ ಇಲಾಖೆಗೆ ಬರೆಯುತ್ತಾರೆ ಕಡಬ[illegible]ಕೆರೆ ಕೆಳಗಣ ನಾಲೆಗಳ ದುರಸ್ತಿಗೆ ಇಂಜನಿಯರ್ ಇಲಾಖೆಯವರು ಎಕರೆಗೆ ೪ ಆಣೆ ವಿಚಾರದಂತೆ ಗೊತ್ತುಮಾಡುವ ಸೆಸ್ಸನ್ನು ರೈತರು ಕೊಡಬೇಕಾಗಿರುವುದೆಂದೂ ಮೈಸೂರು ಸಂಸ್ಥಾನದ ಬ್ಯಾಂಕು ಇನ್ನೂ ಸರ್ಕಾರದವರ ಯೋಚನೆಯಲ್ಲಿದೆ ಎಂದೂ, ತುಂಕೂರು, ಪಾವಗಡ, ತಿಪ್ಟೂರು ಟವರ್ನುಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅಂದಾಜು ಪಟ್ಟಿಗಳು ತಯಾರಾಗುತ್ತಿವೆಯೆಂದೂ; ತುಂಕೂರು ಸಿವಿಲ್ ಆಸ್ಪತ್ರೆಯೊಳಗೆ ರೋಗಿಗಳಿರುವುದಕ್ಕೆ ಹೊಸ ವಾರ್ಡುಗಳನ್ನು ಕಟ್ಟಲು ಅಂದಾಜುಮಾಡಿಸುತ್ತೇವೆಂದೂ [illegible] ಗತಗಳನ್ನು ನಾಶಪಡಿಸುವ ವಿಷಯದಲ್ಲಿ ಮಾಡಿರುವ [illegible]ಗಳನ್ನು ತುಂಕೂರು ಡಿಸ್ಟ್ರಿಕ್ಟಿಗೂ [illegible] ತರುವುದಾಗಿಯೂ, ಕದಬದಲ್ಲಿ ಸ್ಕೂಲನ್ನು ಕಟ್ಟುವುದಕ್ಕೆ ಮಿಡ್ಲ್ ಸಂಘದವರು ಅರ್ಜಿ ಬರೆದುಕೊಂಡರೆ ಗ್ರಾಂಟು ಕೊಡುವ ವಿಷಯವನ್ನು ಯೋಚಿಸಬಹುದೆಂದೂ ತಿ[illegible]ರು ಟವರ್ ಮಧ್ಯರಾಷ್ಟ್ರದಲ್ಲಿ ಮಕ್ಕಳಿಗೆ ಸ್ಕೂಲು ಇಡುವುದಾದರೆ ತಮ್ಮ ಸ್ವಂತ ಕಟ್ಟಡವನ್ನು ಸ್ಕೂಲಿಗಾಗಿ ಬಿಟ್ಟುಕೊಡುವೆವೆಂದೂ ಮೆ॥ ಹೇಮಾ ಹನುಮಂತಯ್ಯನವರು ಒಪ್ಪಿಕೊಂಡದ್ದರಿಂದ ಈ ವಿಚಾರವನ್ನು ವಿದ್ಯಾ ಇಲಾಖೆಗೆ ತಿಳಿಸುತ್ತೇವೆಂದೂ, ಕೊಳಾಲದಲ್ಲಿರುವ ಶ್ರೀ ಬ್ಯಾಟರಾಯಸ್ವಾಮಿ ದೇವಸ್ಥಾನದ ರಿಪೇರಿ ವಿಷಯದಲ್ಲಿ ಮುಜರಾಯಿ ಇಲಾಖೆಯವರನ್ನು ಕೇಳುತ್ತೇವೆಂದೂ ದಿವಾನರವರು ಅಪ್ಪಣೆಕೊಟ್ಟರು

ಕೋಲಾರ ಡಿಸ್ಟ್ರಿಕ್ಟು

ಕೋಲಾರ್ ಟವರ್ನಿನ ನೀರಿನ ಏರ್ಪಾಡೂ, ಪುರಾಭಿವೃದ್ಧಿಯೂ ಇಂಜನಿಯರ್ ಇಲಾಖೆಯವರ ಪರ್ಯಾಲೋಚನೆಯಲ್ಲಿವೆ [illegible] ವಿದುರಾಶ್ವತ್ಥದಲ್ಲಿ ಡಿಸ್ಟ್ರಿಕ್ಟ್ ಫಂಡಿನಿಂದ ಮುಸಾಫರ್ ಖಾನೆಯನ್ನು ಕಟ್ಟಿಕೊಳ್ಳಬೇಕೆಂದೂ, ಆವನಿ ಮಠದ ವ್ಯವಸ್ಥೆಯನ್ನು ಸರ್ಕಾರದವರು ವಹಿಸಿಕೊಂಡು ರೂಢಿಸುವುದಕ್ಕೆ ಮಠಾಧಿಪತಿಗಳ ಅಭಿಮತವನ್ನು ಕೇಳಿವೆ ಎಂದೂ ಇಂಡಿಯಾ ಗವರ್ನಮೆಂಟಿನ ಸ್ಯಾಂಕ್ಷನ್ ಆಗಿರುವುದರಿಂದ ಇನ್ನು ಒಂದೆರಡು ವಾರಗಳಲ್ಲೇ ಕೋಲಾರ್ ಬೌರಿಂಗ್‌ಪೇಟೆ ರೈಲ್ವೆ ಕಾಮಗಾರಿ ಪ್ರಾರಂಭವಾಗುವುದೆಂದೂ, ದೊಡ್ಡಬಳ್ಳಾಪುರದಲ್ಲಿ ಮುನ್ಸೀಫ್ ಕೋರ್ಟು ಇಡುವ ವಿಚಾರ ಯೋಚನೆಯಲ್ಲಿದೆಯೆಂದೂ ದಿವಾನರವರು ಜವಾಬು ದಯಪಾಲಿಸಿದರು

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರಿಗೆ ಒಂದು ಸ್ಮಾಲ್‌ಕಾಸ್ ಕೋರ್ಟನ್ನು ಇಡುವ ವಿಷಯದಲ್ಲಿ ಚೀಫ್ ಕೋರ್ಟಿನವರು ಒಪ್ಪದಿಲ್ಲವಾದ ಕಾರಣ ಪ್ರಜೆಗಳು ಗವರ್ನಮೆಂಟಿಗೆ ಒಂದು ಮನವಿ ಅರ್ಜಿಯನ್ನು ಬರೆದುಕೊಳ್ಳಬಹುದೆಂದೂ, ಎಲ್ಲಾ ಸಿವಿಲ್ ಕೋರ್ಟುಗಳನ್ನೂ ಒಂದೇ ಕಡೆ ಮಾಡುವುದಕ್ಕೋಸ್ಕರ ಬೆಂಗಳೂರಿನಲ್ಲಿ ಈಗಾಗಲೇ ಸ್ಥಳವನ್ನು ಗೊತ್ತುಮಾಡಿರೋಣದರಿಂದ ಬೇಗನೆ ಕಾಮಗಾರಿ ಪ್ರಾರಂಭವಾಗುವುದೆಂದೂ, ಮಾಗಡಿಗೂ ನೆಲಮಂಗಲಕ್ಕೂ ನೀರಿನ ವಸತಿಯನ್ನು ಕಲ್ಪಿಸುವುದಕ್ಕೆ ಅಂದರೆ ತರೀ ವ್ಯವಸಾಯವನ್ನು ಹೆಚ್ಚಿಸುವುದಕ್ಕೆ ಗಬ್ಬೂರು ಹೊಳೆಯ ಅಣೆ ಕಾಮಗಾರಿ ವಿಷಯದಲ್ಲಿ ಇಂಜನಿಯರ್ ಇಲಾಖೆಯವರನ್ನು ವಿಚಾರಿಸುತ್ತೇವೆಂದೂ, ಚನ್ನಪಟ್ಟಣದಲ್ಲೂ, ಕನ್ನಿಂಗ್‌ಹ್ಯಾಮ್‌ನಲ್ಲೂ(?) ಮ್ಯುನಿಸಿಪಲ್ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಂಡ ಹೊರತು ಕುಡಿಯುವ ನೀರನ್ನು ಒದಗಿಸುವುದು ಸಾಧ್ಯವಿಲ್ಲವೆಂದೂ, ಚನ್ನಪಟ್ಟಣದಲ್ಲಿ ಸ್ಟುಡೆಂಟ್ಸ್ ಹೋಮನ್ನು ಕಟ್ಟುವುದು, ಬೆಂಗಳೂರು ನೀರಿನ ಸಪ್ಲೈ ರೂಲ್ಸನ್ನು ತಿದ್ದುವುದು, ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಲ್ಲಿ ವರ್ತಕರ ಸಾಮಾನುಗಳು ದಿವಸಕ್ಕೆ ಕಳುವಾಗುತ್ತಾ ಇದ್ದರೆ ನೋಡುವ ಪೋಲೀಸಿನವರಿಗೆ ಅಧಿಕಾರವಿಲ್ಲದಿರುವುದು, ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಸ್ಥಳ ಪ್ರಜಾಪಕ್ಷದ ಮೆಂಬರನ್ನು ಮ್ಯುನಿಸಿಪಲ್ ಛೇರ್ಮನ್ ಆಗಿ ನೇಮಿಸಬೇಕೆಂಬುವುದು [illegible]ನ್ನು ಪರ್ಯಾಲೋಚಿಸುತ್ತೇವೆ

ಎನ್ನುತ್ತಾರೆ.

ಮೈಸೂರು ಡಿಸ್ಟ್ರಿಕ್ಟು

ಬೆಂಗಳೂರಿನಿಂದ ಕೆಲವು ಆಫೀಸುಗಳನ್ನು ಮೈಸೂರಿಗೆ ವರ್ಗಮಾಡುವುದು ಸರ್ಕಾರದವರ ಯೋಚನೆಯಲ್ಲಿದೆ ಮೈಸೂರಿನಲ್ಲಿ ೫॥ ಲಕ್ಷ ರೂ ಅಂದಾಜಿನಲ್ಲಿ ಆಸ್ಪತ್ರೆಯನ್ನು ಕಟ್ಟಬೇಕೆಂದು ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರಾಗಿ ಒಂದೆರಡು ತಿಂಗಳಲ್ಲೇ ಈ ಕಾಮಗಾರಿ ಪ್ರಾರಂಭವಾಗುವುದು ರಾಜಧಾನಿಯ ಟ್ರಸ್ಟ್ ಬೋರ್ಡನ್ನು ಮ್ಯುನಿಸಿಪಾಲಿಟಿಯ ಜತೆಗೆ ಕೂಡಿಸಬೇಕೆಂಬುವುದು ಸರ್ಕಾರದ ಯೋಚನೆಯಲ್ಲಿದೆ ಮೈಸೂರಿನಲ್ಲಿರುವ ಗರ್ಲ್ಸ್ ಸ್ಕೂಲುಗಳ [illegible] ಮೊದಲಿದ್ದಂತೆ ಮ್ಯಾನೇಜಿಂಗ್ ಕಮಿಟಿಗಳನ್ನು ನೇಮಕಮಾಡುತ್ತೇವೆ ಹುಣಸೂರಿನಲ್ಲಿ ಮುನ್ಸೀಫ್ ಕೋರ್ಟನ್ನೂ, ರೆವಿನ್ಯೂ ಸಬ್ ಡಿವಿಜನ್ ಆಫೀಸನ್ನೂ ಇಟ್ಟರೆ [illegible] ಪ್ರಜೆಗಳು ಸರ್ಕಾರಕ್ಕೆ ಒಂದು ಮಾಳಿಗೆಯನ್ನು ಬಿಟ್ಟು ಕೊಡಬಹುದು ಶ್ರೀರಂಗಪಟ್ಟಣದಲ್ಲಿ [illegible] ಆಫೀಸ್ ಕೋರ್ಟನ್ನು ಇತರ ಸ್ಥಳಕ್ಕೆ ವರ್ಗಮಾಡುವ ಯೋಚನೆಯಿಲ್ಲ ಬನ್ನೂರಿನಲ್ಲಿ ಸಬ್ ತಾಲ್ಲೂಕು ಮಾಡುವ ವಿಷಯದಲ್ಲಿ ರೆವಿನ್ಯೂ ಕಮಿಷನರ್‌ರನ್ನು ಕೇಳುತ್ತೇವೆ ಟಿ ನರಸೀಪುರದಲ್ಲಿ ಹೊಸ ತಾಲ್ಲೂಕ್ ಕಚೇರಿ ಕಟ್ಟಡವನ್ನು ಜಾಗ್ರತೆ ಪಡಿಸುವೆವು ಚಿಕ್ಕನಗಟ್ಟಿ [illegible] ಎಕರೆಗೆ ೫೦ ರೂ ನಂತೆ ಕಂಟ್ರಿಬ್ಯೂಷನ್ ಕೊಡಲು ಒಪ್ಪಿರುವುದರಿಂದ ಕೂಡಲೇ ಕಾಮಗಾರಿ ಪ್ರಾರಂಭಿಸುವಂತೆ ಇಂಜನಿಯರ್ ಇಲಾಖೆಗೆ ಬರೆಯುತ್ತೇವೆ [illegible] ಗಾಮಕ್ಕೆ ೧೦೦೦೦ ರೂ ನ ಅಂದಾಜಿನಲ್ಲಿ ಒಂದು ಕೆರೆ ಕಟ್ಟುವಂತೆ ಸ್ಯಾಂಕ್ಷನ್ ಆಗಿದೆ [illegible] ನಾಲೆಗಳನ್ನು ಒಂದನೆ ಮಾಡು[illegible] ತಲಾವಿನ ಕಾಮಗಾರಿ ಈಗಾಗಲೇ [illegible] ವಾಗಿ [illegible] ಕಾರಿ ಏರ್ಪಾಡುಗಳನ್ನು ನಂಬಿ [illegible] ರೈತರಿಗೆ ಎಲ್ಲಾ ಅನುಕೂಲಗಳನ್ನು [illegible] ಜಮೀನಿನ ಪ್ರತಿಫಲವನ್ನು ವ್ಯವಸ್ಥೆ ಮಾಡುವುದಕ್ಕೆ ಸರ್ಕಾರಿ ಅಧಿಕಾರಿಗಳೂ ಪ್ರಜೆಗಳ ಮಂಡಳಿಯೂ ಉಳ್ಳ ಒಂದು ಪಂಚಾಯತಿ ಏರ್ಪಾಡಾಗುತ್ತದೆ ತಲಕಾಡಿನ ಮರಳನ್ನು ತಡೆಯುವುದಕ್ಕೆ ಮಾಧವಮಂತ್ರಿ ಅಣೆಗೆ ಗಾಡಿನಿಂದ ಮುಚ್ಚಿದ ವಿಡುಗಂಟಿಗಳನ್ನು ಕಟ್ಟಿಸ[illegible] ತಿರುಮಕೂಡ್ಲಿನಲ್ಲಿ ಕಪಿಲಾ ಕಾವೇರಿ [illegible] ಗೆ ಸೇತುವೆಗೆ ಅಂದಾಜುಪಟ್ಟಿ ತಯಾರ್ಮಾಡಿಸುತ್ತೇವೆ ಪರೀಕ್ಷಾರ್ಥವಾಗಿ ಟಿ, ನರಸೀಪುರದಲ್ಲಿ [illegible] ಡಿಪೋವನ್ನು ಇಡುವಂತೆ ಹುಕುಂ ಕೊಡುವೆವು [illegible] ನಮ್ಮ ಮಹಾರಾಜರವರ ಧರ್ಮ ಛತ್ರಕ್ಕೆ ಹೆಚ್ಚು ಹಣ ಖರ್ಚುಮಾಡುತ್ತಾ ಇಲ್ಲವಾದುದರಿಂದ [illegible] ಹೇಳುವಂತೆ ಅತೃಪ್ತಿಕರವಾಗಿದೆ ಮೇಲ್ಕೋಟೆಯಲ್ಲಿ ಅನ್ನ ಛತ್ರವನ್ನು ಕಟ್ಟಿಸುವಂತೆ ಹುಕುಂ ಕೊಡುತ್ತೇವೆ ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು, ಶಿವಮೊಗ್ಗಾ, ಹಾಸನ ಈ ನಾಲ್ಕು ಕಡೆಯೂ ನಡೆಯುವಂತೆ ಹುಕುಂ ಮಾಡುವೆವು ರಾಜಧಾನಿಯ ಸಿವಿಲ್ ಕೋರ್ಟಿನಲ್ಲಿ ಕಕ್ಷಿಗಾರರು ಇರುವುದಕ್ಕೆ ಒಂದು ಕಟ್ಟಡವನ್ನು ಕಟ್ಟಿಸುತ್ತೇವೆ [illegible] ಸಿವಿಲ್ ಕೋರ್ಟುಗಳ ಬಳಿ ಒಂದು ರೈಲ್ವೆ ಸ್ಟೇಷನನ್ನು ಏರ್ಪಡು ಮಾಡುವಂತೆ ನಿಷ್ಕರ್ಷೆಯಾಗಿದೆ

ದನಕರುಗಳ ರೋಗಗಳಿಗೆ ಸುಲಭವಾದ ಚಿಕಿತ್ಸೆಗಳು

ಕ್ಲೋರೋಡಿಯನ್ (Chlorodyne)- ಕಾಲರಾ ಭೇದಿ ಮೊದಲಾದ ಖಾಯಿಲೆಗಳಿಗೆ ಇದು ಮನುಷ್ಯರಿಗೆ ಬಹಳ ಪ್ರಯೋಜನವಾದ ಔಷಧಿಯಾಗಿದೆ, ಇದನ್ನು ದನಗಳ ರೋಗಗಳಿಗೂ ಉಪಯೋಗಿಸಬಹುದು ಕುದುರೆಗಳಿಗೂ ಟ್ಯಾನೋವಿಗೆ ಟರ್ಪೆಂಟೈನ್ (Turpentine) ಮತ್ತು ಸೀಮೆ ಅಗಸೆಯೆಣ್ಣೆಯನ್ನು ಕೂಡಿಸಿ ಅದರಿಂದ ಗೂಡಾಕೋಳದಲ್ಲಿ ೧ ಔನ್ಸ್ ಕ್ಲೋರೋಡಿಯನ್ನು ಒಂದು ಗಳಾಸಿನಲ್ಲಿ ಹಾಕಿ ಕುಡಿಸಿದರೆ ಬಹಳ ಅನುಕೂಲವಾಗುವುದು

ಭೇದಿಉಪ್ಪು (Epsom Salt)- ದನಕರುಗಳಿಗೆ ಈ ಉಪ್ಪು ಬಹಳ ಉತ್ತಮವಾದ ಭೇದಿಯ ಔಷಧವಾಗಿದೆ ಇದನ್ನು ಒಂದು ತಿಂಗಳ ವಯಸ್ಸಿನ ಕರುವಿಗೆ ೧ ತೊಲೆ, ಎರಡು ತಿಂಗಳ ಕರುವಿಗೆ ೫ ತೊಲೆ ಈ ರೀತಿಯಂತೆ ಕೊಡುವುದು ದೊಡ್ಡ ದನಗಳಿಗೆ ಸುಮಾರು ೨೦ ತೊಲ ಉಪ್ಪು ಬೇಕಾಗುವುದು ಕುರಿಗಳಿಗೆ ೩ ತೊಲೆ ಮೊದಲುಗೊಂಡು ೧೦ ತೊಲೆಗಳ ವರೆಗೆ ಕೊಡಬಹುದು. ಉಪ್ಪನ್ನು ಬಿಸಿನೀರಿನಲ್ಲಿ ಹಾಕಿ ಕರಗಿಸಿಕೊಡಬೇಕು ಈ ಕಾರದಿಂದ ಭೇದಿಉಪ್ಪು ಸಿಕ್ಕದಿದ್ದಲ್ಲಿ ಅರ್ಧಪಾಲು ಭೇದಿಉಪ್ಪಿನ ಜತೆಗೆ ಅರ್ಧ ಪಾಲು ಅಡಿಗೆ ಉಪ್ಪನ್ನು ಹಾಕಿ ಕೊಡಬಹುದು

ಅಡಿಗೆ ಉಪ್ಪು (Common Salt) ಭೇದಿಉಪ್ಪು ಸಿಕ್ಕದಿದ್ದರೆ ಅಡಿಗೆ ಉಪ್ಪನ್ನು ಉಪಯೋಗಿಸಬಹುದು ಆದರೆ ಇದನ್ನು ಭೇದಿಉಪ್ಪಿಗಿಂತಲೂ ೨ [illegible] ಕೊಡಬೇಕು.

ಪಚ್ಚ ಕರ್ಪೂರ (Calomel)- ದನಗಳ ಉರಿಗಣ್ಣಿಗೆ ಪಚ್ಚ ಕರ್ಪೂರವು ಬಹಳ ಉತ್ತಮವಾದ ಔಷಧವಾಗಿದೆ ಇದನ್ನು ಪುಡಿಮಾಡಿ ಕಣ್ಣಿಗೆ ಎರಚಿದರೆ ಅಥವಾ ರೆಪ್ಪೆಯ ಒಳಭಾಗದಲ್ಲಿಟ್ಟರೆ ಕೆಲವು ದಿನಗಳೊಳಗೆ ಕಣ್ಣಿನ ಪರೆಯು ಹೋಗುವುದು ಕುದುರೆಗಳಿಗೆ ಜೀನುಸ್ತ್ರಾತ್ತಿ ಉಂಟಾಗುವ ಗಾಯಗಳಿಗೂ ಮತ್ತು ರಸಿಕೆಸುರಿಯುತ್ತಿರುವ ಹುಣ್ಣುಗಳಿಗೂ ಪಚ್ಚ ಕರ್ಪೂರದ ಪುಡಿಯನ್ನು ಹಾಕಿದರೆ ಹುಣ್ಣುಗಳಲ್ಲಿ ರಸಿಕೆಯೂ ಒಣಗುತ್ತದೆ

ಕಾಫಿ ಮತ್ತು ಟೀ (Coffee and Tea)- ಕಾಫಿಬೀಜದ ಮತ್ತು ಟೀ ಸೊಪ್ಪಿನ ಗಟ್ಟಿಯಾದ ಮತ್ತು ಬಿಸಿಯಾದ ಕಷಾಯವು ಬಾಯಿಲೆ ದನಗಳಿಗೆ ಬಹಳ ಚೈತನ್ಯವನ್ನು ಕೊಡತಕ್ಕ ಪದಾರ್ಥಗಳಾಗಿವೆ

ಸುಣ್ಣದ ತಿಳಿ (Lime Water)- ಸುಮಾರು ೩ ಸೀಸೆ ನೀರಿನಲ್ಲಿ ೪ ತೊಲೆ ನೀರು ಹಾಕಿದ ಸುಣ್ಣವನ್ನು ಹಾಕಿ ಚೆನ್ನಾಗಿ ಕಲಕಿ ಸ್ವಲ್ಪಕಾಲವಿದ್ದು ಬಿಟ್ಟರೆ ಸುಣ್ಣವು ತಳಗಿಳಿಯುವುದು. ಆ ಮೇಲಿನ ತಿಳಿಯು ಅಜೀರ್ಣ ಮತ್ತು ಆಮಶಂಕೆ ಮೊದಲಾದ ರೋಗಗಳ ಚಿಕಿತ್ಸೆಗಳಿಗೆ ಬಹಳ ಉಪಯೋಗವಾಗುತ್ತದೆ ಹಸುವಿನ ಹಾಲನ್ನು ಕುಡಿಯತಕ್ಕ ಎಳೆಕರುಗಳಿಗೆ ನೀರು ಮಿಶ್ರಮಾಡಿಲ್ಲದ ಹಾಲು ಸುಲಭವಾಗಿ ಜೀರ್ಣವಾಗುವುದಿಲ್ಲ ಆದರೆ ಹಾಲಿನ ಜತೆಗೆ ನಾಲ್ಕನೆಯ ಒಂದುಭಾಗ ಸುಣ್ಣದ ತಿಳಿಯನ್ನು ಬೆರಸಿ ಕುಡಿಸಿದರೆ ಹಾಲು ಸುಲಭವಾಗಿ ಜೀರ್ಣವಾಗುವುದು

ಸಾಸಿವೆ ಪುಡಿ (Mustard) ಇದನ್ನು ತಣ್ಣೀರಿನಲ್ಲಿ ಕಲಸಿ ಅಗ್ನಿ ಪ್ಲಾಸ್ತ್ರಿಯನ್ನು ಮಾಡಬಹುದು ಬಿಸಿನೀರಿನಲ್ಲಿ ಮಿಶ್ರಿತವಾಗಿಯೂ ಕಲಸಬಾರದು ಹುಣ್ಣುಗಳಿಗೆ ಈ ಪ್ಲಾಸ್ತ್ರಿಯನ್ನು ಹಾಕಿದರೆ ಅವು ಶೀಘ್ರವಾಗಿ ಒಣಗಿ ಹೋಗುವುವು. ಇಲ್ಲವೆ ಪಕ್ವವಾಗುವುವು ಕುದುರೆಗಳ ಗಂಟಲು ಬಾವಿಗೆ ಈ ಪ್ಲಾಸ್ತ್ರಿಯು ಬಹಳ ಉತ್ತಮವಾದ ಔಷಧಿಯಾಗಿದೆ. ಇದನ್ನು ಹುಣ್ಣಿನಮೇಲೆ ೨೦ ನಿಮಿಷಗಳ ಕಾಲಕ್ಕಿಂತಲೂ ಜಾಸ್ತಿಯಾಗಿ ಇಡಕೂಡದು

ಶುಂಠಿ ಮತ್ತು ದಾಲಚಿನ್ನಿ (Ginger and Cinnamon)– ಬೇದಿ ಉಪ್ಪಿನೊಡನೆ ಶುಂಠಿ ಮತ್ತು ದಾಲಚಿನ್ನಿ ಈ ಪುಡಿಗಳನ್ನು ಬೆರಸಿಕೊಟ್ಟರೆ ಹೊಟ್ಟೆ ಹಿಂಡುವುದಿಲ್ಲ ಈ ಪುಡಿಗಳನ್ನು ಬೈಕಾರ್ಬನೇಟ್ ಆಫ್ ಸೋಡಾ (Bicarbonate of Soda) ಎಂಬ ಉಪ್ಪಿನೊಡನೆ ಬೆರಸಿ ಹೊಟ್ಟೆನೋವಿಗೆ ಔಷಧಿಯಾಗಿ ಕೊಡಬಹುದು.— ವೈ ಗೆ

ಕೃತಿವಿಮರ್ಶನವು.

ಗುಣವರ್ಣನ ಪದ್ಯಾವಳಿ

ಆಜೀವ ಸೌಮಂಗಲ್ಯವತಿಯಾಗಿದ್ದ ಕೈಲಾಸವಾಸಿನಿಯಾದ ಬಸವ್ವಾಬಾಯಿ (ಕೊಲ್ಹಾಪುರದ ಶ್ರೀ ವಾರದ ಮಲ್ಲಪ್ಪಣ್ಣನವರ ಧರ್ಮಪತ್ನಿ) ಯವರ ಗುಣಾವಳಿಗಳನ್ನು ಪ್ರಕಟಿಸುವ ಪದ್ಯಾತ್ಮಕವಾದ ಈ ಪ್ರಬಂಧವು ಸೌ॥ ಭಾಗೀರಥೀಬಾಯಿ ಪಾಟೀಲ ಇವರಿಂದ ಮಹಾರಾಷ್ಟ್ರ ಭಾಷೆಯಲ್ಲಿ ರಚಿಸಲ್ಪಟ್ಟು ಮ॥ ಚೆನ್ನಬಸಪ್ಪ ಶರಣಪ್ಪ ಮಡಕಿ ಇವರಿಂದ ಪ್ರಕಟಿಸಲ್ಪಟ್ಟಿದೆ ಮೊದಲಲ್ಲಿ ಶ್ರೀ॥ ಬಸವ್ವಾಬಾಯಿಯವರ ಭಾವಚಿತ್ರ ಪಟವೂ ಸೇರಿದೆ ಅವರಲ್ಲಿ ನಿಸರ್ಗಸಿದ್ಧವಾಗಿದ್ದ ಪತಿಭಕ್ತಿ ದಾತೃತ್ವ ಶಾಂತಿ-ಸದಾಚಾರ-ಪ್ರೀತಿ-ಭೂತದಯೆ ಮೊದಲಾದ ಸದ್ಗುಣಗಳೆಲ್ಲವೂ ಇದರಲ್ಲಿ ಚೆನ್ನಾಗಿ ನಿರೂಪಿಸಲ್ಪಟ್ಟಿವೆ ಅನುಸರಣೀಯವಾದ ಚರಿತ್ರೆಯುಳ್ಳವರಾಗಿದ್ದ ಆ ಶಿವಶರಣೆಯ ಸಂಬಂಧವಾದ ಈ ಗ್ರಂಥವು ಬಾಲಬಾಲಿಕೆಯರೆಲ್ಲರಿಗೂ ಪಠನೀಯವಾಗಿರುವಂತೆ ನಾನಾತರದ ರಾಗದ ಮಟ್ಟುಗಳುಳ್ಳ ಪದಗಳಿಂದಲೂ ವಿವಿಧ ವೃತ್ತಗಳಿಂದಲೂ ಕೂಡಿದೆ. ಮತ್ತು ಈ ಪುಸ್ತಕದಲ್ಲಿ ಸೌ॥ ಸಂಗವ್ವಾಬಾಯಿ ಮಡಕಿಯವರೂ, ಇನ್ನು ಕೆಲ ವಿದ್ಯಾರ್ಥಿಗಳೂ, ವಿದ್ಯಾವಂತರೂ ರಚಿಸಿ ಬರೆದ ಕೆಲಕೆಲ ಪದಗಳೂ ಮುದ್ರಿತವಾಗಿವೆ. ಈ ಗ್ರಂಥವನ್ನು ಅಭಿನಂದಿಸುವಲ್ಲಿ ನಮ್ಮ ಸಮಾಜದ ಸ್ತ್ರೀವೃಂದದಲ್ಲಿಯೂ ಈ ವಿಧವಾದ ಕವಿತಾಶಕ್ತಿಯು ದೃಗ್ಗೋಚರವಾಗುತ್ತಿರುವುದನ್ನು ಕಂಡು ನಮಗುಂಟಾದ ಅತ್ಯಾನಂದವನ್ನು ಇಲ್ಲಿ ತಿಳಿಸದೆ ಇರಲಾರೆವು.

ಸ್ವಾಮಿ ವಿವೇಕಾನಂದ.

ಯಾವ ಮಹನೀಯರ ಹೆಸರನ್ನು ಕೇಳಿದಮಾತ್ರಕ್ಕೇ ಭರತಖಂಡದ ವಿದ್ವದ್ವರ್ಗವು ಆನಂದಸಾಗರದಲ್ಲಿ ಮುಳುಗುವುದೋ, ಯಾವನ ಬೋಧಾಮೃತವನ್ನು ಸವಿಯುವುದರಿಂದ ವಾಚಕವರ್ಗವೆಲ್ಲವೂ ಅಸಾಧಾರಣವಾದ ವಿವೇಕವನ್ನು ಪಡೆದುಕೊಳ್ಳುವುದೋ, ಯಾವನ ಅನುಪಮವಾದ ಜ್ಞಾನವೂ-ನಿಶಿತವಾದ ಪಾಂಡಿತ್ಯವೂ-ಅನಿತರ ಸಾಧಾರಣ ಪ್ರತಿಭೆಯೂ-ಕಲ್ಪನಾಶಕ್ತಿಯೂ ವೈರಾಗ್ಯವೂ ಮನುಷ್ಯತ್ವದ ಶ್ರೇಷ್ಠತ್ವವನ್ನು ತನ [illegible] ಉಂಟುಮಾಡಿತೋ [illegible] ಅಂಥ ಮಹನೀಯ [illegible] ಸ್ವಾಮಿ ವಿವೇಕಾನಂದ [illegible] ರ ಅತಿ [illegible] ವಾದಿ ಮಂಜಗಣೇಶರ-ಪಂಡಿತ [illegible] ರ ದಂಬಳ, ತಾ॥ ಗದಗ, ಇವರು ಕನ್ನಡದಲ್ಲಿ ಬರೆದು ಮುದ್ರಿಸಿ, ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ ಇವರು ಈ ಗ್ರಂಥವನ್ನು ಇಂಗ್ಲಿಷ್ ಮಹಾರಾಷ್ಟ್ರ ಭಾಷೆಗಳ [illegible] ಗ್ರಂಥಗಳ ಆಧಾರದಿಂದ ರಚಿಸಿರುತ್ತಾರೆ, ಇದರಲ್ಲಿ ಸ್ವಾಮಿ ವಿವೇಕಾನಂದರ ಚರಿತ್ರವೂ ಅವರ ಗುರುವರ್ಯರಾದ ರಾಮಕೃಷ್ಣ ಪರಮಹಂಸರ ಜೀವಿತಚರಿತ್ರವೂ, ವಿವೇಕಾನಂದರು ಮಾಡಿರುವ ಉಪನ್ಯಾಸಗಳಲ್ಲಿ ಮುಖ್ಯವಾದ ಭಕ್ತಿಯೋಗ-ಕರ್ಮಯೋಗ-ದೇವರು ಸರ್ವಾಂತರ್ಯಾಮಿ-ಸಾಮಾಜಿಕ ಸುಧಾರಣೆಯು ನಿಜವಾದ ವೇದಾಂತವು ಹಿಂದೂ ವಿಚಾರದ ದಿಗ್ವಿಜಯ-ಎಂಬ ನಿಬಂಧಗಳೂ, ಸ್ವಾಮಿಯವರ ಗುಣಾತಿಶಯವನ್ನು ನಿರೂಪಿಸುವ ವಿಚಾರ ಪರಿಪ್ಲುತವಾದ ಲೇಖನವೂ-ಶ್ರೀ ಸ್ವಾಮಿಯವರು [illegible] ಕೆಲ ಸಮಯಗಳಲ್ಲಿ ಬರೆದಿರುವ ಪತ್ರಗಳ [illegible] ಪ್ರಕಟಿಸಲ್ಪಟ್ಟಿವೆ ಇದಕ್ಕೆ ಮುಂಚೆ [illegible] ಸ್ವಾಮಿ ವಿವೇಕಾನಂದರ ಉಪನ್ಯಾಸ [illegible] ಹೋದುದರಿಂದ ಕನ್ನಡಕ್ಕೆ ಅತ್ಯಲ್ಪವಾಗಿ ಪರಿವರ್ತಿಸಲ್ಪಟ್ಟಿದ್ದರೂ, ಅದರಿಂದ ಸ್ವಾಮಿ ವಿವೇಕಾನಂದರ ಯೋಗ್ಯತಾ ಪರಿಚಯವು ಕರ್ನಾಟಕ ವಾಚಕವರ್ಗಕ್ಕೆ ಅತ್ಯಂತ ವಿರಳವಾಗಿ ಆಗಿರಬಹುದು ಈಗ ಮ॥ ಮಂಜಗಣೇಶರ [illegible] ರು ಕೈಕೊಂಡು ನಡೆಸಿದ ಈ ಪ್ರಯತ್ನದಿಂದ ಕನ್ನಡಿಗರಾದ ವಾಚಕರಲ್ಲಿ ಅವರ ಪರಿಚಯವು ಸಂಪೂರ್ಣವಾಗಿ ಆಗುವುದಕ್ಕೆ ಅವಕಾಶವಾದಂತಾಯಿತು, ಶ್ರೀ ಸ್ವಾಮಿಯವರ [illegible] ಗಂಭೀರವಾದ ವಿಚಾರ [illegible] ಅವರ ಉಪದೇಶವಾಣಿಯು ಅಮೃತದ-ಸ್ವಾದ [illegible] ಗಳೆಲ್ಲರಿಗೂ ಲಭಿಸುವಂತೆ ಆದುದರಿಂದ, [illegible] ಮಾಡಿದ ಈ ಉಪಕೃತಿಯು [illegible] ಮಹಾವಾಕ್ಯವಿದೆ ವಚನ [illegible] ರಂಭಪರಿಚಾರಕನನ್ನು [illegible] ರುವುದರಲ್ಲಿನ ಶ್ರಮವು [illegible] ಆದರೆ ಇವರ ಭಾಷಾಂತರೀಕರಣ ಶೈಲಿಯ [illegible] ರಸಪರಿಪುಷ್ಟವಾಗಿದ್ದು ವಾಚಕವರ್ಗದ ಮನಸ್ಸಿನಲ್ಲಿ ಉತ್ತಮವಾದ ಪರಿಣಾಮವನ್ನು ಮಾಡಲು ಶಕ್ತವಾಗಿರುತ್ತದೆ ಮತ್ತು ಈ ಗ್ರಂಥವನ್ನು [illegible] ದ ಪ್ರತಿಯೊಬ್ಬನಿಗೂ ಶ್ರೀ ಸ್ವಾಮಿಯವರ ಮತ್ತು ಅವರ ಗುರುವಾದ ಶ್ರೀ ರಾಮಕೃಷ್ಣರ ಅನುಪಮವಾದ ಯೋಗ್ಯತೆಯು ಸ್ಫುರಿಸಿ, ಇಂಥ ಮಹನೀಯರ ದರ್ಶನಲಾಭವು ತನಗಿಲ್ಲದೆ ಹೋಯಿತಲ್ಲಾ! ಎಂಬ ಪರಿತಾಪವು ಸಹಜವಾಗಿ ಹುಟ್ಟುವಂತಿರುತ್ತದೆ. ಅದರ ಪರಿಹಾರವನ್ನು ಗ್ರಂಥಕರ್ತರು ತಪ್ಪಿಸದೆ ಬಿಟ್ಟಿಲ್ಲ ದರ್ಶನೀಯವಾದ ಶ್ರೀ ವಿವೇಕಾನಂದರ ೩ ಭಾವಚಿತ್ರಗಳನ್ನೂ, ಶ್ರೀ ರಾಮಕೃಷ್ಣ ಪರಮಹಂಸರ ೧ ಭಾವಚಿತ್ರವನ್ನು ಸಹ ಈ ಪುಸ್ತಕದಲ್ಲೇ ಮುದ್ರಿಸಿದ್ದಾರೆ ಮುಖ್ಯವಾಗಿ ಈ ಗ್ರಂಥವು ಪ್ರತಿಯೊಬ್ಬ ಕನ್ನಡಿಗರಿಂದಲೂ ಸಂಗ್ರಹಿಸತಕ್ಕ ವಸ್ತುವಾಗಿರುತ್ತದೆ

ಇದರ ಬೆಲೆ ೧ ರೂ ಗ್ರಂಥಕರ್ತರಿಗೆ ಬರೆದು ತರಿಸಿಕೊಳ್ಳಬಹುದು.

ರಾಮಾಯಣ ಸಂಗ್ರಹ

(ಬಾಲಕಾಂಡವು)

ಸುವರ್ಣವು ಎಷ್ಟೆಷ್ಟು ಒಡವೆಯ ಆಭರಣವಾಗಿ ರಚಿಸಲ್ಪಟ್ಟರೂ ನಾರಿಯರಿಗೆ ಪ್ರಿಯತಮವೇ ಆಗಿರುವಂತೆ [illegible] ಎಷ್ಟೆಷ್ಟು ನೂತನ ಗ್ರಂಥಗಳು ರಚಿತವಾದರೂ ವಾಚಕರಿಗೆ ಪ್ರಿಯತಮವೇ ಆಗುತ್ತವೆ ಭರತಖಂಡದ ಇತಿಹಾಸ ಸಾಗರವಾಗಿರುವ ಭಾರತ ರಾಮಾಯಣಗಳು [illegible] ಭಾಷೆಗಳಲ್ಲಿ ಅನೇಕವಿಧ ಗ್ರಂಥಗಳಾಗಿ ರಚಿಸಲ್ಪಡುತ್ತಲೇ ಬಂದಿವೆ, ಈಗಲೂ ರಚಿಸಲ್ಪಡುತ್ತಲಿವೆ ಮುಂದಾದರೂ ರಚಿಸಲ್ಪಡುವುವೇ ಆಗಿವೆ ಈ ಕ್ರಮವನ್ನನುಸರಿಸಿ, ನಮ್ಮ ಮೈಸೂರು ರಾಜಬಂಧುಗಳಾದ [illegible] ಮ॥ ರಾ॥ [illegible] ರು ರಾಮಾಯಣ ಗ್ರಂಥಾಧಿಪ [illegible] ಯವನ್ನು ಸಂಗ್ರಹಿಸಿ ಚಿಕ್ಕದೊಂದು ಕಾವ್ಯವನ್ನಾಗಿ (ಕುಸುಮಷಟ್ಪದಿಯಲ್ಲಿ) ಬರೆಯುವುದಕ್ಕುಪಕ್ರಮಿಸಿ, ಪೂರ್ಣವಾದ ಬಾಲಕಾಂಡವನ್ನು ಶ್ರೀಮನ್ಮಹಾರಾಜರ ಸನ್ನಿಧಿಯಲ್ಲಿ ಅವರ [illegible] ವರ್ಧಂತ್ಯುತ್ಸವದ ಸಮಯದಲ್ಲಿ ಅರಿಕೆಮಾಡಿ, ಅವರ ಸಂತೋಷಾನುಗ್ರಹ ವಚನದಿಂದ ಮುದ್ರಣ ಮಾಡಿಸಿ, ಅವರ ಸನ್ನಿಧಿಗೆ ಸಮರ್ಪಿಸಿದ್ದಾರೆ ಕವಿತೆಯು ಪ್ರಯತ್ನ ವಿಶೇಷದಿಂದ ಲಭ್ಯವಾಗತಕ್ಕದ್ದಲ್ಲ! ಜನ್ಮಾಂತರ ವಿಶೇಷದಿಂದ ಸಿದ್ಧಿಸತಕ್ಕದ್ದು ಎಷ್ಟೋ ಜನ ಪಂಡಿತರು [illegible] ಕವಿತೆಯನ್ನು ಮಾಡಿ ಪ್ರಕಾಶಕ್ಕೆ [illegible] ಬಂಧುರವಾಗಿ ರಸಿಕರಿಗೆ ಚಿತ್ತಾಕರ್ಷಕವಾಗಿರುವುದು. ಅದುಕಾರಣ, ಈ ಕಾವ್ಯ ಸಿದ್ಧಿಯು ಅವರ ಸಂಸ್ಕೃತ ವಿಶೇಷವನ್ನು ಸೂಚಿಸುತ್ತಿರುವುದು [illegible] ಬಾಲಬಾಲಿಕೆಯರು ಸುಲಭವಾಗಿ ಓದಿ ತಿಳಿದುಕೊಳ್ಳಲು ಅರ್ಹವಾಗಿರುವ ಈ ಗ್ರಂಥದ ಉಳಿದ ೬ ಕಾಂಡಗಳನ್ನೂ ಮ॥ ಅರಸಿನವರು ಬೇಗನೆ ಸಂಪೂರ್ಣಗೊಳಿಸಿ ಪ್ರಕಟಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯುವರಾಗಲೆಂದು ಕೋರುವೆವು ಈ ಗ್ರಂಥವನ್ನು ಮಹಾರಾಜಾ ಕಾಲೇಜಿನ ಮುಖ್ಯ ಕರ್ನಾಟಕ ಪಂಡಿತರಾದ ಮ॥ ಪಿ ಆರ್. ಕರಿಬಸವಶಾಸ್ತ್ರಿಗಳು ಆದ್ಯಂತವಾಗಿ ನೋಡಿ ಪರಿಶೋಧಿಸಿಕೊಟ್ಟಿರುವರು

ಈ ಕೆಳಗೆ ಕಂಡ ಗ್ರಂಥಗಳೂ ವೃತ್ತಪತ್ರವೂ ಅವರ ಕರ್ತೃಗಳಿಂದ ಪತ್ರಿಕೆಗೆ ಕಳುಹಲ್ಪಟ್ಟಿದ್ದು, ಅವನ್ನು ಆದರದಿಂದ ಸ್ವೀಕರಿಸಿರುತ್ತೇವೆ ಅಭಿಪ್ರಾಯವಿಮರ್ಶನವು ಕ್ರಮಶಃ ಆಗುವುದು

ಶ್ರೀ ಶಿವಸಹಸ್ರನಾಮ ಭಾಷ್ಯ ಸಂಗ್ರಹವು
೧ ಅಷ್ಟಾವರಣ [illegible]
೨ ಜೀವಗೀತೆ ಆತ್ಮಗೀತೆ ಇತ್ಯಾದಿ
೩ [illegible] ಶಾಸ್ತ್ರ [illegible]
೪. [illegible]

ಮೈಸೂರ ಗೆಜೆಟ್ ವಿಶೇಷ ಪತ್ರಿಕೆ.

[illegible]
[illegible] ದಿವಾನ್, ಬೆಂಗಳೂರು
[illegible]

[illegible] ಮಾಧವರಾವ್ [illegible] ಉದ್ಯೋಗದಿಂದ ನಿವೃತ್ತರಾದ [illegible] ಸಂಸ್ಥಾನದ ದಿವಾನ ಪದವಿಯು [illegible] ವಿಶ್ವೇಶ್ವರಯ್ಯ, ಸಿ. ಐ. ಇ., [illegible] ರಾಜ [illegible] ಕಾರ್ಯದಕ್ಷತೆ [illegible] ವಿಶ್ವಾಸ [illegible] ಸಂಸ್ಥಾನದ ದಿವಾನ [illegible] ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಸಿ. ಐ. ಇ., ಯವರನ್ನು [illegible] ಮಾಡಿರುತ್ತೇವೆ, ಮತ್ತು ಉದ್ಯೋಗ [illegible] ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಸಿ. ಐ. ಇ., ಯವರನ್ನು [illegible] ಮಾಡಿರುತ್ತೇವೆ. [illegible]

[illegible]

[illegible]

ಮೈಸೂರು ಸಂಸ್ಥಾನದ ದಿವಾನರಾದ ಪ್ರಧಾನ [illegible] ಮಾಧವರಾವ್ [illegible] ಸಿ. ಐ. ಇ., ರವರು ಉದ್ಯೋಗದಿಂದ ನಿವೃತ್ತರಾಗಲು [illegible] ಶ್ರೀಮನ್ಮಹಾರಾಜ [illegible] ಉದ್ಯೋಗದಿಂದ ನಿವೃತ್ತರಾಗಲು [illegible] ರವರು ಅಭಿಮಾನ [illegible]

[illegible] ವೃತ್ತರಾಗಲು ಅಪ್ಪಣೆ [illegible] ಶ್ರೀಮನ್ಮಹಾರಾಜಾ [illegible] ರವರ ಈ ಸಂಸ್ಥಾನದಲ್ಲಿ [illegible] ಮಾಡಿರುವ ಅತ್ಯುತ್ಕೃಷ್ಟವಾದ [illegible] ನಿರ್ವಹಣವನ್ನು ಅತಿಶಯವಾಗಿ ಮೆಚ್ಚಿಕೊಂಡಿರುವರೆಂಬ [illegible] ಇವರು ಉದ್ಯೋಗದಲ್ಲಿದ್ದ [illegible] ವರ್ಷಗಳ [illegible] ನಿರಂತರವೂ ಸರ್ಕಾರಿ ಕೆಲಸಗಳನ್ನು [illegible] ಸಮಸ್ತರಿಗೂ ಆದರಣೀಯ [illegible] ಇವರ ಅಸಾಧಾರಣವಾದ ವಿದ್ಯಾ [illegible] ಆರ್ಜವದಿಂದಲೂ, ನಿಷ್ಪಕ್ಷಪಾತ [illegible] ದಿಂದಲೂ, [illegible] ಅತಿಶಯವಾಗಿ ಈ ಸಂಸ್ಥಾನಕ್ಕೆ [illegible] ಮಾಡಿದ್ದಾರೆ [illegible] ಶ್ರೀಮನ್ಮಹಾರಾಜಾ [illegible] ರವರ ಅಭಿಮಾನಕ್ಕೆ [illegible] ಪಾತ್ರರಾದರು [illegible]

[illegible] ಎಂಬ [illegible]

ಧಿಕಾರದಲ್ಲಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ ಈ ರೀತಿಯಲ್ಲಿ ಬ್ರಿಟಿಷ್ ಸರ್ಕಾರದವರು ತೋರಿಸಿರುವ ಮೆಚ್ಚುಗೆಯನ್ನು ತಾವೂ ಅನುಮೋದಿಸಿರುವರೆಂಬುದನ್ನು ವ್ಯಕ್ತೀಕರಿಸುವುದಕ್ಕಾಗಿ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದ್ದೂರ್ ರವರು ಇವರಿಗೆ « ಪ್ರಧಾನ ಶಿರೋಮಣಿ " ಎಂಬ ಬಿರುದನ್ನು ಮೊದಲ್ಗೊಂಡಿತು ಕಂಠಿ, ಪಲ್ಲತ್ತುಗಳ ಸಮೇತ ದಯಪಾಲಿಸಿರುತ್ತಾರೆ

೬. ವಿ॥ ಆನಂದರಾಯರವರಿಗೆ ಇರತಕ್ಕ ಮೂರು ತಿಂಗಳ ಪ್ರಿವಿಲೆಜ್ ರಜಾ ಹಕ್ಕಿಗೆ ಪ್ರತಿಯಾಗಿ ಇವರು ಉದ್ಯೋಗದಿಂದ ನಿವೃತ್ತರಾಗುವ ತಾರೀಖಿನ ಬಳಿಕ ಮೂರು ತಿಂಗಳವರೆಗೆ ಆಗುವ ಪೂರಾ ಸಂಬಳವು ಕೊಡಲ್ಪಡತಕ್ಕದೆಂದು ಪ್ರಕೃತದಲ್ಲಿ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ ರವರು ಅಭಿಮಾನಪೂರ್ವಕವಾಗಿ ಮಂಜೂರ್ ದಯಪಾಲಿಸಿರುತ್ತಾರೆ ಇದಲ್ಲದೆ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ ರವರು ತಮ್ಮ ಸ್ವಕೀಯಾಭಿಮಾನವನ್ನು ವ್ಯಕ್ತಗೊಳಿಸುವ ಉದ್ದೇಶದೊಡನೆ ವಿ॥ ಆನಂದರಾಯರವರಿಗೆ ೧೯೧೩ ನೇ ಫೆಬ್ರವರಿ ೧೦ ನೇ ಯ ತಾರೀಖಿನ ಬಳಿಕ ಮಾಹೆಯಾನ ೧,೫೦೦ ರೂಪಾಯಿಯ ಸ್ಪೆಷಲ್ ಪೆನ್ಷನನ್ನು ದಯಪಾಲಿಸಿರುತ್ತಾರೆ

ಇದಲ್ಲದೆ ವಿ॥ ಆನಂದರಾಯರವರ ಬಂಗಲೆಯ ಬಳಿ ಕಾವಲಿ ಇರುವ ಬಾರ್ ಸಿಪಾಯಿಗಳ ಪಹರೆಯು ಮುಂದೆಯೂ ಇರುವಂತೆ ಶ್ರೀಮನ್ಮಹಾರಾಜರು ಅನುಗ್ರಹಿಸಿರುವುದಲ್ಲದೆ ಇವರಿಗೆ ಇಬ್ಬರು ಹರಿಕಾರರು, ಒಬ್ಬ ಜವಾನದಾರ, ಒಬ್ಬ ದಫೇದಾರ, ಒಂದು ಪಲ್ಲಕಿ ಇವುಗಳು ಈ ರೀತಿಯ ಖಾಯಂ ಸಿಬ್ಬಂದಿಯನ್ನು ದಯಪಾಲಿಸಿರುತ್ತಾರೆ ಅಲ್ಲದೆ ಸೀನಿಯರ್ ಸರ್ಜನ್ ರವರು ವಿ॥ ಆನಂದರಾಯರೊಡನೆ ಆಲೋಚಿಸಿ, ಪ್ರತಿದಿನವೂ ಅವರ ದೇಹಾರೋಗ್ಯವನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಮೆಡಿಕಲ್ ಆಫೀಸರನ್ನು ನಿಯಮಿಸಬೇಕೆಂದು ಅವರಿಗೆ ತಿಳಿಸಲಾಗುವುದು

ವಿ॥ ಆನಂದರಾಯರು ಈ ರೀತಿ ಗೌರವಪೂರ್ವಕವಾಗಿ ಉದ್ಯೋಗದಿಂದ ನಿವೃತ್ತರಾಗುವಲ್ಲಿ ಶ್ರೀಮನ್ಮಹಾರಾಜರವರು ಅವರಿಗೆ ಕೇವಲ ಶ್ರೇಯಸ್ಸನ್ನು ಕೋರುವರಲ್ಲದೆ, ಅವರಿಗೆ ಲಭ್ಯವಾಗಿರುವ ವಿಶ್ರಾಂತಿ ಸುಖವನ್ನು ಚಿರಕಾಲ ಅನುಭವಿಸುವಂತೆ ಭಗವಂತನು ಅನುಗ್ರಹಿಸಲೆಂದು ಬಯಸುತ್ತೇವೆ.

ಹುಕುಂ ಬಮೋಜಿಬ್,

ಕೆ ಆರ್. ಶ್ರೀನಿವಾಸಯ್ಯಂಗಾರ್,

ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ

WANTED

A permanent Hindu Clerk able to correspond both in English & Kanarese. Should furnish security in cash Rs 200/— on 6 percent interest Salary Rs 20/— person knowing to correspond in Mahrashtra also, shall get Rs 5 more Promotion depends on the ability and merit of work. Apply with character certificate before 30th November 1912, to—

The Managing Proprietor

S. S. R. VAIDYASALA, MYSORE

ಮೈಸೂರ್ ಸ್ಟಾರ್

೧೯೧೨ನೇ ಯ ನವಂಬರ್ ತಾರೀಖು ೧೮ನೇ ಯ ಸೋಮವಾರ

ನೂತನ ಮಂತ್ರಿಯವರು

ನಮ್ಮ ಸಂಸ್ಥಾನದ ಮಂತ್ರಿಗಳಾದ ಮಿ॥ ಟಿ ಆನಂದರಾಯರವರಿಂದ ಬರುಗಳೆಯಾಗಿ, ಮಿ॥ ವಿಶ್ವೇಶ್ವರಯ್ಯ, ಸಿ. ಐ. ಇ., ಯವರಿಗೆ ಕಳೆದ ತಾ॥ ೧೦ ರಲ್ಲಿ ಪದವಿ ಪ್ರದಾನವಾದ ಸಂಗತಿಯು ಇದೇ ಪತ್ರಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುವ ಸರ್ಕಾರದ ಪ್ರಕಟನಪತ್ರಿಕೆಯಿಂದ ವಿದಿತವಾಗುತ್ತದೆ.

ಇದುವರೆಗೆ ಮಂತ್ರಿಪದವಿಯನ್ನು ವಹಿಸಿದ್ದ ಮಿ॥ ಟಿ. ಆನಂದರಾವ್, ಸಿ ಐ. ಇ., ಯವರು ಸಂಸ್ಥಾನದಲ್ಲಿ ನಡೆಯಿಸಿರುವ ಅಸಾಧಾರಣವಾದ ವಿಶೇಷಕಾರ್ಯಗಳೆಲ್ಲಾ ಪಾಟಕರಿಗೆ ವಿದಿತವಾಗಿಯೇ ಇದ್ದು ಮುಖ್ಯವಾಗಿ ಇದುವರೆಗೆ ಸಂಸ್ಥಾನದ ಮಂತ್ರಿಪದವಿಗೆ ಬಂದಿದ್ದವರೆಲ್ಲರಿಗಿಂತಲೂ ಅಧಿಕವಾದ ಅವಕಾಶ ಇವರಿಗೆ ಶ್ರೀಮನ್ಮಹಾರಾಜರವರಲ್ಲಿ ಭಕ್ತಿವಿಶೇಷ ವಿದ್ಯೆ ವ್ಯಾಸಂಗ ಇವುಗಳಿಂದಲೆ ಕೆಲಸವನ್ನು ಸಾಗಿಸಿಕೊಂಡು ಬಂದಿರುವ ... ಇದ್ದೇ ಕಾಲವಿಗ್ಗ ಬಸು ಧರಿಸಿದ್ದ ... ನವರು ಕೈಗಾಧ್ಯವಾಕ

ವಾಗಿ ವಿಶೇಷಾನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿರುವುದಲ್ಲದೆ ಇದುವರೆಗಿನ ಯಾವ ಮಂತ್ರಿವರ್ಯರಿಗೂ ಲಭ್ಯವಾಗದಿದ್ದಂತಹ « ಪ್ರಧಾನ ಶಿರೋಮಣಿ " ಯೆಂಬ ಬಿರುದನ್ನೂ ದಯಪಾಲಿಸಿರುತ್ತಾರೆ ಇಂತಹ ಕೀರ್ತಿವಿಶೇಷವು ಇವರಿಗೆ ಲಭ್ಯವಾದುದಕ್ಕಾಗಿ ಎಲ್ಲಾ ಪ್ರಜೆಗಳೊಡನೆ ನಾವೂ ಸಂತೋಷಿಸುತ್ತೇವೆ.

ವಿಶ್ವೇಶ್ವರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯರು ಇವರ ಸ್ಥಾನವನ್ನಲಂಕರಿಸಿರುವುದನ್ನು ಕಂಡು ನಾವು ಮನಃಪೂರ್ವಕವಾಗಿ ಅವರಿಗೆ ಸುಸ್ವಾಗತವನ್ನು ಮಾಡುತ್ತೇವೆ. ನಮ್ಮ ಸಂಸ್ಥಾನವು ಆಂಗ್ಲ ಸರ್ಕಾರದವರಿಂದ ಶ್ರೀಚಾಮರಾಜೇಂದ್ರ ಒಡೆಯರವರಿಗೆ ವಹಿಸಲ್ಪಟ್ಟ ಬಳಿಕ, ಮೊದಲನೆಯ ಮಂತ್ರಿವರ್ಯರಾದ ಸ್ವರ್ಗವಾಸಿ ರಂಗಾಚಾರ್ಲುಯವರು ಈ ಸಂಸ್ಥಾನದ ಯಶಸ್ಸಿಗೆ ತಳಹದಿಯನ್ನು ಹಾಕಿ ಮೂಲದ ಸಾಧಾರಣವಾಗುವಂತೆ ಕ್ಷೇತ್ರವನ್ನು ಹಸನ ಮಾಡಿ ಕೀರ್ತಿಶೇಷರಾದರು. ಅವರ ಹಿಂದೆ ಬಂದ ಶ್ರೀ ಶೇಷಾದ್ರಿ ಅಯ್ಯರವರು ರಂಗಾಚಾರ್ಲುಯವರ ಸಂಕಲ್ಪವನ್ನೆಲ್ಲಾ ಸಿದ್ಧಿಗೆ ತಂದರು ಸಂಸ್ಥಾನದ ಇತಿಹಾಸದಲ್ಲಿಯೇ ಅಭೂತಪೂರ್ವವಾದ ಕಾರ್ಯಗಳನ್ನು ನಡೆಸಿದರು ... ಈಚಿನ ಮಂತ್ರಿವರ್ಯರೆಲ್ಲಾ ಅದನ್ನು ಕಾಲೋಚಿತವಾಗಿ ಸಂಸ್ಕರಿಸಿಕೊಂಡು ಬಂದುದರಿಂದ, ಅದರ ಫಲವನ್ನು ಪಾಲ್ಗೊಳ್ಳುವವರೂ ಈಗ ಅನುಭವಿಸುತ್ತಿರುವರು

ಮೈಸೂರು ದೇಶವು ಸ್ವಪ್ರಭುವಿನ ಆಳ್ವಿಕೆಗೊಳಪಟ್ಟು ಇಂದಿಗೆ ೩೦ ವರ್ಷಗಳಾಗಿರುವುದರಿಂದ ಈಗಿನಾಧಿಪತ್ಯದ ಉತ್ತಮಪಕ್ಷ ... ನಮ್ಮ ಪ್ರಭುವರ್ಯರೂ ಕೂಡ ಶಿಕ್ಷಣ ಪ್ರಕರಣಗಳಲ್ಲಿ ... ದೇಶದ ಆಡಳಿತ ಸಂಪತ್ತು ... ಇಂಥ ವಿಶೇಷ ... ವಿಶ್ವೇಶ್ವರಯ್ಯನವರು ರಾಜ್ಯಕಾರ್ಯಭಾರವನ್ನು ಸೂತ್ರವನ್ನು ಪರಿಗ್ರಹಿಸಿರುವರು ... ಇವರು ... ಕಡೆ ಉತ್ತರವಾದ ... ಕಾರ್ಯಗಳನ್ನು ನಿರ್ವಹಿಸಿ, ... ಈಗ ಪದವಿಯಂತೆ ಅವುಗಳೊಂದೂ ಇಷ್ಟು ವಿಶೇಷವಾದ ಉತ್ತರವಾದಿತ್ವವುಳ್ಳವಗಳಾಗಿರಲಿಲ್ಲ ಇದುವರೆಗಿನ ಅವರ ಕಾರ್ಯವು ನಿಶ್ಚಯವಾದ್ದರಿಂದ ನಿರ್ವಹಿಸಲು ಸಾಧ್ಯವಾಗಿದ್ದಿತು ... ಕಾರ್ಯವು ಸರ್ವತಂತ್ರ ಸ್ವತಂತ್ರವಾದುದಲ್ಲದೆ ನಿರ್ವಾಹವಾಗತಕ್ಕದಲ್ಲವು ಆದರೂ ಇದುವರೆಗಿನ ಅವರ ಕಾರ್ಯಪಟುತ್ವವನ್ನು ಯೋಗ್ಯತಾವಿಶೇಷವನ್ನೂ ನೋಡಿ, ನಮ್ಮ ಮಹಾರಾಜರವರು ಇವರಿಂದ ಸಂಸ್ಥಾನದ ಕಾರ್ಯನಿರ್ವಾಹವು ಚೆನ್ನಾಗಿ ಸಾಗಬಹುದೆಂದು ನಂಬಿ, ಇವರಮೇಲೆ ಕಾರ್ಯಭಾರವನ್ನು ಹೇಗೆ ವಹಿಸಿರುವರೋ ಅದರಂತೆಯೇ ಸಂಸ್ಥಾನದ ಸಕಲ ಪ್ರಜೆಗಳೂ ಇವರ ಭವಿಷ್ಯತ್ಕಾರ್ಯನಿರ್ವಹಣಕ್ರಮದಲ್ಲಿ ವಿಶೇಷ ಪ್ರಜಾಹಿತಫಲಗಳೇ ವ್ಯಕ್ತವಾಗಬಹುದೆಂದು ನಂಬಿ ನಿರೀಕ್ಷಿಸುತ್ತಿರುವರು

ಇದುವರೆಗೆ ನಮಗೆ ಮಂತ್ರಿವರ್ಯರಾಗಿ ದೊರೆತಿದ್ದವರೂ ಇವರಂತೆ ಪ್ರಪಂಚ ಪರ್ಯಟನವನ್ನು ಮಾಡಿ ತಮ್ಮೊಳಗೆ ... ಅನುಭವ ಪರಿಪಾಕವನ್ನುಳ್ಳವರಾಗಿರಲಿಲ್ಲ ... ಸರ್ವಪ್ರಜೆಗಳನ್ನೂ ಸಮದೃಷ್ಟಿಯಿಂದ ಕಂಡು, ಪ್ರಜೆಗಳನ್ನು ಸಮಮಾಡಿ, ರಾಷ್ಟ್ರವನ್ನು ಒಂದೇವಿಧವಾಗಿ ... ತರಬೇಕೆಂಬ ಉದಾರಮತಿಯು ಇವರಿಗಿರುವ ಮಟ್ಟಿಗೆ ಹಿಂದಿನ ಯಾವ ಮಂತ್ರಿವರ್ಯರಿಗೂ ಇರಲಿಲ್ಲವೆಂದು ಬಹು ಪ್ರಜೆಗಳು ನಂಬುವರು. ಇಂಥ ನಂಬುಗೆ ನಿರೀಕ್ಷಣೆಗಳೆಲ್ಲವೂ ಸಫಲವಾಗುವಂತೆಯೂ, ಇವರ ಕರ್ತವ್ಯ ... ಯಮೇಲೆ ವಿಶ್ವಾಸವಿಟ್ಟಿರುವ ಶ್ರೀಮನ್ಮಹಾರಾಜರ ಸಂಕಲ್ಪವು ಕಾರ್ಯಗತವಾಗುವಂತೆಯೂ, ತನ್ನಲ್ಲಿರುವ ... ಜಾನ ಸಕ್ತೀಶ್ವರ ... ಮಾರ್ಗದ ... ಕ್ಕೆ ಲಭ್ಯವಾಗುವಂತೆಯೂ, ಇವರ ಸಾಮರ್ಥ್ಯಾದಿಗಳ ವಿಷಯದಲ್ಲಿ ದೋಷಾರೋಪಣೆಯ ಅವಕಾಶವನ್ನು ಕೂಡ ... ಹೊಗೆಲ್ಲವೂ ಅದಕ್ಕೆ ಹೋಗುವಂತೆಯೂ ಮಾಡಲು ತಕ್ಕ ಸುಬುದ್ಧಿಯ ಬುದ್ಧಿ ಸಾಹಸಾದಿಗಳನ್ನು ... ದೀಕ್ಷೆ ... ಇವರಿಗೆ ಉಂಟುಮಾಡಲೆಂದು ಕೋರುತ್ತೇವೆ.

ಯುದ್ಧಭೂಮಿಯ ವಾರ್ತೆ.

ಕಳೆದ ವಾರದಲ್ಲಿ ಬಂದಿರುವ ವಾರ್ತೆಗಳೆಲ್ಲಾ ತುರ್ಕಿಯವರ ಅಪಜಯಗಳನ್ನೂ ನಾನಾವಿಧವಾದ ಕಷ್ಟಗಳನ್ನೂ ವಿವರಿಸುವುದಕ್ಕಾಗಿವೆ.

ಕಳೆದ ತಾ॥ ೯ ರಲ್ಲಿ ಸಾಲೋನಿಕಾವನ್ನು ಗ್ರೀಕರು ಹಿಡಿದುಕೊಂಡರು. ಅಲ್ಲಿದ್ದ ತುರ್ಕಿ ಸೈನ್ಯದವರು ಶರಣಾಗತರಾದರೆಂದೂ, ಎಷ್ಟು ಸಾವಿರ ಮಂದಿಗಳು ತಮ್ಮ ಸೈನ್ಯವಾಗಿದ್ದರೆಂದೂ ... ತಮ್ಮ ... ರಾಜಧಾನಿಗೆ ವಾ... ಅದನ್ನು ... ನಿಕಾಸ್ಕೆ ...

ಪಟ್ಟಣದ ಪ್ರಜೆಗಳೆಲ್ಲರೂ ಆನಂದೋತ್ಸವವನ್ನು ನಡೆಯಿಸಿದರು ಈಗ ಗ್ರೀಸಿನಲ್ಲಿ ೫೦,೦೦೦ ಮಂದಿ ಮಹಮ್ಮದೀಯರು ಸೆರೆಯಾಳಾಗಿರುವರು ಇದಲ್ಲದೆ ಮಾಂಟಿನೀಗ್ರೋದವರು ... ಸಾವಿರ ಮಂದಿ ಮಹಮ್ಮದೀಯರನ್ನು ಹಿಡಿದು ಇಲ್ಲಿಗೆ ಕಳುಹಿಸಿರುವರು. ಗ್ರೀಸ್ ದೇಶದ ಮಂತ್ರಿಯನ್ನು ಸಾಲೋನಿಕಾದ ಗವರ್ನರನ್ನಾಗಿ ನಿಯಮಿಸಿದ್ದಾರೆ. ಸಾಲೋನಿಕಾದಲ್ಲಿ ಮಹಮ್ಮದೀಯರ ಸೈನ್ಯವು ೧೫ ಸಾವಿರವಿದ್ದಿತು ಅವರೂ ಕೂಡ ಅನ್ನವಸ್ತ್ರಗಳಿಲ್ಲದೆ ಪರಿತಪಿಸುತ್ತ ಒಂದೊಂದು ರೊಟ್ಟಿಗಾಗಿ ಒಂದೊಂದು ತುಪಾಕಿಗಳನ್ನು ಮಾರಿಕೊಳ್ಳುತ್ತಿದ್ದರು ಇವರಲ್ಲದೆ ೫೦ ಲಕ್ಷ ಮಹಮ್ಮದೀಯರು ಪ್ರಾಣರಕ್ಷಣಾರ್ಥವಾಗಿ ಇಲ್ಲಿ ಸೇರಿಕೊಂಡಿದ್ದರು

ಅಡ್ರಿಯಾನೋಪಲ್ ಪಟ್ಟಣವು ಬಲ್ಗೇರಿಯನ್ನರಿಂದ ಇಷ್ಟರಲ್ಲೇ ಹಿಡಿಯಲ್ಪಟ್ಟಿರಬೇಕೆಂದು ಕಳೆದ ತಾ॥ ರಲ್ಲಿಯೇ ವಿ ಮೋಲ್ ಪತ್ರಿಕಾ ಬಾತ್ಮೀದಾರರು ವಾರ್ತೆಯನ್ನು ಕಳುಹಿಸಿದ್ದರು ... ತಮ್ಮ ಜಯವನ್ನು ಬಲ್ಗೇರಿಯನ್ನರೇ ಯಾವುದೋ ತಂತ್ರಕ್ಕಾಗಿ ರಹಸ್ಯಪಡಿಸಿರುವರೆಂದು ಸುದ್ದಿಯಿದೆ.

ಸರ್ವಿಯಾದವರು ಮಾಸಿಡೋನಿಯಾದಲ್ಲಿ ತುರ್ಕಿ ಸೇನೆಯ ಹುಟ್ಟಡಗಿಸಿಬಿಟ್ಟು ನಿಷ್ಕಂಟಕರಾಗಿರುವ ಕಾರಣ, ಗ್ರೀಕರಿಗೂ ಮಾಂಟಿನೀಗ್ರೋದವರಿಗೂ—ಬಲ್ಗೇರಿಯಾದವರಿಗೂ ಸಹಾಯಮಾಡುವುದಕ್ಕೆ ಹೋಗಿದ್ದಾರೆ ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ಲಿನ ಪ್ರಜೆಗಳಿಗೆ ಯುದ್ಧದ ವಾಸ್ತವಾರ್ಥ ಸಂಗತಿಯನ್ನು ಸರ್ಕಾರದವರು ಇದುವರೆಗೆ ... ತಿಳಿಸುತ್ತಿರಲಿಲ್ಲ ... ಅಂತಿಮವಾಗಿ ಎಲ್ಲಾ ತಿಳಿದುಬಂದಿದೆ ... ಸಾವಿರಾರುಗಟ್ಟಲೆ ಜನ ಈ ಪಟ್ಟಣಕ್ಕೆ ಬಂದು ತುಂಬುತ್ತಿದ್ದಾರೆ. ಅಲ್ಲದೆ ಸೈನ್ಯಗಳೆಲ್ಲಾ ... ಸೈನಿಕರಿಗೆ ಸಾಲದೆ ಇರುವುದರಿಂದ ಸಾವಿರಾರು ಜನರಿಗೆ ಆಹಾರದ ಬಾಧೆಯುಂಟಾಗಿದೆ ಇದರ ಮೇಲೆ ... ಮಳೆಯೂ ಚಳಿಯೂ ಅಲ್ಲಿ ಪ್ರಬಲಿಸಿವೆ ರೋಗಾದಿಗಳು ಕಾಣಿಸಿಕೊಂಡಿವೆ ಪ್ರಾಣರಕ್ಷಣಾರ್ಥವಾಗಿ ಬೇರೆ ಬೇರೆ ಕಡೆಗಳಿಂದ ಲಕ್ಷಾಂತರ ಜನ ಮಹಮ್ಮದೀಯರು ಬಂದು ... ಇವರೆಲ್ಲರೂ « ನಮ್ಮ ಗತಿ ಹೇಗಾಯಿತು ... ನಮಗೆ ಯೂರೋಪಿನವರು ಸಹಾಯ ಮಾಡುವ ... ನಿಮ್ಮ ... ಮನೆ ಕಟ್ಟಿಕೊಂಡು ... " ಯೆಂದು ಹೇಳುತ್ತಿದ್ದಾರೆ ಬಲ್ಗೇರಿಯನ್ನರಾದರೋ ಈ ಪಟ್ಟಣಕ್ಕೆ ಸಮೀಪಿಸುತ್ತಲೇ ಇದ್ದಾರೆ. ಅವರು ಇದರ ಮೇಲೆ ಬಂದು ಬಿದ್ದರೆ ತುರ್ಕಿಯವರು ಪ್ರತಿಭಟಿಸಿ ಇದನ್ನು ಉಳಿಸಿಕೊಳ್ಳಲಾರರೆಂದು ಕಾಣುತ್ತಿದೆ ಇದನ್ನು ಕ್ರಮಿಸುವುದು ಧರ್ಮವಲ್ಲವೆಂದು ಲಂಡನ್ ಟೈಮ್ಸ್ ಪತ್ರಿಕೆಯು ಹೇಳುತ್ತಿದೆ ಆದರೆ ನಾವು ಕಾನ್‌ಸ್ಟಾಂಟಿನೋಪಲ್ಲನ್ನು ಸುಗ್ಗುವವರೆಗೂ ಸಂಸ್ಥಾನಿಸುವದಕ್ಕೆ ... ನಮ್ಮ ಪ್ರತಾಪವು ಗೊತ್ತಾಗಲಾರದು ಎಂದು ಬಲ್ಗೇರಿಯನ್ನರು ನುಡಿಯುತ್ತಿದ್ದಾರೆ

ಕಾನ್‌ಸ್ಟಾಂಟಿನೋಪಲ್ಲನ್ನು ಹಿಡಿಯುವುದರಲ್ಲಿ ನಮಗೆ ಅಕ್ಕರೆಯಿಲ್ಲವೆಂದು ಸರ್ವಿಯಾದ ಪ್ರೆಸಿಡೆಂಟರು ತಮ್ಮ ಅಭಿಪ್ರಾಯಪಡಿಸಿದ್ದಾರೆ

ಯೂರೋಪು ಖಂಡದ ಭೂಪಟದ ಚಿತ್ರದಲ್ಲಿ ವ್ಯತ್ಯಾಸವು ಇಷ್ಟರಲ್ಲೇ ಆಗುವಂತಿದೆ ಕಷ್ಟಪಟ್ಟು ಸಂಪಾದಿಸಿದವರ ಲಾಭವನ್ನು ಕೆಡಿಸುವುದು ಧರ್ಮವಲ್ಲ " ವೆಂದು ನಮ್ಮ ಆಂಗ್ಲ ಪ್ರಭುತ್ವದ ಮುಖ್ಯ ಸಚಿವರು ಒಂದು ಸಭೆಯಲ್ಲಿ ಮಾತಾಡಿದ್ದಾರೆ

ತುರ್ಕಿ ಪ್ರಭುತ್ವದವರು ಕಳೆದ ತಾ॥ ೧೪ ರಲ್ಲಿ ಒಂದು ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ « ಯುದ್ಧದಲ್ಲಿನ ಜಯಾಪಜಯಗಳು ಒಬ್ಬರ ಸ್ವಾಧೀನದಲ್ಲಿಲ್ಲ. ಯಾವಾಗಲೂ ಒಬ್ಬರೇ ಜಯಶಾಲಿಗಳಾಗುತ್ತಿರುವುದಿಲ್ಲ. ಯುದ್ಧಕ್ಕೆ ನಿಂತವರು ಅದರ ಫಲವನ್ನು ಅನುಭವಿಸುವುದಕ್ಕೆ ಸಿದ್ಧರಾಗಿಯೇ ತೀರಬೇಕು. ಜಯವುಂಟಾದಾಗ ಸಂತೋಷಪಡುವುದು ಕೆಲಸಕ್ಕೆ ಬಾರದದು ಅಪಜಯವಾದಾಗ ಅಧೈರ್ಯಪಡುವುದು ತಕ್ಕದ್ದಲ್ಲ " ಎಂದು ಹೇಳಿರುತ್ತಾರೆ. ಸಂಧಿ ವಿಷಯದಲ್ಲಿ ಸ್ಪಷ್ಟವಾದ ವಾರ್ತೆಗಳು ಇನ್ನೂ ಪ್ರಕಟವಾಗಿಲ್ಲ. ಕಾನ್‌ಸ್ಟಾಂಟಿನೋಪಲ್ಲಿನ ಬಳಿಯಲ್ಲಿ ಕೊನೆಯ ಮಹಾ ಯುದ್ಧವೊಂದು ಆಗುವಂತಿದೆ.

ಒಳದೇಶದ ವೃತ್ತಾಂತವು.

ಬ್ರಹ್ಮವಾದೀ ಸಮಾಜದ ಉಪನ್ಯಾಸಕರಾದ ಸುಧೀರಚಂದ್ರ ಸಿನಹ ಯವರು ಇಷ್ಟರಲ್ಲೇ ರಾಜಧಾನಿಗೆ ಬಂದು ಕೆಲವು ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆ.

ಬೆಂಗಳೂರು ಪಟ್ಟಣದಿಂದ ಕಂಟೋನ್ಮೆಂಟಿಗೆ ನಮ್ಮ ಸರ್ಕಾರದವರು ಟ್ರಾಂವೇಯನ್ನು ಹಾಕಿಸುವುದಕ್ಕೆ ಇಂಡಿಯಾ ... ರವರು ಅನುಮತಿಯನ್ನು ಕೊಟ್ಟಿದ್ದಾರೆ ... ರದ ರಾತ್ರಿ ಟೆನ್ನಾಗಿ ಜರುಗಿತು

ಈ ಮಳೆಯೂ ನಿಂತಿರುವ ಕೆಲವು ಪೈರುಗಳಿಗೆ ಅಗನೇಕವಾಗಿ ದ್ದಿತು.

ವಿಸ್ಲೀಯನ್ ಮಿಷನ್ ಪ್ರೆಸ್ಸಿನ ವ್ಯಾನೇಜರಾಗಿದ್ದು ಬದನ್ನು ಉನ್ನತಸ್ಥಿತಿಗೆ ತಂದ ಮಿ|| ಜೆ. ಗೂಲ್ಡ್ ರವರು ಪತ್ನೀ ಸಮೇತರಾಗಿ ದೇಹಾರೋಗ್ಯಕ್ಕಾಗಿ ಒಂದು ಒರ್ಷದ ವಿರ್ಲೋಗ ರಜದ ಮೇಲೆ ಸೀಮೆಗೆ ತೆರಳಿದರು

ಶಿವಮೊಗ್ಗಾ ಡಿ|| ನಲ್ಲಿ ಆನೆಗಳ ಹಾವಳಿಯು ಜಾಸ್ತಿಯಾಗಿದ್ದುದರಿಂದ ಸರ್ಕಾರದವರು ಅವನ್ನು ಹಿಡಿಸುವುದಕ್ಕೆ ಏರ್ಪಡಿಸಿದ್ದರು. ಸಕ್ಕರೆಬೈಲು ಕಾಡಿನಲ್ಲಿ ಇದುವರೆಗೆ ೧೯ ಆನೆಗಳವರೆಗೆ ಸಿಕ್ಕಿ ಬಿದ್ದಿರುತ್ತವೆಯೆಂದು ಕೇಳುತ್ತೇವೆ.

ಮಾಗಡಿ ತಾ|| ಶಿರಸ್ತೇದಾರರು ಸರ್ಕಾರದ ಹಣ ೧|| ರೂ. ನ್ನು ದುರುಪಯೋಗಪಡಿಸಿಕೊಂಡು ಕ್ರಿಮಿನಲ್ ವಿಚಾರಣೆಗೆ ಗುರಿಯಾಗಿರುವರೆಂದು ಹಿಂದೆ ತಿಳಿಸಿದ್ದೆವಷ್ಟೆ. ಈಗ ಅವರು ಸೆಷನ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ

ಮೈಸೂರು ವಸ್ತುಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರಾದ ಮಿ|| ಕ್ರಂಬೀಗಲ್ ರವರು ತಿಳಿಯಪಡಿಸಿರುವುದೇನೆಂದರೆ,- ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲೂ, ಪುದುಕೋಟೆಯಲ್ಲೂ, ಗ್ವಾಲಿಯರ್ ಸಂಸ್ಥಾನದಲ್ಲೂ ವಸ್ತುಪ್ರದರ್ಶನಗಳು ನಡೆಯುವುದರಿಂದ, ಮೈಸೂರು ದೇಶದ ಕಸಬುದಾರರು ತಮ್ಮಲ್ಲಿರುವ ಪ್ರದರ್ಶನೀಯ ವಸ್ತುಗಳನ್ನು ಆ ಸ್ಥಳಗಳಿಗೆ ಕಳುಹಿಸಿ ಕೊಡಬಹುದು ಎಂಬುದಾಗಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಮೊದಲೇ ಪ್ರಕಟವಾಗಿದ್ದ ರೀತಿಯಲ್ಲಿ ಕಳೆದ ತಾ|| ೧೮ ನೆ ಗುರುವಾರದ ದಿನ ಬೆಳಿಗ್ಗೆ ಅಡ್ಡಪಲ್ಲಕ್ಕಿ, ಶ್ವೇತಛತ್ರ, ಹಗಲು ದೀವಟಿಗೆ ಮೊದಲಾದ ಸಕಲ ಬಿರುದಾವಳಿಗಳೊಡನೆ ಬೃಹನ್ಮಠದ ಪ್ರವೇಶವನ್ನು ಮಾಡಿ, ಉತ್ಸವವು ಮುಖ್ಯ ರಾಜಬೀದಿಗಳಲ್ಲೆಲ್ಲಾ ಅತ್ಯಂತ ವೈಭವದಿಂದ ಸಾಗಿತು. ಪ್ರೇಕ್ಷಕ ಜನಸ್ತೋಮವು ಪ್ರತಿಯೊಂದು ಬೀದಿಯಲ್ಲಿಯೂ ಕಿಕ್ಕಿರಿದು ನಿಂತಿದ್ದು ಶ್ರೀಗಳವರ ದರ್ಶನವನ್ನು ಭಯಭಕ್ತಿಯಿಂದ ಮಾಡಿ ಅಡಿಗಡಿಗೆ ಆನಂದದಿಂದ ಕರತಾಡನವನ್ನು ಮಾಡುತ್ತಿದ್ದರು. ಪೊಲೀಸು ಏರ್ಪಾಟು ಸಮರ್ಪಕವಾಗಿದ್ದಿತು.

ರಾಜಧಾನಿಯಲ್ಲಿರುವ ಸಾವಿರಾರು ಮಂದಿ ಪ್ರಜೆಗಳು ಒಂದು ಅರ್ಜಿಯನ್ನು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಬರೆದುಕೊಂಡು, ಈಗ ದಿನಸಿಯ ಬೆಲೆಯು ಬಲು ತೆಗ್ಗಾಗಿರುವುದರಿಂದ ಬಡಬಗ್ಗರಿಗೆ ಸುಲಭವಾದ ಧಾರಣೆಯಿಂದ ಮುಖ್ಯ ಧಾನ್ಯಗಳು ದೊರೆಯುವುದಕ್ಕೆ ಏರ್ಪಡಿಸಿ ಕಾಪಾಡಬೇಕೆಂದು ಪ್ರಾರ್ಥಿಸಿಕೊಂಡಿರುವರೆಂದು ಕೇಳುತ್ತೇವೆ. ಮ್ಯುನಿಸಿಪಾಲಿಟಿಯವರು ಇದುವರೆಗೂ ಈ ವಿಷಯದಲ್ಲಿ ಯಾವ ಯೋಚನೆಯನ್ನೂ ಮಾಡದಿರುವುದು ಅವರ ಉದಾಸೀನತೆಗೆ ನಿದರ್ಶಕವಾಗಿದೆ. ಸಾಲದುದಕ್ಕೆ ಮನೆ ತೆರಿಗೆಯನ್ನು ಅತ್ಯವಶ್ಯಕವಾಗಿ ಕೊಡಬೇಕೆಂದೂ ಅಪ್ಪಣೆಮಾಡಿ ಬಲಾತ್ಕಾರದಿಂದ ವಸೂಲುಮಾಡುತ್ತಿದ್ದಾರೆ. ಕಾಲಸ್ಥಿತಿಯನ್ನೂ, ಜನಗಳ ಕಷ್ಟಸುಖಗಳನ್ನೂ ನೋಡಿ ಕೆಲಸಮಾಡಿ ಜನರಿಂದ ಕೊಂಡಾಡಿಸಿಕೊಳ್ಳತಕ್ಕ ಪುಣ್ಯವು ಸರ್ವರಿಗೂ ಲಭ್ಯವಾಗತಕ್ಕುದಲ್ಲ.

ಮಿತ್ರರೆ! ನಮ್ಮಲ್ಲಿ ೧೯೧೩ನೇ ಇಸವಿಯ ಅನೇಕ ವಿಷಯಗಳನ್ನೊಳಗೊಂಡಿರುವ ಎ. ಬಿ. ನಂಬರ್ ಇಂಗ್ಲೀಷ್ ಕನ್ನಡ ಪಾಕೆಟ್ ಡೈರಿಗಳು ನಯವಾದ ಕಾಗದದಲ್ಲಿ ಪ್ರತಿಪುಟಕ್ಕೂ ರೂಲುಮಾಡಿ ಸ್ವೀಮ್ ಯಂತ್ರಗಳಲ್ಲಿ ಪ್ರಿಂಟಾಗಿ, ಅಂದವಾದ ಕ್ಯಾಲಿಕೋ ಬಟ್ಟೆಯಿಂದ ಬೈಂಡಾಗಿ ಬಿಕರಿಗೆ ಸಿದ್ಧವಾಗಿವೆ.

ಚಿಕ್ಕ ಸೈಜು ಡೈರಿ ೧ ಕ್ಕೆ ೦-೩-೦, ದೊಡ್ಡ ೭ ಪಕ್ಕದ ರಟ್ಟಿನಲ್ಲಿಯೂ ಚೀಲಗಳುಳ್ಳ ಮುದ್ದೆ ೧ ಆಣೆ ಬಾಳುವ ಪೆನ್ಸಿಲ್ ಇಟ್ಟಿರತಕ್ಕ ಡೈರಿ ೧ ಕ್ಕೆ ೦-೪-೦, ಜಾಗ್ರತೆ ಬಿಕರಿಯಾಗಿ ಹೋಗುತ್ತವೆಯಾದ್ದರಿಂದ ಈ ದಿವಸವೇ ಬರೆದು ತರಿಸಿಕೊಳ್ಳಿರಿ. ಪೋಸ್ಟಲ್ ಚಾರ್ಜು ಅಲಾಯಿದಾ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಪ್ರಕಟಣೆ.

ಈ ಸಾರೆ ೭ ನೇ ಶ್ರೀಮದ್ವೀರಶೈವ ಮಹಾಸಭೆಯು ಬೆಳಗಾವಿ ಜಿಲ್ಲಾ ಚಿಕ್ಕೋಡಿ ತಾ|| ನಿಪ್ಪಾಣಿ ಊರಲ್ಲಿ ಮುಂಬರುವ ಡಿಸೆಂಬರ ತಿಂಗಳ ತಾ|| ೨೬, ೨೭, ೨೮ ಬೃಹಸ್ಪತಿವಾರ, ಶುಕ್ರವಾರ ... ಶನಿವಾರ ಈ ಮೂರು ದಿವಸ ನೆರವೇರುವುದು ... ದವಾಗಿ ಕೂಡುವುದು.

ಶಾಂತವೀರಸ್ವಾಮಿ, ... ಸೇಕ್ರೆಟರಿ,
೧೪-೧೧ ೧೯೧೨   ಶ್ರೀ ವೀರಶೈವ ಮಹಾಸಭಾ,
ಸ್ಟ್ಯಾಂಡಿಂಗ್ ಕಮಿಟಿ ಧಾರವಾಡ

ಮೈಸೂರ ಸ್ಟಾರ್

೧೯೧೨ನೇ ನವೆಂಬರ್ ತಾ|| ೧೮ ನೇ ಸೋಮವಾರ

ದುರಾಚರಣೆಗಳು

ಪ್ರಭುಗಳು ದುಷ್ಟರಾದ ಪ್ರಜೆಗಳನ್ನಾಳುವುದಕ್ಕಿಂತಲೂ ಶಿಷ್ಟರಾದ ಪ್ರಜೆಗಳನ್ನಾಳುವುದು ಸುಲಭ. ಅದು ಕಾರಣ, ಪಾಲಕರು ತಮ್ಮ ಕರ್ತವ್ಯವನ್ನು ಸುಲಲಿತವಾಗಿ ಸಾಗುವಂತೆ ಮಾಡಿಕೊಳ್ಳಬೇಕಾದರೆ, ತಮ್ಮ ಪಾಲನೆಗೊಳಪಡುವ ಪ್ರಜೆಗಳನ್ನು ಧಾರ್ಮಿಕರನ್ನಾಗಿಯೂ, ಸಾಮರ್ಥ್ಯರನ್ನಾಗಿಯೂ, ಉದ್ಯೋಗತತ್ಪರರನ್ನಾಗಿಯೂ ಮಾಡುವುದಕ್ಕೆ ಮೊದಲು ತೊಡಗಬೇಕಾಗಿರುವುದು. ಆ ಕಾರ್ಯವು ಕ್ರಮವಾಗಿ ರೂಪಿನಲ್ಲಿ ಇದಿರುವ ಕತೆಯಲ್ಲಿ ದೇಶಕಂಟಕರ ಹಾವಳಿಯು ಹೆಚ್ಚುವುದು, ಸರ್ಕಾರದ ಭಯವೂ ಅವರಿಗೆ ತಪ್ಪುವಂತಾಗುವುದು. ಆ ದುರಾತ್ಮರಿಂದ ಸೇರಿಹೊರೆಯವರ ಸುಖಶಾಂತಿಗಳಿಗೆ ಭಂಗವುಂಟಾಗುವುದು, ಎಳೆನೀರಲ್ಲೇ ನಿರ್ಮೂಲನಮಾಡಲ್ಪಡದಿರುವ ದೌರಾತ್ಮ್ಯವು ಸಾಂಸರ್ಗಿಕ ರೋಗದಂತೆ ಇತರರಲ್ಲೂ ಅಂಟಿಕೊಂಡು ಪ್ರಬಲಿಸುವುದು.

ಪ್ರಜೆಗಳಲ್ಲಿ ಆಯಾ ಸಂತಾನುಸಾರವಾದ ಧಾರ್ಮಿಕ ನೈತಿಕ ಸಚ್ಚಾರಿತ್ರೋಧಗಳು ಚೆನ್ನಾಗಿ ನೆಲೆಗೊಳ್ಳಲ್ಪಟ್ಟರೆ ರಾಜ್ಯವು ಅಭಿವೃದ್ಧಿಯಾಗುವುದೆಂಬ ಕಾರಣದಿಂದ ಪ್ರಭುತ್ವದವರು ಮತಾಚಾರ್ಯ ಪೀಠಗಳಿಗೆ ಎಷ್ಟೋ ಸಹಾಯಗಳನ್ನೂ, ಮರ್ಯಾದೆಗಳನ್ನೂ, ಪ್ರೋತ್ಸಾಹಗಳನ್ನೂ ಇರಿಸಿಕೊಟ್ಟಿರುವರು. ಆದಾಗ್ಯೂ ಅವರು ಆ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದುದರಿಂದ ಪ್ರಜಾ ಸಮುದಾಯಕ್ಕೆ ಅವರಿಂದಾಗಬೇಕಾದ ಪ್ರಯೋಜನಗಳು ಅಷ್ಟಾಗಿ ಸ್ಪಷ್ಟರಲ್ಲೇ ಇವೆ.

ಮೊನ್ನೆ ತಾನೇ ಚಾಮರಾಜನಗರ ತಾಲ್ಲೂಕಿನಲ್ಲೂ ೬ ತಿಂಗಳ ಹಿಂದೆ ಮೈಸೂರು ತಾಲ್ಲೂಕಿನಲ್ಲೂ ನಡೆದಿರುವ ಕೊಲೆ ಸುಲಿಗೆ ಮೊದಲಾದ ಮಹಾ ದುರಾಚರಣೆಗಳನ್ನೂ, ಇದರಂತೆಯೇ ಪದೇಪದೇ ನಾವುಗಳು ಕೇಳುತ್ತಿರುವ ಕೊಲೆಗಳ ಸುದ್ದಿಗಳನ್ನೂ ಕುರಿತು ವಿಚಾರಣೆ ಮಾಡಿ ನೋಡಿದರೆ ಇವನ್ನಾಚರಿಸುತ್ತಿರುವ ಜನವರ್ಗದಲ್ಲಿ ರಾಗದ್ವೇಷಾದಿಗಳು ಎಷ್ಟು ಮೂಡಿನೆಲೆಸಿರಬಹುದೆಂಬುದು ಗೊತ್ತಾಗುವುದು. ತಕ್ಕ ವಿದ್ಯಾ-ಬುದ್ಧಿ-ವಿವೇಕ-ಸಂಪತ್ತಿಗಳು ಈ ಮೂಢ ಜನರಿಗಿಲ್ಲದಿರುವುದರಿಂದಲೇ ಅವರು ಇಂಥ ನೀಚವಾದ ಮತ್ತೂ ಮಾನುಷಕೋಟಿಗೆ ಅವಮಾನಕರವಾದ ಕೃತ್ಯಗಳನ್ನು ಆಚರಿಸುವುದಕ್ಕೆ ಹಿಂದೆಗೆಯದಿದ್ದಾರೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಆದರೆ ನಮ್ಮ ಮೈಸೂರ ಗವರ್ನಮೆಂಟಿನವರು ಸ್ಥಾಪಿಸುವುದಕ್ಕೆ ಉದ್ದೇಶಿಸಿರುವ ಬಲಾತ್ಕಾರ ವಿದ್ಯಾಭ್ಯಾಸವೊಂದಾದ ಮಹೋಪಕಾರವು ಇಂಥ ಜನಕ್ಕೆ ಅವಶ್ಯವಾಗಿದೆ. ... ಬೆಳೆಸುವುದಕ್ಕೆ ಕಾರಣವಾಗುವುದು ... ಪ್ರಕೃತದಲ್ಲಿ ದುಷ್ಟ ವ್ಯಕ್ತಿಗಳನ್ನು ಬಾಧಿಸಿ ತಗ್ಗಿಸಿ ಈ ದುಶ್ಚರಿತ್ರರನ್ನು ಅಧೀನದಲ್ಲಿ ಇಟ್ಟು ... ದುಷ್ಟರ ದಾ... ದವರು ...

ಸನ್ನಿಗ್ರಹ ... ಅಜಗಿರದೇಕಾಗಿರುವುದು. ಈಚೆಗೆ ಕೊಲೆ ಮೊದಲಾದುವುಗಳನ್ನು ಮಾಡಿದವರು ಧನಶಕ್ತಿಯ ದಿಂದಲೂ, ವಕೀಲರ ಸಹಾಯದಿಂದಲೂ, ಪೋಲೀಸರ ಅಸಮರ್ಥತೆಯಿಂದಲೂ ಶಿಕ್ಷೆಯನ್ನು ತಪ್ಪಿಸಿಕೊಳ್ಳುತ್ತ ಬರುತ್ತಿರುವುದೇ ಇಂಥ ದುರಾಚರಣೆಯಲ್ಲಿ ಪ್ರಜೆಗಳಿಗೆ ಭೀತಿಯು ತಪ್ಪುವುದಕ್ಕೆ ಮಾರ್ಗವಾಗಿದೆ. ಕಾರಾಗೃಹವಾಸವಾದರೂ ದುಷ್ಟರಿಗೆ ಮರಳಿ ದುರಾಚರಣೆಗೆ ಮನಸ್ಸನ್ನು ಹಿಂದೆಗೆಯುವಂತೆ ಮಾಡುವಹಾಗಿಲ್ಲ, ಅದು ಅನೇಕರಿಗೆ ಸುಖವಾಸವೇ ಆಗಿದೆ. ಸರ್ಕಾರದಿಂದ ಮಾಡಲ್ಪಡುವ ದಂಡವು ಲೋಕಕ್ಕೆಲ್ಲಾ ಎಚ್ಚರಿಕೆಯನ್ನೂ, ಭಯವನ್ನೂ ಉಂಟುಮಾಡುವ ಸಾಧಕವಾಗಬೇಕು. ಪ್ರಕೃತದ ಕಣ್ಣೇಗಾಲ ಹಳ್ಳಿಯಲ್ಲಿ ನಡೆದ ದುರಾಗತದ ವಿಷಯದಲ್ಲಿ ಪೋಲೀಸರೂ ದಂಡಾಧಿಕಾರಿಗಳೂ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸಿ, ನಿಜವಾದ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ಮಾಡಿ, ಪ್ರಬಲವಾಗುತ್ತಿರುವ ಕೊಲೆ ಸುಲಿಗೆಗಳು ಕಡಿಮೆಯಾಗಿ ಪ್ರಜೆಗಳು ನೆಮ್ಮದಿಯಾಗಿ ಬಾಳುವಂತೆ ಮಾಡಿ, ತಮ್ಮ ಕೀರ್ತಿಯನ್ನೂ ರಾಜ್ಯದ ಶಾಂತಿಯನ್ನೂ ಕಾಪಾಡಿಕೊಳ್ಳುವರೆಂದು ನಿರೀಕ್ಷಿಸುತ್ತೇವೆ.

ವೀರಶೈವ ಮಹಾಸಭಾ

ಈ ವರ್ಷದ ವೀರಶೈವ ಮಹಾಸಭೆಯು ಕೊಲ್ಹಾಪುರದ ... ಕೆಲವು ಕಾರಣಗಳಿಂದ ... ಆಗುವುದೋ ಅನಿವಾರ್ಯದಿಂದ ಅದು ತಪ್ಪಿ, ಇದುವರೆಗೂ ಮಹಾಸಭೆ ಸಂಬಂಧದ ಯಾವ ನಿಜವಾದ ಸುದ್ದಿಗಳೂ ಹೊರಬೀಳದಿದ್ದುದರಿಂದ ಈ ವರ್ಷ ಸಭೆಯು ನೆರವೇರುವಂತಿಲ್ಲವೆಂದು ಅನೇಕರು ಯೋಚಿಸುತ್ತಿದ್ದರು. ಅಷ್ಟರಲ್ಲಿ ಬೆಳಗಾಂ ಜಿಲ್ಲೆಗೆ ಸೇರಿದ ನಿಪ್ಪಾಣಿಯಲ್ಲಿ ಈ ಸಭೆಯು ಕೂಡುವ ಸನ್ನಾಹವು ನಡೆದು, ಆ ವಿಷಯವಾಗಿ ಸಿಪ್ಪ ... ಪ್ರಕಟಣಾ ಪತ್ರವು, ಸ್ಟ್ಯಾಂಡಿಂಗ್ ಕಮಿಟಿ ೨ನ ಚೇರ್ಮನ್ನರ ಕಡೆಯಿಂದ ನಮಗೆ ಕಳುಹಲ್ಪಟ್ಟಿತು. ಅದನ್ನು ಇದೇ ಪತ್ರದಲ್ಲಿ ಪ್ರಕಟಿಸಿರುತ್ತೇವೆ. ಇದುವರೆಗೂ ಯಾವ ಜಿಲ್ಲೆಯಲ್ಲಿ ೨ ಮಹಾಸಭೆಯು ಒಂದಾವೃತ್ತಿಗಿಂತ ಹೆಚ್ಚಾಗಿ ಸೇರಿದ್ದುದಿಲ್ಲ. ಕಳೆದ ವರ್ಷ ಬೆಳಗಾಂವಿಯಲ್ಲಿ ಈ ಸಭೆಯು ನೆರೆದಿದ್ದರೂ, ಈ ವರ್ಷ ಅದೇ ಜಿಲ್ಲೆಗೆ ಸೇರಿದ ಮತ್ತೊಂದು ಸ್ಥಲದಲ್ಲಿಯೂ ನೆರವೇರುವುದಕ್ಕೆ ಪರ್ಯಟಿಸಿರುವ ಸಂಗತಿಯು ಸ್ವಲ್ಪ ಹೊಸಿಯದಾಗಿರುತ್ತದೆ. ಹಿಂದಿನ ಸಭೆಯು ಚಾಲನೆಯ ಭಾರವು ಬಹುತರವಾಗಿ ಶ್ರೀ ಸ್ವಾಮಿ ಕಣಬರಗಿಯವರ ಮೇಲೆ ಬಿದ್ದಿತ್ತು. ಈ ಸಲದ ಸಭೆಯು ಬಹುಶಃ ಬೆಳಗಾಂ ಜಿಲ್ಲೆಯ ವೀರಶೈವ ಮಹನೀಯರುಗಳ ಅವಲಂಬನದ ಮೇಲೆ ಸಾಗುತ್ತಿರಬಹುದೆಂದು ಕಾಣುತ್ತದೆ. ಹಾಗಿದ್ದರೆ ಅದು ಅತ್ಯುತ್ತಮ ಸಮಾಜಪ್ರಿಯರಿಗೆ ಸಂತೋಷವೇ ಸರಿ. ಸಭಾಕಾಲವು ೧ ತಿಂಗಳೇ ಉಳಿದಿರುವುದರಿಂದ ಎಲ್ಲ ವಿಚಾರಕರುಗಳನ್ನೂ ಮುಂದಾಳುಗಳು ಒತ್ತರದಿಂದ ಮಾಡಬೇಕಾಗಿರುತ್ತದೆ. ಸಭಾ ಸಂಬಂಧವಾದ ಕಾರ್ಯಕ್ರಮಗಳ ವಿವರಣವುಳ್ಳ ಪ್ರಕಟನಗಳನ್ನೆಲ್ಲಾ ಕಾರ್ಯಕಾರಿ ಮಂಡಲದವರು ಬೇಗನೆ ಪ್ರಕಟಿಸಿ, ಆಗಮಿಸತಕ್ಕ ಜನರಿಗೆ ಅನುಕೂಲ ಮಾಡಿಕೊಡುವರೆಂದು ನಿರೀಕ್ಷಿಸುತ್ತೇವೆ. ಬಹುಶಃ ಈ ಸಭೆಗೆ ರಾ|| ಬ|| ರುದ್ರಗೌಡ ಚನ್ನವೀರಗೌಡ ಅರಟಾಳ ಡಿ|| ಕಲೆಕ್ಟರ್ ಬೆಳಗಾಂವರವರೇ ಅಧ್ಯಕ್ಷರಾಗಬಹುದೆಂದು ಕಾಣುತ್ತದೆ. ನಿಪ್ಪಾಣಿಯ ಸ್ಥಳಿಕ ಮಹಾಜನಗಳು ತಕ್ಕ ಚಟುವಟಿಕೆಯಿಂದ ಹಿಡಿದ ಕಾರ್ಯವನ್ನು ಸಲಕ್ಷಣವಾಗಿ ನೆರವೇರಿಸಿ, ಕೀರ್ತಿಗೊಳ್ಳುವವರಾಗಲೆಂದು ಕೋರುತ್ತೇವೆ.

ಶ್ರೀಮನ್ಮಹಾರಾಜರವರ ಸ್ವದೇಶಸಂಚಾರ

ಶ್ರೀಮನ್ಮಹಾರಾಜರವರು ತಮ್ಮ ಸಕ್ರೆಟರಿಗಳ ಸಮೇತ ಬರುವ ಡಿಸೆಂಬರ್ ತಾ|| ೯ ರ ಬೆಳಗ್ಗೆ ೧೧ ಗಂಟೆಗೆ ಮೋಟಾರು ಬಂಡಿಯಲ್ಲಿ ಬೆಂಗಳೂರಿನಿಂದ ಪ್ರಯಾಣಮಾಡಿ ನೆಲಮಂಗಲ, ಕುಣಿಗಲು, ಎಡೆಯೂರು, ನಾಗಮಂಗಲ ಈ ಊರುಗಳನ್ನು ಹಾದು ಶ್ರವಣಬೆಳಗೊಳದಲ್ಲಿಳಿದು ಬೆಟ್ಟವನ್ನು ನೋಡಿ ವಿಶ್ರಮಿಸಿಕೊಂಡು, ಹಾಸನವನ್ನು ಅದೇ ಸಾಯಂಕಾಲ ೬ ಗಂಟೆಗೆ ತಲುಪುವರು. ಹಾಸನದಲ್ಲಿ ತಾ|| ೧೦ ರಲ್ಲಿದ್ದು, ತಾ|| ೧೧ ರ ಬೆಳಗ್ಗೆ ೧೧ ಗಂಟೆಯಲ್ಲಿ ಹಾಸನವನ್ನು ಬಿಟ್ಟು ಬೇಲೂರು ಮಾರ್ಗವಾಗಿ ಹಳೇಬೀಡಿಗೆ ಎಂದು ಅಲ್ಲಿ ಬೇ... ಪ್ರವಾಸವನ್ನು ಮಾಡಿಕೊಂಡು ಹೊರಟು ಅದೇ ಸಾಯಂಕಾಲ ೭ ಗಂಟೆಗೆ ಕಡೂರನ್ನು ತಲುಪುವರು. ಅಲ್ಲಿಂದ ತಾ|| ೧೨ ರ ಬೆಳಗ್ಗೆ ೧೧ ಗಂಟೆಯಲ್ಲಿ ಹೊರಟು ಸಾಗರದಲ್ಲಿ ಶೋಭಿಸುತ್ತ ವಿಶ್ರಮಿಸಿಕೊಂಡು ಶಿವಮೊಗ್ಗೆಯನ್ನು ... ಸಾಯಂಕಾಲ ... ಗೆ ... ಯನ್ನು ... ಗಂಟೆಗೆ ... ಯನ್ನು ತಲುಪುವರು.

ತಾ॥ ೧೭ ರ ಬೆಳಿಗ್ಗೆ ೧೦ ಗಂಟೆಯಲ್ಲಿ ಶಿವಮೊಗ್ಗೆಯನ್ನು ಬಿಟ್ಟು ಮಧ್ಯೆ ಕರವನಹಳ್ಳಿಯೆಂಬಲ್ಲಿ ಟೀಫಾನವನ್ನು ಮಾಡಿಕೊಂಡು ಹೊರಟು ಅದೇ ಸಾಯಂಕಾಲ ಮಾರಿಕಣಿವೆಯನ್ನು ಸೇರುವರು. ಮಾರಿಕಣಿವೆಯಲ್ಲಿ ೨ ದಿವಸಗಳಿದ್ದು ತಾ॥ ೨೦ ರಲ್ಲಿ ಅಲ್ಲಿಂದ ಪ್ರಯಾಣಮಾಡಿ ಮಧ್ಯೆ ತುಮಕೂರಿನಲ್ಲಿ ಕೊಂಚ ವಿಶ್ರಮಿಸಿಕೊಂಡು ಟೀ ಫಾನಾನಂತರ ಹೊರಟು ಸಾಯಂಕಾಲ ಬೆಂಗಳೂರನ್ನು ತಲುಪುವರು. ಈ ಪ್ರಾಂತಗಳಲ್ಲಿ ಬೇಕಾದ ಏರ್ಪಾಟುಗಳನ್ನು ಮಾಡಲು ಹುಜೂರು ಸೆಕ್ರಟರಿ ಮ॥ ವಿ. ರಾಘವೇಂದ್ರರಾಯರು ಆಗಲೇ ಹೊರಟಿರುವರು.

ಒಳದೇಶದ ವೃತ್ತಾಂತವು.

ಎಕ್ಸೈಸ್ ಕಮಿಷನರ್ ಮ॥ ಎಂ ಕಾಂತರಾಜಅರಸಿನವರು ಮ॥ ವಿಶ್ವೇಶ್ವರಯ್ಯನವರ ಬದಲು ಕೈಗಾರಿಕೆಯ ಮತ್ತೂ ವ್ಯಾಪಾರಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ತಾಲ್ಲೋಕಿನ ಒಬ್ಬ ಗುಮಾಸ್ತೆ ಅಥವಾ ಮುನಷಿ ಮತ್ತೂ ಒಬ್ಬ ಜವಾನ ಈ ಇಬ್ಬರು ತಮ್ಮ ತಾಲ್ಲೋಕಿನಲ್ಲಿಯೊಳಗೆ ಉದ್ಯೋಗದಮೇಲೆ ಹೊರಗಡೆ ಹೊರಟಾಗ ಇವರಿಗೆ ದಿನಭತ್ಯವಾಗಲಿ ಅಥವಾ ಪ್ರಯಾಣದ ವೆಚ್ಚ (ಟ್ರೈವೆಲ್ ಏ) ಆಗಲಿ ಕೊಡಲ್ಪಡತಕ್ಕದೆಂದು ಸರ್ಕಾರದಪ್ಪಣೆಯಾಗಿರುತ್ತದೆ

ಶ್ರೀಮನ್ಮಹಾರಾಜರವರೂ, ರಾಣೀವರ್ಗದವರೂ ೮ನೇ ತಿಥಿ ಬೆಳಿಗ್ಗೆ ನಂಜನಗೂಡಿಗೆ ಮೋಟಾರು ಬಂಡಿಗಳಲ್ಲಿ ದಯಮಾಡಿಸಿ, ದೇವರ ಸೇವೆಯನ್ನು ಮಾಡಿಕೊಂಡು ರಾಜಧಾನಿಗೆ ಹಿಂದಿರುಗಿ ಚಿತ್ತೈಸುವವರಾಗಿರುವರು. ಕೃತ್ತಿಕೋತ್ಸವಕ್ಕಾಗಿ ಪರಸ್ಥಳಗಳಿಂದ ಸಾವಿರಾರು ಜನರು ಹೋಗಿರುವರು

ಮೈಸೂರ ಡೆ॥ ಕಮಿಷನರು ಮತ್ತೂ ಪೋಲೀಸು ಇ॥ ಜನರಲ್‌ರವರು ಇವರುಗಳೊಡನೆ ದಿವಾನರು ಕಳೆದ ತಾ॥ ೩೦ ರಲ್ಲಿ ಮೋಟಾರು ಬಂಡಿಯಲ್ಲಿ ಚಾಮರಾಜನಗರ-ಮದ್ದೂರು ಹಳ್ಳಿ-ಕಣ್ಣೇಗಾಲ—ಈ ಸ್ಥಳಗಳಿಗೆ ದಯಮಾಡಿಸಿ, ಕಣ್ಣೇಗಾಲದಲ್ಲಿ ನಡೆದ ಗಲಭೆಗೆ ಸಂಬಂಧವಾದ ನಿಜಸ್ಥಿತಿಯನ್ನು ಅಲ್ಲಿಯ ಸ್ಥಳಾಧಿಕಾರಿಗಳನ್ನೂ ಪ್ರಮುಖ ಜನರನ್ನೂ ಕೇಳಿ ಅವರಿಂದ ತಿಳಿದುಕೊಂಡು ಅದೇ ಸಾಯಂಕಾಲ ರಾಜಧಾನಿಗೆ ಹಿಂದಿರುಗಿದರು. ಈ ಕೆಲಸಕ್ಕೆ ಮುಖಂಡರಾಗಿದ್ದ ಇಬ್ಬರು ಚಿಕ್ಕಬಳ್ಳಾಪುರದ ಹತ್ತಿರ ಹಿಡಿಯಲ್ಪಟ್ಟು, ಸೆರೆಯಿಂದ ರಾಜಧಾನಿಗೆ ತರಲ್ಪಟ್ಟಿರುವುದಾಗಿಯೂ, ಈ ಗಲಭೆಯ ವಿಚಾರಣೆಯನ್ನು ರಾಜಧಾನಿಯಲ್ಲಿ ನಡೆಸುವುದರ ಬದಲು ಚಾಮರಾಜನಗರದಲ್ಲೇ ನಡೆಸುವುದುತ್ತಮವಲ್ಲವೆ? ಇದರ ವಿಚಾರಣೆಯ ಬಗೆಗೆ ಒಬ್ಬ ಅ॥ ಕಮಿಷನರು ಪ್ರತ್ಯೇಕವಾಗಿ ನಿಯಮಿಸಲ್ಪಡಬೇಕೆಂದು ಡೆ॥ ಕಮಿಷನರು ಸೂಚಿಸಿರುವುದಾಗಿಯೂ ವರ್ತಮಾನವಿದೆ.

ಗದಗಿನ ವೀರಶೈವರಲ್ಲಿ ಪ್ರಖ್ಯಾತರಾಗಿದ್ದ ರಾ॥ ರಾ॥ ವಿರೂಪಾಕ್ಷಪ್ಪಣ್ಣ ಮಾಷ್ಟಿಯವರು ಕಳೆದ ತಿಂಗಳ ತಾ॥ ೧೦ ರಲ್ಲಿ ಕೈಲಾಸವಾಸಿಗಳಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ಇನ್ನೂ ಮಧ್ಯಮ ವಯಸ್ಕರಾಗಿದ್ದರು. ವ್ಯಾಪಾರದಲ್ಲಿ ಚತುರರೂ, ಬಡವರಿಗೆ ಆಶ್ರಯರೂ ಆಗಿದ್ದುದಲ್ಲದೆ ಸಾರ್ವಜನಿಕ ಸಕಲ ಕಾರ್ಯದಲ್ಲಿಯೂ ತಮ್ಮ ಅಂಗವಿರುವಂತೆ ಮಾಡಿಕೊಂಡಿದ್ದರು. ಪ್ರಜೆಗಳಿಂದಲೂ ಸರ್ಕಾರದಿಂದಲೂ ಸಹ ಇವರಿಗೆ ಯೋಗ್ಯವಾದ ಗೌರವವು ದೊರೆತಿದ್ದಿತು. ಅಲ್ಲಿನ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಸ್ಥಾನವು ಇವರಿಗೆ ಲಭ್ಯವಾಗಿದ್ದಿತು. ಇಂಡಿಯಾ ಗೌರ್ನಮೆಂಟಿನಿಂದ ರಾವ್ ಸಾಹೇಬ್ ಎಂಬ ಪ್ರಶಸ್ತಿಯೂ ಲಭ್ಯವಾಗಿದ್ದಿತು. ಇವರ ಏಕಪುತ್ರನು ೬ ತಿಂಗಳ ಕೆಳಗೆ ಮೃತನಾಗಿ ಅಪಾರ ಶೋಕವನ್ನು ಇವರಿಗೆ ಉಂಟುಮಾಡಿದ್ದನು. ಈಗ ಇವರ ಅಂತ್ಯವೂ ಆಯಿತು. ಮುಖ್ಯವಾದ ವಸ್ತುಗಳೇ ವೀರಶೈವರಲ್ಲಿ ಹೀಗೆ ಒಂದೊಂದಾಗಿ ಅಳಿಯುತ್ತಿರುವುದನ್ನು ಕಂಡು ಅತ್ಯಂತ ವಿಷಾದವಾಗುತ್ತಿರುವುದು

ಈ ವರ್ಷದ ನವರಾತ್ರಿಯ ಮಹೋತ್ಸವಕ್ಕೆ ಅನೇಕ ಸಂಗೀತಗಾರರು ಬಂದಿದ್ದರು. ಅವರೊಳಗೆ ಶ್ರೀಮನ್ಮಹಾರಾಜರಿಂದ ಕರೆಸಲ್ಪಟ್ಟಿದ್ದ ದಿಲ್ಲಿಯ ಪ್ರೊ॥ ಮುಸ್ತಫಾ ಖಾಂಬ ವಿದ್ಯಾವಂತರೊಬ್ಬರಾಗಿರುವರು. ಇವರು ಸ್ವರಗಾನಗಳನ್ನು ಒಂದು ನೂತನವಾದ ತಂತ್ರೀವಾದ್ಯದಲ್ಲಿ ನುಡಿಸುವುದರಲ್ಲಿ ಅದ್ವಿತೀಯ ಪಾಂಡಿತ್ಯವುಳ್ಳವರಾಗಿರುವರು. ಈ ವಾದ್ಯವು ೩೦ ಕ್ಕಿಂತಲೂ ಮೀರಿ ತಂತಿಗಳು ಜೋಡಿಸಲ್ಪಟ್ಟಿರುವುದು. ಇದನ್ನು ನುಡಿಸುವಾಗ್ಗೆ ಈ ವಿದ್ವಾಂಸನ ಕೈ ಬೆರಲುಗಳು ವಿದ್ಯುಚ್ಛಕ್ತಿಯ ಯಂತ್ರದಂತೆ ಕೆಲಸಮಾಡುತ್ತಿರುವುವು. ಅದರಿಂದುಂಟಾಗುವ ಬಂದುವುಗಳಂತೆ ಸ್ವರತಾಳಕೃತಿಗಳ್ಳ ಸ್ವರ್ಣ ಜಲ್ಲನ ಮುತ್ತುಗಳಾಗಿ, ದೊಡ್ಡ ಗವಾಯಿಗಳ ಜೋಡಿಯಾ ಜಾಡುತ್ತಿರುವುದನ್ನು ನೋಡಿದರೆ ಪರಮೋತ್ಕೃಷ್ಟಾನಂದಗಳುಂಟಾಗುವುವು. ಶ್ರೀಮನ್ಮಹಾರಾಜರವರು ಮೊದಲೇ ರುಸಾರಿ ಈ ವಿದ್ಯಾವಂತರಿಗೆ ಭಂಗಾರದ ಮೆಡಲನ್ನೂ ಸಾವಿರಾರು ರೂಪಾಯಿಗಳನ್ನೂ ಬಹುಮಾನಮಾಡಿರುವರು ಈ ಸಲವೂ ತಕ್ಕ ಮರ್ಯಾದೆಯು ನಡೆಯಬಹುದು ವಿದ್ಯಾಭಿಮಾನಿಗಳಾದ ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ತಕ್ಕ ವಿದ್ಯಾಯೋಗ್ಯತೆಯುಳ್ಳವ ಪಾಶ್ಚಾತ್ಯರಿಗಿಂತಲೂ, ನಮ್ಮ ದೇಶೀಯ ಸಂಗೀತವಿದ್ವಾಂಸರ ಜತೆಗೆ ಇಂಥ ಚಿತ್ರವೇಯ ವಿದ್ಯಾವಿಶಾರದನೊಬ್ಬನು ಇರುವುದು ಭೂಷಣವಾಗಿರುತ್ತದೆ.

ಭರತಖಂಡದ ವೃತ್ತಾಂತಗಳು.

ದೀಪಾವಳಿ ಹಬ್ಬದ ವಿನೋದದಿಂದ ಲಾಹೋರ್ ಪಟ್ಟಣದಲ್ಲಿ ಬೆಂಕಿಬಿದ್ದು ೪ ಮನೆಗಳು ಸುಟ್ಟು ೧ ಲಕ್ಷ ರೂ ನ ಸೊತ್ತು ನಷ್ಟವಾದುವು

ಈ ವರ್ಷ ಬರ್ಮಾದಲ್ಲಿ ಬತ್ತದ ಸಾಗುವಳಿಯು ವಿಶೇಷವಾಗಿ ಮಾಡಲ್ಪಟ್ಟಿದೆ ಒಟ್ಟು ೯೫ ಲಕ್ಷ ಎಕರೆಯಲ್ಲಿ ಬತ್ತದ ವ್ಯವಸಾಯವಾಗಿದೆ

ರಂಗೂನ್ ಪಟ್ಟಣದ ಪೋರ್ಟ್ ಟ್ರಸ್ಟಿಗೆ ಸೇರಿದ ಅಂಗಡಿಗಳಿಗೆ ತಾ॥ ೧೪ ರ ರಾತ್ರಿ ಬೆಂಕಿಬಿದ್ದು ೪ ಅಂಗಡಿಗಳು, ೮ ಪ್ಯಾಕ್ಟರಿಗಳು, ೧೦ ಲಕ್ಷ ರೂ ಗಳ ಸೊತ್ತಿನ ನಷ್ಟವಾಗಿರುವುದು

ನಮ್ಮ ದೇಶದಲ್ಲಿ ಮೊಟ್ಟಮೊದಲು ಪ್ಲೇಗು ರೋಗವು ೧೮೯೬ ನೆಯ ವರ್ಷದಲ್ಲಿ ಆರಂಭಗೊಂಡಿತು ಅದರಿಂದ ಇದುವರೆಗೆ ೪೦ ಲಕ್ಷ ಮಂದಿಗಳು ಸತ್ತಿರುವರು ಕಳೆದ ೧ ವರ್ಷ ಕಾಲದಲ್ಲಿಯೇ ೩,೫೦,೦೦೦ ಜನರು ಸತ್ತಿರುವರು

ಮಲೆಯಾಳ ದೇಶದಲ್ಲಿ ಪ್ರಾರಂಭ ವಿದ್ಯೆಯನ್ನು ಉಚಿತವಾಗಿ ಕಲಿಸುವ ಏರ್ಪಾಟಿಗಾಗಿ ಕೃಷ್ಣವರ್ಮರಾಜರವರು ಹತ್ತು ರೂ. ನ ೩೦ ಸಾವಿರ ಭಾಗಗಳಿಂದ ೧ ಸಂಘವನ್ನು ಸ್ಥಾಪಿಸಿದ್ದಾರೆ. ಇದರ ಮೂಲಧನವು ೪ ಲಕ್ಷ ರೂ

ಅಮೃತಬಜಾರ್ ಪತ್ರಿಕಾಸಂಪಾದಕರಾದ ಬಾಬುಮೋತಿಲಾಲಘೋಸ್‌ರವರೂ, ಲಕ್ನೋ ಅಡ್ವೋಕೇಟ್ ಪತ್ರಿಕೆಯ ಸಂಪಾದಕರಾದ ರಾ॥ ಗಂಗಾಪ್ರಸಾದ ವರ್ಮರವರೂ ಮೊನ್ನೆ ಮದ್ರಾಸಿಗೆ ಬಂದಿದ್ದರು ಅಲ್ಲಿನ ಮಹಾಜನರು ವಿಶೇಷವಾದ ಗೌರವದಿಂದ ಇವರುಗಳನ್ನು ಸತ್ಕರಿಸಿದರು.

ಬೊಂಬಾಯಿಯಲ್ಲಿ ಸಾಂಘಿಕ ಸೇವಾ ಸಂಘದವರು ನಿಮ್ನಜಾತಿಯವರ ಮನೆಗಳಿಗೆ ಪುಸ್ತಕಗಳನ್ನು ಓದುವುದಕ್ಕೆ ಕಳಿಸಿಕೊಟ್ಟು, ಅವರಲ್ಲಿ ವಿದ್ಯಾಭಿರುಚಿಯನ್ನುಂಟುಮಾಡಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅಲ್ಲಿನ ದಾಮೋದರದಾಸ ಗೋವರ್ಧನದಾಸರವರು ಇದುವರೆಗೆ ೩ ಸಾವಿರ ರೂ. ಗಳನ್ನು ಕೊಟ್ಟಿದ್ದಾರೆ.

೧೯೧೦ ನೆಯ ವರ್ಷದ ರಿಪೋರ್ಟಿನ ಪ್ರಕಾರ ಭರತಖಂಡದಲ್ಲೆಲ್ಲಾ ಆ ವರ್ಷ ೨೩ ಲಕ್ಷ ಎಕರೆಯ ತರಿ ವ್ಯವಸಾಯವು ನಡೆದಿರುವುದಂತೆಲೂ. ೬ ವರಿಂದ ೩೪ ಕೋಟಿ ರೂ. ನ ಬೆಳೆಸು ಉತ್ಪನ್ನವಾಗಿರುವುದೂ ಗೊತ್ತಾಗುತ್ತದೆ. ಅದರಲ್ಲಿ ಆಂಗ್ಲ ಸರ್ಕಾರದವರಿಗೆ ಉತ್ಪತ್ತಿಯನ್ನು ಕೊಡತಕ್ಕ ಭೂಮಿಯೇ ೧ ಕೋಟಿಯ ೮೧ ಲಕ್ಷ ಎಕರೆಯ ಭೂಮಿಗಳಾಗಿದ್ದುವು.

ವೈಟ್ ಆನರಬಲ್ ಮಾಂಟೆಗ್‌ರವರು ಲಾಹೋರು ಪಟ್ಟಣಕ್ಕೆ ಹೋಗಿದ್ದಾಗ್ಗೆ ಗೌರ್ನಮೆಂಟ್ ಕಳಾಶಾಲೆಯನ್ನೂ, ದಯಾನಂದ ಆಂಗ್ಲೋ ವೈದಿಕ ಕಳಾಶಾಲೆಯನ್ನೂ, ಕ್ರೈಸ್ತರ ಶಾಲೆಯನ್ನೂ ನೋಡಿ ಬಂದರು ದಯಾನಂದ ಶಾಲೆಯಲ್ಲಿ ಸಂಸ್ಕೃತಾಭ್ಯಾಸಕ್ಕೆ ಬೇರೆ ತರಗತಿಗಳನ್ನೇ ಏರ್ಪಡಿಸಿದ್ದಾರೆ. ಅಧಿಕಾರಿಗಳಿಗೆ ಸ್ಥಳಾನ್ನೂ ಆಹಾರವನ್ನೂ ಉಚಿತವಾಗಿ ಕೊಟ್ಟು ಅಲ್ಲಿ ಪಾಠಗಳನ್ನು ಹೇಳುವರು

ನೇಪಾಳದೇಶದ ಮಂತ್ರಿಯವರು ೧೯೦೯ ನೆಯ ವರ್ಷದಲ್ಲಿ ೩೩೩೦ ಸಂಸ್ಕೃತಲೇಖನದ ಗ್ರಂಥಗಳನ್ನು ಆಕ್ಸ್‌ಫರ್ಡ್ ವಿದ್ಯಾಪೀಠಕ್ಕೆ ಬಹುಮಾನವಾಗಿ ಕಳುಹಿಸಿಕೊಟ್ಟಿದ್ದರು. ಈಗ ಇವರು ತಮ್ಮ ಸ್ವಂತದ ಪುಸ್ತಕಗಳಲ್ಲಿ ೩೦ ಗ್ರಂಥಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ ಇವೆಲ್ಲವೂ ತಾಳೆಯೋಲೆಗಳಲ್ಲಿ ಬರೆಯಲ್ಪಟ್ಟ ಅಮೂಲ್ಯಗ್ರಂಥಗಳಾಗಿವೆ, ಇವುಗಳಲ್ಲಿ ೩೦ ಗ್ರಂಥಗಳು ಕ್ರಿ॥ ಶ॥ ೭೦೦ ರ ಕಾಲದ ೧೧೦೦ ವರ್ಷಗಳ ಮಧ್ಯದಲ್ಲಿ ರಚಿತವಾಗಿರುವುವಂತೆ.

ಕಳೆದ ತಾ॥ ೧೩ ರಲ್ಲಿ ಬೊಂಬಾಯಿ ಗೌಡ ರೋಡ್,

ಬೊಂಬಾಯಿ ಪಟ್ಟಣದಲ್ಲಿ ಸರ್ ಜೆ	೬೦
ದ ವರ್ಣಿಸಲ್ಪಟ್ಟಿರುವ ಪು	೮೨
ದಿನ್ನುಗಳನ್ನು ಮೋಕ್ಷವನ್ನು	೬೮
ಕಣ್ಣಿನ ವಾಡಿಕೆಗಳಲ್ಲಿ	೫೭

ಪಾರ್ಲಿಮೆಂಟಿನ ಸಭೆಯು ಪಡೆಗೆ ಬೇಕಾದ ಹೊರೆಯಾದ ಸಹಾಯಕವಾದ ಕೈಗಾರಿಕೆ-ವ್ಯಾಪಾರ ಮೊದಲಾದ ಶಿಕ್ಷಣಗಳೂ ಕೊಡಲ್ಪಡುವುವು ಈ ಶಾಲೆಗೆ ಸಂಬಂಧಿಸಿದಂತೆಯೇ ವಿದ್ಯಾರ್ಥಿಗಳ ವಸತಿಗಾಗಿ ಮನೆಗಳೂ, ಭೋಜನಶಾಲೆಯೂ ಸಹ ಸ್ಥಾಪಿಸಲ್ಪಟ್ಟಿವೆ

ಕಳೆದ ತಾ॥ ೨೦ ರಲ್ಲಿ ಅಯೋಧ್ಯೆಯಲ್ಲಿ ನಡೆದ ಬಕ್ರೀದ್ ಹಬ್ಬದದಿನದ ಮಹಮ್ಮದೀಯರು ಗೋವಧೆಯನ್ನು ಮಾಡುವ ವಿಚಾರದಲ್ಲಿ ಅವರುಗಳಿಗೂ ಹಿಂದುಗಳಿಗೂ ನಡೆದ ಕಲಹವನ್ನು ಪೋಲೀಸರು ಗುಂಡನ್ನು ಹೊಡೆದು ಅಡಗಿಸಬೇಕಾಗಿ ಬಂದಿತು ಈ ಸಂದರ್ಭದಲ್ಲಿ ಇಬ್ಬರು ಹಿಂದುಗಳೂ, ಒಬ್ಬ ಮಹಮ್ಮದೀಯನೂ ಗುಂಡೇಟನ್ನು ತಿಂದು ಸತ್ತರು, ಮತ್ತೂ ೫೦ ಜನ ಹಿಂದುಗಳೂ ೧೫ ಜನ ಮಹಮ್ಮದೀಯರೂ ಗಾಯಪಟ್ಟರು ಇವರಲ್ಲದೆ ಅನೇಕ ಪೋಲೀಸರಿಗೆ ಸಣ್ಣ ಅಪಘಾತಗಳು ಇಲ್ಲದಂತಾಗಿರುವುದಾಗಿಯೂ, ಕೆಲ ಪೋಲೀಸರಿಗೆ ಸೆರೆಹಿಡಿಯಲ್ಪಟ್ಟಿರುವುದಾಗಿಯೂ ತಿಳಿದುಬಂದಿದೆ

ಭರತಖಂಡದ ಸರ್ಕಾರದ ಮುಖ್ಯಾಧಿಕಾರಸ್ಥಾನಗಳಲ್ಲಿ ವಿಶೇಷ ... ಸಹ ಈ ಕೆಳಕಂಡ ಸಂಖ್ಯೆಯಂತೆ ಇರುತ್ತಾರೆ ಬಂಗಾಳಾ ಆಧಿಪತ್ಯದಲ್ಲಿ—ಯೂರೋಪ್ಯರು ೧೩೭ ಮಂದಿ, ಹಿಂದುಗಳು ೧೦ ಮಂದಿ, ಬೊಂಬಾಯಿ ... ದಲ್ಲಿ ಯೂರೋ... ಮಂದಿ, ಹಿಂದೂ ಮಂದಿ. ... ಆಧಿಪತ್ಯದಲ್ಲಿ ಯೂ... ಮಂದಿ, ಹಿಂ... ಮಂದಿ ... ೧೧೧ ... ಸಂಯುಕ್ತರಾಷ್ಟ್ರಗಳಲ್ಲಿ—ಯೂ... ಮಂದಿ ... ಮಧ್ಯಪ್ರಾಂತಗಳಲ್ಲಿ—ಯೂ... ಮಂದಿ ... ಪಂಜಾಬಿನಲ್ಲಿ ಯೂ... ಮಂದಿ ... ಒಟ್ಟು ೧೨೯೩ ಮಂದಿ ಸಿವಿಲಿಯನ್ನರಲ್ಲಿ ... ಯೂರೋಪ್ಯರೂ, ೫೬ ಮಂದಿ ದೇಶೀಯರೂ ಇರುವರು.

ವಿದೇಶವೃತ್ತಾಂತಗಳು.

ಸೆಪ್ಟೆಂಬರ್ ತಿಂಗಳ ... ದ ಈ ತಿಂಗಳು ತಾ॥ ... ರ ವರೆಗೆ ೦ ಕೋಟಿಯೂ ... ಲಕ್ಷ ರೂ ... ಬೆಂಕಿನಾಲೆಯಲ್ಲಿ ಮಡಿಸಿದ್ದಾರೆ

ಆಂಗ್ಲರ ಆಧಿಪತ್ಯದಲ್ಲಿರುವ ದಕ್ಷಿಣ ಆಫ್ರಿಕಾದಲ್ಲಿ ... ಮಂದಿ ಯೂರೋಪ್ಯರೂ, ... ಮಂದಿ ಹಿಂದೂ ದೇಶೀಯರೂ ವ್ಯಾಪಾರಿಗಳಾಗಿರುವರು

ಲಂಡನ್ ಪಟ್ಟಣದಲ್ಲಿರುವ ನಮ್ಮ ದೇಶೀಯರು ಅಲ್ಲಿ ಕಳೆದ ದೀಪಾವಳಿಯ ಹಬ್ಬವನ್ನು ಚೆನ್ನಾಗಿ ನೆರವೇರಿಸಿ, ಆ ಸಮಯದಲ್ಲಿ ಒಂದು ಸಭೆಯನ್ನು ಸ್ಥಾಪಿಸಿದರು

ಜೇನಾದವರನ್ನು ದಯಾವಂತನನ್ನಾಗಿ ಗೌರವಿಸುವುದು ತಮ್ಮ ಅಭಿಪ್ರಾಯವೆಂತಲೂ, ಇವರು ಶಾಸ್ತ್ರಜ್ಞರಿಗಿಂತಲೂ ಎಲ್ಲಾ ವಿಷಯದಲ್ಲಿಯೂ ಕಡಿಮೆಯಾದವರಲ್ಲವೆಂತಲೂ, ಈಗ ಅವರಿಗೆ ಯೂರೋಪ್ಯರಿಗೆ ಸಮಾನವಾದ ಗೌರವವನ್ನು ಕೊಟ್ಟು ಬೇರಾದ ವ್ಯವಹಾರಕ ವಿಷಯಗಳಲ್ಲಿ ಸೇರಿಸುವುದಕ್ಕಾಗಿ ಒಂದು ಸಭೆಯನ್ನೇರ್ಪಡಿಸಬೇಕೆಂದಿರುವೆವೆಂದಾಗಿಯೂ ಪಾಶ್ಚಾತ್ಯರಿಗೆ ಮಂತ್ರಿಯವರು ಹೇಗ್ ಪಟ್ಟಣದಲ್ಲಿ ಸೂಚಿಸಿರುವರು

ಕಾಗದದ ಉಪಾಯಗಳು ಅತ್ಯಂತ ಶುಚಿಯಾಗಿರುವಂತೆ ಅಮೇರಿಕಾದ ಅನೇಕ ಪಾಠಶಾಲೆಗಳಲ್ಲೂ ಭೋಜನಶಾಲೆಗಳಲ್ಲೂ ಅವನ್ನೇ ಉಪಯೋಗಿಸುತ್ತಾರೆ. ಅವನ್ನು ಒಂದಾವೃತ್ತಿಗಿಂತ ಹೆಚ್ಚಾಗಿ ಉಪಯೋಗಿಸಲಾಗುವುದಿಲ್ಲ. ಶ್ರೇಷ್ಠವಾದ ಕಾಗದದ ರುಮಾಲನ್ನು ನಿರ್ಮಿಸುವವನಿಗೆ ಉತ್ತಮವಾದ ಬಹುಮಾನವನ್ನು ಕೊಡುತ್ತೇವೆಂದು ಜರ್ಮನಿಯವರು ಪ್ರಕಟಿಸಿದ್ದಾರೆ ಇಂಥ ರುಮಾಲು ಸಿದ್ಧವಾದ ಬಳಿಕ ಅವರು ತಮ್ಮ ದೇಶದಲ್ಲೆಲ್ಲಾ ಅದನ್ನೇ ವ್ಯವಹಾರಕ್ಕೆ ತರುವವರಾಗಿದ್ದಾರೆ.

ಅಮೇರಿಕಾದ ಚಿಕಾಗೋನಗರದಲ್ಲಿ ಜಾಕ್ ಜಾನ್ಸನ್ ಎಂಬ ನೀಗ್ರೋಜಾತಿಯವನೊಬ್ಬನು ಒಬ್ಬ ಬಿಳಿಯರಾಗಿರುವ ಅಮೇರಿಕನ್ ತರುಣಿಯನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋಗಿ, ಮನೆಯಾ ಅವಳನ್ನು ... ಬಂಧನದಲ್ಲಿರಿಸಿದ್ದನು ... ಅಧಿಕಾರಿಯವರಿಗೆ ಹೊಣೆಯಾಗಿ ಬಿಡಲ್ಪಟ್ಟು, ಬೇಟಾರು ಬಂಡಿಯ ಸ್ಟೇಷನ್ ತನ್ನ ಮನೆಗೆ ಹೋಗುತ್ತಿದ್ದನು. ಆಗ ಕೋಪಾಂಗನಾದ ಅಲ್ಲಿನ ಜನರು ದೇವಾಲಯದಲ್ಲಿ ... ಕಡಿಮೆಯಾಗಿರುವ ನೀಗ್ರೋನನ್ನು ಹಿಡಿದು ಸುಟ್ಟುಬಿಡ ಬೇಕೆಂದು ಹವಣಿಸುತ್ತಿದ್ದರು, ತಾ ಜಾತಿಯನ್ನು ಹಾಗೆ ಸುಟ್ಟುಬಿಡುವುದೆಂದು ಆಲೋಚಿಸುವ, ಕಲ್ಲುಗಳನ್ನು ತೂರಿದವರನ್ನು ಅವನವರೇ ಎದುರುಕ್ಕಲು ಪ್ರಾಣಭಯದಿಂದ ... ಅವನು ಹೇಳಿಕೊಂಡು ... ಎಂಬ ... ಹೊತ್ತಿಗೆ ...

೫. ಜನರ ಗುಂಪು ಅ	ಗಂಗನೆ
೮. ಗೌಡನ್ನು ಮುಟ್ಟಿ	ಕಾಣದ
ಗಟ್ಟಿಯಾಗಿ ಕೆಡಿಸಿದ್ದರೆ	ಪಾರಾದ
ಪ್ರಾಣವನ್ನು ಉಳಿಸಿಕೊ	

ಹಬ್ಬವನ್ನು ಕೊಂಡಾಡಿದರು, ಈ
ಪ್ರಪಂಚದ ಪ್ರಾಣಿಗಳು ಸಂತೋಷ
ಕೊಡ ಗೋವಿಂದನೇ ಗಾ

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದ್ದು.—ಪ. ಪ್ರ.

ಪತ್ರವ್ಯವಹಾರವು.

ಪ್ರಕಟನೆ

ಯಾವತ್ತು ಜನರಿಗೆ ತಿಳಿಸುವುದೇನಂದರೆ.— ಶಿವಯೋಗಮಂದಿರದ ಹೆಸರನ್ನು ಹೇಳಿಕೊಂಡು ಕೆಲವು ಕುಲಕಂಟಕರು ಹಳ್ಳಿಗಳಲ್ಲಿ ದುಡ್ಡು ಎಳೆಯುತ್ತಿದ್ದಾರೆಂದು ನಮಗೆ ತಿಳಿದು ಬಂದಿರುತ್ತದೆ. ಆದುದರಿಂದ ಇಂಥ ಮೋಸಕ್ಕೆ ಯಾರೂ ಒಳಗಾಗಬಾರದು. ಇಂಥವರ್‍ಯಾರಾದರೂ ಬಂದರೆ ಅವರ ಸರ್ಟಿಫಿಕೇಟು ತೆಗೆದುಕೊಂಡು ಇಲ್ಲಿಗೆ ಕಳುಹಿಸಬೇಕು. ಇಲ್ಲಿಂದ ನಿಜವಾಗಿ ಬರತಕ್ಕವರಲ್ಲಿ ಇಲ್ಲಿಯ ಮೋಹರನಿಸಿ ಪಾವತಿಗಳು ಇದ್ದೇ ಇರುವುವು. ಮೋಸಗಾರರ ಬಲೆಗೆ ಬೀಳಬಾರದೆಂದು ಇದನ್ನು ಪ್ರಸಿದ್ಧಮಾಡಿಸಿದೆ.

ಶಿವಯೋಗಮಂದಿರ } ಶಿವಬಸಪ್ಪ ಆದಪ್ಪಾ ಮಾ. ಗ.
ತಾ|| ೧೫-೧೧-೧೯೧೭ } ವ್ಯವಸ್ಥಾಪಕ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವ.

ಪೂನಾ ಪಟ್ಟಣದ ವೀರಶೈವ ಪ್ರಮುಖರು ಆಬಾಲವೃದ್ಧರಿಗೆ ದರ್ಶನಾಶೀರ್ವಾದಗಳನ್ನಿತ್ತು ಪುನೀತರನ್ನಾಗಿ ಮಾಡಲು ನಮ್ಮ ಪಟ್ಟಣಕ್ಕೆ ಬಿಜಯಂಗೈಸಬೇಕೆಂದು ಪ್ರಾರ್ಥಿಸಿದಂತೆ ಸನ್ ೧೯೧೭ ನೆಯ ಇಸವಿ ನವಂಬರ್ ತಾ|| ೧೩ ರಲ್ಲಿ ಶ್ರೀಮಂತ ಇಂದೂರ ಸರ್ಕಾರದ ಭಯ್ಯಾಸಾಹೇಬರವರ ವಿಶಾಲವಾದ ಬಂಗ್ಲೆಗೆ ಪ್ರಾತಃಕಾಲದ ೧೦ ಗಂಟೆಗೆ ಮಹಾ|| ಸ್ವಾರಿಯು ಎಲ್ಲಾ ಅಬಾಬು ಸಮೇತವಾಗಿ ಬಿಯಮಾಡೋಣವಾಯಿತು. ಅನಂತರ ಮಹಾ|| ಪೂಜ್ಯಪಾದರವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಪೂನಾ, ನಾಶಿಕ, ಸೊಲ್ಲಾಪುರ, ಬಾರ್ಶಿ, ಬೆಳಗಾಂವ, ವಿಜಾಪುರ, ಬಾಗಲಕೋಟ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಮೊದಲಾದ ಸ್ಥಳಗಳ ಮಹಾಜನಂಗಳು ಚಂದ್ರನಂ ಕಂಡ ಚಕೋರಗಳಂತೆ ಆನಂದಭರಿತರಾಗಿ ವಂದನಾದಿಗಳಿಂದ ಸತ್ಕರಿಸಿದರು. ಆ ಧರ್ಮಗುರು ಶ್ರೇಯೋಭಿವೃದ್ಧಿಯನ್ನು ಕುರಿತು ಸಂಭಾಷಿಸಿ ಮಂಗಳಾಶೀರ್ವಾದಗಳನ್ನಿತ್ತು ಮಧ್ಯಾಹ್ನಕಕ್ಕೆ ದಯಮಾಡಿಸಿದರು.

ಈ ಮೊದಲು ನಿರ್ದೇಶಿಸಲ್ಪಟ್ಟಂತೆ ತಾ|| ೧೮ ನೆಯ ಗುರುವಾರ ಪ್ರಾತಃಕಾಲದ ೭ ಗಂಟೆಯಲ್ಲಿ ಪೂನಾ ಪಟ್ಟಣದ ಮಹಾಜನಗಳ ಪ್ರಾರ್ಥನೆಯಂತೆ ಅತ್ಯಂತ ವಿಚಿತ್ರವಾಗಿ ಶೃಂಗರಿಸಿದ ಪಂಚಕಲಶಯುಕ್ತವಾದ ಪಲ್ಲಕ್ಕಿಯಲ್ಲಿ ಮಹಾ|| ಪೂಜ್ಯಪಾದರವರು ಮುಹೂರ್ತಗೊಳ್ಳಲು ಜಯಘೋಷದೊಡನೆ ಸಮಸ್ತ ಭಕ್ತಮಂಡಳಿಯವರು ಕೆಲಸಾತನಂಗೈದರು. ಕಾಶೀಕ್ಷೇತ್ರ ಸೊಲ್ಲಾಪುರ ಪಾಠಶಾಲಾ ವೈದಿಕಶಾಸ್ತ್ರ ಮಂಡಳಿಯು ವೇದಘೋಷವು ಪ್ರಾರಂಭಿಸಿತು. ಬ್ಯಾಂಡ್, ಸೂರ್ಯ ಚಂಪ್ರಾದ್ಯನೇಕ ವಾದ್ಯಂಗಳು [illegible] ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಸಾಹೇಬರವರು ಈ ಮಹೋತ್ಸವವು ಕ್ರಮವಾಗಿ ನಡೆಯಲು ತಕ್ಕ ಏರ್ಪಾಡುಗಳನ್ನು ಏರ್ಪಡಿಸಿದ್ದರು. ಅಡ್ಡಪಲ್ಲಕ್ಕಿ, ಪಂಚಕಲಶಯುಕ್ತ ಶ್ವೇತಛತ್ರ, ಮಕರ ತೋರಣ, ಹಗಲು ದೀವಟಿಗೆ, ಮೋರ್ಛಲು, ಕಾವಿನಿಶಾನಿ, ಕಾವಿಯಬಂಡ್ಯಾ, ಉಭಯ ಚಾಮರ, ಗಜಬಾನಸರ ಈ ಮುಂತಾದ ಸಕಲ ಬಿರುದಾವಳಿಗಳೊಡನೆ ಕ್ರಮಪಟ್ಟು ತಳಿರುತೋರಣ, ರಂಗವಲ್ಯಾದಿ ಚಿತ್ರಗಳಿಂದ ಅಲಂಕೃತವಾದ ಪ್ರಾಟಿಗಂಜು, ವೇತಾಳಪೇಟೆ, ಬುಧವಾರಪೇಟೆ, ರವಿವಾರಪೇಟೆ ಮೊದಲಾದ ವೀಧಿಗಳಲ್ಲಿ ಅತ್ಯಂತ ವಿಜೃಂಭಿತವಾದ ಜನ ಸಂದೋಹದೊಡನೆಯೂ, ಶಿವಕೀರ್ತನಸಂಗೈಯುವ ಭಜನ ಮಂಡಳಿಯೊಡನೆಯೂ ಸಂಚರಿಸುತ್ತಿರುವ ಮಹೋತ್ಸವವನ್ನು ನೋಡಿದ ಭಕ್ತಾದಿಗಳು [illegible] ಪ್ರಾಂತ ಪ್ರಸಂಗಗಳನ್ನಿತ್ತು [illegible] ಸೊಲ್ಲಾಪುರದ ವ|| ರಾ|| ಜೇರಿಕೆಯವರು ಅಲ್ಲಲ್ಲಿ ಈ ಮಹೋತ್ಸವದ ಭಾವಚಿತ್ರಗಳನ್ನು ತೆಗೆಯುತ್ತಿದ್ದರು. ಮಹೋತ್ಸವವು ಸಾವಕಾಶವಾಗಿ [illegible] ರಂಗಳಿಂದ [illegible]

ಟಿಂಪೆಯವರು	ಇಂಥ ಸಂಭ್ರಮ
ಪ್ರಸ್ತಕೆಶೆಯಾದ	[illegible] ೧೭ ಗಂಟೆ
[illegible]	[illegible]
[illegible]	[illegible]

ರಣ, ಅತಾ, ಪುಷ್ಪ, ಸಂರಣಿ ಕಾರಣಿ, ರಂಗವಲ್ಯಾದಿ, ನಾನಾವಿಧ ವಿಚಿತ್ರಗಳಿಂದಲೂ, ಕಲಶ, ಕನ್ನಡಿ, ಪತಾಕೆಗಳಿಂದಲೂ, ಶೃಂಗರಿಸಿದ ನೂತನವಾದ ದಿವ್ಯಮಂದಿರಕ್ಕೆ ಮಹಾ|| ಸ್ವಾರಿಯು ಬಿಜಯಮಾಡಿಸಿ ಫಲ, ಪುಷ್ಪ, ಕರ್ಪೂರದೀಪಾರತಿಗಳಿಂ ಕೈಕೊಂಡು ಅತಿ ವಿಚಿತ್ರವಾಗಿ ನಿರ್ಮಿಸಲ್ಪಟ್ಟ ಸಿಂಹಾಸನದಲ್ಲಿ ಮಂಡಿಸಲು ಸಮಸ್ತ ದೇಶ ಭಕ್ತಾದಿಗಳು ಜಯಘೋಷದೊಡನೆ ಕರತಾಡನಗೈದರು. ಅನಂತರ ವೇ|| ಮಣೂರ ಮಠದ ಮಲ್ಲಿಕಾರ್ಜುನ ಶಾಸ್ತ್ರಿಗಳವರಿಂದ ವೇದೋಕ್ತ ಮಂಗಲವಾಯಿತು. ತರುವಾಯ ವ|| ರಾ|| ಸೊಲ್ಲಾಪುರದ ಚಪ್ಪಳಗಿ ಸಿದ್ಧರಾಮಪ್ಪನವರು, ವೇ|| ಮಿರ್ಜಿ ಸಣ್ಣತಮ್ಮಪ್ಪಶಾಸ್ತ್ರಿಗಳವರು ಮಹಾ|| ಪೂಜ್ಯಪಾದರವರ ಮಹಿಮಾಗಮನದ ವಿಷಯವಾಗಿ ಮಹಾರಾಷ್ಟ್ರ ಭಾಷೆಯಿಂದ ಉಪನ್ಯಾಸಗೈದರು. ಮಹಾ ಸಂಸ್ಥಾನದ ಪಾರುಪತ್ತೇಗಾರ್ ವ|| ರಾ|| ಲಿಂಗಪ್ಪನವರು ಸಂಸ್ಥಾನದ ಆತಳಕೆಯ ವಿಷಯವಾಗಿ ಕನ್ನಡದಲ್ಲಿ ಉಪನ್ಯಾಸ ಮಾಡಿದರು. ಮಹಾ|| ಪೂಜ್ಯಪಾದರವರು ಕರ್ಣಾನಂದ ಸರಿತರಾಗಿ ಆಗಮಿಸಿದ ಮಹಾ ಜನಂಗಳಿಗೆ ಮಂಗಳಾಶೀರ್ವಾದಂಗೈದರು. ಈ ಮಹೋತ್ಸವಕ್ಕಾಗಿ ಅಂದಾಜು ಪರಸ್ಥಳೀಯರು ೮ ಸಹಸ್ರ ಜನರು, ಸ್ಥಳೀಯರು ೩೦ ಸಹಸ್ರ ಜನರು ಸೇರಿದ್ದರು. ತಾ|| ೧೫ ನೆಯ ಶುಕ್ರವಾರ ಪ್ರಾತಃಕಾಲದ ೮ ಗಂಟೆಯಲ್ಲಿ ಸಭೆಯು ಸೇರಿ ಮಹಾ|| ಪೂಜ್ಯಪಾದರವರಿಂದಲಂಕರಿಸಿತ್ತು. ಈ ಸಭೆಗೆ ಹುಕ್ಕೇರಿ ಶ್ರೀ|| ಶಿವಲಿಂಗದೇವರು, ವೇ|| ಸೊಲ್ಲಾಪುರದ ಪಾಠಶಾಲಾಧ್ಯಾಪಕರಾದ ಜಗದೀಶಶಾಸ್ತ್ರಿಗಳು, ವೇ|| ಮಣೂರ ಮಲ್ಲಿಕಾರ್ಜುನಶಾಸ್ತ್ರಿಗಳು, ವೇ|| ಬಾರ್ಶಿ ಮಹೇಶ್ವರಶಾಸ್ತ್ರಿಗಳು, ವೇ|| ಬಾರ್ಶಿ ಗಂಗಾಧರಶಾಸ್ತ್ರಿಗಳು, ವೇ|| ದಾವಣಗೆರೆ ಹಿರೇಮಠದ ರುದ್ರಪ್ಪಶಾಸ್ತ್ರಿಗಳು, ಹರಿಹರದ ವೇ|| ಮಹೇಶ್ವರಶಾಸ್ತ್ರಿಗಳು, ವೇ|| ಮಿರ್ಜಿ ಸಣ್ಣತಮ್ಮಪ್ಪಶಾಸ್ತ್ರಿಗಳು ಈ ಮೊದಲಾದ ವಿದ್ವಾಂಸರು ನಾನಾ ದೇಶಗಳ ಶ್ರೀಮಂತರು, ವರ್ತಕರು, ಇನ್ನೂ ಮುಂತಾದವರು ಆಗಮಿಸಿದ್ದರು. ಮಹಾ|| ಪೂಜ್ಯಪಾದರವರ ಆಜ್ಞಾನುಸಾರವಾಗಿ ಬಾರ್ಶಿ ವೇ|| ಗಂಗಾಧರಶಾಸ್ತ್ರಿಗಳು, ಸೌ|| ಸೊಲ್ಲಾಪುರದ ಪಾಟೀಲ್ ಭಾಗೀರಥಿಬಾಯಿಯವರು, ವೇ|| ಮಿರ್ಜಿ ಸಣ್ಣತಮ್ಮಪ್ಪಶಾಸ್ತ್ರಿಗಳು ಅಷ್ಟಾವರಣ ವಿಷಯವಾಗಿ ಮಹಾರಾಷ್ಟ್ರ ಭಾಷೆಯಿಂದ ಉಪನ್ಯಾಸಮಾಡಿದರು. ತರುವಾಯ ಮಹಾ|| ಶ್ರೀ ಶ್ರೀ|| ಗಳವರು ಲಿಂಗಧಾರಣಾದಿ ವೀರಶೈವ ಧಾರ್ಮಿಕ ವಿಷಯಗಳನ್ನು ವೇದಾಗಮೋಪನಿಷದಾದಿ ಶಾಸ್ತ್ರಾಧಾರಂಗಳೊಡನೆ ಸವಿಸ್ತಾರವಾಗಿ ಮಹಾರಾಷ್ಟ್ರ ಭಾಷೆಯಿಂದ ಅಪ್ಪಣೆಕೊಡಿಸಿದರು.

ಮಹಾ|| ಪೂಜ್ಯಪಾದರವರ ಅಡ್ಡಪಾಲಕಿ ಮಹೋತ್ಸವವನ್ನು ಮಹಾರಾಷ್ಟ್ರ ಪ್ರದೇಶಗಳಲ್ಲಿ ಕೈ|| ರಾ|| ಬ|| ವಾರದ ಮಲ್ಲಪ್ಪನವರು ನೆರವೇರಿಸಬೇಕೆಂದಿದ್ದ ಇಷ್ಟದಂತೆ ವ|| ರಾ|| ಶ್ರೀಮಂತ ಮಹಾಕಿ ಚನ್ನಬಸಪ್ಪನವರು, ಕೈ|| ಅಪ್ಪಾಸಾಹೇಬರವರ ಪ್ರತಿನಿಧಿಗಳಾದ ವ|| ರಾ|| ಪಾಟೀಲ ಮಲ್ಲಿಕಾರ್ಜುನಪ್ಪನವರು, ಸೊಲ್ಲಾಪುರ ಕಿರೀಟ ಮಠದ ಶ್ರೀಮನ್ನಿರಂಜನ ನಿಜಗುಣಸ್ವಾಮಿಗಳು ಸಹ ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ಪೂನಾಪಟ್ಟಣದಲ್ಲಿ ಮಹೋತ್ಸವವು ನೆರವೇರಲು ತಕ್ಕ ಸಹಾಯ ಸಾಧನೆಗಳನ್ನು ಮಾಡಿ ದಿಗಂತ ವಿಶ್ರಾಂತ ಕೀರ್ತಿಯನ್ನು ಪಡೆದಿರುವರು. ಬ್ರಿಟಿಷ್ ಗವರ್ನಮೆಂಟಿನ ಅಧಿಕಾರಿಗಳು ಈ ಮಹೋತ್ಸವವನ್ನು ಸಾಂಗೋಪಾಂಗವಾಗಿ ನೆರವೇರಿಸಿರುವುದು ಇವರಲ್ಲಿ ಪಕ್ಷಪಾತವಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ಇದರಂತೆ ಮೈಸೂರು ಗವರ್ನಮೆಂಟಿನಲ್ಲಿ ಮಾತ್ರ ಜರುಗದಿರುವುದಕ್ಕೆ ಏನು ಕಾರಣವೋ ಮಾಚಕರೇ ಯೋಚಿಸಬೇಕು.

ತಾ|| ೧೩-೧೧-೧೭. } ಪ್ರತ್ಯಕ್ಷದರ್ಶಿ.
ಪೂನಾ. }

ಶ್ರೀಮಜ್ಜಗದ್ಗುರು ಉಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ಸಿದ್ಧಲಿಂಗರಾಜ ದೇಶಿಕೇಂದ್ರ ತೀರ್ಥಪಾದಂಗವರ ತಿರ್ಯಗಾಂದೋಳಿಕ ಮಹೋತ್ಸವವು

ಸ್ವೈಹಾಂ ಇಲಕಲ್ಲಿನೊಳಗೆ ವೀರಶೈವ ಬಾಂಧವ್ಯದಿಂ ಪಾತ್ರವಿಂತ ಪದವಿಯಂ ಸ್ವೀಕರಿಸಿ ಕಲ್ಬುರ್ಗಿ ಅಥವಾ ಗುಲ್ಬರ್ಗಾ ನಾಮವಂ ವಹಿಸಿ ಕರ್ಣಾ ಭಾಷಾದಿ ಮಹಿಮರಿಗಾಸ್ಪದವಾಗಿ ಪವಿತ್ರವಾದ ಈ ಗುಲ್ಬರ್ಗಾ ವೀರಶೈವ ಮಹಾಮಂಡಳಿಯು ಶಿವಾನುಭವಸಾಮ್ರಾಜ್ಯಾಧಿಕಾರಿಗಳಂತ ಒಂದು ವರ್ಷಕ್ಕೆ [illegible] ಪ್ರಾರ್ಥನೆಯಂ ಸ್ವೀಕರಿಸಿ,

ದ್ರಾವಿಡ	ಕಾರ್ತಿಕ ಶುದ್ಧ ೩ ಬುಧ
ರ ಶಿವ	ವಾರ ಶ್ರೀ [illegible]
ಪುರಾತ	ಪೂರ್ವಾಹ್ನದಲ್ಲಿ [illegible]
	[illegible] ಮೆಂಟಿನವರಿಂದ

ಕಾರಭಾರದಾರ ಪಗಳಿಬನ್ನಿ ಬೆನ್ನೂರಮಠದ ಚಂದ್ರಶೇಖರಶಾಸ್ತ್ರಿಗಳು ಅಡ್ಡಪಲ್ಲಕ್ಕಿ ಪಗೈರೆ ಬಿರುದಾವಳಿ ಸಮೇತ ಮಹೋತ್ಸವಕ್ಕೆ ಹುಕುಂ ಪಡೆದೇ ಇದ್ದರು. ಮತ್ತೂ ಬಿಜಯಂಗೈಸಿದ ಜಗದ್ಗುರು ಮಹಾಸ್ವಾಮಿ ಪಾದಕ್ಕೆ ಇಷ್ಟ ಕಾಲ್ಯಸಮರ್ಪಣೆಗೆ ಯೋಗ್ಯವಾದ ವಿಶ್ರಾಂತಿ ಮಂಟಪದ ಶಾಲನ್ನು ರಮಣೀಯವಾಗಿ ರಚಿಸಿದ್ದರು. ಸದರಿ ಹಾಸಿಗೆ ಮಹಾಪಾದರ ಆಗಮನದೊಳಗೆಯೇ ಶರಣಬಸವೇಶ್ವರ ಸಂಸ್ಥಾನ ಸರ್ವಾಧಿಕಾರಿಗಳು ವೀರಶೆಟ್ಟಪ್ಪನವರು, ಆ ಪಮಾನ ಗಂಜಿಗುಡಿ ವೀರಪ್ಪಯ್ಯನವರು, ಶಾಂತವೀರಪ್ಪ, ಪಂಶಿಮಠ-ಹಿರೇಮಠ-ಜೂಲಪೇಟೆ ಮಠಗಳ ಶ್ರೀಗಳವರು ಬೊಳ್ಳದ ಕಟ್ಟಿಮನಿಮಠದ ಪಟ್ಟದ ಸಿದ್ಧಲಿಂಗದೇವರು ಮುಂತಾದ ವೀರಶೈವ ಮಹಾಮಂಡಳಿಯಲ್ಲದೆ, ಹಜರತ್ ಬಂದೇನವಾಜ ರೋಜಾಧಿಕಾರಿಗಳಾದ ಬಡಾಗೀರದಾರ ಸೈಯದಾಂ ವಾದಶಹರಿಂ ಪೂಜ್ಯರಾದ ಮೌಲ್ವಿ ವಲಿಲ್ಲಾ ಹುಸೇನಿ ಸಜ್ಜಾದೆಯವರು, ತಮ್ಮ ಪೋಲೀಸು ಸಿಬ್ಬಂದಿ ಎಂತಾತ್ತಲ ಕಂದುಕಗಳನ್ನು ಪ್ರೀತಿಯ ಮರ್ಯಾದೆಗೋಸ್ಕರ ಕಳುಹಿದ್ದರು. ಮೊಹತೀಮಾಮ ಸಾಹೇಬ ಪುರುಷ ಸೂಪರಿಂಟೆಂಡೆಂಟರು ಬಿಗಲ್ ವಾದ್ಯ ಸಮೇತ ಕೋರ್ಟ್ ಇನ್ಸ್‌ಪೆಕ್ಟರ್ ಶಹರ ಬಂದೋಬಸ್ತ ಅಮೀನರು ಅಥವಾ ಇನ್ಸ್‌ಪೆಕ್ಟರ್ ತಾಲೂಕ ಅಮೀನರು ಎಲ್ಲಾ ಠಾಣಾದ ಜಮಾದಾರಂಗಳು ಮತ್ತೂ ತಾಲೂಕದಾರರ ಅಥವಾ ಜಲ್ಲಾ ಕಲೆಕ್ಟರ್ ಕಡೆಯಿಂದ ಕಳುಹಿಸಲ್ಪಟ್ಟ ಮಾಲಿಸೈನ್ಯ ಅಂದರೆ ಅರಬ-ಸಿಂದಿ-ಪಠಾಣ-ತೆಲಂಗಿ-ನವಾರ ರೆಂಟಜಂಟ- ಪೋಲೀಸ್ ಈ ಮೇಲ್ಕಂಡ ಸೈನ್ಯ ೩೦೦ ರರವರೆಗೂ ಆಯುಧ ಸಮೇತವಾಗಿದ್ದು ಇಂತೀ ೭೦೦ ಪೋಲೀಸ ಸಂಘವು ೫೦೦ ಇರಬಹುದು. ಮೌಲ್ವಿ ಅಹಮ್ಮದ ಮಿಯ್ಯಾ ಸಾಹೇಬರು ವಕೀಲಾಂ ಮೌಲ್ವಿ ಷೇಕ್ ಅಹಮ್ಮದ ವಕೀಲರು ಮುಂತಾದ ಮಹಮ್ಮದೀಯ ಮಹಾಸಂಘವೂ-ರಾಜ ಬಹದ್ದೂರು ದೇವರಾವ್ ದೇಶಮುಖ ಇವರ ಸಿಬ್ಬಂದಿಯೂ ಏಕಸಂಘವಾಗಿ ಬ್ಯಾಂಡ ನೌಬತ್ತು ಭಾಜಿ ಘೇರು ಮುಂತಾದ ಅನೇಕ ವಾದ್ಯಗಳೊಡನೆ ಜಗದ್ಗುರು ಮಹಾಪಾದವು ವಿಶ್ರಾಂತಿಗೊಂಡಿದ್ದ ಹಾಳಿಗೆ ಯೋಗ ಸಾಷ್ಟಾಂಗ ಬಿನ್ನಹ ಪೂರ್ವಕ ಇಷ್ಟಕಾಲವನ್ನು ಸಮರ್ಪಿಸಿ, ವಿಜಯಾಭಿಲಾಷೆಯಿಂ ಪ್ರಾರ್ಥಿಸಿದ ಮಹಾಮಂಡಳಿಯ ಪ್ರಾರ್ಥನೆಯಂ ಸ್ವೀಕರಿಸಿ, ಕುಬೇರ ಪುಷ್ಪಕದಂತೆ ಸ್ವರ್ಣಕಳಶ ಸಿಂಹ ಮುಖಾಲಂಕೃತಾಂದೋಳವನ್ನು ಆರೋಹಿಸಿದ ಕಾಲದಲ್ಲಿ ಜಯಘೋಷವು ದಿಗ್ವ್ಯಾಪ್ತಿಯಂ ಭೇದಿಸಿತು. ಆ ತಿರ್ಯಗಾಂದೋಳ ಅಥವಾ ಅಡ್ಡಪಾಲಕಿಯ ಎಡಬಲ ಹಿಂದುಮುಂದು ಶ್ವೇತಛತ್ರ ಹಗಲ ದೀವಟಿಗೆ ಮಾಹಿನಮರ್ತಬು ಮಕರ ತೋರಣ ಮೋರ್ಬಲು ಸಿಂಧ ಸೀಗುರಿ ಮುಂತಾದನಂತ ಬಿರುದಾವಳಿಯಿಂದಲೂ, ವೈದಿಕ ಪಂಡಿತರಾದ ಯಡರಾಮಿ ಚನ್ನಬಸವಶಾಸ್ತ್ರಿ ಶರಣಯ್ಯಾ ಪುರಾಣಿಕ ಧಾರವಾಡ ಜಿಲ್ಲಾ ಹಸ್ತೂರು ಹಿರೇಮಠದ ಬ್ರಹ್ಮಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರಿ ಮುಂತಾದವರ ವೇದಘೋಷದಿಂದಲೂ ಜಯಮಾನವಾದ ಸೈನ ಪ್ರಾಥಮಿಕವಾದ ಮಹಾದ್ವಾರ ಪ್ರವೇಶವಾದ ಕೂಡಲ ಚಮತ್ಕಾರ ಯಂತ್ರದಿಂ ಸುರಿಸಲ್ಪಟ್ಟ ಹುಸ್ಸಿನ ಮಳೆಯು ದೇವತೆಗಳಿಂ ಕರೆಯಲ್ಪಟ್ಟ ಪುಷ್ಪವೃಷ್ಟಿಯಂ ಧಿಕ್ಕರಿಸಿತು. ಬಾಜಾರವು ತಳಿರು ತೋರಣ ರಂಭಾಸ್ತಂಭ ರಂಗವಾಲಿಗಳಿಂ ಮೊದಲಿಂ ಮೇಲ್ಭಾಗದವರೆಗೂ ಚಮತ್ಕಾರ ದೀಪಿಕೆಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಇಂಥಾ ಸಡಗರದ ರಾಜಬೀದಿಯಲ್ಲಿ ಅಡ್ಡಪಾಲಕಿಯ ಮಹೋತ್ಸವವಂ ನೋಡಲು ಬಂದಿದ್ದ ಜನಸಂಖ್ಯೆಯು ಅಪಾರವಾಗಿತ್ತು. ಇಂಥ ಬಾಹ್ಯಾಡಂಬರ ಮಹೋತ್ಸವವು ಬಿಡದಿಲ್ಲದೆ ಹಾರಿಸುತ್ತಿರುವ ತರಾಬಿನ್ ತುಪಾಕಿ ಜಯುಳಿಗಳ ಘೋಷವು ಬ್ರಹ್ಮಾಂಡವಂ ಭೇದಿಸುತ್ತಿತ್ತು. ಸದರಿ ಮಹಾದ್ವಾರದಿಂ ಚೌಕಿ ಚಾಂದಿನ ಬಳಿಗೆ ಪ್ರತ್ಯಕ್ಷವಾಗುವ ಮಂಗಲಾಚರಣ ಪುಷ್ಪವೃಷ್ಟಿಯಂ ವಿಧಿಯಂಗೈದು ಅಲ್ಲಿಂದ ಕಿಲ್ಲೆಯ ಮಹಾದ್ವಾರವಂ ದಾಟಿ ಕಿಲ್ಲೆಯ ಪಾರ್ಶ್ವದಿಂದ ರಚಿಸಲ್ಪಟ್ಟ ವೀಧಿಯನ್ನು ಹಾದು ಬಡೇ ಬಾಜಾರದ ಗೋಲಕಟ್ಟೆಯಿಂದ ಶಹಾಬಜಾರ ಪರ್ಣಮಠಕ್ಕೆ ದಯಮಾಡಿಸಿ ಮೊದಲಾಗಿಯೇ ಪರ್ಣಮಠದ ಚನ್ನಮಲ್ಲಯ್ಯ, ಪಾಳ್ಯ ಕಟ್ಟಿಮನಿ ಮುಂಗಳನಾಗಾವಿ ಮಠದ ಸಿದ್ಧಲಿಂಗಾರ್ಯರಿಂದಲೂ, ಭಕ್ತರಿಂದಲೂ ನಿರ್ಮಿಸಲ್ಪಟ್ಟ ಸ್ವರ್ಣಮಯಾಲಂಕರಿಸಲ್ಪಟ್ಟ ಸಭಾಮಧ್ಯದಲ್ಲಿ ಮಹಾದೇವ ಪೀಠದಿಂದೆಸೆವ ದಿವ್ಯಸಿಂಹಾಸನವಂ ಜಗದ್ಗುರು ಮಹಾಪಾದವಾರೋಹಿಸಿದ ಕೂಡಲೆ ಜಯಧ್ವನಿ ಗಗನವಂ ತುಂಬಿತು. ಬಳಿಕ ಮಂಗಲಾಚರಣ ಪುಷ್ಪವೃಷ್ಟಿಯಂ ಸಮರ್ಪಿಸಿ ಎಲ್ಲರೂ ಆಜ್ಞೆಯಿಂದ ಮಂಡಿಸಲು,

ಜಗ [illegible] ಕೊಡಿಸಿದ ಆವಾದ ಪ್ರಸಾದ
[illegible] ಸಂತುಷ್ಟರಾಗಿ ಅಪ್ಪಣೆಯ
[illegible] ಸ್ವಸ್ವಸ್ಥಳಗಳಿಂ ತೆರಳಿ
[illegible] ಪ್ರತ್ಯಕ್ಷದರ್ಶಿ.

ಭರತಖಂಡದ ಅನೇಕ ಮಹಾರಾಜರಿಂದ ಬಹುಮಾನಿಸಲ್ಪಟ್ಟ

ಎಂ. ಆರ್. ಸುಬ್ಬಾಜೆಟ್ಟಪ್ಪನವರ ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

9

ಕೇಸರಿಮಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಾ ಬೇರೆ ಇನ್ನಾವುದೂ ಇಲ್ಲ. ಅಲ್ಲದೆ ಮಿದುಳಿಗೆ ಬಹು ತಂಪಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನೂ ಆನಂದಪಡಿಸುತ್ತದೆ. ಬೆಲೆ ಸುಲಭ. ಸೀಸೆ ೧ ಕ್ಕೆ ೦-೩-೦.

ನಿಂಬಜಾಂಬಾ ಹೇರ್‌ಆಯಿಲ್ ಸೀ. ೧ಕ್ಕೆ ೦-೮-೦.

ನಂ.	ರೂ.		ರೂ.
೧. ಅಂಬರ್‌ಬತ್ತಿ ಸೇ೧ಕ್ಕೆ	೩	ಕಸ್ತೂರಿಬಿಲ್ಲೆ ಜೋಡಿಕ್ಕೆ	೨
೨. ಅಂಬರ್‌ಬತ್ತಿ ,,	೮॥	ಜವಾಜಿಲ್ಲೆ ,,	೧
೧. ಕಸ್ತೂರಿಬತ್ತಿ ,,	೨॥	ಅರಗಜ ,,	೧
೧. ಪುನಗುಬತ್ತಿ ,,	೧	ಸುರಂಗಿಸೆಂಟ್ ಸೇ೧ಕ್ಕೆ	೧
೧. ಗುಲಾಬಿಬತ್ತಿ ,,	॥	ಮಾಲತಿಸೆಂಟ್ ,,	॥।

ಎಂ. ಆರ್. ಸುಬ್ಬಾಜೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ, ಮೈಸೂರ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಶಿವಪೂಜಾವಿಧಿ	೦—೧೦—೦
ಪರವಾದಿಗಜಾಂಕುಶತಾರಾವಳಿ	೦—೪—೦
ಬ್ರಾರುಶೀಲಿ ಚರಿತ್ರೆ	೨—೫—೦
ಸಟೀಕ ಕರ್ನಾಟಕ ಶಬ್ದಮಂಜರಿ	೦—೮—೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿಕೃತ)	೦—೮—೦
ಸಟೀಕ ಸಂಧೀವ್ರತ	೦—೮—೦
ಸಟೀಕ ವಿವಾಹವಿಧಿ	೦—೩—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯುವೆಚ್ಚ ಬೇರೆ.

ಸ್ವದೇಶಿ! (ರಕ್ತವೀರ್ಯವರ್ಧಕ) ಸ್ವದೇಶಿ!

1 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರಮಿ, ಟಾಕ, ಕುಷ್ಠಪ್ರವೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳೂ, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ್ಯ ಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಿಸಿದ ಪತ್ರಿಕೆಯನ್ನು ಔಷಧದ ಸಂಗಡಲೇ ಕಳಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವ ಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:— ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ, ಜಿಲ್ಲ ಉತ್ತರಕನ್ನಡ.

ಸತ್ಯಾರ್ಥಪ್ರಕಾಶ.

(ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.)

The Greatest treasure of true Vedic Principles

ಗಳಿಗೆ ಪವಿತ್ರ ಸಂಬಂಧವು ಮ
ವೇದದ ಮತ್ತು ಪರಮೇಶ್ವ
ರನ ಓಂಕಾರಾದಿ ಮಹತ್ವಗ!
ಶಿಕ್ಷಣ ಪದ್ಧತಿಯೂ, ಬ್ರಹ್ಮಚರ

ಸೃಷ್ಟಿಗರ್ಭ ವರ್ಣನೆಯೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಮತ್ತು ಅಂತ್ಯಜರಿಗೆ, ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ, ಸ್ಥಿತಿ, ಮತ್ತು ಪ್ರಳಯಗಳ ವಿಚಾರವೂ, ಬಂಧಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚೆನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ಸನಾತನ ವೈದಿಕ ಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತು ರೂ. ೧-೪-೦. ಚಂದಾದಾರರಿಗೆ ರೂ ೧-೮-೦. ಟಪಾಲ್ ಖರ್ಚ ಬೇರೆ ಪುಟ ೫೩೦

ಸತ್ಯಾರ್ಥ ಪ್ರಕಾಶ

(೧೧ ನೇ ಅಧ್ಯಾಯದ [illegible] ಭಾಷಾಂತರ)

ಇದರಲ್ಲಿ ಆರ್ಯಾವರ್ತ [illegible] ದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ, ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ, ಅದ್ವೈತಮತ, ಮೂರ್ತಿ ಪೂಜೆ, ತಪ್ತ ಮುದ್ರಾಧಾರಣೆ, ಗಯಾ ಶ್ರಾದ್ಧ, ಪುರಾಣ, ಫಲ ಜ್ಯೋತಿಷ, ಬ್ರಾಹ್ಮ ಸಮಾಜ ಪ್ರಾರ್ಥನಾ ಸಮಾಜ ಮುಂತಾದ ಬಹಳ ಪಂಥಗಳ ಪರೀಕ್ಷಣವು ಮಾಡಿದೆ. ಕಿಮ್ಮತು ಆಣೆ ೪ ಚಂದಾದಾರರಿಗೆ ಆಣೆ ೩ ಮಾನು ಹೆಚ್ಚು ಅಚ್ಚುಪತ್ರದ ಪುಟ ೧೯೦, ಟಪಾಲು ಖರ್ಚ ಬೇರೆ

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ.ಎ, ಎಲ್.ಎಲ್. ಬಿ, ಹೈಕೋರ್ಟ್ ವಕೀಲ್, ರಂಗೂನ್ ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು ಇದರ ಪಲಿಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ:— ಎಸ್. ಎಲ್. ಧಾಕಪ್ಪನವರ
ಪೋಸ್ಟ ಶಿರ್ಸಿ, ಜಿಲ್ಲಾ ಉತ್ತರ ಕನ್ನಡ.

---

17 ಮದನಮಂಜರೀ ಮಾತ್ರೆಗಳು

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವುದು ಮುಂತಾದ ಸಕಲ ಮೂತ್ರ ಪಿಂಡರೋಗಗಳನ್ನು ನಿರ್ಮೂಲಮಾಡುವುದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವುವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನು ದೀರ್ಘಾಯುಷ್ಯವನ್ನು ಮುಖಕ್ಕೆ ಒಳ್ಳೇ ಕಾಂತಿಯನ್ನೂ ಉಂಟುಮಾಡುತ್ತವೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳೂ ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೩೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧—೦—೦.

ಬೆಟ್ಟಿ! ವೈದ್ಯವಿದ್ಯಾ ಪುಸ್ತಕ

ಸಂಪೂರ್ಣಾರೋಗ್ಯವನ್ನು, ದೀರ್ಘಾಯುವನ್ನು, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುಃಖವ್ಯಾಧಿಗಳಿಂದಲೂ ತಪ್ಪಿಸಿಕೊಳ್ಳುವುದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯಸಿದ್ಧಿ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲುಗು, ಕನ್ನಡ, ಇಂಗ್ಲೀಷ್ ಮುಂತಾದ ೪ ಭಾಷೆಗಳಲ್ಲಿ ದೊರೆಯುವುದು. ಕೋರಿದವರಿಗೆ ಕ್ರಯವು ಅಂಚೆ ಹಾಸಲು ಸಹ ಇಲ್ಲದೆ, ಮುಫತ್ತಾಗಿ ರವಾನಿಸಲ್ಪಡುವುದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳಿಸಿ ಈ ವರೆಗೂ ೩೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಹಿಂದೆ ಕಾರ್ಡ ಬರೆಯಿರಿ.

ರಾಜವೈದ್ಯ ನಾರಾಯಣಜೀ ಕೇಶವಜೀ.
ಆಯುರ್ವೇದೋಷಧಾಲಯ ಔಷಧಾಲಯ,
೧೫೩, ಜೇನಾಬಜಾರ್
ಮ

---

22 ಕಾಶೀ ವಿಶ್ವೇಶ್ವರಪ್ರಸನ್ನಾ.

ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀ ಕ್ಷೇತ್ರ ಕಾಶಿಯಲ್ಲಿ ತಯಾರಾಗುವ ರೇಶಿಮೆ ಜರಿ ರೇಶ್ಮೆಸೀರೆ, ಪೀತಾಂಬರ, ಶಾಲು, ಕಾಶ್ಮೀರ [illegible] ಕೆಲಸದ ಮುಂತಾದ ವಸ್ತ್ರಗಳು ಜರಿ ರೇಶ್ಮೆ, [illegible] ಮುಂತಾದ ವಸ್ತುಗಳು, (ಇವರಲ್ಲಿ [illegible] ಉತ್ತಮವಾಗಿ [illegible] ನಿಜವಾದ [illegible], ಸ್ಫಟಿಕದ, ಬಾಣಲಿಂಗ, ರುದ್ರಾಕ್ಷಿ [illegible], ಅನೇಕ ವಿಧವಾದ ಅತ್ತರುಗಳು, ವಿವಿಧವಾದ ಪದಗಳು ಪಕ್ಕದ [illegible] ಎಲ್ಲರಿಗಿಂತಲೂ ಸಹಜಬೆಲೆ ಯೋಗ್ಯವಾದ [illegible] ಉತ್ತಮವಾದ ಸಾಮಾನುಗಳನ್ನು [illegible] ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯದ ವಿವರ ತಿಳಿಯಬೇಕಾದರೆ [illegible] ಕಾರ್ಡ [illegible] ಕಾಶೀ ವಿಶ್ವೇಶ್ವರನ [illegible] ನಮ್ಮ ಕಂಪನಿ ವಿಳಾಸದ ಕಾರ್ಡ ಇವುಗಳನ್ನು ತಾವು ಬರೆದು ಕಳುಹಿರುವ ವಿಳಾಸಕ್ಕೆ ಕಳುಹಿಸುವೆವು [illegible] ತರಿಸಿಕೊಳ್ಳಲಾರೆವು.

ವಿಳಾಸ— ಮ್ಯಾನೇಜರ್,
[illegible] ಕಂಪೆನಿ,
ಬನಾರಸ್ ಸಿಟಿ.

ಕಾರ್ಬೋಲಿಕ್ ಸಾಬೂನು.

25

"ಅಪಾಯವಿಲ್ಲದ ರೋಗನಿವಾರಿ."

ಈ ಸಾಬೂನನ್ನು ರೋಗವಿರುವ ಸ್ಥಳದಲ್ಲಿ ಹಚ್ಚಿದರೆ ಕ್ರಿಮಿಗಳೊಳಗಾಗಿ ರೋಗವು ಮಾಯವಾಗುವುದು. ಚರ್ಮಕ್ಕೆ ಸಂಬಂಧಿಸಿದ ಬಾಧೆಗಳಿಲ್ಲವು ಎಂದು ಸದಾ ಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0

3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0

ಅಂಚೆ ಹಾಸಲು 0—4—0

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ ಷಾ ಅಂಡ್ ಕೋ.,
177 ಜೇನಾಬಜಾರ್ ರೋಡ್, ಮದ್ರಾಸ್.

ಮಧುರವಾಣೀ.

31 ವಾರ್ಷಿಕ ಚಂದಾ ೧—೪—೦

ಇದರಲ್ಲಿ ಕಾವ್ಯ, ನಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿನೋದಗಳಿಂದ ಕೂಡಿದ ಪಂಡಿತಪ್ರಿಯ ನಾಟಕ ಕಾದಂಬರಿ, ಜೀವನಚರಿತೆ ಮುಂತಾದ ಕಾವ್ಯಸಮಗ್ರಗಳೂ, ಸಾಮಾಜಿಕ, ನೀತಿ, ಮತ, ಮತ್ತು ವಿಷಯಗಳ [illegible] ಉಪನ್ಯಾಸಗಳೂ, [illegible] ವಿಷಯಗಳೂ, ಬೇರೆ ಬೇರೆ [illegible] ಪ್ರತಿಯೊಂದು ತಪ್ಪದೆ ಪ್ರಕಟವಾಗುವವು. ಮಾದರಿ ಸಂಚಿಕೆಗಳು [illegible] ಬೇಡಿರಿ. [illegible] ವಿನಂತಿ [illegible] ದೊರೆಯುವುದು. [illegible]

[illegible]

ಹೊಸ ಪುಸ್ತಕಗಳು.

61
ಪಾಲ್ಕುರಿಕೆ ಸೋಮೇಶ್ವರಪುರಾಣಂ ಪ್ರಸಿದ್ಧರಾದ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನು ಸಂದರ್ಭಾನುಸಾರ ಅನೇಕ ಪುರಾಣಕಥೆಗಳನ್ನು ನಿರೂಪಿಸುವ ೩೦೦ ಪುಟಗಳುಳ್ಳ ಕನ್ನಡದ ಗ್ರಂಥ ಬೆಲೆ ವಿ. ಪಿ ೧-೩-೦

ದೇವೀಕಾಲೋತ್ತರಾಗಮದ ಜ್ಞಾನಾಚಾರ ಬೋಧಕ ಪಟಲವು-ಶಿವಜ್ಞಾನ ಶಿವಾಚಾರ ವಿಷಯವನ್ನು ನಿರೂಪಿಸುವ ಸಟೀಕ ಗ್ರಂಥ ಬೆಲೆ ೦-೪-೦

ಪಂಚಶ್ಲೋಕಿ-ಶಿವಾಧಿಕ್ಯವನ್ನು ಅನಂತ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉತ್ತಮಗ್ರಂಥ ಬೆಲೆ ೧-೦-೦

ಬಸವರಾಜ ವಿಜಯಂ— ಬೆಲೆ ೧-೪-೦ ಬಾಲಕರು ಕೂಡ ಓದಿ ತಿಳಿದುಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿ ಬರೆಯಲ್ಪಟ್ಟಿವೆ

ಚೆನ್ನಬಸವೇಶವಿಜಯಂ— ೧-೮-೦ ಇದು ವಚನರೂಪವಾದ ಚೆನ್ನಬಸವಪುರಾಣ

ವೀರಶೈವ ಧರ್ಮಶಿರೋಮಣಿ— ೧-೨-೦ ವೀರಶೈವ ಮತಸ್ವರೂಪವನ್ನೂ, ತದ್ಧರ್ಮವೂ, ನಿರೂಪಿತವಾಗಿವೆ ಸವ್ಯಾಖ್ಯಾನ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ— ಒಬ್ಬ ವೀರಶೈವ ಮತಾಚಾರ್ಯರ ಚರಿತ್ರೆ ಕನ್ನಡ ಟೀಕಿನಿಂದ ಕೂಡಿದೆ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧-೦-೦

ಸೌಂದರರಾಪುರಾಣಂ ೧ ೩-೦ ಸೌಂದರನಂಬಿಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಕಾವ್ಯ

ಸಟೀಕ ತತ್ವಪ್ರಕಾಶಿಕೆ ೦-೩-೦. ಸಿದ್ಧಾಂತಾನುಸಾರವಾಗಿ ೩೩ ತತ್ವಗಳ ಸ್ವರೂಪವನ್ನು ನಿರೂಪಿಸುವುದು

ಸಟೀಕ ಶತಸೂತ್ರರತ್ನಂ— ಜ್ಞಾನದೀಕ್ಷಾವಿಶೇಷ ಲಕ್ಷಣವಂ ನಿರೂಪಿಸುವುದು ಬೆಲೆ ೩ ಆಣೆ

ಸಟೀಕ ದೀಕ್ಷಾವಿಧಿ— ೦-೧-೦ ಸ್ತುತಿಮುಕ್ತಾವಳಿ ೦-೩-೦ ರಕ್ಷಾಶತಕ— ೦-೨-೦. ಶಂಕರಲಿಂಗಕಂದಂ ೧ ಆ

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವುವು ವರ್ಷದಚಂದಾ ೨-೮-೦

ಯಂ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು

ಊದಬತ್ತಿಗಳು.

37
ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೩-೦-೦, ೩-೦-೦; ೨-೮-೦, ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿಗಂಧ ತೊಲಾ ೧ ಕ್ಕೆ ೧೧ ಆಣೆ; ದಶಾಂಗಪುಡಿ ೧ ಕ್ಕೆ ೪ ಆಣೆ, ಧೂಪದಗಟ್ಟಿ ೧ಕ್ಕೆ ೨ ಆಣೆ; ಬಾಲಗ್ರಹಧೂಪ ಡಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಲ್. ಉಪಾಧ್ಯಾಯ,
ಸುಗಂಧಿಕಾರಿ, ಮೈಸೂರು.

ಶ್ರ
ಗಂಧರಾಜ ನಶ್ಯದಪುಡಿ



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ದಶ್ಕೆ ಕಟ್ಟುವುದು, ಕೆಟ್ಟವಾಸನೆ ಬರುವದು, ಶೀತ, ನೆಗಡಿ ಉಸಿರುಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರುತುಂಬಿ ಭಿಮ್ಮೆನ್ನುವುದು ಈ ರೋಗವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮಿದುಳಿಗಾಗಲಿ ಕೆಡುಕಿಲ್ಲ ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ ೧ ಡಬ್ಬಿಯ ಬೆಲೆ ೩ ಆಣೆ ೧ ಡಜನ್ ಡಬ್ಬಿಗಳಿಗೆ ೨-೧೪-೦

ಉತ್ತಮವಾದ ನಶ್ಯದಪುಡಿ

ಘಾಟು ಸಹಜವಾದ ವಾಸನೆಗಳಿರುವ ಒಳ್ಳೇ ಹೊಗೇಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ ವಾಂತಿ ಗಂಟಲಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ ಒಂದೇಸೊಂದಾವೃತ್ತಿ ಪರೀಕ್ಷಿಸಿ ನೋಡಿದರೆ ಇದರ ಮಾತಿನ ನಿಜವು ತಿಳಿಯುತ್ತದೆ ೨೮ ತೊಲೆ ತೂಕದ ಸೇರಿಗೆ ೧ ಆಣೆ ೪ ಸೇರಿಗೆ ೨-೮-೦

ಮಂಚೋಲ್ಲಾಸಿನಿ ಹೊಗೆಸೊಪ್ಪು

ಬಾಯಿ, ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ ನೀವು ಉಪಯೋಗಿಸುವ ಎಲೆ ಹೊಗೆಸೊಪ್ಪಿಗೆಬದಲಾಗಿ ಖಾರ-ರುಚಿ-ವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ ೧ ಡಬ್ಬಿಗೆ ೪ ಆಣೆ ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್ ಖರ್ಚು ಬೇರೆ

ವಿಳಾಸ— ಕೆ ಮಲ್ಲಿಕಾರ್ಜುನಸೆಟ್ಟಿ,
ಗೋಪನಸೆಟ್ಟಿಪುರ, ಹನೂರು ಪೋಸ್ಟ್,
ಕೊಳ್ಳೇಗಾಲದ ತಾಲ್ಲೂಕು.

ಶೀತಕಾಲ.

16
ಪ್ರಭಾಕರ ಚೂರ್ಣ,— ಇದರ ಸೇವನೆಯಿಂದ ಗೂರಲು, ಉಬ್ಬಸ, ಶ್ವಾಸಕಾಸ ಕಫಕ್ಷಯ, ನೆಗಡಿ, ಕೆಮ್ಮು, ಅಸ್ಥಿಜ್ವರ, ಮಾತನಾಡುವಾಗ ಉಗುಳಿಕೆ, ನಾಲಿಗೆ ಒಣಗುವಿಕೆ, ಮತ್ತು ದೋಷ ಕಂಡುಬಂದರೆ, ನೀರಿನ ದೋಷಗಳು, ಸ್ವರಕೋಶದ ಎಲ್ಲಾ ಉಪಹತಿಗಳನ್ನು ಖಂಡಿತವಾಗಿ ತಕ್ಷಣದಲ್ಲಿ ಪರಿಹರಿಸಿ ಹಿತವನ್ನುಂಟುಮಾಡುತ್ತೆ ೮ ತೊಲ ದಬ್ಬಿ ೧ ಕ್ಕೆ ಬೆಲೆ ರೂ. ೨-೦-೦, ವಿ ಪಿ ಬೇರೆ

ಪಂಡಿತ ಶ್ರೀಕಂಠಯ್ಯ.
ಬೀರೂರು.

ಪಂಡಿತ ಎಸ್. ಗುರಳಪ್ಪ ರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
1.9
ಮೈಸೂರು.

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೩-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು ೧೨ ಮಾತ್ರೆ ಸೀಸೆ ೧-೪-೦, ೨೪ ಮಾತ್ರೆ ಸೀಸೆ ೦-೮-೦

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲೆಗೊಳ್ಳುವುದು. ಇದು ಅನ್ಯತತ್ಕೃ ಸಮಾನ ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ ಸುಮಾರು ೨೦ ಸಲಕ್ಕೆ ಆಗುವ ಔಷಧ ಡಬ್ಬಿ ೦-೪-೦ ತೊಲೆ ೧ ಕ್ಕೆ ೧-೮-೦

ಪತ್ರಶೆಖರ ಗರ್ಭಮಾತ್ರೆ— ಇದರಿಂದ ಗರ್ಭ ನೆಟ್ಟಿಯೂ ಕಾರಕವೂ ಕಟಿಪಿಯಾಗಿ ಬೇಗಕ್ಕೆ ತಯಾಗುತ್ತದೆ ೧೦ ಮಾತ್ರೆ ಸೀಸೆ ೦-೬-೦

ಅಶೋಕ ನಗಾರಾಯನು— ಮೂಲವ್ಯಾಧಿ ಪೀಡಿತರಿಗೆ ಇಗು ಸಂಜೀವ. ಸೇರಿನ ತಬ್ಬಿ ೧-೮-೦

ಶ್ವೇತಪಂಚಲೇಹ್ಯ—ಮೇಹಜಾತ್ಯಗಳಲ್ಲಿ ಬಹಳ ಖ್ಯಾತಿಯಿಂದ ಔಷಧಿ ಸೇರಿನ ಡಬ್ಬಿ ೪-೦-೦ ೧೦ ದಿನಗಳ ಔಷಧ ೨-೦-೦

ಸುಖಭೇದಿ ಮಾತ್ರೆ—೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೫೪ ಮಾತ್ರೆ ಸೀಸೆ ೦-೩-೦

ಮಲಶೋಧನ ವಟಿಕಾ—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ ೩೦ ಮಾತ್ರೆ ಸೀಸೆ ೦-೮-

ಕಸ್ತೂರಿಮಾತ್ರೆ—ತಾಂಬೂಲದೊಡನೆ ಉಪಯೋಗಿಸತಕ್ಕದ್ದು ೩೦ ಮಾತ್ರೆ ಸೀಸೆ ೦-೪-೦,

ಪುರುಷ ಸಂಜೀವಿನಿ— ೨೦ ಮಾತ್ರೆ ಸೀಸೆ ೨-೦-೦

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦

ಅಜೀರ್ಣಮಾತ್ರೆ— ೪೦ ಮಾತ್ರೆ ಸೀಸೆ ೦-೧೦-೦

ದಂತಶುದ್ಧಿ ಚೂರ್ಣ—ಡಬ್ಬಿ ೧ಕ್ಕೆ ೦-೩-೦

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೇಯ ಇಸವಿ ನವಂಬರ್ ತಾ॥ ೨೫ ರಿಂದ ೧೯೧೨ ನೆ ಡಿಸೆಂಬರ್ ತಾ॥ ೧ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೪ ನೆಯ ಪರೀಧಾವಿ ಸಂವತ್ಸರದ ಕಾರ್ತೀಕ ಬ॥ ಪಾಡ್ಯಮಿಯಿಂದ ಕಾರ್ತೀಕ ಬ॥ ಸಪ್ತಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶೇದಿ ವೃಶ್ಚಿ
25	ಸೋಮ	ಪಾ	35-42	ರೋಹಿ	46-2	11
26	ಮಂಗ	ಬಿ	31-57	ಮೃಗಶಿ	38-13	12
27	ಬುಧ	ತ	27-34	ಆರಿದ್ರ	35-5	13
28	ಗುರು	ಚ	22 24	ಪುನರ್ವ	31-37	14
29	ಶುಕ್ರ	ಪಂ	16-52	ಪುಷ್ಯ	27-39	15
30	ಶನಿ	ಷ	10 57	ಆಶ್ಲೇಷ	23-30	16
1	ಭಾನು	ಸ	5-1	ಉಭರಿ	54-6	17

(1) ಕಾರ್ತೀಕ ಸೋಮವಾರ, ತಿರುವಣ್ಣಾಮಲೈ ದೀಪ ಕೃತ್ತಿಕಾನಕ್ಷತ್ರಂ, (2) ಸಂಕಟಹರ ಚತುರ್ಥಿ, ತ್ರಿಶೂಲಪಾಶುಪತಿ, (8) ಷಷ್ಠೀವ್ರತ.

ಡೈರಿಗಳು !   ಸನ್ ೧೯೧೩ ನೇ ಇಸವಿಯ   ಡೈರಿಗಳು !!

1
೧೯೧೩

೧೯೧೩

ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು.
ಮೊದಮೊದಲೇ ಬರೆದು ತರಿಸಿಕೊಳ್ಳಿರಿ!

ನಂ. ೧. ಸಣ್ಣಸೈಜು ಸಾದಾಡೈರಿ ೧ ಕ್ಕೆ .. ೦-೪-೦
ನಂ. ೨ ಸಣ್ಣಸೈಜು ಪೆನಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೧ ಕ್ಕೆ ೦-೬-೦
ನಂ. ೩. ದೊಡ್ಡಸೈಜು ಸಾದಾಡೈರಿ ೧ ಕ್ಕೆ .. ೦-೧೨-೦
ನಂ. ೪. ದೊಡ್ಡಸೈಜು ಪೆನಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೧ ಕ್ಕೆ ೦-೮-೦

ಒಂದೇಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿಕೊಂಡರೆ ಒಂದು ಇನಾಮು

(೧) ಈವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲುಹಾಕಿಸಿ ಸೊಗಸಾದ ಕ್ಯಾಲಿಕೊ (ಬಟ್ಟೆಯ) ಬೈಂಡು ಮಾಡಿಸಿರುತ್ತದೆ

(೨) ದೇಶಪಾಶ್ಚ್ಯವಿಭಾಗದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ನಮೂದಿಸಿರುತ್ತದೆ. ಪಂಚಾಂಗ, ಕ್ಯಾಲೆಂಡರ್ ರಾಹುಕಾಲ ಗುಳಿಕಕಾಲಗಳು, ಸಂವತ್ಸರ ಫಲಗಳು, ಗ್ರಹಣ, ಶಕುನ ಭಾಗ, ಪ್ರಯಾಣವಿಷಯ, ಜಾತಕರ್ಮ ಮೊದಲು ಷೋಡಶಕರ್ಮಕ್ಕೆ ಬೇಕಾದ ಲಗ್ನಾದಿಗಳು, ಶ್ರೀಕೃಷ್ಣ ಚಕ್ರ ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತದೆ.

(೩) ಕೋರ್ಟ್‌ಫೀಸ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತೊಂದು ಡೈರಿಯಲ್ಲಿ ಬೇಕಾಗಿರುವ ಹೊಸ ವಿಷಯಗಳನ್ನೂ ಕೂಡ ಸೇರಿಸಿದೆ

(೪) ಮದರಾಸ್ ಮತ್ತು ಸದರ್ನ್‌ಮರಾಟಾ ರೈಲ್ವೆಗಳ ಛಾರ್ಜ್, ರೈಲು ಹೊರಡುವ ಕಾಲ, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ಸಂಬಳ, ಗವರ್ನ್‌ಮೆಂಟ್ ರಜಾದಿನಗಳು, ಹಿಂದಿನ ಸಂವತ್ಸರಗಳಿಗೆ ಸರಿಯಾದ ಇಂ ...

ಪೋಟೊಗಳನ್ನು, ಜಾತಕ ಕೆ. ... ಮಾಡಲ್ಪಟ್ಟಿರುತ್ತದೆ.

... ಶೇಕಡಾ ಕಮೀಷನ್, ... ಪ್ರಯಾಣದ ವಿಷಯ ... ಬೇರೆ.

... ಶ್ರೀ ಸೀತಾರಾಘವ ಪ ...

... ರುತ್ತ ... ಚಾರ ...

ಮೈಸೂರು ...
ಪ್ರೆಸ್ಸಿನಲ್ಲಿ ಮುದ್ರಿತ

... ಪ್ಯಾರ್

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಕ್ರಯ ೧—೮—೦ } ...ಜನಕೋತ್ಪನ್ನಗರೀತಾರಾ ಪರಮಧಿಗತರಾಜಮಂಡಲಶೋಭಿತಾ । ... ತನ್ಮಧ್ಯಸ್ಥಿತಾವತಾರಾ ಪತ್ರಿಕಾ ಸಸ್ಯಶ್ಯಾಮಲಮೋಹಕರಾಜೀಯವಾರ್ತಾ ॥ ... { ಅಂಚೆಕೂಲಿ ಸೇರಿ ೧—೧೫—೦

ಮೈಸೂರ್ ಸ್ಟಾರ್ ಸನ್ ೧೯೦೦ ನೆಯ ಇಸವಿ ಡಿಸೆಂಬರ್ ತಾರೀಖು ೨ ನೆಯ ಸೋಮವಾರ. (ಸಂಚಿಕೆ ೪೭. ಸಂಪುಟ ೧೧)

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳ ವಿವರಿ.

ಸುಲಭಕ್ರಯಗಳು! ಅಲಕ್ಷ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯದು ಸಂತೋಷಪಡುವಿರಿ!!! ಪರೀಕ್ಷಿಸಿರಿ!!

ರಾಸ್ಕೋಪ್ ಸಿಸ್ಟಂ ಪೇಟೆಂಟ್ ಲಿವರ್ ಜ್ಯೂವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಾಗಿದೆ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸು ಮುಚ್ಚಳವುಳ್ಳ ಇದನ್ನು ನೋಡುವುದಕ್ಕೆ ಬಹು ರಮಣೀಯವಾಗಿದೆ, ಬಹು ದೃಢವಾದುದು ದೀರ್ಘಕಾಲ ಬಾಳಿಕೆಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಗಡಿಯಾರವು. ಇದಕ್ಕೆ ೪ ವರ್ಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಡಿಮೆಯಾದ ಗಡಿಯಾರವನ್ನು ರೂ. ೩—೮—೦ ಬೆಲೆಗೆ ಮಾರುತ್ತಾರೆ. ಕಾರಣ ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವುದು.

ಕ್ರಯ ರೂ. 2—8—0 ವಿ. ಪಿ. ಪಿ. ಚಾರ್ಜು ರೂ. 0—4—0.

ಸ್ವಿಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.



ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಉತ್ತಮವಾದದ್ದೆಂಬ ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಷ್ಪರಿಮಿತಿಯವರೆಗೂ ಇರುವುದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವುದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿರುವುದು. ಇದಕ್ಕೆ ಒಳಗಿನ ಗ್ಲಾಸು ಮುಚ್ಚಳವು ಸಹ ಇರುವುದು. ಇದಕ್ಕೆ ೪ ವರ್ಷಗಳ ಗ್ಯಾರಂಟಿ.

ಕ್ರಯ ರೂ. 3—8—0 ವಿ. ಪಿ. ಪಿ. ಚಾರ್ಜು ರೂ. 0—4—0.

ಲೇಡಿಸ್ ಸಿಲ್ವರ್ ಜುವೆಲ್ಡ್ ವಾಚ್.



ಈ ಗಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವುದು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ... ಇದನ್ನು ಸ್ತ್ರೀಯರು ಕಟ್ಟುವ ... ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೪ ವರ್ಷಗಳು.

ಕ್ರಯ ರೂ. 6—0—0 ವಿ. ಪಿ. ಪಿ. ಚಾರ್ಜು 0—6—0

ಕ್ರೋನೋಮೀಟರ್ ಲಿವರ್ ವಾಚ್.

(ವಾರಕ್ಕೊಂದಾವೃತ್ತಿ ಬೀಗಕೊಡುವ ಗಡಿಯಾರವು.)



ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವೃತ್ತಿ ಬೀಗಕೊಡುವ ಗಡಿಯಾರವು. ಇದು ಬಹಳ ಗಟ್ಟಿತರವಾದದ್ದು. ಇದು ಅಮೇರಿಕಾ ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಭಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ದೊಡ್ಡ) ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇಂಥ ಆಶ್ಚರ್ಯಕರವಾದ ಗಡಿಯಾರವನ್ನು ನಮ್ಮ ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿಯೊಬ್ಬರೂ ತರಿಸಿಕೊಂಡು ಸಂತೋಷಿಸುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರ್ಷಗಳು.

ಕ್ರಯ ರೂ. 10—0—0 ವಿ. ಪಿ. ಪಿ. 0—8—0

ಟೇಬಲ್ ಟೈಂಪೀಸು ಘಡಿಯಾರವು.



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವುದಲ್ಲದೆ, ನೋಡುವುದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವುವು. ಇವುಗಳು ಅನೇಕ ಸಂವತ್ಸರಗಳವರೆಗೆ ಬಾಳಿಕೆಬರುವುವು. ಈ ಗಡಿಯಾರಗಳನ್ನು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಅವಶ್ಯ ಇಡತಕ್ಕದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲೆಂಡರ್ ಅಲಾರಂ ಟೈಂಪೀಸು ೧ ಕ್ಕೆ ಕ್ರಯ ರೂ 2—8—0 ವಿ. ಪಿ. ಪಿ. ಚಾರ್ಜು 0—6—0

ನಂಬರ್ ೨. ತಾರೀಕುಗಳು ಇಲ್ಲದೆ ಬರೀ ಅಲಾರಂ ಟೈಂಪೀಸು ೧ ಕ್ಕೆ ಕ್ರಯ 2—0—0 ವಿ. ಪಿ. ಪಿ. ಚಾರ್ಜು 0—6—0.

ನಂಬರ್ ೩. ತಾರೀಕು ಮತ್ತು ಅಲಾರಂಯಿಲ್ಲದ ಸಾದಾ ಟೈಂಪೀಸು ೧ ಕ್ಕೆ ಕ್ರಯ 1—4—0 ವಿ. ಪಿ. ಪಿ. ಚಾರ್ಜು 0—6—0

ಕ್ಯಾರೇಜ್ ಕ್ಲಾಕು ಘಡಿಯಾರಗಳು.



ಇವು ಬಹಳ ರಮ್ಯವಾದವುಗಳು, ಮತ್ತು ಮನೋಹರವಾದವುಗಳು. ಅನೇಕ ವರುಷಗಳವರೆಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವುವು. ಇವನ್ನು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲ್ಲಿಯೂ ಇಡುವುದಕ್ಕೆ ಯೋಗ್ಯವಾದವುಗಳು. ನಂಬರ್ ೧.— ಅರ್ಧಗಂಟೆ ಹೊಡೆಯುವುದು ಮತ್ತು ಅಲಾರಂ ಸಹ ಇರುವುದು ಕ್ರಯ ರೂ 5—0—0 ವಿ. ಪಿ. ಪಿ. ಚಾರ್ಜು 0—10—0. ನಂಬರ್ ೨.— ಗಂಟೆ ಅರ್ಧಗಂಟೆ ಮಾತ್ರ ಹೊಡೆಯುವುದು 4—8—0 ವಿ. ಪಿ. ಪಿ. 0—8—0 ನಂಬರ್ ೩.— ಕಾಲವನ್ನು ಮಾತ್ರ ತೋರಿಸಿ ೧೫ ನಿಮಿಷಗಳವರೆಗೂ ವಾದ್ಯವನ್ನು ಬಾರಿಸುವುದು ರೂ. 5—0—0 ವಿ. ಪಿ. ಪಿ. 0—10—0 ನಂಬರ್ ೪.— ಗಂಟೆಗಂಟೆಗೆ ವಾದ್ಯವನ್ನು ಬಾರಿಸುವುದು ರೂ. 5—8—0 ವಿ. ಪಿ. ಪಿ. ಚಾರ್ಜು 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಣಿ.— ಇದು ಎಂದೆಂದಿಗೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವುದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ಕ್ರಯ ೧ ಕ್ಕೆ 0—8—0 ವಿ. ಪಿ. ಪಿ. 0—4—0

ರೋಲ್ಡು ಗೋಲ್ಡು ಭಂಗಾರದ ಗಡಿಯಾರದ ಸರಪಣಿ.— ಇದು ಎಂದೆಂದಿಗೂ ಭಂಗಾರದಂತೆ ಹೊಳೆಯುವ ಗಡಿಯಾರದ ಸರಪಣಿ. ಬಹಳ ... ಉತ್ತಮವಾದುದು ೧ ಕ್ಕೆ ಕ್ರಯ ರೂ. 5—0—0 ವಿ. ಪಿ. ಪಿ. 0—4—0.

... ಸರಪಣಿ.— ಇದು ... ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ, ರಮಣೀಯವಾಗಿಯೂ ... ಪ್ರತಿ ಕ್ರಯ ೧ ಕ್ಕೆ 3—0—0

ಮೆನೇಜರ್ ... ಹರಿಗಂಗಡು, ಅಂಡ್ ಕಂ ... ಎಸ್ಪ್ಲನೇಡ್ ಪೋಸ್ಟ್ ... ಬ್ಲಾಕ್ ಟೌನ್ ಮದ್ರಾಸು.

ಸೌಗಂಧಿಕಾಪರಿಣಯ

[ಕಳೆದವಾರದ ಶೇಷ]

ಎಂದು ಮೊರೆಯಿಡುತಲಿರುವ ವಿಷ್ಣು ಮೊದಲಾದ ದೇವತೆಗಳನ್ನು ನೋಡಿ, ದಯಾರ್ದ್ರ ಹೃದಯನಾದ ಪರಮೇಶ್ವರನು ಅವರಂ ಕುರಿತು—ಎಲೈ ವಿಷ್ಣು ಮೊದಲಾದ ದೇವತೆಗಳಿರಾ ! ಬರಿದೆ ಏನ್ನಂ [illegible] ಎನ್ನ [illegible] ವು ಭಕ್ತರಮೇಲೆ [illegible] ವುದಿಲ್ಲವೆಂದು [illegible] ವಾಗಿ ಹೇಳಲು ಮಹಾಶಂಕೆ ಶ್ರೀ ಮಹಾವಿಷ್ಣುವು ಮತ್ತೂ ಪರಮೇಶ್ವರನಂ ಕುರಿತು— ಎಲೈ ಜಗತ್ಪತಿಯಾದ ಪರಮೇಶ್ವರನೆ ! ಈ ತ್ರಿಪುರರೆಂಬ ದೈತ್ಯರು [illegible] ಸಮಸ್ತ ದೇವತೆಗಳಂ ಉಪೇಕ್ಷಿಸುವುದುಚಿತವೆ ; ಮತ್ತೂ ನೀನು ನಿಮಿತ್ತಮಾತ್ರ ನಿಮ್ಮತಿಸಿದರೆ, ನಾವು ಮಾಡಿರುವ ಸಾಧನದಿಂದಲೇ ಈ ತ್ರಿಪುರರೆಂಬ ದೈತ್ಯರು ನಿಶ್ಶೇಷವಾಗಿ ನಶಿಸಿಹೋಗುವರು ಇದರಲ್ಲಿ ಸಂದೇಹವಿಲ್ಲವೆಂದು ನುಡಿಯಲು, ಅದಂ ಕೇಳಿ ಪರಮಾತ್ಮನಾದ ಪರಮಶಿವನು ನಸುನಗುತ್ತ, ಅದೇನು ಸಾಧನವಂ ಮಾಡುವಿರಿ ? ಎಂದು ವಿಷ್ಣುಮೊದಲಾದವರಂ ಕುರಿತು ಕೇಳಲಾಗ, ಅಖಿಲಾಂತರ್ಯಾಮಿಯಾದ ಮಹಾವಿಷ್ಣುವು ಹೇಳಿದುದೆಂತೆನೆ — ಎಲೈ ವಿಶ್ವೇಶ್ವರನೆ ! ಕೇಳು, ಭೂಮಿಯೇ ರಥವಾಗಿಯೂ, ಸೂರ್ಯಚಂದ್ರರೇ ಆ ರಥಕ್ಕೆ ಗಾಲಿಗಳಾಗಿಯೂ, ಮತ್ತೂ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳೇ ನಾಲ್ಕು ಕುದುರೆಗಳಾಗಿಯೂ, [illegible] ಆ ಕುದುರೆಗಳಂ ಕಟ್ಟುವುದಕ್ಕೆ ಹಗ್ಗಗಳಾಗಿಯೂ, ಆಕಾಶವೇ ಛತ್ರವಾಗಿಯೂ, ಮೇರುಪರ್ವತವೇ ಧನುಸ್ಸಾಗಿಯೂ, ಆದಿಶೇಷನೇ ಆ ಧನುಸ್ಸಿಗೆ ಕಟ್ಟುವ ಹೆದೆಯಾಗಿಯೂ, ಬ್ರಹ್ಮನೇ ಸಾರಥಿಯಾಗಿಯೂ, ಅಗ್ನಿಯೇ ಬಾಣವಾಗಿಯೂ, ನಾನೇ ಆ ಬಾಣಕ್ಕೆ ಅಗ್ರಭಾಗವಾಗಿಯೂ ಈ ಪ್ರಕಾರವಾಗಿ ಸಾಧನಗಳಂ ಸಿದ್ಧಪಡಿಸಿರುವೆವು ಆದುದರಿಂದ ನಿಮಿತ್ತಮಾತ್ರ ತಾವು ಅಂಗೀಕರಿಸಿ, ಇಂದ್ರಾದಿದೇವತೆಗಳಂ ರಕ್ಷಿಸಬೇಕೆಂದು ಪರಿಪರಿಯಾಗಿ ಪ್ರಾರ್ಥನೆಯಂ ಮಾಡಲಾಗ, ಪಶುಪತಿಯು ತನ್ನ ಭಕ್ತರ ಪ್ರಭಾವವಂ ಪ್ರಕಟವಂ ಮಾಡಿ ದೇವತೆಗಳಂ ರಕ್ಷಿಸುವೆನೆಂದು ಮನದೊಳ್ ನಿಶ್ಚೈಸಿ, ಹಾಗೆಯೇ ಆಗಲೆಂದು ಅಪ್ಪಣೆಯಂ ಕೊಡಲು, ಆ ಕ್ಷಣದಲ್ಲಿಯೇ ಮೊದಲುಹೇಳಿದ ಪರಿಯಾಗಿ ಸಕಲ ಸನ್ನಾಹವೂ ಸಿದ್ಧವಾಗಿ ಇದಿರಿಗೆ ನಿಂದಿರಲು, ಆಗ ಸದಾಶಿವನು ಆ ಮಹಾರಥವನ್ನೇರಿ ಇಂದ್ರಾದಿ ದೇವತೆಗಳೊಡಗೂಡಿ ತ್ರಿಪುರವಂ ಕುರಿತು ಬಂದು, ಮೇರುಧನುವಂ ಹಿಡಿದು ಆ ಮೂರುಪುರವೂ ಕೂಡಿದ ಸಮಯವನ್ನೋಡಿ, ಮಹಾವಿಷ್ಣುಮಯವಾದ ಬಾಣವಂ ಹೂಡಿ ಎಸೆವಷ್ಟರೊಳ್ ಆ ತ್ರಿಪುರರ ಶಿವಭಕ್ತಿಯಿಂದಲೂ, ಅವರ ಪತ್ನಿಯರ ಪಾತಿವ್ರತ್ಯಪ್ರಭಾವದಿಂದಲೂ ಉಂಟಾದ ತೇಜಸ್ಸಿನಿಂದ ನಿಸ್ತೇಜಸ್ಕನಾಗಿರುವ ಬಾಣವನ್ನೋಡಿ, [illegible] ಈ ರೀತಿಯಾದ ಬಾಣವು ಆ ತ್ರಿಪುರಕ್ಕೆ ಹೋಗಿ ಏನುಮಾಡುವುದು ? ಆದುದರಿಂದ ವ್ಯರ್ಥವಾಗುತ್ತದೆಂದು ನಿಶ್ಚೈಸಿ, ದೇವತೆಗಳಿಗೆ ಅಭಯವಂ ಕೊಟ್ಟು [illegible] ಇಂತಿರುವ ಆ ತ್ರಿಪುರರೆಂಬ ದೈತ್ಯರಿಗೆ ಕಾಲವು ಸಮೀಪಿಸಿರುವುದು ಅದು ಕಾರಣ ಅವರಂ ನಿಗ್ರಹಿಸಬಹುದು, ಆದರೆ ಆ ತ್ರಿಪುರರೆಂಬ ದೈತ್ಯರಿಗೆ ನನ್ನಲ್ಲಿರುವ ಭಕ್ತಿಯೂ, ವಿಶ್ವಾಸವೂ ತೊಲಗದುದಲ್ಲದೆಯೂ, ಅವರ ಪತ್ನಿಯರ ಪಾತಿವ್ರತ್ಯವು ನಾಶವಾಗದೆಯೂ ಇದ್ದಲ್ಲಿ ನಮ್ಮ ಪುರುಷಾರ್ಥವು [illegible] ಲಾರದು, ಈ ಅಭಿಪ್ರಾಯವನ್ನು ವಿಷ್ಣು ಬ್ರಹ್ಮ ಮೊದಲಾದ ದೇವತೆಗಳಿಗೆ ತಿಳಿಸಿ, ಆ [illegible] ಉಪಾಯವಂ [illegible] ಮಾಡಬೇಕೆಂದು ಮನದೊಳ್ ನಿಶ್ಚೈಸಿ, ಆ ಮೂರು ಪುರವಂ ನೇತ್ರದಿಂದ ನೋಡುವುದಕ್ಕೆ ಉಪಕ್ರಮಿಸಿ, ಕೆಲವುಕಾಲ ನೋಡಿದರೂ [illegible] ಕಾಲದಲ್ಲಿ ಬ್ರಹ್ಮಾಂಡವಂ ಭಸ್ಮವಂ ಮಾಡುವ ನೇತ್ರದ ಸೋಕಿನಿಂದ ಆ ಮೂರುಪುರದ ಪ್ರಾಕಾರದ ಹೊರಭಾಗದಲ್ಲಿರುವ ವೃಕ್ಷಗಳ [illegible] ದಹಿಸಹೋಗಲು, ಆಗ ಇಂದ್ರಾದಿದೇವತೆಗಳೆಲ್ಲರೂ ಅಚ್ಚರಿಗೊಂಡು, ಪರಮೇಶ್ವರನ ಭಕ್ತಪ್ರಭಾವವಂ ಕೊಂಡಾಡುತ್ತ [illegible] ಬಾಯಿಬಾಯಿಂದಾಡುತಿರುವುದಂ ಕಂಡು, ಕರುಣಾಶಾಲಿಯಾದ ಪರಮೇಶ್ವರನು ಸರ್ವಪ್ರಕಾರದಿಂದಲೂ ಆರ್ತರಾದ ಈ ಇಂದ್ರಾದಿದೇವತೆಗಳನ್ನು ರಕ್ಷಿಸಬೇಕೆಂದು ಮನದೊಳ್ ನಿಶ್ಚೈಸಿ, ಆ ತ್ರಿಪುರರೆಂಬ ದೈತ್ಯರಂ ಸಂಹರಿಸಬೇಕೆಂದು [illegible] ಕ್ಷೀರನಿಧಿಯಾದ ಶ್ರೀ ಮಹಾವಿಷ್ಣುವಂ ಕುರಿತು— ಎಲೈ ಪುರುಷೋತ್ತಮನೆ ! ಈ ತ್ರಿಪುರರೆಂಬ ದೈತ್ಯರು [illegible] ತ್ತೂ ನಾವು ಮಾಡಿದ [illegible] ಯೂ ? ಹೀಗೆ [illegible]

ವಣ ಸಂಗತಿಯಂ ನಿಶ್ಚೈಸಿ, ಬಾಣರೂಪನಾಗಿರುವ ನಾರಾಯಣನಂ ಕುರಿತು—ನೀನು ಹೋಗಿ ತ್ರಿಪುರವಂ ಹೊಕ್ಕು ನಿನ್ನ ಸಕಲ ಮಾಯೆಯಿಂದ ಆ ದೈತ್ಯರಿಗೆ ನನ್ನಲ್ಲಿರುವ ಭಕ್ತಿಯಂ—ಅವರ ಪತ್ನಿಯರ ಪಾತಿವ್ರತ್ಯವನ್ನೂ—ಕೆಡಿಸಿದಲ್ಲಿ ನೇತ್ರದಿಂದುಂಟಾದ ಅಗ್ನಿಯು ಅವರಂ ಭಸ್ಮಮಾಡಲಾರದು ಅದುಕಾರಣ, ಈಗಲೇ ನೀನು ತೆರಳುವದಾಗಲಿ, ನಾನು ಅದುವರೆಗೂ ಈ ಮೂರುಪುರವಂ ಮೂರು ನೇತ್ರಂಗಳಿಂ ನೋಡುತ್ತಿರುವೆನೆಂದು ಹೇಳಿ ಕಳುಹಲು, ಆಗ ಮಹಾವಿಷ್ಣುವು ಯೋಗಿವೇಷವಂ ಧರಿಸಿ, ತನ್ನ ಮಾಯೆಯಂ [illegible] ಮಾಡಿಕೊಂಡು [illegible] ಆ ತ್ರಿಪುರವಂ ಹೊಕ್ಕು ನಾನಾವಿಧದ ಉಪಾಯಗಳಿಂದ ಆ ದೈತ್ಯರ ಸನ್ಮಾರ್ಗವಂ ಕೆಡಿಸುವುದಕ್ಕೆ ದಿವ್ಯಸಹಸ್ರವರ್ಷ ಅವಕಾಶವಾಗಲು, ಆ ಸಮಯದಲ್ಲಿ ಸರ್ವದೇವೋತ್ತಮನಾದ ಜಗದೀಶ್ವರನು ತ್ರಿಲೋಕಕಂಟಕರಾದ ಆ ತ್ರಿಪುರದೈತ್ಯರಂ ಸಂಹರಿಸಿ, ದೇವತೆಗಳೇ ಮೊದಲಾದ ಪ್ರಾಣಿಗಳಂ ರಕ್ಷಿಸುವೆನೆಂದು ಮೂರು ಪುರಗಳಂ ರೆಪ್ಪೆಗಳಂ ಮುಚ್ಚದೆ ಮೂರುಕಣ್ಣುಗಳಿಂದಲೂ ದಿವ್ಯಸಹಸ್ರವರ್ಷ ನಿರೀಕ್ಷಿಸುತ್ತಿರಲು, ಆ ವೀಕ್ಷಣದಿಂದುಂಟಾದ ಕಣ್ಣೀರುಗಳು ಬಿಂದುಬಿಂದುಗಳಾಗಿ ಬೀಳಲು, ಆ ಬಿಂದುಗಳಲ್ಲಿ ಕೆಲವು ಆ ಮೂರು ಪುರಗಳಂ ಭಸ್ಮವಂ ಮಾಡುವರೆಂಬ ರೌದ್ರಾಗ್ನಿಯಿಂ ಕೂಡಿ ಬೀಳಲು, [illegible] ದೇವತೆಗಳೇ ಮೊದಲಾದ ಚರಾಚರಪ್ರಾಣಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೋಸ್ಕರ [illegible] ಸಮಸ್ತ ಪ್ರಾಣಿಗಳ ದುರ್ಲಕ್ಷಣ ದೌರ್ಭಾಗ್ಯ ದುಷ್ಕೃತ ದುರಾಚಾರಂಗಳಂ ಪರಿಹರಿಸಿ, ಸದ್ಗತಿಯಂ ಕೊಡುವೆವೆಂದು ಮೂವತ್ತೆಂಟು ಬಗೆಯಾಗಿ, ಮೂವತ್ತೆಂಟು ಮಹಾರುದ್ರಾಕ್ಷಿಯ ವೃಕ್ಷಗಳಾಗಿ ಹುಟ್ಟಿರುವುವು ಆ ವೃಕ್ಷಂಗಳು ಶಿವನಂತೆ ಸರ್ವದೇವತೆಗಳಿಂದ ವಂದನೀಯವಾಗಿರುವುವು

(ಸಶೇಷ.)

ಆರೋಗ್ಯರಕ್ಷಣ ಮಹಾಸಭೆ

ಭರತಖಂಡದ ಆರೋಗ್ಯಾಭಿವೃದ್ಧಿಸಾಧನ ವಿಷಯಗಳನ್ನು ಪರ್ಯಾಲೋಚಿಸಿ, ಗವರ್ನಮೆಂಟಿನವರಿಗೆ ತಂದು ಕೆಲಸಮಾಡಿಸುವುದಕ್ಕಾಗಿ ವೈದ್ಯಶಿಖಾಮಣಿಗಳು [illegible] ವಾರ್ಷಿಕ ಸಭೆಯೊಂದನ್ನು ನಡೆಯಿಸುವ ಪದ್ಧತಿಯು ಕಳೆದ ವರ್ಷದಿಂದ ಸ್ಥಾಪಿಸಲ್ಪಟ್ಟಿದೆ ಅದರಂತೆ ಈ ವರ್ಷದ ಸಭೆಯು ಕಳೆದ ತಿಂಗಳ ತಾ|| ೧೧ ರಿಂದ ೩ ದಿನಗಳ ವರೆಗೆ ಮದ್ರಾಸಿನಲ್ಲಿ ನಡೆಯಿತು ಅದಕ್ಕೆ ಆನರಬಲ್ ಸರ್ ಹಾರ್ಕೋರ್ಟ್ ಬಟ್ಲರ್‌ರವರು ಅಧ್ಯಕ್ಷರಾಗಿದ್ದರು ಅವರು ಆಗ್ಗೆ ಮಾಡಿದ ಭಾಷಣದ ಮುಖ್ಯಾಂಶವೇನೆಂದರೆ—

"ನಾವು ಕಳೆದ ವರ್ಷದ ಸಭೆಯನ್ನು ನಡೆಯಿಸಿದ ಬಳಿಕ [illegible] ಪ್ರಾಂತ್ಯಗಳು ಸ್ಟೇಟ್ ಸೆಕ್ರೆಟರಿಯವರ ಅನುಮತಿಯನ್ನು ಪಡೆದು [illegible] ಮೊದಲಂತೆ ಸ್ಯಾನಿಟರಿ ಕಮಿಷನರನ್ನು ನಿಯಮಿಸುವುದು, ಎರಡನೆಯದು— ಆರೋಗ್ಯರಕ್ಷಣೆಗಾಗಿ ಕೆಲ ಉದ್ಯೋಗಿಗಳನ್ನು ಕೊಡುವಾಗ ಏರ್ಪಡಿಸುವುದು, ಸ್ಯಾನಿಟರಿ ಕಮಿಷನರ ಒಂದೇ ಕಡೆಯಿರದೆ ದೇಶದಲ್ಲಿ ಸಂಚಾರಮಾಡುತ್ತಿರುವುದರಿಂದ ಲಾಭವುಂಟೆಂದು ಸ್ಪಷ್ಟವಾಗಿದೆ ಕಳೆದವರ್ಷ ನಾವು ಮಾಡಿದ ಸೂಚನೆಯ ಪ್ರಕಾರ ಸ್ಥಾನಿಕಪ್ರಭುತ್ವದವರಿಗೆ ಕೆಲ ನಿಯಮಗಳಿಗೆ ಬದ್ಧರಾಗಿ ಸ್ಯಾನಿಟರಿ ಕಮಿಷನರನ್ನು ನಿಯಮಿಸಿಕೊಳ್ಳುವ ಅಧಿಕಾರವುಂಟಾಗಿದೆ ಅದರಂತೆ ಮದ್ರಾಸು ಮಧ್ಯಪ್ರಾಂತ್ಯದಲ್ಲಿ ಇಬ್ಬಿಬ್ಬರಂತೆಯೂ ಒಂಗಾಳ ಬೀಹಾರು—ಒರಿಸ್ಸಾ ರಾಷ್ಟ್ರಗಳಿಗೆ ನಾಲ್ಕುಮಂದಿಗಳಂತೆಯೂ ಏರ್ಪಡಿಸಿಕೊಳ್ಳಬಹುದಾಗಿದೆ ಈ ಉದ್ಯೋಗಿಗಳನ್ನು ಕೇವಲ [illegible] ಆಂಗ್ಲೇಯರಿಗೇ ಅಲ್ಲದೆ ಹಿಂದುಗಳಿಗೂ ಕೊಡಬಹುದಾಗಿದೆ ಹೊಸ್ಸ ಹೊಸ್ಸ ಪ್ರಾಂತ್ಯಗಳಿಗೆ ಮೊದಲನೆ ತರಗತಿಯ [illegible] ನ್ನು ನಿಯಮಿಸಿಕೊಳ್ಳಬಹುದು, ಸದ್ಯಕ್ಕೆ ೧ನೆ ತರಗತಿಯವರು ಇಂಗ್ಲೆಂಡಿನಲ್ಲಿ ಆರೋಗ್ಯಶಾಸ್ತ್ರವನ್ನು ಕಲಿತು ಬಂದವರಾಗಿರಬೇಕು ಭರತಖಂಡದಲ್ಲೇ ಈ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳು ಮಾಡಲ್ಪಟ್ಟ ಬಳಿಕ ಈ ನಿಯಮದಲ್ಲಿ [illegible] ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿ [illegible] "ಟ್ರಾಪಿಕಲ್ ಮೆಡಿಸಿನ್" [illegible] ಡಾಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಪರೀಕ್ಷೆಗೆ ತಕ್ಕ ಏರ್ಪಾಡುಗಳು ಮಾಡಲ್ಪಡಬಹುದು [illegible]

[illegible] ಪ್ರಾಂತಿಕ ಮತ್ತೂ ಕಾಲಾಅಜಾರ್ ಎಂದು [illegible] ಜ್ವರ—ಇವುಗಳನ್ನು ಕುರಿತು ದೊಡ್ಡ ಪಂಡಿತರುಗಳಿಂದ ಪರಿಶೋಧನೆಯು ಮಾಡಲ್ಪಡುತ್ತಿದೆ "ಎಲ್ಲೋ ಫೀವರ್" ಎಂದು ಕರೆಯಲ್ಪಡುತ್ತಿರುವ ಜ್ವರವನ್ನು [illegible] ರೋಗಗಳನ್ನು ನಾಶಗೊಳಿಸುವ ವಿಷಯವನ್ನು ಕುರಿತು ಆಲೋಚಿಸುವುದಕ್ಕೆ ಭೂಪಾಲಪಟ್ಟಣದಲ್ಲಿ [illegible] ನಿಯಮಿಸಲ್ಪಟ್ಟಿದ್ದಾರೆ ಇವರು ಮುಖ್ಯವಾದ ಸಮುದ್ರತೀರಪಟ್ಟಣಗಳಲ್ಲಿ ಸಂಚರಿಸಿ, ಮಾಡಬೇಕಾದ ಏರ್ಪಾಡುಗಳನ್ನು ನಿರ್ಧರಿಸುವರು ಈ ರೋಗವನ್ನು ಕುರಿತು [illegible] ವನ್ನು ಮಾಡಿಕೊಳ್ಳಲು [illegible] ಕಳುಹಲ್ಪಟ್ಟಿದ್ದ ಮೇಜರ್ ಜೇಮ್ಸ್‌ರವರು ಈ ತಿಂಗಳ ಕೊನೆಯಲ್ಲಿ ಬರುವರು ಬಂದಕೂಡಲೇ ಅವರು ತಿಳಿದುಬಂದ ಸಂಗತಿಗಳನ್ನು ಸರಕಾರಕ್ಕೆ ಹೇಳುವರು

ಸಾಂಕ್ರಾಮಿಕ ಜ್ವರವನ್ನು ನಾಶಗೊಳಿಸುವ ಉಪಾಯ [illegible] ಲಕ್ಷ ರೂಗಳನ್ನು ಕೊಟ್ಟರು [illegible] ಈ ರೋಗದ ಉತ್ಪತ್ತಿಕಾರಣ [illegible] ವಿಚಾರಮಾಡುವರು ೨ನೆ ಅದರಿಂದ [illegible] ರೋಗವ್ಯಾಪಕವನ್ನು ತಡೆಯುವುದಕ್ಕಾಗಿ [illegible] ಎಂಬ ೩ ಕಾರ್ಯಗಳನ್ನು [illegible] ಮದ್ರಾಸಾಧಿಪತ್ಯಕ್ಕೆ ಸೇರಿದ [illegible] ಈ ಜ್ವರದ ಪರಿಶೋಧನೆಗಾಗಿ ೪೮ ಸಾವಿರ [illegible] ಸಿಂಧು [illegible] ಜಿಲ್ಲೆ [illegible] ೪೮ ಸಾವಿರ ರೂ [illegible] ಸಂಯುಕ್ತರಾಷ್ಟ್ರಗಳಲ್ಲಿ ಈ ಜ್ವರವನ್ನು ನಿರೋಧಿಸುವುದಕ್ಕೆ ೧ ಲಕ್ಷದ [illegible] ಗಳು ವ್ಯಯಮಾಡಲ್ಪಡುವುವು. ಈ ಪ್ರಯತ್ನಗಳಿಂದೆಲ್ಲಾ ಭಾರತೀಯರಿಗೆ ವಿಶೇಷ ಪ್ರಯೋಜನವಾಗದಿರದು

ಆರೋಗ್ಯರಕ್ಷಣೆಗಾಗಿ ಮಾಡಲ್ಪಡಬೇಕಾದ ಏರ್ಪಾಡುಗಳಲ್ಲಿ— ಪಟ್ಟಣಗಳಲ್ಲಿ ಜನಸಮ್ಮರ್ದವು ವಿಶೇಷವಾಗಿರುವ ಪ್ರದೇಶಗಳನ್ನು ವಿರಳಗೊಳಿಸುವುದೂ, ಇಕ್ಕಟ್ಟಾಗಿರುವ ಸಂದಿಗಳನ್ನು ವಿಸ್ತಾರಪಡಿಸುವುದೂ ಮುಖ್ಯವಾದುವುಗಳು ಪ್ರತಿಯೊಂದು ದೊಡ್ಡಪಟ್ಟಣಗಳಲ್ಲಿಯೂ ಎಲ್ಲಾ ಮನೆಗಳಿಗೂ ಗಾಳಿಯು ಹೋಗುವುದಕ್ಕವಕಾಶವಿಲ್ಲದಂತೆ ಮನೆಗಳ ಮೇಲೆ ಮನೆಗಳು ಇಕ್ಕಟ್ಟಾಗಿ ಕಟ್ಟಲ್ಪಡುತ್ತಿರುವುದರಿಂದ ಕ್ಷಯರೋಗದ ಪ್ರಸಾರಕ್ಕೂ ಮರಣಾಧಿಕ್ಯಕ್ಕೂ ಕಾರಣವಾಗುತ್ತಿದೆ ಕ್ಷಯವ್ಯಾಧಿನಿವಾರಕ ಸಂಘಗಳನ್ನು ಸ್ಥಾಪಿಸುವುದಕ್ಕಾಗಿ ಗವರ್ನಮೆಂಟಿನವರು ಸ್ಥಾನಿಕಪ್ರಭುತ್ವದವರಿಗೆ ಬರೆಯುತ್ತಾರೆ. ಇಂತಹ ಸಂಘಗಳು ಎಷ್ಟು ಸ್ಥಾಪಿಸಲ್ಪಟ್ಟರೂ ಪ್ರಜೆಗಳು ಉತ್ತಮವಾದ ಮನೆಗಳನ್ನು ಕಟ್ಟಿಕೊಂಡು, ಅನಾರೋಗ್ಯಕರಗಳಾದ [illegible] ಗಳನ್ನು ತೆಗೆದುಹಾಕಿ, ಶಾಸ್ತ್ರೀಯಪದ್ಧತಿಯನ್ನನುಸರಿಸಿ ನಡೆದುಕೊಳ್ಳುವಂತೆ ಆಗುವ ವರೆಗೂ ಪ್ರಯೋಜನವಾಗಲಾರದು ಮುಖ್ಯವಾಗಿ ಪಟ್ಟಣಗಳಲ್ಲೇ ಆಗಲಿ, ಗ್ರಾಮಗಳಲ್ಲೇ ಆಗಲಿ ಜನರಿಗೆ ಕುಡಿಯುವ ನೀರು ಶುದ್ಧವಾಗಿಯೂ ಸಮೃದ್ಧವಾಗಿಯೂ ದೊರೆಯುವಂತೆ ಮಾಡಬೇಕು [illegible] ಊರೂರಿಗೆ ವೈದ್ಯರು ಹೋಗಿ ಔಷಧಿಗಳನ್ನು ಕೊಡುವಂತೆ ಏರ್ಪಡಿಸಬೇಕು. ಸಂಯುಕ್ತರಾಷ್ಟ್ರಗಳಲ್ಲಿ ಈ ಪದ್ಧತಿಯನ್ನೇರ್ಪಡಿಸಿರುವುದರಿಂದ ಬಹಳ ಅನುಕೂಲವಾಗಿದೆಯೆಂದೂ, ಜನರು ಸಂತೋಷಪಡುತ್ತಿದ್ದಾರೆಂದೂ ತಿಳಿದುಬರುತ್ತಿದೆ ಸರ್ಕಾರದವರಿಗೆ [illegible] ದೊಡ್ಡ ಕಾರ್ಯವಾವುದೂ ಇಲ್ಲ

ವಿದ್ಯಾಭ್ಯಾಸವನ್ನು ಆರೋಗ್ಯವಿಷಯವನ್ನೂ ಒಂದೇ [illegible] ಸಂಬಂಧಿಸಿರುವಂತೆ ಮಾಡಿದರೆ, ಪ್ರಮಾದವೇ ಆಗಲಿ, ನಿಷ್ಪ್ರಯೋಜನವೇ ಆಗಲಿ ಉಂಟಾಗಲಾರದು ಮನೆಗಳನ್ನು ಶುಚಿಯಾಗಿಟ್ಟುಕೊಂಡು ಪ್ಲೇಗು ಕಾಲರಾ—ಮೊದಲಾದ ರೋಗಗಳು [illegible] ಪ್ರಾಣಿಗಳನ್ನು [illegible] ಕಾಪಾಡಿಕೊಳ್ಳುವಂತೆ ಪ್ರಜೆಗಳಿಗೆ ಬೋಧಿಸುವುದು ನಮ್ಮ ಕರ್ತವ್ಯವು. ಪ್ರಜೆಗಳ ಅಜ್ಞಾನವನ್ನು ನಿವೃತ್ತಿಮಾಡುವುದಕ್ಕಾಗಿ ಪ್ರಭುತ್ವದವರು ತುಂಬಾ ಪ್ರಯತ್ನಿಸುತ್ತಿದ್ದಾರೆ ಕಳೆದ ೫ ವರ್ಷಗಳಲ್ಲಿ ಆರೋಗ್ಯಾಭಿವೃದ್ಧಿ ಕಾರ್ಯಕ್ಕಾಗಿಯೇ ಅವರು [illegible] ಕೋಟಿ ರೂ ಗಳನ್ನು ವೆಚ್ಚ ಮಾಡಿರುವರು." ಎಂದು ಹೇಳಿದರು

ಗವರ್ನಮೆಂಟಿನವರು ಪ್ರಜಾರೋಗ್ಯರಕ್ಷಣೆಗಾಗಿ [illegible] ಉದಾರವಾಗಿ ಧನವ್ಯಯವನ್ನು ಮಾಡುವದಕ್ಕೆ ಸಿದ್ಧರಾಗಿರುವುದೂ ಸಹ ಪ್ರಜೆಗಳಿಗೆ ಸಂತೋಷದಷ್ಟೆ ಸರಿ ಆದರೆ ವೆಚ್ಚವು ಸಾರ್ಥಕವಾಗಬೇಕಾದರೆ ಪ್ರಜೆಗಳ ಸಹಾನುಭೂತಿಯು ವಿಶೇಷವಾಗಿ ಬೇಕಾಗಿದೆ. ಅವರಲ್ಲಿ ಕರ್ತವ್ಯಜ್ಞಾನವು [illegible]

[illegible]

...ನಾವೂ ಅವರು ವಿರುದ್ಧವಾಗಿ ಆಚರಿಸುವುದೂ ಉಂಟು [illegible] ಇದೆಲ್ಲಾ ಅವರ ತಪ್ಪಲ್ಲ, ಅವರಲ್ಲಿನ ವಿದ್ಯಾಭಾವದ ತಪ್ಪು [illegible] ದನ್ನು ನಿಷ್ಪ್ರಯೋಜಕವೆ ಇಟ್ಟುಕೊಂಡು, ನೋಲಿಸ [illegible] ಮಾಡುವ ಧರ್ಮಾದಾಯ ಕೃತಿಗಳೆಲ್ಲಾ ಅಸ್ವಸ್ಥರವಸ್ಥೆ [illegible] ಗೆ ಮಾಡುವ ಉಪಕಾರದಂತೆ ಪರಿಣಮಿಸುವುದು ಸಹಜ ವಾಗಿರುತ್ತದೆ ಆದುದರಿಂದ, ಸರ್ಕಾರದವರು ಮೊದಲು ಬಲಹೀನ್ಯದುದ್ಯೋಗವನ್ನು ಸ್ವಸಹಾಯದಿಂದ, ಸಣ್ಣ ದರಿಂದಲೂ ಶಾಲೆಗಳಲ್ಲಿ ಆರೋಗ್ಯರಕ್ಷಣದ ಪಾಠಗಳ ಅ ಭ್ಯಾಸವು ನಡೆಯುವಂತೆ ಮಾಡಿದರೆ, ಅದರ ಆವಶ್ಯಕತೆಯು ಕೆಲಕಾಲದೊಳಗಾಗಿ ಸಕಲಪ್ರಜೆಗಳಿಗೂ ಗೊತ್ತಾಗುವುದು ದೇಶದ ಆರೋಗ್ಯರಕ್ಷಣೆಗಾಗಿ ಹಣವನ್ನು ಕ್ರಮಸಾಧಕ ಧರ್ಮಾದಾಯಗಳನ್ನು ಮಾಡುವ ಭಾರವು ಕೇವಲ ಸರ್ಕಾರದ ವರಿಗೆ ಇರಲಾರದು

ಕೃತಿ ವಿಮರ್ಶೆ

ವೀರಶೈವ ಹಾಸ್ಯಕಥಾವಳಿ

ನೂತನಗ್ರಂಥಗಳನ್ನು ಬರೆಯುವವರಲ್ಲಿ ಅತ್ಯಂತ ಕು ತೂಹಲಪೂರ್ವಕರೂ, ಮತಾಭಿಮಾನಿಗಳೂ ಆದ ಬೆಂಗಳೂರಿ ನ ಚೀಫ್ ಕೋರ್ಟ್ ಕ್ಲಾರ್ಕ್ ಮ॥ ಜೀರಿಗೆ ಬಸವರಿಂ ಗಪ್ಪನವರು ಈ ಗ್ರಂಥವನ್ನು ನೂತನವಾಗಿ ರಚಿಸಿದ್ದಾರೆ ವೀರಶೈವಮತಸಂಬಂಧವಾಗಿ ಕೇವಲ ಧಾರ್ಮಿಕ ವಿಷಯ ದಲ್ಲಿಯೇ ಅಲ್ಲದೆ ಲೌಕಿಕವಾಗಿಯೂ ಕೆಲ ಗ್ರಂಥಗಳ [illegible] ರಚಿಸಬೇಕೆಂಬ ಉದ್ದೇಶದಿಂದ [illegible] ಕರ್ತರು [illegible] ಪ್ರಧಾನವಾದ ಕೆಲವು ಕಥೆಗಳನ್ನು ಕಲ್ಪಿಸಿ, ಇದರಲ್ಲಿ ಮು ದ್ರಿಸಿದ್ದಾರೆ ಕಥೆಗಳು ಅಲ್ಲಲ್ಲಿಗೆ ಮತಸಂಪ್ರದಾಯಗಳನ್ನು ನಿರೂಪಿಸುತ್ತಲೂ, ಹಾಸ್ಯರಸಮಯವಾಗಿದ್ದರೂ ನೀತಿವಿ ರುದ್ಧವಲ್ಲದೆಯೂ, ಸನ್ಮಾರ್ಗಪ್ರವರ್ತಕವಾಗಿಯೂ ಆಬಾ ಲವೃದ್ಧರೂ ಓದುವುದಕ್ಕೆ ಅರ್ಹವಾಗಿಯೂ ಇರುತ್ತವೆ ಇ ದರಬೆಲೆ ೩ ಆಣೆ

ಆಶ್ವಲಾಯನ ಪೂರ್ವಪ್ರಯೋಗ

ಈ ಸಂಸ್ಕೃತಗ್ರಂಥವು ಮೈಸೂರು ಪುರೋಹಿತ ಗಂ ಡಬೇರುಂಡರ ಕುಮಾರರಾದ ಶ್ರೀಯುತ ಎಂ ನರಸಿಂಹ ಶಾಸ್ತ್ರಿಯವರಿಂದ ಪ್ರಕಟಿಸಲ್ಪಟ್ಟದೆ ನಾರಸಿಂಹೀಯ ಪ್ರ ಯೋಗಪಾರಿಜಾತವನ್ನನುಸರಿಸಿರುವ ಈ ಪ್ರಯೋಗಗ್ರಂ ಥದಲ್ಲಿ ಪುಣ್ಯಾಹ-ಗಣಪತಿಪೂಜೆ-ಅಂಕುರಾರ್ಪಣ-ನಾಂದೀ- ಕಾತುಕಬಂಧನ-ಶಿವಸಂಕಲ್ಪ-ಅಗ್ನಿಮುಖ-ಗ್ರಹಮಖ- ಗರ್ಭಾಧಾನಾದಿ ಕರ್ಮಗಳ ವಿಧಿವಿಧಾನವೆಲ್ಲಾ ಸ್ವರಸಂ ಜ್ಞಾಸಹಿತವಾದ ಮಂತ್ರಗಳೊಡನೆ ಕೂಡಿ ಮುದ್ರಿಸಲ್ಪಟ್ಟಿ ವೆ. ಅನೇಕ ಮಂಗಳಾಷ್ಟಕಗಳೂ, ಕೆಲ ಪ್ರಾಯಶ್ಚಿತ್ತ ಪ್ರಯೋಗಗಳೂ, ಮಹಾಸಂಕಲ್ಪವೂ, ಅರ್ಕವಿವಾಹವಿಧಿ ಯೂ ಸಹ ಇದರಲ್ಲಿ ಸೇರಿ ಮುದ್ರಿತವಾಗಿವೆ ಅನೇಕ ಪಂ ಡಿತರಿಂದ ಪರಿಶೋಧಿಸಲ್ಪಟ್ಟು, ಉತ್ತಮವಾದ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಮುದ್ರಿಸಲ್ಪಟ್ಟಿರುವ ಈ ಗ್ರಂಥವು ಕರ್ಮ ಠರಿಗೆಲ್ಲಾ ಪರಿಗ್ರಾಹ್ಯವಾಗಿದೆ ಶಾಸ್ತ್ರಿಗಳು ಶ್ರಮವನ್ನು ವಹಿಸಿ ಈ ಗ್ರಂಥವನ್ನು ಪ್ರಕಾಶಪಡಿಸಿದುದಕ್ಕಾಗಿ ವೈದಿಕ ವೃಂದದ ಕೃತಜ್ಞತೆಗೆ ಪಾತ್ರರಾಗಿರುವರು ಇದರ ಬೆಲೆ ೨ ರೂ ಗಳು. ಮೈಸೂರು ಕೃಷ್ಣರಾಜಮೊಹಲ್ಲಾದಲ್ಲಿರು ವ ಗ್ರಂಥಕರ್ತರಿಗೆ ಬರೆದು ತರಿಸಿಕೊಳ್ಳಬಹುದು

ಬೆಂಗಳೂರು ಸುಮತಿಗ್ರಂಥಮಾಲಾ ಕಾರ್ಯಕರ್ತರುಗಳು "ಜೀವಗೀತೆ-ಆತ್ಮಗೀತೆ" ಇತ್ಯಾದಿ ಕವಿತೆಗಳ ಪು ಸ್ತಕವೊಂದನ್ನು ಮುದ್ರಣಮಾಡಿಸಿದ್ದಾರೆ ಸನ್ಮಾರ್ಗಪ್ರವ ರ್ತನಕ್ಕೆ ಸಾಧಕವಾಗಿಯೂ ಭಕ್ತಿವೈರಾಗ್ಯಪ್ರದವಾಗಿ [illegible] ಇರುವ ಕವಿತೆಗಳನೇಕವ [illegible] ನಮ್ಮ ದೇಶದಲ್ಲಿನ ಪ್ರಾಚೀನ ಸುಜ್ಞಾನಿಗಳಂತೆ ಪಾ ಶ್ಚಾತ್ಯ ದೇಶಗಳಲ್ಲಿಯೂ ಅನೇಕ ಮಹನೀಯರು ಒಳೆಂದು ವರು ಅವುಗಳ್ನ ಆಂಗ್ಲೇಯರಾದಲ್ಲಿನ [illegible] ಮೊದ ಲಾದ ಪ್ರಸಿದ್ಧ ಪಂಡಿತರುಗಳು ಬರೆದಿರುವ ಅಮೂಲ್ಯವಾ ದ ವಚನಗಳನ್ನು ಕನ್ನಡಕ್ಕೆ ಪರಿವರ್ತಿಸಿ, ತೆಲುಗಿನಲ್ಲಿ ಸ್ವಾಮಿ [illegible] ಶಾರದಲ್ಲಿರುವ [illegible] ಧಾಟಿಯಲ್ಲಿ ಕವಿತೆಗಳನ್ನು ರ ಚಿಸಿ, ಇದರಲ್ಲಿ ಪ್ರಸಿದ್ಧಪಡಿಸಿದ್ದಾರೆ [illegible] ಕೆಲಪದ್ಯಗಳೂ ಇದು [illegible] ಅತ್ಯಂತ ಉಚಿತವಾಗಿ [illegible] ಅದರಭಿಪ್ರಾಯಗಳು [illegible] ಗ್ರಂಥವು [illegible] ಇವರಲ್ಲಿನ [illegible] ಅಮೂಲ್ಯವಾಗಿದೆ [illegible] ದಿಗಳಭಿಪ್ರಾಯಕ್ಕೆ [illegible] ಗ್ರಂಥಕರ್ತರು ಇಲ್ಲಿಗೆ [illegible] ರಮ್ಯವು ಪ್ರಕಾಶಕರ [illegible] ಅತಿಶಯವಾಗಿ ಸ ಮರ್ಥನಮಾಡುತ್ತಿದ್ದೇವೆ. ಇದರ ಬೆಲೆ ೧ ಆಣೆ

ಶ್ರೀ ಶ್ರೀ
ಈ ದೊಡ್ಡ
[illegible]

ತೆಂಗ್ರುವಿ
[illegible]
[illegible]

ರಂಬ [illegible] ತರ ಕುಮ್ರಣವೊಂದು ಪ್ರಕಟವಾಗಿದ್ದಾರೆ [illegible] ಲೋಕದಲ್ಲಿ [illegible] ಭಕ್ತಿಯು ಅನಿವಾರ್ಯ [illegible] ಕಾಗ್ಗತ್ತಲೆ [illegible] ಅದಲ್ಲಿ ಶಂಕರಾಚಾರ್ಯರು [illegible] ಪರ [illegible] ಈಗ ಪರಿಣಾಮ [illegible] ರಾಗಿದ್ದರೆ [illegible] ಕೊರಲಲ್ಲಿ ರುದ್ರಾಕ್ಷಿ ಗಳನ್ನು ಧರಿಸುವವರು [illegible] ಸ್ಮರಣೆ ಮಾಡುವವರಲ್ಲೇ ಸಂತೋಷಗೊಳ್ಳುತ್ತಿದ್ದಾರೆ ಇಂಥ ಪರಿವರ್ತಿತ ಕಾಲದಲ್ಲಿ ಶೈವಭಕ್ತಿಧುರಂಧರರಾದ [illegible] ದೀಕ್ಷಿತರು ಶಿವಭಕ್ತಿ [illegible] ವನ್ನು ಮುದ್ರಣಮಾಡಿಸಿದುದ [illegible] ರವನ್ನು ಮಾಡಿದಂತಾಯಿತೆಂದು [illegible] ವಾಗಿ ಅಭಿನಂದಿಸುವೆಯರಲ್ಲದೆ [illegible] ಶಿವಭಕ್ತಸಮೂಹದ ಅತಿಶಯವಾದ ಕೃತಜ್ಞತೆಗೂ, [illegible] ಪಾತ್ರರಾಗಿರುವರು [illegible]

